ವಿ.ಸೀ. ಸಮಗ್ರ ಸಾಹಿತ್ಯ ಮಾಲೆ - ೧೫

# ಮಾನವಿಕಶಾಸ್ತ್ರ ಸಂಪುಟ

## (ಸತ್ಯ ಮತ್ತು ಮೌಲ್ಯ – ಜ್ಞಾನ-ವಿಜ್ಞಾನ)

**ವಿ. ಸೀತಾರಾಮಯ್ಯ**

**ವಿ. ಸೀ. ಸಂಪದ**

**ರಾಜೀವನಗರ, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085**

***MANAVIKASASTRA SAMPUTA (SATYA MATTU MOULYA–JNANA-VIJNANA) :*** by Dr. V. Sitaramiah, (1899-1983), Published by V. Si. Sampada, No. 25, 'Vasundhara', 'C' Cross, Rajivnagar, Banashankari 3rd Stage, 4th Phase, Bangalore–560 085

Pages : xviii + 236

**First Edition : 2008**

© Reserved

**ಬೆಲೆ : ರೂ. 125/–**

**ವಿ. ಸೀ. ಸಂಪದ** (ವಿ. ಸೀ. ಸಂಸ್ಮರಣ ವೇದಿಕೆ), ನಂ. 25, 'ವಸುಂಧರಾ', 'ಸಿ' ಕ್ರಾಸ್, ರಾಜೀವನಗರ, ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, ಬೆಂಗಳೂರು–560 085

ಅಧ್ಯಕ್ಷರು : ಪ್ರೊ. ಎಂ. ಎಚ್. ಕೃಷ್ಣಯ್ಯ
ಉಪಾಧ್ಯಕ್ಷರು : ಪ್ರೊ. ಕೆ. ಎಸ್. ಕಲ್ಲಾಪುರ (ಧಾರವಾಡ)
ಕಾರ್ಯದರ್ಶಿ : ಪ್ರೊ. ಎಂ. ವಿ. ಸತ್ಯನಾರಾಯಣ
ಕೋಶಾಧಿಕಾರಿ : ಕೆ. ಬಿ. ಷಣ್ಮುಖಪ್ಪ
ಸದಸ್ಯರು : ಡಾ. ಮತ್ತೂರು ಕೃಷ್ಣಮೂರ್ತಿ
ವಿ. ಎಸ್. ಕೃಷ್ಣಮೂರ್ತಿ
ಎಚ್. ವಿ. ವೆಂಕಟಸುಬ್ಬಯ್ಯ
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರೊ. ವಿಶ್ವನಾಥ ಶರ್ಮ (ವಾರಾಣಸಿ)
ಪ್ರೊ. ಎಮ್. ರಾಮಚಂದ್ರ (ಕಾರ್ಕಳ)
ಡಾ. ಎನ್. ಎಸ್. ತಾರಾನಾಥ (ಮೈಸೂರು)
ಎಸ್. ಸತ್ಯನಾರಾಯಣ
ಶ್ರೀಮತಿ ಮೀನಾ ವಾಂಗೀಕರ್ (ಪುಣೆ)
ಶ್ರೀಮತಿ ಅಂದನೂರು ಶೋಭ
ಮುನಿಧರ್ಮಯ್ಯ
ಎಂ. ವಿ. ವಿ. ಮೂರ್ತಿ
ವೈ. ಎಂ. ರಾಜು

ಮುಖಪುಟ ವಿನ್ಯಾಸ : ಎಸ್. ನಾಗೇಂದ್ರಕುಮಾರ್

ಮುದ್ರಣ :
ನೇತ್ರಾ ಪ್ರಿಂಟರ್ಸ್
ಬೆಂಗಳೂರು–560 018

# ಪರಿವಿಡಿ


| | |
|---|---|
| ಪ್ರಸ್ತಾವನೆ | v |
| ಅರಿಕೆ | xvi |
| **ಸತ್ಯ ಮತ್ತು ಮೌಲ್ಯ** | |
| **ಮೊದಲ ಮಾತು** | **3** |
| **ಶಬ್ದಗಳ ಅರ್ಥವ್ಯಾಪ್ತಿ** | **9** |
| **ಎರಡು ತ್ರಿವರ್ಗಗಳು** | **44** |
| **ಎರಡನೇ ತ್ರಿವರ್ಗ – ನ್ಯಾಯ, ಸ್ವಾತಂತ್ರ್ಯ, ಸಮಾನತೆ** | **92** |
| **ಜ್ಞಾನ–ವಿಜ್ಞಾನ** | 131 |


# ಪ್ರಸ್ತಾವನೆ

*ಪ್ರದೀಪಸ್ಸರ್ವ ವಿದ್ಯಾನಾಮುಪಾಯಸ್ಸರ್ವಕರ್ಮಣಾಮ್।*
*ಆಶ್ರಯಸ್ಸರ್ವಧರ್ಮಾಣಾಂ ಶಶ್ವದಾನ್ವೀಕ್ಷಿಕೀ ಮತಾ ॥*

– ಕೌಟಲೀಯಾರ್ಥಶಾಸ್ತ್ರ

(ವಿಚಾರವಂತಿಕೆಯು ಸದಾ ಎಲ್ಲ ವಿದ್ಯೆಗಳನ್ನು ಬೆಳಗಿಸುವ ದೀಪ, ಎಲ್ಲ ಕಾರ್ಯ ಸಾಧನೆಗಳ ಮಾರ್ಗ ಮತ್ತು ಎಲ್ಲ ಬಗೆಯ ಮೌಲ್ಯಗಳಿಗೆ ಮಂದಿರ)

## I

ಸ್ವನಾಮಧನ್ಯರಾದ ವಿ.ಸೀ. ಅವರ ವ್ಯಕ್ತಿತ್ವ ಮತ್ತು ಕೃತಿತ್ವಗಳೆರಡೂ ಕನ್ನಡ ನವ್ಯೋದಯದ ವಸಂತವಾಟೀಪ್ರಸೂನಗಳು, ಶುಚಿ–ರುಚಿಗಳ ಪ್ರಸಾದಗಳು. ಇಂಥ ಮಹನೀಯರ ಸಮಗ್ರಕೃತಿಶ್ರೇಣಿಯ ಪ್ರಕಾಶನಯಜ್ಞವನ್ನು ಶ್ರದ್ಧಾಸಕ್ತಿಗಳಿಂದ, ನೇಹ–ನಮ್ರತೆಗಳಿಂದ ಅಚ್ಚುಕಟ್ಟಾಗಿ ಸಾಗಿಸಿಕೊಂಡು ಬರುತ್ತಿರುವ ವಿ.ಸೀ. ಸಂಪದದ ಸಂಕಲ್ಪಶಕ್ತಿ ಮತ್ತು ನಿರ್ವಾಹಕಸಕ್ತಿಗಳನ್ನು ಎಷ್ಟು ಕೊಂಡಾಡಿದರೂ ಸಾಲದು. ಏಕೆಂದರೆ out of sight is out of mind ಎನ್ನುವುದು ಪದೇ ಪದೇ ಅನುಭವಕ್ಕೆ ಬರುತ್ತಿರುವ ಈ ಕಾಲದಲ್ಲಿ ಕನ್ನಡಸಾರಸ್ವತಲೋಕದ ಅಂತಃಕರಣಸದೃಶರೂ ಬಹುಜ್ಞತೆಗೆ ಪರ್ಯಾಯಕಲ್ಪರೂ ಖ್ಯಾತಿ–ಲಾಭ–ಪೂಜಾವಿಮುಖತೆಗಳ ಎರಕದಂತೆಯೂ ಇದ್ದ ವಿ.ಸೀ.ಯವರ ಬಾಳು–ಬರೆಹಗಳನ್ನು ಇಷ್ಟು ಅರ್ಥಪೂರ್ಣವಾಗಿ ಹವಣಿಸಿಕೊಡುವ ಕಾಯಕ ಅಲ್ಪಸ್ವಲ್ಪದ ಮಾತಲ್ಲ.

ಗದ್ಯ–ಪದ್ಯ–ಗೀತಗಳೆಂಬ ಮೂರೂ ಮಾಧ್ಯಮಗಳಲ್ಲಿ ಕಾವ್ಯ–ನಾಟಕ–ಸಂಶೋಧನೆ–ಪ್ರವಾಸ ಕಥನ–ವಿಮರ್ಶಾವಲೋಕನ–ಭಾಷಾಂತರೀಕರಣ–ಶಾಸ್ತ್ರ ಸಾಹಿತ್ಯ–ಸ್ಮೃತಿ/ವ್ಯಕ್ತಿಚಿತ್ರ ರಚನೆ ಮುಂತಾದ ಅಸಂಖ್ಯ ಪ್ರಕಾರಗಳಿಗೆ ಸಲ್ಲುವಂತೆ ಉಭಯ ಭಾಷೆಗಳಲ್ಲಿಯೂ (ಕನ್ನಡ ಮತ್ತು ಇಂಗ್ಲಿಷ್) ಗುಣ–ಗಾತ್ರಗಳಿಂದ ಗಣ್ಯವಾದ ಬರೆವಣಿಗೆಯನ್ನು ವಿ.ಸೀ. ಅವರು ನಮಗಾಗಿ ಬಿಟ್ಟುಹೋಗಿದ್ದಾರೆ. ಇಷ್ಟು ವಿಸ್ತೃತವಾದ ವಾಙ್ಮಯದ ನೆಲೆ–ಬೆಲೆಗಳನ್ನು ಅರಿಯಬೇಕಾದ ತುರ್ತು ನಮಗಿದೆ. ಆದರೆ ಇಂಥ

ಮೌಲ್ಯಮಾಪನಕ್ಕೆ ಅಲ್ಪಸತ್ತ್ವರು ಕೈಹಾಕುವಂತೆಯೇ ಇಲ್ಲ. ಕಾರಣ ಪೌರಸ್ತ್ಯ–ಪಾಶ್ಚಾತ್ತ್ಯ ಪ್ರಪಂಚದ ಅನೇಕ ವಿದ್ಯಾಸ್ಥಾನಗಳಲ್ಲಿ ಗಾಢವಾದ ಅಭಿನಿವೇಶವಿದ್ದ ವಿ.ಸೀ. ಅವರ ಬರೆಹದ ಹಾಸು–ಬೀಸುಗಳು ಎಂಥವರನ್ನೂ ಗಂಭೀರರನ್ನಾಗಿಸುತ್ತದೆ, ನಮ್ರರನ್ನಾಗಿಯೂ ಮಾಡುತ್ತದೆ. ಕೇವಲ ಉಕ್ತಲೇಖನ ಕ್ರಮದಲ್ಲಿ ರೂಪುಗೊಂಡ ಅವರ ಅನೇಕ ರಚನೆಗಳಲ್ಲಿಯೂ ಸುಳಿಯುವ ಹೊಸ ಭಾವಗಳ, ಹಸನು ಚಿಂತನೆಗಳ ತನಿಮಿಂಚುಗಳು ವಿಮರ್ಶಕರ ಮನೋಬುದ್ಧಿಗಳಿಗೆಟುಕಿ ಆ ಬಳಿಕ ವಿಶ್ಲೇಷಣೆಯ ಹಂತಕ್ಕೆ ಒಗ್ಗಿಬರುವುದು ಸುಲಭದ ಮಾತೇನಲ್ಲ.

ಹೀಗಿರಲು ಪ್ರಕೃತಸಂಪುಟದ ಎರಡು ರಚನೆಗಳಾದ 'ಸತ್ಯ ಮತ್ತು ಮೌಲ್ಯ' ಹಾಗೂ 'ಜ್ಞಾನ–ವಿಜ್ಞಾನ'ಗಳಂಥ ಅಪ್ಪಟ ಶಾಸ್ತ್ರೀಯವೂ ತಾತ್ತ್ವಿಕವೂ ಆದ ಗ್ರಂಥಗಳ ಬಗೆಗೆ ಹೇಳುವುದೇನಿದೆ? ಆದರೂ ಈ ವಿಷಯದಲ್ಲಿ ಸಹಜವಾಗಿಯೇ ನನಗಿರುವ ಆಸಕ್ತಿ, ಕುತೂಹಲ ಮತ್ತು ಅಭ್ಯಾಸಗಳೂ ಶ್ರೀ ಎಂ. ವಿ. ವೆಂಕಟೇಶಮೂರ್ತಿಯವರ ಆತ್ಮೀಯ ಆದೇಶವೂ ವಿ.ಸೀ.ಅವರಲ್ಲಿ ನನಗಿರುವ ಪ್ರೀತಿ–ಗೌರವಗಳೊಡನೆ ಹೆಣೆದುಕೊಂಡು ಈ ನಾಲ್ಕು ಮಾತುಗಳನ್ನು ಬರೆಸಿವೆ. ಅಭಿಜ್ಞರು ನನ್ನ ಅವಿನಯವನ್ನು ಮನ್ನಿಸಿಯಾರು. ಏಕೆಂದರೆ ವೈಚಾರಿಕಸ್ತರದಲ್ಲಿ, ಶಾಸ್ತ್ರಾರ್ಥಸಂಗತಿಯಲ್ಲಿ ವ್ಯಕ್ತಿಮೋಹಗಳೇ ಮುಂತಾದ ಅಭಿನಿವೇಶಗಳೂ ಅಧಿಕರಣಬಾಹ್ಯವಾದ ಪ್ರಲೋಭನೆಗಳೂ ಪ್ರಾಮಾಣಿಕತೆಗೆ ಮಾರಕವೆಂದು ನನ್ನ ವಿವೇಕ–ವಿಶ್ವಾಸ. ಜೊತೆಗೆ ಈ ದಾಕ್ಷಿಣ್ಯ–ದೌರ್ಬಲ್ಯಗಳಿಂದ ಸಾರಸ್ವತಲೋಕಕ್ಕೆ ಯಾವ ಪ್ರಯೋಜನವೂ ದಕ್ಕದೆಂಬುದು ನನ್ನ ಅನುಭವ. ಹೀಗಾಗಿ ನನ್ನ ಪ್ರಾಂಜಲೋಕ್ತಿಗಳನ್ನು ಯುಕ್ತಾರ್ಥದಲ್ಲಿಯೇ ಗ್ರಹಿಸಬೇಕೆಂದು ಬೇಡಿಕೆ.

## II

'ಸತ್ಯ ಮತ್ತು ಮೌಲ್ಯ' ಗ್ರಂಥವು ಇದೇ ಹೆಸರಿನ ಎರಡು ಉಪನ್ಯಾಸಗಳ ಲಿಖಿತರೂಪವೆಂದಾದರೂ ವಿ.ಸೀ. ಅವರ ಮನೋಧರ್ಮದಂತೆ ಉಪನ್ಯಾಸವು ತನ್ನ ರೂಪವಿವರಗಳಲ್ಲಿ ಲಿಖಿತಗ್ರಂಥಕ್ಕಿಂತ ಬೇರೆಯೇ ಆದದ್ದು. ಇದು ಯುಕ್ತವೂ ಹೌದು. ಏಕೆಂದರೆ ವಾಗ್ಮಿತೆಯ ಜಾಡೇ ಬೇರೆ, ಬರೆವಣಿಗೆಯ ರೀತಿಯೇ ಬೇರೆ. ಇಂತಾದರೂ ವಿ.ಸೀ. ಅವರ ಬರೆಹಗಳಲ್ಲೆಲ್ಲ ಅವರ ವಾಗ್ಮಿತೆಯ ಮುಖ ಎದ್ದು ಕಾಣದಿರದು. ಅವರ ಅಸಂಖ್ಯಮುಖಗಳ ವಿಶದವ್ಯಕ್ತಿತ್ವದಲ್ಲಿ ಎದ್ದು ತೋರುವಂಥದ್ದು ಅವರ ವಾಗ್ವೈದುಷ್ಯವೆಂಬುದು ಬಲ್ಲವರ ಮಾತು. ಹೀಗಾಗಿ ಅವರಲ್ಲಿ ಲೇಖಕನ ಗುಣಕ್ಕಿಂತ ಮಾತುಗಾರನ ಗುಣವೇ ಪ್ರಧಾನ, ಆಪ್ಯಾಯನ. ಎಷ್ಟಾದರೂ ಅತ್ಯುತ್ತಮ ಪ್ರಾಧ್ಯಾಪಕರಲ್ಲವೇ. ಆದರೆ ಈ ಗುಣವಿಶೇಷವು ಲಲಿತಪ್ರಬಂಧ, ಸ್ಮೃತಿಚಿತ್ರ, ವ್ಯಕ್ತಿಚಿತ್ರ, ರಸವಿಮರ್ಶೆಗಳಂಥ ಬರೆವಣಿಗೆಗೆ ಒಗ್ಗುವಷ್ಟು ಹದವಾಗಿ ಶಾಸ್ತ್ರವಿಚಾರಗಳಿಗೆ, ತರ್ಕಸಂಗತಿಗಳಿಗೆ ಒಗ್ಗದೇನೋ. ಹೀಗಾಗಿ ಮೊದಲೇ ಜಟಿಲವಾದ



ಶಾಸ್ತ್ರೀಯವಿಷಯಗಳು ಮತ್ತಷ್ಟು ಗೋಜಲಾಗುವ ಸಾಧ್ಯತೆಯೂ ಉಂಟು. ಕೆಲವೊಮ್ಮೆ ಪ್ರವಚನಶೈಲಿಯು ಶಾಸ್ತ್ರಸಂಗತಿಗಳಿಗೆ ತುಂಬ ಸೊಗಸಾದ ನಿರೂಪಣಕ್ರಮವೂ ಆಗಬಲ್ಲುದು. ಡಿ.ವಿ.ಜಿ.ಯವರ 'ಜೀವನಧರ್ಮಯೋಗ' ಇದಕ್ಕೆ ಅತ್ಯುತ್ತಮ ಉದಾಹರಣೆ. ಆದರೆ ಈ ತೆರನಾದ ಯಶಸ್ಸನ್ನು ಕಾಣಬೇಕಾದರೆ ಲೇಖಕನ ಮನಸ್ಸಿನಲ್ಲಿ ತುಂಬ ಸಂಯಮಪೂರ್ಣವಾದ ವಿಷಯಾನುಕ್ರಮಣಿಯಿರಬೇಕು, ಪ್ರತಿಪಾದ್ಯ ವಿಚಾರಗಳಲ್ಲಿ ಅನ್ಯೋನ್ಯಸಾಮಂಜಸ್ಯವುಳ್ಳ ಆನುಪೂರ್ವಿ ಬರಬೇಕು. ವಿ.ಸೀ. ಅವರ ಮನೋಬುದ್ಧಿಗಳು ಅವರ ಮಾತಿಗಿಂತ ತರಲ, ಚಟುಲ, ಕ್ಷಿಪ್ರ, ದೀಪ್ರ. ಹೀಗಾಗಿ 'ವಾಚಮರ್ಥೋಽನುಧಾವತಿ' ಎಂಬಂತೆ ಜಿಜ್ಞಾಸುವಾದ ಓದುಗನು ಪೂರ್ವಾಪರ ಸಮನ್ವಯವನ್ನೂ ಅಧ್ಯಾಹಾರ–ಅನ್ವಾಖ್ಯಾನಗಳನ್ನೂ ಮಾಡಿಕೊಳ್ಳಬೇಕಾದ ಸಂದರ್ಭಗಳು ಸಾಕಷ್ಟು. ಜೊತೆಗೆ ಅವರ ಪ್ರಾಶ್ನಿಕಮನಸ್ಸು ಅವಿಶ್ರಾಂತ, ಅಶಾಂತ. ಆದುದರಿಂದ ಅವರ ಲೇಖನಸಂಹಿತೆಯಲ್ಲಿ ಸರ್ವತ್ರ ಸಂದೇಹಸೂಕ್ತಗಳು ಬೀದಿವರಿಯುತ್ತವೆ. ಜಿಜ್ಞಾಸೆಗಿದು ಒಳ್ಳೆಯ ಪದ್ಧತಿಯೆಂಬ ಗುಣಗಣ್ಯತೆಯೂ ಇಲ್ಲದಿಲ್ಲ. ಆದರೆ ಶಾಸ್ತ್ರಾರ್ಥಕಾಲದಲ್ಲಷ್ಟೇ ಸಲ್ಲಬೇಕಿದ್ದ ಸಂದೇಹಸಂದೋಹವು ಚರ್ಚೆಯ ಕಡೆಯಲ್ಲಿಯೂ ನಿಲ್ಲುವಂತಾದರೆ ಕಷ್ಟವಷ್ಟೆ! ಇದಕ್ಕೂ ಪ್ರತಿಕೋಟಿಯಿಲ್ಲದಿಲ್ಲ; ಸಂದೇಹವೆಂಬುದು ಮನಸ್ಸಿನ ಲಕ್ಷಣವೇ ಆಗಿರುವಾಗ, ಚರ್ಚೆಗೆ ಪೂರ್ಣವಿರಾಮವೆಂಬುದು ಜ್ಞಾನಪ್ರಗತಿಯ ಸ್ಥಗನವೇ ಎಂದಾಗ ಇಂಥ ಪದ್ಧತಿಯಲ್ಲಿ ದೋಷವೆಲ್ಲಿದೆ? ದಿಟವೇ. ಶಾಸ್ತ್ರಚರ್ಚೆಯ ಅಂತ್ಯದಲ್ಲೂ ಸಂದೇಹಗಳಿರಬಹುದು. ಆದರೆ ಸಂದೇಹವೇನೆಂಬುದೂ ಸಂದಿಗ್ಧವಾಗಬಾರದಲ್ಲವೇ! ಸಂದೇಹವೇ ಮನೋಲಕ್ಷಣವಾಗಿರಬಹುದು; ದ್ವಂದ್ವಾತ್ಮಕತೆಯೇ ಮನದ ಅಸ್ತಿತ್ವವೆನಿಸಿರಬಹುದು. ಆದರೆ ಬುದ್ಧಿಯು ನಿಶ್ಚಯಾತ್ಮಕವಷ್ಟೆ; ಸಾರ್ವತ್ರಿಕಾನುಭವದ ಪೂರ್ಣತರ್ಕ ಅಥವಾ ಅಧ್ಯಾರೋಪಾಪವಾದಪ್ರಕ್ರಿಯೆಯ ಶ್ರೌತತರ್ಕ ಅವಸ್ಥಾತ್ರಯಮೀಮಾಂಸೆಯ ಗಟ್ಟಿಯಾದ ನೆಲೆಗಟ್ಟಿನಮೇಲೆ ನಿಂತ ಅಸ್ಖಲಿತವಿಧಾನವಷ್ಟೆ. ಇಲ್ಲಾವ ನಂಬುಗೆ, ಭ್ರಾಂತಿ, ಅಂಧವಿಶ್ವಾಸಾದಿಗಳ ಸೋಂಕಿಲ್ಲ ತಾನೆ! ಹೀಗಾಗಿ ಈ ಗ್ರಂಥದ ಆರಂಭದಲ್ಲಿಯೇ ವಿ.ಸೀ. ಅವರು ಶಂಕಿಸುವ ಆತಂಕಗಳು ವೃಥಾ ವಿಭೀಷಿಕೆಗಳೆಂಬುದರಲ್ಲಿ ಸಂದೇಹವಿಲ್ಲ. ಇರಲಿ, ಪ್ರಕೃತಮನುಸರಾಮಃ.

'ಸತ್ಯ ಮತ್ತು ಮೌಲ್ಯ'ಗಳನ್ನು ಕುರಿತ ವಿ.ಸೀ. ಅವರ ಆಸ್ಥೆ ಪ್ರಾಯಶಃ ಅವರ ವಿದ್ಯಾಗುರುಗಳಾದ ಆಚಾರ್ಯ ಎಂ. ಹಿರಿಯಣ್ಣನವರಿಂದ ಬಂದಿರಬೇಕು. ಏಕೆಂದರೆ ನಾನರಿತಂತೆ ಹಿರಿಯಣ್ಣನವರ ಹಾಗೆ ಈ ವಿಷಯವನ್ನು ತಲಸ್ಪರ್ಶಿಯಾಗಿ ಮತ್ತಾವ ವಿದ್ವಾಂಸರೂ ನಿರೂಪಿಸಿಲ್ಲ. ಅವರ ಮೇರುಕೃತಿ Indian Conception of Values ಇದಕ್ಕೆ ಭವ್ಯಸಾಕ್ಷಿಯಾಗಿ ನಿಂತಿದೆ. ಬಹುಶಃ ವಿ.ಸೀ. ಅವರು ತಮ್ಮ ವಿದ್ಯಾರ್ಥಿದಶೆಯಲ್ಲಿಯೇ ಈ ವಿಚಾರವನ್ನು ಕುರಿತು ಆಸ್ಥೆ–ಆಸಕ್ತಿಗಳನ್ನು ಬೆಳೆಸಿಕೊಂಡಿರಬಹುದು. ಏಕೆಂದರೆ ತಮ್ಮ ಜೀವನದ ಆರಂಭಿಕದಿನಗಳಲ್ಲಿಯೇ ಇಂಥ ಮೂಲಭೂತ ವಿಷಯಗಳ ಬಗೆಗೆ ಆಕರ್ಷಿತರಾಗಿ ಚಿಂತನೆ ನಡಸುವುದು ಎಲ್ಲ ಹಿರಿಯರ ಹಾದಿಯಾಗಿದೆ.

ಪ್ರಾಯಶಃ ಹಿರಿಯಣ್ಣನವರು ತಮ್ಮ ತರಗತಿಗಳಲ್ಲಿ ಈ ವಿಚಾರವನ್ನು ಪ್ರಸ್ತಾವಿಸಿದ್ದಿರಬಹುದು. ಏಕೆಂದರೆ ಭಾರತೀಯತತ್ತ್ವಶಾಸ್ತ್ರಚಿಂತನೆಯೆಂಬುದು ಮೂಲತಃ ಭಾರತೀಯ ಮೌಲ್ಯಚಿಂತನೆಯೇ ಆಗಿದೆಯೆಂದು ಹಿರಿಯಣ್ಣನವರು ನಂಬಿದ್ದರು. ಅಲ್ಲದೆ ಆ ವೇಳೆಗಾಗಲೇ ಈ ನಿಟ್ಟಿನಲ್ಲಿ ಸಾಕಷ್ಟು ವಿವೇಚಿಸಿ ಬರೆಹಗಳನ್ನೂ ರೂಪಿಸಿದ್ದರು. ಜೊತೆಗೆ ಡಾ॥ ಎಸ್. ರಾಧಾಕೃಷ್ಣನ್ ಅವರೂ ವಿ.ಸೀ.ಯವರಿಗೆ ಗುರುಗಳಾಗಿದ್ದರಷ್ಟೆ; ಆ ವಿದ್ವಾಂಸರ ಉದ್ಬೋಧಕವಾದ ಮಾತುಗಳಲ್ಲಿಯೂ ಇಂಥ ವಿಚಾರಗಳ ಮಥನಕ್ಕೆ ಪ್ರೇರಣೆದೊರೆತಿರಬಹುದು. ವಸ್ತುತಃ ವಿ.ಸೀ. ಅವರ ವ್ಯಕ್ತಿತ್ವದ ಸ್ನಿಗ್ಧತೆ-ಆರ್ದ್ರತೆ-ಉಪಶಾಂತಿಲಕ್ಷಣಗಳು ಹಿರಿಯಣ್ಣನವರ ತತ್ಸದೃಶಗುಣಗಳನ್ನು ಹೋಲುತ್ತವಾದರೂ ವ್ಯಕ್ತಿವೈಶಿಷ್ಟ್ಯ, ವಾಗ್ವಿಲಾಸ, ಬಹುಕುತೂಹಲ, ಆಸಕ್ತಿವೈವಿಧ್ಯ ಮುಂತಾದ ಹತ್ತಾರು ಅಂಶಗಳು ರಾಧಾಕೃಷ್ಣನ್ ಅವರನ್ನೇ ನೆನಪಿಗೆ ತರುವಂತಿವೆ. ಈ ಕೆಲವು ವಿಶೇಷಗಳ ಛಾಯೆಗಳನ್ನು ವಿ.ಸೀ. ಅವರ ಬರೆಹಗಳಲ್ಲಿಯೂ ಸಹಜವಾಗಿ ಕಾಣಬಹುದು. ಇಂತಾದರೂ ವಿ.ಸೀ. ಅವರಿಗೆ 'ಸತ್ಯ ಮತ್ತು ಮೌಲ್ಯ'ಗಳನ್ನು ಕುರಿತಂತೆ ಕ್ಷೋದಕ್ಷಮವಾದ ಶಾಸ್ತ್ರೀಯಗ್ರಂಥವನ್ನು ಬರೆಯುವ ಸಂಕಲ್ಪವಿದ್ದಂತೆ ತೋರದು (ಈ ಮಾತನ್ನು 'ಜ್ಞಾನ-ವಿಜ್ಞಾನ'ದ ಬಗೆಗೂ ಅನ್ವಯಿಸಬಹುದು). ಇದೊಂದು ಬಗೆಯ ವ್ಯಕ್ತಸ್ವಗತ, loud thinking. ಭವಭೂತಿಯ ಮಾತಿನಲ್ಲಿ ಹೇಳುವುದಾದರೆ 'ಜಲ್ಪತೋಽರಕ್ರಮೇಣ' ಸಾಗಿದ ಸಮಾಲೋಚನಲಹರಿ. ಆದುದರಿಂದಲೇ ಇಲ್ಲಿಯ ಎಷ್ಟೋ ಅನಾವೃತಕೋಟಿ (Open end)ಗಳಿಗೆ ಜಿಜ್ಞಾಸುಗಳ ಅಧ್ಯಾಹಾರ-ಅನ್ವಾಧಾನಗಳು ಬೇಕಾಗಿವೆ.

ವಿ.ಸೀ. ಅವರು Fact and Value ಎಂಬ ಶಬ್ದಗಳಿಗೆ ಕ್ರಮವಾಗಿ ಸತ್ಯ ಮತ್ತು ಮೌಲ್ಯ ಎಂಬ ಪದಗಳನ್ನು ಬಳಸಿದ್ದಾರೆ. ಆದರೆ ಇವೆರಡೂ ಅಷ್ಟಾಗಿ ಸಾಧು ಸಂವಾದಿ ಪದಗಳಲ್ಲವೆನಿಸುತ್ತದೆ. ವಿಶೇಷತಃ Fact ಎಂಬುದನ್ನು ಸತ್ಯವೆಂದು ಹೆಸರಿಸಿ ವಿ.ಸೀ.ಯವರೇ ಮುಂದೆ Truth ಎಂಬುದಕ್ಕೂ ಇದೇ ಶಬ್ದವನ್ನು ಬಳಸಿದ್ದಾರೆ. ಇಂಥ ಪರಿಭಾಷಾಸಾಂಕರ್ಯವು ಅವಾಂಛಿತ. ಏಕೆಂದರೆ Fact ಮತ್ತು Truthಗಳಿಗಿರುವ ಅಂತರ ಅಪಾರ. ಹೀಗೆಯೇ Real ಮತ್ತು Trueಗಳಿಗಿರುವ ವ್ಯತ್ಯಾಸವೂ ಮನನೀಯ. ಹೀಗಾಗಿ Fact ಎಂಬುದಕ್ಕೆ ತಥ್ಯ ಎಂಬ ಶಬ್ದವೇ ಯುಕ್ತ. ದಿಟವೇ, ಪರಿಭಾಷೆಯೆಂಬುದು ನಾವು ಮಾಡಿಕೊಂಡಂತೆ. ಆದರೂ ಲೋಕಪ್ರಸಿದ್ಧಿ ಮತ್ತು ಶಾಸ್ತ್ರಪ್ರಶಸ್ತಿಗಳೆರಡನ್ನೂ ಗಮನಿಸಿ ಕೂಡಿದಮಟ್ಟಿಗೂ ಖಚಿತವಾದ ನಿರ್ದಿಷ್ಟ- ನಿರ್ದುಷ್ಟಪದಗಳನ್ನೇ ಬಳಸುವುದೊಳಿತು. ಹೀಗೆ ಕಂಡಾಗ Truthಗೆ ಸತ್ಯವೂ Realಗೆ ನೈಜವೂ ಒಪ್ಪವಾದಾವು. ಇತ್ತೀಚೆಗೆ ನಮ್ಮ ನುಡಿಗಳಲ್ಲಿ Value ಎಂಬ ಶಬ್ದಕ್ಕೆ ಮೌಲ್ಯ ಎಂಬ ಪದವು ಸಂವಾದಿಯೆಂದು ಬಳಕೆಯಾಗುತ್ತಿದೆ. Culture ಎಂಬ ಶಬ್ದಕ್ಕೆ ಸಂಸ್ಕೃತಿ ಎಂಬ ಪದವು ಸಂವಾದಿಯಾದಂತೆಯೇ ಇಲ್ಲಿ ಕೂಡ ಬಳಕೆ ಬಂದಿದೆ. ಇಂಥ ವಿಸ್ತರಣಗಳೂ ನೂತನ ಶಬ್ದಟಂಕನಗಳೂ ಸ್ವಾಗತಾರ್ಹವೇ. ಆದರೆ ಇಂಗ್ಲಿಷ್‌ನಲ್ಲಿ



Value ಪದಕ್ಕಿರುವ ಎಲ್ಲ ವಾಚ್ಯ-ವ್ಯಂಗ್ಯಾರ್ಥಸ್ವಾರಸ್ಯಗಳೂ ಈ ಪದದಲ್ಲಿಲ್ಲ. ಮೂಲತಃ ನಮ್ಮಲ್ಲಿ 'ಅರ್ಥ' ಅಥವಾ 'ಪುರುಷಾರ್ಥ' ಎಂಬ ಹೆಸರಿನಿಂದಲೇ Value ತತ್ತ್ವವು ವ್ಯವಹೃತವಾಗುತ್ತಿತ್ತು. ಆದರೆ ಇತ್ತೀಚಿಗಿನ ದಶಕಗಳಲ್ಲಿ 'ಮೂಲ' ಶಬ್ದದ ತದ್ಧಿತರೂಪವಾದ ಮೌಲ್ಯವು Value ಎಂಬರ್ಥದಲ್ಲಿ ಬಳಕೆಗೆ ಬಂದಿದೆ. ಇದೇನೂ ತೀರ ಆಕ್ಷೇಪಣೀಯವಾದ ಪ್ರಯೋಗವಲ್ಲ. ಏಕೆಂದರೆ ಹಲವು ನಿಘಂಟುಗಳಲ್ಲಿ Value ಎಂಬ ಪದಕ್ಕೆ ಮೂಲ್ಯ ಅಥವ ಮೌಲ್ಯ ಶಬ್ದವನ್ನೇ ಸಂವಾದಿಯಾಗಿ ನೀಡಲಾಗಿದೆ. ಆದರೆ ಆಂಗ್ಲಭಾಷೆಯಲ್ಲಿರುವ Value ಮತ್ತು Price ಎಂಬ ಎರಡು ಪದಗಳಿಗಿರುವ ಅರ್ಥವಿಶೇಷಗಳ ಅಂತರ-ವೈಚಿತ್ರ್ಯಗಳನ್ನು ಗಮನಿಸಿದಾಗ ನಮ್ಮಲ್ಲಿ-ಪುಣ್ಯವಶಾತ್ ಅಚ್ಚಗನ್ನಡದ 'ಬೆಲೆ' ಎಂಬ ಪದದಿಂದ ಬದುಕಿದೆವು!-ಮೌಲ್ಯ ಎಂಬ ಪದವನ್ನೇ ಉಭಯಥಾ ಬಳಸುವ ಪರಿ ತೊಡಕಾಗದಿರದು. ಆದುದರಿಂದ ಪರಿಭಾಷೆಯ ನಿರ್ದಿಷ್ಟತೆ-ನಿರ್ದುಷ್ಟತೆಗಳು ಮುಖ್ಯವೆಂಬ ಇಂಗಿತದಿಂದ ಈ ಸಂಗತಿಯನ್ನು ಇಷ್ಟೊಂದು ಬೆಳಸುವುದಾಯಿತು.

ತಥ್ಯವೆಂಬುದು ಮಾಹಿತಿಯ, ಬುದ್ಧಿಯ, ವಿಚಾರದ ಮಟ್ಟಕ್ಕಷ್ಟೇ ಬಂದು ನಿಲ್ಲುವಂಥದ್ದಾದರೆ ಮೌಲ್ಯವೆಂಬುದು ಸಂವೇದನೆಯ, ಭಾವನೆಯ, ಅನುಭವದ ಮಟ್ಟದಲ್ಲಿ ಮಾತ್ರ ಸ್ಫುರಿಸುವಂಥದ್ದು. ಒಂದು ಬಟ್ಟಲು ನೀರನ್ನು $H_2O$ ಎಂದು ರಾಸಾಯನಿಕವಾಗಿ ಗುರುತಿಸುವುದಾಗಲೀ ವ್ಯಾವಹಾರಿಕವಾಗಿ ಅದರ ನೆಲೆ-ಬೆಲೆಗಳನ್ನು ಅರಿಯುವುದಾಗಲೀ ತಥ್ಯದ ಕಕ್ಷೆಗೆ ಬರುವಂಥ ಸಂಗತಿಯಾದರೆ ಅದೇ ನೀರು ನಮ್ಮ ಬಾಯಾರಿಕೆಯನ್ನು ತಣಿಸುವಾಗ, ಕೊಳೆಯನ್ನು ತೊಳೆಯುವಾಗ, ತೊರೆ-ಝರಿಗಳಾಗಿ ಹರಿದು ಚೆಲುವನ್ನು ಚಿಮ್ಮುವಾಗ ಮೌಲ್ಯದ ವಲಯಕ್ಕೇರುತ್ತದೆ. ಹಿರಿಯಣ್ಣನವರೆನ್ನುವಂತೆ ಯಾವುದು ಸ್ವತಃಪರ್ಯಾಪ್ತವಾಗುವುದಿಲ್ಲವೋ ಅದೊಂದು ಮೌಲ್ಯವಾಗಲು ಸಾಧ್ಯವಿಲ್ಲ.

ಮೌಲ್ಯಗಳಲ್ಲಿ ಸಾಧನಮೌಲ್ಯ ಹಾಗೂ ಆತ್ಯಂತಿಕಮೌಲ್ಯಗಳೆಂದು ಎರಡು ಬಗೆಗಳು. ಆತ್ಯಂತಿಕಮೌಲ್ಯಕ್ಕೆ ಪೂರಕವಾಗುವುವೆಲ್ಲ ಸಾಧನಮೌಲ್ಯಗಳೇ. ಮೂಲತಃ ಆನಂದವೊಂದೇ ಆತ್ಯಂತಿಕಮೌಲ್ಯ. ಇದು ನಿರ್ವಿಶೇಷಾನುಭವ ಅಥವಾ ಕೇವಲಾನುಭವ ರೂಪದ್ದಾಗಿದ್ದು ಇರವು-ಅರಿವುಗಳ ಪರಿಪಾಕವೇ ಆಗಿದೆ. ಇದನ್ನೇ ವೇದಾಂತದರ್ಶನವು ಸಚ್ಚಿದಾನಂದವೆಂದು ಹೇಳಿದೆ. ಇದು ಮೋಕ್ಷ, ಮುಕ್ತಿ, ಅಪವರ್ಗ, ನಿಶ್ಶ್ರೇಯಸ ಎಂಬಿವೇ ಮೊದಲಾದ ಹೆಸರುಗಳಿಂದಲೂ ಲಕ್ಷಿತವಾಗಿದೆ. ಇದಕ್ಕೆ ಪೂರಕವಾಗುವ ಇನ್ನಿತರಮೌಲ್ಯಗಳೇ ಧರ್ಮಾರ್ಥಕಾಮಗಳೆಂಬ ತ್ರಿವರ್ಗಪಂಕ್ತಿಯವು. ಸತ್ಯ, ಅಹಿಂಸೆ, ದಯೆ, ಶೌಚ, ಅಸ್ತೇಯ, ಶಮ, ದಮ ಮುಂತಾದ ಎಲ್ಲ ಮೌಲ್ಯಗಳೂ ಧರ್ಮವೆಂಬ ಒಂದು ಮಹಾಸಾಧನಮೌಲ್ಯದಲ್ಲಿ ಅಡಗುತ್ತವೆ. ಇನ್ನುಳಿದ ಅರ್ಥ-ಕಾಮಗಳಲ್ಲಿ ನಮ್ಮೆಲ್ಲರ ಇಂದ್ರಿಯಮೂಲವಾದ ಸುಖಭೋಗಗಳೂ ತತ್ಸಾಧನಗಳೂ ಸೇರುತ್ತವೆ. ಈ ಕಾರಣದಿಂದಲೇ ಪುರುಷಾರ್ಥಚತುಷ್ಟಯಕ್ಕೆ ತತ್ತ್ವತಃ ಬಹಿರ್ಭೂತವಾಗಿ ನಿಲ್ಲಬಲ್ಲ

ಮತ್ತಾವ ಮೌಲ್ಯವೂ ಇಲ್ಲವೆಂದರೆ ಅತಿಶಯವಲ್ಲ. ಹಿರಿಯಣ್ಣನವರು ಈ ಜಾಡಿನಲ್ಲಿ ನಡೆದು ಮೌಲ್ಯಗಳ ವಿವೇಚನೆಯನ್ನು ಮಾಡುತ್ತಾರೆ. ಆದರೆ ವಿ.ಸೀ. ಅವರು ಹೀಗಿಲ್ಲದೆ ತಮ್ಮದೇ ಆದ ರೀತಿಯಲ್ಲಿ ಮೌಲ್ಯಮೀಮಾಂಸೆಗೆ ಎದುರಾಗುವ ತೊಡಕು-ತಳಮಳಗಳ ಪರಿಚಯವನ್ನು ಮಾಡಿಕೊಡುತ್ತಾರೆ.

ಇಂಥ ಸಂದರ್ಭದಲ್ಲಿ ಒಂದೆಡೆ ಜ್ಞಾನ-ಜ್ಞೇಯ-ಜ್ಞಾತೃ ಎಂಬ ತ್ರಿಪುಟಿಯ ಪ್ರಸ್ತಾವವನ್ನೂ ಮಾಡುತ್ತಾರೆ. ಆದರೆ ಅದು ವಿಸ್ತರದಲ್ಲಿ ಸಾಗುವುದಿಲ್ಲ. ಹಿರಿಯಣ್ಣನವರಾದರೋ ಈ ಸಂಗತಿಯನ್ನು ತುಂಬ ವ್ಯಾಪಕವಾಗಿ ಚರ್ಚಿಸುತ್ತಾರೆ. ಇದರ ಮೂಲಕ ಭಾರತೀಯದರ್ಶನಗಳ 'ಖ್ಯಾತಿವಾದ'('ಖ್ಯಾತಿ' ಎಂದರೆ ಅಸ್ತಿತ್ವವೊಂದು ತೋರಿಕೊಳ್ಳುವ ಬಗೆ)ವನ್ನು ತಲಸ್ಪರ್ಶಿಯಾಗಿ ವಿಮರ್ಶಿಸುತ್ತಾರೆ. ಇದು ಜಗತ್ತು-ಜೀವಗಳ ಬಗೆಯನ್ನು ಅರ್ಥಮಾಡಿಕೊಳ್ಳಲು ತುಂಬ ಆವಶ್ಯಕ. ಇದು ಭೌತ-ಜೀವ-ಮನಶ್ಶಾಸ್ತ್ರಾದಿಗಳ ಕಕ್ಷೆಗೂ ಬರುತ್ತದೆ. ಇದರತ್ತ ವಿ.ಸೀ.ಯವರು ನಮ್ಮ ಗಮನವನ್ನು ಸೆಳೆಯುತ್ತಾರೆ. ಆದರೆ ಈ ಸಂದರ್ಭದಲ್ಲಿ ಮಾನ-ಮೇಯವ್ಯವಹಾರದ ಬಗೆಗೆ ಹೇಳುತ್ತಾರಾದರೂ ಅವುಗಳ ಸಾಪೇಕ್ಷತೆಯನ್ನು ನಿರೂಪಿಸುವುದಿಲ್ಲ. ಇದೇ ರೀತಿ ದೇಶ-ಕಾಲ, ದ್ರವ್ಯ-ಕ್ರಿಯೆ, ಸಂಬಂಧ-ಸಮವಾಯ ಮುಂತಾದುವನ್ನು ಪ್ರಸ್ತಾವಿಸುವರಾದರೂ ಸಲಕ್ಷಣವಾಗಿ ವಿವೇಚಿಸುವುದಿಲ್ಲ. ಆದರೆ ಯುಕ್ತಿ (Reason) ಮತ್ತು ಕಾರಣ(Cause)ಗಳ ಬಗೆಗೆ ಹೇಳುವುದಾಗಲಿ, ಪ್ರಾಮಾಣಿಕತೆ ಮತ್ತು ವಾಸ್ತವಿಕತೆಗಳ ಬಗೆಗಿರುವ ಅಂತರವನ್ನು ನಿರೂಪಿಸುವುದಾಗಲಿ ತುಂಬ ಸೊಗಸಾಗಿದೆ. ಹೀಗೆಯೇ Is, Must, Ought ಮತ್ತು Can ಗಳ ನೆಲೆ-ಬೆಲೆಗಳನ್ನು ಚರ್ಚಿಸುತ್ತಾ Must ಎಂಬುದು ಕಾನೂನು-ಶಾಸನ-ನಿಯಮನಿರ್ಬಂಧಗಳ ಪ್ರಪಂಚ, Ought ಎನ್ನುವುದು ಎಲ್ಲ ಧರ್ಮದ ಹೊಣೆಗಾರಿಕೆ, Is ಎಂಬುದು ಎಲ್ಲ ವಾಸ್ತವಗಳ ಲೋಕ, Can ಎಂಬುದು ಮಾತ್ರ ನಮಗುಳಿದ ಸದ್ಯಶ್ಶಕ್ಯಸ್ಥಿತಿಯೆಂಬುದಾಗಿ ವಿವೇಚಿಸಿರುವುದು ತುಂಬ ಇನಿದಾಗಿದೆ. ವಿ.ಸೀ. ಅವರ ಆಧುನಿಕಸಂಸ್ಕಾರದ ಜಾಗೃತಿ ಎಷ್ಟರ ಮಟ್ಟಿನದೆಂದರೆ ಮಹಾಭಾರತದ ಸುಪ್ರಸಿದ್ಧ ಶ್ಲೋಕ 'ತ್ಯಜೇದೇಕಂ.....' ಅನ್ನು ವಿಶ್ಲೇಷಿಸುತ್ತಾ ವ್ಯಕ್ತಿಸ್ವಾತಂತ್ರ್ಯ-ವಿಭಿನ್ನಮೌಲ್ಯತ್ವಗಳಂಥ ಅನೇಕಮುಖಗಳತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ಹಾಗೆಯೇ 'ಪ್ರಯೋಜನ'ದ ಬಗೆಗೂ ಅವರ ವಿವೇಚನೆ ಸಾರವತ್ತಾದುದು. ಮುಖ್ಯವಾಗಿ ವಿ.ಸೀ.ಯವರ ನಮ್ರತೆ, ಲೋಕದ ಬಹುತ್ವದಲ್ಲಿ ಕಾಳಜಿ, ಸ್ವಾತಂತ್ರ್ಯಪ್ರೀತಿ ಮುಂತಾದುವೆಲ್ಲ ನಮಗೆ ಅತಿಶಯವಾಗಿ ಆದರಣೀಯವೆನಿಸುತ್ತವೆ. ಇದಿಷ್ಟೂ 'ಸತ್ಯ ಮತ್ತು ಮೌಲ್ಯ' ಗ್ರಂಥದ ಪೂರ್ವಭಾಗವಾದ 'ಶಬ್ದಗಳ ಅರ್ಥವ್ಯಾಪ್ತಿ'ಯನ್ನು ಕುರಿತದ್ದಾಯಿತು. ಇನ್ನು ಉತ್ತರಾರ್ಧವಾದ 'ಎರಡು ತ್ರಿವರ್ಗಗಳು' ಭಾಗದತ್ತ ತಿರುಗಬಹುದು.

ಇಲ್ಲಿ ಸತ್ಯ, ಶಿವ ಮತ್ತು ಸುಂದರಗಳ (Truth, Good and Beauty) ಮೀಮಾಂಸೆಯೂ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗಳ (Justice, Freedom



and Equality) ವಿವೇಚನೆಯೂ ಬಂದಿವೆ. ಹಿರಿಯಣ್ಣನವರು ಸತ್ಯ-ಶಿವ-ಸುಂದರಗಳ ವ್ಯಾಪ್ತಿ ಮತ್ತು ಮಿತಿಗಳನ್ನು ತಮ್ಮ ಅನುಪಮಕೃತಿ The Quest After Perfection ನಲ್ಲಿ ನಿರೂಪಿಸಿದ್ದಾರೆ. ಈ ತೆರನಾದ ಮೌಲ್ಯಗಳ ಶ್ರೇಣಿ ನಮಗೆ ಪಾಶ್ಚಾತ್ಯಪ್ರಪಂಚದ ಮೂಲಕ ಆಮದಾದ ಕ್ರಮವಾದರೂ ವಿ. ರಾಘವನ್ ಅವರು ನಿರೂಪಿಸುವಂತೆ ನಮ್ಮಲ್ಲಿಯ ಬ್ರಹ್ಮ-ಧರ್ಮ-ರಸಗಳೆಂಬ ಮೌಲ್ಯಗಳು ಇವನ್ನೂ ಒಳಗೊಂಡು ಅದರಾಚೆಗೂ ಚಾಚಿಕೊಳ್ಳಬಲ್ಲ ತತ್ತ್ವಗಳು. ಭಾರತೀಕೃಷ್ಣತೀರ್ಥ ಸ್ವಾಮಿಗಳು ನ್ಯಾಯ, ಸ್ವಾತಂತ್ರ್ಯ, ಸಮಾನತೆಗಳಂಥ ಅನೇಕಮೌಲ್ಯಗಳ ಆತ್ಯಂತಿಕಸ್ವರೂಪವನ್ನು ತಮ್ಮ Sanatana Dharma, Vedic Metaphysics ಮುಂತಾದ ಗ್ರಂಥಗಳಲ್ಲಿ ಸೊಗಸಾಗಿ ಪ್ರತಿಪಾದಿಸಿದ್ದಾರೆ. ವಿ.ಸೀ.ಅವರು ಈ ಎರಡು ವರ್ಗಗಳನ್ನು-ಅವು ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರ ಕ್ರಮದಲ್ಲಿಯೇ ಬಂದವಾಗಿದ್ದರೂ-ಸ್ವಾನುಭವದ ನೆಲೆಯಲ್ಲಿ ಸ್ವೋಪಜ್ಞವಾಗಿ ನಿರೂಪಿಸುತ್ತಾರೆ. ಮುಖ್ಯವಾಗಿ ಅವರ ನಿಲವು ಸಂದಿಗ್ಧತೆ-ಹೊಂದಾಣಿಕೆ, ಸಂಯಮ-ಸಾಮರಸ್ಯ, ಉದಾರತೆ-ವಿವೇಚನೆಗಳ ಜಾಗರೂಕತೆಯನ್ನು ನೆಮ್ಮುತ್ತದೆ. ಅಲ್ಲಿಯೇ ಋತ-ಸತ್ಯಗಳ ಪ್ರಸ್ತಾವವಿದೆಯಾದರೂ ವಿಶದವಿವೇಚನೆಯಿಲ್ಲ. ಎಷ್ಟೋ ಕಡೆ ಇದೇ ರೀತಿ ವಿವಿಧತತ್ತ್ವಗಳ, ಪರಿಕಲ್ಪನೆಗಳ ಪ್ರಸ್ತಾವಗಳೇನೋ ವಿಪುಲವಾಗಿ ಬರುತ್ತವೆ; ಆದರೆ ಲಾಕ್ಷಣಿಕ ವಿವೇಚನೆಯತ್ತ ಹೊರಡುವುದಿಲ್ಲ. ಹೀಗಾಗಿ ಈ ಅಂಶಗಳ ಸ್ವರೂಪ ಎಂಥದ್ದು, ಅದನ್ನು ವಿ.ಸೀ. ಅವರು ಗ್ರಹಿಸಿದ ಪರಿ ಯಾವುದು ಎಂಬಂಥ ಎಷ್ಟೋ ಸಂದೇಹಗಳು ಬಗೆಹರಿಯುವುದೇ ಇಲ್ಲ. ಇದೇ ರೀತಿ ಯೋಗಿಪ್ರತ್ಯಕ್ಷದಂಥ ಅತಿಲೋಕಸಂಗತಿಗಳನ್ನೂ ವಿ.ಸೀ. ಪ್ರಸ್ತಾವಿಸುತ್ತಾ ಕೆಲಮಟ್ಟಿಗೆ ಅವರದೂ ಸಂಮತಿಯುಂಟೆಂಬಂತೆ ನಿರೂಪಿಸುವುದನ್ನು ಕಂಡಾಗ ಅವರನ್ನು ಕೇವಲ ಅಜ್ಞೇಯತಾವಾದಿಯೆಂದೋ ಬರಿಯ ಮಾನವತಾವಾದಿಯೆಂದೋ ಕಟ್ಟಿಹಾಕಲಾಗದೆಂಬ ಭಾವ ಉಂಟಾಗದಿರದು. ಆದರೆ ಯೋಗಿಪ್ರತ್ಯಕ್ಷವನ್ನೂ ಸಂಮತಿಸಬಲ್ಲಂಥವರಿಗೆ ಕೇವಲಾದ್ವೈತದ ನಿರ್ವಿಶೇಷಾನುಭವದ ಅಧ್ಯಾರೋಪಾಪವಾದ ಪ್ರಕ್ರಿಯೆಯು ಅದೇಕೆ ಮನಸ್ಸಿಗೆ ಬರಲಿಲ್ಲವೋ ಎಂಬ ಬೆರಗು ನಮ್ಮನ್ನು ಕಾಡುತ್ತದೆ.

ವಿ.ಸೀ. ಅವರು ಸೌಂದರ್ಯವನ್ನೊಂದು ಮೌಲ್ಯವಾಗಿ ಚರ್ಚಿಸುವಲ್ಲಿ ತುಂಬ ಆಪ್ತರಾಗುತ್ತಾರೆ, ಉತ್ಸಾಹಿಗಳೂ ಆಗುತ್ತಾರೆ. ಇಲ್ಲಿ ಅವರಿಗೆ ಎಲ್ಲಿಲ್ಲದ ಆತ್ಮವಿಶ್ವಾಸ ಹಾಗೂ ಅನುಭವಪ್ರಾಮಾಣ್ಯಗಳು ದಕ್ಕಿದ ಭಾವ ಎದ್ದುತೋರುತ್ತದೆ. ಕವಿಹೃದಯದ ಅವರಿಗಿದು ಸಹಜವೂ ಹೌದು. ಸಂಗೀತರಸದ ಬಗೆಗಾಗಲಿ, ಚಿತ್ರ-ಶಿಲ್ಪಗಳ ಚೆಲುವನ್ನು ಕುರಿತಾಗಲಿ ಅವರು ಹಾರ್ದವಾಗಿ ವಿವರಿಸುತ್ತಾರೆ. ಆದರೆ ಸಂಗೀತವವನ್ನು ಕುರಿತು ರಸಸಿದ್ಧಾಂತದಂಥ ನಿಶ್ಚಯಾತ್ಮಕವಾದ ನೆಲೆಗೆ ಬಂದವರು ಅಮೂರ್ತಚಿತ್ರಗಳನ್ನು ಕುರಿತು ವಿವರಿಸುವಾಗ ಅನವಸ್ಥೆಯನ್ನೇ ಅನುಭವವೆಂಬಂತೆ ಅಂಗೀಕರಿಸುವುದು ಚೋದ್ಯವಾಗುತ್ತದೆ. ಇದೇ ಸಂದರ್ಭದಲ್ಲಿ ಆನುಷಂಗಿಕವಾಗಿ ಪ್ರಜಾಪ್ರಭುತ್ವದ ಬಹುಮತ-ಅಲ್ಪಮತ-ಅಭಿಪ್ರಾಯರೂಪಣಾದಿಗಳ ಬಗೆಗೆ ತುಂಬ ಮಾರ್ಮಿಕವಾದ

ನುಡಿಗಳನ್ನಾಡುತ್ತಾರೆ. ಇವೆಲ್ಲ ಇಂದಿನ ಸಂದರ್ಭದ ಹಿನ್ನೆಲೆಯಲ್ಲಂತೂ ಅತ್ಯಂತ ಮಹತ್ತ್ವದ್ದೆನಿಸುತ್ತವೆ. ಅಲ್ಲಲ್ಲಿ (ಒಂದೆಡೆ ದೀಪಕಾಲಂಕಾರವೆಂದು ಹೆಸರಿಸುವುದರಲ್ಲಿಯೋ, ಶ್ರೀನಾಥನ ಮಾತೆಂದು ಹೇಳುವಾಗಲೋ) ಹೆಚ್ಚುಕಡಮೆಗಳು ತೋರಿಯಾವು. ಆದರೆ ಇವೆಲ್ಲ ಮಾತಿನ ಓಘದಲ್ಲಿ, ಒಂದೇ ಧಾರೆಯಾಗಿ, ಅಪೂರ್ವಸಿದ್ಧಫಣಿತಿಯಲ್ಲಿ ಬಂದದ್ದೆಂಬುದನ್ನು ಮರೆಯಬಾರದು.

ನ್ಯಾಯ–ಸ್ವಾತಂತ್ರ್ಯ–ಸಮಾನತೆಗಳನ್ನು ಕುರಿತು ಹೇಳುವಾಗಲಂತೂ ಅವರ ರಾಜ್ಯಶಾಸ್ತ್ರ–ಕಾನೂನು–ಸಂವಿಧಾನಶಾಸ್ತ್ರಗಳ ಅರಿವು ನಿಚ್ಚಳವಾಗಿ ತೋರುತ್ತದೆ. ಇಲ್ಲೆಲ್ಲ ಅವರ ಆನ್ವಯಿಕವೈದುಷ್ಯ, ಲೋಕಸಂಗ್ರಹ, ವಿಶ್ವಕುತೂಹಲ, ಗಾಢಪರಿಶೀಲನಗಳಂಥ ಗುಣಗಳು ವಿಚಾರವನ್ನು ಸಮರ್ಥವಾಗಿ ಮುನ್ನಡೆಸುತ್ತವೆ. ಒಟ್ಟಿನಲ್ಲಿ ಕೇವಲ ತತ್ತ್ವಭಾಗದಲ್ಲಿ ಸಂದಿಗ್ಧವಾಗುವ ವಿ.ಸೀ. ವಾಣಿ ಲೋಕಸಾಮಾನ್ಯಸ್ತರದಲ್ಲಿ ಸೊಗಸಾದ ಸ್ವೈರವಿಹಾರ ಮಾಡುತ್ತದೆ.  ಕಡೆಗೆ ಅವರು ಮತ್ತೆ ಕೆಲವು ಮೂಲಭೂತಪ್ರಶ್ನೆಗಳನ್ನು ಪ್ರಸ್ತಾವಿಸಿ 'ಸಾಮಾನ್ಯಧರ್ಮ'ಗಳ ಜಾಗರಣದ ತುರ್ತನ್ನು ಸಾರುತ್ತಾರೆ. ಅವರ ಕಾಳಜಿ–ಕಳಕಳಿಗಳಿಲ್ಲಿ ಪ್ರಸ್ಫುಟವಾಗುತ್ತವೆ. ಅಂತ್ಯದಲ್ಲಿ King Lear ನಾಟಕದಿಂದ ಅವರು ಉಲ್ಲೇಖಿಸುವ  'Speak what we feel, not what we ought to say' ಎಂಬ ಮಾತೇ ನನ್ನನ್ನು ಈ ಬರೆಹಕ್ಕೆ ಕೈಯಿಡುವಂತೆ ಮಾಡಿದೆ.

ಒಟ್ಟಿನಲ್ಲಿ 'ಸತ್ಯ ಮತ್ತು ಮೌಲ್ಯ' ಗ್ರಂಥವು ವಿ.ಸೀ. ಅವರ ಮೌಲ್ಯಮೀಮಾಂಸಾಪ್ರೀತಿಗೂ ಪಾಶ್ಚಾತ್ತ್ಯಪ್ರಣಾಲಿಯ ತತ್ತ್ವಚಿಂತನೆಯಲ್ಲಿ ಅವರು ತಳೆದಿದ್ದ ಅಭಿನಿವೇಶಕ್ಕೂ ಒಪ್ಪವಾದ ಸಾಕ್ಷಿಯೆನ್ನಬಹುದು. ಜೊತೆಗೆ ವಿಷಯದಿಂದ ವಿಷಯಕ್ಕೆ ನೆಗೆಯುವಾಗ ಅವರು ಬಗೆಗಾಣಿಸುವ ಚಿಗರೆಯೋಟ–ಅದು ಚಿಗರೆ ನೋಟವೂ ಹೌದು! ಅಲ್ಲಿ ಚಕಿತಮುಗ್ಧಕಾತರತೆಯ ಅನ್ಯಾದೃಶ ಸೌಂದರ್ಯವಿದೆ– ಅವರ ಲಲಿತಪ್ರಬಂಧಗಳ ಶೈಲಿಯದು.

## III

'ಜ್ಞಾನ–ವಿಜ್ಞಾನ' ವಿ.ಸೀ. ಅವರ ಒಂದು ಅಪ್ರಕಟಿತ ಕೃತಿ. ಈ ಕಾರಣದಿಂದ ಇದಕ್ಕೆ ಐತಿಹಾಸಿಕವಾದ ಮಹತ್ವವೂ ಉಂಟು. ಜೊತೆಗೆ, ಮತ್ತೂ ಮಿಗಿಲಾಗಿ ಇದು ಅವರ ಆಸಕ್ತಿ–ಆಲೋಚನೆಗಳ, ವ್ಯಾಸಂಗ–ವಿಶ್ಲೇಷಣೆಗಳ ಹರಹನ್ನೂ ತೋರುವ, ಅವರ ವ್ಯಕ್ತಿತ್ವದ ವೈವಿಧ್ಯಸಂಪದವನ್ನು ಬಗೆಗಾಣಿಸುವ ವಿಶಿಷ್ಟರಚನೆಯಾಗಿಯೂ ನಿಲ್ಲುತ್ತದೆ.  ಕನ್ನಡದಲ್ಲಿ – ನಾನರಿತ ಮಟ್ಟಿಗೆ – ಇಂಥ ಕೃತಿ ಇದೊಂದೇ.

ನಾನಾಶಾಸ್ತ್ರಗಳ ಮೂಲತತ್ತ್ವಗಳ ಸಮಾಮ್ನಾಯವೆಂಬುದು ತುಂಬ ಆಸಕ್ತಿಕರವಾದ ಅಧ್ಯಯನ. ಈ ನಿಟ್ಟಿನಲ್ಲಿ ಭಾರತೀಯರ ಕೊಡುಗೆ ಬಹುಕಾಲದಿಂದ ಬೆಳೆದುಬಂದಿದೆ. ವೇದೋಪನಿಷತ್ತುಗಳಲ್ಲಿಯೇ ಆ ಕಾಲದ ಜ್ಞಾನರಾಶಿಯ



ಏಕತೆ–ಬಹುತೆಗಳ, ತತ್ತ್ವ–ಪ್ರಯೋಗಗಳ ಬಗೆಗೆ ಕುತುಕಾಸ್ಪದವಾದ ಪ್ರಸ್ತಾವಗಳಿವೆ. ಅಷ್ಟೇಕೆ, ಬ್ರಹ್ಮವಿದ್ಯೆಯೇ ಇಂಥದ್ದೊಂದು ಮಹಾಸಮನ್ವಯದ ಫಲವಲ್ಲವೇ! ಕೌಟಿಲ್ಯನ ಅರ್ಥಶಾಸ್ತ್ರದ ವಿನಯಾಧಿಕರಣದಲ್ಲಿ ಆನ್ವೀಕ್ಷಿಕೀ, ತ್ರಯೀ, ವಾರ್ತಾ ಮತ್ತು ದಂಡನೀತಿಗಳೆಂಬ ನಾಲ್ಕು ವಿದ್ಯೆಗಳ ಕಕ್ಷೆಯೊಳಗೆ ಸಕಲಜ್ಞಾನರಾಶಿಯನ್ನೂ ಅಡಕ ಮಾಡುವ ಹವಣು ಕಾಣುತ್ತದೆ. ಇದಲ್ಲದೆ ಷಡಂಗ(ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಕಲ್ಪ, ಮತ್ತು ಜ್ಯೌತಿಷ)ಯುಕ್ತವಾದ ನಾಲ್ಕು ವೇದಗಳನ್ನೂ (ಋಕ್–ಯಜುಸ್–ಸಾಮ–ಅಥರ್ವಗಳು) ಇತಿಹಾಸ, ಧರ್ಮಶಾಸ್ತ್ರ, ಮೀಮಾಂಸಾ ಮತ್ತು ನ್ಯಾಯವಿಸ್ತರಗಳೆಂಬ ಮತ್ತೆ ನಾಲ್ಕನ್ನೂ (ಇವುಗಳಲ್ಲಿ ಧರ್ಮಶಾಸ್ತ್ರವು ಕಲ್ಪಾಂತರ್ಗತವೂ ನ್ಯಾಯ–ಮೀಮಾಂಸೆಗಳು ದರ್ಶನಾಂತರ್ಗತವೂ ಆಗುವ ಕಾರಣ ಪುರಾಣ, ಇತಿಹಾಸ, ಆಗಮ ಮತ್ತು ದರ್ಶನಗಳೆಂದು ಪುನಾರೂಪಿಸಿಕೊಳ್ಳಬಹುದೆಂಬ ಅಭಿಪ್ರಾಯವೂ ಉಂಟು) ಸೇರಿಸಿ ಒಟ್ಟು ಹದಿನಾಲ್ಕು  ವಿದ್ಯಾಸ್ಥಾನಗಳೆಂದು ಹೇಳಲಾಗಿದೆ. ಈ ಹದಿನಾಲ್ಕಕ್ಕೆ ನಾಲ್ಕು ಉಪವೇದಗಳನ್ನು (ಆಯುರ್ವೇದ, ಅರ್ಥವೇದ, ಗಾಂಧರ್ವವೇದ ಮತ್ತು ಸ್ಥಾಪತ್ಯವೇದ) ಕೂಡ ಸೇರಿಸಿ ಮಧುಸೂದನ ಸರಸ್ವತಿಗಳು ತಮ್ಮ 'ಪ್ರಸ್ಥಾನಭೇದ' ಎಂಬ ಗ್ರಂಥದಲ್ಲಿ ಅಷ್ಟಾದಶವಿದ್ಯಾಸ್ಥಾನಗಳೆಂದು ನಿರೂಪಿಸಿರುವುದೂ ಉಂಟು. ವಿಷ್ಣುಧರ್ಮೋತ್ತರಪುರಾಣದಲ್ಲಿ ಶಿಲ್ಪದಿಂದ ಮೊದಲ್ಗೊಂಡು ವ್ಯಾಕರಣದವರೆಗೆ ಬರುವ ವಿದ್ಯೆಗಳು ಅವ್ಯಾಕೃತಬ್ರಹ್ಮದಿಂದ ಆರಂಭಗೊಂಡು ಮತ್ತೆ ಅನಾಹತಶಬ್ದಸ್ವರೂಪಿಯಾದ ಅದೇ ಬ್ರಹ್ಮಕ್ಕೆ ಬಂದು ಸೇರುವ ಆಸಕ್ತಿಕರವಿಸ್ತರವಾಗಿ ತೋರುತ್ತವೆ. ವಾತ್ಸ್ಯಾಯನ ಮಹರ್ಷಿಯು ಕಾಮಸೂತ್ರಗಳ 'ನಾಗರಕವೃತ್ತಾಂತ' ದಲ್ಲಿ ಹೆಸರಿಸುವ ಅರುವತ್ನಾಲ್ಕು ಕಲೆಗಳ (ಸಮವಾಯಸೂತ್ರದಲ್ಲಿ ಎಂಬತ್ತೇಳು ಕಲೆಗಳ ಪ್ರಸ್ತಾವವಿದೆ. ಲಲಿತವಿಸ್ತರದಲ್ಲಿ ಎಂಬತ್ತಾರು ಕಲೆಗಳ ವಿವರಗಳುಂಟು. ಪ್ರಬಂಧಕೋಶದಲ್ಲಿ ಎಪ್ಪತ್ತೆರಡು ಕಲೆಗಳ ಒಕ್ಕಣೆಯಿದೆ. ಶ್ರೀಧರ, ಬಾಣ, ಪಂಚಾಲ, ಯಶೋಧರ, ರಾಮಚಂದ್ರ ಮುಂತಾದವರ ಗ್ರಂಥಗಳಲ್ಲಿ ಮತ್ತೂ ಹತ್ತಾರು ಕಲೆಗಳ ವಿಭಿನ್ನರೀತಿಯ ವಿವರಗಳುಂಟು) ಬಹುರೋಚಕವಾದ ಜ್ಞಾನ–ವಿಜ್ಞಾನಸಮಾಮ್ನಾಯಗಳೇ ಆಗಿವೆ. ಹೀಗೆ ವೈದಿಕ, ಜೈನ, ಬೌದ್ಧಾದಿಸಕಲ ಪ್ರಕಾರಗಳಲ್ಲಿಯೂ ವಿದ್ಯಾಸಮುದ್ದೇಶವು ಸಾಗಿದೆ.

ಪಾಶ್ಚಾತ್ತ್ಯರಲ್ಲಿಯೂ ಇದು ಸುಪ್ರಸಿದ್ಧವೇ. ಅರಿಸ್ಟಾಟಲನಿಂದ ಮೊದಲ್ಗೊಂಡು ಟಾಲೆಮಿ, ಡ ವಿಂಚಿಗಳಂಥವರನ್ನು ಹಾಯ್ದು ಇಂದಿನ ವಿಶ್ವಕೋಶಗಳವರೆಗೆ ಇದರ ಹರಹು ಅಪಾರ, ಅನಂತ. ಇಷ್ಟು ಅಗಾಧವಾದ ವಿಷಯಸಂಪತ್ತಿಯನ್ನು ಕುರಿತು ಎಷ್ಟು ಹೇಳಿದರೂ ತೀರದು, ಯಾರು ಹೇಳಿದರೂ ಸಾಲದು. ಆದುದರಿಂದ ಇದು ಎಂದಿನಂತೆ ವಿ.ಸೀ. ಅವರ ಪ್ರಜ್ಞಾಸಾಗರದ ಹಾಸು–ಬೀಸುಗಳಿಗೇ ನಿದರ್ಶನವಲ್ಲದೆ ಆಳ–ಅಂತಗಳ ಬಗೆಗಲ್ಲ. ಇದು ಅವರ ಪ್ರಕೃತೋದ್ಯಮೋದ್ದೇಶವೂ ಅಲ್ಲ.

ಮೊತ್ತಮೊದಲಿಗೆ 'ಜ್ಞಾನ–ವಿಜ್ಞಾನ'ವೆಂಬ ಹೆಸರೇ ಆಕರ್ಷಕವಾಗಿದೆ, ಅರ್ಥಪೂರ್ಣವಾಗಿದೆ. ಭಗವದ್ಗೀತೆಯಲ್ಲಿ 'ಜ್ಞಾನವಿಜ್ಞಾನನಾಶನಂ' (III–41),

‘ಜ್ಞಾನವಿಜ್ಞಾನತೃಪ್ತಾತ್ಮಾ’ (VI-8), ‘ಜ್ಞಾನವಿಜ್ಞಾನ ಸಹಿತಂ’ (IX-1), ‘ಜ್ಞಾನಂವಿಜ್ಞಾನಮಾಸ್ತಿಕ್ಯಂ’ (XVIII-42) ಎಂಬಿವೇ ಮುಂತಾದ ಮಾತುಗಳು ಬರುತ್ತವೆ. ಇವನ್ನು ವಿವರಿಸುತ್ತಾ ಶ್ರೀ ಶಂಕರರು ತಮ್ಮ ಗೀತಾಭಾಷ್ಯದಲ್ಲಿ ಜ್ಞಾನವೆಂಬುದು ಶಾಸ್ತ್ರದಿಂದ ಉಂಟಾದ ತಿಳಿವಳಿಕೆಯೆಂದೂ ವಿಜ್ಞಾನವು ಆ ಅರಿವಿನ ಸ್ವಾನುಭವವೆಂದೂ ಹೇಳುತ್ತಾರೆ. ಹೀಗಾಗಿ ಜ್ಞಾನ ಮತ್ತು ವಿಜ್ಞಾನಗಳನ್ನು ತತ್ತ್ವ ಮತ್ತು ಅನುಷ್ಠಾನ (Theory and Practice) ಗಳೆಂದೂ ಅರಿವು ಮತ್ತು ಅನುಭವಗಳೆಂದೂ ಹೇಳಬಹುದು. ಇದಲ್ಲದೆ ‘ಅಮರಕೋಶ’ವು ‘ವಿಜ್ಞಾನಂ ಶಿಲ್ಪಶಾಸ್ತ್ರಯೋಃ’ (I-167) ಎಂದು ಒಕ್ಕಣಿಸುತ್ತದೆ. ಇದಕ್ಕೆ ಕ್ಷೀರಸ್ವಾಮಿ, ಭಾನುಜಿದೀಕ್ಷಿತ ಮುಂತಾದ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾ ವಿಜ್ಞಾನವೆಂಬುದು ಆನ್ವಯಿಕಜ್ಞಾನ-Applied Science, ಅರ್ಥಾತ್ Technology-ತಂತ್ರಜ್ಞಾನವೆಂದು ಅಭಿಪ್ರಾಯಪಡುತ್ತಾರೆ. ಇದೇನೂ ವಿರುದ್ಧವಾಗದು. ಏಕೆಂದರೆ ಅನ್ವಯ (Application) ಎಂಬಲ್ಲಿ ಸ್ವಾನುಭವ ಅಥವಾ ಸಾಕ್ಷಾತ್ಕರಣವು ಅನಿವಾರ್ಯವಾಗುತ್ತದಷ್ಟೆ!

ವಿ.ಸೀ. ಅವರು ಈ ಕೃತಿಯಲ್ಲಿ ಜ್ಞಾನ-ವಿಜ್ಞಾನಗಳ ಅಧಿಕರಣಗಳನ್ನು ಕ್ರಮವಾಗಿ ವಿಂಗಡಿಸಿ ನಿರೂಪಿಸಿರುವ ಪರಿಯೇ ತುಂಬ ಅದ್ಭುತ-ರೋಚಕಸಂವಿಧಾನವಾಗಿದೆ. ಮೊದಲಿಗೆ ಜ್ಞಾನವೆಂಬುದು ಜ್ಞೇಯರಾಶಿಯು ನಮ್ಮಲ್ಲಿ ಉಂಟುಮಾಡುವ ಪ್ರಜ್ಞೆಯೆಂದು ನಿರೂಪಿಸಿ, ಆ ಬಳಿಕ ಜ್ಞೇಯರಾಶಿಯೆಲ್ಲ ದೇಶ-ಕಾಲಗಳ ಅಧೀನವೆಂದು ಸಾಬೀತುಮಾಡುತ್ತಾರೆ. ಅನಂತರ ಅಗಾಧವೂ ಅಸೀಮವೂ ಆದ ದೇಶ-ಕಾಲಗಳ ಹರಹಿನಲ್ಲಿ ಚದುರಿರುವ ಗ್ರಹ, ನಕ್ಷತ್ರ, ನೀಹಾರಿಕೆಗಳತ್ತ ತಿರುಗಿ ಖಗೋಲಶಾಸ್ತ್ರವನ್ನೂ ಭೌತಾದಿಶಾಸ್ತ್ರಾಂತರಗಳನ್ನೂ ಪರಾಮರ್ಶಿಸುತ್ತಾರೆ. ಅನಂತರ ಜ್ಞಾನದ ಮತ್ತೊಂದು ಮುಖವಾದ ಪ್ರಮಾಣ ಮೀಮಾಂಸೆಯತ್ತ ಗಮನ ಹರಿಸಿ ಪ್ರತ್ಯಕ್ಷ-ಅನುಮಾನ-ಆಪ್ತವಾಕ್ಯಾದಿಗಳ ನಿರೂಪಣೆ ಮಾಡಿ ಅಭಿವ್ಯಕ್ತಿಯ ಎರಡು ಮುಖ್ಯಪ್ರಕಾರಗಳಾದ ಭಾಷೆ ಮತ್ತು ಗಣಿತಗಳ ಬಗೆಗೆ ಹೇಳುತ್ತಾರೆ. ಬಳಿಕ ವಿಜ್ಞಾನದ ಎರಡು ಕವಲುಗಳಲ್ಲಿ ಒಂದಾದ ಶುದ್ಧಪ್ರಕಾರದ ಅನೇಕ ಶಾಸ್ತ್ರಗಳನ್ನೂ ಮತ್ತೊಂದು ಕವಲಾದ ಆನ್ವಯಿಕ ಪ್ರಕಾರದ ಅನೇಕ ಶಿಸ್ತುಗಳನ್ನೂ ಹದವರಿತು ಪರಾಮರ್ಶಿಸುತ್ತಾರೆ. ಇವುಗಳೊಟ್ಟಿಗೆ ವಿವಿಧಕಲೆ-ಕೌಶಲಗಳ ವಿಚಾರವೂ ಬರುತ್ತದೆ. ಈ ಹವಣಿನಲ್ಲಿ ಅವರು ತೋರುವ ಅಡಕ, ಭಾಷೆಯ ಗಮಕ, ಭಾವದ ಎರಕ ದಿಟವಾಗಿ ಸಮ್ಮೋಹಕ.

ಮೂಲಭೂತವಾಗಿ ಪ್ರಪಂಚದಲ್ಲಿ ಇರುವುದೆಲ್ಲ ಪ್ರಕೃತಿ, ಮನುಷ್ಯನು ಮಾಡಿಕೊಂಡಿರುವುದೆಲ್ಲ ಸಂಸ್ಕೃತಿ (ಪು. 136), ಸೂರ್ಯ-ಚಂದ್ರರ ಬೆಳಕನ್ನು ಗಮನಿಸಿ ಕಾಲದ ಅಳತೆ ಬಂದಿತು (ಪು.140), ಆಧಾರತತ್ತ್ವಗಳನ್ನು ಕಂಡುಹಿಡಿಯುವುದು ಭೌತಶಾಸ್ತ್ರದ ಕೆಲಸ, ಅದನ್ನು ಪ್ರಯೋಗಿಸಿ ಸಂಯೋಜನೆಗಳನ್ನು ವಿಶ್ಲೇಷಣೆಗಳನ್ನು ಮಾಡುವುದು ರಸಾಯನಶಾಸ್ತ್ರದ ಕಾರ್ಯ(ಪು. 152) ಮುಂತಾದ ಎಷ್ಟೆಷ್ಟೋ ಸಾರೋಕ್ತಿಗಳಿಲ್ಲಿ ಕೋಡಿವರಿದಿವೆ. ಆ ಕಾಲಕ್ಕೆ ಅವರು ಕ್ವಾಂಟಂ ಸಿದ್ಧಾಂತದಂಥವನ್ನೂ



ಆಸಕ್ತಿಯಿಂದ ಗಮನಿಸಿದ್ದರೆಂದರೆ ಅವರ ಆಸಕ್ತಿಯ ಹರಹು ಅದೆಷ್ಟಿರಬೇಡ! ಒಂದೆಡೆ ಕಿತ್ತಲೆಹಣ್ಣಿನ ರಚನೆಯನ್ನು ಕುರಿತು ಹೇಳುವಾಗ ಸಸ್ಯಶಾಸ್ತ್ರೀಯಸಂಗತಿ ಕಾವ್ಯವೇ ಆಗುತ್ತದೆ! ವಿಜ್ಞಾನ-ತಂತ್ರಜ್ಞಾನಗಳು ಬೆಳೆದಂತೆ ಕಲೆಗಳಿಗೆ ಬಂದ ಬೆಡಗನ್ನು ಹೇಳುವಾಗ ತೋರುವ ಸೂಕ್ಷ್ಮಪರಿಶೀಲನೆಗೆ ನಮ್ಮ ಮನ ಬಾಗುತ್ತದೆ. ಇನ್ನೊಂದು ಟಿಪ್ಪಣಿಯಲ್ಲಿ ವಿ.ಸೀ. ದೇವತೆಗಳನ್ನು ಮಾನವ ಮಾಡಿದ ಮನೋಧರ್ಮವನ್ನು ಒಕ್ಕಣಿಸಿರುವುದಂತೂ ಅವರ ಮುಕ್ತಮನಸ್ಸಿಗೆ ಹಿಡಿದ ರನ್ನಗನ್ನಡಿ. ಮತ್ತೊಂದೆಡೆ Freedom ಮತ್ತು Libertyಗಳ ಅರ್ಥಸ್ವಾರಸ್ಯಗಳನ್ನು ಕಾಣಿಸುವ ಬಗೆಯೂ ಅವಿಸ್ಮಾರ್ಯ. ಅವರಿನ್ನು ಸಾಹಿತ್ಯಾದಿ ಕಲೆಗಳತ್ತ ತಿರುಗಿದಾಗಲಂತೂ ಕೇಳಬೇಕೇ? ನಮಗೆಲ್ಲ ಅದು ರಸದೌತಣ. ಅದು ಕಾಳಿದಾಸನ ಪದ್ಯವಿರಲಿ, ಪಿಕಾಸೋನ ಚಿತ್ರವಿರಲಿ, ರಾಗಗಳ ರಸವಿಚಾರವಿರಲಿ-ಎಲ್ಲ ಅಭಿರಾಮ, ಅನುಪಮ. ಒಂದು ಮಾತಿನಲ್ಲಿ ಹೇಳುವುದಾದರೆ, ವಿ.ಸೀ. ಅವರ ಜಂಗಮಪ್ರತಿಭೆಗೆ ಇಂಥ ಹರಹೇ ಬೇಕು. ಸಿ.ವಿ.ರಾಮನ್ನರ ಸ್ನೇಹವೋ, ರಾಸುಗಳ ಪ್ರದರ್ಶನವೋ, ಫಲಪುಷ್ಪಸಮ್ಮೇಳನವೋ, ಗಣಿತಸೂತ್ರಗಳ ಮನನವೋ-ಯಾವುದೇ ಇರಲಿ, ಅದು ವಿ.ಸೀ. ಅವರಿಗೆ ಬೇಕು. ಇನ್ನು ಕಲೆ, ವಾಣಿಜ್ಯ, ಕಾನೂನು, ಸಂವಿಧಾನ, ಆಚಾರ-ವಿಚಾರಗಳ ಮಾತೋ ಹೇಳಲೇಬೇಕಿಲ್ಲ. ‘ಸುಮನಾ’ ಅವರು ಹೇಳುತ್ತಿರುತ್ತಾರೆ: ‘ಇಂದಿನ ಇಂಟರ್‌ನೆಟ್ ಅನುಕೂಲಗಳಿದ್ದಲ್ಲಿ ವಿ.ಸೀ. ಅವರ ಜಿಜ್ಞಾಸೆ, ಆಸಕ್ತಿಗಳು ಮತ್ತೇನೇನನ್ನೆಲ್ಲ ಎಟುಕಿಸಿಕೊಳ್ಳುತ್ತಿದ್ದುವೋ!’ ಇದು ಬರಿಯ ಅಭಿಮಾನ-ಆರಾಧನೆಗಳ ಮಾತಲ್ಲ, ವಾಸ್ತವ. ಏಕೆಂದರೆ ವಿ.ಸೀ. ಅವರಂಥ ವಿಚಾರ-ಜೀವನ-ಕಲಾರಸಿಕರು ಅವರೊಬ್ಬರೇ. ಈ ಕೃತಿಯಲ್ಲಿ ಅವರ ವಿಶ್ವಗ್ರಾಸೀ ಕುತೂಹಲಕ್ಕೆ ತಕ್ಕ ಅವಕಾಶ ಸಂದಿದೆ; ಯುಕ್ತ ಸ್ವಾರಸ್ಯ ತುಂಬಿದೆ. ಇದನ್ನು ನಮಗೆ ದೊರಕಿಸಿಕೊಟ್ಟ ವಿ.ಸೀ. ಸಂಪದಕ್ಕೆ ನಾವೆಲ್ಲ ಸದಾ ಋಣಿಗಳು.

ಈ ಕೆಲವು ಮಾತುಗಳನ್ನು ಬರೆಯುವ ಸುಯೋಗವನ್ನಿತ್ತ ಶ್ರೀ ಎಂ. ವಿ. ವೆಂಕಟೇಶಮೂರ್ತಿಯವರಿಗೆ ನನ್ನ ಹಾರ್ದಿಕ ಧನ್ಯವಾದಗಳು. ಅಂತೆಯೇ ವಿ.ಸೀ. ಅವರ ಪಾರಿಜಾತಸದೃಶಪುಣ್ಯಸ್ಮೃತಿಗೆ ನನ್ನ ಸಬಾಷ್ಪ ಪ್ರಣಾಮಗಳು.

ಆರ್. ಗಣೇಶ್

# ಅರಿಕೆ

ವಿ.ಸೀ. ಸಮಗ್ರ ಸಾಹಿತ್ಯ ಮಾಲೆಯ ಹದಿನೈದನೆಯ ಸಂಪುಟವಾಗಿ ಇದು ಪ್ರಕಟಗೊಳ್ಳುತ್ತಿದೆ.

ಎರಡು ಕೃತಿಗಳು ಇಲ್ಲಿ ಒಟ್ಟುಗೂಡಿವೆ. ಮೊದಲನೆಯದು 'ಸತ್ಯ ಮತ್ತು ಮೌಲ್ಯ'. ಇದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಧೀಮಂತರಾದ ಡಿ.ವಿ.ಜಿ. ಯವರ ಉಪಸ್ಥಿತಿಯಲ್ಲಿ ವಿ.ಸೀ. 'Facts and Value' ಶೀರ್ಷಿಕೆಯಲ್ಲಿ ಮೊದಲು ನೀಡಿದ್ದ ಇಂಗ್ಲಿಷ್ ಉಪನ್ಯಾಸವನ್ನು (ಸಂಸ್ಥೆಯ ಮುಖವಾಣಿ 'Public Affairs' ಪತ್ರಿಕೆಯ ಎರಡು ಸಂಚಿಕೆಗಳಲ್ಲಿ ಉಪನ್ಯಾಸಪ್ರಬಂಧ ಅಚ್ಚಾಗಿದೆ) ಆಧರಿಸಿ, 1972ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಶ್ರೀ ಮಾಸ್ತಿ ರಾಮಸ್ವಾಮಿ ತಿರುಮಲಮ್ಮ ದತ್ತಿಯಲ್ಲಿ ನೀಡಿದ ಕನ್ನಡ ಉಪನ್ಯಾಸದ ವಿಸ್ತೃತ ಬರಹರೂಪ. ವಿಶ್ವವಿದ್ಯಾಲಯದಿಂದ ಅದೇ ವರ್ಷ ಪುಸ್ತಕವಾಗಿಯೂ ಇದು ಪ್ರಕಟಗೊಂಡಿದೆ. ಸತ್ಯ ಮತ್ತು ಮೌಲ್ಯ – "ಈ ಎರಡೂ ಲೋಕಜೀವನದ ಸಾಮಸ್ತ್ಯಕ್ಕೆ ವ್ಯಾಪಿಸುವ ಸಂಗತಿಗಳು. ಏನಿದೆಯೊ ಇಲ್ಲವೊ ಏನಾಗಬೇಕೆಂದು ಬಯಕೆಯೊ ಏನಾಗದಿದ್ದರೆ ನಷ್ಟವೊ ವ್ಯಥೆ ನಿರಾಸೆಯೊ ಬಯಕೆಯೊ ಇದೆಲ್ಲ ಒಂದು ಕಡೆ; ಜನ ಏನೇನನ್ನು ಬಯಸುತ್ತಾರೆ, ಯಾವುದಕ್ಕೆ ಬೆಲೆಕೊಟ್ಟು ಬದುಕುತ್ತಾರೆ ಎಂಬ ನಾಗರಿಕತೆಯ ಮತ್ತು ಸಂಸ್ಕೃತಿಯ ಸಂಗತಿಗಳು ಇನ್ನೊಂದು ಕಡೆ ನಡೆಯುತ್ತವೆ. ಆದುದರಿಂದ ಇದಕ್ಕೆ ಇತಿಯಿಲ್ಲ; ಮಿತಿಯಿಲ್ಲ" ಎಂದು ವಿ.ಸೀ. ಅವರೇ ಇಲ್ಲಿನ ವಿಷಯದ ವ್ಯಾಪ್ತಿಯನ್ನೂ ಹರಹನ್ನೂ ವಿವರಿಸಿದ್ದಾರೆ. 'ಸತ್ಯ–ಶಿವ–ಸುಂದರ' ಮತ್ತು 'ನ್ಯಾಯ–ಸ್ವಾತಂತ್ರ್ಯ–ಸಮಾನತೆ' ಎಂಬ ಎರಡು ತ್ರಿವರ್ಗಗಳನ್ನು ಆಯ್ದು, ಅಲ್ಲಿ ಸತ್ಯ–ಮೌಲ್ಯಗಳ ನೆಲಸು ಹೇಗೆ ಅನ್ವಯಗೊಳ್ಳುತ್ತದೆ ಎಂಬುದನ್ನು ಪರ್ಯಾಲೋಚಿಸುತ್ತಾರೆ.

ಎರಡನೆಯ 'ಜ್ಞಾನ–ವಿಜ್ಞಾನ' 'ಸತ್ಯ ಮತ್ತು ಮೌಲ್ಯ' ಉಪನ್ಯಾಸಪ್ರಬಂಧ ಪ್ರಕಟಗೊಂಡ ಮರುವರ್ಷ, ಎಂದರೆ 1973ರ ಜೂನ್–ಆಗಸ್ಟ್ ಮೂರು ತಿಂಗಳ ಅವಧಿಯಲ್ಲಿ ಹೇಳಿ ಬರೆಸಿದ ಕೃತಿ. ಈವರೆಗೆ ಅದು ಹಸ್ತಪ್ರತಿ ರೂಪದಲ್ಲಿಯೇ ಉಳಿದಿದ್ದು, (ಮೂರೂವರೆ ದಶಕ ತರುವಾಯ) ಈಗಷ್ಟೆ ಮೊದಲ ಬಾರಿಗೆ ಬೆಳಕು ಕಾಣುತ್ತಿದೆ. ಇಲ್ಲಿಯೂ ವಿ.ಸೀ. ಅವರು ಆ ಎರಡು ಶಬ್ದಾರ್ಥಗಳ ವ್ಯಾಪ್ತಿ–ವಿಸ್ತಾರವನ್ನು ಸೂಚಿಸಿ, ಜ್ಞಾನಭಾಗವನ್ನು ಪ್ರಕೃತಿ ವಿಜ್ಞಾನ, ಮಾನವ ವಿಜ್ಞಾನ ಎಂದು ವಿಂಗಡಿಸಿ ಅವನ್ನು ಅರಿತು, ಬಳಸಿಕೊಂಡು ಮನುಷ್ಯ ಸಮಾಜವನ್ನು ಹೇಗೆ ಕಟ್ಟಿಕೊಳ್ಳುತ್ತಾನೆ, ಕಾಲ–ದೇಶ–ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಮಾನವನ ಜೀವನವನ್ನೂ ಪಶುಪಕ್ಷಿಪ್ರಾಣಿ ವರ್ಗವನ್ನೂ ಅವು ಹೇಗೆ ಪ್ರಭಾವಿಸುತ್ತವೆ, ಮಾನವ ಸಂಸ್ಕೃತಿ–ನಾಗರಿಕತೆಗಳ ಸಾಧನೆ–ಸಂವರ್ಧನೆಗಳಿಗೆ ಅವು ಹೇಗೆ ನೆಲೆಗಟ್ಟಾಗುತ್ತವೆ ಎಂಬುದನ್ನು ವಿವೇಚಿಸಿದ್ದಾರೆ. ವಿಜ್ಞಾನದ ಭಾಗವಾಗಿ ಬರುವ ಭೌತ–ರಸಾಯನ–ಖಗೋಳ–ವಾಯುವಿಜ್ಞಾನ–ಪ್ರಾಣಿ–ಸಸ್ಯ–ಜೀವವಿಜ್ಞಾನ–ದೈವವಿಜ್ಞಾನ–ತತ್ತ್ವವಿಜ್ಞಾನ ಶಾಸ್ತ್ರಗಳೂ ಮತಧರ್ಮ–ಮನಶ್ಶಾಸ್ತ್ರ – ನೀತಿಶಾಸ್ತ್ರಗಳೂ ಸಾಹಿತ್ಯ ಮತ್ತು ಕಲೆಗಳ ಪ್ರಪಂಚವೂ ಸೇರಿದಂತೆ ಜ್ಞಾನಪ್ರಪಂಚದ ಸಮಷ್ಟಿ ಸ್ವರೂಪವು ಮಾನವವರ್ಗದ ಸುಖಕ್ಷೇಮ ನಿಯಂತ್ರಣದ ನಿರಂತರ ಸಾಧನೆಗಾಗಿ ಹೇಗೆ ದುಡಿಯುತ್ತವೆ ಎಂಬುದರ ವಿಶ್ಲೇಷಣೆಯೂ ಇದೆ. ಆಯಾ ಕೃತಿಗಳೇ ಓದುಗರ ಮುಂದಿರುವಾಗ ಅವುಗಳ ಬಗೆಗೆ ವಿಸ್ತರಿಸುವುದು ಅನಗತ್ಯ. 35 ವರ್ಷಗಳ ಬಳಿಕವೂ ಇಂದಿಗೂ ಇವು ಪ್ರಸ್ತುತವೂ ಮೌಲಿಕವೂ ಆಗಿವೆಯೆಂಬುದರಲ್ಲಿ ಸಂದೇಹವಿಲ್ಲ.

ಇದಕ್ಕೊಂದು ಪ್ರಸ್ತಾವನೆಯನ್ನು ಬರೆಸಬೇಕೆಂಬ ಸಮಸ್ಯೆ ಎದುರಾದಾಗ, ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪನವರು ಡಾ. ಆರ್. ಗಣೇಶ್ ಅವರಿಂದ ಬರೆಸಲು ಸೂಚಿಸಿದರು. ನಮ್ಮ ಮನವಿಯನ್ನು ಪುರಸ್ಕರಿಸಿ ಡಾ. ಗಣೇಶ್ ಅವರು ತಮ್ಮ ಕಾರ್ಯಬಾಹುಳ್ಯದ ನಡುವೆಯೂ ಬಿಡುವು ದೊರಕಿಸಿಕೊಂಡು ವಿಮರ್ಶಾತ್ಮಕವೂ ಮೌಲಿಕವೂ ಆದ ಪ್ರಸ್ತಾವನೆಯನ್ನು ಬರೆದುಕೊಟ್ಟು ಸಂಪುಟದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಎಷ್ಟೇ ಎಚ್ಚರಿಕೆಯಿಂದ ಕರಡನ್ನು ತಿದ್ದಿದ್ದರೂ ಕಣ್ತಪ್ಪಿನಿಂದಾಗಿ ಕೆಲವು ತಪ್ಪುಗಳು ಉಳಿದಿವೆ; ಅದಕ್ಕಾಗಿ ವಿಷಾದಿಸುತ್ತೇವೆ. ಸಂಸ್ಕೃತ ಉದ್ಧೃತಿಗಳಲ್ಲಿಯೂ ಕೆಲವು ತಪ್ಪುಗಳು ನುಸುಳಿವೆ. ಮುಖ್ಯವಾದ್ದನ್ನು ಒಪ್ಪೋಲೆಯಲ್ಲಿ ಕೊಟ್ಟಿದೆ. ಓದುಗರು ದಯವಿಟ್ಟು ಗಮನಿಸಬೇಕು.

ಇನ್ನುಳಿದುದು ಕೃತಜ್ಞತಾ ಸಮರ್ಪಣೆ: ಈ ಸಂಪುಟವನ್ನು ಹೀಗೆ ಪ್ರಕಟಿಸಲು ಅನುಮತಿಯಿತ್ತ ವಿ.ಸೀ. ಅವರ ಸುಪುತ್ರರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಎಂದಿನಂತೆ ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ನೇತ್ರಾ ಪ್ರಿಂಟರ್ಸ್‌ನ ಶ್ರೀ ಧರ್ಮಯ್ಯ – ಶ್ರೀ ರಾಜು ಬಂಧುಗಳಿಗೆ ಹಾಗೂ ಅಚ್ಚುಕೂಟದ ಎಲ್ಲ ಗೆಳೆಯರಿಗೆ ನಾವು ಆಭಾರಿಯಾಗಿದ್ದೇವೆ. ಮುಖಪುಟದ ವರ್ಣವಿನ್ಯಾಸ ಕಲಾವಿದ ಶ್ರೀ ಎಸ್. ನಾಗೇಂದ್ರ ಕುಮಾರ್ ಅವರದು. ಅವರಿಗೆ ನಮ್ಮ ವಂದನೆ ಸಲ್ಲುತ್ತದೆ.

ಸೂಕ್ತ ಮಾರ್ಗದರ್ಶನ ನೀಡಿ ನಮ್ಮನ್ನು ಮುನ್ನಡೆಸುತ್ತಿರುವ ವೇದಿಕೆಯ ಅಧ್ಯಕ್ಷರಾದ ಪ್ರೊ. ಎಂ. ಎಚ್. ಕೃಷ್ಣಯ್ಯನವರಿಗೂ ಕಾರ್ಯಕಾರಿ ಸಮಿತಿಯ ಎಲ್ಲ ಮಾನ್ಯರಿಗೂ ನಾವು ಋಣಿಯಾಗಿದ್ದೇವೆ.

ವಿ.ಸೀ. ಅವರ ಅಭಿಮಾನಿಗಳಿಗೂ ಸಹೃದಯ ಸಾಹಿತ್ಯಾಸಕ್ತರಿಗೂ ಈ ಸಂಪುಟ ಮೆಚ್ಚಿಕೆಯಾಗುವುದೆಂದು ನಂಬಿದ್ದೇವೆ.

**25–12–2008** ಎಂ. ವಿ. ವೆಂಕಟೇಶಮೂರ್ತಿ

ವಿ.ಸೀ. ಸಂಪದ, ಬೆಂಗಳೂರು–85

# ಒಪ್ಪೋಲೆ

| ಪುಟ | ಸಾಲು | ತಿದ್ದುಪಡಿ |
|---|---|---|
| 4, 63 | 4–5 | ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ |
| | 11–12 | ಬ್ರಹ್ಮೈವ ನಾಪರಃ |
| 128 | 9 | ವಿಮೃಶ್ಯೈತದಶೇಷೇಣ |
| 165 | 22 | ಲೋಕೋ ವಾ ಸ್ಯಾತ್ ಅನಿಂದ್ರಕಃ |
| 182 | 5–6 | ಕೇನೇಷಿತಂ..... ಪ್ರಾಣಃ ಪ್ರಥಮಃ |
| 183 | 11 | .....ಸ ಉ ಪ್ರಾಣಸ್ಯ ಪ್ರಾಣಃ |
| | 5 | ಛಿದ್ಯಂತೇ ಸರ್ವಸಂಶಯಾಃ |
| | 26 | ಯಾ ಮಾ ಸಾ ಮಾಯಾ |
| 184 | 10 | ಸಽಕಾಮಯತ |
| 200 | 11–12 | ಹಾಲು ಹಾಲು ಹಾಲೂ |
| 201 | 30 | .....ಪುತ್ರಪೌತ್ರಾನ್ ವೃಣೀಷ್ವ |
| | 31 | ಮಹದಾಯತನಂ ವೃಣೀಷ್ವ |
| | 32 | ವರಂ ವೃಣೀಷ್ವ ವಿತ್ತಂ ಚ ಜೀವಿಕಾಂ ಚ |
| 202 | 1–2 | ಕಾಮಾಂಶ್ಛಂದತಃ.....ಮನುಷ್ಯೈ ಅಭಿರ್ಮತ್ತಪ್ರತ್ತಾಭಿಃ |
| | 3 | ನಚಿಕೇತಾ ಮರಣಂ ಮಾನುಪ್ರಾಕ್ಷೀಃ |
| | 6 | ತರ್ಪಣೀಯೋ ಮನುಷ್ಯಃ |
| 210 | 22–23 | ತಲಚಿ ಪೊದ್ದುಂಡಗನೇ... ನಾ ಸಾಮಿಕಿ<br>ಪಯ್ಯೆದ ಮೀದ ಚೇರಿ... |

# ಸತ್ಯ ಮತ್ತು ಮೌಲ್ಯ

## ಮೊದಲ ಮಾತು

Fact and Value ಅಥವಾ Facts and Values ಎಂಬ ಹೆಸರಿನಲ್ಲಿ ನಾನು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಇಂಗ್ಲಿಷಲ್ಲಿ ಒಂದು ಭಾಷಣ ಮಾಡಿದ್ದೆ. ಡಾ॥ ಮಾಸ್ತಿ ರಾಮಸ್ವಾಮಿ ತಿರುಮಲಮ್ಮನವರ ದತ್ತಿ ಉಪನ್ಯಾಸಗಳೆಂಬ ಆಸರೆಯಲ್ಲಿ ಕನ್ನಡದಲ್ಲಿ ಎರಡು ಉಪನ್ಯಾಸಗಳನ್ನು ಮಾಡುವ ಅವಕಾಶ ಬೆಂಗಳೂರು ವಿಶ್ವವಿದ್ಯಾನಿಲಯದವರ ಕೃಪೆಯಿಂದ ದೊರೆತಾಗ, ಅದನ್ನು ವಿಸ್ತರಿಸಿ ಎಂಬಂತೆ ಕನ್ನಡದಲ್ಲಿ ಇದನ್ನು ಬರೆದೆ. ಮಾಸ್ತಿಯವರೂ ಅವರ ಹಿರಿಯರೂ ನನಗೆ ಪೂಜ್ಯರು. ಶುಚಿಯಲ್ಲಿ, ಹಿರಿಮೆಯಲ್ಲಿ, ಒಂದು ಉದಾರ ಮಾನವತೆಯಲ್ಲಿ ಅವರ ಬದುಕು ನನ್ನ ಕಣ್ಣಿಗೆ ಸೊಬಗನ್ನು ಕಾಣಿಸಿದೆ. ಅಂಥ ಆಸರೆಯಲ್ಲಿ ಈ ಮಾತುಗಳನ್ನು ಹೇಳಲು ಅನುವು ದೊರೆತುದು ನನಗೆ ದೊಡ್ಡ ಉತ್ತೇಜನ; ಪುರಸ್ಕಾರ. ಗೋಖಲೆ ಸಂಸ್ಥೆಯ ಆಶ್ರಯದ ಉಪನ್ಯಾಸವು ಸಂಪಿಗೆ ವೆಂಕಟಪತಯ್ಯನವರ ದತ್ತಿಯ ಉಪನ್ಯಾಸವಾಗಿ ನಡೆಯಿತು. ಈ ಎಲ್ಲರೂ ಸತ್ಯವಂತರು. ಯಾವುದನ್ನು ನಮ್ಮ ನಾಡು ಸತ್ಯ, ಸಂಸ್ಕಾರ ಎಂದು ಕರೆಯುತ್ತದೆಯೊ ಅದರ ಪ್ರತಿನಿಧಿಗಳಂತೆ ಬಾಳಿದವರು. ಸಂಪಿಗೆಯವರ ಸಾರ್ವಜನಿಕ ಸೇವೆ, ಸಾಹಸ ಒಂದು ರೀತಿ ದೊಡ್ಡದಾಗಿರುವಂತೆ, ಮಾಸ್ತಿ ಹಿರಿಯರ ಚಾರಿತ್ರ ನಮ್ಮ ಸಂಪ್ರದಾಯದ ತಿರುಳಂತೆ, ಕೆನೆಯಂತೆ ಇನ್ನೊಂದು ರೀತಿ ದೊಡ್ಡದು.

ಇಲ್ಲಿ Fact ಎಂಬುದಕ್ಕೆ ವಾಸ್ತವಾಂಶ ಅಥವಾ ಸತ್ಯಸಂಗತಿ ಎಂಬ ಪರ್ಯಾಯ ಪದಗಳನ್ನೂ Value ಎಂಬುದಕ್ಕೆ ಮೌಲ್ಯ ಎಂಬುದನ್ನೂ ಬಳಸಿದೆ. ಬಹುಮಟ್ಟಿಗೆ ಈ ಎರಡೂ ಲೋಕಜೀವನ ಸಾಮಸ್ತ್ಯಕ್ಕೆ ವ್ಯಾಪಿಸುವ ಸಂಗತಿಗಳು. ಏನಿದೆಯೊ ಇಲ್ಲವೊ, ಏನಾಗಬೇಕೆಂದು ಬಯಕೆಯೊ, ಏನಾಗದಿದ್ದರೆ ನಷ್ಟವೊ ವ್ಯಥೆ ನಿರಾಸೆಯೊ ಇದೆಲ್ಲ ಒಂದು ಕಡೆ; ಜನ ಏನೇನನ್ನು ಬಯಸುತ್ತಾರೆ, ಯಾವುದಕ್ಕೆ ಬೆಲೆಕೊಟ್ಟು ಬದುಕುತ್ತಾರೆ ಎಂಬ ನಾಗರಿಕತೆಯ ಮತ್ತು ಸಂಸ್ಕೃತಿಯ ಸಂಗತಿಗಳು ಇನ್ನೊಂದು ಕಡೆ ನುಡಿಯುತ್ತವೆ. ಆದುದರಿಂದ ಇದಕ್ಕೆ ಇತಿಯಿಲ್ಲ; ಮಿತಿಯಿಲ್ಲ.

ಆಚಾರ್ಯರು ಪ್ರಾತಿಭಾಸಿಕ, ವ್ಯಾವಹಾರಿಕ, ಪಾರಮಾರ್ಥಿಕ ಎಂದು ಮೂರು ಬಗೆಯಲ್ಲಿ ಸತ್ಯವನ್ನು ವಿಭಜಿಸಿ ಒಂದರಿಂದ ಒಂದಕ್ಕೆ ಬೆಲೆ ನಿರ್ಣಯಿಸಹೋಗುವುದು ವಿವರ್ತವಾಗುವುದೆಂದರು. ಕನಸಿನ ಸತ್ಯ ಎಚ್ಚರಗೊಂಡಾಗ ಅಸತ್ ; ಪರಮಾರ್ಥದ ನೆಲಸಲ್ಲಿ ವ್ಯವಹಾರ ಪ್ರಪಂಚವೂ ಹಾಗೇ ಎಂದಿದ್ದಾರೆ. ಈ ಉಪನ್ಯಾಸಗಳಲ್ಲಿ ಅಧ್ಯಾತ್ಮ ಅಥವಾ ದರ್ಶನ ದೃಷ್ಟಿಯಿಂದ ವಿಷಯವನ್ನು ಪರಿಶೀಲಿಸುವುದಿಲ್ಲ ; ಆ ಬಗೆಗೆ ಇತರ ನಿಶ್ಚಯಗಳು ನನ್ನವಲ್ಲವಾಗಿ. ಅದು ಬಹು ದೊಡ್ಡ ಪ್ರಪಂಚ. ಅಲ್ಲಿ ಆಲೋಚನೆ ಮಾಡಿದಂತೆಲ್ಲ ಭ್ರಾಂತಿ, ವಿಶ್ವಾಸ ಬೆಳೆಯಬಲ್ಲವು. ಅವರವರಿಗೆ ಅವರವರ ತೀರ್ಮಾನ

ಸಿದ್ಧಾಂತ ; ಇನ್ನೊಂದರ್ಥದಲ್ಲಿ ರಾದ್ಧಾಂತ ಕೂಡ. ಧರ್ಮ, ನೀತಿಶಾಸ್ತ್ರ, ಮತತತ್ವ ಮುಂತಾದವು ಮನುಷ್ಯನು ಕಲ್ಪಿಸಿಕೊಂಡಿರುವ ಜ್ಞಾನಭಾಗ ; ಆತನ ವಿಶ್ವಾಸ ನೆಲೆ, ವಾದ ಯುಕ್ತಿಗಳ ಹಂದರ. ಅಲ್ಲಿ ಹಲವು ನಿಲವುಗಳು ಸಹಜ ; ಪರಸ್ಪರ ವಿರುದ್ಧವಾದವುಗಳನ್ನು ಸಾಧಿಸಬಹುದಾದವು. ಇಂತಹ ಸತ್ಯದ ಕಾಣ್ಕೆ ನನಗೆ ಮೀರಿದ್ದು. 'ಬ್ರಹ್ಮೈಕ ಸತ್ಯಂ; ಜಗನ್ ಮಿಥ್ಯಾ ; ಆತ್ಮಾ ಬ್ರಹ್ಮೈವ ನಾಽಪರಃ' ಇತ್ಯಾದಿಗಳನ್ನು ಈ ನಾಡು ಪೂಜ್ಯವಾಗೆಣಿಸಿದೆ. ಅವುಗಳ ಗೊಡವೆ ನನಗೆ ಈಗ ಬೇಡ. ಅದು ನಂದನವನ; ಅಲ್ಲಿ ಸಂಚರಿಸಲು ನನಗೆ ಅಧಿಕಾರವಿಲ್ಲ. ನಾನು ಇಲ್ಲಿ ವಿವೇಚಿಸಬಯಸುವುದು ಸ್ಥೂಲ ವಿಶ್ಲೇಷಣೆ - ಲೌಕಿಕ ದೃಷ್ಟಿಯಿಂದ. ಪಾರಮಾರ್ಥಿಕ ಬೇರೆ ಸಮಯಕ್ಕೆ ಬೇರೆ ಕೈವಾಡಗಳಿಗೆ ಕಾಯಬೇಕು. ಅಲ್ಲದೆಯೋ: ಅಧ್ಯಾತ್ಮ ನಮ್ಮ ದೇಶಕ್ಕೆ ಒಂದು ಅಫೀಮಾಗಿಬಿಟ್ಟಿದೆಯೆನ್ನಿಸಿದೆ ನನಗೆ. ಇದು ಹಬ್ಬಿಸಿರುವ ಅಹಂಕಾರ, ಭ್ರಾಂತಿಗಳು ನಮ್ಮ ಬದುಕನ್ನು ಅಲಕ್ಷಿಸಿವೆ. ಜನತೆಯಾಗಿ ನಮಗೆ ಬಲ ತಂದಿಲ್ಲವೆನ್ನಿಸಿದೆ.

ದಿನಜೀವನದಲ್ಲಿ ಹಲವು ಕೂಗುಗಳಿವೆ ; ಮಾತುಗಳ ಬಳಕೆಯಿದೆ ; ಅವುಗಳಲ್ಲಿನ ಹುರುಳನ್ನು ಕಾಣಬೇಕೆಂದೂ ಕಾಣಿಸಬೇಕೆಂದೂ ಮಾತ್ರ ನನ್ನ ಪ್ರಯತ್ನ. ಎಷ್ಟು ಟೊಳ್ಳು, ಅಸತ್ಯ, ಮೋಹ ಇಂಥಲ್ಲಿ ಇವೆ ಎಂಬುದನ್ನು ಕಂಡು, ನಮ್ಮ ವ್ಯಕ್ತಿ ಜೀವನವನ್ನೂ ಸಾಮಾಜಿಕ ರಾಜಕೀಯ ನೈತಿಕ ಜೀವನವನ್ನೂ ತಿಳಿಮಾಡಿಕೊಂಡರೆ ಅಷ್ಟಷ್ಟು ನಮ್ಮ ಕಾಲದ ಬದುಕು ಶುಚಿಯೂ ಶಕ್ತವೂ ಆಗಬಲ್ಲದು.

ವಾಕ್ಯಗಳನ್ನು ವೇದೋಪನಿಷತ್ತುಗಳಿಂದ, ಸ್ಮೃತಿಗಳಿಂದ, ಗೀತೆಯಿಂದ ಪಟಾಕಿಯ ಸರದಂತೆ ಹಚ್ಚಿ ಹಾರಿಸಿಬಿಡಬಹುದು. ಆ ಒಂದೊಂದನ್ನೂ ಇಂದು ಪುನಃ ಸರಿಯಾಗಿ ಅರ್ಥಮಾಡಿಕೊಂಡು, ಅವುಗಳಲ್ಲಿ ಯಾವುದಕ್ಕೆ ಖಚಿತವಾಗಿ ಏನರ್ಥ, ಅದರ ಮಿತಿ, ವ್ಯಾಪ್ತಿ ಯಾವುದು? ಅಂಥದೊಂದನ್ನು ಒಪ್ಪಿದರೆ ಇನ್ನಾವುದನ್ನೆಲ್ಲ ಒಪ್ಪಬೇಕಾಗುತ್ತದೆ, ಯಾವುದನ್ನು ಬಿಡಬೇಕಾಗುತ್ತದೆ? ಎಂಬ ಸಂಗತಿಗಳನ್ನು ಕುರಿತು ನಮ್ಮ ಕಾಲದವರು ಪುನಃ ಆಲೋಚಿಸಬೇಕಾಗಿದೆ. ಸಣ್ಣ ಸಂಗತಿಗಳಿಗೆ ಅತಿ ಪ್ರೀತಿ ತೋರಿಸಿ ದೊಡ್ಡ ಸಮಸ್ಯೆಗಳನ್ನು ಭಾಗ್ಯವೆನ್ನುವ ವೃತ್ತಿ ರೀತಿಗಳಿಗೆ ನಾವು ಸೋತಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಯತ್ನಿಸುತ್ತಿದ್ದೇನೆ. ದೇವರು, ಮುಕ್ತಿ, ಆತ್ಮ, ಪರಮಾರ್ಥ ಎಂಬ ಪದಗಳ ಪರ್ಯಾಪ್ತಿಯನ್ನೂ ಈ ಕಾಲದ ರೀತ್ಯಾ ಪರಿಶೀಲಿಸಬೇಕು ಎಂಬುದು ನನ್ನ ವಿನಮ್ರ ಸೂಚನೆ. ನಿತ್ಯ, ಪರ ಎಂಬವಕ್ಕೇ ಅತಿಯಾಗಿ ಗಮನಕೊಟ್ಟು ಚಲಿಸುವ ಕಾಲದ, ಇಹದ ಪರ್ಯಾಲೋಚನೆಗೆ ಗಮನವನ್ನು ಹರಿಸದೆ ಬಿಟ್ಟಿದ್ದೇವೆ. ಯಾವುದನ್ನು ಇತರರು Here, Now ಎನ್ನುತ್ತಾರೆಯೊ ಆ ಕಡೆ ಆಲೋಚನೆ ಇಲ್ಲದೆ ಹೋಗಿ,

ಕಾಲ್ಬೆರಳ್ಗಳ ತೂರಿ ಜಗ ಜಗುಳ್ದು ಪೋಗುತಿದೆ
ಕೈವೆರಳ್ಗೆಟುಕಿಸದು ಮೇಲಿನಾಗಸವು



ಎಂದು ನಾನೇ ಹುಡುಗತನದಲ್ಲಿ ಬರೆದುದುಂಟು. ಆ ಅಭಿಪ್ರಾಯ ಇನ್ನೂ ಬದಲಾಗಿಲ್ಲದ್ದು ನನ್ನ ದುರ್ದೈವ.

ಸದ್ಯಃ ವ್ಯವಹಾರ ಪ್ರಪಂಚದಲ್ಲಿ, ಎಂದರೆ, ದಿನಜೀವನದಲ್ಲಿ, ನಾವು ಏನನ್ನು ಸತ್ಯವೆಂದು (ಸತ್ - 1. ಇರತಕ್ಕದ್ದು; 2. ಅದರ ವಿಷಯವಾಗಿ ನಿಜವೆಂದು) ನಂಬಿ ನಡೆಯುತ್ತೇವೊ ಅದಕ್ಕಾಗಿ ಶ್ರಮಿಸುತ್ತೇವೆ. ಅಲ್ಲಿನ ಪ್ರಪಂಚ ಎಷ್ಟು ವಿಸ್ತಾರವುಳ್ಳದ್ದು, ವಿವಿಧ, ಸೂಕ್ಷ್ಮ ಎಂಬುದನ್ನೂ ಅವುಗಳ ನೆಲಸನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ ಅಥವಾ ಆ ಬಗೆಗೆ ತಕ್ಕ ಗಡಿಗಳನ್ನು ನಿರ್ಮಿಸಿಕೊಳ್ಳದಿದ್ದರೆ ಯಾವ ಲೋಪದೋಷ ಉಂಟಾಗಬಲ್ಲುದೆಂಬುದನ್ನೂ ವಿವರಿಸಲು ಯತ್ನಿಸಿದ್ದೇನೆ. ಪುರುಷಾರ್ಥಗಳು ಯಾವುವು, ಅವಕ್ಕೆ ಸಾಧನಗಳಾವುವು ಎಂಬ ಸಂಬಂಧದ ಪ್ರಪಂಚ ಮೌಲ್ಯಗಳದು. ಈ ಎರಡಕ್ಕೂ ಅತಿ ಸಣ್ಣ ಸಾಮಾನ್ಯ ಸಂಗತಿಗಳಿಂದ ಹಿಡಿದು ವೇದಾಂತದ ಪರಮಾರ್ಥದ ಗಮ್ಯದವರೆಗೂ ವ್ಯಾಪ್ತಿಯಿದೆ. ನನ್ನ ತಿಳಿವಳಿಕೆಗೆ ಮೀರಿದ ಅಧ್ಯಾತ್ಮದ ಅಥವಾ ತತ್ವದರ್ಶನಗಳ ಪ್ರಪಂಚಕ್ಕೆ ಕಾಲಿಡಲಾರೆನೆಂದಿದ್ದೇನೆ. ಇವೊತ್ತು ವ್ಯಕ್ತಿಗಳಾಗಿ ನಾವು, ನಮ್ಮ ಸಮಾಜ, ನಮ್ಮ ಆರ್ಥಿಕ-ರಾಜಕೀಯ ಪ್ರಪಂಚ, ವ್ಯವಹಾರ, ಚಲನವಲನ ಇವಕ್ಕೆ ಮಾತ್ರ ಮಿತಗೊಂಡದ್ದನ್ನು ಇಲ್ಲಿ ಸ್ಥೂಲವಾಗಿ ವಿವೇಚನೆಮಾಡಲು ಯತ್ನಿಸಿದ್ದೇನೆ.

ನಮ್ಮಲ್ಲಿ ಈಚಿನವರೆಗೂ ಭಾರತೀಯವೆನ್ನಬಹುದಾದ ಒಂದು ರೀತಿಯ ನೋಟ, ನಡತೆ, ಮಾತು, ಪಕ್ಷಪಾತ ಬೆಳೆದು ಬಂದಿತ್ತು. ಈ 40-50 ವರ್ಷಗಳಲ್ಲಿ - ಅಲ್ಲಿಯೂ ವಿಶೇಷವಾಗಿ ಎರಡನೆ ಮಹಾಯುದ್ಧ ಮುಗಿದಂದಿನಿಂದ ಈಚೆಗೆ ಮತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಕಾಲದಿಂದ - ನಮ್ಮ ಪರಿಸ್ಥಿತಿಗೆ ವಿದೇಶಗಳ ಸಂಪರ್ಕ ಒಂದು ಹೊಸ ಸಂಘಟನೆಯನ್ನು (ಕೆಲವೆಡೆ ಘರ್ಷಣೆಯನ್ನು) ತಂದಿದೆ. ಎಂದರೆ ವಿಸ್ತಾರವಾದ ಹೊರ ಪ್ರಪಂಚದ ಪ್ರಭಾವಗಳು ನಮ್ಮ ಮನಸ್ಸಿನ ಮೇಲೆ, ರೀತಿನೀತಿಗಳ ಮೇಲೆ ದೊಡ್ಡದಾಗಿ ಕಾರ್ಯಮಾಡತೊಡಗಿದೆ. ಈ ಸ್ಥಿತಿಯಲ್ಲಿ ಸತ್ಯವೆಂಬುದಕ್ಕೂ ಮೌಲ್ಯವೆಂಬುದಕ್ಕೂ ಇನ್ನೊಂದು ಭುಜದ ವಿಸ್ತರಣೆ ಬಂದು ಸಂದೇಹಗಳು, ಸಂಕಟಗಳು, ಆಶೋತ್ತರಗಳು ಬೆಳೆಯುತ್ತಿವೆ. ವಸ್ತುಪ್ರಪಂಚದಲ್ಲಿಯೂ ಮನೋವ್ಯಾಪಾರಗಳಲ್ಲಿಯೂ ಕಲೆ ಶಾಸ್ತ್ರಗಳಲ್ಲಿಯೂ ಎಲ್ಲ ಕಡೆಯೂ ಒಂದು ಕದಡನ್ನು, ಕಲಸನ್ನು ಇಂದು ಕಾಣಬಹುದು. ಈ ತುಮುಲದಲ್ಲಿ ಯಾವುದು ಸರಿ, ಯಾವುದಲ್ಲ? ಎಂಬ ಬಗೆಗೆ ನಾವು ಹೊಸತಾಗಿ ಆಲೋಚಿಸಬೇಕಾಗಿದೆ. ಒಂದು ತಾರತಮ್ಯ ವಿವೇಕ ಅಗತ್ಯವಾಗಿ ಅದನ್ನು ರೂಪಿಸಬೇಕಾಗಿದೆ. ಹಾಗೆ ಮಾಡಿಕೊಳ್ಳದಾದರೆ ಭಾರತದಲ್ಲಿ ಆಧುನಿಕ ಜೀವನ ಅಸತ್ ಆಗುತ್ತದೆ. ಇಲ್ಲಿನ ಭ್ರಮೆಗಳು ಯಾವುವು, ಪೂರ್ವಗ್ರಹಗಳಾವುವು, ತೋರಿಕೆ ಯಾವುದು, ದಿಟವಾವುದು ಎಂಬುದರ ಪರೀಕ್ಷೆ ಆಲೋಚನಾಪರರಾದವರಿಗೆಲ್ಲರಿಗೂ ಅನಿವಾರ್ಯ ಎಂದು ಈ ವಿಷಯವನ್ನು ಒಂದು ಪ್ರಾಥಮಿಕ ರೀತಿಯಲ್ಲಿ ಎಂಬಂತೆ ಪ್ರತಿಪಾದಿಸಲು ಬಯಸಿದ್ದೇನೆ.

ಈ ಬಗೆಗೆ ಶಬ್ದಾರ್ಥಗಳ ಸ್ವರೂಪವನ್ನು ಎಷ್ಟು ವಿಶದಪಡಿಸಲು ಶಕ್ಯವೊ ಅಷ್ಟನ್ನು ಮಾಡಲು ಆಗಿಲ್ಲ. ಪರಸ್ಪರವಾಗಿ ಅವುಗಳ ಗುಣ, ಕ್ರಿಯಾವಿಲಾಸಗಳ ಗೋಜಿಗೆ ಆಳವಾಗಿ ಹೋಗಲಾಗಿಲ್ಲ. ಅದು ನಾಳೆಗೆ ಮತ್ತು ಇತರರ ಪಾಲಿಗೆ ಬರುವ ಸಂಗತಿಗಳು.

ಎರಡು ಪ್ರಕರಣಗಳಲ್ಲಿ ಮೂರು ಮೂರು ಮಾತಿನ ಗುಂಪನ್ನು ವಿಷಯಮಾಡಿಕೊಂಡು ಸತ್ಯ-ಶಿವ-ಸುಂದರ ಎಂಬ ಒಂದು ಭಾಗದಲ್ಲಿ, ನ್ಯಾಯ-ಸ್ವಾತಂತ್ರ್ಯ-ಸಮಾನತೆ ಎಂಬ ವರ್ಗದಲ್ಲಿ ಅನ್ವಯಿಸಿ-ಅಲ್ಲಿ ಸತ್ಯ ಮೌಲ್ಯ ಸುಮಾರು ಹೇಗೆ ನೆಲಸುಳ್ಳವಾಗುತ್ತವೆ, ಸಂಬಂಧಗಳೇನು, ವಿರೋಧಗಳೇನು ಎಂಬುದನ್ನು ಕಾಣಿಸಲು ಯತ್ನ ನಡೆದಿದೆ. ಇಂಥವು ಇನ್ನೂ ಎಷ್ಟನ್ನೊ ವಿಷಯಗಳನ್ನಾಗಿ ಮಾಡಿಕೊಂಡು ಇದನ್ನು ಪರ್ಯಾಲೋಚಿಸಬಹುದು... ನನ್ನ ಪ್ರಯತ್ನದ ಗುಣ, ಯೋಗ್ಯತೆ ಏನೊ, ಹೇಗೊ. ಬರವಣಿಗೆಯ ತಿಳಿ, ಖಚಿತತೆ, ಅರ್ಥವಂತಿಕೆ ಎಂಥವೊ. ಸಾಧ್ಯವಾದ ಮಟ್ಟಿಗೆ ಸುಲಭವಾಗಿ ಸರಳವಾಗಿ ಹೇಳಲು ಪ್ರಯತ್ನಿಸಿದ್ದೇನೆ. ಅದೇ ಕಷ್ಟ. ಒಟ್ಟು ದೃಷ್ಟಿ ಆಕಾಂಕ್ಷೆ ಇಂಥುದೆಂಬುದನ್ನು ತಿಳಿಸಿದರೆ ಮಾತು, ಅರ್ಥ ಇನ್ನಷ್ಟು ಸ್ಪಷ್ಟಗೊಳ್ಳಬಹುದೇನೋ ಎಂದು ಭಾವಿಸಿ ಈ ಪೀಠಿಕೆ ಹಾಕಿದ್ದು. ನನ್ನ ಮಾತಿನ ಮತ್ತು ಬರವಣಿಗೆಯ ರೀತಿ ಸುಲಭವಲ್ಲವೆಂದು ಅನೇಕರು ಹೇಳಿದ್ದಾರೆ. ಅದು ನನ್ನ ಬದುಕಿನ ಪ್ರಾರಬ್ಧ. ಆದರೆ ಪ್ರಯತ್ನವನ್ನು ನಾನು ಬಲ್ಲಂತೆ ಮಾಡಿದ್ದೇನೆ.

ಎರಡೂ ದಿನವೂ ನೆರೆದಿದ್ದ ಸಭೆಗಳ ಮುಂದೆ ನಿಂತು ಸಮಯಕ್ಕೆ ತೋರಿದಂತೆ ಮಾತನಾಡಿದೆ. ಸಭೆಯಲ್ಲಿ ಅಧ್ಯಕ್ಷರಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಸನ್ಮಾನ್ಯ ಉಪಕುಲಪತಿಗಳಾದ ನ್ಯಾಯಮೂರ್ತಿ ಟಿ.ಕೆ. ತುಕೋಳ್ ಅವರೂ ಹಿರಿಯರಾದ ಮಾಸ್ತಿಯವರೂ ವೇದಿಕೆಯ ಮೇಲೆ ಮಂಡಿಸಿದ್ದರು. ಹಲವಾರು ಮಂದಿ ಗಣ್ಯರೂ ಮಾನ್ಯ ಮಿತ್ರರೂ ಎದುರಿಗೆ ಕುಳಿತಿದ್ದರು. ಅವರ ಮುಖಗಳನ್ನು ನೋಡಿಕೊಂಡು ಅವರನ್ನು ಬೇಸರ ಪಡಿಸಬಾರದೆಂಬಂತೆ ಒಂದೊಂದು ಗಂಟೆ ಮಾತನಾಡಿದೆ. ಇಲ್ಲಿ ಅಚ್ಚಾಗಿರುವುದನ್ನು ಓದಲಿಲ್ಲ. ಬಹುಶಃ ಈ ವ್ಯಾಪ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಎರಡೂ ದಿನ ಮಾತನಾಡಿದೆ. ಈ ಶೈಲಿಯೂ ಅರ್ಧ ಭಾಷಣದ ಶೈಲಿಯೇ. ಇದಕ್ಕೇ ಓದಬೇಕಾಗಿ ಬರುತ್ತದೆಯೇನೊ ಎಂದುಕೊಂಡು ಬರೆದುದು. ಈ ಬರವಣಿಗೆಯನ್ನು ಒಪ್ಪಿ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಕಾರ್ಯಕರ್ತರೂ ನಿರ್ದೇಶಕರೂ ಆದ ಶ್ರೀ ಕೆ. ಸಿ. ಶಿವಪ್ಪನವರು ಮೊದಲಿಂದ ನನ್ನಲ್ಲಿ ವಿಶ್ವಾಸವಿಟ್ಟು ಈ ಕಾರ್ಯವನ್ನು ನನಗೊಪ್ಪಿಸಿ, ಭಾಷಣದ ಸಂಬಂಧದಲ್ಲಿಯೂ ಅಚ್ಚುಮಾಡಿಸುವ ಸಂಬಂಧದಲ್ಲಿಯೂ ಅತಿಶಯ ವಿಶ್ವಾಸ ತೋರಿಸಿದ್ದಾರೆ. ಇದನ್ನು ಚೆನ್ನಾಗಿ ಅಚ್ಚುಮಾಡಿ ಪ್ರಕಟಿಸಬೇಕೆಂದು ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆ. ಬರವಣಿಗೆಯ ದೋಷಗಳನ್ನೂ ಅಚ್ಚಿನ ದೋಷಗಳನ್ನೂ ಪದಗಳ ಅಕ್ಷರ ಸಂಯೋಜನೆ, ವಿರಾಮ ಚಿಹ್ನೆಗಳ ಗೊಂದಲ ಮುಂತಾದವನ್ನೂ ಓದುಗರು ಮನ್ನಿಸಿ ದಯಮಾಡಿ ಇದನ್ನು



ಓದಬೇಕು. ಈ ಸಂಬಂಧದಲ್ಲಿ ನೆರವಾದ, ಪ್ರೋತ್ಸಾಹ ಕೊಟ್ಟ ಎಲ್ಲರಿಗೂ ನನ್ನ ವಂದನೆಗಳು.

ಶ್ರೀ ಮಾಸ್ತಿಯವರು ಈಗ ಸುಮಾರು 50 ವರ್ಷಗಳಿಂದ ನನ್ನನ್ನು ಬಲ್ಲರು. ಪ್ರೀತಿಯಿಂದ ವಿಶ್ವಾಸದಿಂದ ನನ್ನನ್ನು ಈವರೆಗೂ ನಡಸಿಕೊಟ್ಟು ನನ್ನ ಅನೇಕ ಸಂತೋಷಗಳಿಗೂ ಭಾಗ್ಯಗಳಿಗೂ ಕಾರಣರಾಗಿದ್ದಾರೆ. ಈ ಉಪನ್ಯಾಸಗಳನ್ನು ನನಗೆ ಒಪ್ಪಿಸುವುದಕ್ಕೆ ಅವರ ಅನುಮೋದನೆ ಇತ್ತು. ಇದರಲ್ಲಿ ಏನಾದರೂ ಗುಣ ಬೆಲೆ ಅವರಿಗೆ ಕಾಣುವಂತಾದರೆ ನಾನು ತೃಪ್ತ.

**ವಿ. ಸೀತಾರಾಮಯ್ಯ**

# ಶಬ್ದಗಳ ಅರ್ಥವ್ಯಾಪ್ತಿ

## ಸತ್ಯ ಮತ್ತು ಮೌಲ್ಯ

ಸತ್ಯ ಮತ್ತು ಮೌಲ್ಯ: ಈ ಎರಡು ಮಾತುಗಳು ನನ್ನ ಈ ಎರಡು ದಿನಗಳ ಉಪನ್ಯಾಸಕ್ಕೆ ಆಧಾರ. ಸತ್ಯ, ವಾಸ್ತವಾಂಶ ಅಥವಾ ಸಂಗತಿ-ಒಂದು; ಮೌಲ್ಯ ಅಥವಾ ಬೆಲೆ ಇನ್ನೊಂದು; ಇಂಗ್ಲಿಷಲ್ಲಿ 'Fact' ಮತ್ತು 'Value' ಎಂಬವಕ್ಕೆ ಸಮಾನವಾಚಕಗಳು. 'ಮೌಲ್ಯ' ಎಂಬುದು ಹಾಗೂ ಹೀಗೂ ತನ್ನ ಸ್ವರೂಪವನ್ನು ನಿರ್ದೇಶಿಸುತ್ತದೆ. ಯಾವುದಾದರೂ ಬೆಲೆ, ಯಾರದೊ ಎಷ್ಟೊ, ಏಕೊ-ಎಂಬುದು ಮೌಲ್ಯದ ನಿರ್ದೇಶನ. ಅದರ ನಿರ್ಣಯ ಹೇಗಾಗುತ್ತದೆ? ದರ್ಶನಗಳಲ್ಲಿ ಕೂಡ ಯಾವುದರ ಮೌಲ್ಯ ಎಷ್ಟು, ದೇಶ ವಿದೇಶಗಳಲ್ಲಿ ಯಾವ ವಿಚಾರ ಆ ಬಗೆಗೆ ನಡೆದಿದೆಯೊ ಎಂಬುದೆಲ್ಲ ಸೇರಿದೆ. ಅರ್ಥಶಾಸ್ತ್ರದ ಮೌಲ್ಯವೇ ಅಲ್ಲ; ಜೀವನದ-ಪುರುಷಾರ್ಥಗಳ ಸಂಬಂಧದ್ದು. ಯಥಾರ್ಥ, ವಾಸ್ತವಾಂಶ ಅಥವಾ ಸತ್ಯಸಂಗತಿ (Fact) ಎಂಬ ಮಾತಿನಲ್ಲಿ-ಜಗತ್ತಿನಲ್ಲಿ-ಬೇರೆ ಬೇರೆ ಅರ್ಥದ ಅಂಶಗಳು ಕಲಸಿಕೊಳ್ಳುತ್ತವೆ. ಯಾವ ಯಾವುದು ಇದೆಯೊ, ಹಾಗೆಂದು ಜನ ನಂಬುವರೊ-ಸ್ವಂತ ಅನುಭವದಿಂದ ದೊರೆತುದು, ಬೇರೆಯವರಿಗೆ ತಿಳಿದು ನಮ್ಮ ಕಿವಿಗೆ ಬಿದ್ದುದು ಎರಡೂ-ಅದೆಲ್ಲಕ್ಕೂ ವ್ಯಾಪಿಸಿರುವ ಅರ್ಥದ ಮಾತು;-ಎಲ್ಲ ಇರವು. ಅಸತ್ ಎಂದರೆ ಯಾವುದಿಲ್ಲ ಎಂಬುದೂ ಸತ್ಯವೇ... ಸತ್ಯ ಎಂಬ ಮಾತನ್ನು ಆಯತಪ್ಪಿ ಬಳಸಿದರೆ ಅರ್ಥ ಹೊರಳುತ್ತದೆ. 'ನಾನು ಸತ್ಯ ನುಡಿಯುತ್ತಿದ್ದೇನೆ',-'ಸತ್ಯವೇ ದೇವರು' ಮುಂತಾದ ಮಾತುಗಳನ್ನು ಆಡುವಾಗ ಅರ್ಥದ ನೆಲಸು ಬೇರೆ ಯಾವುದನ್ನೊ ಕುರಿತು ನುಡಿಯುತ್ತದೆ. ಇದು ಇದರ ವಿಷಯದಲ್ಲಿ ನಿಜ (ಇನ್ನೊಂದು ಕ್ಲೇಶ ಕೊಡುವ ಮಾತು)-ಎಂದು ನುಡಿಯುವಾಗ ಇರವಿನ ಅಥವಾ ಸ್ಥಿತಿಯ ಒಂದು ಲಕ್ಷಣವನ್ನು ಕುರಿತು ಇಂಥ ಲಕ್ಷಣ, ಗುಣ ಇಲ್ಲಿ ಸಲ್ಲುತ್ತದೆ ಎಂದು ಹೇಳಿದಂತೆ ಆಗುತ್ತದೆ. ಆ ಸಮಯಕ್ಕೆ ಅದು ಸರಿ ಎಂದು ನಂಬಿ; ಅಥವಾ, ಕಪಟದಲ್ಲಿ. ಒಂದು ಇರವಿನ ಭಾಗ; ಇನ್ನೊಂದು ಆ ಸಂಬಂಧದಲ್ಲಿ ಬುದ್ಧಿಗೆ ಗೋಚರವಾದ ಅಂಶವನ್ನು ಹೇಳುವ ಅರ್ಥವ್ಯಾಪಾರ, ಗುಣನಿರ್ದೇಶನ. ಸತ್ಯವನ್ನು ಕಂಡು ಹಿಡಿಯುವುದು, ನುಡಿಯುವುದು ಸರ್ವರ ಪ್ರಯತ್ನವಾಗಬೇಕು. ಶಕ್ಯವೊ ಸರಿಯೊ ಎಂಬ ಪ್ರಪಂಚ ಬೇರೆ.

## ಸಂದಿಗ್ಧತೆ

ಇವರಲ್ಲಿ, ಇಲ್ಲಿ ಯಾವುದು ಸತ್ಯ ಎಂದಾಗಲೂ ಸಂದಿಗ್ಧತೆ ಉಳಿದೇ ಇರಬಲ್ಲದು. ಕೆಲವೇಳೆ ಕೋರ್ಟುಗಳಲ್ಲಿ ಯಾವುದರದೊ ಸತ್ಯ ನಿರ್ಣಯವಾಗಬೇಕಾಗುತ್ತದೆ. ಕೋರ್ಟಿನವರು ಒಪ್ಪುವ ಇನ್ನಾವಾವುವೊ ಪ್ರಮಾಣಗಳಿಗೆ ಅದು ಒಳಪಡಬೇಕು. 'ಸತ್ಯ' (Reality) ಯಥಾರ್ಥ, ತಥ್ಯ- ಯಾವುದು ಎಂಬುದೂ ಅದರ ವಿಷಯದಲ್ಲಿ ಸತ್ಯ (Truth) ಏನು ಎಂಬುದೂ- ಎರಡೂ ಅಲ್ಲಿ ಸೇರುತ್ತವೆ. ಇಂಗ್ಲಿಷಿನ 'True' ಮತ್ತು 'Truth' ಎಂಬ ಎರಡು ಮಾತುಗಳ ಬಳಕೆಯಲ್ಲಿಯೂ ಹೀಗೇ ಸಂದಿಗ್ಧತೆ ಉಂಟು. True ಮೌಲ್ಯಾಂಶ ಗುಣವಾಚಿ; Truth ಆ ಗುಣವುಳ್ಳ ಅಂಶ ನಾಮಪದ. ಬೆಳ್ಳಗಿರುವ ಹಾಲು ಸತ್ಯಾಂಶ; ಬಿಳಿ ಎಂಬುದು ಅದರ ಗುಣ. ಹಾಲಿನ ಪುಡಿಯಿಂದ ಮಾಡಿದ್ದು; ಹಸುವಿನದು; ಸಕ್ಕರೆ ಮಸಾಲೆ ಹಾಕಿದ್ದು ಇವೆಲ್ಲ ಸತ್ಯ. ಅದನ್ನು ಕುರಿತು ವಿವರಣೆ. ಅಲ್ಲಿಯೂ 'Reality' ಅಥವಾ 'Verity' ಇತ್ಯಾದಿ ಮಾತುಗಳನ್ನು ಬಳಸಿ ದಾಟಿಕೊಳ್ಳುವುದು ರೂಢಿ. ಅಲ್ಲಿಯೂ ಬಳಕೆಯಲ್ಲಿ ಗೊಂದಲ ಇದ್ದೇ ಇದೆ. ಈ ನೆಲಸಿನ ಒಂದೆರಡು ಸಂಗತಿಗಳನ್ನು ಮಾತ್ರ ತಮ್ಮ ಮುಂದೆ ಇಡಬೇಕೆಂದಿದ್ದೇನೆ. ಪಾಶ್ಚಿಮಾತ್ಯರಲ್ಲಿ 'Fact' ಅಥವಾ 'Facts' ಎಂಬ ಮಾತಿದೆ. ಸದ್ಯಕ್ಕೆ 'Fact' ಎನ್ನುವುದಕ್ಕೆ 'ಸತ್ಯಾಂಶ'-ಸತ್ಯ ಸಂಗತಿ-ಎಂಬುದನ್ನು ಬಳಸುತ್ತೇನೆ. ಇವೊತ್ತು ನಮ್ಮ ತಿಳಿವಳಿಕೆಯಲ್ಲಿ ಈ ಬಗೆಗೆ ಪರ್ಯಾಲೋಚನೆ, ಶೋಧನೆ ಮಾಡಬೇಕಾದ ಅಗತ್ಯ ತುಂಬಾ ಇದೆ. ಯಾವ ಕಾಲದಲ್ಲಿಯೂ ಈ ಅಗತ್ಯವಿರುವುದಾದರೂ ಈ ಕಾಲಕ್ಕೆ ಅದರ ನೆಲಸು ಯಾವುದೆಂದು ಅರಿತಲ್ಲದೆ ಬದುಕಿಗೆ- ಎಂದರೆ ನಡವಳಿಕೆಗೆ - ಬೆಲೆ ಕಟ್ಟಲಾಗುವುದಿಲ್ಲ.

## ಪರ್ಯಾಲೋಚನೆ

ಇಂದಿನ ಕೂಗುಗಳಲ್ಲಿ ಯಾವುದು ಸತ್ಯ, ಎಷ್ಟು ಎಂದು ತಿಳಿಯುವುದರ ಜೊತೆಗೆ ಹಿಂದಿನಿಂದ ನಮಗೆ ಬಂದಿರುವುದರಲ್ಲಿ, ನಮ್ಮ ನಂಬಿಕೆಗಳಲ್ಲಿ ಯಾವುದು ಸತ್ಯ, ಯಾವುದು ಅಲ್ಲ ಎಂಬುದನ್ನು ಪುನಃ ವಿವೇಚಿಸಬೇಕಾಗುತ್ತದೆ. ಇವೊತ್ತಿನದರಲ್ಲಿ, ನಾಳೆಯ ಎಣಿಕೆಯಲ್ಲಿ ಬಹುಶಃ ಯಾವುದು ನಿಜವಾಗಬಹುದು ಎಂಬುದನ್ನೂ ಪರ್ಯಾಲೋಚಿಸಬೇಕು-ನಾಡೂ ಬದುಕೂ ಬೆಳೆಯಬೇಕಾದರೆ; ಖಚಿತವಾದ ನಿಶಿತವಾದ ಆಧಾರದ ಮೇಲೆ ಬುದ್ಧಿಕ್ರಿಯೆ, ಸಂಬಂಧದರ್ಶನ, ಸಂಸ್ಥಾಜೀವನ, ಸಾಹಸ ಬೆಳೆಯಬೇಕಾದರೆ..... ಬದುಕಿನ ನೆಲೆ ಸರಿಯಾಗಿ ಅರ್ಥವಾಗಬೇಕಾದರೆ.

ಕಾಲ ವಿಭಾಗವನ್ನು ಅನುಲಕ್ಷಿಸಿ ಹಿಂದು, ಇಂದು, ಮುಂದು ಎಂಬ ಮಾತುಗಳನ್ನಾಡುತ್ತೇವಲ್ಲವೆ? ಕೆಲವು ಮುಗಿದು ಹೋಗಿವೆ; ಹಿಂದಕ್ಕೆ ಬಾರವು. ಉದಾ: 1969 ಇನ್ನಿಲ್ಲ. ಅವುಗಳ ನೆನಪಿದೆ, ಪರಿಣಾಮಗಳಿವೆ..... ನೆನಪು ಒಂದೆ? ಎರಡೆ? ಒಬ್ಬರದೆ? ಹತ್ತು ಜನರದೆ? ಯಾವ ನೆನಪು? ಕಹಿಯೆ, ಸವಿಯೆ? ಸರಿಯೆ, ತಪ್ಪೆ?-ಎಂಬವೂ ಸತ್ಯಗಳು, ಸತ್ಯಸಂಗತಿಗಳೇ. ... ಆ ಯಾವುದೂ ಈಗ ಉಳಿದಿಲ್ಲ ಎಂದಾಗಲೂ ಅದು ಸತ್ಯ ಸಂಗತಿ- ಉದಾ. ಪಲ್ಲವರ ಅಥವಾ ಮೊಗಲ್ ಸಾಮ್ರಾಜ್ಯದ ಕಾಲ; ರಾಮಕೃಷ್ಣರ ಕಾಲ ಇತ್ಯಾದಿ. ಪರಿಣಾಮಗಳೊ? ಇಂದಿನದೆಲ್ಲವೂ ಯಾವ ಯಾವುದರವೊ ಪರಿಣಾಮಗಳು. ನಾಳೆ ಎನ್ನುವುದಿದೆ. ನಾಳೆಯ ಆಶೋತ್ತರಗಳಿವೆ; ಭಯ ಸಂಶಯಗಳಿವೆ. ಇಂದಿನದರಿಂದ ನಾಳೆ ಬರುವ ಆಪತ್ತು ಪ್ರಯೋಜನಗಳಿವೆ.



## ಬಗೆಗಳು

ಸತ್ಯಸಂಗತಿಗಳೆನ್ನುವುವು ಅನೇಕ ಬಗೆ. ಒಬ್ಬೊಬ್ಬರು ಒಂದೊಂದು ರೀತಿ ಸತ್ಯವನ್ನು ಕಾಣುತ್ತಾರೆ; ಬೆಲೆಗಟ್ಟುತ್ತಾರೆ; ಕಾರ್ಯಪ್ರವೃತ್ತರಾಗುತ್ತಾರೆ. ರಾಗದ್ವೇಷಗಳನ್ನೊ ಪಕ್ಷಪಾತಗಳನ್ನೊ ಬೆಳಸುತ್ತಾರೆ. ಅದಕ್ಕೆ ಅನುಕೂಲವಾಗಿ ಪ್ರತಿಕೂಲವಾಗಿ ಮಾತು, ನಡತೆ, ವಾದ, ರೀತಿ ವಿಧಾನ, ಒಪ್ಪಂದ, ಸಂಬಂಧ ಬೆಳೆಯುತ್ತವೆ. ಒಬ್ಬೊಬ್ಬರ ಎಣಿಕೆಯಲ್ಲಿಯೂ ಇದು ಬೇರೆಯಾದಾಗ ಯಾವ ಅಂಶದಲ್ಲಿಯಾಗಲಿ ಸತ್ಯ ಯಾವುದು ಎಂಬುದರ ಪರಿಚಯ, ಅಭ್ಯಾಸ (study), ನಿರ್ಣಯ ಅಗತ್ಯವಾದೀತು. ಕೆಲವು ನಿರ್ಣಯಗಳು ಅತಂತ್ರವಾಗಿಯೇ ಉಳಿಯುತ್ತವೆ. ಇವು ಅತಂತ್ರವೆಂಬುದೂ ಸತ್ಯವೇ,- ಸಾಕಾದಷ್ಟು ಪುರಾವೆಯೊ ದರ್ಶನಶುದ್ಧಿಯೊ ಪ್ರಾಮಾಣಿಕತೆಯೊ ಇಲ್ಲದೆ. ಆದರೂ ಸತ್ಯದ ಮೇಲೆಯೇ ಬದುಕನ್ನು ಕಟ್ಟಬೇಕು ಎಂಬ ಮಾತು ಸರ್ವರಿಗೂ ಆದರಣೀಯ. ಒಂದೇ ಮಾತಿಗೆ ಹಿಂದಿನವರು ಒಂದು ರೀತಿ ಅರ್ಥ ಕಟ್ಟುತ್ತಿದ್ದರು; ಇಂದಿನವರು ಬೇರೆ ಪ್ರಯೋಗಗಳನ್ನು ನೋಡುತ್ತಿದ್ದಾರೆ-ಎಂಬವು ಬಂದಾಗ, ಹಳತು ಖಿಲವಾಗಿರಬಲ್ಲದು. ಇವರು ಒಪ್ಪುವಂಥವಲ್ಲ.

'For last year's words belong
to last year's language:
And next year's words await,
another voice............'

ಎಂಬ ಪಂಕ್ತಿಗಳಲ್ಲಿ ಅಡಗಿರುವ ಅರ್ಥದ ವ್ಯಾಪ್ತಿಯೂ ಗಹನವಾದ್ದೇ. 'ಸತ್ಯ-ಮೇವ ಜಯತೇ ನ ಅನೃತಂ' ಎಂಬುದು ನಮ್ಮ ದೇಶದ ಮಹಾವಾಣಿ. ಇದರ ಅರ್ಥವೇನು? 'I speak the truth, the whole truth, and nothing but the truth' ಎಂಬುದು 'ಕೃಷ್ಣಾರ್ಪಣ' ಎಂಬುದರಷ್ಟೇ ಲೇವಡಿಗೆ ಲಾಯಖ್ಖಾಗಬಲ್ಲದು. ಸತ್ಯವೊಂದೇ ಗೆಲ್ಲುತ್ತದೆ, ಅನೃತವಲ್ಲ ಎಂದಾಗ ಯಾವ ಸತ್ಯ, ಯಾರ ಸತ್ಯ, ಎಂದಿನ ಸತ್ಯ ಎಂಬ ಪ್ರಶ್ನೆಗಳನ್ನು ಕೇಳಿಕೊಂಡು, ಸತ್ಯ ಎಂಬುದಕ್ಕೆ ಇದ್ದುದೆಲ್ಲ, ಇರುವುದೆಲ್ಲ, ಮುಗಿದುದೆಲ್ಲ, ಆಗುವುದೆಲ್ಲ, ಎಣಿಸುವುದೆಲ್ಲ, ಮರೆ ಮಾಚಿದುದೆಲ್ಲ ಎಂಬ ಅರ್ಥವಾಪ್ತಿಯನ್ನು ಇಟ್ಟುಕೊಂಡರೆ ಸತ್ಯವೊಂದೇ ಪ್ರಧಾನ;

ಅದು ಬಿಟ್ಟು ಇನ್ನು ಯಾವುದೂ ಏನೂ ಇಲ್ಲ; ವಾಸ್ತವಾಂಶಗಳೂ ಸತ್ಯವೇ; ಮೌನಗಳೂ ಸತ್ಯವೇ. ಇದ್ದುದರ ಸತ್ಯವೇನು, ಇರುವುದರ ಸತ್ಯವೇನು, ನಮ್ಮ ಊಹೆ ಕಲ್ಪನೆಗಳ ಸತ್ಯವೇನು, ಅವು ಜಯಿಸುತ್ತವೆ ಎಂದರೆ ಅರ್ಥವೇನು? ಇಲ್ಲಿ ಅನೃತವಾವುದು, ಎಷ್ಟು? ಎಂಬ ತಿಕ್ಕಾಟಗಳೆಲ್ಲ ಹುಟ್ಟಿಕೊಳ್ಳುತ್ತವೆ. ಅನೃತವೂ ತಥ್ಯವೇ ಆದಾಗ? ಅವರು ಇಲ್ಲದ್ದನ್ನು ಇದೆ ಎನ್ನಲಿಲ್ಲವೆ? ಸತ್ತದ್ದನ್ನು ಬದುಕಿದೆ ಎಂದರಲ್ಲವೆ? ಎಂಬ ಮಾತುಗಳು ಏಳುವುದುಂಟು. ಇದಕ್ಕೆ ಇತಿ ಇಲ್ಲ, ಮಿತಿ ಇಲ್ಲ. ಆ ಕಲ್ಪನೆಯಲ್ಲಿ ಲೋಕವೆಲ್ಲ ಅಡಗಿದೆ, ಕಾಲವೆಲ್ಲ ಅಡಗಿದೆ, ನಡೆಯುವುದೆಲ್ಲ ಅಡಗಿದೆ. ದೇವರ ಹೊರಗಿನದಾವುದೂ ಇಲ್ಲವೆನ್ನುತ್ತೇವೆ-ಸಾಕ್ಷೀಕರಿಸಿ. ದೇವರೊಂದೇ ಸತ್ಯವೆಂದರೆ ಇನ್ನಾವ ಯೋಚನೆಯೂ ಅಗತ್ಯವಿಲ್ಲ. ವಿಷಯದ ಎರಡಂಶಗಳಲ್ಲಿಯೂ ಹಾಗೇ. ಈ ನಡುವೆ ಜನ ತತ್ವಗಳನ್ನೂ ವಾದಗಳನ್ನೂ ಅಭಿಪ್ರಾಯಗಳನ್ನೂ ಬೆಳಸುತ್ತಾರೆ. ಈ ಸಂದರ್ಭದಲ್ಲಿ ಮೋಹಜಾಲ, ಕಷ್ಟ ಕಾರ್ಪಣ್ಯಗಳು ಅನಂತ. ಬಗೆಯ ವಿಮೋಹವೂ ಅತಿ. ಸಂಗತಿಗಳು ತಿಳಿಯಾಗಿ ಮನಸ್ಸಿಗೆ ಅರ್ಥವಾಗುವುದಕ್ಕಿಂತ ಅಬದ್ಧಾಂಶಗಳಿಗೆ, ಅರೆಸತ್ಯಗಳಿಗೆ ಎಡೆಯಾಗುವುದುಂಟು. ಬಹುಮಟ್ಟಿನ ನಮ್ಮ ತಿಳಿವಳಿಕೆಯಲ್ಲಿ, ಕಲ್ಪನೆ ವಾದಗಳಲ್ಲಿ, ಸುತ್ತಮುತ್ತಲಿನ ಬೆಲೆಗಟ್ಟುಗಳಲ್ಲಿ. ಇದನ್ನು ಅರ್ಥಮಾಡಿಕೊಳ್ಳದೆ ಹೋದರೆ ಲೋಕ ಜೀವನಕ್ಕೆ ನಾವು ಯಾವ ಸೇವೆಯನ್ನೂ ಸಲ್ಲಿಸಲಾಗುವುದಿಲ್ಲ; ನಾಳಿನ ಬದುಕೂ ಅಭದ್ರವಾಗುತ್ತದೆ.

## ಇಂದಿನ ತೊಳಲು

ಭರತಖಂಡದ ಮತ್ತು ಪಾಶ್ಚಿಮಾತ್ಯರ ರೀತಿನೀತಿಗಳು ಇಂದು ನಮ್ಮಲ್ಲಿ ಸೇರಿಕೊಂಡು ಅನೇಕ ತೊಳಲುಗಳನ್ನೂ ಘರ್ಷಣೆಗಳನ್ನೂ ಸಂದೇಹಗಳನ್ನೂ ಅನಿಶ್ಚಯಗಳನ್ನೂ ತಂದಿವೆ. ಇವು ಸತ್ಯ ಎಂಬುದರ ಒಂದೊಂದು ಮುಖವನ್ನೂ ಅತಿಮಾಡಿ ವಿಕಾರಗೊಳಿಸಿ ಕಾಣಿಸುತ್ತಿವೆ. ಜೀವನ ರೀತಿ ವ್ಯಾಪಾರಗಳೇ ಬೇರೆಯಾಗಿ ಅವುಗಳ ಪರವಾದ ಸಾಮಾನ್ಯ ಪ್ರಭಾವಗಳು ನಮ್ಮ ಕಾಲದ ಮನಸ್ಸನ್ನು ತಟ್ಟಿವೆ. ವಸ್ತುಸತ್ಯದಲ್ಲಿ ಭೌತಿಕ, ರಾಸಾಯನಿಕ, ರಚನೆಯ ಸತ್ಯಗಳಿವೆ. ಅವುಗಳ ಕ್ರಿಯಾ ವ್ಯಾಪಾರವನ್ನು ಕುರಿತು ವಿವೇಚನೆ ಇದೆ. ಬಗೆಬಗೆಯ ಪ್ರಯೋಜನದ ಮತ್ತು ಅಹಿತಕರ ಅಂಶಗಳಿವೆ; ಬುದ್ಧಿಯ ಅಥವಾ ಮನಸ್ಸಿನ ಸತ್ಯಗಳಿವೆ;- ನೀರೋಗ ಮನಸ್ಸಿನವು; ರೋಗಗ್ರಸ್ತ ಮನಸ್ಸಿನವು, ವಾದದ-ವಿದ್ಯೆಯ-ಮೇಧಾವಿತೆಯ ಅಂಶಗಳು ಇವೆ; ಇಚ್ಛೆ, ರಾಗಭಾವಗಳಿವೆ; ತತ್ವ, ಆತ್ಮ, ಅಧ್ಯಾತ್ಮ ಎಂಬ ಚಿಂತನಗಳಿವೆ; ನಡವಳಿಕೆಗೆ ಸಂಬಂಧಿಸಿದವೂ ರಸಭಾವ ಬಂಧುರ, ಸುಂದರ ಅಸುಂದರ ಎಂಬ ಸಂಗತಿಗಳೂ ಇವೆ. ಇವುಗಳಲ್ಲಿ ತಾರತಮ್ಯ ವಿವೇಚನೆಗಳಿವೆ. ಇವೆಲ್ಲ ಸತ್ಯದ ಮುಖಗಳೇ. ಇರವನ್ನು ಎಣಿಸುವಾಗ. ಅವುಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬ ಭಾಗ ದೊಡ್ಡದು-ಅನ್ವೇಷಣೆಗೆ. ಅಲ್ಲದೆಯೋ ವಾಸ್ತವ 'ಸತ್' ಎಂಬುದೂ ಮನುಷ್ಯ ಬುದ್ಧಿಗೆ



ಗೋಚರವಾದ್ದೇ; ಹಾಗೆ ಗೋಚರವಾಗದ್ದು ಏನೋ ಯಾರು ಬಲ್ಲರು? ಜ್ಞಾನ, ಜ್ಞಾತೃ, ಜ್ಞೇಯ ಈ ಸಂಬಂಧದಲ್ಲಿ ಜ್ಞೇಯ ಭಾಗವೆಲ್ಲ ಸತ್; Fact ಪ್ರಜ್ಞೆಯ ಆ ಸಂಬಂಧದ ಅರಿವು. ಇವಕ್ಕೆ ಈಗ ಹೋಗಬೇಕಿಲ್ಲ. ಇರವಿನ (Reality, the That) ಬಗ್ಗೆ ಸತ್ಯವಾವುದು ಎಂಬುದು ಜ್ಞಾನದ-ಅರಿವಿನ- (Knowledge of it, the What) ಭಾಗ-ಎಂಬ ಅಂಶ. ಹಾಗೇ ಚರಿತ್ರೆ ಎಂಬಲ್ಲಿ ಯಾವ ಚರಿತ್ರೆ? ವ್ಯಕ್ತಿಯ, ಸಮಾಜದ, ರಾಜ್ಯಗಳ ಚರಿತ್ರೆ ಮತ್ತು ಅವುಗಳಲ್ಲಿ ಪರಸ್ಪರ ಮೈತ್ರಿ ವೈಷಮ್ಯಗಳ ಕಥೆ; ಇಂದಿನ ಪರಿಸ್ಥಿತಿ, ಸನ್ನಿವೇಶ, ಸಮಸ್ಯೆ ಯಾವುವು? ಹೊಸ ಒಳ ಸಂಗತಿಗಳಲ್ಲಿ, ನಿಜ ತೋರಿಕೆಗಳಲ್ಲಿ ಯಾವ ಸಾಮಂಜಸ್ಯವಿದೆ? ಪ್ರಾಚೀನ ನವೀನಗಳಲ್ಲಿ ಯಾವುದು ಜೀವಂತ, ಯಾವುದು ಮೃತ, ಉಳಿಕೆ? ನಿತ್ಯಾಂಶ ಯಾವುದು?- ಎಂಬ ಸಂಗತಿಗಳನ್ನು ನಾವು ಅರಿತುಕೊಳ್ಳದಿದ್ದರೆ ನಮ್ಮ ತಿಳಿವಳಿಕೆ ಅಪೂರ್ಣ. ಎಂದರೆ ಒಂದು ಭಾಗದಲ್ಲಿ Facts ಯಾವುವು? ಇನ್ನೊಂದರಲ್ಲಿ ಅವಕ್ಕೆ ಯಾವ ಅರ್ಥ ಯಾವ ಬೆಲೆ ಕೊಡಬೇಕು? ಏಕೆ? ಎಂಬುದೂ ಪ್ರಸ್ತಾಪಕ್ಕೆ ಬರುತ್ತದೆಯೆಂದಾಯಿತು. ಇಲ್ಲಿ ಚರಿತ್ರೆ, ಸಂಪ್ರದಾಯ, ಪ್ರಯೋಜನಾಂಶ ಸೇರುತ್ತವೆ. ಒಳಗೇ ಮುರಿದುಕೊಂಡಿರುವ ಮುಳ್ಳು ಕೀತು ಕಾಣುವ, ಕಾಣಿಸದ, ಅನುಕೂಲ ಸಮಯ ಬಂದಾಗ ಎದ್ದು ಪ್ರಕಾಶಕ್ಕೆ ಬರುವ ಪ್ರಭಾವಗಳಿರುತ್ತವೆ. ಇವೊತ್ತಿನ ನಮ್ಮ ಸ್ಥಿತಿಗತಿ ಆಶೋತ್ತರಗಳು, ಜೊತೆಗೆ ನಾಳೆಗೆ ನಮ್ಮ ಮಕ್ಕಳು ಮರಿಯ, ನಮ್ಮ ದೇಶದ ಏಳಿಗೆಯ ಪರಿಶೀಲನೆ ಸೇರುತ್ತದೆ. ಸ್ವನಾಶಕರವಾದ ಹೀನತೆ, ದೌರ್ಬಲ್ಯಗಳಿರುತ್ತವೆ. ಕೆಲವು ಇನ್ನೂ ಎಳೆಯ ಅಥವಾ ಕ್ಷೀಣದೆಶೆಯಲ್ಲಿ, ಕೆಲವು ಬಲಿತ ಅಥವಾ ಅಭಿವೃದ್ಧಿ ಸ್ಥಿತಿಯಲ್ಲಿ, ಕೆಲವು ಕ್ಷೀಣವಾಗುತ್ತ ಇರುತ್ತವೆ. ಈ ಎಲ್ಲ ಕಡೆ ಗಳಲ್ಲಿಯೂ ಸತ್ಯ ಮತ್ತು ಮೌಲ್ಯಗಳ ಪ್ರಕಾಶ ಬೇರೆ ಬೇರೆ ಧಾತುವಿನವು; ರಸದವು; ಕಾರ್ಯಕಾರಿಯಾದವು. ಈ ಪರಿಶೀಲನೆ ಕೂಲಂಕಷವಾಗಿ ಜನಗಳ ಎದೆಮನಗಳಲ್ಲಿ, ಕ್ರಿಯಾರಂಗಗಳಲ್ಲಿ, ಶಿಕ್ಷಣಮಂದಿರಗಳಲ್ಲಿ ನಡೆದ ಹೊರತು ಮುಂದಿನ ದಾರಿಗೆ ಬೆಳಕು ಹಾಯದು. ಇದನ್ನು ಬಹುಜನ ಅರಿತುಕೊಳ್ಳಬೇಕು. ಇದು ನನ್ನ ಮನಸ್ಸಿನಲ್ಲಿ ವಿದ್ಯಾಸಾಧನೆಯ ಪ್ರಧಾನ ಕಾರ್ಯ; ಮೂಲಭೂತವಾದ್ದು, ಅತ್ಯಂತ ಪರಿಣಾಮಕಾರಿ; ಸಮಸ್ತ ಸಾಧನೆಗೂ ನೆಲೆಗಟ್ಟು. ಈ ವಿಷಯವನ್ನು ಅರಿಸಿಕೊಂಡುದು ಸ್ಥೂಲವಾಗಿ ಅದನ್ನು ನಿವೇದಿಸುವುದಕ್ಕೆ.

## ಪರಿಶೀಲನೆ

ಇದನ್ನು ಇನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

ಲೋಕ ಜೀವನವೆಲ್ಲ 'Fact' ಅಥವಾ 'ಸತ್ಯಸಂಗತಿ'. ಕಂಡದ್ದು, ಕಾಣದು; ಸ್ಥೂಲ, ಸೂಕ್ಷ್ಮ; ಕಲ್ಪಿತ, ನಿರ್ಮಿತ; ಮೋಹ, ಭ್ರಾಂತಿ; ಭಯ, ಸಂಶಯ, ಅಸತ್ಯ, ಅಡಗಿಸಿಕೊಂಡದ್ದು, ಮರೆಮಾಡಲು ಯತ್ನಿಸುವುದು; ಶಾಸ್ತ್ರ, ಕಲೆ, ಅನುಭಾವ-ಎಲ್ಲ.

ಇವುಗಳಲ್ಲಿ ಅನೇಕ ಬಗೆಗಳು ಮಟ್ಟಗಳು ಉಂಟು. ಯಾವುದನ್ನು ಕಣ್ಣಿಂದ ಕಾಣಬಹುದೊ ಅದು ನಿಜ. ಆದರೆ ನೋಡುವವರು ಯಾರು? ಅವರ ಕಣ್ಣು ಸರಿಯಾಗಿದೆಯೆ, ಇಲ್ಲವೆ? ಸರಿಯಾದ ಬೆಳಕಿನಲ್ಲಿ ನೋಡುತ್ತಾರೆಯೆ? ಪದಾರ್ಥದ ಎಷ್ಟು ಭಾಗ ಕಣ್ಣಿಗೆ ಕಾಣುತ್ತದೆ? ನೋಡಲು ವಸ್ತುವಿನ ಯಾವ ಮುಖವನ್ನು ಆರಿಸಿಕೊಳ್ಳುತ್ತಾರೆ? ಯಾವ ಯಂತ್ರ ತಂತ್ರ ವಿಧಾನ ಬಳಸುತ್ತಾರೆ?-ಎಂಬ ಅಂಶಗಳು ಅಲ್ಲಿ ಪ್ರಕೃತ.... ಮತ್ತು, ಕಣ್ಣಿಗೆ ಕಾಣುವುದೆಲ್ಲ ನಿಜವೊ? ಕ್ಯಾಸಿಯೊ ಕೈಯಲ್ಲಿ ತನ್ನ ಕರವಸ್ತ್ರ ಇರುವುದನ್ನು ಒಥೆಲ್ಲೊ ನೋಡಿದ; ಅದು ತಾನು ಡೆಸ್ಡಿಮೋನಾಗೆ ಕೊಟ್ಟಿದ್ದುದು. ಆ ರೀತಿ ವಿಷ ಬೆಳಸಿದ್ದ ಇಯಾಗೊ. ಆ ನೋಟ ಒಥೆಲ್ಲೊ ಈರ್ಷ್ಯೆಗೂ ಕ್ರೋಧಕ್ಕೂ ಕಾರಣವಾಗಿ ಡೆಸ್ಡಿಮೋನ ಕೊಲೆಗೆ ಕಾರಣವಾಯಿತು. ಆ ನಾಟಕದ ದುರಂತ ದಾರುಣತೆಗೆ ವಿಷವೆರೆದ ಪ್ರಸಂಗ ಅದು... ಸತ್ಯಕ್ಕೂ ಅಸತ್ಯಕ್ಕೂ ವ್ಯತ್ಯಾಸವೇನು, ದೂರವೆಷ್ಟು ಎಂದು ಹೈದರಾಲಿ ಕೇಳಿದನಂತೆ. ಪೂರ್ಣಯ್ಯನವರು ಉತ್ತರ ಕೊಟ್ಟರಂತೆ: ನಾಲ್ಕು ಬೆರಳಷ್ಟು ದೂರ. ಎಂದರೆ ಕಿವಿಗೂ ಕಣ್ಣಿಗೂ ಇರುವಷ್ಟು ದೂರ-ಎಂದು ಹೇಳಿದರು. ಕಿವಿ ಕೇಳಿದ್ದಕಿಂತ ಕಣ್ಣಲ್ಲಿ ತಾವೇ ಕಂಡದ್ದು ಹೆಚ್ಚು ನಿಜ ಎಂದಂತಲ್ಲವೆ ಮಾತು? ಸರಿ. ಅಲ್ಲಿಯೂ ಸತ್ಯಾಂಶ ಅಲ್ಲವೆ? ಇಂಥದು ಎಷ್ಟೋ...... ನಮ್ಮ ದೇಹದಲ್ಲಿ ನಡೆಯುವ ಅನೇಕ ವ್ಯಾಪಾರಗಳೂ ಕ್ರಿಯಾವಿಧಾನಗಳೂ ಕಣ್ಣಿಗೆ ಬೀಳವು. ನಮ್ಮ ತಾತಂದಿರ ಮುಖ ಇತ್ತು, ಬಣ್ಣ ಇತ್ತು, ಗಾತ್ರ ಇತ್ತು, ಯೋಗ್ಯತೆ ಇತ್ತು, ಅವರಿದ್ದರು. ಇಲ್ಲವಾದರೆ ನಾವೆಲ್ಲಿ? ಒಬ್ಬರಿಗೆ ಕಂಡುದು ಇನ್ನೊಬ್ಬರಿಗೆ ಕಾಣದಿರ ಬಹುದು. ವಿದೇಶಗಳನ್ನು ಕೆಲವರು ಕಾಣೆವು ಅನ್ನುವುದು ನಿಜ. ಆದರೆ ದಿನಾ ಅವುಗಳಿಂದ ವಿಮಾನಗಳಲ್ಲಿ ಜನ ಬರುತ್ತಾರೆ. ಎಲ್ಲರ ಕಣ್ಣೂ ಸಾಮಾನ್ಯವಾಗಿ ಒಂದೇ ರಚನೆಯದು, ಶಕ್ತಿಯದು, ಬಹುಶಃ ಮನಸ್ಸಿನದು ಆದಾಗ. ರಾಗದ್ವೇಷಗಳೊ ಬೇನೆಗಳೊ ಆವುಟಗಳೊ ಮೋಹಗಳೊ ಇಚ್ಛೆಯೊ ಕಪಟವೊ ಇರುವಾಗ ಒಂದೊಂದು ಕನ್ನಡಿ ಒಂದೊಂದು ವಿಧವಾಗಿ ಕಾಣಿಸುತ್ತದೆ ಕೂಡ.

ಕಣ್ಣಿಗೆ ಕಾಣಿಸುವುದೇನು ಎಂಬುದು ಇಂದಿನ ಚಿತ್ರಕಲೆಯಲ್ಲಿ ಬಹು ದೊಡ್ಡ ಪ್ರಶ್ನೆ; ಅನೇಕ ತತ್ವಗಳಿಗೆ ವಾದಕ್ಕೆ ತಾಪಗಳಿಗೆ ಎಡೆ ಕೊಟ್ಟಿದೆ. ಎಲ್ಲಿ ಹೇಗೆ ನಿಂತು ನೋಡುತ್ತೇವೆ, ಎಷ್ಟು ಕಾಣುತ್ತೇವೆ ಎಂಬುದರಲ್ಲಿ ಹೊರಮೈ ಲಕ್ಷಣ ಕಾಣುತ್ತದೆ, ಸತ್ಯಾಂಶದ ವಿಷಯದಲ್ಲಿ ಕಾಣ್ಕೆ, ಪ್ರಮಾಣಗಳು ಹೆಚ್ಚು ಕಡಮೆಯಾಗುತ್ತವೆ. ಹೊರಮೈಯಲ್ಲಿಯೂ ಪಾರ್ಶ್ವನೋಟವೆ, ಎದುರು-ನೇರ-ತುಂಬು ನೋಟವೆ? ನೋಡುತ್ತಿರುವವರು ಯಾರು?-ಎಂಬ ಅಂಶಗಳು ವಸ್ತುಸ್ಥಿತಿಯ ಪರಿಚಯವನ್ನು ಮಾರ್ಪಡಿಸುತ್ತವೆ. ಸಾಮಾನ್ಯರಿಗೆ ಹಾಗಿದ್ದರೆ ಕಲೆಗಾರನ ಕಣ್ಣು ನೋಡುವುದೇನನ್ನು? ಆ ಮಾತು ಬೇಡ. ಸಾಮಾನ್ಯವಾಗಿ ಹೀಗೆ ಹೇಳುವುದು ವಾಡಿಕೆ. ಯಾವುದು ಒಬ್ಬರಿಗೆ ಅನೇಕ ವೇಳೆ ಬೇರೆ ಬೇರೆ ಸಮಯಗಳಲ್ಲಿ ಒಂದೇ ರೀತಿ ಕಾಣುತ್ತದೆಯೊ, ಹಲವರಿಗೆ



ಒಂದೇ ಸಮಯದಲ್ಲಿ ಒಂದೇ ರೀತಿ ಕಾಣುತ್ತದೆಯೊ-ಅದು 'Fact'; 'ನಿಜ' 'ಸತ್ಯ'-ವಸ್ತುವಾಗಲಿ, ಗುಣವಾಗಲಿ, ಸಮೀಕರಣವಾಗಿ (Equation) ಸ್ಥಾಪಿತವಾಗುವು ದಾಗಲಿ - ಎನ್ನಬಹುದು. ಅದನ್ನು ನಮ್ಮ ರಕ್ತ, ಭಾವ, ಅನುಭವ, ಬುದ್ಧಿ ಹಾಗೆಂದು ಆ ಮಟ್ಟಿಗೆ ಒಪ್ಪುತ್ತದೆ......... ಅದನ್ನು ಅಳೆಯಬಹುದು, ತೂಗಬಹುದು, ಎಣಿಸಬಹುದು. 'ಅಳತೆಗೆ ತೂಕಕ್ಕೆ ಎಣಿಕೆಗೆ ಒಳಗಾದುವು ಸಕಲ ವಸ್ತುಗಳ್' ಎಂದ ಪಂಪ ಕವಿ. ('ಸಕಲ'ಕ್ಕೆ ಎರಡು ಅರ್ಥವುಂಟು ಸ + ಕಲ ಮತ್ತು ಸಕಲ.) ಇಂದಿನ ವಿಜ್ಞಾನ ಪ್ರಪಂಚದಲ್ಲಿ ಎಲ್ಲ ಪ್ರಾಯೋಗಿಕ ಪರೀಕ್ಷೆಗೂ ಮೂಲ ಸಾಧನ ಅಳತೆ (Measurement). ಪದಾರ್ಥದ ಲಕ್ಷಣ-ಸ್ವರೂಪ-ಇವು ಬೇರೆ ಬೇರೆ ಅರ್ಥವ್ಯಾಪ್ತಿಯ ಮಾತುಗಳು. ತಿಳಿಯಲು ಇದೊಂದು ವಿಧಾನ; ತಂತ್ರ. ಹಲವು ಪದಾರ್ಥಗಳನ್ನು ಸುಲಭವಾಗಿ ಅಳೆಯಬಹುದು. ಒಂದೊಂದನ್ನು ಅಳೆಯಲು ಬೇರೆ ಬೇರೆ ಪ್ರಕಾರಗಳುಂಟಾದರೂ ಈ ಅಳತೆ ಇಷ್ಟೇ ಎಂದು ಗೊತ್ತು ಮಾಡಿಕೊಳ್ಳಬಹುದು. ಉದಾ: ಒಂದು ಮರದ ಜಾತಿ, ಚರಿತ್ರೆ, ರಚನೆ, ಗಾತ್ರ, ಗುಣ, ಪ್ರಯೋಜನ ಎಷ್ಟೊ ಇರುತ್ತವೆ. ತಕ್ಷಣಕ್ಕೆ ಬೇಕಾದವು, ಬೇಡವಾದವು, ಇನ್ನೂ ಅರಿಯದೆ ಉಳಿದಿರುವುವು. ಆದರೆ ಮರದ ಸ್ವರೂಪವನ್ನು ತಿಳಿಸುತ್ತವೆ.

ಮಾನಸಿಕ ಸಂಗತಿಗಳ ಪ್ರಪಂಚ ಬೇರೆ. ಅವು ಹೆಚ್ಚು ಸೂಕ್ಷ್ಮ. ಅವುಗಳ ಗ್ರಹಣವೂ ಹಾಗೇ; ಒಂದಳತೆಗೆ ಹತ್ತಕ್ಕೆ ಸಿಕ್ಕದೆ ನುಸುಳಿಕೊಳ್ಳಬಹುದು. ಈ ಎಲ್ಲವನ್ನೂ ಬುದ್ಧಿ ಇರುವ ಮನುಷ್ಯ ಒಪ್ಪಿಕೊಳ್ಳಬಹುದು; ಒಪ್ಪಿಕೊಳ್ಳುತ್ತಾನೆ. ಕೆಲವು ಸಿದ್ಧ, ಕೆಲವು ಸಾಧ್ಯ; ಕೆಲವು ಅನಿಶ್ಚಿತ, ಅತಂತ್ರ; ಮತ್ತೆ ಕೆಲವು ಗುಪ್ತ, ಧ್ವನಿತ, ಅನಂತ. ಕೆಲವನ್ನು ಕುರಿತು ಭಿನ್ನಾಭಿಪ್ರಾಯ ಇರುತ್ತದೆ. ವಸ್ತು ಸ್ವರೂಪವನ್ನು ನಿರ್ದೇಶಿಸುವಾಗ Categories ಎಂಬ ಪದಾರ್ಥವರ್ಗಗಳನ್ನು ತರ್ಕಗಳಲ್ಲಿ ಉಪಯೋಗಿಸುತ್ತಾರೆ.

ಅರಿಸ್ಟಾಟಲ್ ಹೇಳಿದಂತೆ ಆ ವರ್ಗಗಳು-ದ್ರವ್ಯ, ಪರಿಮಾಣ, ಸಂಬಂಧ, ದೇಶ, ಕಾಲ, ಅವಸ್ಥೆ, ಸ್ವಾಧೀನ, ಕ್ರಿಯೆ, ನಿಷ್ಕ್ರಿಯೆ ಎಂಬವು.

ಇನ್ನೊಂದು ವರ್ಗ Predicables ಎಂಬವು. ಲಕ್ಷಣವೆನ್ನುವಾಗ ಜಾತಿ, ಸ್ವರೂಪ ಲಕ್ಷಣ, ಅಂಶ ಅಥವಾ ಅಂಗಲಕ್ಷಣ, ಆಕಸ್ಮಿಕ ಲಕ್ಷಣ ಎಂಬವಂಥವನ್ನೂ ಹೇಳಬಹುದು.

ಇವೆರಡೂ ವರ್ಗಗಳು ವಸ್ತುಸ್ವರೂಪ ಮತ್ತು ಕ್ರಿಯಾನಿರ್ದೇಶಕಗಳು.

## ಮಾನಸಿಕವಾಗಿ

ಮಾನಸಿಕ ಸತ್ಯವೆಂಬುದು ಆಲೋಚನೆ, ಇಚ್ಛೆ, ಕಷ್ಟಸುಖ, ಭಾವ, ಅನುಭವ, ಇತ್ಯಾದಿಗಳ ಭಾಗ. ಸೊಗಸು, ಕುರೂಪ, ಸಹ್ಯ ಅಸಹ್ಯಗಳ ಅಂಶವೂ ಉಂಟು.

ಅಧ್ಯಾತ್ಮ, ಅನುಭಾವ (Intuition) ಎಂಬ ನೆಲಸುಗಳ ಮಾತಿದೆ. ಈ ಪರಸ್ಪರ ಸಂಬಂಧಗಳನ್ನು ಅರಿವ, ವಿವೇಚಿಸುವ, ವರ್ಗೀಕರಿಸುವ ವಿಧಾನವುಂಟು. ವಿಜ್ಞಾನ ಸಂಗತಿಗಳುಂಟು. ಅದರ ಪ್ರಯೋಗಭಾಗ, ವಿಧಾನ ಭಾಗ ಉಂಟು. ಸಮಾಜ ಜೀವನದ, ರಾಜಕೀಯ ವ್ಯವಹಾರಗಳ, ಒಳದೇಶದ ಮತ್ತು ಅಂತಾರಾಷ್ಟ್ರೀಯ ಸಂಗತಿಗಳುಂಟು. ಆರೋಗ್ಯ, ಕಾಯಿಲೆ, ಅಜ್ಞಾನ, ರಾಗದ್ವೇಷಗಳು, ಪ್ರಯೋಜನ, ಚರಿತ್ರೆ, ಪಕ್ಷಪಾತಗಳು, ಪಂಗಡಗಳು, ವಿಭಿನ್ನ ಪ್ರಯೋಜನಗಳಿಗಾಗಿ ನಮ್ಮ ಮೇಲೆ ಬಲಪ್ರಕಾಶ ಮಾಡುವ, ಒತ್ತಾಯ ಬೀರುವ ಸಂಗತಿಗಳು ಉಂಟು. ನೋವು, ಸುಖ, ತೃಪ್ತಿ, ಅತೃಪ್ತಿ ಉಂಟು. ನೆನಪುಗಳು, ಲಾಭನಷ್ಟಗಳ ಅಂಶ ಉಂಟು. ಭಕ್ತಿ, ಧರ್ಮ, ವ್ಯಾಪಾರ ಉಂಟು. ಇವೆಲ್ಲ ಮನುಷ್ಯನ ಬದುಕನ್ನು ತಟ್ಟುತ್ತವೆ; ಮಾರ್ಪಡಿಸುತ್ತವೆ. ಜನದ ಬದುಕನ್ನು ಪ್ರಭಾವಗೊಳಿಸುತ್ತವೆ. ಇವೆಲ್ಲವನ್ನೂ ಬೇರೆ ಬೇರೆ ರೀತಿ ದುಡಿಸಿ ಕೊಂಡು ಪ್ರತಿಷ್ಠೆ, ಪ್ರಭಾವ, ಪ್ರಯೋಜನಗಳನ್ನು ಕಟ್ಟುವ ಕಥೆ ಲೋಕವನ್ನು ತುಂಬಿದೆ. ಇದೆಲ್ಲ ಸತ್ಯಾಂಶ. ಇವನ್ನೇ ಬೆಲೆ ನೆಲೆಗಳನ್ನಾಗಿ ಮಾಡಿಕೊಂಡು ಜನ ಒಳ್ಳೆಯದು ಕೆಟ್ಟದ್ದು ಮಾಡುತ್ತಾರೆ. ಇದರ ನೆಲಸನ್ನು ಅರಿಯಬೇಕು-ತೀರ್ಮಾನಗಳನ್ನು ಮಂಡಿಸುವ ಮುಂಚೆ. ಇದು ಲೋಕಸ್ವರೂಪ.

## ಲೋಕಸ್ವರೂಪ

ಇನ್ನೊಂದು ಬಗೆ ಉಂಟು. ಉದಾ: ಸಂಶಯ ಅಥವಾ ಕೆಡುಕಿನ ಶಂಕೆ, ಊಹೆ ಕೂಡ; ಅವಿಶ್ವಾಸದ ಮನಃಸ್ಥಿತಿ, ಪ್ರಕಟ, ಅಪ್ರಕಟ, ಹೃದಿಸ್ಥ. ಇವು ಜನರಲ್ಲಿ ನಾನಾ ಪ್ರಚೋದನೆ ಉಂಟುಮಾಡುತ್ತವೆ; ಕೆಲ ಕಾರ್ಪಣ್ಯಗಳಿಗೆ ಕಾರಣವಾಗಬಲ್ಲವು; ಕ್ರಿಯಾ ವ್ಯಾಪಾರ ಹುಟ್ಟುವಂತೆ ಮಾಡುತ್ತವೆ. ಕೆಲವು ಸಮಾಜದ ವರ್ಗಗಳ, ಪದವಿಗಳ, ಅಧಿಕಾರ ಉಳ್ಳವರ, ಇಲ್ಲದವರ ಸಂಬಂಧವನ್ನು ಕುರಿತವು. ಕೆಲವುಗಳ ವ್ಯಾಪ್ತಿ ಒಂದು ರಾಷ್ಟ್ರಕ್ಕೊ ಅಂತಾರಾಷ್ಟ್ರೀಯ ಜೀವನಕ್ಕೊ ಹರಡುವಂಥದು. ಇನ್ನು ಕೆಲವೆಡೆ ಹತ್ತಾರು ಶತಮಾನಗಳಿಂದ ನಡೆದುಕೊಂಡು ಬಂದಿರುವ ಬಣಬಣಗಳ ನೆನಪಿಗೂ ಇತಿಹಾಸಕ್ಕೂ ಸಂಬಂಧಿಸಿದವು. ಮತ ಧರ್ಮಗಳ ಪಕ್ಷಪಾತ ಕೆಲವಕ್ಕೆ; ಅಥವಾ, ದಬ್ಬಾಳಿಕೆ ಹಾಗೆ. ಭಾರತದಲ್ಲೇ ಅಂತಹವು ಕೆಲವುಂಟು. ಯೂರೋಪಿನಲ್ಲಿ ಯೆಹೂದ್ಯರಿಗೂ ಕ್ರೈಸ್ತ ಪಂಗಡಗಳಿಗೂ ಸಂಬಂಧಿಸಿದವಿವೆ. ಅಲ್ಲಿ ಕೋಟಲೆಗಳದೇ ನೆಲೆಗಟ್ಟು. ಉತ್ತರ ಐರ್ಲಂಡಲ್ಲಿ ಅಲ್‌ಸ್ಟರಿನ ಪ್ರಾಟೆಸ್ಟಂಟ್ ಪಂಗಡಕ್ಕೂ-ಉಳಿದ ಕ್ಯಾಥೋಲಿಕ್ ಐರ್ಲಂಡ್ ಭಾಗಕ್ಕೂ ನಟ್ಟ ವಿರಸ-ಕೋಟಲೆ ಹಾಗೆ. ಇಂಥಲ್ಲಿ ನೆಚ್ಚಿಕೆ ವಿಶ್ವಾಸ ಬೆಳೆಯವು. ಜಿನ್ನಾ ಅವರೇ ಸರ್ಕಾರವನ್ನು ರಚಿಸಲಿ ಎಂದು ಗಾಂಧೀಜಿ ಹೇಳಿದಾಗ ಆತ ನಂಬಲಿಲ್ಲ. ಇದರಲ್ಲಿ ಏನೋ ಮುದುಕನ ಕೃತ್ರಿಮ ಇದೆ ಎಂದರು. ಹಟದಿಂದ, ಮುಯ್ಯಿ ಬುದ್ಧಿಯಿಂದ ಬದುಕು ಕೃಪಣವಾಗುತ್ತದೆ. ಇನ್ನೂ ಕೆಲವಲ್ಲಿ-ಉದಾ: ಪೂರ್ವ ಯೂರೋಪ್ ರಾಷ್ಟ್ರಗಳಲ್ಲಿ-ತಲೆಯೆತ್ತಿ ಬಲಿತ ಸಮತಾವಾದಿ ಕಮ್ಯೂನಿಸ್ಟ್ ಶಾಖೆಯವರಿಗೂ-ಅಲ್ಲಿಯ ಒಳತೋಟಗಳೂ ಹತ್ತು-ಪಶ್ಚಿಮ ಯೂರೋಪ್,



ಅಮೆರಿಕ ಮುಂತಾದಲ್ಲಿ ಬೆಳೆದಿರುವ ಪ್ರಜಾಸ್ವಾತಂತ್ರ್ಯವಾದಿ ವರ್ಗಗಳಿಗೂ ಅಂಥದೇ ಘರ್ಷಣೆ ಇದೆ. ಕೆಲವು ಘೋಷಣೆಗಳು ಒಬ್ಬರೊಬ್ಬರಿಗೆ ಸಂತತವಾಗಿ ಬೀರುವ ಅಸ್ತ್ರಗಳು. ಇನ್ನು ಕೆಲವು ವಾಸ್ತವ ಸಂಗತಿಗಳು, ಕಾನೂನಿನಂಥವು; ಸ್ಥಿರವಾಗಿ ಜನ ಒಪ್ಪಿ ನಡಸುವವು ಕೆಲವು. ಅವು ಮಾರ್ಪಡಬೇಕೆಂದು ಚಳವಳಿ ನಡೆಯುತ್ತಿರುವುವು ಕೆಲವು. ಒಪ್ಪದೆ ಪ್ರತಿಭಟಿಸುತ್ತಿರುವುವು ಕೆಲವು. ಇಲ್ಲಿ ಒಂದು ಅನಿಶ್ಚಿತ ಅಥವಾ ಸಂಕ್ರಮಣ ಸ್ಥಿತಿ ಇರುತ್ತದೆ. ನಾಳೆಗೆ ಏನೊ, ನಿನ್ನೆ ಎಂತೊ-ಹಾಗಿರಲಿ; ಇಂದು ಅವು ಹೀಗೂ ಹಾಗೂ ಎರಡೂ ರೀತಿ ಇದ್ದು ಬೇರೆ ಬೇರೆ ಪಂಗಡಗಳ ಮನಸ್ಸನ್ನು ಅಶಾಂತಗೊಳಿಸುತ್ತ ಕಷ್ಟ ನಿಷ್ಠುರ ಉಂಟುಮಾಡುತ್ತ ಇರುತ್ತವೆ. ಇಲ್ಲಿ ಪಕ್ಷಪಾತ, ಕ್ರೋಧ, ಕಸರೆ ಸಹಜ......... ಈಚೆಗೆ ಡಾ|| ಸಿ. ಡಿ. ದೇಶಮುಖ್ ಅವರು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಮಾತನಾಡುತ್ತ ಒಂದು ವ್ಯತ್ಯಾಸವನ್ನು ನಿರ್ದೇಶಿಸಿದರು. Report, not Criticism (ವರದಿ, ಟೀಕೆ ಅಲ್ಲ) ಎಂಬುದು ಒಂದು ಸ್ಥಿತಿಯ ಲಕ್ಷಣ. ಉಕ್ತಿಯ ಇನ್ನೊಂದು (Opinion and Observation) ಅಭಿಪ್ರಾಯ, ಗಮನಕ್ಕೆ ಬಂದ ಸಂಗತಿ ಬೇರೊಂದು ಇರುವ ವ್ಯತ್ಯಾಸದ ಉಕ್ತಿ ಅದು. ಅವು ಸರಿಯೆ ಅಲ್ಲವೆ ಎಂಬ ಯೋಚನೆಗೆ ನಾವು ಸದ್ಯ ಹೋಗಬೇಕಿಲ್ಲ. ಎರಡೂ ಎಣಿಕೆಗೆ ಬರುವ ಸಂಗತಿಗಳು. ಇಲ್ಲಿ ಪ್ರಯೋಜನಗಳನ್ನು ಎಣಿಸುವುದು ಕಾಣುತ್ತದೆಯಾಗಿ ಅವು ವಸ್ತುಸ್ಥಿತಿಗೆ ಸೇರಿದರೂ ಬೆಲೆಗಳಂತೆ ಕಾರ್ಯ ಮಾಡುತ್ತವೆ.... ಎಲ್ಲ ದೇಶಗಳಲ್ಲಿ ಸಂಪ್ರದಾಯವೆಂಬುದಿರುತ್ತದೆ; ರೂಢಿ, ಸಮಯ, ಸಂಕೇತ, ಸಲ್ಲದ್ದು, ಸಲ್ಲುವಂಥವು ಎಂಬುದು. ಜನ ಹಾಗೆ ನಡೆದುಕೊಳ್ಳುತ್ತಾರೆ. ಅಥವಾ ಯಾವುದಕ್ಕೊ ಹೇಸುತ್ತಾರೆ, ನಿಷೇಧಿಸುತ್ತಾರೆ ಎಂಬುದು. ಹೊಂದಿಕೆ ನಡೆದರೆ ಆ ದೇಶದಲ್ಲಿ ಶಾಂತಿ, ಶಿಸ್ತು, ಸ್ತಿಮಿತ, ಸಾಮರಸ್ಯ ಉಳಿಯುತ್ತವೆ. ಎಂದಾಗ, ಲೋಕ ಜೀವನದಲ್ಲಿನ ಸಮಸ್ತ ಘಟನೆ, ಸಂಗತಿಗಳು, ನಡವಳಿಕೆ, ಬೆಲೆ, ಪುರುಷಾರ್ಥಗಳು, ಸಂಬಂಧಗಳು-ಈ ಎಲ್ಲವೂ ಸೇರಿದ ಪರಿಮಂಡಲ ಅದು. ವಿರೋಧವೊ ದಂಗೆಯೊ ಹುಟ್ಟಿಕೊಂಡಾಗ ಸಮತೋಲ ಕೆಡುವುದು ಸಹಜ. ಒಂದಕ್ಕೊಂದು ಹೊಂದಿಕೊಳ್ಳದಾಗ ವಿರಸ ಹುಟ್ಟಿಕೊಳ್ಳುತ್ತದೆ ತಾನೆ? ಅದೂ ಸ್ಥಿತಿಯ, ಸಂಗತಿಯ ಒಂದು ಹಸರವೇ. ಇವುಗಳ ಪರಿಣಾಮ ಎಷ್ಟೋ ಬಗೆಯದು. ಇಲ್ಲಿನ ಕೋಪತಾಪ ಆರಲು ಬಹುಕಾಲ ಹಿಡಿಯುತ್ತದೆ. ಫ್ರಾನ್ಸ್-ಜರ್ಮನಿ ನಡುವೆ ಜೂಲಿಯಸ್ ಸೀಸರ್ ಕಾಲದಿಂದ ಘರ್ಷಣೆ; ಗೆಲವು ಸೋಲುಗಳ, ಸೇಡುಗಳ ನೆನಪು ಎದೆಬೆಂಕಿಗೆ ಧೂಪಹಾಕುತ್ತಲೇ ಇರುತ್ತವೆ. ಯೂರೋಪಿನ ಸಂಸ್ಕೃತಿಗಾಗಲಿ, ರೋಮನ್ ಕ್ರೈಸ್ತ ಮತಕ್ಕಾಗಲಿ ಜರ್ಮನರು ಪೂರ್ತಿ ಒಗ್ಗಿಕೊಳ್ಳಲೇ ಇಲ್ಲ. ಹಿಟ್ಲರ್ ಸಾಕ್ಷಿ; ವಾಗ್ನರ್ ಸಂಗೀತ ಸಾಕ್ಷಿ.

## ಯುಕ್ತಿ

ಈ ಎಲ್ಲ ಮಟ್ಟಗಳಲ್ಲಿಯೂ ಮನುಷ್ಯನ ಬುದ್ಧಿಶಕ್ತಿಯ ಅಂಶವಾಗಿ ಯುಕ್ತಿ (Reason) ಕಾರ್ಯಕಾರಿಯಾಗುತ್ತದೆ. ಯುಕ್ತಿ ಒಂದು ಶಕ್ತಿ. ಬೇಕುಬೇಕಾದಂತೆ

ಪರವಾಗಿ, ವಿರುದ್ಧವಾಗಿ ವಾದಗಳನ್ನು ಒದಗಿಸಬಲ್ಲದ್ದು. ವಾದ ಸರಿ ಇರಬಲ್ಲದು, ತಪ್ಪಿರಬಹುದು. ಪಕ್ಷಪಾದವೊ ಅರೆಸತ್ಯವೊ ಆಗಬಹುದು. ಕೇವಲ ಬುದ್ಧಿ ಪ್ರಾಗಲ್ಭ್ಯವನ್ನು ಮೆರಸಿ, ಪ್ರತಿವಾದವನ್ನು ಸೋಲಿಸುವಂತಹ ಪಾತ್ರವಾಗಬಹುದು. ಹಿಂದೆ ಮಹಮ್ಮದ್ ಅಲಿ ಜಿನ್ನ ಅವರು ಒಂದು ಕೊಲೆ ಮೊಕದ್ದಮೆಯಲ್ಲಿ ಸಿಕ್ಕಿ ಬಿದ್ದ ತಮ್ಮ ಕುಳವನ್ನು 'It is unfortunate, my Lord, that my client got caught up in a group of people where there was a preparation for an attempt at murder' ಎಂದೊ ಏನೊ ವಾದಿಸಿ ಅವರನ್ನು ಬಿಡುಗಡೆ ಮಾಡಿಸಿದರಂತೆ. ನ್ಯಾಯಸ್ಥಾನಗಳಲ್ಲಿ ಕುಳವನ್ನು ಗೆಲ್ಲಿಸುವ ವಾದಗಳಂತೆ ಯುಕ್ತಿ, ವಾದ ಯಾವ ಸನ್ನಿವೇಶಕ್ಕೂ ನೆರವು ಕೊಡಬಲ್ಲದು. ಕೆದಕಿ ಎಲ್ಲವನ್ನೂ ಗೊಂದಲಕ್ಕೆ ಎಬ್ಬಿಸಬಲ್ಲದು, ವಿಕಾರಗೊಳಿಸಬಲ್ಲದು, ಬಚಾಯಿಸಬಲ್ಲದು. ಇನ್ನೊಂದು ವಿಶೇಷ ಸಂಗತಿ: ಯುಕ್ತಿ (Reason) ಬೇರೆ; ಕಾರಣ (Cause) ಬೇರೆ. ಒಂದು ಇನ್ನೊಂದೆಂದು ತೋರುವಂತೆ ಮಾತು ಬೆಳೆವುದುಂಟು. ಯಾವುದು ಪೂರ್ವಭಾವಿ ಸಂಗತಿಯಲ್ಲದಿದ್ದರೆ ಘಟನೆ ನಡೆಯದೊ ಚುರುಕಾಗಿ ಯಾವುದಿದ್ದರೆ ಮಾತ್ರ ನಡೆಯುತ್ತದೆಯೊ ಅದು ಕಾರಣ; ಪರ, ವಿರುದ್ಧ ಒದಗಿಸುವ ವಿವೇಚಿಸುವ ವಾದಭಾಗ ಯುಕ್ತಿ. ಜೊತೆಗೆ, ಈ ಪದಗಳನ್ನು ಹೇಗೆ ಅರ್ಥಮಾಡಲಿ ಇದು ಕಾರಣ, ಇದು ಯುಕ್ತಿ ಎಂದು ಹೇಳಿದ ಕಾರಣದಿಂದಲೇ ನುಡಿದುದೂ ಪರಿಸ್ಥಿತಿಯೂ ಸರಿಯೆಂದಾಗದು. ಒಳ್ಳೆಯದೂ ಆಗಬೇಕಿಲ್ಲ, ಸ್ವೀಕೃತವಾಗಬೇಕಾದ್ದೂ ಇಲ್ಲ.

## ಮೌಲ್ಯ

ಇಲ್ಲಿಗೆ ನಾವು ಸಾಮಾನ್ಯವಾಗಿ ಮೌಲ್ಯಗಳು, ಬೆಲೆಗಳು ಎಂಬ ರಂಗಕ್ಕೆ ಸ್ಪಷ್ಟವಾಗಿ ಬರುತ್ತೇವೆ. ಜನ ಇವಕ್ಕೆ ಒಲಿಯುತ್ತಾರೆ; ಅವುಗಳ ಸಾಧನೆಗಾಗಿ ನಿಲ್ಲುತ್ತಾರೆ. ಇವು ಅವರ ನಡವಳಿಕೆಗೆ ಉದ್ದೇಶಗಳನ್ನು ಕಲ್ಪಿಸುತ್ತವೆ. ಮೌಲ್ಯದ ಅಡಿಯಲ್ಲಿ ಅದಕ್ಕೆ ಕಾರಣವಾಗಿ ಒಬ್ಬ ವ್ಯಕ್ತಿಯ, ಒಂದು ಜನದ ಇಷ್ಟ ಆಕಾಂಕ್ಷೆ ಚರಿತ್ರೆ ಇರುತ್ತವೆ; ಒಂದು ಸಂಪ್ರದಾಯ, ಶಿಕ್ಷಣ ವಿಧಾನ, ರುಚಿ, ನಿರ್ಣಯಕ್ರಮ ಇರುತ್ತವೆ. ಈ ಎಲ್ಲ ಸಂಬಂಧಗಳಲ್ಲಿಯೂ ಕೀಳು ಮೇಲು ಎಂಬ ವಿವೇಚನೆ, ಗ್ರಾಹ್ಯ ಅಗ್ರಾಹ್ಯ ಎಂಬ ಭಾಗ ಉಂಟು. ಬೆಲೆಗಟ್ಟುವುದರಲ್ಲಿ ಏನೇನೊ ತತ್ವಗಳು ಸೇರಿಕೊಂಡಿರುತ್ತವೆ. ಈ ಬಗೆಗೆ ಪ್ರಪಂಚ ಬೆಳಸಿರುವ ಆಲೋಚನೆ, ತತ್ವ, ವಾದ, ವ್ಯಾಖ್ಯಾನ, ಅರ್ಥಕಲ್ಪನೆ-ಇವನ್ನು ಪರಿಶೀಲಿಸಿದ ಎಲ್ಲರಿಗೂ ಇದು ಎಂಥ ಕೆಸರು, ಸಿಕ್ಕು, ಗೋಜು ಎಂಬುದು ಗೊತ್ತಾಗುತ್ತದೆ. ಇಲ್ಲಿ ಸಮತೆ ಇಲ್ಲ, ಏಕರೂಪತೆ ಇಲ್ಲ. ಸಾರ್ವತ್ರಿಕವಾಗಿ ಸಲ್ಲುವುದೆಂಬ ನಿಯಮ, ನಿರ್ಬಂಧ, ಸಂಕೇತ ಇಲ್ಲ. ಬೇರೆ ಬೇರೆಯ ಜನ ಬೇರೆ ಬೇರೆ ನೆಲಸಿನಲ್ಲಿ ನಿಂತು ಬೆಲೆ ಪಕ್ಷಪಾತ ಕಟ್ಟುತ್ತಾರಾಗಿ ಎಷ್ಟು ಜನರಿದ್ದಾರೆಯೊ ಅಷ್ಟು ಎಣಿಕೆಗಳೂ ಬೆಲೆಗಾಣ್ಕೆಗಳೂ ಇರಬಲ್ಲವು. ಒಬ್ಬರು ಸರಿ ಎಂದುದನ್ನು ಇನ್ನೊಬ್ಬರು



ಅಲ್ಲವೆಂದಾರು. ಆಶೋತ್ತರಗಳು, ಪ್ರಯೋಜನಕಾಂಡ, ಕಳ್ಳತನ, ಸುಳ್ಳುತನ ಇಲ್ಲಿ ಬಹಳ. ಹೀಗೆ ನುಡಿದರೆ ನಡೆದರೆ, ತಮಗೆ ಸುರಕ್ಷತೆ ಅನುಕೂಲ ಅಲ್ಲವೆ? ಇದು ಶಕ್ತಿಮಾರ್ಗವೆ, ಅಲ್ಲವೆ; ಇಲ್ಲಿ ಲಾಭವೆ, ನಷ್ಟವೆ? ಎಂಬುದು ಎಣಿಕೆ. ನಾಲ್ಕು ಜನ ಏನೆಂದಾರು? ದೇವರು ಮೆಚ್ಚಬೇಡವೆ? ನನಗೇ ಸರಿ ಎನಿಸುತ್ತದೆಯೆ ಎಂಬುದು ಕೂಡ ಅಲ್ಲ. ನಮ್ಮ ಪಕ್ಷದ ಅಥವಾ ಸಂಸ್ಥೆಯ ಪ್ರಯೋಜನವೆ? - ಎಂಬ ಪರಿಗಣನೆ (Consideration) ಆದೀತು. ಯಾವ ಒಂದು ಸಂಬಂಧದಲ್ಲಿಯೂ ಜನ ಈ ಕಡೆ ಆ ಕಡೆ ನಿಂತು ಕಾಳಗ ಮಾಡುವರು; ಇದಕ್ಕೆ ಸಾಯಲು ಕೂಡ ಸೈ ಎಂಬ ಹಟ ರಾಗಾದಿ ಹಬ್ಬುತ್ತದೆ. ಇಲ್ಲಿ ಅತಿ ಪಂಥಗಳುಂಟು. ಮೃದು, ಸಾಧು ಪಂಥಗಳುಂಟು. ಗೆದ್ದವನು ಹೆಸರಿಗೆ ಗೆದ್ದಿರಬಹುದಾದರೂ ಅವನ ನಷ್ಟ ಅಪಾರವಾಗಿರಬಹುದು. ಗೆದ್ದವನು ಸೋತ, ಸೋತವನು ಸತ್ತ ಎಂಬ ಮಾತಿದೆ. ಅಥವಾ ಇಂದೇನೊ ಗೆದ್ದ, ನಾಳೆ? 'ಮುಂದಕ್ಕಿದೆ ಮುದುಕಿಯ ಹಬ್ಬ' ಎಂಬ ತೆಲಗು ಗಾದೆ ಉಂಟು. ಇನ್ನು ಕೆಲವರು ತಟಸ್ಥರು. ಅವರಿಗೆ ಯಾವ ಪಕ್ಷವೂ ಸರಿಯಲ್ಲ; ಒಪ್ಪರು. ಇಲ್ಲವೊ ಅವರು ಉದಾಸೀನರು. 'ನಮಗೆ ನಿಮ್ಮಗೊಡವೆ ಬೇಡ; ನಮ್ಮನ್ನು ನಮ್ಮಷ್ಟಕ್ಕೆ ಬಿಡಿ ಎಂಬ ಅಥವಾ "A plague on both your houses" ಎಂಬ ದುಃಸ್ಥಿತಿ; ಅಥವಾ, 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು' ಎಂಬ ಪರಿಸ್ಥಿತಿ ಬರಬಹುದು. ಕಾರಣ ಏನೇ ಇರಲಿ-ಇದು ಇಲ್ಲಿನ ಸ್ಥಿತಿಯ ದೌರ್ಬಲ್ಯ ಅಥವಾ ದೋಷ. ಇದರಲ್ಲಿ ವ್ಯಥೆ ತರುವ ಒಂದು ಅಂಶವೆಂದರೆ ಈ ಪ್ರತಿ ಒಬ್ಬರೂ ತಮ್ಮ ಮಾತು, ನಿಲವು, ನಡತೆ ಸರಿ, ನಿಜ, ಪ್ರಾಮಾಣಿಕ ಎಂದು ಸೆಡೆಯುತ್ತಾರೆ. ಪ್ರಾಮಾಣಿಕತೆ ಎಂಬುದು ಬಹು ದೊಡ್ಡ ಮೌಲ್ಯ. ಸತ್ಯಭಾಗ ಪ್ರಕೃತಿ; ಮೌಲ್ಯ ಸಂಸ್ಕೃತಿ.

## ಪ್ರಾಮಾಣಿಕತೆ

ಪ್ರಾಮಾಣಿಕ ಎಂಬ ಒಂದು ಕಾರಣ ಕೊಟ್ಟುದರಿಂದಲೇ ಯಾವುದನ್ನೂ ಸರಿ, ನಿಜ ಎನ್ನಲಾಗುವುದಿಲ್ಲ. ಜಟಿಲವಾದ ಒಂದು ಸನ್ನಿವೇಶದಲ್ಲಿ ಕೇವಲ ಪ್ರಾಮಾಣಿಕತೆ ಮುಖ್ಯಾಂಶವಾಗಬೇಕಾಗಿಯೂ ಇಲ್ಲ. ಏಕೆಂದರೆ ಪ್ರಾಮಾಣಿಕತೆ ಒಬ್ಬನ/ಳ ವಿಶ್ವಾಸದಲ್ಲಿ, ನಂಬಿಕೆಯಲ್ಲಿ ಅಥವಾ ಅವರ ಪ್ರಾಮಾಣಿಕತೆಯ ವಿಷಯದಲ್ಲಿ ಇತರರಿಗಿರುವ ವಿಶ್ವಾಸದಲ್ಲಿ ನೆಲಸಿದ್ದು. ಪ್ರಾಮಾಣಿಕನೆನ್ನುವವನು ನಿಜವಾಗಿ ಅಲ್ಲದಿರಬಹುದು. ಪ್ರಾಮಾಣಿಕತೆಗೂ ಅಪ್ರಾಮಾಣಿಕರಿಗೂ ವಿರೋಧ ಬಂದಾಗ ತೀರ್ಮಾನ ಕಷ್ಟವಲ್ಲ. ತಾವು ಕಡುಪ್ರಾಮಾಣಿಕರೆನ್ನುವ ಇಬ್ಬರ ನಡುವೆ ಬೆಳೆವ ವಿರೋಧ ಅತಿಕರ್ಕಶ, ದುರ್ಭರ, ವಿನಾಶವಾಗಬಲ್ಲದು. ನೆಹರೂ ಒಮ್ಮೆ: May I respectfully suggest to the House that all the troubles of the world are not due to the fact that sincere men are up against insincere people. They are due to the fact that sincere men are equally up against sincere men on the other side. They may be misled; they may be wrong or

right, but they are sincere in what they believe.... When sincere persons with a rigid attitude believe in it, then trouble and conflict come. That is the major trouble ಎಂದರು. [Parliament, Foreign Affairs Debate, 23-11-1960]

ಮನಃಸ್ಥಿತಿಯ ಪರಿಜ್ಞಾನದಲ್ಲಿ, ಕಲೆಯಲ್ಲಿ ಪ್ರಾಮಾಣಿಕ ಎಂಬುದಕ್ಕೂ ನೀತಿಯಲ್ಲಿ ಪ್ರಾಮಾಣಿಕ ಎಂಬುದಕ್ಕೂ ವ್ಯತ್ಯಾಸ ಉಂಟು. ಆಗಿನ ಮನಃಸ್ಥಿತಿಯ ನಿಜಚಿತ್ರವಾದರೆ ಆಯಿತು, ಪ್ರಾಮಾಣಿಕತೆ ಅಲ್ಲಿ. ನೀತಿಯ ಬೇಡಿಕೆ ಬೇರೆ. ಯಾವುದಾದರು ಒಂದು ಪರಿಸ್ಥಿತಿಯನ್ನು ಪರಿಶೀಲಿಸಬೇಕೆಂದಾಗ ಇಂಥ ಎಲ್ಲ ಸಂಗತಿಗಳೂ ದೃಷ್ಟಿ ಎಣಿಕೆಗಳೂ ಮೌಲ್ಯ ನಿರ್ದೇಶನಗಳೂ ಒಡ್ಡುತ್ತವೆ. ಅವನ್ನೆಲ್ಲ ಪರಾಂಬರಿಸಬೇಕು. ಅನೇಕರು ತಿಳಿದೊ ತಿಳಿಯದೆಯೊ ಪಕ್ಷಗಳನ್ನು ವಹಿಸುತ್ತೇವೆ. ನಮ್ಮಲ್ಲಿ ಪ್ರೀತಿ ಅಪ್ರೀತಿ ಭಾವ ಹುಟ್ಟಿಕೊಂಡು ಕಾರ್ಯಪ್ರವೃತ್ತಿ ಉಂಟುಮಾಡಿ, ಸತ್ಪರಿಣಾಮ ದುಷ್ಪರಿಣಾಮಗಳಿಗೆ ನಮ್ಮನ್ನು ನಡಸುತ್ತವೆ. ಆ ಎಲ್ಲ ಸಂಬಂಧಗಳಲ್ಲಿಯೂ ರಾಗದ್ವೇಷಗಳ ಒಂದು ಇತಿಹಾಸವೇ ನೆಲಸಿರುತ್ತದೆ. ಆಗ ನಾವು ಒಂದು ಕಡೆಗೆ ನ್ಯಾಯವಾದಿಗಳಾಗುತ್ತೇವೆ. ಎದುರು ಪಕ್ಷದ ನಿಲವು, ಮಾತು, ನಡತೆಯನ್ನು ಗಣನೆಗೆ ತಂದುಕೊಳ್ಳುವುದೇ ಇಲ್ಲ. ಅಂಥ ಒಂದು ನೆಲಸಿದೆ ಎಂಬುದನ್ನು ಕೂಡ ಒಪ್ಪೆವು. ಎದುರು ವಾದವನ್ನು ಅರ್ಥ ಮಾಡಿಕೊಳ್ಳೆವು. ಕಿವಿಗೆ ಹಾಕಿಕೊಳ್ಳಲೊಲ್ಲೆವು. ಅಷ್ಟು ಅಸಹನೆ. ಅಂಥಲ್ಲಿ ನ್ಯಾಯವಾದ ಯಾವ ತೀರ್ಮಾನಕ್ಕೂ ಬರಲಾರೆವು. ಭಾರತದ ಇಂದಿನ ಜೀವನದಲ್ಲಿ ನಿಜದ ಇಂಥ ಹಲವು ನೆಲಸುಗಳಿವೆಯೆಂಬುದನ್ನು ಅನೇಕರು ಸುಲಭವಾಗಿ ಒಪ್ಪರು. ಕಣ್ಣಪಟ್ಟಿ ಹಾಕಿಕೊಂಡು ನಡೆಯುವುದೇ ರೂಢಿ.

## ನಾಲ್ಕು ಕ್ರಿಯಾಪದಗಳು

ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಆಕಾಶವಾಣಿಯವರು ಒಂದು ವಿಚಾರ ಸಂಕಲನಕ್ಕೆಂದು ನಾಲ್ಕು ಭಾಷಣಗಳನ್ನು ಮಾಡಿಸಿದರು. “ಲೋಕವನ್ನು ಎದುರಿಸಿ ನಿಂತ ನಾಲ್ಕು ಕ್ರಿಯಾಪದಗಳು: ‘ಇದೆ’ (Is); ’ಮಾಡತಕ್ಕದ್ದು’, ‘ಕೂಡದು’ (Must); ‘ಇದು ಗಮ್ಯವಾಗಬೇಕು’ (Ought) ಮತ್ತು ‘ಶಕ್ಯ’ (Can)” - ಎಂಬುದು ವಿಷಯ. ಭಾಷಾ ಮಾಧ್ಯಮ ಇಂಗ್ಲಿಷ್. ಇಂಗ್ಲಿಷಲ್ಲಿ ಅವು ಕ್ರಿಯಾಪದಗಳೆಂಬುದು ಎದ್ದು ಕಾಣುತ್ತದೆ. ಸಾಮಾನ್ಯವಾಗಿ ಜನದ ಬದುಕಿನಲ್ಲಿ ಇದು ಪರಿಸ್ಥಿತಿ, ಇಷ್ಟೆಲ್ಲ ಸಂಬಂಧಿಸಿದ ಪ್ರಪಂಚ ಎಂಬುದು ಇರವಿನ ಲಕ್ಷಣವನ್ನು, ನೆಲಸನ್ನು ಕಾಣಿಸುತ್ತದೆ. ಇಂಗ್ಲಿಷಲ್ಲಿ ‘Is’ ಎಂಬುದಕ್ಕೆ 20-25 ಬೇರೆ ಬೇರೆ ಅರ್ಥವನ್ನು ನಿರ್ದೇಶಿಸುತ್ತಾರೆ. ಅದರ ಚರಿತ್ರೆಯನ್ನು ಬರೆಯಿರೆಂದು ಆನರ್ಸ್, ಎಂ.ಎ. ಪರೀಕ್ಷೆಗಳಲ್ಲಿ ಪ್ರಶ್ನೆ ಕೇಳುವುದುಂಟು. ‘ಇದೆ’ ಎಂಬುದನ್ನು ಬಳಸುವ ರೀತಿಗಳನ್ನು ಪಟ್ಟಿ ಮಾಡಿದರೆ ಅದೇ ವ್ಯಾಪ್ತಿ ಕನ್ನಡದಲ್ಲಿನ ಪದಕ್ಕೂ ಬರುತ್ತದೆ. ಈ ಉಪನ್ಯಾಸದ ಮೊದಲ ಭಾಗದಲ್ಲಿ ನಿಜಾಂಶ, ಸಂಗತಿಗಳು



ಎಂಬುದನ್ನು ಕುರಿತು ಏನೇನನ್ನು ತಿಳಿಸಿದೆನೊ-ಅದೆಲ್ಲಾ ಇಲ್ಲಿ ಅನ್ವಯಾಂಶ. ಇನ್ನೂ ಬೇರೆ ಉಂಟು. ಅದು ಹೀಗೆ ಇರುವುದರಿಂದಲೇ ಶಂಕರಾಚಾರ್ಯರೆಂದಂತೆ ಅದು ಲೋಕಸ್ವರೂಪವಾಗುತ್ತದೆ. ಉಳಿದ ಮೂರು ಕ್ರಿಯಾಪದಗಳಿಗೂ ಅದು ಕಾರ್ಯವ್ಯಾಪ್ತಿ ಕ್ಷೇತ್ರ. ಪ್ರಪಂಚ, ಜೀವನಸ್ಥಿತಿ ಹೀಗಿರುವಾಗ ಅದನ್ನೆಲ್ಲ ಪರ್ಯಾಲೋಚಿಸಿ, ಎಲ್ಲದರ ಪರಿಮಂಡಲಗಳನ್ನು ಗೊತ್ತುಮಾಡಿಕೊಂಡ ಮೇಲೆ ಮನುಷ್ಯನ ನಡತೆಯ ವಿಚಾರದಲ್ಲಿ ಕೆಲವು ನಿಯಮ, ನಿರ್ಬಂಧಗಳು ನಡೆಯುತ್ತವೆ. ಪ್ರತಿ ದೇಶದಲ್ಲಿಯೂ ಕಾಲದಲ್ಲಿಯೂ ಇದು ಕಂಡು ಬರುವುದು. ಅದು ಕಾನೂನಿನ ಪ್ರಪಂಚ; ವಿಧಿ ನಿಷೇಧ ರೂಪವಾದ್ದು. ರಾಜಕೀಯ ವಿಧಿ ನಿಷೇಧ ಇರಬಹುದು; ಸಮಾಜದ ಮತ್ತಿತರ ಸಂಸ್ಥೆಗಳಿಗೆ ಸಂಬಂಧಿಸಿದ ಮಾಡತಕ್ಕದ್ದು, ಕೂಡದು ಎಂಬ ವ್ಯವಹಾರವಿರಬಹುದು. ಎಲ್ಲಿನವರೆಗೂ ನಾವು ಪ್ರಜೆಗಳಾಗಿ, ಸಾಮಾಜಿಕರಾಗಿ, ಸದಸ್ಯರಾಗಿ ಇರುತ್ತೇವೊ ಅಲ್ಲಿನವರೆಗೆ ಅವಕ್ಕೆ ನಮ್ಮ ಮೇಲೆ ಅಧಿಕಾರವಿರುತ್ತದೆ. ಶಿಕ್ಷೆ ರಕ್ಷೆಗಳ ಲೋಕ ಅದು. ಅವುಗಳಿಂದ ತಪ್ಪಿಸಿಕೊಳ್ಳುವ ಹಾಗಿಲ್ಲ. ಇಂಥದರ ಸದಸ್ಯರು ನಾವು ಎಂದು ನಾವೇ ಒಪ್ಪಿರುವುದರಿಂದ ನಾವು ಅವಕ್ಕೆ ತಕ್ಕಂತೆ ನಡೆಯುತ್ತೇವೆ. ಆ ನಿಯಮ, ನಿರ್ಬಂಧ, ರೀತಿ ವಿಧಾನಗಳು ನಮ್ಮನ್ನು ತಮ್ಮ ಅಂಕೆಗೆ ಒಳಪಡಿಸಿಕೊಳ್ಳುತ್ತವೆ. ಅಂಥ ಸಮಾಜಕ್ಕೆ ಒಪ್ಪಿತವಾಗಿ ನಡೆದುಕೊಂಡರೆ ಪುರಸ್ಕಾರ, ಶಾಂತಿ, ಸಭ್ಯತೆ, ಪದವಿ, ಅಭಿಮಾನ, ಹತ್ತು ಜನದ ಸಾಹಚರ್ಯ ದೊರೆಯುತ್ತವೆ. ಇಲ್ಲವಾದರೆ ಆ ಸಮಾಜದಲ್ಲಿ ಸ್ಥಾನವಿಲ್ಲ; ಆಗ ಸಮಾಜಕ್ಕೆ ವ್ಯಕ್ತಿ ತ್ಯಾಜ್ಯನಾಗುತ್ತಾನೆ. ಪತಿತ, ಚ್ಯುತ, ಭ್ರಷ್ಟ ಎಂಬ ಮಾತುಗಳು ಇಂಥಲ್ಲಿ ಸಲುವಳಿಯಾಗುತ್ತವೆ. ಇವೊತ್ತು ಮೊದಲಿನಷ್ಟು ಇವಕ್ಕೆ ಬೆಲೆ ಇಲ್ಲವಾದರೂ ಮಠದವರು ಇಂಥವರಿಗೆ ಬಹಿಷ್ಕಾರ ಹಾಕಿದ್ದಾರೆ ಎಂಬ ಮಾತನ್ನು ಕೇಳಿರಬಹುದು. ಇಂಥವರನ್ನು ಕಾಂಗ್ರೆಸ್ ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕಿದೆ ಎಂದುದರಿಂದ ಈಚೆಗೆ ಎಷ್ಟು ಕ್ಲೇಶ, ಕಾರ್ಪಣ್ಯ, ಕ್ರೋಧಾವೇಶ ಬೆಳೆಯಿತೆಂಬುದು ಭಾರತ ಚರಿತ್ರೆಯಲ್ಲಿ ದಾರುಣ ವಾದ ಪರಿಣಾಮ ಉಂಟುಮಾಡಿತು. ರಾಜಕೀಯ ಮಂಡಲದಲ್ಲಿ ಯಾವುದನ್ನು ‘State’ ರಾಜ್ಯ, ಸಂಸ್ಥಾನ-ಎಂದು ಅಲ್ಲಿ ಪ್ರಜೆಗಳಾಗಿರಲು ಒಪ್ಪಿರುತ್ತೇವೆಯೊ-ಅಲ್ಲಿನ ನಿರ್ಬಂಧ ಹೆಚ್ಚು ಕಠಿಣವಾದುದು. ಬೇರಲ್ಲಿ ನಾವು ಸೇರಿಕೊಳ್ಳಲು ಬಿಡಲು ಧಾರಾಳವುಂಟು. ಒಪ್ಪಿದರೆ ಅಲ್ಲಿ ಸದಸ್ಯತ್ವ; ಇಲ್ಲವಾದರೆ ಬೇಡ, ಇಲ್ಲ. ರಾಜ್ಯದಲ್ಲಿ ಹಾಗಲ್ಲ. ರಾಜ್ಯಶಾಸನಕ್ಕೆ ಅಲ್ಲಿನ ಜನವರ್ಗವೆಲ್ಲ ಕಡ್ಡಾಯವಾಗಿ ಮಣಿಯಲೇ ಬೇಕು. ಉಳಿದ ಕಡೆಗಳಲ್ಲಿನ ವಿರಸಗಳನ್ನೊ ಆಕ್ಷೇಪಣೆಗಳನ್ನೊ ತೀರ್ಮಾನಗಳನ್ನೊ ಸರ್ಕಾರದ ಮೂಲಕ ತೀರ್ಮಾನ ಮಾಡಿಕೊಳ್ಳಬಹುದು. ಒಂದು ದೇಶದ ಸರ್ಕಾರದ ತೀರ್ಮಾನಗಳಿಂದ ಬಿಡುಗಡೆ ಎಂಬುದಿಲ್ಲ. ಅಲ್ಲಿ ಶಿಕ್ಷೆ, ರಕ್ಷೆ ಅನಿವಾರ್ಯ. ಇಲ್ಲವಾದರೆ ದೇಶ ಬಿಟ್ಟೇ ಹೋಗಬೇಕು. ದೇಶದಿಂದ ಗಡಿಪಾರಾದವರಿಗೆ ಜೀವರಕ್ಷಣೆ ಕೂಡ ದೊರಕದು. ಗಡಿ ಪಾರಾದವರು ಗಡಿಯೊಳಗೆ ಕಾಣಿಸಿಕೊಂಡರೆ ಅವರ ತಲೆ ತೆಗೆವರೆನ್ನುವರಿಂದಲೂ ಸರಕಾರದ ರಕ್ಷಣೆ ದೊರಕುವುದಿಲ್ಲ. ಬೇಕಾದ ದಂಡ ಹಾಕುವ, ಆಜೀವ ಸೆರೆಯಲ್ಲಿ ಹಾಕುವ, ಮರಣ

ದಂಡನೆಗೆ ಈಡುಮಾಡುವ-ಎಂದರೆ ಕೊಲ್ಲುವ - ಅಧಿಕಾರ ರಾಜ್ಯಕ್ಕೆ ಇರುತ್ತದೆ. ಅದರ ಪರಮಾಧಿಕಾರಮಂಡಲ ತೀರ್ಮಾನ ಮಾಡಿದಂತೆ ನಡೆಯಲೇಬೇಕು... ಆ ಶಾಸನಗಳಿಗೆ ಒಳಪಟ್ಟು ನಡೆದರೆ ಪ್ರಜಾತ್ತ್ವ ವ್ಯವಹಾರ ಜೀವನ, ರಾಜ್ಯದ ಅನುಕೂಲ ಅವಕಾಶ, ಹಕ್ಕು, ನೆರವು-ಎಲ್ಲ ಅಪ್ರತಿಹತವಾಗಿ ನಡೆಯುತ್ತವೆ. ಆ ರಾಜ್ಯದ ರಕ್ಷಣೆ ಹೊರಜೀವನದ ಸಮಸ್ತ ಅಂಶಗಳಿಗೂ ಅನ್ವಯವಾಗುತ್ತದೆ.

## Ought - Can

'Ought' ಎಂಬುದು ಧರ್ಮಾಧರ್ಮ ವಿವೇಕಕ್ಕೆ ಸಂಬಂಧಿಸಿದ್ದು. ಹೀಗೆ ಮಾಡುವುದು ಶ್ರೇಯಸ್ಕರ, ಉತ್ತಮ ಸಂಸ್ಕೃತಿಯ ಲಕ್ಷಣ, ಎಂಬ ನೀತಿಗೆ ಸಂಬಂಧಿಸಿದುದು ಧರ್ಮದ ಪ್ರಪಂಚ. ಆದರೆ ಅದರ ಯಾವ ಸನ್ನಿವೇಶದಲ್ಲಿಯೇ ಆಗಲಿ ಹೇಗೆಲ್ಲ ನಡೆದುಕೊಳ್ಳಲು ಸಾಧ್ಯವೊ ಹಾಗೆಲ್ಲ ನಡೆಯುವ ಅವಕಾಶವಾಗಲಿ, ಅನುಕೂಲವಾಗಲಿ, ಶಕ್ಯತೆಯಾಗಲಿ ಇರುವುದಿಲ್ಲ. ಹತ್ತು ರೀತಿಯಲ್ಲಿ ಶಕ್ಯ ಎನ್ನುವಾಗಲೂ ಹತ್ತನ್ನೂ ನಡಸುವುದಕ್ಕಾಗುವುದಿಲ್ಲ. ಎರಡನ್ನೊ ಮೂರನ್ನೊ ಮಾತ್ರ ಆ ಸನ್ನಿವೇಶದಲ್ಲಿ ನಡಸಲು ಅವಕಾಶ ತೆರೆದಿರಬಹುದು - ಪ್ರತಿಯೊಬ್ಬನಿಗೂ. ಇಂಗ್ಲಿಷಿನ ಒಂದು ಮಾತು ಹೇಳುವಂತೆ Limits of the Possible ಎಂಬುದು 'Can' ಭಾಗ. ಈ ಮಿತಿಗಳಲ್ಲಿ ವ್ಯವಹಾರ ಪ್ರಪಂಚದಲ್ಲಿ ಮನುಷ್ಯನ ಜೀವನ ನಡೆಯಬೇಕು. ಇದರ ಹಿಂದೆ, ಹೊರಗೆ, ಇದಕ್ಕೆ ಮೇಲ್ಪಟ್ಟು ನಿಂತ ಭಾಗ ಏಕಾಂತ, ಭಾವ ಪ್ರಪಂಚ; ಗಮ್ಯ ಅಧ್ಯಾತ್ಮಗಳ ಪ್ರಪಂಚ. ಅಪರೋಕ್ಷ ಅನುಭಾವ ಎಂಬವುಗಳದು. ಅದು ನೇರವಾಗಿ ಆಧಿಪತ್ಯ ಮಾಡದಿದ್ದರೂ ಹಿಂದೆ ನಿಂತು ಧಾತುವಾಗಿ ರಸವಾಗಿ ಜೀವನವನ್ನು ನಡಸುತ್ತದೆ. ಅದರ ಪ್ರಭಾವ ಪರೋಕ್ಷವಾಗಿ ಕ್ರಿಯಾಶಕ್ತಿಯಾಗಬಲ್ಲದು. ಸಾಮಾನ್ಯವಾಗಿ ದಿನದಿನದ ಎಣಿಕೆಯಲ್ಲಿ ಪ್ರಕಟವಾಗಿ ಕಾಣುವುದಿಲ್ಲ.

ಎಂದರೆ 'Is' ಎನ್ನುವುದು ಸದ್ಯದ ಜೀವನಸಮಸ್ತದ ನೆಲಸು; ಪರಿಸ್ಥಿತಿ, ಅದರ ಹಾಸುಹೊಕ್ಕು; ಎಲ್ಲವನ್ನೂ ಒಳಕೊಂಡದ್ದು. 'Must' ಎನ್ನುವುದು ಕಾನೂನು, ಶಾಸನ, ನಿಯಮ, ನಿರ್ಬಂಧಗಳ ಪ್ರಪಂಚ; 'Ought' ಧರ್ಮದ ಹೊಣೆಗಾರಿಕೆ. 'Can' ಏನು ಮಾತ್ರ ಸದ್ಯದಲ್ಲಿ ಶಕ್ಯ ಎಂಬುದು. 'Is' ಎಲ್ಲಾ Facts ಪ್ರಪಂಚ. ಯಾವ ಯಾವದನ್ನು ಸ್ವೀಕರಿಸುವುದೊ ಸ್ವೀಕರಿಸುವುದಿಲ್ಲವೊ-ಯಾವುದೆಲ್ಲಾ ಇದೆಯೊ ಇಲ್ಲ ವಾಗಿದೆಯೊ - ಏನಾದರೂ ಆಗಲು ಬಯಸುತ್ತದೆಯೊ-ಆ ಸಮಸ್ತವೂ ತಥ್ಯಾಂಶವೇ. ಯಾವುದೆಲ್ಲ ವ್ಯಕ್ತಪಡಬಲ್ಲದೊ, ವ್ಯಕ್ತಪಡಲು ಶಕ್ತವಾಗದೆ ಕ್ಲೇಶಕ್ಕೂ ತನಗಿಂತ ಪ್ರಬಲ ಶಕ್ತಿಗಳ ಪ್ರಭಾವಕ್ಕೂ ಸಿಕ್ಕಿ ಹೊಮ್ಮಲಾರದೆ ದುಮ್ಮಾನದಲ್ಲಿರುತ್ತದೆಯೊ, ಯಾವುದು ದರ್ಪದಿಂದ ತುಡುಕ ಬರುತ್ತದೆಯೊ ಅಥವಾ ಒಳ್ಳೆಯದಾಗಲಿ, ಕೆಟ್ಟದಾಗಲಿ ಇನ್ನೂ ದೂರದ ಅಶೋತ್ತರವೊ, ಅದೆಲ್ಲ ಸೇರಿರುವ ಭಾಗ. ಚುರುಕಾಗಿ ಕೆಲಸ ಮಾಡುತ್ತಿರುವ ಅಂಶಗಳು ಅಲ್ಲಿರಬಹುದು. ಸೃಜನಶೀಲವಾಗಿ ಸಾಹಸಪೂರ್ಣವಾಗಿ ಚೈತನ್ಯ ಪಡೆದ



ಪ್ರಭಾವ, ಶಕ್ತಿ ಕ್ರಿಯಾವಿಧಾನಗಳೂ ಆಗಿ ಹೇಗೆ ಹೊಮ್ಮುತ್ತವೆಯೊ ಹಾಗೆ ದಂಡಕ್ಕೂ ದ್ರೋಹಕ್ಕೂ ಇಂಬುಕೊಟ್ಟವೂ ಅಣಬೆಗಳಂತೆ ಪರಾವಲಂಬಿಯಾದವೂ ಸೇರುತ್ತವೆ. ಅಂಥವನ್ನು ಒಲ್ಲದವರು ಅವನ್ನು ಕುರಿತು ಕುಚೋದ್ಯ ಮಾಡುತ್ತಾರೆ, ಕೆಟ್ಟ ಹೆಸರುಗಳಿಟ್ಟು ಕರೆಯುತ್ತಾರೆ; ಪರವಾಗಿ ವಿರೋಧವಾಗಿ ನಿಂತು ಸುಖ, ದುಃಖ ಬೆಳಸುತ್ತಾರೆ.

ಹಾಗೆಯೇ ನೆನಪುಗಳು: ನಡೆದಿರುವ ಸಂಗತಿಗಳನ್ನು ಕುರಿತು, ಈವರೆಗೆ ನಡೆಯಲಾಗದವನ್ನು ಕುರಿತು; ಮನೆಗಳಲ್ಲಿ ಒಳಗೆ, ಸಮಾಜದಲ್ಲಿ, ಆರ್ಥಿಕ ಜೀವನದಲ್ಲಿ, ರಾಜಕೀಯ ಸಂಬಂಧಗಳಲ್ಲಿ ಏನೇನೊ ರೀತಿ ನಡೆದು ಭಂಗವನ್ನೂ ವಿಫಲತೆಗಳನ್ನೂ ಉಂಟುಮಾಡಿ, ಕೋಪಗಳನ್ನು ಹೊತ್ತಿಸಿ ಅಥವಾ ಮುಯ್ಯಿ ಕೇಳುವ ಪ್ರಸಂಗಗಳಾಗಿ ಉಳಿದುಕೊಂಡಿರುತ್ತವೆ. ಇವುಗಳ ಮುಳ್ಳು ಮುರಿಯುವುದೇ ಇಲ್ಲ. 'ಕರ್ಮಮೀಪರಿ ಮರಿಗೆ ಮರಿಯಿಕ್ಕುತಿರ್ಕುಂ' ಎಂಬ ಮಾತು ಪ್ರವೃದ್ಧವಾಗಿರುವ ಲೋಕ ಇದು. ಸಂತೋಷಗಳಲ್ಲಿಯೂ ಹಾಗೇ. ಇಲ್ಲಿ ಬಿಡು ಎಂಬುದಿಲ್ಲ; ಕಟ್ಟಿಕೊಳ್ಳುವುದೆಂಬುದಿಲ್ಲ. ಅಗತ್ಯ, ಉಪೇಕ್ಷೆ ಎರಡೂ ಎಣಿಕೆಗೆ ಬರುವಂಥವೇ. ಲೋಕ ಹುಟ್ಟಿದಾಗಿನಿಂದ ಲೋಕದ ಎಲ್ಲಾ ಗುಣಗಳೂ ಬೆಲೆಗಳೂ ಮರುಳೂ ಸತ್ಯ. ಸತ್ಯ ಎಂಬುದೂ ಬೆಲೆಯಾಗಬಲ್ಲದಾದರೂ ಬೆಲೆಗಿಂತ ವಿಸ್ತಾರವಾದ ಪರಿಮಂಡಲವುಳ್ಳದ್ದು ಸತ್ಯ. ಸತ್ ಎಂಬುದು ಲೋಕಸಮಸ್ತ.

## ಕಾಲದ ಪ್ರಭಾವ

ಕಾಲದೃಷ್ಟಿಯಿಂದಲೂ ಇದನ್ನು ನೋಡಬಹುದು. ಯಾವುದನ್ನು ನಾವು ಗತಕಾಲ ಎನ್ನುತ್ತೇವೊ ಆ ಕಾಲ ಇಂದಿನದನ್ನು ಈಗಿರುವಂತೆ ಮಾಡಿದೆ. ಇಂದಿನ ಶಕ್ತಿ ಅದರಿಂದಲೇ. ದೌರ್ಬಲ್ಯವೂ ಅದರಿಂದಲೇ. ನಮ್ಮ ಕ್ರಿಯಾ ದಕ್ಷತೆ ಮತ್ತು ಅದಕ್ಷತೆ ಎರಡಕ್ಕೂ ಅದೇ ಕಾರಣ. ಹಿಂದಿನ ಅನುಭವದ ಕಾರಣದಿಂದ ಕೆಲವನ್ನು ಯಾವ ರೀತಿ ಮಾಡಬೇಕಾಗಿದೆಯೊ ಹಾಗೆ ಮಾಡಲು ಅಥವಾ ಹಾಗೆ ಮಾಡದಿರಲು ಪ್ರಚೋದನೆ, ಸನ್ನಿವೇಶಕಲ್ಪನೆ ಆಗುತ್ತದೆ. ಇನ್ನೂ ಕೆಲವು ನಡೆದಿಲ್ಲ ಅಥವಾ ಈಗಿನ ನಡವಳಿಕೆ ನಡೆಯುತ್ತಿದೆ; ಫಲಾಫಲ ಹೇಗೊ ಅಥವಾ ಯಾವುದು ಹೇಗೆ ಎಂಬ ಸಂಗತಿ ಅಲ್ಪ ಪ್ರಮಾಣದಲ್ಲಿಯೂ ದೊಡ್ಡದಾಗಿಯೂ ಮನಸ್ಸುಗಳಲ್ಲಿ ಆಡಿ ಒಂದು ಯೋಜನೆಯಂತೆ ಏರ್ಪಡುತ್ತದೆ. ಚರ್ಚೆ ವಾದಗಳಿಗೆ ನಿರಂತರವಾಗಿ ಈಡಾಗಿ ತೀರ್ಮಾನವಾಗದೆ ಬಹುಕಾಲದಿಂದ ಉಳಿದುಕೊಂಡಿರುತ್ತದೆ. ಒಬ್ಬನೇ ವ್ಯಕ್ತಿ ಹಲವು ಪ್ರಕಾರದ ಬಗೆಗಳುಳ್ಳವನಾಗಿರುತ್ತಾನೆ. ಒಂದು ಮನಃಸ್ಥಿತಿಯಲ್ಲಿಯೇ ಹಲವಾರು ಪದರಗಳು, ನಿಲವುಗಳು ಇರಬಲ್ಲವು. ಶ್ರದ್ಧೆಯೊ ವಿಶ್ವಾಸಗಳೊ ದೃಢವಾಗಿ ಬಲಿತಿರುವುವು. ಇನ್ನು ಕೆಲವು ಕಡೆ ಗೊತ್ತಾಗಿ ತೀರ್ಮಾನವಾಗಲಿರುವುದು ಏನೆಂಬುದು ಸ್ಪಷ್ಟವಿರುವುದಿಲ್ಲ. ಪ್ರಜ್ಞೆಯ ಅನೇಕ ಮಟ್ಟಗಳಲ್ಲಿ ಪ್ರಯೋಜನದ ನಾನಾ ಹೊಲಬುಗಳಲ್ಲಿ ಮನಸ್ಸಿಗೆ ಒಪ್ಪಿತವಾಗುವ, ಆಗದ ನಾಲ್ಕಾರು ನಮೂನೆಗಳೂ ಪ್ರಭಾವಗಳೂ

ಸಂಗತಿಗಳೂ ನೆಲಸಿರುತ್ತವೆ. ಈ ಪ್ರತಿಯೊಂದಕ್ಕೂ ಯುಕ್ತಿ (Reason) ಉಂಟು. ಮನುಷ್ಯನ ಬುದ್ಧಿ ಎಂಥದಕ್ಕೂ ಯುಕ್ತಿ ಒದಗಿಸುತ್ತದೆ: ಸಾಯುವುದಕ್ಕೆ; ಸಾಯಿಸುವುದಕ್ಕೆ; ಅನಿಶ್ಚಿತವಾಗಿ ಉಳಿಸುವುದಕ್ಕೆ; ಖಚಿತಪಡಿಸುವುದಕ್ಕೆ; ಸತ್ಯವನ್ನು ಮರೆಮಾಡುವುದಕ್ಕೆ; ಅಸತ್ಯದ ಭ್ರಾಂತಿಗಳನ್ನು ತಿರಿಚುಗಳನ್ನು ಕವಿಸಿ ಅವುಗಳಿಂದ ಪ್ರಯೋಜನ ಪಡೆಯುವುದಕ್ಕೆ. ಅದೇ ಎಲ್ಲ. ಇದರಲ್ಲಿ ಸರಳತೆ, ಜಟಿಲತೆ ಕಾಣುವುದು; ಅಡಗಿರುವುದು; ಆಕಾಂಕ್ಷೆ, ತೋರಿಕೆ, ಕಪಟ, ಮರೆ, ತಂತ್ರ ಎಲ್ಲ ಸೇರಿರುತ್ತವೆ.

## ವ್ಯವಹಾರ ರಂಗದಲ್ಲಿ

ರಾಜಕೀಯ ರಂಗವನ್ನು ನೋಡಿದರೆ ಈ ಹಲವು ಬಗೆಯ ನೆಲಸು ಹೆಚ್ಚು ಸುಲಭವಾಗಿ ಕಂಡೀತು. ಒಂದು ಪಕ್ಷದ ನಡವಳಿಕೆ; ಒಂದು ರಾಜ್ಯದ ಅಧಿಕಾರಿಗಳು ನಡಸುವ ಧೋರಣೆ, ನೀತಿ; ಕಟ್ಟುವ ಒಂದು ಆಟ, ಪ್ರೋತ್ಸಾಹಿಸುವ ಒಂದು ಸಂಸ್ಥೆಯ ಅಥವಾ ವರ್ಗದ ಜನ-ಎಷ್ಟೊ ಅಂಶಗಳು ಸೇರಿಕೊಂಡಿರುತ್ತವೆ. ಇನ್ನೂ ಗೊತ್ತಾಗಿ ನಿರ್ಣಯವಾಗಬೇಕಾದ ಸಂಗತಿಗಳಿರುತ್ತವೆ; ಅವುಗಳಲ್ಲಿ ಮಟ್ಟಗಳಿರುತ್ತವೆ. ಇಸ್ರೇಯಲ್ ಅರಬ್‌ಲೀಗ್ ಪ್ರಸಂಗವನ್ನು ತೆಗೆದುಕೊಳ್ಳಲಿ, ನಮ್ಮ ಕಾಶ್ಮೀರ ಸಮಸ್ಯೆಯನ್ನು ತೆಗೆದುಕೊಳ್ಳಲಿ, ಆಗ್ನೇಯ ಏಷಿಯಾ ರಾಷ್ಟ್ರಗಳ ವಿರಸ ಜಟಿಲತೆಗಳನ್ನು ತೆಗೆದುಕೊಳ್ಳಲಿ-ಅಲ್ಲಿ ಕಾನೂನು ಕೌಲುಗಳ ಸಂಗತಿ, ಇತಿಹಾಸ ಸಂಬಂಧಗಳು, ರಾಜಕೀಯ ವಿರಸ, ಅಂತಾರಾಷ್ಟ್ರೀಯ ಪಕ್ಷಗಳು, ಪ್ರಯೋಜನಭಾಗ, ಸಿಕ್ಕು, ಸೈನ್ಯಶಕ್ತಿಗೆ ಸಂಬಂಧಿಸಿದವು, ಕ್ರಿಯಾತಂತ್ರ ಮುಂತಾದವು ಸೂಕ್ಷ್ಮವಾಗಿ ಪರಿಶೀಲಿಸಬೇಕಾದವು; ಪ್ರಕಟವಾಗಿ ಹೇಳಬಹುದಾದ್ದು, ಅಲ್ಲದ್ದು; ಆರ್ಥಿಕ ನೆಲಸಿನವು ಇನ್ನೂ ಏನೇನೊ ಇರುತ್ತವೆ. ಇವುಗಳಿಗೆಲ್ಲ ಒಪ್ಪುವ, ಒಪ್ಪದ ಜನರ ಒಲವು-ವೈರ, ಉದಾಸೀನ ಇರುತ್ತವೆ. ನೂರು ಜನ, ನೂರು ರೀತಿಯಲ್ಲಿ ನಿಜಸ್ಥಿತಿ ಅಲ್ಲಿ ಅಂಥದು, ಇಂಥದು, ಅಲ್ಲ ಎಂದು ಹೇಳುತ್ತಾರೆ. ಒಬ್ಬೊಬ್ಬರೂ ತಮ್ಮ ತಮ್ಮ ವಿಶ್ಲೇಷಣೆ ಮಾತ್ರ ಸರಿ ಎಂದು ಅಭಿಪ್ರಾಯಪಡುತ್ತ ಕಾರ್ಯಕ್ರಮಗಳಿಗೆ ಎಡೆಕೊಡುತ್ತಾರೆ, ಅಬ್ಬರಿಸುತ್ತಾರೆ, ಪ್ರಚಾರ ಮಾಡುತ್ತಾರೆ. ತುಂಬಾ ವಿಶ್ವಾಸಯೋಗ್ಯರಾದವರೂ ನಿಜ ಕಂಡವರೂ ತಮಗೆ ಏನೋ ಹೇಳಿದ್ದಾರೆ ಎಂಬುದಿರುತ್ತದೆ. ಆ ಒಡ್ಡು ತುಂಬ ಜಟಿಲವಾದ ಸನ್ನಿವೇಶ. ಹುಚ್ಚನ ಹುಚ್ಚು ಕಾಲ, ಮನಸ್ಸಿನ ಭ್ರಾಂತಿ ಕಲ್ಪನೆ, ತತ್ವ, ಧರ್ಮ ಎಂಬ ಹೆಸರಲ್ಲಿ ಅಂಧಶ್ರದ್ಧೆಯಿದ ನಡೆಯುವ ಜನರ ಆವೇಶ, ವಿಕಾರ, ನುಗ್ಗು, ಸುಳ್ಳು, ಆಷಾಢಭೂತಿತನ, ಸ್ವಪ್ರಯೋಜನಕ್ಕಾಗಿ ಇತರರನ್ನು ದುಡಿಸಿಕೊಳ್ಳುವ ಧೃಷ್ಟತೆ, ಮೃದುವಾಗಿ ಕಾರ್ಯವಿಧಾನಗಳನ್ನು ಏರ್ಪಡಿಸೋಣವೆಂದೇ ಬಯಸುವವರ ಚಿತ್ತವೃತ್ತಿ, ವಂಚನೆ ಧೂರ್ತತೆಗಳ ವಿಲಾಸ-ಎಲ್ಲವೂ ಕೆಲವಲ್ಲಿ ಅಂಗವಾಗುತ್ತದೆ. ಇಂಥದರ ನಡುವೆಯೇ ಎಲ್ಲರೂ ಬಾಳಬೇಕಿರುವುದು. ಗೆಲವನ್ನು ಸಾಧಿಸುವುದೊ ಮುರಿದು ಬೀಳುವುದೊ ಈ ನಡುವೆಯೇ.....



ಸುತ್ತಲಿನ ಆವರಣ ಕೆಲವರಿಗೆ ಸಹಾಯಕ; ಇತರರಿಗೆ ಅಡ್ಡಿ, ಆತಂಕ. ಬಹುಮಂದಿ ಅವರ ಇವರ ಹಿಂಬಾಲಕರು. ಹಲವೇಳೆ ಧರ್ಮಿಷ್ಠರೆನ್ನಿಸಿಕೊಂಡವರು ಮುರಿದು ಬೀಳುತ್ತಾರೆ. ದುಷ್ಟರಿಗೆ ಏಳಿಗೆಯ ಅವಕಾಶ ಸಿಕ್ಕುತ್ತದೆ. ಇದು ಮಿಶ್ರ, ಅತಿ ಸಂಕೀರ್ಣ ಪರಿಸ್ಥಿತಿ. ರಾಜಕೀಯವೆಂಬುದನ್ನೂ ಅಲ್ಲಿನ ಪ್ರಭಾವ ಮಂಡಲಗಳೆಂಬುದನ್ನೂ ನೋಡುವಾಗ ಅಲ್ಲಿ ಕಾಣುವುದೇನು? ಅಧಿಕಾರ, ಪ್ರಯೋಜನ, ಪ್ರೋತ್ಸಾಹಗಳ ಅವಕಾಶವನ್ನು ಮೆರೆಯುವ, ಮುರಿಯಲೆಳಸುವ ಒಂದು ವಿಧಾನ. ಇವರೆಲ್ಲರ ಉದ್ದೇಶವೂ ದೇಶದ ಹಿತವೇ; ಜನದ ಹಿತವೇ. ದೇಶದ ಹಿತವನ್ನು ಸಾಧಿಸುವುದಕ್ಕಾಗಿ ಅಲ್ಲವೆ ಎಲ್ಲ ಬಗೆಯ ರಾಜನೀತಿ, ದಂಡನೀತಿ, ಸೈನ್ಯನೀತಿ ಲೋಕ ಚರಿತ್ರೆಯಲ್ಲಿ ಒಡ್ಡಿರುವುದು? ಒಬ್ಬೊಬ್ಬರ ಮೂಲಪ್ರವೃತ್ತಿ ಒಂದು, ವಿಧಾನ ಒಂದು, ಕ್ರಿಯಾತಂತ್ರ ಒಂದು, ಬಳಸುವ ಸಾಧನಗಳ ಪ್ರಮಾಣ, ಲಕ್ಷಣ, ಶಕ್ತಿ, ವಿನಾಶಕತೆ ಒಂದೊಂದು ಬಗೆಯದು. ಇವುಗಳಲ್ಲಿ ಜನವರ್ಗ ಇದು ನ್ಯಾಯ, ಇದು ಸರಿ ಎಂದು ಅದಕ್ಕೆ ಕುಮ್ಮಕ್ಕು ಕೊಡುವವರಿರುತ್ತಾರೆ. ಇದು ಅನ್ಯಾಯ ಎನ್ನುವ ಜನರಿರುತ್ತಾರೆ. ಗಳಿಸಿದ ಲಾಭ ನಷ್ಟಗಳಿಗೆ ಅದೃಷ್ಟ, ವಿಧಿ, ಹಣೆಯಬರಹ, ಗ್ರಹಚಾರ, ಕರ್ಮ ಎಂದೆಲ್ಲ ಮುಂತಾಗಿ ಹೆಸರು ಕೊಡುವುದುಂಟು. ಇವುಗಳ ಫಲವಾಗಿ ಸಾವಿರಾರು ಜನಕ್ಕೆ ಅಸೂಯೆ, ದ್ವೇಷ ಒಂದು ಕಡೆಯಾದರೆ, ಇನ್ನೊಂದು ಕಡೆಗೆ ಉತ್ಸಾಹ, ಸಂಭ್ರಮ, ಹಿಗ್ಗು, ಯತ್ನ ಕಟ್ಟುತ್ತವೆ.

## ವ್ಯಕ್ತಿಗಳು

ಮನೆಗಳಲ್ಲಿ, ಸಮಾಜದಲ್ಲಿ ಇರುವ ವ್ಯಕ್ತಿಗಳೂ ಇಂತಹ ಎಲ್ಲಾ ಶಕ್ತಿ ಪ್ರಭಾವಗಳ ಕಾರ್ಯಕ್ಕೂ ಪರಿಣಾಮಗಳಿಗೂ ಒಳಗಾಗುತ್ತಾರೆ. ಯಾರು ಎಲ್ಲರಿಗಿಂತ ಹೆಚ್ಚು ಧಾರಾಳ ಸ್ವಾತಂತ್ರ್ಯಗಳನ್ನು ನಡಸುವರೊ-ಅವರು ಎಲ್ಲರಿಗಿಂತ ಹೆಚ್ಚಾಗಿ, ಎಲ್ಲರಿಗಿಂತ ಮೊದಲು ಒಳಪಡುತ್ತಾರೆ. ಯಾವುದಕ್ಕೂ ಸೇರದೆ ಆದದ್ದಾಗಲಿ ಎಂಬಂತೆ ನಡೆದು ಎಲ್ಲಕ್ಕೂ ಹೊಂದಿಕೊಳ್ಳುವ, ಒಗ್ಗುವ ಮನುಷ್ಯರು ಎಲ್ಲರಿಗಿಂತ ಹೆಚ್ಚು ಲಾಭ ಪಡೆಯಬಲ್ಲರು. ರಾಮನಿಗೂ ಒಳ್ಳೆಯದಾಗಲಿ, ರಾವಣನಿಗೂ ಒಳ್ಳೆಯದಾಗಲಿ, ಎಲ್ಲರಿಗಿಂತ ನನಗೆ ಹೆಚ್ಚು ಒಳ್ಳೆಯದಾಗಲಿ ಎಂಬ ವರ್ಗ ಇದು. ಇಂತಹ ಸನ್ನಿವೇಶವನ್ನು ಕೆಲವರು ಸಹಿಸರು. ಪ್ರತಿಭಟಿಸಿ ನಿಲ್ಲುತ್ತಾರೆ; ಅಂಥದನ್ನು ಮುರಿಯುತ್ತಾರೆ; ಅಥವಾ, ಆ ಯತ್ನದಲ್ಲಿ ಮುರಿದು ಬೀಳುತ್ತಾರೆ. ಹೇಗೇ ಆಗಲಿ, ಈ ಜೀವನರಂಗವೆಲ್ಲಾ ಇರುವ ಸ್ಥಿತಿಯನ್ನು ಕುರಿತದ್ದು ಸತ್ಯಸಂಗತಿಗಳು (Facts).

## ಸುಧಾರಣೆ

ಇನ್ನೊಂದು ದೃಷ್ಟಿಯಿಂದ ಇದನ್ನು ನೋಡಬಹುದು: ಎಲ್ಲವನ್ನೂ ಉಳಿಸುವುದು ಕಷ್ಟವಾಗಬಹುದು. ಅದು ಸವೆದೊ ಹಳಸಿಯೊ ಕೊಳೆತೊ ಇರುವುದರಿಂದ: ಅದರಿಂದ ಒಳ್ಳೆಯದಕ್ಕಿಂತ ಕೆಟ್ಟದ್ದು ಹೆಚ್ಚಾಗಿರುವುದರಿಂದ. ಇರುವುದರಲ್ಲಿ ಯಾವುದನ್ನು ಉಳಿಸಿ

ಕಾಪಾಡಬೇಕು, ಮುಂದುವರಿಸಿಕೊಂಡು ಹೋಗಬೇಕು; ಯಾವುದನ್ನು ಸುಧಾರಿಸಬೇಕಾಗಿದೆ; ಇನ್ನಾವುದನ್ನು ಗುಡಿಸಿ ಹಾಕಬೇಕು-ಎಂಬ ಸಂಗತಿ ಅದು. ಗುಡಿಸಿ ಹಾಕಬೇಕಾದುದು-ಈಗ ಅಗತ್ಯವಿಲ್ಲವಾಗಿ, ಶಕ್ತಿಯಲ್ಲಿಯೊ ಗುಣದಲ್ಲಿಯೊ ಕಂದಿದೆ, ಕುಂದಿದೆ ಅಥವಾ ಕೆಲವು ಅಪಾಯಕರ, ಅನಪೇಕ್ಷ, ಅನ್ಯಾಯ-ಎಂದಾಗ ಮೌಲ್ಯಗಳ ಇನ್ನೊಂದಂಶ ಕಣ್ಣಿಗೆ ಬೀಳುತ್ತದೆ. ಇಂಗ್ಲಂಡಲ್ಲಿ 16 ನೆಯ ಶತಮಾನದ ಮೊದಮೊದಲಲ್ಲಿ ಹೆನ್ರಿ VIII ಎಂಬ ಅರಸನು ಇಚ್ಛೆ ಬಂದಂತೆ ದರ್ಪದಿಂದ ಆಳಿದ. ಹಲವು ಹೆಂಡಿರನ್ನು ಕೊಲ್ಲಿಸಿದ; ಮಂತ್ರಿಗಳನ್ನು ಕೊಲ್ಲಿಸಿದ. ಅವನ ನಚ್ಚಿನ ಮಂತ್ರಿಯೊಬ್ಬ ವುಲ್‌ಸೇ (Wolsey) ಎಂಬವನು. ಮಂತ್ರಣ ನಡೆಯುವವರೆಗೂ ರಾಜನಿಗೆ ಆಪ್ತನಾಗಿದ್ದ. ಒಮ್ಮೆ ರಾಜ ಮಂತ್ರಿಯನ್ನು ಕೇಳಿದನಂತೆ: "ಪಾರ್ಲಿಮೆಂಟ್ ಸಭೆಯಲ್ಲಿ ಮತಧರ್ಮವನ್ನು ಕುರಿತು ಸುಧಾರಣೆಗಳನ್ನು ತರಬೇಕೆಂದಿದ್ದಾರೆ, ಕೇಳಿದೆಯ? ಆ ಬಗೆಗೆ ನಿನ್ನ ಅಭಿಪ್ರಾಯವೇನು" ಎಂದು. ಅದಕ್ಕೆ ವುಲ್‌ಸೇ "ಮಹಾಸ್ವಾಮಿ, ಮತಧರ್ಮದಲ್ಲಿ ಸುಧಾರಿತವಾಗಬೇಕಾದದ್ದು ಬೇಕಾದಷ್ಟಿದೆ. ಆದರೆ ಸುಧಾರಿಸುತ್ತೇವೆಂದು ಒಮ್ಮೆ ತೊಡಗಿದರೆ ಮತಧರ್ಮದಲ್ಲಿ ಉಳಿಯುವುದು ಅತ್ಯಲ್ಪ" ಎಂದು ಉತ್ತರ ಕೊಟ್ಟನಂತೆ. 300-400 ವರ್ಷ ಕಳೆದ ಮೇಲೂ ಪರಿಸ್ಥಿತಿ ಅದೇ. ಅಲ್ಲಿ, ಇಲ್ಲಿ, ಎಲ್ಲೆಲ್ಲಿಯೂ.

## ಬೆಲೆ ಎಣಿಕೆ

ಯಾವುದರಲ್ಲಿ ಜನ ಆಸಕ್ತರಾಗಿದ್ದಾರೆಯೊ ಯಾವುದನ್ನು ಬಯಸುತ್ತಾರೆಯೊ ಜೀವನದಲ್ಲಿ ಪುರುಷಾರ್ಥವಾಗಿ ಎಣಿಸುತ್ತಾರೆಯೊ ಆ ಎಲ್ಲಕ್ಕೂ ಬೆಲೆ ಉಂಟು. ಅದಕ್ಕಾಗಿ ಬೆಲೆ ತೆರಲು ಅವರು ಸಿದ್ಧರಾಗಿರುತ್ತಾರೆ; ಎಷ್ಟು ಬೆಲೆ ಎಂದರೆ ಅಷ್ಟನ್ನು ಕೊಟ್ಟು. ಅವು ದೊರೆಯದಿದ್ದರೆ ಅವರಿಗೆ ಲೋಪ, ನ್ಯೂನತೆ, ಹೀನಾಯ. ಅದಕ್ಕಾಗಿ ಎಷ್ಟಾದರೂ ಕಷ್ಟ, ನಷ್ಟ ಪಟ್ಟಾರು; ನೊಂದಾರು, ಕುದಿದಾರು... ಇಂಥವುಗಳಲ್ಲಿ ಕೆಲವು ಸರಳ; ಸಾಮಾನ್ಯವಾದ ದಿನನಿತ್ಯದ ಅಗತ್ಯಗಳು. ತಮಗೂ ತಮಗೆ ಹತ್ತಿರದ ಮತ್ತು ಪ್ರಿಯರಾದ ಜನಕ್ಕೂ ಒಂದು ಸುರಕ್ಷಣೆ, ಶಾಂತಿ, ನೆಮ್ಮದಿ ದೊರಕಿಸುವಂತೆ. ಬದುಕಿರುವವರೆಗೂ ತಮಗೆ ಸುಸೂತ್ರ ಜೀವನ ನಡೆವಂತೆ, ಸುಖ ಸಂತೋಷ ನಡೆವಂತೆ ಏರ್ಪಾಡು ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ತಕ್ಕಷ್ಟು ಹಣ, ಶಕ್ತಿ, ಯತ್ನಗಳನ್ನು ಒದಗಿಸಬೇಕು; ಸಾಧನಗಳನ್ನು ಬೆಳಸಿ ಇಷ್ಟಾರ್ಥಗಳನ್ನು ದೊರಕಿಸಿಕೊಳ್ಳಬೇಕು; ಸಂಪತ್ತಿಯೊ ಯಂತ್ರತಂತ್ರವೊ ವಿದ್ಯೆಯೊ ಚಾತುರ್ಯವೊ ಹೂಡಬೇಕು; ಅದಕ್ಕೆ ಕ್ರಿಯಾತಂತ್ರವನ್ನು ಯಂತ್ರಸಜ್ಜನ್ನು ಒದಗಿಸಬಹುದು. ಅದೃಷ್ಟ ಚೆನ್ನಾಗಿದ್ದರೆ ಬಯಸಿದ ಫಲಸಂಪತ್ತಿ ಬೇಕಾದಷ್ಟಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗಳಿಕೆಯಾಗಬಹುದು.

ಬಯಸುವುದು ಎಂದರೆ ಫಲಾಪೇಕ್ಷೆ; ಅಥವಾ, ಒಂದು ಪದವಿ. ಅದರಿಂದ ಉಂಟಾಗುವ ಸಂತೋಷ ನಿರ್ದಿಷ್ಟವಾದುದು. ಯಾವುದಕ್ಕಾಗಿ ಬಯಸುತ್ತೇವೊ ಅದು



ಮೌಲ್ಯ. ಸ್ವಂತಕ್ಕೇ ತನ್ನ ಮನೆಗೆ ಪ್ರಯೋಜನ ಆಗದಿರಬಹುದು; ಆಗಬಹುದು. ಸಂಘಸಂಸ್ಥೆಗಳಿಗಾಗಿ, ನಾಡಿಗಾಗಿ, ಧರ್ಮಕ್ಕಾಗಿ, ಒಂದು ತತ್ವಕ್ಕಾಗಿ ಆಗಬಹುದು. ಇಂಥ ಸಂದರ್ಭಗಳಲ್ಲಿ ಸ್ವಾರ್ಥ ನಿರಪೇಕ್ಷತೆ ಒಂದು ದೊಡ್ಡ ಬೆಲೆಯಾಗುತ್ತದೆ. ಇಂಥಲ್ಲಿ ಒಂದು ಅಪಾಯ ಸನ್ನಿವೇಶವೂ ಉಂಟು: ವ್ಯಕ್ತಿಯ ಅಥವಾ ಸಂಸ್ಥೆಯ ಅಭಿಮಾನ ಅಹಂಕಾರವಾಗಿ ಬಲಿತು ತಾನು ಧರ್ಮಿಷ್ಠನೆಂಬ ಜಂಬ, ಜಡತೆ ಬರಬಹುದು. ಅಥವಾ ಉಳಿದ ಎಲ್ಲವನ್ನೂ ಇದರ ಸಾಧನೆಗಾಗಿ ದುಡಿಸಿಕೊಳ್ಳಬೇಕೆಂದೂ ಈ ಮಾರ್ಗಕ್ಕೆ ತಿರುಗಿಸಿಕೊಳ್ಳಬೇಕೆಂದೂ ಅತಿಶ್ರದ್ಧೆ, ಆವೇಶ ಉಂಟಾಗಬಹುದು. ಮತದಲ್ಲಿ, ಸುಧಾರಣೆಯ ಚಳವಳಿಗಳಲ್ಲಿ, 'ಹೊಸದರ್ಶನ'ವೆಂಬ ಉತ್ಸಾಹದಲ್ಲಿ, ಪಕ್ಷ ಪ್ರಯೋಜನಗಳನ್ನು ಸಾಧಿಸುವ ಹುರುಪಿನಲ್ಲಿ ಇದು ಸಾಮಾನ್ಯ. ಯಾವುದಕ್ಕೂ ಅಂಟಿಕೊಳ್ಳದೆ 'ಪದ್ಮಪತ್ರಮಿವಾಂಭಸಂ' ಎಂದಿರಬಹುದು. ಅದರ ಅರ್ಥವನ್ನು ಸಂಕೋಚಗೊಳಿಸಿಕೊಂಡರೆ, ಇಲ್ಲಿನ ಅನಾಸಕ್ತಿ ಒಳ್ಳೆಯದೊ, ಕೆಟ್ಟದೊ ಎಂದು ಎರಡರ ಕಡೆಗೂ ಮನಸ್ಸು ಘನಿಸುವಂತೆ ಮಾಡುತ್ತದೆ. ಕೆಲವು ಸಂದರ್ಭಗಳಲ್ಲಿ Either/Or- ಎಂದರೆ ಇದೊ ಅದೊ, ಮಾತ್ರ; ಎರಡೂ ಶಕ್ಯವಿಲ್ಲ- ಎಂಬ ಸನ್ನಿವೇಶ ಹುಟ್ಟಿಕೊಳ್ಳುವಾಗ? ಎರಡೂ ಕಡೆ ಉಗ್ರತೆ, ಕಾರ್ಪಣ್ಯ, ಆವೇಶ ಹುಟ್ಟಿ ಬದುಕಿಗೆ ಕಾವೇರಿಸುತ್ತದೆ. Both/And - ಎರಡೂ ಬೇಕು ಎಂಬುದು ಇನ್ನೊಂದು ಲೆಕ್ಕ. ಇಹ ಪರ ಎರಡರದೂ ಗಳಿಕೆ-All this and Heaven too ಎಂಬುದುಂಟು. 'ಉದಾಸೀನವದಾಸೀನಃ' ಎಂಬ ಮಾತು ಸುಲಭವಾಗಿ, 'ಮಮ ಕಿಂಚಿನ್ನದಹ್ಯತಿ' ಎಂಬ ವಾಕ್ಯದಂತಾಗಿ, 'ಉರಿವುದು ಉರಿಯಲೇಳು ನನಗೇನು ಅದರಿಂದ?' ಎಂಬ ದೃಷ್ಟಿಗೆ, ರೀತಿಗೆ ಅವಕಾಶ ಕೊಡಬಲ್ಲದು.

## ಮೇಲು ಬೀಳು

ಮೌಲ್ಯಗಳಲ್ಲಿ ಒಂದು ತಾರತಮ್ಯ ಅಥವಾ ಮಹಡಿಯ ಮೆಟ್ಟಲುಗಳಂತಹ ಸೋಪಾನ ಪಂಕ್ತಿ ಇರುತ್ತದೆ. ಇದನ್ನು ನಿರ್ಣೈಸುವ ತತ್ವಗಳೂ ವಾದಗಳೂ ಎಣಿಕೆಗಳೂ ಹಲವು. ಒಂದೊಂದು ದೇಶದಲ್ಲಿ, ಒಂದೊಂದು ಕಾಲದಲ್ಲಿ, ಒಬ್ಬೊಬ್ಬನಲ್ಲಿಯೇ ಬೇರೆ ಬೇರೆ ಕಾಲಗಳಲ್ಲಿ ಇದು ಗಣನೆಗೆ ಬರುತ್ತದೆ. ಇವು ಯಾವುವೆಂದು ನಿರ್ಣಯಿಸುವಾಗ ಯಾವುದಕ್ಕೆ ಹೆಚ್ಚು ಪ್ರಾಧಾನ್ಯ ಕೊಡುತ್ತಿದ್ದೇವೆ, ಏಕೆ ಎನ್ನುವುದರ ವಿಚಾರ ಹುಟ್ಟುತ್ತದೆ. ಮೇಲು ಬೀಳು, ಗ್ರಾಹ್ಯ ಅಗ್ರಾಹ್ಯ ಎಂಬ ಆಲೋಚನೆ ಬರುತ್ತದೆ. ಯಾವುದು ಹೆಚ್ಚು ತ್ವರೆಯಿಂದ ಮೊದಲು ಮಾಡಬೇಕಾದುದು, ಯಾವುದರ ಅಗತ್ಯ ತಡೆಯಬಲ್ಲದು ಎಂಬುದರ ವಿವೇಚನೆ ಬರುತ್ತದೆ ಅತಿ ಸುಲಭವಲ್ಲದ ಸನ್ನಿವೇಶಗಳಲ್ಲಿ. ಉದಾ: ತಾಯಿ ಬೇಕೆ, ಮಗು ಬೇಕೆ? ಎಂದು ಕೇಳುವುದುಂಟು ಆಸ್ಪತ್ರೆಗಳಲ್ಲಿ. ಕೆಲವು ಪ್ರಯೋಜನಗಳಿಗಾಗಿ ನಾವು ಸಾಯಲು ಸಿದ್ಧರಿರುತ್ತೇವೆ. ಅವುಗಳ ಸಾಧನೆಗಾಗಿ ಎಷ್ಟನ್ನೊ ಬಲಿಕೊಡಲು ಒಂದು ಜೀವವನ್ನೇ ಅರ್ಪಿಸಲು ಸಿದ್ಧರಿರುತ್ತೇವೆ. ರಾಮ,

ಹರಿಶ್ಚಂದ್ರ, ಯುಧಿಷ್ಠಿರ, ಜೋಬ್-ಮುಂತಾದವರ ಜೀವನದ ಉದಾಹರಣೆಗಳನ್ನು ತೆಗೆದುಕೊಳ್ಳಬಹುದು. ಒಂದು ಗಮ್ಯವನ್ನು ಸಾಧಿಸುವುದಕ್ಕಾಗಿ ವ್ರತನಿಷ್ಠೆಯಿಂದ ಉಳಿದ ಎಲ್ಲವನ್ನೂ ಬಿಟ್ಟುಕೊಟ್ಟು ಅದಕ್ಕಾಗಿ ಬದುಕುತ್ತೇವೆ ಎಂಬಂಥದು ಬದುಕಿನ ಇತರ ಸಮಸ್ತವನ್ನೂ ತಿರಿಚುವ, ನಿರ್ಬಂಧಿಸುವ ಪ್ರಭಾವವಾಗುತ್ತದೆ.

ಕ್ಷತ್ರಿಯೈರ್ಧಾರ್ಯತೇ ಚಾಪಂ ನಾರ್ತಶಬ್ದೋ ಭವೇದಿತಿ
ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್
ನತು ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ
ತದವಶ್ಯಂ ಮಯಾ ಕಾರ್ಯಂ ಋಷೀಣಾಂ ಪರಿಪಾಲನಂ
ಅನುಕ್ತೇನಾಪಿ ವೈದೇಹಿ ಪ್ರತಿಜ್ಞಾಯ ತು ಕಿಂ ಪುನಃ-

ಎಂದನಲ್ಲವೆ ರಾಮ? ದೇಶಕ್ಕೆ ಸ್ವಾತಂತ್ರ್ಯ ಸಾಧಿಸುವ ಸಂಬಂಧದಲ್ಲಿ ಇಂಥದು ಎಷ್ಟು ನಡೆಯಿತು ಎಂಬುದನ್ನು ದೇಶವೆಲ್ಲ ಬಲ್ಲುದು. ಇಲ್ಲಿ ಬದುಕು ಯಾವ ಅತಿಗಾದರೂ ಹೋಗಲು ಸಿದ್ಧವಾಗಿರುತ್ತದೆ. 'ನನಗೆ ಸಂದೇಹವುಂಟಾಗಿದೆ, ಗಾಡಿಯನ್ನು ನೀನು ಪರೀಕ್ಷಿಸಿದ್ದರೆ ಸಾಲದು, ನಾನೂ ಪರೀಕ್ಷಿಸಬೇಕು' ಎಂದು 'ಮೃಚ್ಛಕಟಿಕ' ನಾಟಕದಲ್ಲಿ ವೀರಕ ಚಂದನಕರಿಗೆ ವಾಗ್ವಾದ ಬಂದು 'ನನ್ನ ಕರ್ತವ್ಯ ನಿರ್ವಹಣದಲ್ಲಿ, ಧರ್ಮದಲ್ಲಿ ನನ್ನ ತಂದೆಯನ್ನು ಕೂಡ ನಾನು ಲಕ್ಷ್ಯಮಾಡುವುದಿಲ್ಲ' ಎಂಬ ಒಂದು ಮಾತು ಏಳುತ್ತದೆ. ಇಂಥ ಒಂದು ಶೀಲದ, ನಿಷ್ಠೆಯ ಸಂಗತಿ ಬದುಕನ್ನು ನಡಸುತ್ತದೆ.

ಯಾವುದು ಯಾವ ಸಮಯದಲ್ಲಿ ಪ್ರಧಾನ ಎಂದು ವ್ಯಕ್ತಿ ಎಣಿಸುತ್ತಾನೊ ಅದಕ್ಕಾಗಿ ಅವನು ಸರ್ವಥಾ ದುಡಿಯಲು ಬಯಸುತ್ತಾನೆ. ಆ ಮೌಲ್ಯ ಅವನಿಗೆ ಆದ್ಯ, ಅತ್ಯಧಿಕ. ಪುರುಷಾರ್ಥಗಳು ಯಾವುವು, ಸಾಧನ ಉಪಾಯ ಯಾವುವು ಎಂಬುದು ಇಲ್ಲಿ ವಿಶೇಷವಾಗಿ ಪರ್ಯಾಲೋಚನೆಗೆ ಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಚಿಂತನ, ಭಾವ, ಪ್ರಯತ್ನ, ವಿವೇಚನೆ ಅನಂತವಾಗಿ ಕಟ್ಟಿ ನಿಲ್ಲುತ್ತವೆ.

### ತ್ಯಾಗಿ ಹುತಾತ್ಮ

ಎಲ್ಲ ಜನರೂ ಸುಖ ಬಯಸುತ್ತಾರೆ, ದುಃಖ ಬೇಡ ಎನ್ನುತ್ತಾರೆ ಎಂಬ ಮಾತುಂಟು. ಅದೂ ಬೆಲೆವಿವೇಚನೆಯೇ. ಆದರೆ ಅನೇಕ ಸಂದರ್ಭಗಳಲ್ಲಿ ಸುಖ ಸಂತೋಷ ಲಾಭಗಳೇ ಬದುಕಿನ, ಕಾರ್ಯದ ಗುರಿಯಾಗುವುದಿಲ್ಲ. ಸಾಧನೆಗಾಗಿ ಪಡುವ ಕಷ್ಟವೂ ನಷ್ಟವೂ ಅದನ್ನು ಕೈಕೊಂಡವನಿಗೆ ತೃಪ್ತಿಯನ್ನು ತರುತ್ತವೆ. ಯಾವ ನಡತೆಯನ್ನು ಜನ ಆರಿಸಿಕೊಳ್ಳುತ್ತಾರೊ ಅದು ಒಂದು ರಾಗಭರ (Passion) ವಾಗುತ್ತದೆ. ಸ್ವಾತಂತ್ರ್ಯ ಚಳವಳಿ ನಡೆಯುತ್ತಿದ್ದಾಗ ಸರಕಾರದ ಅಧಿಕಾರಿ ಒಬ್ಬರ ಮಗ ಚಳವಳಿಗೆ ನಾಯಕನಾಗಿದ್ದ. ಸರಕಾರ ಆ ಅಧಿಕಾರಿಯ ಮೇಲೆ ಒತ್ತಾಯ



ಹಾಕಿತು-ಮಗನನ್ನು ಅಲ್ಲಿಂದ ತಿರುಗಿಸುವ ಪ್ರಯತ್ನ ಮಾಡಿ ಎಂದು. ತಾಯಲ್ಲಿ ತಂದೆ ಈ ಸುದ್ದಿಯನ್ನು ತಿಳಿಸಿದರು. ಆಕೆ ಹೇಳಿದರು: "ಮಗು ತನಗೆ ಪ್ರಿಯ, ಸರಿ ಎಂಬುದನ್ನು ಆಯ್ದುಕೊಂಡಿದ್ದಾನೆ. ಅದಕ್ಕಾಗಿ ಕಷ್ಟ ಅನುಭವಿಸಲು ತೀರ್ಮಾನಿಸಿದ್ದಾನೆ. ಅವನನ್ನು ಪೀಡಿಸುವುದು ಬೇಡ. ಬೇಕಾದರೆ ನೀವೂ ಚಳವಳಿಗೆ ಸೇರಬಹುದು. ಹೇಗೊ ಇರುವ ಅಲ್ಲದರಲ್ಲಿ ನಾನು ಸಂಸಾರವನ್ನು ತೂಗಿಸಿಕೊಳ್ಳುತ್ತೇನೆ" ಎಂದರು. ನಿಜವಾಗಿ ವೀರಕಥೆ ಇದು. ಒಂದೊಂದು ಕಾಲದಲ್ಲಿ ಒಂದೊಂದು ರೀತಿ ವೀರವರ್ತನೆ ಕಾಣುತ್ತದೆ. ಈ ತಾಯಿಯ ವೀರ ಇತರ ಯಾವ ಉಗ್ರ ರೀತಿಗಳಿಗೂ ಕಡಮೆಯದಲ್ಲ. 'ಹುತಾತ್ಮತೆ' ಎಂಬ ಒಂದು ಮಾತುಂಟು. ಅಲ್ಲಿ ಸಾಧು ರೀತಿ, ಗಮ್ಯ ಉಂಟು. ಉಗ್ರ, ಹಿಂಸ್ರ ಉಂಟು. ಯಾವುದೊ ಒಂದು ಉದ್ದೇಶ ಸಾಧನೆಗಾಗಿ ಜೀವವನ್ನು ತೆರಲು ಸಿದ್ಧವಾಗಿರುವುದು ಎರಡೂ ಕಡೆಯ ಲಕ್ಷಣ. ತಾವಾಗಿ ಒಪ್ಪಿಕೊಂಡದ್ದೊ ಕಾಲದ ಅಥವಾ ಸನ್ನಿವೇಶದ ಪರಿಣಾಮವಾಗಿ ಯಾರ ಮೇಲೆ ಹೊತ್ತ ಕರ್ತವ್ಯವೊ ಈ ಪರಾಕಾಷ್ಠೆಗೆ ಮನುಷ್ಯರನ್ನು ನಡಸುತ್ತದೆ.

ಇಲ್ಲಿ ಬಗೆಗಳು ಬೇರೆ ಬೇರೆ, ರೀತಿ ವಿಧಾನಗಳು ಬೇರೆ. ಯೇಸು, ಗಾಂಧಿ ಸೋಕ್ರಟಿಸ್, ಉಪಸರ್ಗಕೇವಲಿ, ಬೆಕೆಟ್, ಗಣೇಶ ಶಂಕರ ವಿದ್ಯಾರ್ಥಿ ಇವರ ಹೆಸರನ್ನು ನೆನಸಿಕೊಳ್ಳಬಹುದು. ಕಡೆಯ ಮೆಟ್ಟಿಲನ್ನು ಹತ್ತುವವರ ತೇಜಸ್ಸು, ಕಾಂತಿ ಉರಿದು ಬೆಳಕಿನ ದಾರಿ ಕಾಣಿಸುವುದು. ಹೆರೆವರ್ಡ್ ದಿ ವೇಕ್ ಎಂಬವನ ಕಥೆ ಇದೆ. ನಾರ್ಮನ್ ವಿಲಿಯಂ ರಾಜನ ಮೇಲೆ ಇಂಗ್ಲಂಡಿನ ಸ್ಯಾಕ್ಸನ್ ಜನತೆ ಪ್ರತಿಭಟನೆ ಸಲ್ಲಿಸುತ್ತದೆ. ಸ್ಯಾಕ್ಸನ್ ಯುವಕ ನಾಯಕ ಹೆರೆವರ್ಡ್. ಅವನ ಹಿಂದೆ ಅವನ ವಯಸ್ಸಿನ ಅನೇಕ ಯುವಕರು ಬರುತ್ತಾರೆ-ಅವನನ್ನು ಹಿಂಬಾಲಿಸುವ ಪ್ರತಿಜ್ಞೆ ಮಾಡುತ್ತ. 'ನಾಡ ಗಡಿಯವರೆಗೂ ಅದರ ಕೊನೆ ಮುಟ್ಟುವವರೆಗೂ ನಿನ್ನೊಡನೆ ಇರುತ್ತೇವೆ, ಬರುತ್ತೇವೆ' ಎನ್ನುತ್ತಾರೆ. 'To the Land's End' ಎಂಬುದು ಅವರ ಮಾತಾದರೆ 'To the Rope's End, My lads' - ಎನ್ನುತ್ತಾನೆ ಅವನು. ಫಾಂಸಿ ಶಿಕ್ಷೆಗೆ ನೀವು ಸಿಕ್ಕಬೇಕಾಗುತ್ತದೆ; ಅದಕ್ಕೆ ಸಿದ್ಧರಾಗುತ್ತೀರ ಎಂಬುದು ಅವನಿಗೆ ಗೊತ್ತು. ಕ್ರಿಸ್ತನು ಅಂಥ ಮಾತನ್ನೇ ಶಿಷ್ಯರಿಗೆ ಹೇಳಿದ್ದು: 'ನನ್ನನ್ನು ಹಿಂಬಾಲಿಸುವ ಜನ ಶಿಲುಬೆ ಹೊತ್ತು ಮೈ ಕೈಗಳಿಗೆ ಮೊಳೆ ಹೊಡಿಸಿಕೊಂಡು ಸಾಯಲು ಸಿದ್ಧರಿರಬೇಕು' ಎಂದು. 'ಅಂಥವರು ನನ್ನನ್ನು ಹಿಂಬಾಲಿಸಿ ಬನ್ನಿ' ಎಂದ. 'ನ ಮೇ ಭಕ್ತಃ ಪ್ರಣಶ್ಯತಿ' ಎಂದು ಹೇಳಿದ ಕೃಷ್ಣನೇ ಅದೇ ಗೀತೆಯಲ್ಲಿ ಭಕ್ತನನ್ನು ಕುರಿತು 'ತಸ್ಯ ವಿತ್ತಂ ಹರಾಮ್ಯಹಂ' ಎಂದು ಹೇಳಿದುದುಂಟಲ್ಲವೆ? ಗತಿ ಎಂಥದಾಗಲಿ ಅದರ ಪರಾಕಾಷ್ಠೆಗೆ ತಮ್ಮನ್ನು ತಾವು ಈಡು ಮಾಡಿಕೊಳ್ಳುವುದು ಇಲ್ಲಿ ಇಚ್ಛೆ. ಬೈಬಲಲ್ಲಿ ಜೋಬ್, ನಮ್ಮ ಪುರಾಣಗಳಲ್ಲಿ ಶಿಬಿ, ವಿಪಶ್ಚಿತ್, ಭಕ್ತ ಸೋಮನಾಥ ಮುಂತಾದವರನ್ನು ಒಂದು ಬಗೆಯ ಧರ್ಮದರ್ಶನಕ್ಕೂ ಸಾಧನೆಯ ಕರ್ತವ್ಯಕರ್ಮಕ್ಕೆ, ಎಂದರೆ ಧ್ಯೇಯ ಸಾಧನೆಗೂ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

## ಯೋಜನೆಗಳು

ಮೇಲಿನವು ವೀರ ಲಕ್ಷಣಗಳುಳ್ಳವಾದರೆ ಕೆಳಮಟ್ಟದ ಯೋಜನೆಗಳೂ ಕಾರ್ಯಕ್ರಮಗಳೂ ಇರುತ್ತವೆ. ಅವನ್ನು ಹೀಗೆ ಹೀಗೆ ಇಷ್ಟು ಇಷ್ಟು ಕಾಲಾವಕಾಶದಲ್ಲಿ ನಡಸತಕ್ಕದ್ದು, ಇದಕ್ಕೆ ಮಾನವವಾದ ಮತ್ತು ಇತರ ವೆಚ್ಚಗಳು ಎಷ್ಟೇ ತಗುಲಿದರೂ ಲಕ್ಷ್ಯ ಮಾಡತಕ್ಕದ್ದಲ್ಲ, ವಸ್ತು ಸಾಮಗ್ರಿಗಳನ್ನು ಒದಗಿಸಬೇಕು, ಇತರ ಅಸೌಕರ್ಯಗಳನ್ನು ತಾಳಿಕೊಳ್ಳಬೇಕು ಎಂಬ ಹಿನ್ನೆಲೆ ಇರುತ್ತದೆ. ಆಸಕ್ತಿ, ಪ್ರಯೋಜನ ದೃಷ್ಟಿ, ಬಯಕೆ, ಇವು ಬೆಳೆದು ಮಹೋದ್ದೇಶಗಳಾಗಿ ಹರಡಿಕೊಳ್ಳುತ್ತವೆ. ಅವುಗಳ ಭಕ್ತಿಯಲ್ಲಿ ಜನರ ಮನಸ್ಸು ಅನ್ಯ ಚಿಂತನೆಗಳನ್ನು ಹೊರದೂಡಿ ಏಕಾಗ್ರವಾಗುತ್ತವೆ. ಅವನ್ನು ರಕ್ಷಿಸುವುದಕ್ಕಾಗಿ ಘೋಷಿಸುವುದಕ್ಕಾಗಿ ಸಂಸ್ಥೆಗಳು ತೊಡಗುತ್ತವೆ. ಈ ಸಂಬಂಧಗಳಲ್ಲಿ ಏನೇನೊ ಖಯಾಲಿಗಳೂ ವಿಕಲ್ಪಗಳೂ ಬೆಳೆದಾವು. ಅತಿಭಕ್ತಿಗಳೂ ಬೆಳೆದಾವು. ಆದರೆ ಉದ್ದೇಶಗಳು ಸ್ಪಷ್ಟವಾಗಿ ಕಣ್ಣೆದುರಿಗೆ ಇರುತ್ತವೆ. ವ್ಯಕ್ತಿಯಲ್ಲಾಗಲಿ ಸಮಾಜ ಜೀವನ ದಲ್ಲಿಯಾಗಲಿ-ಇವುಗಳ ಹಿಂದಿನ ತತ್ವ, ಗುರಿಗಳನ್ನು ಆಯ್ದುಕೊಂಡರಾಯಿತು. ಅವನ್ನು ಸಾಧಿಸಲು ನಡತೆ, ವ್ಯವಸ್ಥೆ, ಜೀವನ ಖಚಿತವಾಗಿ ನಿರ್ದಿಷ್ಟವಾಗುತ್ತವೆ.

ಇದು ನಿರ್ದಿಷ್ಟ ರೀತಿಯದಾದರೆ ಇಂಥದು ಸಲ್ಲದು ಎಂಬ ಮಿತಿಗಳನ್ನು ಸೂಚಿಸಲು ಮನೋರಂಗವೂ ಕ್ರಿಯಾರಂಗವೂ ಉಂಟು. ಮಹಾಭಾರತದಲ್ಲಿ 3-4 ಕಡೆಯಾದರೂ ಬರುವ ಒಂದು ಪದ್ಯ ಹೀಗಿದೆ:

> ತ್ಯಜೇದೇಕಂ ಕುಲಸ್ಯಾರ್ಥೇ
> (ಅಥವಾ, ತ್ಯಜೇತ್ ಕುಲಾರ್ಥೇ ಪುರುಷಂ)
> ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್
> ಗ್ರಾಮಂ ಜನಪದಸ್ಯಾರ್ಥೇ
> ಆತ್ಮಾರ್ಥೇ ಪೃಥಿವೀಂ ತ್ಯಜೇತ್.

ಆಯ್ಕೆ ಮಾಡಬೇಕಾದುದು ಯಾವುದು, ತ್ಯಾಜ್ಯ ಯಾವುದು ಎಂಬುದರಲ್ಲಿ ವಿಶದವಾದ ಮೇಲು ಬೀಳುಗಳ ವರ್ಗೀಕರಣ ಕಾಣುತ್ತದೆ. ವ್ಯಕ್ತಿಯ ಒಳಿತು ಒಂದು, ಕುಲ ಅಥವಾ ಕೋಮಿನ ಹಿತ ಬೇರೆ; ಹಳ್ಳಿಯ ಹಿತ ಒಂದು, ರಾಷ್ಟ್ರದ್ದು ಬೇರೆ; ಪರಮ ವಿವೇಚನೆಯಾಗಿ ಆತ್ಮಹಿತ-ಇವುಗಳಲ್ಲಿ ತರತಮಭಾವ ಈ ಪದ್ಯದಲ್ಲಿ ವಿವೇಚಿತ ವಾಗುತ್ತದೆ. ಇಂಥಲ್ಲಿ ಒಟ್ಟು ತ್ಯಾಜ್ಯ, ಗ್ರಾಹ್ಯ ಯಾವುದು ಎಂದು ಹೇಳಿ ಮುಗಿಸುವರೇ ವಿನಾ ಈ ಪ್ರತಿಯೊಂದು ಅಂಶದಲ್ಲಿನ ಗುಣದ ಲೆಕ್ಕ-ಎಂದರೆ ಯಾವುದನ್ನು ತ್ಯಜಿಸುವುದಕ್ಕೆ ಎಂಬುದು ನಿರ್ದೇಶನವಾಗುವುದೊ ಅದರ ಗುಣವಿಶೇಷವನ್ನು - ಕುರಿತು ಗಮನವಿಲ್ಲ. ತ್ಯಜಿಸತಕ್ಕದ್ದೆಂಬ ಮನುಷ್ಯ ಕ್ರಿಸ್ತನೊ ಗಾಂಧಿಯೊ ಆಗಿದ್ದರೆ ಅವರನ್ನು ತ್ಯಾಗ ಮಾಡತಕ್ಕದ್ದು ಸರಿಯೇ-ಈ ತತ್ವದ ಪ್ರಕಾರ? ಒಂದು ಹಳ್ಳಿಯ ಅಥವಾ ಒಂದು



ರಾಜ್ಯದ ಹಿತದೃಷ್ಟಿ ಎಂಬುದು ಹೆಸರು: ಯಾರು ಹೇಗೆ ನಿರ್ಣಯಿಸಿದರೊ ಎಣಿಕೆಗೆ ಬರುವುದಿಲ್ಲ. ಒಂದು ಒಟ್ಟು ಕೋಮನ್ನೇ ತ್ಯಜಿಸಿ, ಆಹುತಿ ಕೊಡಿ ಎಂಬುದು ಯಾವ ನ್ಯಾಯ? ಪಾಪದ ಕೆಲಸವಾಗಬಲ್ಲದು. ಜರ್ಮನಿಯಲ್ಲಿ ಯೆಹೂದಿಯರ ತಂಡ ತಂಡಗಳೇ ಹೀಗೆ ಆಹುತಿಗೊಂಡವು. ಅದು ಒಳ್ಳೆಯದೆಂದು ಭಾವಿಸಿದವರೂ ನುಡಿದವರೂ ಯಾರು? ಏಕೆ? ರಾಷ್ಟ್ರದ ಹಿತವನ್ನೊ ಕ್ಷೇಮವನ್ನೊ ಅಭಿವೃದ್ಧಿಗೊಳಿಸಲು ಇದೊಂದೇಯೆ ತೆರೆದ ದಾರಿ?-ಎಂಬ ಪರ್ಯಾಲೋಚನೆ ಸೂಕ್ತ. ಪರಮಗಮ್ಯ, ಆತ್ಮಹಿತ? 'ಸಮಸ್ತ ಪ್ರಪಂಚವನ್ನೂ ನೀನು ಗೆದ್ದೆ ಎನ್ನು; ನಿನ್ನ ಆತ್ಮ ನಷ್ಟವಾಗುವುದಾದರೆ ಲೋಕವೆಲ್ಲ ಗಳಿಕೆ ಆಗಿ ಪ್ರಯೋಜನವೇನು?' ಎಂಬ ಭಾವ ಮಹತ್ತಾದುದು. ಇಂಥದೇ ಅರ್ಥವನ್ನು ಹೇಳುವ ಪರದೇಶದ ಒಂದು ನುಡಿ "What does it profit you if you gain the whole world and lose your soul?" ಎಂಬುದು. ಆದರೆ ಇಂಥಲ್ಲಿಯೂ ಒಂದು ಯೋಚನೆ ಬರುತ್ತದೆ. ಆತ್ಮಕ್ಕೆ ಕೇಡು ಅಡಸಿದೆ ಎಂಬ ಸಂಗತಿಗೆ ಒದಗಿರುವ ಪ್ರಮಾಣ ಗೌರವದಲ್ಲಿ, ಪ್ರಾಮುಖ್ಯತೆಯಲ್ಲಿ ಸಾಕಷ್ಟು ಬಲವಾಗಿ ನಟ್ಟಿದೆಯೆ? ನಿರ್ಣಾಯಕವಾದುದೆ? - ಎಂಬ ಸಂಗತಿ. ಇಂಥಲ್ಲೂ ಸಮಾಜ ಕ್ಷೇಮದ ಗುರಿಗಳು, ಮಾನವ ಕಾರುಣ್ಯದ ಗುರಿಗಳು, ಆತ್ಮಕಲ್ಯಾಣದ ಆದೇಶಗಳು, ತತ್ವಗಳು ಎಂಬ ದೊಡ್ಡ ಮಾತುಗಳು ಬಳಕೆಯಾಗುವುದುಂಟು. ಒಟ್ಟು ಪ್ರಪಂಚವನ್ನೇ ತೊರೆದು ಹೋಗುವುದು ಎನ್ನುವಂತೆ ನಿರಸನವನ್ನು ಬೇಡುವಷ್ಟು ಸ್ಥಾಪಕವಾದ ಕಾರಣಗಳೆಷ್ಟಿವೆ? ಅದು ಹೇಗೆ ಆಗಲಿ, ಇಲ್ಲಿ ಆಯ್ಕೆ ಪೂರ್ತಿಯಾಗಿ ಮೌಲ್ಯಗಳು. ಅವು ಬೇಡುವ ಕರ್ತವ್ಯ ನಿಷ್ಠುರ. ಮಾಡಬೇಕಾದ ನಿರ್ಣಯ ವೀರಮಟ್ಟದ್ದು. ಆದರೆ ವೀರವೆಂಬ ಹೆಸರಲ್ಲಿ ಯಾವ ಆಭಾಸವೂ ಖಲುತನವೂ ಅನ್ಯಾಯ ಅಧರ್ಮವೂ ಆಗದ ಹಾಗೆ ಮಾತ್ರ ನೋಡಿಕೊಳ್ಳಬೇಕು. ಅದು ಅಪಾಯಕರವಾದ ಕಮರಿ; ಭ್ರಾಂತಿ, ಜಾರು, ಬೀಳು ಅಲ್ಲಿ ಸುಲಭ.

ಇಂಥ ಕೆಲವು ಸನ್ನಿವೇಶಗಳಲ್ಲಿ ಇಷ್ಟಾರ್ಥಗಳು ಎಂಬವು ದೊಡ್ಡ ಅರ್ಥ ಕೊಳ್ಳುತ್ತವೆ ಅಥವಾ ಅರ್ಥಶೂನ್ಯವಾದ ಬೆಂಡು ತೇಲುವಂತಿರುತ್ತವೆ. ತಕ್ಷಣದಲ್ಲಿ ಅವು ಕಾಣಿಸುವ ಅಗತ್ಯವೇನೊ ತ್ವರೆಯದು. 'ನಾನು ಪ್ರಾಯೋಪವೇಶ ಮಾಡುತ್ತೇನೆ', 'ಸಾಯುತ್ತೇನೆ' ಎಂದು ಹಾಕುವ ಹೆದರಿಕೆಗಳಷ್ಟು ಭೀಷಣ. 'ಪ್ರಾಯೋಪವೇಶ' ವೆಂಬುದು ನಮ್ಮ ದೇಶದ ಮಾತು. ಜೀವ ತೆಗೆದುಕೊಳ್ಳುತ್ತೇವೆ-ಇಂಥದೊಂದು ಆಗದಿದ್ದರೆ, ಆದರೆ ಎಂಬುದು ಮಾತು. ಶಿಷ್ಟ ಸಂಪ್ರದಾಯ ಎನ್ನುವವರು ಕೂಡ ಯೋಚನೆ ಮಾಡಬೇಕಾದ ಅಂಶ ಒಂದುಂಟು. ಇದು ಕ್ರಮವಾಗಿ ಎಲ್ಲ ಸಂದರ್ಭಗಳಿಗೂ ಅನ್ವಯವಾಗಬೇಕಾದ ನಡತೆಯ ತತ್ವವಾಗುವಂತೆ ನಿಲ್ಲಬಹುದೆ? ಇದು ಅನ್ಯಾಯವಾದ ಪೀಡೆಯಾಗಬಲ್ಲುದು. ನಿರ್ಣಯವಾಗಬೇಕಾದ ಅಂಶ ಅಥವಾ ವಹಿಸುವ ಪಕ್ಷ ಯಾವುದೇ ಇದ್ದರೂ ಈ ನಡತೆ ಸರಿಯೆ? ಅಥವಾ, ಮರೊ, ಮರ್‌ಜಾವೊ ಎಂದು ಬಿಡತಕ್ಕದ್ದು. ಲಾರ್ಡ್ ಲಿನ್‌ಲಿತ್‌ಗೊ ಗಾಂಧೀಜಿಗೆ

ಹಾಗೆಂದರು. 'ಇದು ಯುದ್ಧಕಾಲ. ನಮ್ಮವರೂ ಸಾಯುತ್ತಿದ್ದಾರೆ. ಸಾಯುತ್ತೀರೆಂದು ಹೆದರಿಸಬೇಡಿ. ಸಾಯುವ ಹಾಗಿದ್ದರೆ ಹೊರಗೆ ಹೋಗಿ ಸಾಯಿರಿ. ಇಲ್ಲೇ ಸಾಯುತ್ತೇನೆಂದರೆ ಅದಕ್ಕೆ ತಕ್ಕ ಸಿದ್ಧತೆ ಮಾಡಿದೆ' ಎಂದುಬಿಟ್ಟರು.

ಕೆಲವು ಪುರುಷಾರ್ಥಗಳು ಸಾಧಿಸಿಯೇ ತೀರಬೇಕಾದವು. ಪರಮ-Absolute, Final-ಯಾವುದಾದರು ಉಂಟೆ? ಎಂಬ ಪ್ರಶ್ನೆ ಅನುಚಿತವಾಗದು. ಶಾಂತಿ, ಮುಕ್ತಿ, ಸಮತೆ, ಸ್ವಾತಂತ್ರ್ಯ - ಇವು ಖಚಿತವಾಗಿ ಯಾವುವು? ಎಲ್ಲಕ್ಕಿಂತ ಮೇಲ್ಪಟ್ಟು, ಕಡೆಯದಾಗಿ ಸುಗುಣತೆಯ ಯಾವ ಮಿತಿಗೂ ಒಳಪಡದ ನಿರ್ಣಾಯಕ ಮೌಲ್ಯಗಳೆ? ಅವೂ ಸಾಧನಗಳಾಗಲಾರವೆ? ಅವನ್ನು ಸಾಧಿಸಿದೆವೆನ್ನಿ; ಸಾಧಿಸಿದಾಗ, ಸಾಧಿಸಿದರೆ ಅವುಗಳಿಂದ ಇನ್ನಾವ ಪ್ರಯೋಜನಗಳನ್ನು ಸಾಧಿಸಬಹುದು? 'ಒಬ್ಬ ಮನುಷ್ಯ ನಿರ್ಬಂಧದಲ್ಲಿ ಉಳಿದಿರುವವರೆಗೂ ನಾನು ಸ್ವತಂತ್ರನಲ್ಲ' ಎನ್ನಬಾರದೆ? ಅಥವಾ, 'ಕಲಿಕಲುಷ ಕೃತಾನಿ ಯಾನಿ ಲೋಕೇಮಯಿ ನಿಪತಂತು; ವಿಮುಚ್ಯತಾಂತು ಲೋಕಃ' ಎಂದ ಬುದ್ಧನ ಮಾತು, 'ಏಕಸ್ಯ ಮರಣಂ ಮೇಽಸ್ತು; ಮಾ ಭೂತ್ ಸರ್ವವಿನಾಶನಂ' ಎಂದ ಲಕ್ಷ್ಮಣನ ಮಾತು-ಇಂಥವಕ್ಕೆ ಬೆಲೆ ಬೇಡವೆ? ಸಾಧನೆಗೆ ಯೋಗ್ಯವಾದ ಗಮ್ಯಗಳು ಯಾವುವು? ಶಾಕುಂತಲ ನಾಟಕದ ಏಳನೆಯ ಅಂಕದಲ್ಲಿ ಋಷಿ ಸಾಧಕರ ಚಿತ್ರಗಳು ಒಂದೆರಡಿವೆ. ದುಷ್ಯಂತನು ಒಬ್ಬರನ್ನು ಕಂಡು 'ಭೋ ಕಷ್ಟತಪಸೇ' ಎನ್ನುತ್ತಾನೆ. ಯಾಕೊ ಇಷ್ಟು ಕಷ್ಟ! 'ಸ್ಥಾಣುರಿವ ಅಚಲ' ಈತ. ಈತನ ಈ ಅಚಲತೆಯಿಂದ ಯಾವ ಪುರುಷಾರ್ಥವನ್ನು ಸಾಧಿಸುತ್ತಾನೊ ಎನ್ನುವಂತಿದೆ ಮಾತು. ಅಥವಾ,

ಆವರಿಸಿರ್ದ ಕಲ್ಪತರು ಕಾನನದೊಳ್ ಪವನಾಶನಂ, ಮಣಿ
ಗ್ರಾವದೆ ಜಾನಂ, ಅಂತೆ ಕನಕಾಬ್ರಸರೋವರದಲ್ಲಿ ಮಜ್ಜನಂ,
ದೇವವಧೂ ಸಮೀಪದೊಳೆ ಸಂಯಮಂ ಒಪ್ಪೆ ಪೆರರ್ ಮುನೀಂದ್ರರೊ
ಲ್ದಾವುದ ಕಾಂಕ್ಷಿಪರ್ ತಪಗಳಿಂ ತಪಮಿರ್ದಪರಲ್ಲಿ ತಾಮಿವರ್

ಎಲ್ಲರೂ ಯಾವ ಸೌಖ್ಯಗಳನ್ನು ಬಯಸಿ ಸ್ವರ್ಗಕ್ಕೆ ಬರುತ್ತಾರೆಯೊ ಅವೆಲ್ಲ ಇಲ್ಲಿ ಪುಷ್ಕಲವಾಗಿ ದೊರೆಯುತ್ತಿರುವಾಗ, ಇದನ್ನೆಲ್ಲ ಬಿಟ್ಟು ಈ ಒಂದನ್ನೂ ಒಲ್ಲದೆ ಧ್ಯಾನ, ಸ್ನಾನ, ಸಂಯಮಗಳಲ್ಲಿ ಇರುವವರನ್ನು ಕುರಿತು ರಾಜನು ಆಶ್ಚರ್ಯ ಪಡುತ್ತಾನೆ. ಅವರ ಬೆಲೆಗಳೇನೊ? ಅಂಥವರ ಉದ್ದೇಶ? 'ಉತ್ಸರ್ಪಿಣೀ ಖಲು ಮಹತಾಂ ಪ್ರಾರ್ಥನಾ' ಎಂಬ ಒಂದು ಮಾತಿದೆ. ಅದೂ ಮನಸ್ಸಿಗೆ ಬರುತ್ತದೆ. ಸಾಧನೆಗೆ ಒಳಪಟ್ಟ, ಸಿದ್ಧವಾದ ಗಮ್ಯ ನೆರವೇರಿದಾಗ ಅದನ್ನು ದಾಟಿ ಇನ್ನೊಂದು ಹೆಜ್ಜೆ ಮೇಲಕ್ಕೆ ಏರಿ ಇನ್ನಾವುದೊ ಗುರಿಗೆ ಯತ್ನಿಸಬೇಕು ಎಂಬುದಕ್ಕೆ ನೆಲಗಟ್ಟಾಗಬಹುದು. ಇಂದಿನ ಗಮ್ಯಸಾಧನೆ ನಾಳೆಯದಕ್ಕೆ ಮೆಟ್ಟಿಲು. ಮೇಲಿನವು ಬೇರೆ ಇರಬಲ್ಲವು.

ಅಥವಾ ಶೂನ್ಯವಾದಿಗಳು ಕೆಲವರು ನೀಚ ವಿಧಾನಗಳನ್ನು ಅನುಸರಿಸಿ ಯಾವ ಯಾವುದನ್ನು ಜನತೆಗೆ ನಿಷಿದ್ಧ, ತ್ಯಾಜ್ಯ ಎನ್ನುತ್ತಾರೊ-"I shall be drunken and go to the dogs" ಎಂಬ, "My father achieved ten bottles; my ambition is to achieve a cask" ಎಂಬ,

ಪ್ರಾಣಿನಶ್ಚ ತ್ವಯಾ ಘಾತ್ಯಾ
ವಕ್ತವ್ಯಂ ಚ ಮೃಷಾವಚಃ
ಅದತ್ತಾಂಚ ತ್ವಯಾ ಗ್ರಾಹ್ಯಂ
ಸೇವನಂ ಯೋಷಿತಾಮಪಿ

ಎಂಬ - ಹಲವು ದೌರ್ಬಲ್ಯಗಳ ಕಡೆಗೆ ಮನಸ್ಸು ತಿರುಗಬಹುದು.

ವೆಂಕಟಾಧ್ವರಿ ಒಂದು ಜಾತಿಯ ವಿಕಟವಿಕಾರವನ್ನು ನಡತೆಯಲ್ಲಿಯೂ ನೀತಿಯಲ್ಲಿಯೂ ಕಾಣಿಸಿ ಅದರ ವಿರೂಪವನ್ನು ಕಾಣಿಸುತ್ತಾನೆ: "ಕೇಚಿತ್ ವಿಪ್ಲಾವಯಂತೇ ಜಗದಭಿದಧತಃ ಕೇಶವಂ ದೋಷಭೋಗ್ಯಂ." 'ಪತಿತೋದ್ಧಾರಕನಲ್ಲವೆ ಕೇಶವ? ನನ್ನಂತಹ ಪತಿತರನ್ನು ಉದ್ಧಾರ ಮಾಡುತ್ತಾನೇನೊ ನೋಡುವ. ದೋಷಭೋಗ್ಯವೆಂಬುದು ನಿಜವಾದರೆ ಅವನು ನನ್ನನ್ನು ಉದ್ಧಾರ ಮಾಡಲಿ' ಎಂದು ಅವನಿಗೆ ಮೊದಲೆ ಹಾಕುವಂತೆ ದಿನದಿನವೂ ಹೆಚ್ಚು ಹೆಚ್ಚು ಪಾಪಿಷ್ಠನಾಗುತ್ತಾನೆ. ವಿಕ್ಟರ್ ಹ್ಯೂಗೊ ಹೇಳುವಂತೆ "Finding in the deepest depths of degradation a depth deeper still." ದೇವರಿಗೆ ಕೊಟ್ಟ ಚಾನ್ಸುಗಳು ಇವು! ಕೈಕೊಂಡ ಉದ್ದೇಶಗಳು ಖಚಿತವಾಗಿ, ಗಟ್ಟಿ ವಸ್ತುವಾಗಿ ಇರಬಹುದು; ಅಥವಾ ನಿರ್ದಿಷ್ಟವಾದ ಮೂರ್ತ ಸ್ವರೂಪವನ್ನು ತಾಳದೆ ಇರಬಹುದು; ವಿಶದವಾಗಿರಬಹುದು; ಆಲೋಚನೆ ಅಥವಾ ಭಾವನೆಗಳಾಗಿರಬಹುದು. ಜನಸಾಮಾನ್ಯರ ದಿನಚರಿಗೆ ಹೊಂದಿದಂತಿರಬಹುದು; ಇಲ್ಲದಿರಬಹುದು. ಲೋಕಕ್ಕೆ ಪ್ರಯೋಜಕಾರಿಯಾಗಿರಬಹುದು; ತೊಂಡು ಬಿದ್ದೊ ಇನ್ನೊಬ್ಬರಿಗೆ ಹೊರೆಯಾಗಿ ದಂಡ ಜೀವನ ಮಾಡಿಕೊಂಡೊ ಇರಬಹುದು.

ಸದ್ಗುಣಗಳೆಂಬವೂ ಕಾರ್ಯಕಾರಿಯಾಗಬಲ್ಲವು. ಕ್ರಿಯಾರೂಪವಾದ್ದು ಅಥವಾ ನಿಷ್ಕ್ರಿಯಾರೂಪವಾದದ್ದು ಆಗಿರಬಹುದು. ಸಾಮಾನ್ಯವಾಗಿ ಜೀವನ ರೂಪಣದಲ್ಲಿ ಸಹಾಯಕವಾಗುವ, ಅದನ್ನು ಪೋಷಣೆ ಮಾಡುವ ಗುಣಗಳಿರುತ್ತವೆ. ಅದರ ಪ್ರಯೋಜನವನ್ನು ದುಡಿಸಿಕೊಂಡು ತನ್ನ ಪೋಷಣೆ ಮಾತ್ರ ಮಾಡಿಕೊಳ್ಳುವ ಪರಾಶಿ (Parasitical) ನಡವಳಿಕೆಗಳೂ ಬುದ್ಧಿಮಾರ್ಗಗಳೂ ಇರುತ್ತವೆ. ಸಹಾಯಕವಾದವುಗಳಿಂದ ಲೋಕಹಿತ ಸಾಧನೆ ಆಗುತ್ತದೆ. ಪರಾಶಿಯಾದ, ನಕಾರಾತ್ಮಕವಾದ, ಕ್ರಿಯಾತ್ಮಕವಾಗದ ಗುಣಗಳಿಂದ ಸಮಾಜಕ್ಕೆ ನಷ್ಟ ಹೆಚ್ಚು.

ಈ ಎರಡರ ನಡುವೆ ಇನ್ನೊಂದು ನೆಲಸುಂಟು: ಅದೂ ಪ್ರಯೋಜಕವಾಗಬಲ್ಲದು. ಮಾಡಲಿರುವ ಕೆಲಸದಿಂದ ಪರಿಸ್ಥಿತಿ ಕೀಳಾಗುವಂತಿದ್ದರೆ ಏನೂ ಮಾಡದೆ

ಇರುವುದೊ ಬಾಯಿಮುಚ್ಚಿಕೊಂಡು ತೆಪ್ಪಗಿರುವುದೊ ಮೇಲಾದ ಧರ್ಮ-Shut up! ಎಂಬಂತೆ. ಅವಕ್ಕೆ ಇರುವ ಮೌಲ್ಯ ವ್ಯತ್ಯಾಸವನ್ನು ಆಳವಾಗಿ ಪರಿಶೀಲನ ಮಾಡಬೇಕು. ನೀರು ಒಂಡಾಗಿದ್ದರೆ ಹಾಗೆಯೇ ಅದನ್ನು ಮುಟ್ಟದೆ ಅಲ್ಲಾಡಿಸದೆ ಇರುವಾಗ ತಿಳಿ ತೇಲುತ್ತದೆ. ಸ್ವಲ್ಪ ಅಲುಗಾಡಿಸಿದರೂ ನೀರಿಗೆಲ್ಲ ಪುನಃ ಒಂಡು ವ್ಯಾಪಿಸಿಕೊಳ್ಳುತ್ತದೆ. ಇದನ್ನು ಹೇಳಿದುದಕ್ಕೆ ಕಾರಣ: ಜನದ ನಡವಳಿಕೆಗಳಲ್ಲಿಯೂ ವ್ಯವಹಾರಗಳಲ್ಲಿಯೂ ಯಾವ ರೀತಿ ಅವರ ಪಕ್ಷಪಾತವೂ ಬೆಲೆಗಳೂ ಸೇರಿಕೊಳ್ಳಬಲ್ಲವು ಎಂಬುದನ್ನು ತಿಳಿಸಲು. ಇಂಥಲ್ಲಿ ನಿಮ್ಮ ನೆರವು ಬೇಕು ಎಂದು ಪ್ರಾರ್ಥಿಸಿದಾಗ ಸಹಾನುಭೂತಿಯುಳ್ಳ ಒಬ್ಬರು: 'ಏನೊ ಅಪ್ಪ; ನಾನು ಮೀಟಿಂಗಿಗೆ ಹೋಗುತ್ತೇನೊ ಇಲ್ಲವೊ, ಹೋದರೆ ನೋಡೋಣ' ಎನ್ನಬಹುದು. ನನಗೇಕೆ ಆ ಪೀಡೆ ಎಂದು ಹೋಗದೆಯೇ ಉಳಿಯಬಹುದು. ಏಕಾಂತದಲ್ಲಿ ಕುಳಿತು ನಾವೇ ಆಯಾ ದಿನದಲ್ಲಿ ಆಡಿದ ಮಾತೊ ಮಾಡಿದ ಕೆಲಸವೊ ಅನುಸರಿಸಿದ ಆಲೋಚನೆಯೊ ಸರಿಯೆ, ತಪ್ಪೆ, ಎಂದು ಯೋಚಿಸಿದಾಗ ಅವಕ್ಕೆ ಕಾರಣ ಒಂದೇ ಅಥವಾ ಹಲವು ಪದರಗಳದೇ ಎಂಬುದು ಗೊತ್ತಾಗುತ್ತದೆ. ನಮಗೇ ಅಸ್ಪಷ್ಟವಾದ ಏನೇನೊ ಅಂಶಗಳು ಅಲ್ಲಿ ಸೇರಿಕೊಂಡಿರುತ್ತವಲ್ಲವೆ? ಕಾರ್ಯಕ್ಕೆ, ಅಕಾರ್ಯಕ್ಕೆ ಅಥವಾ ನಿಷ್ಕ್ರಿಯೆಗೆ ಆಧಾರವಾಗಿ-ಎಂಬುದು ಗೊತ್ತಾಗುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಇನ್ನಾವುದು ಹೇಗಾದೀತು ನೋಡೋಣ ಎಂದು ಸುಮ್ಮನೆ ಕಾದು ಕುಳಿತಿರಬಹುದು. 'Mischief, thou art afoot. Take thou what course thou wilt' ಎಂದು ಅಂಟೋನಿ ಹೇಳಿದಂತೆ-ಕೆಡುಕನ್ನು ಹೊತ್ತಿಸಿ ಪರಿಣಾಮಗಳನ್ನು ಕೆರಳಿಸಿ ತಮಾಷೆನೋಡುವುದು, ಕೈತೊಳೆದುಕೊಳ್ಳುವುದು ಶಕ್ಯ. ವ್ಯಕ್ತಿಯಾಗಿದ್ದಲ್ಲಿ ಕಾಣುವ ಸರಳತೆ, ನೇರ ಗುಂಪಿನಲ್ಲಿ ಪಕ್ಷದ ಪಕ್ಷಪಾತದಲ್ಲಿ ಬೇರೆಯಾಗಿ ನಡಸುತ್ತದೆಂಬುದನ್ನು ಲೋಕ ಬಲ್ಲದು. ಗುಂಪಿನಲ್ಲಿ ಧರ್ಮದೃಷ್ಟಿ ಬೇರೆ; ಮಂದ; ಸೂಕ್ಷ್ಮವಾಗಿರದು. ಮನುಷ್ಯ ಸ್ವಭಾವ ಹೀಗೇ ಕಾರ್ಯ ಮಾಡುವುದು, ಕಾರ್ಯಪ್ರವೃತ್ತಿಗೆ ಎಳಸುವುದು ಎಂದು ಹೇಳುವುದು ಕಷ್ಟ. ವಾಸ್ತವವೆಂಬ ಪರಿಸ್ಥಿತಿಯಲ್ಲಿ ಎಷ್ಟು ಆಳಗಳು, ಮೂಲೆಗಳು, ಕಾಣ್ಕೆಗಳು, ಅಸ್ಪಷ್ಟತೆಗಳು ಇರುವವೊ ಅವನ್ನು ಹಲವೇಳೆ ಗುರುತಿಸುವುದೇ ಕಷ್ಟ. ಚದುರಂಗದ ಆಟದಲ್ಲಿ ಆಟಗಾರನು ಬುದ್ಧಿವಂತನಾದಷ್ಟೂ ಕಾಯನ್ನು ಪ್ರತಿ ಸಲ ನಡಸುವ ಮುಂಚೆಯೂ ತಾನೂ ಎದುರಾಟಗಾರನೂ ಕಾಯನ್ನು ಹೇಗೆ ಹೇಗೆ ನಡಸುವುದು ಸಾಧ್ಯ, ಹೇಗೆ ನಡೆದರೆ ತನ್ನ ಆಟದ ಜಾಣತನ ಸ್ಥಿರಪಟ್ಟೀತು, ಗೆಲವು ಕಟ್ಟೀತು ಎಂಬುದನ್ನು ಯೋಚಿಸಿ ನಿರ್ಣಯಿಸುವಂತೆ ಆಡಬಲ್ಲವರ ಚಾಣಾಕ್ಷತೆ ಇರುತ್ತದೆ. ರಾಜಕೀಯ ರಂಗಗಳಲ್ಲಿಯೂ ದೊಡ್ಡ ಪ್ರಮಾಣದ ಕಾರ್ಯ ಸಾಧನೆಗಳಲ್ಲಿಯೂ ಇಂಥ ಆಲೋಚನೆಗಳು ನಿರಂತರವಾಗಿ ಸೇರಿಕೊಂಡಿರುತ್ತವೆ. Strategy, Tactics ಎಂಬ ಮಾತುಗಳ ಅರ್ಥವ್ಯಾಪಾರದಲ್ಲಿ ನಿರ್ದೇಶನತಂತ್ರ, ಕ್ರಿಯಾತಂತ್ರ ಹೇಗೆ ನಡೆಯುತ್ತದೆಯೊ ಅಷ್ಟು ರೀತಿಯಲ್ಲಿ ಲೌಕಿಕ ವ್ಯಾಪಾರಗಳು ಹರಡಿರಬಲ್ಲವು. ಅರಿಯದವರಿಗೆ ಎಲ್ಲ ಸುಲಭವೇ,



ಸರಳವೇ. ಅವುಗಳ ತೊಳಲಿಗೆ ಸಿಕ್ಕುವವರಿಗೆ ಅವುಗಳ ಮೊನೆ, ಪರಿಣಾಮ, ಉರಿ ಗೊತ್ತಾಗುತ್ತವೆ.

ಲೋಕದಲ್ಲಿ ಎಲ್ಲೆಲ್ಲಿಯೂ ಮತಧರ್ಮವೂ, ಅದರ ಪ್ರಭಾವವೂ ಬಹುಕಾಲ ಜೀವನವನ್ನು ನಡಸಿತು. ಈ ದೇಶದಲ್ಲಿ ಸುಮಾರು ಈ ಶತಕದ ಮೂರನೆಯ ದಶಕದವರೆಗೂ ಮತಶ್ರದ್ಧೆ, ಅದರ ವಾದ, ಸಿದ್ಧಾಂತ, ಆಚಾರ ನಡವಳಿಕೆಗಳೇ ನಡೆಯುತ್ತಿದ್ದವು. ಪ್ರತಿ ಸಂಸ್ಥೆಯಲ್ಲಿಯೂ ಆಯಾ ಮತವನ್ನು, ವಿಧಿವಿಧಾನಗಳನ್ನು ಒಪ್ಪಿಕೊಳ್ಳುತ್ತಿದ್ದುದರಿಂದ ಅಲ್ಲಿನ ನಡವಳಿಕೆಯನ್ನು ಒಂದು ಶಿಸ್ತು, ಕ್ರಮ ನಡಸುತ್ತಿದ್ದವು. ಅದನ್ನು ಒಪ್ಪುವವರೆಲ್ಲ ಅದರಲ್ಲಿ ನಂಬಿಕೆ ನೆಚ್ಚಿಕೆ ಉಳ್ಳವರು; ಸಂಪ್ರದಾಯ ಪಾಲಕರು. ಮತದ ವಿಶ್ವಾಸ ಬರಿಯ ಬುದ್ಧಿಗೂ ಯುಕ್ತಿಗೂ ಮಾತ್ರವೇ ಸಂಬಂಧಿಸಿದವರ ರೀತಿನೀತಿಗಳನ್ನು ನಿರಂಕುಶವಾಗಿ ನಿರ್ಲಕ್ಷ್ಯದಿಂದ ನಿರ್ಬಂಧಿಸಬಹುದಿತ್ತು. ಈಚಿನ ರಾಜಕೀಯದಲ್ಲಿ ಒಂದು ಪಕ್ಷದ ಶಿಸ್ತು, ಕ್ರಮ ಎಂಬುದು ಯಾವ ವಿಪರೀತಗಳಿಗೆ ಜನಜೀವನವನ್ನು ನಡಸಿದೆ ಎಂಬುದರಿಂದ ಈ ಪ್ರಪಂಚವನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳಬಹುದು. ಶಿಸ್ತು ಎಂಬುದೊಂದಕ್ಕೇ ಪರಮ ಮೌಲ್ಯವೆ ಎಂಬುದನ್ನೂ ಕೇಳಿಕೊಳ್ಳಬಹುದು. ಅದು Static Virtue, Formal Consistency ಎಂಬಂತೆ. ತಿಳಿವಳಿಕೆ ಬೇರೆ ಬಂದರೆ, ಸನ್ನಿವೇಶ ಬದಲಾದರೆ ನಡತೆ ಬೇರೆಯಾಗುತ್ತದೆ. ಹೊಸ ಕಾಲದಲ್ಲಿ ಅಥವಾ ಹೊಸ ತಿಳಿವಳಿಕೆ ಹರಡಿ ಬದಲಾವಣೆಗಳು ಆಗುವುದು ಅಗತ್ಯ ಎಂಬುದು ಒತ್ತಿಕಾಣುವಾಗ ಈ ಶಿಸ್ತಿನ ಬಲ ಎಷ್ಟು ಎಂಬುದು ಗೊತ್ತಾಗುತ್ತದೆ. ಒಂದು ಹದ ಮೀರಿದರೆ ತಂದೆ ಮಕ್ಕಳಲ್ಲಿ, ಗಂಡ ಹೆಂಡಿರಲ್ಲಿ, ಗುರು ಶಿಷ್ಯರಲ್ಲಿ, ಯಜಮಾನ ಕೆಲಸಗಾರರಲ್ಲಿ ಶಿಸ್ತು ಮುರಿಯಬಲ್ಲದು. ಎಲ್ಲಿಯೂ ಅಷ್ಟೇ: ಹಿತವೆಂಬುದು ಸಾಧಿತವಾಗಬೇಕಾದರೆ 'ಕರ್ಮಸು ಕೌಶಲ" ಸರ್ವಾರ್ಥ ಸಾಧಕ. ಆದರೆ ಎಲ್ಲಿಯೂ ಯಾವುದನ್ನೂ ಜೀವಗಳ ಶೋಷಣೆಗೆ ಬಳಸಬಾರದು; ದುಡಿಸಬಾರದು.

ಈ ಮಜಲಲ್ಲಿ ಒಂದೆರಡು ಮಾತುಗಳನ್ನು ಕುರಿತು ಯೋಚಿಸಬಹುದು. ಮುನ್ನಡೆ, ಸುಧಾರಣೆ, ಸೃಷ್ಟಿಕಾರಿತೆ ಎಂಬವು ಅವು. ಸಂಪ್ರದಾಯಕ್ಕೂ ಅದು ಸ್ಥಾಪಿಸಿ ನಡಸುತ್ತಿರುವ ಮಠಸಂಸ್ಥೆಗಳಿಗೂ ವಿರುದ್ಧವಾಗಿ ನಿಲ್ಲಬಹುದು. ಈವರೆಗೆ ನಡೆದ ವ್ಯವಸ್ಥೆಯಲ್ಲಿ ಅಧಿಕಾರವನ್ನು ನಡಸುತ್ತಿದ್ದವರಿಗೂ ಹೊಸ ಪಂಥದ ಕೇಳ್ಮೆಗೂ (Demand) ಸ್ಪಷ್ಟವಾಗಿ ಕೋಟಲೆ ಉದ್ಭವಿಸುತ್ತದೆ. ಅಧಿಕಾರದ ಮಿತಿಗಳಾವುವು, ಸ್ವಾತಂತ್ರ್ಯದ ಬೇಡಿಕೆಗಳ ಪರಮಾವಧಿ ಯಾವುದು, ಹೃದ್ಭಾಗ ಯಾವುದು ಎಂಬ ಮಟ್ಟಗಳು ಅಲ್ಲಿ ವಿವೇಚನೆಗಿರುತ್ತವೆ. ಎರಡೂ ಮೌಲ್ಯಗಳೇ. ಎರಡೂ ಮೂಲಭೂತ ವೆಂದು ಜನ ಎಣಿಸುವುದೇ. ನಿಯಮಕ್ಕೆ ತಪ್ಪುವುದು ಶಿಕ್ಷೆಗೆ ಈಡಾಗುತ್ತದೆ. ಇಲ್ಲಿ ನಾವು Must ಎಂಬ ಮಂಡಲದಲ್ಲಿದ್ದೇವೆ. ಕೆಲವನ್ನು ನಾವು ಮಾಡಬಹುದು; ಕೆಲವನ್ನು ಮಾಡತಕ್ಕದ್ದಲ್ಲ. ವಿಧಿಭಾಗವೊಂದು; ನಿಷಿದ್ಧಭಾಗವೊಂದು. ಅವುಗಳಂತೆ ನಡೆಯದಿದ್ದರೆ

ಏನೊ ಶಿಕ್ಷೆ, ದಂಡ ತೆರಬೇಕು. ಅಥವಾ ಎಲ್ಲಿಂದಲೊ ಹೊರಗೆ ಬೀಳಬೇಕು. ನಷ್ಟ, ನೋವು ಸಂಭವಿಸುತ್ತದೆ. ಇಲ್ಲಿ ಹೊಣೆಗಾರಿಕೆಯ ಒಟ್ಟು ಒಂದು ಪ್ರಪಂಚವೇ ನೆಲಸಿರುವುದು. One must have facts on which to base a judgement ಎಂಬುದುಂಟು. ಆ ಸಂಗತಿಗಳಾವುವು, ಅವು ಸತ್ಯ ಸಂಗತಿಗಳು ಹೇಗೆ ಎಂಬುದು ನ್ಯಾಯಶಾಲೆಗಳಲ್ಲಿ ವಿಚಾರ್ಯ. One must be factual ಎಂದಾಗ Fact ಮೌಲ್ಯವಾಗುತ್ತದೆ. ಬಿ.ಎನ್.ರಾವ್ ಅವರು ತಮ್ಮ ತರುವಾಯ ಯು.ಎನ್.ಒ ಪ್ರಪಂಚ ಸಭೆಗೆ ನಮ್ಮ ಪ್ರತಿನಿಧಿಯಾದವರಿಗೆ ಕೊಟ್ಟ ಸಲಹೆ ಇದು: "ಮರ್ಯಾದೆಯಿಂದ, ಸಹನೆಯಿಂದ ನಡೆದುಕೊಳ್ಳಿ; ನಗುನಗುತ ಸಹಕರಿಸಿ. ಆದರೆ ನಿಮ್ಮ ಪಂಥವನ್ನು ಪ್ರತಿಪಾದಿಸುವಾಗ Make your facts deadly. ಈ Fact ಎದುರಾಳಿಯ ವಾದಕ್ಕೆ ಮಾರಕವಾಗುವಷ್ಟು ಚುರುಕಾಗಿರಬೇಕು" ಎಂದರು. ಅಲ್ಲಿ Factನ ಗುಣಾಂಶ ಪರಮಾವಧಿಗೇರುತ್ತದೆ. ಸುರಕ್ಷಣೆ, ಸ್ತಿಮಿತತೆ, ಕಾನೂನು, ಕ್ರಮ, ಶಾಂತಿ, ಸಾಮರಸ್ಯ ಮುಂತಾದ ಬೆಲೆಗಳು ಇಂಥಲ್ಲಿ ರೂಢ. ಇಂಥಲ್ಲಿ ವಾಸ್ತವ ಸಂಗತಿಗಳೂ-Facts, ಮೌಲ್ಯಗಳೂ-Values, ಎರಡೂ ಒಂದರ ಬೇರೆಯಾದ ರೂಪ ಇನ್ನೊಂದರದು. ಹಾಗೆ ನೋಡಿದರೆ ಎಲ್ಲವೂ ವಾಸ್ತವ ಸಂಗತಿಗಳೇ: ಮೌಲ್ಯವೆಂಬವೂ ಸೇರಿ. ಮೌಲ್ಯವಿವೇಚನೆಯಾಗುವುದು ವಸ್ತು ಸಂಗತಿಗಳಿಗೆ ಬೆಲೆ ಕಟ್ಟುವಾಗ: ನಡವಳಿಕೆಗೆ ಬಳಸುವಾಗ ಮಾತ್ರ.

ಈ ಸಂಗತಿಗಳು ಕೆಲವು ಕಾಲ ನಡೆವಾಗ ಘನಿಸುತ್ತವೆ; ಕಬ್ಬಿಣದ ಸರಪಳಿಗಳಂತಾಗುತ್ತವೆ. ರಬ್ಬರಿನ ಹಾಗೆ ಹಿಗ್ಗಿ, ಕುಗ್ಗಿ ಸಂದರ್ಭಗಳಿಗೆ ತಕ್ಕ ಹಾಗೆ ಹೊಂದಿಕೊಳ್ಳವು; ಅಥವಾ ಜೀವಂತ ಅವಯವಗಳಲ್ಲಿನಂತೆ ಬೆಳೆಯವು; ಸೊರಗುತ್ತವೆ. ಹಿಂದೆ ನಡೆದುದನ್ನೂ ಹಿಂದಿನ ತೀರ್ಮಾನವನ್ನೂ ಅನುಸರಿಸಿ ಮಾತ್ರವೇ ಮುಂದಿನದು ನಿರೂಪಿತವಾಗುತ್ತದೆ. ನ್ಯಾಯದ ಸಾಧನೆಗಳಾಗಬಹುದು; ಅಥವಾ ಎದುರಾಳಿಗಳ ಹಟಕ್ಕೆ ಕಾರಣವಾಗಬಹುದು. ಇಂಥ ನಿರ್ಬಂಧಗಳನ್ನು ಮುರಿಯದೆ ಮನುಷ್ಯನಿಗೆ ಸ್ವಾತಂತ್ರ್ಯವಿರುವುದಿಲ್ಲ; ಮುನ್ನಡೆ ಬರುವುದಿಲ್ಲ; ಸೃಷ್ಟಿಕೃತ್ತಾದ ಒಳಿತೆಂಬುದಾಗುವುದಿಲ್ಲ. ಇಂಥದರ ಒಂದು ಮುಖವನ್ನು ಕಾಣಿಸಲು ಲಂಡನ್ನಿನ ಬಿ.ಬಿ.ಸಿ. ಯಲ್ಲಿ ಎ. ಲೆಸ್ಟರ್ ಎಂಬವರು ಈ ಮಾತನ್ನಾಡಿದರು:

"ಕಾನೂನು, ಕ್ರಮ ಎಂಬ ಕೂಗಿವೆ. ಹೊರಕ್ಕೆ ಬಹು ಮುದ್ದಾಗಿ ನುಣುಪಾಗಿ ಮರ್ಯಾದಸ್ಥವಾಗಿರುವಂತೆ ಕೇಳಿಸುತ್ತವೆ. ಅವುಗಳ ಬುಡದಲ್ಲಿ ಸತ್ಯಾಂಶ ಇನ್ನೊಂದುಂಟು. ಅಲ್ಲಿ ಔದಾರ್ಯವಿಲ್ಲ; ಜನಸಾಮಾನ್ಯರ ಪೂರ್ವಗ್ರಹಗಳಿಗೆ ಮಾತ್ರ ಅವು ಪಕ್ಷಪಾತ ತೋರಿಸುತ್ತವೆ. ಜನಗಳ ಮನಸ್ಸಿಗೆ ಪ್ರಚೋದನೆ ಕೊಡುತ್ತವೆ. ಉದಾ: ಅಪರಾಧ ಮತ್ತು ಶಿಕ್ಷೆಗಳ ಸಂಬಂಧದಲ್ಲಿ ಜಟಿಲವಾದ ಸಮಸ್ಯೆಗಳು ಏಳಬಹುದು. ಅವು ಯಾವುದಕ್ಕೂ ಈ ಕೂಗುಗಳು ಸಂಗತವಾಗವು. ಸಾರ್ವಜನಿಕ ಸುವ್ಯವಸ್ಥೆಗೆ ಕೂಡ ಮೂಲಭೂತವಾಗಿ



ಸಂಬಂಧ ಪಡೆಯವು. ಆಸ್ತಿಯ ಒಂದು ಹಕ್ಕು ದಾಳಿಯಾಗುತ್ತಿದೆ ಎಂಬ ಒಂದು ಪ್ರಚೋದನೆ ಮಾತ್ರ ಇಲ್ಲಿ ಕಾಣುವುದು. ಅದರ ಗುರಿ ತುಂಬಾ ಸಂಕುಚಿತ. ಈ ಕಾಲದಲ್ಲಿ ಆರ್ಥಿಕ ಜೀವನದಲ್ಲಿ ಯಂತ್ರೋದ್ಯೋಗ ಪ್ರಬಲಿಸಿದೆಯಲ್ಲವೆ? ಪಟ್ಟಣಗಳಲ್ಲಿ ಸಮಾಜಜೀವನ ಹಬ್ಬಿದೆ. ಇಂತಹ ದಾಳಿ ಅಷ್ಟೇನೂ ಗುರುತರವಲ್ಲ. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ: ಕಾನೂನು, ಶಿಸ್ತು, ಕ್ರಮ ಎಂದು ನುಡಿಯುವವರು ಅಪರಾಧವನ್ನು ನಿಗ್ರಹಿಸುವ ಕಾನೂನನ್ನು ಬಳಸಿ ಈಗ ನಮ್ಮ ಸುತ್ತಲ ಆವರಣವನ್ನು ಕೆಡಿಸುತ್ತಿರುವ ಖಾಸಗಿ ಆಸ್ತಿ ಅಧಿಕಾರ ಒಂದುಂಟು. ಆ ಹಕ್ಕನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವವರ ಮೇಲೆ ಪ್ರಯೋಗಿಸಲು ಕಾನೂನನ್ನು ಚಲಾಯಿಸಲು ಯತ್ನಿಸುವುದಿಲ್ಲ. ಗಿರಣಿಯ ಮಾಲಿಕರು ನಾವು ಕುಡಿಯುವ ನೀರನ್ನು ಕೆಡಿಸುತ್ತಾರೆ. ಇಂಥವರನ್ನು ನಿರ್ಬಂಧಿಸಿ ತುರಂಗವಾಸ ಮಾಡಿಸುವ ಸಂಗತಿಯನ್ನು ಯಾರೂ ಕನಸಿನಲ್ಲಿಯೂ ಮಾಡರು. ಆದರೆ ಇದು ನಿಜವಾದ ಅತಿಚಾರ. ಜನಪ್ರಿಯವಲ್ಲದ ಯಾವುದೊ ಪ್ರದರ್ಶನಗಳನ್ನು ಅಸಾಮಾಜಿಕ ಎನ್ನುತ್ತಾರೆಯೇ ಹೊರತು ಅವೆಲ್ಲಕ್ಕಿಂತ ಇಂಥದು ಹೆಚ್ಚು ನಾಶಕರವಾದುದು, ಅಪಾಯಕರವಾದುದು ಎನ್ನರು. ಇಂಥವು ಈ ಕಾಲದಲ್ಲಿ ನೂರು. ಒಂದು ಬಗೆಯ ವ್ಯವಸ್ಥೆ, ರೀತಿ ನೀತಿ ನಡೆಯುತ್ತಿದ್ದು ಇನ್ನೊಂದಕ್ಕೆ ಅದು ತಿರುಗಬೇಕಾಗಿರುವಾಗ ಇಂಥ ವ್ಯತ್ಯಾಸಗಳೂ ಸುಧಾರಣೆಗಳೂ ಆಗಿಯೇ ತೀರಬೇಕಾಗುತ್ತದೆ. ಉಗ್ರ ರೀತಿಯಲ್ಲಿ ತೀರ್ಮಾನವಾಗುವುವೊ ಸಾಧು ಮಾರ್ಗಗಳಲ್ಲಿಯೊ ಎಂಬುದು ಆಯಾ ಕಾಲದ, ಜನದ ಪರಿಸ್ಥಿತಿಯ, ರೂಢಿಯ, ಅಭ್ಯಾಸಗಳ ಮೇಲೆ ಹೊಂದಿರುತ್ತದೆ." ಭಗವದಿಚ್ಛೆ ಎನ್ನುತ್ತ ಇದನ್ನು ನಿರ್ಲಕ್ಷಿಸುವುದು ಸರಿಯಾದೀತೆ? ಭಗವದಿಚ್ಛೆ ಎಂಬುದೂ ಸತ್ಯಾಂಶ, ಮೌಲ್ಯ ಎರಡೂ ಆಗಿರುತ್ತವೆ-ಅನೇಕರ ಮನಸ್ಸಿನಲ್ಲಿ.

## ಸುಧಾರಣೆ-ಮಾರ್ಗಗಳು

ನಡವಳಿಕೆಯನ್ನು ರೂಪಿಸಿಕೊಳ್ಳುವುದರಲ್ಲಿ ಸ್ಥೂಲವಾಗಿ ಮೂರು ಪ್ರಕಾರಗಳು ಅಥವಾ ಮಾರ್ಗಗಳು ಇವೆಯೆಂದು ಟಿ. ಎಸ್. ಎಲಿಯಟ್ ಒಮ್ಮೆ ಹೇಳಿದರು. ಅವರು ಆಗ ಮತಧರ್ಮವನ್ನು ಕುರಿತು ಆಲೋಚಿಸುತ್ತಿದ್ದರು. ರಾಜಕೀಯ ರಂಗದಲ್ಲಿನಂತೆಯೇ ಅಲ್ಲಿಯೂ ಮೂರು ಪಕ್ಷಗಳ ಮಾರ್ಗಗಳು ಉಂಟು.

(i) ಸಂಪ್ರದಾಯ ಕನ್ಸರ್ವೇಟಿವ್ ಮಾರ್ಗ, (ii) ಉದಾರ ನೀತಿಯ ಲಿಬರಲ್ ಮಾರ್ಗ ಮತ್ತು (iii) ಕ್ರಾಂತಿಕಾರಿ ಅಥವಾ ರೆವೊಲ್ಯೂಷನರಿ (ರ್ಯಾಡಿಕಲ್) ಮಾರ್ಗ.

ಈ ಮೂರೂ ಪೂರ್ತಿ ಒಂದರಂತೆ ಒಂದಲ್ಲ. ಇವುಗಳ ಲಕ್ಷಣ ಬೆರಸಿಕೊಳ್ಳುವುದಿಲ್ಲ. ಈ ಮೂರು ವರ್ಗಗಳಿಗೆ ಮೀರಿ ಸದ್ಯ ಇನ್ಯಾವುದೂ ಶಕ್ಯವಿಲ್ಲವೆಂದು ಇಟ್ಟುಕೊಂಡು ಆ ಮಾತುಗಳನ್ನು ಸ್ವೀಕರಿಸಬಹುದು. ಈ ಪ್ರತಿಯೊಂದೂ ತನ್ನ

ರೀತಿಯಲ್ಲಿ ತೃಪ್ತಿಕರವಾದ ಮಾರ್ಗವೇ. ಲೋಕಕ್ಕೆ ಸೂಕ್ತವಾಗಿರಬಹುದು. ಆದರೆ ಈ ಪ್ರತಿ ಒಂದಕ್ಕೂ ಒಂದೊಂದು ಲೋಪ, ದೋಷ ಇರುತ್ತದೆ. ಸಂಪ್ರದಾಯವನ್ನು ಮುಂದುವರಿಸುವ ಮಾರ್ಗದಲ್ಲಿ ಕೆಲವು ತಪ್ಪು ರೂಢಿಗಳೂ ಆಚಾರಗಳೂ ಮೋಹ ಲೋಭಗಳಿಂದಾಗಿ ಉಳಿದುಕೊಂಡುಬಿಡುತ್ತವೆ. ಉದಾರ ಅಥವಾ ಲಿಬರಲ್ ಪಂಥದಲ್ಲಿ ಸುಧಾರಣೆಗಳಿಗೆ ಅವಕಾಶವೇನೊ ಉಂಟು; ಅಗತ್ಯಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡಿಕೊಳ್ಳುವ ಅವಕಾಶ ತೆರೆದಿರುತ್ತದೆ; ಆದರೆ ಶಿಸ್ತು ಸಡಿಲವಾಗುತ್ತದೆ. ಒಮ್ಮೆ ಸಡಿಲವಾದ್ದನ್ನು ಪುನಃ ಬಿಗಿಪಡಿಸುವುದು ಕಷ್ಟ. ಕ್ರಾಂತಿ ಅಥವಾ ವಿಪ್ಲವದ ರೀತಿ ಎಲ್ಲವನ್ನೂ ಬುಡಮಟ್ಟ ಕೀಳುವ ಮಾರ್ಗ. ನಿತ್ಯ, ಶಾಶ್ವತ ಎಂಬ ಮೌಲ್ಯಗಳೇ ಇಲ್ಲವೊ ಎಂಬಂತೆ ಈ ಮಾರ್ಗ ಹರಡುತ್ತದೆ. ಕ್ರಾಂತಿಯೇ ಮಾರ್ಗ ಎಂದುಕೊಂಡರೆ ಯಾವುದೂ ಹೆಚ್ಚು ಕಾಲ ಉಳಿಯಲಾರದು. ಪ್ರತಿ ವರ್ಷವೂ ಪ್ರತಿ ತಲೆಮಾರಿನಲ್ಲಿಯೂ ಹಿಂದಿನ ಕಾಲದಲ್ಲಿ ನಡೆದುದನ್ನು ಕಿತ್ತುಹಾಕುವುದೇ ದಾರಿಯಾದೀತು. ಒಂದರಲ್ಲಿ ಜಡತೆಗೆ ಸ್ಥಿತಿಸಂರಕ್ಷಣೆಗೆ ಗಮನ ಹೆಚ್ಚು; ನಡೆದುದು ನಡೆದುಕೊಂಡು ಹೋಗಲಿ.

"ಯಸ್ಮಾನ್ನೋ ದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ"-Laissez Faire-ಎಂದು ಯಾರ ಯಾವ ಅಭಿಪ್ರಾಯಗಳನ್ನೂ ಮುಟ್ಟಿ ಅವರಲ್ಲಿ ಬುದ್ಧಿ ವಿಕಾರಗಳನ್ನು, ವಿಕಲ್ಪಗಳನ್ನು ಉಂಟು ಮಾಡುವುದು ತಕ್ಕುದಲ್ಲ ಎನ್ನುವರು. ಅನೇಕ ವೇಳೆ, ಸೂಚಿಸುವ ಚಿಕಿತ್ಸಾ ಪ್ರಕಾರಗಳು ವ್ಯಾಧಿಗಳಿಗಿಂತ ಹೆಚ್ಚು ಕೆಡುಕಾದಾವು. ಇದ್ದದ್ದು ಇದ್ದ ಹಾಗೆಯೇ ಇರಲಿ ಎಂಬ ನಿಲವೂ ನಡವಳಿಕೆಯೂ ಬಲಿಯುತ್ತವೆ. ಕಾಲಕ್ಕೆ ತಕ್ಕಂತೆ ಯಾವುದು ಸುಲಭವಾಗಿ ಹೊಂದಿಕೊಳ್ಳುವುದು ಎಂಬುದನ್ನು ನೋಡಬೇಕು. ನಮ್ಮಲ್ಲಿ ಮಡಿ ಎಂಬ ಪದ್ಧತಿ ಉಂಟು. ಅದು ಎಲ್ಲಿಯವರೆಗೆ ಹೋಗುವುದು, ಅದನ್ನು ಮಾರ್ಪಡಿಸುವುದು ಎಷ್ಟು ಕಷ್ಟ ಎಂಬುದನ್ನು ಎಲ್ಲರೂ ಬಲ್ಲರು. ಅಪರಕರ್ಮಾದಿಗಳಲ್ಲಿ ಜನರ ನಂಬಿಕೆಗಳೂ ಆಚಾರಗಳೂ ಹೇಗೆ ಸೂಕ್ಷ್ಮವಾಗಿ ಉಳಿದುಕೊಂಡಿವೆ ಎಂಬುದನ್ನು ಗಮನಿಸಬಹುದು.

ಲಿಬರಲ್ ಮಾರ್ಗದಲ್ಲಿ ಮಾರ್ಪಾಡಿನ ಮನಸ್ಸಿದೆ. ಆದರೆ ನಿಧಾನವಾಗಿ ಮಾಡೋಣ - Hasten slowly! ಅವಸರ ಬೇಡ - ಇಂಗ್ಲಿಷರ ವಿನೋದಗಳಿಗೆ ಇಂಥ ಮಾತೊಂದು ಲಕ್ಷ್ಯ ಎಂಬುದು ಒಂದು ಪಂಥ. ಬೇಗ ಬೇಗ ಮಾಡೋಣ, ಉತ್ತಮ ಪರಿಸ್ಥಿತಿಯನ್ನು ನಾವು ಕಣ್ಣುಮುಚ್ಚಿಕೊಳ್ಳುವ ಮುಂಚೆ ನೋಡೋಣ ಎಂಬುದು ಇನ್ನೊಂದು. ಈ ಎರಡರಲ್ಲಿಯೂ ತಾಳ್ಮೆ ಜನಕ್ಕೆ ಹೋಗುತ್ತದೆ... ಇರುವುದನ್ನು ನಾಶಮಾಡಿದ ಹೊರತು ಹೊಸ ಹುಟ್ಟಿಗೆ ಮಾರ್ಗವೇ ಇಲ್ಲವೆಂದು ಆವೇಶ, ಕ್ರೋಧ ಬೆಳೆವುದು ಸರ್ವತ್ರ ಕಾಣುತ್ತದೆ. ಅನ್ಯಾಯವನ್ನೂ ಜನ ಎಷ್ಟು ದಿನ ಸಹಿಸಿಯಾರು? ಈ 30-40 ವರ್ಷಗಳಲ್ಲಿ ಜನದ ಮನಸ್ಸು, ಅದರಲ್ಲಿಯೂ ಬಡವರ, ದಲಿತರ ಅಥವಾ



ಶೋಷಿತರೆಂದು ತಿಳಿದುಕೊಳ್ಳುವ ವರ್ಗಗಳಲ್ಲೆಲ್ಲ ಈ ಭಾವನೆ ಬೇರೂರಿದೆ. ಕ್ರಾಂತಿಕಾರಿ ಮನೋಭಾವ ವಿಶೇಷವಾಗಿ ಬೆಳೆದು ಲೋಕದ ಸಮತೆಯನ್ನು ಕೆಡಿಸುತ್ತಿದೆ; ಉಗ್ರಕಾರ್ಯಕ್ರಮಗಳಿಗೆ ಎಡೆಕೊಡುತ್ತಿದೆ; ಈ ಭೂತಕ್ಕೆ ಧೂಪ ಹಾಕುವ ಮಂದಿ ವಿಚಿತ್ರ ವಿಚಿತ್ರ ಜನ. ಇಂಥಲ್ಲೆಲ್ಲ ಜನಗಳ ಆಸೆ, ಪಕ್ಷಪಾತ, ಭಯ, ಸ್ವರಕ್ಷಣೆ, ಪ್ರಮುಖ ಪ್ರಭಾವಗಳಾಗಿ ಕಾರ್ಯಗಳನ್ನು ನಡಸುವುದು.

## ವಿವೇಕ

ವಿವೇಕ, ಜಾಣತನ, ಕಾರ್ಯಕಾರಿಯಾದ ಯೋಚನಾರೀತಿ ಎಂಬವನ್ನು ಮೌಲ್ಯಗಳಾಗಿ ಎಣಿಸುವುದುಂಟು. ಇಷ್ಟು ಕಾಮನ್‌ಸೆನ್ಸ್ ಇರಬೇಡವೆ? ಎನ್ನುತ್ತಾರೆ. ಇರಬೇಕು, ನಿಜ. ಆದರೆ ಸಾಮಾನ್ಯವಾಗಿ ಇರುವುದಿಲ್ಲ. ಇದು ಕಾರ್ಯಕಾರಿ ಹೌದೆ? ಅಲ್ಲವೆ? ಇದನ್ನು ನಡಸಬಹುದೆ? ಎಂಬಂಶದಲ್ಲಿ ಹಲವೇಳೆ ಯೋಚನೆ ಹಾಯುವುದೇ ಇಲ್ಲ. ಮನಸ್ಸಿಗೆ ತೋರಿದ್ದೆಲ್ಲ ನುಡಿಯುವ ಮಾತಾಗುತ್ತದೆ; ಅಥವಾ ಕಾರ್ಯಕಾರಿಯಾಗ ಬಲ್ಲದ್ದು ಎಂಬುದಕ್ಕೆ ಅವಕಾಶವೇ ದೊರೆಯದಿರಬಲ್ಲದು. ದೊಡ್ಡ ವಿಶ್ವಾಸಗಳನ್ನೂ ಉತ್ಸಾಹಗಳನ್ನೂ ಅದು ಜನದ ಮನಸ್ಸಿನಲ್ಲಿ ತುಂಬಲಾರದೆಂದು ಇದಕ್ಕೂ ಅವಕಾಶವೇ ಸಿಕ್ಕುವುದಿಲ್ಲ. ಕಾರ್ಯಕಾರಿ ಎಂಬುದರಲ್ಲಿಯೂ ಹಲವು ಬಗೆಗಳು ಇರುತ್ತವೆ. ಜಬರ್‌ದಸ್ತ್ ಇರುತ್ತದೆ. ಯಾವ ಒಂದರ ಪರವಾಗಿಯೂ ಎಲ್ಲರೂ ಒಪ್ಪಿ ನಡೆಯುವುದು ಕಷ್ಟ. ವಿವೇಕ ಅಥವಾ Wisdom ಎಂಬುದು ಬಹು ದೊಡ್ಡ, ಅಮೂಲ್ಯ ಸ್ಥಿತಿ. ಬುದ್ಧಿ, ಭಾವ, ಇಚ್ಛೆ ಎಲ್ಲವೂ ಹದವಾಗಿ ಹಣ್ಣಾಗಿ ಲೋಕಾನುಭವದಿಂದ ಒಂದು ರೀತಿ ಪಕ್ವವಾಗಿರುವವರ ಸ್ಥಿತಿ ಅದು. ನಿಲವಿನಲ್ಲಿಯೂ ನಡೆ ನುಡಿಯಲ್ಲಿಯೂ ಅದರ ರೀತಿ ತುಂಬಾ ಹಿತಕರ. ಅಂಥವರನ್ನೂ ಅಂಥ ರೀತಿ ನೀತಿಗಳನ್ನೂ ಕಂಡರೆ ಅದು ಬಹು ಚೆಲುವಾದ, ಪಕ್ವವಾದ ಮಾರ್ಗವೆನಿಸುತ್ತದೆ. ಆದರೆ ಅಲ್ಲಿ ಎರಡು ವಿರುದ್ಧ ನೀತಿಗಳು ಒಂದರ ಮಧ್ಯಸ್ಥದಲ್ಲಿ ಹೊಂದಿಕೊಂಡಿರುತ್ತವೆ. ಲೋಕವನ್ನು ಅದು ಅರ್ಥಮಾಡಿಕೊಂಡಿರುತ್ತದೆಯಾಗಿ ಕೆಲವೇಳೆ ಯಾವುದನ್ನೂ ಮಾಡದೆ ಹಿಮ್ಮೆಟ್ಟುತ್ತದೆ. ನಡವಳಿಕೆಯ ತತ್ತ್ವವಾಗಿ ಅದು ಚುರುಕಾಗಿ ನುಗ್ಗಿ ಕ್ರಿಯಾಮುಖವಾಗದು. ಒಂದು ಸಂಸ್ಕೃತಿ ಸಾಧನೆಯ ಮಾರ್ಗದಲ್ಲಿ ಅದು ಕೊನೆಯ ಘಟ್ಟ. ಅದರ ರೀತಿಯಲ್ಲಿ ಅದರ ಸುಫಲತೆ ದೊಡ್ಡದು. ಆದರೆ ಹೆಚ್ಚು ಜನಕ್ಕೆ ಇದು ಶಕ್ಯವಿಲ್ಲ. ಇಷ್ಟಕ್ಕೆ ನಿಲ್ಲಿಸಿಕೊಳ್ಳೋಣ, ಶಾಂತಿಗೆ ವಿಶ್ರಾಂತಿಗೆ ಇಷ್ಟು ಸಾಕು, ಉಳಿದುದು ಬೇಡ ಎಂದು ತೀರ್ಮಾನವಾಗುವ ಕಡೆಗಳಲ್ಲೆಲ್ಲ ಇದರ ರೀತಿ ಪರಮ ಹಿತಕರವಾದ್ದು. ಇದರ ಆಕರ್ಷಣೆ ಋಷಿಗಳ, ಸಂತರ ಪೂಜ್ಯತೆಯಂತೆ. ಇಲ್ಲಿ ಆಕ್ರೋಶವಿಲ್ಲ, ಕ್ರೋಧವಿಲ್ಲ, ಅವಸರವಿಲ್ಲ. ಸಮಧಾತು, ಶಾಂತಿ, ತಾಳ್ಮೆ ಇರುತ್ತವೆ. ಆದರೆ ರಾಗದ್ವೇಷ- ಭೂಯಿಷ್ಠವಾದ ಲೋಕ ಜೀವನದಲ್ಲಿ ಅನೇಕ ಪ್ರಸಂಗಗಳು ಧಾವತಿಗೊಳ್ಳುವ ಅವಸರದ ಲಕ್ಷಣದವು. ಅನ್ಯಾಯ, ದುಃಖ, ಸಂಕಟ, ಪೀಡೆಗಳನ್ನು ಉಂಟುಮಾಡುವಂತಹವು. ಅಲ್ಲಿನ ಉದ್ವೇಗಗಳು ಸುಲಭವಾಗಿ ಶಮನವಾಗವು. ಮಾ ಶುಚಃ ಎಂದರೆ ಕೇಳುವುದಿಲ್ಲ. ಲೋಕಂ ಶೋಕಹತಂ ಚ ಸಮಸ್ತಂ

ಎಂಬುದು ಎಷ್ಟು ಎಚ್ಚರ ಕೊಡಬಲ್ಲದೊ ಅಷ್ಟೂ ಅಷ್ಟು ಲೋಕಜೀವನದ ಲಕ್ಷಣವಾಗಿಯೇ ಉಳಿದಿರುತ್ತದೆ. ವ್ಯಕ್ತಿ ಜೀವನದಲ್ಲಿ ವಿವೇಕವನ್ನು ಸಾಧಿಸಬಹುದು. ಆದರೆ ಎಲ್ಲಿ ಆವೇಶದ ನುಗ್ಗು ಇರುತ್ತದೆಯೋ ಅಲ್ಲಿ ನಡೆಯದು.

## Ought

ಇದು ಧರ್ಮ, ಗಮ್ಯ ಎಂಬುದು Ought ಪ್ರಪಂಚ. ಅದರಲ್ಲಿ ಒಂದು ಜನವರ್ಗದ ಸಮಸ್ತ ನೈತಿಕ ಪ್ರಜ್ಞೆ ಜಾಗ್ರತವಾಗಿರುತ್ತದೆ. ಇಲ್ಲಿಯೂ ಮಂದ ಅಥವಾ ಸ್ಥಿತಿಸ್ಥಾಪಕ ನೆಲಸು ಒಂದುಂಟು. ಹೊಸ ಧ್ಯೇಯ ಸಾಧನೆಗಳ ತವಕ ಒಂದುಂಟು. ಒಳ್ಳೆಯದೆನ್ನುವುದು ಉದ್ದೇಶದ ಮತ್ತು ಗುರಿಯ ವಿಷಯವಾಗುತ್ತದೆ. ಈ ಒಳ್ಳೆಯದೆನ್ನುವುದು ಕೂಡ ಕಾಲ ದೇಶ ಪರಿಸ್ಥಿತಿಗಳಲ್ಲಿ ಬೇರೆ ಬೇರೆ. ಒಂದು ಕಡೆ ಒಳ್ಳೆಯದೆನ್ನುವುದು ಇನ್ನೊಂದು ಕಡೆಗೆ ಒಪ್ಪದು. ಇವುಗಳಲ್ಲಿ ಏಕರೂಪತೆ ಯಾವ ಕಾಲಕ್ಕೂ ಇಲ್ಲ. ನಡವಳಿಕೆಯ ತತ್ವಗಳೂ ಪ್ರಮಾಣಗಳೂ ಬೇರೆ ಬೇರೆ; ಮನಸ್ಸಿನ ಒಲವೂ ಪ್ರಯೋಜನಾಪೇಕ್ಷೆಯೂ ಬೇರೆ ಬೇರೆಯಾಗಿರುವುದರಿಂದ. ಒಬ್ಬರು ಈಚೆಗೆ ಹೇಳಿದಂತೆ, ಅವು ಸಾಧಾರಣವಾಗಿ ಸಂಚಾರ ವ್ಯವಹಾರಗಳಲ್ಲಿ ಏರ್ಪಡಿಸಿಕೊಂಡ ರಸ್ತೆಯ ನಿಯಮಗಳಂತೆ-ಟ್ರ್ಯಾಫಿಕ್‌ರೂಲ್ಸ್-ಮಾತ್ರ ಆಗುತ್ತವೆ. ಸಂಚಾರ ಸೌಕರ್ಯಗಳಿಗೆ ಒದಗುವಂತಹ ನೇಮಗಳು, ತತ್ವಗಳು-ಎಂದರೆ ಹಲವರಿಗೆ ಹಗುರವೆನ್ನಿಸೀತು. ಆದರೆ ಬಹುಮಟ್ಟಿಗೆ ಈ ಸೂತ್ರ ಸ್ವರೂಪ ಒಪ್ಪುತ್ತದೆ. ಹೀಗೆ ನಡೆದುಕೊಂಡರೆ ಪ್ರಯೋಜನ; ನಡೆಯದಿದ್ದರೆ ಅಪಾಯ ಉಂಟು ಎಂಬುದನ್ನಾದರೂ ಇದು ನಿರ್ದೇಶಿಸುತ್ತದೆ.

## ಒಳಿತು

ಆದರೆ ಒಳ್ಳೆಯದೆಂಬುದು ಯಾವುದು? ಇದರ ಲಕ್ಷಣವನ್ನು ಕಾಲದ ಆದಿಯಿಂದ ಮಾಡಿದ್ದಾರೆ. ಹಲವು ಬಗೆಯ ವಿಶ್ಲೇಷಣೆಗಳನ್ನು ಮಾಡಿ ಬಗೆಬಗೆಯ ತೀರ್ಮಾನಕ್ಕೆ ಬಂದಿದ್ದಾರೆ. ವ್ಯಕ್ತಿ, ಸಮಾಜ, ಧರ್ಮದೃಷ್ಟಿ, ಅಧ್ಯಾತ್ಮದೃಷ್ಟಿ, ಸಂಸ್ಕಾರ ಇವುಗಳಿಗೆಲ್ಲ ಸಂಬಂಧಿಸಿದಂತೆ ಧಾರಾಳದಲ್ಲಿ, ನಿರ್ಬಂಧದಲ್ಲಿ ಆಚಾರಗಳು ಇಲ್ಲಿ ಸೇರಿಕೊಳ್ಳುತ್ತವೆ. ಬಯಕೆಗಳಿರುತ್ತವೆ; ಆಕಾಂಕ್ಷೆ, ಭರವಸೆ ಇರುತ್ತವೆ... ಆತ್ಮಸಾಧನೆ-Self Realisation ಎಂಬುದು ಒಂದು ಮಾತು; ಅಂತಃಸಾಕ್ಷಿ ಎಂಬುದು ಇನ್ನೊಂದು. ಪ್ರತಿಯೊಬ್ಬರ ಹೃದಯದಲ್ಲಿಯೂ ಸಣ್ಣಗೆ ಎಂದರೆ ನುಡಿಯದೆ ನುಡಿಯುವಂತಿದೆಯೆನ್ನುವ ಸಣ್ಣದನಿ ಮುಂತಾದವು ಇಲ್ಲಿ ಮಾತುಗಳು. ಯಾರ ಅಂತಃಸಾಕ್ಷಿ? ಯಾವ ಪ್ರಯೋಜನ ಸಾಧನೆಗೆ? ಅದನ್ನು ಹೇಗೆ ಬಳಸುತ್ತಾರೆ? ಎಂಬುದು ಮುಖ್ಯವಾಗಿ ಯೋಚಿಸಬೇಕಾದ ಅಂಶ. ತೋಳದ ಅಂತಃಸಾಕ್ಷಿ ಸಹಜವಾಗಿ ಕುರಿಮರಿ ತನ್ನ ಹೊಟ್ಟೆಗೆ ಹೋಗಿ ಸೇರಬೇಕು ಎಂಬುದು. ಆ ಫಲಪರಿಣಾಮ ದೊರೆಯುವವರೆಗೂ ಅದರ ಶಾಂತಿಗೆ ಭಂಗ, ಧಕ್ಕೆ. ರಾಮಾಯಣದಲ್ಲಿ ಸೋದರ ಜಿಂಕೆಯೆಂಬ ಆಕರ್ಷಣೆಯಿಂದ ಮಾಯಾಮೃಗದ ಬಳಿಗೆ



ಬೇರೆ ಜಿಂಕೆಗಳು ಬರುತ್ತವೆ. ಆದರೆ ವಾಸನೆಯಿಂದ ಗೊತ್ತಾಗುತ್ತದೆ: ಅದು ಜಿಂಕೆಯಲ್ಲ, ರಾಕ್ಷಸ ಎಂದು. ಕೂಡಲೆ ಭಯದಿಂದ ಅವು ಓಡಿಹೋಗುತ್ತವೆ. ಮಾಯಾಮೃಗ ರೂಪದಲ್ಲಿರುವ ಮಾರೀಚನಿಗೂ ಆಸೆಯೇ. ಇಷ್ಟು ಹತ್ತಿರಕ್ಕೆ ಬಂದ ಕೊಬ್ಬಿದ ಜಿಂಕೆಗಳನ್ನು ಸುಲಭವಾಗಿ ಹಿಡಿದು ತಿನ್ನಬಹುದಾಗಿತ್ತು ಎಂದು. ಆದರೆ ರಾವಣನು ತನಗೊಪ್ಪಿಸಿದ್ದ ಕಾರ್ಯ ಒಂದಿದೆ; ಅಟ್ಟಿ ಬರುತ್ತಿರುವ ರಾಮನ ಎದುರಿಗೆ ತನ್ನ ವೇಷವನ್ನು ಮಾರ್ಪಡಿಸಿಕೊಳ್ಳುವ ಹಾಗಿಲ್ಲ ಎಂಬ ತಕ್ಷಣದ ಕಾರ್ಯಸಾಧನೆಯ ಬುದ್ಧಿ ಇರುತ್ತದೆ. ಇಲ್ಲಿನ ಮನಸ್ಸು, ನಡವಳಿಕೆ ಬಹು ಮೋಜಿನದು-ಮೌಲ್ಯಗಳಲ್ಲಿ ತಿಕ್ಕಾಟದ ಸನ್ನಿವೇಶ ಇದು. ಕೆಲವರ ಅಂತಃಸಾಕ್ಷಿ ಬಹಳ ಪ್ರಬಲವಾದ ಕಾರಣವಾಗಿ ಇತರರನ್ನು ತಮ್ಮ ಪಕ್ಷಕ್ಕೂ ಮತಕ್ಕೂ ವಿಶ್ವಾಸಕ್ಕೂ ಬಲಾತ್ಕಾರದಿಂದ ತಿರುಗಿಸಿಕೊಳ್ಳಬಯಸುತ್ತದೆ. ಸಾಮ್ರಾಜ್ಯದ ಶಕ್ತಿ, ವೃತ್ತಿ ಇರುವ ರಾಜ್ಯ ವರ್ಗಗಳು ತಮ್ಮ ಸುತ್ತಮುತ್ತಲಿನ ದೇಶಗಳೆಲ್ಲ ತಮಗೆ ಅಧೀನವಾಗಿರಬೇಕು, ಶಕ್ಯವಾದರೆ ತಮ್ಮಲ್ಲೆ ವಿಲೀನವಾಗಬೇಕು ಎಂಬುದು. ಅಧಿಕಾರ ದರ್ಪಗಳನ್ನು ಚಲಾಯಿಸುವ ಸಂಸ್ಥೆಗಳು, ಶಕ್ತಿ ವರ್ಗಗಳು ಯಾವಾಗಲೂ ಇಂಥ ಒತ್ತಾಯಗಳನ್ನೂ ದಬ್ಬಾಳಿಕೆಗಳನ್ನೂ ನಡಸುವವು. ಗಂಡ ಹೆಂಡತಿಯ ಮೇಲೆ ಈ ಕಡ್ಡಾಯವನ್ನು ವಿಧಿಸುತ್ತಿರುತ್ತಾನೆ. ಸಮಾಜ ಹಿತ, ರಾಜಕೀಯ ಅಥವಾ ಮತದ ನಿಯಮ ಎಂಬ ಹೆಸರಲ್ಲಿ ಇಂಥ ವಿಧಿಗಳನ್ನೂ ಶಾಸನಗಳನ್ನೂ ಜಾರಿಗೆ ತರುವುದು ರೂಢಿ. ಸಮಾಜದ ಮತ್ತು ರಾಜ್ಯದ ಅಗತ್ಯಕ್ಕೆ ಸಿಕ್ಕಿ ವ್ಯಕ್ತಿ ಸ್ವಾತಂತ್ರ್ಯ ದುರ್ಬಲಗೊಳ್ಳುತ್ತದೆ. ಯುದ್ಧಗಳಂತಹ ಅವಸರದ ಮತ್ತು ಪೀಡೆಯ ಪ್ರಸಂಗಗಳಲ್ಲಿ ಇತರ ಎಲ್ಲ ಮೌಲ್ಯಗಳೂ ವಿವೇಚನೆಗಳೂ ಮುರಿದು ಬೀಳುತ್ತವೆ. ಸ್ವದೇಶ ಪ್ರೀತಿ, ಪಕ್ಷ ಪ್ರಯೋಜನ ಮುಂತಾದವುಗಳ ಒತ್ತಡ ಮೇಲಾಗಿ ಶಿಸ್ತಿನ ಹೆಸರಲ್ಲಿ ಉಳಿದ ಎಲ್ಲ ಆಸಕ್ತಿಗಳೂ ಪ್ರಯೋಜನಾಂಶಗಳೂ ಅಳಿಸಿಹೋಗುವುದುಂಟು. ವ್ಯಕ್ತಿಗಳ ಅಂತಃಸಾಕ್ಷಿ ಎಂಬುದಕ್ಕೆ ಯಾವ ಅವಕಾಶವೂ ದೊರೆಯದು. ಎದುರುಬಿದ್ದ ಜನ ಒಂದೊ: ಗಡಿಪಾರಾಗಬೇಕು; ಅಥವಾ, ಸೆರೆಯಲ್ಲಿರಬೇಕು; ಅಥವಾ ತಲೆದಂಡ ಒಪ್ಪಿಸಬೇಕು. ಅಂಥ ಸಮಯಗಳಲ್ಲಿ ಬೇರೆ ಮಾರ್ಗವೇ ತೆರೆದಿರುವುದಿಲ್ಲ. ಸರಿಯೊ ತಪ್ಪೊ ದೇಶ, ದೇಶದ ಹಿತ ಎಂಬುದಕ್ಕೆ ಅಂಥ ಸಮಯದಲ್ಲಿ ಸರ್ವಾಧಿಕಾರ.

## ಇನ್ನೊಂದು ಉದಾರದೃಷ್ಟಿ

ನಮ್ಮ ದೇಶದಲ್ಲಿ ಲೋಕಜೀವನ ಮೋಹವೆಂದೂ "ಸ್ವದೇಶೋ ಭುವನ ತ್ರಯಂ" ಎಂದೂ ಹಿರಿಯರು ಹಾಡಿದ್ದಾರೆ. ಸ್ವದೇಶ ಪ್ರೀತಿಯ ಅಥವಾ ಇಲ್ಲಿನ ವ್ಯವಹಾರ ಜೀವನದ ಅಗತ್ಯವೂ ಬೇಡಿಕೆಗಳೂ ಸಂಕುಚಿತಭಾವವೆಂದೊ ಏಕದೇಶವಾದವೆಂದೊ ಅವುಗಳ ಸಾಧನೆಗೆ ಅತಿಯಾದ ಮಾನ್ಯತೆ ಕೊಡಬೇಕಿಲ್ಲವೆಂದೊ ಅವರ ಎಣಿಕೆ. ಅಥವಾ, ಅಂತಾರಾಷ್ಟ್ರೀಯ ಹಿತಸಾಧನೆಯ ದೃಷ್ಟಿಯಿಂದ, ಲೋಕ ಶಾಂತಿಯ ದೃಷ್ಟಿಯಿಂದ ಕೇವಲ ಸ್ವದೇಶದ ಪ್ರಯೋಜನ ಎಣಿಕೆ ಕ್ಷುದ್ರವೆಂದು ಎಣಿಸಬಾರದೇಕೆ? ಎನ್ನುವ ಜನ ಇಲ್ಲದೆ ಇಲ್ಲ. ವಾಸ್ತವವಾಗಿ ಅಲ್ಲದಿದ್ದರೆ ವಾದವಾಗಿ

ಅಂಥ ಭಾವನೆ ಬಲಿತರೆ ನಮ್ಮ ರಾಷ್ಟ್ರದ ಪ್ರಯೋಜನ ಸಣ್ಣ ಪ್ರಯೋಜನವಾಗುತ್ತದೆ. ಒಟ್ಟು ದೃಷ್ಟಿಯಿಂದ ಇದಕ್ಕೆ ಬೆಲೆ ಕಡಮೆಯಾಗುತ್ತದೆ. ಉಳಿದವರೆಲ್ಲರೂ ಸ್ವಪ್ರಯೋಜನವನ್ನು ಸಾಧಿಸುತ್ತಿರುವಾಗ ನಾವು ಶುದ್ಧ ಧರ್ಮಗಳನ್ನು ನಡಸುತ್ತೇವೆಂದರೆ ಎಲ್ಲವನ್ನೂ ಕಳೆದುಕೊಳ್ಳುವ ಘಟ್ಟಕ್ಕೆ ಬರಬಹುದು; ಅಥವಾ ನಗೆಪಾಡಾಗಬಹುದು. ನಮ್ಮ ಧರ್ಮೋಪದೇಶಗಳನ್ನು ಕೇಳಿ ನಮ್ಮನ್ನು ಐರಾವತ ಎನ್ನುತ್ತಿದ್ದವರಿಗೆ ನಾವು ಸೈನ್ಯ ಕಳಿಸಿ ಗೋವಾವನ್ನು ಪೋರ್ಚುಗೀಸರಿಂದ ವಶಮಾಡಿಕೊಂಡಾಗ, “ಶೆಟ್ಟರೆ ನೀವೂ ತಿರಿಪೆಗೆ ಬಂದಿರ?” ಎಂಬಂತೆ ಆಯಿತೆಂದರು; ಭಾರತ ಇನ್ನೂ ಆನೆಯೇ ಸರಿ, ಆದರೆ ತನ್ನ ಬಿಳುಪನ್ನು ಮಾತ್ರ ಕಳೆದುಕೊಂಡಿದೆ ಎಂದರು. ಇಂಥ ಸಂಗತಿಗಳನ್ನು ಆಳವಾಗಿ ಪರ್ಯಾಲೋಚಿಸಿದಷ್ಟೂ ಜನ ಈಗ ಒಪ್ಪಿಕೊಂಡು ನಡೆಯುತ್ತಿರುವ ಅನೇಕ ಮೌಲ್ಯಗಳು ಅತಂತ್ರವಾದವು, ನಡತೆಗಳು ಅನೀತಿಯುತ ಎಂದು, ಸರ್ವಜನಹಿತ ಸಾಧಕವಲ್ಲ ಎಂದು ಕಂಡಾವು.

## ಸಂಗ್ರಹ

ಈ ವರೆಗೆ ಹೇಳಿದುದನ್ನು ಹೀಗೆ ಸಂಗ್ರಹಿಸಬಹುದು:

ಲೋಕದಲ್ಲಿ ನಡೆದದ್ದು, ಬಿಟ್ಟದ್ದು; ಆಗುವುದು, ಆಗದ್ದು; ಭ್ರಾಂತಿ, ಆಕಾಂಕ್ಷೆ; ವ್ಯಸನ, ಮದ, ಮರುಳು, ವಿಕಾರ ಎಲ್ಲಾ ಸತ್ಯ. ಹೀಗೆ ಎಂದು ಅದನ್ನು ಕರೆದಾಗ ರಾಗದ್ವೇಷ ಕೆರಳುತ್ತವೆ. ಆಕ್ರೋಶ ಹುಟ್ಟುತ್ತದೆ. ಇದು ಸರಿ ತಪ್ಪು ಎಂದಾಗಲೂ ಹಾಗೆಯೇ. ಅಂಥಲ್ಲಿ ವಾಸ್ತವ ಭಾಗ ಅಷ್ಟು, ಮನಸ್ಸಿನ ಭಾಗ ಅಷ್ಟು. ಶಾಸ್ತ್ರ ಅಥವಾ, ವಿಜ್ಞಾನ ಸತ್ಯ, ಸಾಮಾಜಿಕ ಸತ್ಯ, ಕಾನೂನು ಹಬ್ಬುಗೆಯದು, ಮತಧರ್ಮ, ವೇದಾಂತ, ವಿಜ್ಞಾನ, ಕಲೆ, ವ್ಯಾಪಾರ ಇವುಗಳ ಸತ್ಯ: (Technical) ತಂತ್ರವಿಧಾನಗಳಿಗೆ ಸೇರಿದ್ದು; ವ್ಯಕ್ತ್ಯಂಶ ಅಥವಾ ಖಾಸಗಿಯಾದ್ದು , ಸಾರ್ವಜನಿಕವಾದ್ದು; ಕಾಲಹತ, ಆಗಾಮಿ, ವರ್ತಮಾನ ಸತ್ಯ ಎಂಬ ಸಂಬಂಧಗಳೆಲ್ಲ ಹುಟ್ಟಿಕೊಳ್ಳುತ್ತವೆ. ನಿರ್ಮಾಣವಾಗದೆ ಇರುವವು, ಹೇಗಾದಾವು ಎಂಬ ಸೂಚನೆ ಕೊಡದೆ ನೆಲಸಿರುವ ಎಲ್ಲವೂ ಸತ್ಯಾಂಶಗಳೇ. ಇವುಗಳಲ್ಲಿ ತಿಕ್ಕಾಟ, ವೈರವರ್ಗ ಮಿತ್ರವರ್ಗ, ಉದಾಸೀನ, ಉತ್ತಮ ಮಧ್ಯಮ ವರ್ಗ ಉಂಟು. ಉಗ್ರವಾಗಿ ನುಗ್ಗುವ ಪ್ರಭಾವಗಳುಂಟು. ಜಡಾಂಶಗಳುಂಟು. ಕೆಲವು ಹೊರಗಿನವು, ಕೆಲವು ಒಳಗಿನವು. ವಿಶೇಷ ಕಾಲ ಪರಿಸ್ಥಿತಿಗಳಲ್ಲಿ ತೋರುವವು, ಸಾಮಾನ್ಯವಾಗಿ ರೂಢವಾಗಿರುವುವು-ಇವೆಲ್ಲ ಸತ್ಯಾಂಶ. ಇದು ಲೋಕ ಸ್ವರೂಪ ಎಂದೆ. ಇದರ ನೆಲಸನ್ನು ಅನುಸರಿಸಿ ವಿಧಿ ನಿಷೇಧ ಭಾಗವುಂಟು; ಧರ್ಮ ಧ್ಯೇಯ ಗಮ್ಯ ಭಾಗಗಳುಂಟು. ಅನೇಕ ಬಗೆಯಲ್ಲಿ ಜನ ತಮ್ಮ ಇಷ್ಟವನ್ನೂ ಪ್ರಯೋಜನವನ್ನೂ ರಾಗದ್ವೇಷಗಳನ್ನೂ ಸಾಧಿಸಿಕೊಳ್ಳಲು ಬಯಸಿ ಅವನ್ನೊ ಅವುಗಳಿಗೆ ಅನುಕೂಲ ವಾದವನ್ನೊ ಬೆಲೆಗಳಾಗಿಸಿಕೊಳ್ಳುತ್ತಾರೆ, ತಮ್ಮ ಕರ್ಮಗಳನ್ನೂ ಮಾತನ್ನೂ ಮನಸ್ಸನ್ನೂ ಸ್ಥಾಪಿಸಲು ಯತ್ನಿಸುತ್ತಾರೆ. ಇಲ್ಲಿ ಮೇಲು, ಬೀಳು, ತಾಜ್ಯ, ಗ್ರಾಹ್ಯ ಎಂಬುದುಂಟು.



ಜೀವನದ ಎಲ್ಲ ರಂಗದಲ್ಲಿಯೂ ಇವುಗಳ ತಾಂಡವ ಕಾಣುತ್ತದೆ. ಮೌಲ್ಯ ಸಾಧನೆಯಲ್ಲಿ ಅತಿ ರೂಕ್ಷ, ಬರ್ಬರ ಎಂಬುದರಿಂದ ಹಿಡಿದು ನಯ, ಸ್ವಾರ್ಥನಿರಪೇಕ್ಷ, ಹುತಾತ್ಮತೆ ಎಂಬವರೆಗೂ ನೆಲಸುಂಟು. ಅತಿ ಸರಳ ಎಂಬಲ್ಲಿ ಕೂಡ ಗುಪ್ತವಾಗಿ ಇನ್ನೇನೊ ಸೇರಿ ಕೊಂಡಿರುತ್ತದೆ. ಸತ್ಯವೆಂಬುದರ ನೆಲಸೇ ‘ದುರ್ಧರ್ಷಂ, ಅತಿಗಂಭೀರಂ’ ಎನ್ನಬಹುದು. ಇದರ ಪರಿವೆ ಇಲ್ಲವಾದರೆ ನಾವು ಲೋಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರೆವು. ಇವುಗಳ ಬಗೆಗೆ ನಮ್ಮ ನಿರ್ಣಯ, ಸಿದ್ಧಾಂತ ಸರಿಯಾಗದು. ಅವರವರ ಮರ್ಜಿಗೆ ತಕ್ಕಂತೆ ಅವರವರು ತಮ್ಮ ನಡತೆಗೆ ಬೆಲೆ ಕಟ್ಟಿಕೊಳ್ಳಬಹುದೇ ಹೊರತು ಅದು ನೀತಿ, ಧರ್ಮ ಎಂಬಂಶದಲ್ಲಿ ಅವುಗಳ ಮೌಲ್ಯ ಪರ್ಯಾಲೋಚ್ಯ ಎಂದಾಗುತ್ತದೆ.

# ಎರಡು ತ್ರಿವರ್ಗಗಳು

ಮೂರು ಮೂರು ಮಾತುಗಳುಳ್ಳ ಎರಡು ಗುಚ್ಛಗಳನ್ನು ತೆಗೆದುಕೊಂಡು ಸತ್ಯ ಮೌಲ್ಯಗಳ ವಿಶೇಷ ಸ್ವರೂಪವನ್ನೂ ಸಂಬಂಧವನ್ನೂ ಈಗ ಸ್ಥೂಲವಾಗಿ ಪರೀಕ್ಷಿಸಬಹುದು.

(1) ಸತ್ಯ, ಶಿವ, ಸುಂದರ

(2) ನ್ಯಾಯ (Justice), ಸ್ವಾತಂತ್ರ್ಯ, ಸಮಾನತೆ

ಈ ತ್ರಿವರ್ಗಗಳಲ್ಲಿ ಒಂದೊಂದೂ ಜನಕ್ಕೆ ಮುಖ್ಯವೆನಿಸಿವೆ. ಬಹುಕಾಲದಿಂದ ಇವುಗಳ ಪರವಾಗಿ ಗಮನವನ್ನೂ ಯತ್ನವನ್ನೂ ಜನ ಹರಿಸಿದ್ದಾರೆ. ಇವುಗಳ ಸ್ವರೂಪವನ್ನು ಸಾವಿರಾರು ವರ್ಷಗಳಿಂದ ಅರ್ಥಮಾಡಿಕೊಳ್ಳಲು ಬಯಸಿ ರಾಜ್ಯಗಳಲ್ಲಿಯೂ ಬದುಕಿನಲ್ಲಿಯೂ ಇವು ನೆಲಸಬೇಕೆಂದು ಆಸೆಪಟ್ಟಿದ್ದಾರೆ. ಇವು ಧ್ಯೇಯಗಳೆನ್ನುವ ಮಟ್ಟಿಗೆ ಕಾರ್ಯ ಮತ್ತು ಅಧಿಕಾರಚಾಲನೆ ನಡೆದಿದೆ. ಈ ಮಾತುಗಳನ್ನು ನುಡಿದ ಕೂಡಲೆ ಪಕ್ಷಪಾತ, ಧರ್ಮಶ್ರದ್ಧೆ, ಚಿತ್ತವಿಸ್ತಾರಗಳು ಹುಟ್ಟಿಕೊಳ್ಳುತ್ತವೆ. ಎಲ್ಲರಿಗೂ ಇದರರ್ಥ ಪರಿಚಿತವಾದಂತೆ ಬೋಧೆಯಾದರೂ ಇವೆಲ್ಲ ಅಗತ್ಯವಾಗಿ ಬೇಕೆಂದು ಎಲ್ಲರೂ ಆಶಿಸಿದರೂ ಇವುಗಳ ಅರ್ಥವೇನೆಂಬ ನಿರ್ಣಯ ಕಷ್ಟ. ಸಾಧಾರಣ್ಯದಲ್ಲಿ ಮನವರಿಕೆ ಮಾಡಿಕೊಂಡರೂ ಯಾವುದೇ ಸನ್ನಿವೇಶದಲ್ಲಿ ಈ ಅರ್ಥ ಇಷ್ಟೇ ಸರಿ, ಹೀಗೇ ಸರಿ ಎಂದು ನಿರ್ಣಯಿಸಿ ಸೀಮಿಸುವುದು ಸುಲಭವಲ್ಲ. ಆ ಅರ್ಥಕ್ಕೆ ಸಿಕ್ಕದ, ಒಳಪಡದ, ವಿರುದ್ಧವಾದ ಎಷ್ಟೋ ಸನ್ನಿವೇಶಗಳು ಉಳಿದುಕೊಳ್ಳುತ್ತವೆ. ಯೋಚನೆ ಮಾಡಿದಷ್ಟೂ ಅವುಗಳ ಆಳ, ನೆಲಸು ದೊಡ್ಡದಾಗಿ ಕಾಣುತ್ತದೆ. ಈ ಪ್ರತಿ ಒಂದನ್ನು ಕುರಿತೂ ಒಂದೊಂದು ಶಾಸ್ತ್ರ ಹುಟ್ಟಿಕೊಂಡಿದೆ.

ಸತ್ಯ (Truth) ಎಂಬ ಅರ್ಥದಲ್ಲಿ ಮಾನಮೇಯ ಪ್ರಪಂಚ-Epistemology ಎಂಬುದು ತತ್ವಶಾಸ್ತ್ರಕ್ಕೆ ಸೇರಿದ್ದು. ಸತ್ಯದ ಲಕ್ಷಣಗಳೇನು? ಇದನ್ನು ಕಂಡು ಹಿಡಿಯುವ ಬಗೆ ಹೇಗೆ? ಅದರಲ್ಲಿ ಪ್ರಮಾಣಗಳಾವುವು? ಅವು ಏಕೆ, ಹೇಗೆ ಪ್ರಮಾಣ? ಎಂಬ ವಿಚಾರವೆಲ್ಲ ಅಲ್ಲಿ ವಿಷಯ. The Good ಎಂಬ ಇಂಗ್ಲಿಷಿನ ಮಾತಾಗಲಿ, ಶಿವ ಎಂಬ ಸಂಸ್ಕೃತದ ಮಾತಾಗಲಿ ಬೇರೆ ಬೇರೆ ಅರ್ಥ ಉಳ್ಳವು. ಸಾಮಾನ್ಯವಾಗಿ



ಒಳ್ಳೆಯದು ಎಂಬುದರಿಂದ ಹಿಡಿದು ಹಿತ, ಕಲ್ಯಾಣ, ಮಂಗಳ ಎಂಬವರೆಗೂ ವ್ಯಾಪ್ತಿ ಹೋಗುತ್ತದೆ. The Beautiful - ಸುಂದರ ಎಂಬ ಮಾತು ಚೆಲು, ಮೋಹಕ, ಆರ್ದ್ರಮಾಡಬಲ್ಲದ್ದು ಎಂಬ ಸೌಂದರ್ಯ ಮೀಮಾಂಸೆಗೆ ಸಂಬಂಧಿಸಿದ್ದು. ಎರಡನೆಯ ತ್ರಿವರ್ಗದಲ್ಲಿ ಬಹುಮಟ್ಟಿಗೆ ರಾಜ್ಯಶಾಸ್ತ್ರಕ್ಕೂ ರಾಜಕೀಯ ಜೀವನದಲ್ಲಿ ಗಮ್ಯವೆಂದು ಜನ ಬಯಸುವ ಆಡಳಿತ ವ್ಯವಸ್ಥೆಗೂ ನೆಲಗಟ್ಟಾದ ರಾಜ್ಯಾಂಗ ವಿಧೇಯಕಗಳು ನಿರ್ಮಾಣ ಮಾಡುವ ಪ್ರಪಂಚದ ವಿಸ್ತಾರವಿದೆ. ಇಲ್ಲಿಯೂ ಹಾಗೇ. ಪಾಶ್ಚಿಮಾತ್ಯರು Justice ಎಂದು ಹೇಳುವ ಮಾತಿಗೆ ನ್ಯಾಯ, ಧರ್ಮ ಮುಂತಾದ ಮಾತುಗಳನ್ನು ಸಮವ್ಯಾಪ್ತಿಯಲ್ಲಿ ಬಳಸುವುಕ್ಕಾಗುವುದಿಲ್ಲ. Justice ಎಂಬ ಮಾತಿನ ಮೂಲ Jus ಎಂಬುದು. ಅದನ್ನೂ ಸಮರ್ಪಕವಾಗಿ ವಿವರಿಸಿದವರು ಇಲ್ಲ. ನ್ಯಾಯವೆಂಬ ಮಾತಿನಲ್ಲಿಯೂ ನೂರಾರು ಬಗೆಯ ಅರ್ಥವ್ಯಾಪ್ತಿ, ಅರ್ಥಸಂಬಂಧಗಳುಂಟು. ಒಂದು ಸೂತ್ರ, ವ್ಯಾಪಕವಾದ ಅಧಿಕಾರವುಳ್ಳ ಯಾವುದೊ ಒಂದು ನಡವಳಿಕೆಯ ಶಾಸನ ಮುಂತಾದ ಎಲ್ಲ ಅರ್ಥಗಳಲ್ಲಿಯೂ ಈ ಮಾತಿನ ಬಳಕೆ ಉಂಟು. ಸ್ವಾತಂತ್ರ್ಯವೆಂಬುದು ಇನ್ನೂ ಕಷ್ಟವಾದ ಮಾತು; ಕಲ್ಪನೆ. ತಮ್ಮ ತಮ್ಮ ವಶದಲ್ಲಿ ತಾವಿರುವುದು, ಯಾರ ಯಾವ ನಿರ್ಬಂಧ ಇಲ್ಲದೆ, ಇತರ ಯಾವ ಅಡ್ಡಿ ಆತಂಕ ಇಲ್ಲದಂತೆ, ತನಗೆ ಮಾತ್ರ ಅಧೀನವಾಗಿ, ತನ್ನಿಚ್ಛೆಯಂತೆ ನಡೆಯುವುದು ಎಂಬುದು ಈ ಪದದ ಆಧಾರಾರ್ಥ. ಅನನ್ಯಪರತಂತ್ರಾಂ ಎಂಬವರೆಗೂ ವ್ಯಾಪ್ತ. ಹಾಗೆಂದರೆ ಏನು ಎಂಬ ಪ್ರಶ್ನೆ ಬಹುಮುಖ್ಯ. ಎಲ್ಲರೂ ಸ್ವತಂತ್ರರಾದರೆ, ಲಕ್ಷಾಂತರ ಜನ ಸಮುದಾಯದಲ್ಲಿ ಬದುಕು ಮಾಡಬೇಕಾಗಿರುವ ಒಬ್ಬರ ಸ್ವಾತಂತ್ರ್ಯಕ್ಕೂ ಇನ್ನೊಬ್ಬರದಕ್ಕೂ ಘರ್ಷಣೆ ಉಂಟಾದರೆ ಯಾರ ಸ್ವಾತಂತ್ರ್ಯಕ್ಕೆ ಯಾವ ಬೆಲೆ ದೊರಕಬೇಕು? ಮಾಡುವವರು ಯಾರು? ಮುಂತಾದ ಸಂಗತಿಗಳು ಹುಟ್ಟಿಕೊಳ್ಳುತ್ತವೆ. ಇಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಉಂಟು; ಒಂದಕ್ಕಾಗಿ ಇನ್ನೊಂದು ಬಲಿಯಾಗಬಹುದು. ಎಂದರೆ ಒಂದರ ಸಾಧನೆಗಾಗಿ ಇನ್ನೊಂದಕ್ಕೆ ಧಾರಾಳ ಮೊಟಕಾಗುತ್ತದೆ. ವಿದ್ಯೆಯ ಪರಮಸಾಧನೆ ಸ್ವತಂತ್ರನಾದ ಮನುಷ್ಯನನ್ನು ನಿರ್ಮಾಣಮಾಡುವುದು ಎನ್ನುತ್ತಾರೆ. ನಮ್ಮಲ್ಲಿ ಮುಕ್ತ ಎಂಬ ಮಾತಿದೆ. ಬಿಡುಗಡೆ ಹೊಂದಿದವನು ಎಂಬುದು ಅದರ ಅರ್ಥ. ಏತರಿಂದ? ಎಲ್ಲ ಹೊರಕಟ್ಟುಗಳಿಂದ, ಕಾರ್ಪಣ್ಯದಿಂದ, ಅಜ್ಞಾನದಿಂದ, ಸಂಸಾರದಿಂದ ಮುಕ್ತನಾಗಬೇಕೆಂಬವನಿಗೆ ಇವೆಲ್ಲ-ಲೋಕವೆಲ್ಲ-ನಿರ್ಬಂಧವೇ. ಇವುಗಳಿಂದ ಬಿಡುಗಡೆ ಹೊಂದುವುದು ಎಂದರೆ ಹೊರಗಿನ ಎಲ್ಲ ಆತಂಕಗಳಿಂದಲೂ ಪಾರಾದವನು ಎಂದರ್ಥ. ಅಂಥವನು ಮುಕ್ತ. ವ್ಯವಹಾರ ಪ್ರಪಂಚದಲ್ಲಿ ಇದು ಶಕ್ಯವೆ ಎನ್ನಿಸುತ್ತದೆ.

ಸಮಾನತೆ-Equality ಎಂಬ ಮಾತಿನ ಯಾವ ಅರ್ಥದಲ್ಲಿ ಎಂಬುದು ಪುನಃ ಏಳುವ ಪ್ರಶ್ನೆ. ಪ್ರಪಂಚದಲ್ಲಿ ಯಾವುದು ಯಾವುದಕ್ಕೆ ಸಮ? ಶಕ್ತಿಯೆ, ಬುದ್ಧಿಯೆ, ಗಾತ್ರವೆ, ಗುಣವೆ, ದಕ್ಷತೆಯೆ, ಧನವಂತಿಕೆಯೆ? ಯಾವ ಅಂಶದಲ್ಲಿ ಸಮಾನತೆ ಇದೆ? ದೊರಕಿಸಿಕೊಡುವುದು ಎಂಬುದು ಇಲ್ಲಿ ಪರಿಶೀಲನೆಗೆ ಬರುತ್ತದೆ. ಸಮಾನತೆ

ಒಂದಿಲ್ಲದಿದ್ದರೆ ಉಳಿದ ಯಾವುದಿದ್ದರೂ ವ್ಯರ್ಥ. ಮನುಷ್ಯನ ವ್ಯಕ್ತಿತ್ವದ ಬೆಳವಣಿಗೆಗೆ ನೆಲೆಗಟ್ಟಾದ ಒಂದು ಮುಖ್ಯ ಸನ್ನಿವೇಶವೇ ಇಲ್ಲದಂತಾಗುತ್ತದೆ. ಸಮಾಜದಲ್ಲಿ ಅನೇಕ ಕ್ಲೇಶಗಳಿಗೆ ಅನ್ಯಾಯಗಳಿಗೆ ಎಡೆಕೊಡುತ್ತದೆ ಎಂಬುದು ಲೋಕಹಿತವನ್ನು ಸಾಧಿಸುವ ಎಲ್ಲ ರಾಜಕೀಯ ತಂತ್ರಗಳಿಗೂ ವೇದ್ಯವಾಗಿರುವ ಸಂಗತಿ. ಇವನ್ನು ಎಲ್ಲಿಯಾದರೂ ಸಾಧಿಸಿದ್ದಾರೆಯೆ ಎಂಬುದರ ಕತೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಪ್ರಯತ್ನಗಳನ್ನು ಏರ್ಪಡಿಸಿದಷ್ಟೂ ಅಸಮತೆ ಹೆಚ್ಚಿಕೊಳ್ಳುವುದು ವಾಡಿಕೆ.

## ಸತ್ಯ

ಎಲ್ಲರೂ ಸತ್ಯವಂತರೇ. ಅಸತ್ಯವನ್ನು ನುಡಿಯುತ್ತಿರುವವರೂ ಆ ಸಮಯಕ್ಕಾದರೂ ಸತ್ಯವನ್ನೇ ನುಡಿಯುತ್ತಿದ್ದೇನೆಂದು ಹೇಳುತ್ತಾರೆ; ಆ ನಂಬಿಕೆ ಉಳ್ಳವರ ನಂಬಿಕೆಯಲ್ಲಿ ಇರುವುದೆಲ್ಲವೂ ಅವರಿಗೆ ಸತ್ಯವೇ ಆಗಿರುತ್ತದೆ. ಅದಕ್ಕಾಗಿ ಏನು ಮಾಡಲೂ ಸಿದ್ಧರಿರುತ್ತಾರೆ. ಮಕ್ಕಳ ಮೇಲೆ, ತಾಯಿತಂದೆಗಳ ಮೇಲೆ, ತಮ್ಮ ದೇವರ ಮೇಲೆ, ಸದ್ಗತಿಯ ಮೇಲೆ ಪ್ರಮಾಣ ಮಾಡಲು ಸಿದ್ಧರಾಗಿರುತ್ತಾರೆ. ಒಂದು ನ್ಯಾಯಾಲಯಕ್ಕೆ ಹೋಗಿ ನಿಂತರೆ ನಾನು ಸತ್ಯವನ್ನೇ ಆಡುತ್ತೇನೆ; ಸತ್ಯವನ್ನು ಬಿಟ್ಟು ಬೇರೇನೂ ಹೇಳುವುದಿಲ್ಲ; ಸತ್ಯವೆಲ್ಲವನ್ನೂ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾರೆ. ನ್ಯಾಯಾಲಯಗಳಿಗೆ ಹೋಗಿ ನಿಂತವರಿಗೆ ಇದು ಎಷ್ಟು ನಿಜವಲ್ಲ ಎಂಬುದು ಗೊತ್ತಾಗುತ್ತದೆ. ಇವರನ್ನು ಸತ್ಯಕ್ಕೆ ಬಂಧಿಸುವುದಕ್ಕಾಗಿ ಇವರು ಪರಮ ಪವಿತ್ರವೆಂದು ನಂಬುವ ಗ್ರಂಥವನ್ನೇ, ದೇವರ ಹೆಸರನ್ನೇ ನ್ಯಾಯಾಲಯಗಳು ಹಿಡಿದು ಪ್ರತಿಜ್ಞೆ ಮಾಡಿಸುತ್ತವೆ. ನಾಲ್ಕಾಣೆ ಮುನಾಫೆ ತೆಗೆದುಕೊಂಡು ಸುಳ್ಳಾಡುವ ಜನ ನ್ಯಾಯಾಲಯದ ಹೊರಗೆ ದೊರೆಯುತ್ತಾರೆ. ಗಂಡನು ಹೆಂಡತಿಯ ಮೇಲೊ ಹೆಂಡತಿ ಗಂಡನ ಮೇಲೊ ಒಡೆಯರು ಕೆಲಸ ಮಾಡುವವರ ಮೇಲೊ ನಡಸುವ ವ್ಯವಹಾರಗಳಲ್ಲಿ ಎಷ್ಟೊ ಸತ್ಯ ಮುಚ್ಚುತ್ತದೆ. ಪ್ರಯೋಜನವನ್ನು ಸಾಧಿಸುವುದಕ್ಕಾಗಿ ಸತ್ಯವನ್ನು ನುಡಿಯುವುದಿಲ್ಲ. ಆಷಾಢಭೂತಿತನ, ನಟನೆ, ಆವಟ ಎಂಬ ಮಾತುಗಳುಂಟು. ಅಲ್ಲಿ ಸತ್ಯಕ್ಕಿಂತ ತೋರಿಕೆ ಹೆಚ್ಚು. ಎದುರಿಗಿರುವ ಪದಾರ್ಥಗಳೂ ಎಲ್ಲರಿಗೂ ಕಾಣಿಸುವಂಥ ನಡವಳಿಕೆಗಳೂ ಯಾರಿಗೂ ನಿಜವೆಂದು ಕಂಡಾವು. ಅದು ಹೊರಮೈ ಲಕ್ಷಣ. ಒಳಗೆ ಯಾವುದಿದೆ ಎಂಬುದು ಗೊತ್ತಾಗುವುದು ಕಷ್ಟ. ಒಂದೊಂದು ವೇಳೆ ಅದರೊಳಗು ಏನು ಎಂಬುದು ಅವರವರಿಗೆ ಸ್ಪಷ್ಟವಾಗಿರುವುದಿಲ್ಲ. ನನ್ನ ಸ್ವಭಾವವನ್ನು ನಾನು ಬಲ್ಲೆ ಎಂಬಾಗಲೂ ನನ್ನನ್ನು ಕುರಿತೇ ಇದು ನಿಜ, ಇಷ್ಟೇ ನಿಜ ಎಂದು ಹೇಳುವುದು ಕಷ್ಟ. ನನ್ನ ನಿಜ ಏನು ಎಂಬುದನ್ನು ಪರೀಕ್ಷಿಸಿಕೊಂಡು ಯಾವ ನಿಜ ಎಂದು ತೊಡಗಿದಾಗ ನಾನು ಹುಟ್ಟುವ ಮುಂಚಿನಿಂದ ಆರಂಭವಾಗುವ ಕ್ರಿಯೆ, ನನ್ನನ್ನು ಮಣ್ಣುಮಾಡುವವರೆಗೂ ಅಥವಾ ಸುಟ್ಟು ಬೂದಿ ಮಾಡುವವರೆಗೂ ನಡೆಯುವ ಪ್ರಕರಣ. ನನ್ನ ತರುವಾಯ ನನ್ನ ಕಾರಣದಿಂದಾಗಿ ಇತರರ ಮೇಲೆ, ಮನೆಯವರ ಮೇಲೆ ಹಬ್ಬಿ ನೆಲಸುವ,



ಕಾರ್ಯಕಾರಿಯಾಗುವ ಸಂಗತಿಗಳೆಲ್ಲ ನನಗೆ ಸಂಬಂಧಪಟ್ಟವು. ಗರ್ಭಾಧಾರಣದಿಂದ ಹಿಡಿದು ಅಂತ್ಯೇಷ್ಟಿಯವರೆಗೂ ಸಂಸ್ಕಾರ ಕ್ರಿಯೆ ನಡೆಯುತ್ತದೆ ಎನ್ನುತ್ತವೆ ಸ್ಮೃತಿಗಳು. ನನ್ನ ಬದುಕಿನ ಮತ್ತು ಕಾರ್ಯದ ಪರಿಣಾಮವಾಗಿ ನಡೆಯುವ ಫಲಾಫಲಗಳು ನನಗೆ ಸಂಬಂಧಪಟ್ಟವು ನಿಜವೇ. ಬಹುಕಾಲ ಪ್ರಭಾವವಾಗಿ ಉಳಿಯಬಲ್ಲವು. ನಮ್ಮ ತಾಯಿ ತಂದೆಗಳ ವಂಶದ, ಪೂರ್ವಿಕರ ಆರೋಗ್ಯ, ಮನಸ್ಸು, ತಾಯಹೊಟ್ಟೆಯಲ್ಲಿರುವಾಗ ನಡೆದ ನೂರಾರು ಸಂಗತಿಗಳು, ಹುಟ್ಟುವ ಸಮಯದಲ್ಲಿ ಕವಿದ ದೈಹಿಕ ಸಂಗತಿಗಳು, ಶಸ್ತ್ರಕ್ರಿಯಾದಿಗಳು, ಒಂದು ದೇಹದ ಲಕ್ಷಣವನ್ನು ಮಾರ್ಪಡಿಸಿ ಆರೋಗ್ಯದ ಮಿತಿಗಳನ್ನು ಸಾಯುವವರೆಗೂ ಮಾರ್ಪಡಿಸುತ್ತಿರುತ್ತವೆ. ಬೆಳೆದಾಗ ಬಂದ ಸಂದರ್ಭಗಳು, ಕಷ್ಟಸುಖ, ಸಹಾಯ, ಆತಂಕ, ಸಹವಾಸ, ಅನಿರೀಕ್ಷಿತ ಘಟನೆ, ಅದೃಷ್ಟ-ಇನ್ನೆಷ್ಟೊ ಒಂದು ಜೀವವನ್ನು ಮಾರ್ಪಡಿಸಬಹುದು. ಒಂದು ಕಾಲದಲ್ಲಿ ನಾನು ಹಾಗಿದ್ದೆ, ಹೀಗೆ ಯೋಚಿಸುತ್ತಿದ್ದೆ; ನಿಜ, ಈಗ ಬುದ್ಧಿ ಬದಲಾಗಿದೆ, ಕುದುರಿದೆ, ಕಹಿಯಾಗಿದೆ, ಇನ್ನಾವುದನ್ನೊ ಸಾಧಿಸುವುದರಲ್ಲಿ ತೊಡಗಿದೆ ಎಂದಾಗ ನನ್ನ ಸತ್ಯ ಬೇರೆಯಾಯಿತು. ಹೀಗೆಂದರು ಜಿನ್ನಾ ಸಾಹೇಬರು: ನೀವು ಮೊದಲು ಕಾಂಗ್ರೆಸ್ಸಿನಲ್ಲಿರಲಿಲ್ಲವೆ ಎಂದು. ನಿಜವಲ್ಲವೆ ಆ ಮಾತು?

ನಾನು ತಾಯಿ ತಂದೆಯರಿಗೆ, ಹೆಂಡತಿ ಮಕ್ಕಳಿಗೆ, ಸ್ನೇಹಿತರಿಗೆ, ಅವಿಶ್ವಾಸಿಗಳಿಗೆ, ನನಗೆ ದುಡಿವ ಕೆಲಸಗಾರರಿಗೆ, ನಾನು ದುಡಿವ ಅಧಿಕಾರಿಗಳಿಗೆ ಹೇಗೆ ಕಾಣುತ್ತೇನೆ; ನನ್ನ ಕೈಗೆ ಬಂದ ಒಂದು ಸಂಸ್ಥೆಯನ್ನೊ ವ್ಯವಹಾರ ಮಂಡಲವನ್ನೊ ಹೇಗೆ ನಡಸುತ್ತೇನೆ; ನನ್ನ ಬರವಣಿಗೆಯಲ್ಲಿ, ಮಾತಿನಲ್ಲಿ, ನಡತೆಯಲ್ಲಿ ಎಂಬುದನ್ನು ನೋಡುವವರಿಗೆ, ಅನುಭವಿಸುವವರಿಗೆ ನನ್ನ ನಿಜ ಬೇರೆಯಾಗಿ ಕಾಣಬಹುದು. ಮುಪ್ಪಾದಾಗ, ಕಾಯಿಲೆ ಕಾರ್ಪಣ್ಯಗಳಲ್ಲಿ ಜಯವಾದಾಗ, ಸೋಲಾದಾಗ ನಾನಾಡುವ ಮಾತುಗಳಲ್ಲಿ, ನನ್ನ ನಡವಳಿಕೆಯಲ್ಲಿ ಹೇಗೆ ಕಾಣುತ್ತೇನೆ, ಇರುತ್ತೇನೆ ಎಂಬುದು ಅದರ ಇನ್ನೊಂದು ಮುಖ. ಇಂಥವನು ನಾನೆಂದು ಇತರರಿಗೆ ಬೇರೆ ಕಾಲಕ್ಕೆ ಕಾಣಿಸಬೇಕು ಎಂಬ ನಡವಳಿಕೆ ಉಂಟು, ಬರವಣಿಗೆ ಉಂಟು. ಹಿಟ್ಲರನ ಬರವಣಿಗೆ, ನಪೋಲಿಯನನ ಸ್ಮೃತಿಗಳು ಇದಕ್ಕೆ ಉದಾಹರಣೆ. ಒಂದೊಂದು ವಯಸ್ಸು, ಸ್ಥಿತಿ, ಸನ್ನಿವೇಶದಲ್ಲಿಯೂ ನನ್ನ ನಿಜ ಒಂದೊಂದು ರೀತಿ. ನಾನೆಂಬ ಸತ್ಯದ ಮುಖ ಅದು. ನಾನೇ ಪ್ರತಿ ರಾತ್ರಿಯೂ ಕುಳಿತು ಏಕಾಂತದಲ್ಲಿ ಈ ದಿನ ಇಂತಹವರಿಗೆ ಇದನ್ನು ನುಡಿದೆ, ಹೀಗೆ ಇದನ್ನು ಕುರಿತು ಯೋಚಿಸಿದೆ, ನಡೆದುಕೊಂಡೆ ಅಲ್ಲವೆ ಎಂಬುದನ್ನು ನೆನೆದರೆ-ಇದರಲ್ಲೆಲ್ಲ ನನ್ನ ವ್ಯಾಪಾರ ಸರಿಯಾಗಿ ನಡೆಯಿತೆ, ಸ್ಪಷ್ಟವಾಗಿ ಎಲ್ಲ ಅರಿತು ಮಾಡಿದೆನೆ, ಇಂಥ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಒಂದೇ ಭಾವವಿತ್ತೆ, ನನ್ನ ನಿರ್ಣಯ ಧರ್ಮವಾದುದೆ, ಇನ್ನಾವುದಾದರೂ ಕಲ್ಮಷ ಪದರು ಇದ್ದವೆ-ಎಂಬುದನ್ನು ಯೋಚಿಸಿದರೆ ಸತ್ಯ ವಿಚಿತ್ರವಾಗಿ ಕಂಡೀತು. ನನಗೆ ಅನ್ನಿಸಿದೆ: ಒಂದು ದಿನದ ಮಟ್ಟಿಗೆ ಎಲ್ಲರೂ ಸತ್ಯವನ್ನಾಡತಕ್ಕದ್ದು, ಯಾರೂ ಯಾವ ಸಂಬಂಧದಲ್ಲಿಯೂ ಸತ್ಯವನ್ನೇ ನುಡಿಯತಕ್ಕದ್ದು ಎಂದು

ಅವಕಾಶ ಕೊಟ್ಟುಬಿಟ್ಟರೆ ಏನೇನು ಅನಾಹುತಗಳಾಗುತ್ತವೆಯೊ ಲೋಕದಲ್ಲಿ. ಕೆಲಸದವರು, ಸೈನ್ಯಾಧಿಕಾರಿ, ಸೈನಿಕರು, ಅಧಿಕಾರಿ, ಕಚೇರಿ ಕೆಲಸ ಮಾಡುವವರು, ಮೇಷ್ಟ್ರು-ವಿದ್ಯಾರ್ಥಿಗಳು, ಎಲ್ಲರೂ ಸತ್ಯವನ್ನೇ ನುಡಿಯುತ್ತ ನಿಂತರೆ ಸತ್ಯದ ಪರಿಣಾಮ ಅದ್ಭುತರೂಪವನ್ನು ತಾಳೀತು. ಇದನ್ನು ವಿಷಯವಾಗಿ ಮಾಡಿಕೊಂಡು ಒಂದು ನಗೆಯ ನಾಟಕವನ್ನೊ ಒಂದು ದುರಂತವನ್ನೊ ಬರೆದರೆ ನೋಡಬಹುದು. ನಾವು ಪ್ರೀತಿಸುತ್ತೇವೆ, ಗೌರವಿಸುತ್ತೇವೆ ಎಂಬ ಸಂದರ್ಭದಲ್ಲಿಯೂ ಪ್ರತಿನಿಮಿಷದಲ್ಲಿಯೂ ಪ್ರತ್ಯಂಶದಲ್ಲಿಯೂ ಹಾಗೆ ಮಾಡುತ್ತೇವೆಯೆ? ಎಂಬುದು ಸಮರಿ, ಕುದುರಿದ ಒಂದು ಒಟ್ಟು ದೃಷ್ಟಿ; ನಡತೆ. ಅಷ್ಟೇ ಹೊರತು ಪ್ರತ್ಯಂಶದಲ್ಲಿಯೂ ಪ್ರತಿ ಸಮಯದಲ್ಲಿಯೂ ನಾವು ಅದನ್ನು ಒಪ್ಪುತ್ತೇವೆ ಅಲ್ಲಿ ಎಂತಲೆ?

## ನಡೆದದ್ದೇನು?

ಒಂದು ಮನೆಯಲ್ಲಿ ಏನಾದರೂ ಸಂಗತಿ ನಡೆದರೆ, ನಾಲ್ಕು ಜನದ ನಡುವೆ ಏನು ನಡೆಯಿತು ನಿಜವಾಗಿ ಎಂಬುದನ್ನು ಕುರಿತು ಯೋಚಿಸುವಾಗ ಸಂಗತಿಗಳು ನಡೆದ ವಿವರಣೆ, ವರದಿ ಒಬ್ಬೊಬ್ಬರದು ಒಂದೊಂದು ಆನುಪೂರ್ವಿ ನಿರ್ಣಯಿಸುವುದರಲ್ಲಿ ವ್ಯತ್ಯಾಸವಾಗಬಲ್ಲದು. ಇದು ಹೊರ ಘಟನೆಗಳನ್ನು ಕುರಿತದ್ದು. ಅವುಗಳ ಹಿಂದೆ ಎಂದಿನಿಂದಲೊ ನಡೆದುಬಂದ ಭೂತ ಪ್ರಾರಬ್ಧಗಳಿರುತ್ತವೆ. ಆಶೋತ್ತರ, ಆಕಾಂಕ್ಷೆ, ಮುಚ್ಚುಮರೆ ಇರುತ್ತವೆ. ಬೇರೆ ಬೇರೆ ಜನರ ಸ್ವಭಾವ, ಉದ್ದೇಶ, ಆಸಕ್ತಿ, ಆವೇಶ ಏತೇತರವೊ ಸೇರಿಕೊಂಡಿರುತ್ತವೆ. ಕಂಡದ್ದೆಲ್ಲಾ ಇವು ಖಚಿತವಾಗಿ ಈ ವ್ಯಕ್ತಿಗಳ ಕಾರ್ಯ ಹೀಗೇ ನಡೆಯಿತು ಎಂದು ನೂರಕ್ಕೆ ನೂರು ಅಂಶ ನಿರ್ಣಯಿಸುವುದು ಶಕ್ಯವಲ್ಲ. ಆ ಒಂದು ದಿನದ ಘಟನೆ ಸುಮಾರು ಹೀಗೆ ನಡೆಯಿತು ಎಂದು ನಿರ್ಣಯವಾದಾಗಲೂ ಕೆಲವು ಕಾಲದಿಂದ ಮನೆಯಲ್ಲಿ ನಡೆದು ಬರುತ್ತಿರುವ ಸಂಬಂಧ ಅಸಂಬಂಧಗಳ ಕತೆಯಲ್ಲಿ ಇದು ಒಂದು ತುಕಡಿಯಂತೆ, ಕೊಂಡಿಯಂತೆ ಇದ್ದುಕೊಂಡು ಪರಸ್ಪರ ಬಾಂಧವ್ಯಗಳನ್ನು ಸರಸ ವಿರಸಗೊಳಿಸುವುದರಲ್ಲಿ ಒಂದು ಮಜಲಾಗಬಹುದು. ಇನ್ನು ಒಂದು ರಾಷ್ಟ್ರದ ಚರಿತ್ರೆಯಲ್ಲಿ ಯಾವ ಯಾವ ಮಹಾ ಘಟನೆಗಳಿಗೆ ಯಾವ ಯಾವುದು ನಿಜವಾದ ಕಾರಣ? ಅವುಗಳ ಕತೆ ಹೇಗೆ ಬೆಳೆದಿದೆ, ಅದರ ರೂಪದಲ್ಲಿ ಅಥವಾ ಸಿಕ್ಕುಗಳಲ್ಲಿ ಯಾರ ಯಾರ ಪ್ರಭಾವ ಪ್ರಧಾನ, ಯಾವುದು ಹೊಂದದ ಸನ್ನಿವೇಶ, ಅವರ ಬಲಾಬಲಗಳೆಷ್ಟು, ಗುರಿಗಳೇನು ಎಂಬೆಲ್ಲ ಸಂಗತಿಗಳ ಮಹಾಮಂಡಲ ವಿಚಿತ್ರವಾಗಿ ಸೇರಿರುತ್ತದೆ. ಘಟನೆಗಳು ನಿಜ; ಸ್ಮರಣೆಗಳು ನಿಜ; ಲಾಭ ನಷ್ಟಗಳು ನಿಜ; ಅವು ಉಳಿಸಿದ ಸಮಸ್ಯೆಗಳು ನಿಜ; ಪರಿಣಾಮಗಳು ಕಡ್ಡಾಯವಾಗಿ ಭೋಗ್ಯ ಎಂಬುದೂ ನಿಜ. ಇಪ್ಪತ್ತು ರಾಜ್ಯಗಳಿರುವ ಭರತ ಖಂಡದಂತಹ ರಾಷ್ಟ್ರದಲ್ಲಿ ಎಷ್ಟು ಬಗೆಯ ಕತೆ ರೂಪುಗೊಂಡು ರಾಜ್ಯಗಳಲ್ಲಿನ, ಕೇಂದ್ರದಲ್ಲಿನ ಜೀವನವನ್ನು ತೊಡಕುಗಳಿಗೆ ನಡಸುತ್ತಿರಬಹುದು ಎಂದು ಊಹಿಸಿದಾಗ,



ನಿಜವಾಗಿ ನಾಡಿನ ಚರಿತ್ರೆಯೊಂದನ್ನು ಬರೆಯಬೇಕೆನ್ನುವವರ ಕಷ್ಟ ಎಷ್ಟು ದೊಡ್ಡದೆಂಬುದನ್ನು ಊಹಿಸಬಹುದು. ಸ್ಥೂಲವಾದ ಹೊರಸಂಗತಿಗಳ ಲೇಖನ ಸುಲಭವಾದೀತೇನೊ! ಘಟನೆಗಳ ದಿನಚರಿ Diary of Events, Chronicle, History ಎಂಬವು ಬೇರೆ ಬೇರೆ. ಆದರೆ ಯಾವುದನ್ನು ನಾವು ಪೂರ್ಣವಾದ ಚರಿತ್ರೆ ಎನ್ನಬಹುದೊ ಅಂಥದು ತೀಲದೆಯೇ ಇರಬಹುದು. ಇದು ಹೀಗಾದರೆ ಅಂತಾರಾಷ್ಟ್ರೀಯ ವ್ಯವಹಾರದಲ್ಲಿಯೊ ಜೀವನದಲ್ಲಿಯೊ ಒಂದು ಯುದ್ಧದ ಆರಂಭ, ಹರಡು, ಪರಿಣಾಮ, ಯುದ್ಧಕ್ಷೇತ್ರಗಳಲ್ಲಿ ನಿಜವಾಗಿ ನಡೆದ ಸಂಗತಿ, ಬೇರೆ ಬೇರೆ ಜನರ ದಕ್ಷತೆ, ನಡವಳಿಕೆ, ಸಣ್ಣ ದೊಡ್ಡ ಕದನಗಳ ಜಯಾಪಜಯ, ಯುದ್ಧದ ಒಟ್ಟು ಜಯಸಾಧನೆಗೂ ಸೋಲಿಗೂ ಕಾರಣವಾಗಿರಬಹುದಾದ ಕ್ರಿಯಾವ್ಯಾಪಾರ, ಯುದ್ಧರಂಗದಲ್ಲಿ ತೊಡಗಿರುವ ರಾಷ್ಟ್ರ ಸರ್ಕಾರಗಳು, ಸಜ್ಜನ್ನು ಒದಗಿಸುವ ಉತ್ಪಾದನಾ ಕ್ಷೇತ್ರಗಳು, ಸಜ್ಜಿನ ಸಾಧನೆ, ಪೌರ ಶಿಸ್ತು, ತಾಳ್ಮೆ, ಕಾವಲು ಜನದ ಗುಣ - ಇವೆಲ್ಲ ಹೀಗೆ ಹೀಗೆ ಕಾರ್ಯ ಮಾಡಿ ಒಟ್ಟಿನ ಜಯಾಪಜಯ ಹೇಗೆ ರೂಪಿತವಾದವು ಎಂಬುದನ್ನು ನಿರ್ಣಯಿಸುವಾಗ ಎಷ್ಟು ಅಭಿಪ್ರಾಯ, ದೃಷ್ಟಿ ವ್ಯತ್ಯಾಸ? ವೀರ, ಅಲಸತನ, ಒದಗಣೆ ಸಾಗಣೆಗಳ ವ್ಯವಹಾರ, ಎಷ್ಟು ಕ್ರೌರ್ಯ, ಕರುಣೆ, ಔದಾರ್ಯ, ಹಟ, ಧನತಂತ್ರ ಸೇರಿರುತ್ತವೆ ಎಂಬ ಸಂಗತಿಯನ್ನು ಅರಿಯುವೆವಾದರೆ ಸತ್ಯದ ಸ್ವರೂಪ ಎಷ್ಟು ಜಟಿಲವಾದುದು ಎಂಬುದು ತಿಳಿದೀತು. ಪರಸ್ಪರ ವಿರುದ್ಧವಾದ ವಿವರಣೆ, ವರದಿ, ಬೆಲೆಗಟ್ಟು, ಸತ್ಯದ ಮರೆಮಾಚಿದ, ಅಸತ್ಯದ ಪ್ರಕಾಶನ, ಯುದ್ಧ ಮಾಡುವವರ ಅಭಿಮಾನ, ಪಕ್ಷಪಾತ ಇವುಗಳ ಸಮವಾಯ ಅಲ್ಲಿ ಕಾಣುತ್ತದೆ. ಇವನ್ನು ಒಬ್ಬರು ಪೂರ್ತಿಯಾಗಿ ಅರಿತು ಹೇಳುವುದೊ ಬರೆದಿಡುವುದೊ ಅಶಕ್ಯ. ಆದುದರಿಂದಲೇ ಒಬ್ಬೊಬ್ಬ ವಿದ್ವಾಂಸನು ಬರೆದ ಚರಿತ್ರೆಯೂ ಕಥನವೂ ಬೇರೆ ಬೇರೆಯಾಗಿರುತ್ತದೆ. ಎಲ್ಲರ ಬರವಣಿಗೆಯಲ್ಲಿಯೂ ನಿಜದ ಯಾವ ಯಾವುವೊ ಅಂಶಗಳಿರುತ್ತವೆ. ಒಟ್ಟು ಸತ್ಯವೆಂಬುದು ಹತ್ತಾರು ವರ್ಷಗಳಾದ ಮೇಲೆ ಅಲ್ಲಿ ಭಾಗವಹಿಸಿದ ಎಲ್ಲರ ವರ್ಣನೆ, ಕಾಗದ ಪತ್ರಗಳು, ಎಲ್ಲ ಪಕ್ಷಗಳವರೂ ಬರೆದ ಕಥಾನಕಗಳಲ್ಲಿನ ಅಂಶಗಳ ಜಡಿತಿ ಆದಮೇಲೆ ಬಹುಶಃ ಹೀಗಾಗಿರಬೇಕು ಎಂಬುದು ಸ್ಥೂಲ ಪರಿಚಯವಾದೀತು. ಘಟನೆ ಹೀಗಾದರೆ, ಕಾರಣ ಪರಂಪರೆ ಇನ್ನೊಂದು ರೀತಿ. ಪರಿಣಾಮಗಳ ಸಮಾಲೋಕನ ಮತ್ತೊಂದು ಬಗೆಯದು. ಇವೆಲ್ಲ ಸೇರಿ ಆ ಚರಿತ್ರೆಯ ಅರ್ಥವ್ಯಾಪನೆ, ಪ್ರಪಂಚದ ಸತ್ಯ ಪ್ರಕಾಶನವಾಗುತ್ತದೆ. ಇಲ್ಲವಾದರೆ ಭಾಗ ಅಥವಾ ಅಂಶ ಸತ್ಯ ಮಾತ್ರ ಅದು.

ಅನೇಕ ವೇಳೆ ಇತಿಹಾಸ ಇದನ್ನು ಬೋಧಿಸುತ್ತದೆ, ಅದನ್ನು ಬೋಧಿಸುತ್ತದೆ ಎನ್ನುತ್ತಾರೆ. ಇತಿಹಾಸ ಎಲ್ಲವನ್ನೂ ಬೋಧಿಸುತ್ತದೆ. ಯಾರು ಯಾರು ಯಾವ ಯಾವ ರೀತಿ ನೋಡಿದರೆ ಆ ನೋಟ ಅಲ್ಲಿ ಸಿಗುತ್ತದೆ. ಇದು ಯಾವ ಯಾವ ಪ್ರಯೋಜನಕ್ಕಾದರೂ ದುಡಿಯುತ್ತದೆ. ಸತ್ಯವೆಂಬುದು ಯುದ್ಧಕಾಲಗಳಲ್ಲಿ ಮುರಿದು ಬೀಳುವ ಮೊದಲ ಸಂಗತಿ. ಪಕ್ಷಗಳವರು ಯಾರೂ ನಿಜ ಹೇಳುವುದಿಲ್ಲವಾಗಿ ನೇರವಾಗಿ

ಚರಿತ್ರೆ ಅಥವಾ ಇತಿಹಾಸವನ್ನು ಒಂದು ಸಂಪೂರ್ಣವಾದ ಬೆಲೆಯನ್ನಾಗಿ ನಾವು ಗಣಿಸುವ ಹಾಗಿಲ್ಲ. ಇತಿಹಾಸ ನಿಜವಾದ ಒಂದು ಮೌಲ್ಯವೆ ಎಂದು ಕೇಳುವುದು ತಪ್ಪಲ್ಲ. ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ನ್ಯಾಯವಾದ ಪಕ್ಷಕ್ಕೇ ಗೆಲವಾದೀತೆಂಬ ನಿಶ್ಚಯವಿಲ್ಲ. ಸೋತ ರಾಷ್ಟ್ರ ಅಧರ್ಮದಿಂದ ನಡೆದಿರಬೇಕಾಗಿಯೂ ಇಲ್ಲ. ಒಟ್ಟು ಪರ್ಯಾಲೋಚನೆಯಲ್ಲಿ ಬಹುತರ ನಮಗೆ ಸಿಕ್ಕುವುದು ಒಂದು ಬಗೆಯ ನೆನಪು. ಹಿಂದೆ ಇಂತಹ ಸಂದರ್ಭದಲ್ಲಿ ಹೀಗೆ ಹೀಗೆ ನಡೆಯಿತು, ಈ ಅವಿವೇಕ ವಾಯಿತು, ಇಂಥಿಂಥವರು ಹೀಗೆ ಹೀಗೆ ನಡೆದುಕೊಂಡರು; ಪ್ರತೀಕಾರದ ಲಕ್ಷಣ ಹೀಗೆ, ಇಂಥ ತಂತ್ರದ ಬಲಾಬಲ ಇಷ್ಟು ಮಟ್ಟಿಗೆ-ಮುಂತಾದ ತಿಳಿವಳಿಕೆ ಸಂದರ್ಭಕ್ಕೆ ಸಹಾಯ ಕೊಡಬಹುದು, ಬೆಳಕು ಹಾಯಿಸಬಹುದು ಅಷ್ಟೇ. ಆದರೆ ಚರಿತ್ರೆಯಿಂದ ಯಾವ ನಿರ್ಣಾಯಕವಾದ ಸಂದೇಶವನ್ನಾದರೂ ಪಡೆಯಬಹುದೆಂಬುದು ಜಳ್ಳೆಣಿಕೆ. ಒಬ್ಬನ ಜೀವನದಲ್ಲಿ, ಒಂದು ಸಂಸಾರದ ಸುಪರಿಚಿತ ಆವರಣದಲ್ಲಿ ಸತ್ಯವನ್ನು ಕಾಣುವುದು ಕಷ್ಟವೆಂದು ಅರಿತಾಗ ರಾಷ್ಟ್ರ ರಾಷ್ಟ್ರಗಳ ಸಂಬಂಧದಲ್ಲಿ ಬೆಳೆಯುವ, ಅದರ ಉತ್ಕಟ ಸನ್ನಿವೇಶಗಳನ್ನು ಕುರಿತದ್ದರಲ್ಲಿ ಇದೇ ಸರಿ, ಅದೇ ಸರಿ ಎಂದು ನುಡಿವ ಗೋಜಿಗೆ ಹೋಗುವುದು ಸಾಹಸ ಮಾತ್ರವೇ ಅಲ್ಲ, ಧಾಷ್ಟ್ರ್ಯವೂ ಆದೀತು. ಪ್ರಮಾಣ ಪುರಾವೆಗಳೆಲ್ಲ ಕಷ್ಟ ಪಟ್ಟು ಹುಡುಕಿದರೂ ಸಿಕ್ಕವು. ಯಾವುದು ಸ್ಪಷ್ಟವಾಗಿ ಹೊರಗೆ ಕಾಣುವುದೊ ಕೇಳುವುದೊ ಬರೆದು ಉಳಿಯುವುದೊ ಅವೆಲ್ಲ ಮೊದಮೊದಲ ಪ್ರತಿಪಾದನೆ. ನಿಜದ ಹೊರಮೈ ದರ್ಶನ ಮಾತ್ರ. ಅನೇಕರು ತಮ್ಮ ತಮ್ಮ ಭಾಗದ ಪ್ರತಿಪಾದನೆ ತಮ್ಮ ಮೂಗಿನ ನೇರಕ್ಕೆ, ತಿಳಿವಳಿಕೆಯ ನಿಲವಿಗೆ, ಸಾಧನೆಗೆ ತಕ್ಕಂತೆ ಹಾಳತ ಮೀರಿ ಮಾಡಿರುತ್ತಾರೆ. ಅವರ ಮನಸ್ಸುಗಳಲ್ಲೆಲ್ಲ ಇದ್ದದ್ದೇನು ಎಂಬುದು ತಾನೆ ನಿಜ? ಯಾವುದನ್ನೊ ಪ್ರಚಾರ ಮಾಡಿ ಹೀಗೆ ಕಾಣಿಸಬೇಕು ಎಂಬ ಉದ್ದೇಶದಿಂದಲೂ ಅಪರಾಧ ಒಪ್ಪಿಕೊಳ್ಳದೆ ತಮ್ಮ ತಮ್ಮ ಭಾಗದ ಲೋಪ ದೋಷಗಳಿಗೆ ಈ ಬೇರೆಯವರ ನಡವಳಿಕೆ ಕಾರಣವಾಗಿತ್ತು ಎಂಬುದನ್ನು ಶ್ರುತಪಡಿಸಿ ತಮ್ಮ ಕಾರ್ಯದ ದೌರ್ಬಲ್ಯವನ್ನು ಕಡಮೆ ಮಾಡಿಕೊಳ್ಳುವ, ಮರಸುವ ಯತ್ನವೂ ಇದ್ದೀತು. ಈಚಿನ ಭಾರತ-ಚೀನಾ ಯುದ್ಧದ ಕತೆ ನೆನಪಿಗೆ ಬಂದೀತು. ಈ ಆ ನಡತೆಗೂ ಕ್ರಿಯಾತಂತ್ರಕ್ಕೂ ಅನುಕೂಲವಾದಷ್ಟನ್ನೇ ಪ್ರಚಾರಮಾಡಿ ಸತ್ಯದ ಸ್ವರೂಪವನ್ನು ಮರೆಮಾಡಬಹುದು. ಕೌಲ್, ಥಾಪರ್ ಮಲ್ಲಿಕ್ ಬರೆದ ಭಾರತ-ಚೀನಾ ಯುದ್ಧ ಸಂಬಂಧದಲ್ಲಿ ನಿಜವಾವುದು? ಒಮ್ಮೆ ನಾವು ಸೋತದ್ದು ಅಲ್ಲವೆ? ಭಾರತ ಪಾಕಿಸ್ತಾನ ಗಳ ನಡುವೆ ನಡೆದದ್ದರಲ್ಲಿ ಅವರು ಆ ಜನಕ್ಕೆ ಹೇಳಿದ್ದು, ನಾವು ಆಡಿದ್ದು, ವಿದೇಶಿ ಯುದ್ಧ ತಂತ್ರಜ್ಞರು ನಮ್ಮಿಬ್ಬರ ಅದಕ್ಷತೆಯನ್ನು ಕುರಿತು ನುಡಿದಿರುವುದು, ಇಬ್ಬರಿಗೂ ಇದು ಎಂದು ನಿಂತೀತು ಎಂಬುದೆ?

ಎಂದರೆ ಸತ್ಯ ದುರ್ಜ್ಞೇಯವೇ ಅಲ್ಲ. ಅದರ ಸ್ವರೂಪ ಎಷ್ಟು ಸಾವಿರ ಮುಖವುಳ್ಳದ್ದಾಗಬಹುದು ಎಂಬುದರ ಚಿತ್ರಕಲ್ಪನೆಗೆ ನೆರವಾಗಲೆಂದು ಈ



ಮಾತನ್ನಾಡಿತು. ಪಾಂಟಿಯಸ್ ಪೈಲೇಟ್ ಒಂದು ಮಾತನ್ನಾಡಿದನಂತೆ; ಅಣಕಿಸುವ ದನಿಯಲ್ಲಿ (Jesting) "ಸತ್ಯ ಯಾವುದು?" ಎಂಬ ಪ್ರಶ್ನೆ ಕೇಳಿ, "ಉತ್ತರಕ್ಕೆ ಕಾಯದೆ ನಿಲ್ಲದೆ ಹೊರಟುಹೋದೆ" ಎಂಬ ಮಾತಿನ ಅರ್ಥ ಸ್ಪಷ್ಟನೆ ಈ ಮೂಲಕ ಆಗಬೇಕು. ಇಂಥ ಕಡೆಗಳಲ್ಲಿ ಇದೇ ನಿಜ, ಇಷ್ಟೇ ನಿಜ ಎಂದು ಹಟ ಹಿಡಿದು ಕಾರ್ಯಕಾರ್ಯಗಳಿಗೆ ಕಾರಣವಾಗುವ ಆವೇಶ, ಅಸಹನೆ, ಅನೌದಾರ್ಯ, ರಭಸದ ನುಗ್ಗು ಇವು ವಿವೇಕವಾಗಲಾರದು ಎಂಬುದನ್ನು ತಿಳಿಸಲು ಯತ್ನಮಾಡಿದೆ.

ಹೀಗಿರುವಾಗ 'ಸತ್ಯಮೇವ ಜಯತೇ ನ ಅನೃತಂ' ಎಂಬ ಮಹಾ ವಾಕ್ಯಕ್ಕೆ ಅರ್ಥವಾವುದೆಂಬ ನಿಷ್ಕರ್ಷೆ ಅನಿಶ್ಚಯವಾಗಬಲ್ಲದು. ಸತ್ಯ ಬೇರೆ, ಋತ ಬೇರೆ. ಇದ್ದ, ನಡೆದ ಸಂಗತಿ ಒಂದು; ಅದು ನಿಜವಲ್ಲದಿದ್ದರೆ ಇನ್ನಾವುದು ನಿಜ; ಇರುವುದೆಲ್ಲ ನಿಜವಾದರೆ ಅದು ಜಯಿಸುತ್ತದೆ ಎಂದರೆ ಅರ್ಥವೇನು? ಹಾಗೆಯೇ, "ಸತ್ಯ-ದೇವರು" ಎಂಬ ಮಾತಿನ ಅರ್ಥದಲ್ಲಿಯೂ ಅಸಂಬದ್ಧತೆ ಕಾಣುತ್ತದೆ. Truth is God-ದೇವರು ಅಥವಾ ದೈವ ಎಂಬ ಮಾತಿನ ಅರ್ಥದಲ್ಲಿ ಎಷ್ಟು ಮಟ್ಟ, ನೆಲಸು, ನಯ, ವ್ಯಾಪಕತೆ, ಅವ್ಯಾಪಕತೆಗಳು ಇಲ್ಲ? ಈ ಸತ್ಯವೆಂಬುದನ್ನು ಸೇರಿಸಿಕೊಂಡಂತೆ ಇನ್ನೂ ಎಷ್ಟೋ ಬಗೆಯ ವಿಸ್ತಾರವುಳ್ಳ ಪ್ರಭಾವ, ಶಕ್ತಿ, ವೀರ್ಯವುಳ್ಳ ವ್ಯಕ್ತಿತ್ವ ದೇವರು ಎಂಬ ಕಲ್ಪನೆಯಲ್ಲಿದೆ. ಸತ್ಯವೇ ದೇವರೆಂದಾಗ ದೈವ ಕಲ್ಪನೆಗೆ ಒಂದು ವಿಶೇಷಾರ್ಥವನ್ನೊ ಕಡಮೆಯ ಅರ್ಥವನ್ನೊ ಕೊಟ್ಟ ಹಾಗಾಗುತ್ತದೆ. ಸಾಮಾನ್ಯವಾಗಿ ಆ ಮಾತಿಗೆ ಕೊಡುವ ಅರ್ಥಕ್ಕಿಂತ ಬೇರೆಯ ಒಂದು ಸೂತ್ರ ವ್ಯಾಖ್ಯಾನವನ್ನು ಅದಕ್ಕೆ ಕೊಟ್ಟು ತೃಪ್ತಿಪಟ್ಟುಕೊಂಡ ಹಾಗಾಗುತ್ತದೆ. ಅನುಭವದ ವರ್ಗಗಳು ಇಲ್ಲಿ ಕಲಸಿಕೊಳ್ಳುತ್ತವೆ. ಸತ್ಯ ಸಂಗತಿ ಅಥವಾ ಇರವು (Reality) ಎಂಬುದಕ್ಕೂ ಅದರ ಸತ್ಯ ಎಂಬುದಕ್ಕೂ ಮೊದಲೇ ಇರುವ ನೆಲಸಿನ ವ್ಯತ್ಯಾಸ ಇಲ್ಲಿ ವಿಶ್ಲೇಷಣೆಯನ್ನು ಇನ್ನಷ್ಟು ಕಠಿಣ ಮಾಡುತ್ತದೆ. ಗೊಂದಲ ಏಳುತ್ತದೆ. ಅನೇಕ ಬಗೆಯ ಬುದ್ಧಿ ಭ್ರಮಣೆ, ವಿಕಲ್ಪ, ತಪ್ಪು ನೆಲೆಗಟ್ಟು ಆಗುತ್ತದೆ. ಬರಿಯ ಜಾಣತನದ ಮಾತುಗಳಿಗೆ ಕಾರಣವಾಗುತ್ತದೆ. ಬೆಲೆಗಳಲ್ಲಿ ಸತ್ಯ-Truth ಎಂಬುದೂ Fact - ವಾಸ್ತವ ಸಂಗತಿಗಳನ್ನು ತಿಳಿಸಲು ಅವು ಮೂಲಾಧಾರ. ಅವು ತಿಳಿಯದಿದ್ದರೆ ಉಳಿದ ಎಲ್ಲವೂ ಅತಂತ್ರ. ಅವುಗಳ ಮೇಲೆ ಕಟ್ಟಬೇಕಾದುದು ಸತ್ಯದ ಸೌಧ. ನಡೆದಿರುವುದನ್ನೊ ಇರುವುದನ್ನೊ ಅದರಲ್ಲಿ ಎಲ್ಲವನ್ನೋ ಇದ್ದುದನ್ನು ಇದ್ದಂತೆ ಹೇಳದಿದ್ದರೆ ಸತ್ಯಕ್ಕೆ ದ್ರೋಹ ಮಾಡಿದಂತಾಗುತ್ತದೆ. ಅದನ್ನು ಸ್ಥಾಪಿಸಲು ಬಾರದಾದರೆ ಉಳಿದ ಯಾವುದಕ್ಕೂ ಸ್ಥಾನವೇ ಮಾನವೇ ಇರುವುದಿಲ್ಲ. ಸ್ಥಾನ ಬೇರೆ, ಮಾನ ಬೇರೆ. ಇವೂ ಗುಣಗಳ, ಬೆಲೆಗಳ ಮಾತು. ವಿಚಾರ ಯಾವುದು ಎಂಬುದೇ ನಿರ್ಣಯವಾಗಬೇಕಾದಾಗ ಇದರ ಪರಿಶೀಲನೆಯೂ ನಡೆಯಬೇಕಾಗಿದೆ. ಘಟನೆಯೊ ಮಾತೊ ನಡತೆಯೊ ಒಂದು ಅಂತಹ ಅಂಶ. ಊಹೆ-guess, ಅನುಮಾನ-Inference ಇನ್ನೊಂದಂಶ. ಇಂಥಿಂಥುದೆಲ್ಲ ಸುತ್ತ ನಡೆದಿರುವುದರಿಂದ ಇದೇ ಕಾರಣ ಸತ್ಯ ಇರಬೇಕು ಎಂಬುದು ಮತ್ತೊಂದು. ಗಣಿತದ ಒಂದು ಸಮೀಕರಣ ಮತ್ತು

ಜನಗಳ ನಂಬಿಕೆ, ಕಾರ್ಯಪ್ರಚೋದನೆ ಮಾಡಬೇಕಾದ ಸಂಗತಿ, ನಿಲವುಗಳ (Attitudes) ಮತ್ತೊಂದಂಶ, ಒಳಗೇ ಕಾರ್ಯಮಾಡುತ್ತಿರುವ ಆಸೆ, ಪ್ರತ್ಯಾಸೆ, ಪ್ರಯೋಜನಕಾಂಡ - ಅವುಗಳ ತುಯಿತ ಬೇರೊಂದು. ಮನಃಶಾಸ್ತ್ರದಲ್ಲಿ ಪರಿಶೀಲಿಸುವ, ಸಾಧು ಸಂತರ ನಡವಳಿಕೆಯಲ್ಲಿ ಪ್ರಕಟವಾಗಿರುವ ಸಂಗತಿಗಳು ಇನ್ನೊಂದು. ಉದಾಹರಣೆಗೆ ರಾಮಕೃಷ್ಣ ಪರಮಹಂಸರಿಗೆ ಮದುವೆ ಮಾಡಬೇಕೆಂದಾಗ ಈತನಿಗೆ ಯಾರು ಹೆಣ್ಣುಕೊಡುತ್ತಾರೆ ಎಂದು ಮಾತು ಎದ್ದಿತಂತೆ. ಆಗ ಆತನೇ 'ಕಾಮಾರ್ ಪುಕುರದಲ್ಲಿ ಒಬ್ಬ ಹುಡುಗಿ ಇದ್ದಾಳೆ; ನನಗಾಗಿ ಆಕೆ ಹುಟ್ಟಿದ್ದಾಳೆ; ಅವಳ ತಾಯಿ ತಂದೆಯರನ್ನು ಕೇಳಿ; ಆ ಹುಡುಗಿಯನ್ನು ನನಗೆ ಮದುವೆ ಮಾಡಿಕೊಡುತ್ತಾರೆ' ಎಂದರಂತೆ. ಈ ಸಂಗತಿ ನಿಜವಾಯಿತು. ಈ ಹಳದಿ ಹೂ ಕೆಂಪಾಗಬಹುದೆ? ಎಂದು ಯಾರೊ ಅವರನ್ನು ಕೇಳಿದರಂತೆ. 'ದೈವೇಚ್ಛೆ ಇದ್ದರೆ ಏಕೆ ಆಗಬಾರದು' ಎಂದರಂತೆ. ಮಾರನೆಯ ದಿನ ಬೆಳಗ್ಗೆ ಹಾಗಾಯಿತಂತೆ. ಇಂಥ ಮಾತು, ನಡತೆ ನೂರಾರು ಜನರ ಕಣ್ಣೆದುರಿಗೆ ಆಗಿರುತ್ತವೆ. ಇದು ಯಾವ ಪ್ರಭಾವವೊ ಲಬ್ಧಿಯೊ ನಿಜಾಂಶಗಳೆಂದಾಗುತ್ತವೆ. ಈ ನೆಲಸು ಮುಟ್ಟಬೇಕು.

## ಸತ್ಯ ನುಡಿಯಬೇಕೆ?

ಇಷ್ಟೂ ಆಯಿತು; ಮತ್ತೊಂದು ಪ್ರಶ್ನೆ ಏಳುತ್ತದೆ. ಸತ್ಯವನ್ನೇ ಯಾವಾಗಲೂ ನುಡಿಯಬೇಕೆ? ನುಡಿಯಬಹುದೆ? ಎಂಬುದು, ನುಡಿಯುವವರು ಯಾರು? ಯಾವ ಸಂದರ್ಭದಲ್ಲಿ? ಏನನ್ನು ಸಾಧಿಸುವುದಕ್ಕಾಗಿ? ಎಂಬುದು ಅಲ್ಲಿ ಪರ್ಯಾಲೋಚನೆಗೆ ಬರುವ ಸಂಗತಿಗಳು. ಇವು ಸತ್ಯದ ಬೆಲೆಯನ್ನೇ ಮಾರ್ಪಡಿಸುವ, ಸೂಕ್ತ ಅಸೂಕ್ತ ಮಾಡುವ, ಎಂದರೆ ಮಿತಗೊಳಿಸುವ ಕ್ರಿಯಾಸಂದರ್ಭ. ಹುಟ್ಟಿರುವ ಎಷ್ಟೊ ನಾಟಕ ಕಾದಂಬರಿಗಳಲ್ಲಿ ಸತ್ಯವೆಂಬುದನ್ನು ನುಡಿಯದೆ ಆದ ಕೇಡುಗಳು ಒಂದು ಬಗೆಯಾದರೆ, ನುಡಿದು ಎಷ್ಟು ದುಷ್ಪರಿಣಾಮ, ದುಃಖ, ಅನ್ಯಾಯ ನಡೆದಿವೆ! ನಿರ್ವಂಚನೆಯಿಂದ ಸತ್ಯವನ್ನು ನುಡಿಯುತ್ತಿದ್ದೇನೆ ಎಂಬ ಪ್ರಾಮಾಣಿಕನ ಕ್ರಿಯಾವ್ಯಾಪಾರ ಎಷ್ಟು ವ್ಯರ್ಥವಾಗುತ್ತದೆ, ದುಃಖಕೋಟಲೆಗಳನ್ನು ಉಂಟು ಮಾಡುತ್ತದೆ ಎಂಬುದನ್ನು ಇಬ್ಸೆನನ A Doll's House, The Wild Duck ಮತ್ತು ಗಾಲ್ಸ್‌ವರ್ದಿ ಅವರ Skin Game ಮುಂತಾದವು ತಿಳಿಸುತ್ತವೆ.

ವಸ್ತು ಸತ್ಯದಂತೆಯೇ ಶಾಸ್ತ್ರಗಳ ಸತ್ಯ, ಕಲೆಯ ಸತ್ಯ, ವೇದಾಂತದ ಅಥವಾ ಅನುಭಾವದ ಸತ್ಯ ಉಂಟು. ಅಲ್ಲಿಯೂ ವಿವೇಚನೆ, ತಂತ್ರ, ಆಚರಣೆ ಉಂಟು. ಆ ಸಂಬಂಧದಲ್ಲಿ ಪರಿಭಾಷೆ ನೂರಾರು ಸಿದ್ಧವಾಗಿರುತ್ತದೆ. ಬಹು ಕಾಲದಿಂದ ಜನ ಒಪ್ಪಿ ನಡಸಿಕೊಂಡು ಬಂದ ಯಾವುದೊ ಅಂಶಗಳು ಆಯಾ ಪಂಗಡಗಳವರ ದಿನಬಳಕೆಯ ಕಾರ್ಯಕಲಾಪಗಳಿಗೆ ಆಧಾರವಾಗಿರುತ್ತವೆ. ಅಲ್ಲಿ ಕೆಲವನ್ನು–ಬಹುಕಾಲ



ಸತ್ಯವಾಗಿ ಕಂಡದ್ದನ್ನು–ಒಪ್ಪದೆ ನಿರಾಕರಿಸುವ ಸಂಭವವುಂಟು. ಸತ್ಯದ ಹೊಸ ಕಲ್ಪನೆಯಲ್ಲಿ ಹಳೆಯದಕ್ಕೆ ಮಾನ್ಯತೆ ಕಳೆದಿರುವುದುಂಟು. ಅವುಗಳ ಚರಿತ್ರೆಯಲ್ಲಿ ಬೇರೆಲ್ಲಿಯೊ ಸಿದ್ಧವಾದ ತತ್ವಗಳು ಬೆಳೆದು ಬಂದು ಇಲ್ಲಿನ ಕಲ್ಪನೆಗಳನ್ನೆಲ್ಲ ಮಾರ್ಪಡಿಸಿರುತ್ತವೆ. ಒಮ್ಮೆ ಬಿಷಪ್ ಬಾರ್‌ಕ್ಲೆ ಕಣ್ಣಿಗೆ ಕಂಡದ್ದು ಮಾತ್ರ ಸಾರವತ್ತಾದ್ದು; ಗೋಚರವಾಗುವುದರಲ್ಲಿದೆ ಸತ್ಯ–Esse is Percipit ಎಂದರು. ಕೇವಲ ವಸ್ತು ಸತ್ಯ ಇಲ್ಲವೆಂದಾಯಿತು. ಕೂಡಲೆ ಡಾ. ಜಾನ್‌ಸನ್ ಹೋಗಿ ಒಂದು ಕಲ್ಲನ್ನೊ ದೀಪದ ಕಂಬವನ್ನೊ ಒದ್ದು ನೋವುಗೊಂಡರಂತೆ. ಕಲ್ಲು, ದೀಪದ ಕಂಬ ನಿಜವಾಗಿ ವಸ್ತುಗಳೇ. ಇವೊತ್ತು ಭೌತಶಾಸ್ತ್ರದ ಅನ್ವೇಷಣೆಗಳಿಂದ ವಸ್ತುವಿನ ಸಾರ ಘನಸ್ಥಿತಿಯಲ್ಲಿ ಮಾತ್ರವಲ್ಲ. ಈ ಘನವೆಂಬುದು ಘನ, ದ್ರವ್ಯ, ಅನಿಲ ಎಂಬ ದ್ರವ್ಯದ ಬೇರೆ ಬೇರೆ ಸ್ಥಿತಿ ಪ್ರಕಾರವಲ್ಲ; ಅಲೆಗಳಲ್ಲ, ರೇಣುಗಳಲ್ಲ, ಮರಿ ಅಲೆಗಳಲ್ಲ; ಅಮೂರ್ತವಾದ ಯಾವುದೊ ಘಟನೆಗಳಂತಿರುವ (events) ಕಂತೆಗಳು (bundles) ಎನ್ನುತ್ತಾರೆ. ಅವು ಒಂದೊಂದಕ್ಕೆ ಸೇರಿಕೊಂಡು–ಒತ್ತಾಗಿ ಸೇರಿಕೊಂಡು ಸಹ–ಇಲ್ಲದಿರಬಹುದು; ಅವುಗಳ ಸ್ವರೂಪವನ್ನು ಅರಿಯಲು ಕೂಡ ಆಗದಿರಬಹುದು. Unknowable ಎಂದಾಗ ಸಾರ, ಘನ, ವಸ್ತು ಎಂಬವುಗಳ ಅರ್ಥವೇ ಪೂರ್ತಿ ಮಾರ್ಪಡುತ್ತದೆ. ವಸ್ತುವಿನ ಗುಣಗಳು ಸ್ವರೂಪಗಳು ಎಂದಾಗಲೂ ಅವುಗಳ ಪ್ರಧಾನ ಲಕ್ಷಣ, ಗುಣಾಂಶ, ಆಕಸ್ಮಿಕಾಂಶ, ಪ್ರಯೋಜನ ಭಾಗ, ಅವಕ್ಕೆ ಅಂಟಿಕೊಂಡೇ ಅವಿಭಾಜ್ಯವಾಗಿರುತ್ತವೆ. ಅವಕ್ಕೆ ಆಕಸ್ಮಿಕ ಲಕ್ಷಣಗಳುಂಟು. ಪದಾರ್ಥಗಳ ವಿಸ್ತರಣದಲ್ಲಿ ಅಗಲ, ಉದ್ದ, ಎತ್ತರ ಮೂರೇ ಅಳತೆಗಳು ಎಂದು ಗೊತ್ತಾಗಿದ್ದಾಗ, ಐನ್‌ಸ್ಟೈನ್ ಕಾಲವೆಂಬ ಇನ್ನೊಂದು ಪ್ರಕಾರವನ್ನು ಅದಕ್ಕೆ ಸೇರಿಸಿ ನೆಲಸು ನಾಲ್ಕು ಎಂದರು. ಯಾವಾಗ ಕಾಲಾಂಶ ಈ ನಿರ್ಣಯಕ್ಕೆ ಸೇರಿತು, ಅದು ಅಳತೆಯ ಪ್ರತಿ ಅಂಶವೂ ಒಂದು ಘಟನೆ (Event) ಆಗುತ್ತದೆ ಎಂದಾಯಿತು. ಹಾಗೆಯೇ ದ್ರವ್ಯ ಎಂಬುದು ಬೇರೆಯಲ್ಲ, ಚೈತನ್ಯ ಎಂಬುದು ಬೇರೆಯಲ್ಲ; ಒಂದಕ್ಕೊಂದು ಸಮ: $E=mc^2$, ಎರಡೂ ಒಂದೇ ಎಂದು ನುಡಿದಾಗ, ಅಧ್ಯಾತ್ಮವಾದ ಯಾವುದೊ ಒಂದು ಮಟ್ಟಕ್ಕೆ-ಮತದ ಅರ್ಥದಲ್ಲಲ್ಲದಿರಬಹುದು-ಭೌತವಾದ ಸರಿಯುತ್ತದೆ. ಅವರು ಯಾವುದನ್ನು ಸಾಪೇಕ್ಷ ಸಿದ್ಧಾಂತವೆಂದು ನುಡಿದರೊ ಅದನ್ನು ಪ್ರಯೋಗ ಮಾಡಿ ಕೂಡ ತೋರಿಸಲಾಗುವುದಿಲ್ಲವಂತೆ. ಆ ಸತ್ಯ ಗಣಿತದ ಒಂದು ಸಮೀಕರಣ ಎಂದರು ಇನ್ನು ಕೆಲವರು. ಕಾರಣ ಎಂಬ ತತ್ವವನ್ನು ಕೂಡ ಪರಮ ಪ್ರಮಾಣವೆಂದು ನುಡಿಯುವುದು ಸತ್ಯವಾಗದು; ಸಂಖ್ಯಾಶಾಸ್ತ್ರದ ಒಟ್ಟು ಸರಾಸರಿಯಲ್ಲಿ ಆ ಅಳತೆಯನ್ನು ಮಾಡಬಹುದೇ ಹೊರತು ವಿಶ್ವದ ರಚನೆಯನ್ನೂ ವ್ಯಾಪಾರವನ್ನೂ ನಿರ್ದೇಶಿಸುವಾಗ ಇದು ಖಚಿತವಾಗಿ ಹೀಗೇ ಸರಿ ಎಂದು ಕಾರ್ಯಕಾರಣಮಾನ ಪಡೆಯುತ್ತದೆ ಎಂದು ನುಡಿಯಲು ಬಾರದು, ಅನಿರ್ಣಯ ಎಂದರು. Indeterminate ಮನಸ್ಸಿನ ಸ್ವರೂಪವನ್ನು ವಿವೇಚಿಸಿದ ಶಾಸ್ತ್ರಜ್ಞರು 'ಮನಸ್ಸು' ಎಂಬುದೇ ಪ್ರತ್ಯೇಕವಾಗಿ ಇಲ್ಲ; ನರ ಮಂಡಲದ ಒಂದು ಕ್ರಿಯಾರಂಗ, ವ್ಯಾಪಾರ,

ಶಕ್ತಿ ಮನಸ್ಸು; ಅದರ ಒಂದು ಗುಣರೂಪ ತನ್ನ ತೀವ್ರತೆಯಲ್ಲಿ, ತುಂಬಿನಲ್ಲಿ ಮನಸ್ಸಿನ ಎಲ್ಲಾ ಕ್ರಿಯಾವ್ಯಾಪಾರವನ್ನು ಮಾಡುತ್ತದೆಯೇ ಹೊರತು, ಬುದ್ಧಿ ಇಚ್ಛೆ ಮುಂತಾದ ವ್ಯಾಪಾರ ನರಗಳ ರಚನೆಗೆ ಸಂಬಂಧಪಟ್ಟ ಹಾಗೆ, ಮನಸ್ಸೆಂಬ ಬೇರೆ ಒಂದಂಗ ಇಲ್ಲವೆಂದರು. ಮನಸ್ಸು ಹಾಗೆ ಹತ್ತಾರು ಪದರಗಳಲ್ಲಿ ನೆಲಸಿರುತ್ತದೆ. ಅದರ ಸಮಸ್ತ ವ್ಯಾಪಾರ ದುರ್ಬೋಧ, ಅಜ್ಞಾತವಾಗಿರುವುದಲ್ಲದೆ ಅರ್ಧಪ್ರಜ್ಞೆ, ಅಪ್ರಜ್ಞೆ, ಉಪಪ್ರಜ್ಞೆ ಮುಂತಾದ ರೂಪಗಳಲ್ಲಿ ಇರುತ್ತದೆ. ನಾವು ಮಾಡುವ ಕೆಲಸಗಳ ಹಿಂದೆ, ಆಡುವ ಮಾತುಗಳ ಹಿಂದೆ ಎಷ್ಟೋ ಆಳ, ಮಟ್ಟಗಳ ಪ್ರಜ್ಞಾವ್ಯಾಪಾರ ನಡೆಯುತ್ತಿರುತ್ತದೆ; ಸಾವಿರಾರು ಲಕ್ಷಾಂತರ ವರ್ಷಗಳಲ್ಲಿ ಮನುಷ್ಯನ ಅನುಭವ, ಸಂಸ್ಕಾರ ಯಾವ ಯಾವ ರೀತಿ ಮಾರ್ಪಟ್ಟಿದೆಯೊ ಅದೆಲ್ಲ ಸುಪ್ತವಾಗಿ, ವಾಸನೆಗಳಾಗಿ, ಸಂಸ್ಕಾರರೂಪವಾಗಿ ಇದ್ದುಕೊಂಡು ನಮ್ಮ ಯುಕ್ತಿಯಲ್ಲಿ, ತಿಳಿವಳಿಕೆಯಿಂದ ನಾವು ತಿಳಿದಿರುವ ಪ್ರಕರಣಗಳಲ್ಲಿ ಕಲ್ಪನೆಗಳಾಗಿ, ಕಾಣ್ಕೆಗಳಾಗಿ ಕಾರ್ಯಮಾಡುತ್ತವೆ. Collective or Cosmic Unconscious ಎಂಬುದು ಒಟ್ಟು ಜೀವವೆಂದು ಹುಟ್ಟಿ ಬೆಳೆದಿರುವ ಸಮಸ್ತದ ಯಾವ ಯಾವುದೊ ಚೇತನಾಂಶಗಳ ಆಳಗಳಿಂದ ಎದ್ದು ಬಂದ ಕಲ್ಪನೆಯಲ್ಲಿ ಸೃಷ್ಟ್ಯಾತ್ಮಕ ಪ್ರತಿಭಾ ವ್ಯಾಪಾರವಾಗುವ ಮಟ್ಟದಲ್ಲಿ ನುಡಿಯುತ್ತವೆ ಎಂದು ವಿವೇಚಿಸುವವರಿದ್ದಾರೆ. ವೇದಾಂತದಲ್ಲಿ ದರ್ಶನದಲ್ಲಿ ಆಡುತ್ತಿದ್ದ ಕೆಲವು ಮಾತುಗಳು ಮನೋವಿಜ್ಞಾನದ ವಿಶ್ಲೇಷಣೆಯಲ್ಲಿಯೂ ಇಂದು ಗುರುತಿಸುವ ಸ್ಥಾಪಿತವಾಗುವ ಅಂಶಗಳಾಗಿ ಗ್ರಹಿಕೆಗಳಾಗಿ ಕಾರ್ಯಕಾರಿಯಾಗುತ್ತಿವೆ. ಪ್ರಯೋಗಗಳನ್ನು ಚಿಕಿತ್ಸಾ ವಿಧಾನಗಳನ್ನು ಆ ಭಾಗದ ತಿಳಿವಳಿಕೆ ಮಾರ್ಪಾಡಿಸುತ್ತಿದೆ. ಇದನ್ನು ಸತ್ಯ ಪ್ರಪಂಚಕ್ಕೆ ಸೇರಿಸಬೇಡವೆ? ಅಜ್ಞಾನವೊ ಸಂದೇಹವೊ ರಾಗದ್ವೇಷಗಳೊ ಕಾರ್ಯಕಾರಿಯಾಗಿ ಸುಖದುಃಖಗಳನ್ನು ಉಂಟು ಮಾಡುವುದು ಎಲ್ಲರಿಗೂ ತಿಳಿದ ಸಂಗತಿ. ಅವು ಉಲ್ಬಣಕ್ಕೆ ಬಂದಿರುವಾಗ ಅವು ನಿಜ. ಭೂತಚೇಷ್ಟೆ, ಗ್ರಹಚೇಷ್ಟೆ, ಮೈಮೇಲೆ ಬಂದದ್ದು, ಪಾತ್ರಿ ನುಡಿಯುವುದು ಮುಂತಾದವು-ನಿಜವೊ ಅಲ್ಲವೊ, ಅಂಧಶ್ರದ್ಧೆ-ಏನೇ ಅನ್ನಿ-ಹಾಗೆ ಕಂಡು ಅವಕ್ಕೆ ಭಯ, ಪೂಜೆ, ತಣಿ ಕಾಣಿಸುವುದು ಜನಾಂಗಗಳಲ್ಲಿ ಕಾಣುತ್ತದೆ. ಆ ವಿಷಯಗಳಲ್ಲಿ ನಡತೆ ಆಚಾರಗಳನ್ನು ನಡಸುವುದು ಜೀವನವನ್ನು ರೂಪಿಸಿ ಬಲಾಬಲಗಳನ್ನು ಉಂಟು ಮಾಡುವುದು. ಯೋಗಿ, ಸಿದ್ಧ ಮುಂತಾದವರು ಒಗಟೆಗಳಂತಹ ಮಾತುಗಳನ್ನಾಡುತ್ತ ಕೇವಲ ಕೆಲವರಿಗೆ ಮಾತ್ರ ಅರ್ಥವಾಗುವ ಸಂಕೇತವನ್ನು ನುಡಿದು ತಮ್ಮ ಶಾಖೆಯ ಕ್ರಿಯಾ ಮಂಡಲವನ್ನು ನಿರ್ಮಿಸಿಕೊಳ್ಳುತ್ತಾರೆ. ಆ ಮಾತು ಎಲ್ಲರಿಗೂ ಅರ್ಥವಾದರೂ ಅವರ ಅರ್ಥ ಬೇರೆ. ಅದು ಸಂಕೇತ. ಅವರ ಪರಿಭಾಷೆ.

'ಮಂದಾಃ ಸಾಂಕೇತಿಕಾನ್ ಅರ್ಥಾನ್ ಮನ್ಯಂತೇ ಪಾರಮಾರ್ಥಿಕಾನ್'-ಎಂಬ ನೆಲಸೂ ಇದೆ. ಕವಿತೆಯ ವಾಚ್ಯಾರ್ಥದ ಹಿಂದೆ ಏಳುವ ನಾಲ್ಕಾರು ನೆಲಸಿನ ಅರ್ಥ-ಪ್ರಪಂಚ ಕಟ್ಟಿ ನಿಲ್ಲುವುದು ಸಾಮಾನ್ಯವಾಗಿ ಕಂಡ ಸಂಗತಿ.



ನಾದಕ್ಕೆ ಸಂಬಂಧಿಸಿದಂತೆ ಸಂಗೀತದಲ್ಲಿ ಹಲವಾರು ಬಗೆಯ ಕಲ್ಪನೆ, ಎಣಿಕೆ, ಗುಣಿತಗಳು ಉಂಟು. ಸಂಗೀತ ರಚನೆಗಳಲ್ಲಿ ವೇದನೆ, ಸಂವೇದನೆ, ಅತಿ ಸೂಕ್ಷ್ಮವಾಗಿ ಅವುಗಳ ನಿಯಮ, ಜ್ಞಾನ, ಅನುಭವ ಅತಿಸೂಕ್ಷ್ಮಗ್ರಾಹಿಗಳಲ್ಲದ ಇತರರಿಗೆ ಸಂವೇದ್ಯವಾಗದಿರುತ್ತದೆ. ಸಂಕೇತವೆಂದಾಗ ಒಂದು ಬಗೆಯ ಗೀತವೊ ಗಾನವೊ ಒಂದು ರಾಷ್ಟ್ರದ ನಿಜವಾದ ನಂಬಿಕೆಯ ಸ್ಫೂರ್ತಿಸ್ಥಾನವಾಗಿರುವುದುಂಟು. ಯೂರೋಪಿನ ಅನೇಕ ರಾಷ್ಟ್ರಗಳು 18ನೆಯ ಶತಮಾನದ ಮಧ್ಯಭಾಗದಿಂದ ಈಚೆಗೆ ತಾನೆ ತಮ್ಮ ಸಾಹಿತ್ಯ, ಸಂಗೀತ ಬೆಳಸಿಕೊಂಡರು. ಆ ಮುಂಚೆ ಸ್ವತಂತ್ರವಾದ ಜರ್ಮನ್, ಚೆಕ್, ಹಂಗೇರಿಯನ್, ರಷ್ಯನ್ ಸಾಹಿತ್ಯಗಳಿರಲಿಲ್ಲ. ಈ ಇನ್ನೂರು ವರ್ಷಗಳಲ್ಲಿ ಆ ಜನ ಬೆಳಸಿರುವ ಬೆಳಸು ವಿಸ್ಮಯಕರವಾದ್ದು. ಚೆಕ್ ಸಂಗೀತ ಪದ್ಧತಿಯಲ್ಲಿ ಸ್ಮೆಟನಾ ಎಂಬ ಒಬ್ಬ ಸಂಗೀತಗಾರನು 'Dalibor' ಎಂಬ ಸಂಗೀತಕ (Opera)ವನ್ನು ನಾಟಕದಂತೆ ರಚಿಸಿದನು. ಆತನು ಪ್ರಾಗಿನ-ಪ್ರಾಹಾ ಎನ್ನುತ್ತಾರೆ-ರಾಷ್ಟ್ರೀಯ ನಾಟಕಮಂದಿರವನ್ನು ಸ್ಥಾಪನೆ ಮಾಡುತ್ತ (1868) ತನ್ನ ವಿಶ್ವಾಸದ 'Music-the life of the Czechs - 'ಸಂಗೀತ ಚೆಕ್ ಜನರ ಜೀವ'-ಎಂದುದು ಮಂತ್ರವಾಯಿತು. ತನ್ನ 'Dalibor' ಸಂಗೀತದ ಒಂದನೆಯ ಭಾಗವನ್ನು ಪ್ರಯೋಗಕ್ಕೆ ತಂದನಂತೆ. ಆಸ್ಟ್ರಿಯಾದ ಅಧೀನದಲ್ಲಿ ಚೆಕ್ ರಾಷ್ಟ್ರವಿತ್ತು. ಬಹುಕಾಲದಿಂದ ಸ್ವತಂತ್ರರಾಗಬೇಕೆಂದು ಬಯಸಿದ ಆ ಜನ ಪರಾಧೀನರಾಗಿರುವುದನ್ನು ಸಹಿಸದೆ ಸ್ವಾಧೀನತೆಯನ್ನು ಬಯಸುತ್ತಿದ್ದರು. 15 ನೆಯ ಶತಕದ ಒಬ್ಬ ಜನನಾಯಕ ಡಾಲಿಬರ್ ಹೀಗೆ ಜನಗಳನ್ನು ಸರ್ಕಾರಕ್ಕೆ ವಿರುದ್ಧವಾಗಿ ಎತ್ತಿ ಕಟ್ಟುತ್ತಿದ್ದಾನೆ; ಆ ಜನತೆ ಸ್ವತಂತ್ರವಾಗಲು ಯತ್ನಿಸುತ್ತಿದ್ದಾನೆ ಎಂಬುದನ್ನು ಆಳರಸರು ಅಡಗಿಸಲು ಯತ್ನಿಸಿ ಅವನನ್ನು ಒಂದು ದುರ್ಗದ ಸೆರೆಗೆ ದೂಡಿದರು. ಅಲ್ಲಿಗೆ ದೂಡಿಸುವುದರಲ್ಲಿ ನೆರವಾದ ಒಂದು ಹೆಣ್ಣು ಅವನ ನುಡಿಗೆ ನಡೆಗೆ ಆಮೇಲೆ ಮಾರುಹೋಗಿ ಅವನಲ್ಲಿ ಪ್ರಣಯ ಉಂಟಾಗಿ, ಅವನಿಗೆ ಪ್ರಿಯವಾದ ಒಂದು ಪಿಟೀಲನ್ನು ತಂದು ಕೊಟ್ಟು ಅವನ ಸಂಗೀತದಿಂದ ಸುತ್ತೆಲ್ಲ ಜನ ಕರಗುವಂತೆ, ಸ್ಫೂರ್ತಿ ಪಡುವಂತೆ ಮಾಡಿದಳಂತೆ. ಪಿಟೀಲನ್ನು ಅಧಿಕಾರಿಗಳು ಕಿತ್ತುಕೊಂಡರು. ವಾದ್ಯವಿಲ್ಲದ ಅವನಿದ್ದಲ್ಲಿಗೆ ದೇವತೆಗಳು ಬಂದು ಅದೇ ವಾದ್ಯವಾದನವನ್ನು ಮಾಡಿ ಅವನಿಗೂ ಸುತ್ತಲವರಿಗೂ ದಿವ್ಯಗಾನವನ್ನು ಕೇಳಿಸುತ್ತಿದ್ದರಂತೆ. ಕಾಲಕ್ರಮದಲ್ಲಿ ಅವನ ತಲೆ ತೆಗೆಸಿದರು. ಅಲ್ಲಿಗೂ ಆ ದುರ್ಗದ ಗೋಪುರದಿಂದ ಆತನ - ಅದರ - ಗಾನ ಕೇಳಿಸುತ್ತಿತ್ತಂತೆ. 'ದಾಲಿಬೋರ್ಕ' ಎಂದು ಅದರ ಹೆಸರಾಯಿತಂತೆ. ಆ ದುರ್ಗವು ಹಾಡುತ್ತಿರುವುದನ್ನು ಕೇಳಲು ಸುತ್ತಲ ಕೃಷಿಕರೆಲ್ಲ ಸೇರುತ್ತಿದ್ದರೆಂಬುದು ಸಂಗೀತಕದ ವಸ್ತು. ಇಂದಿಗೂ ಸ್ವಾತಂತ್ರ್ಯ ಗೀತವಾಗಿದೆ. ಹಾಡುವ ಆ ದುರ್ಗದ ಗೋಪುರ ಜೆಕೊಸ್ಲೋವಾಕಿಯದ ಸಂಗೀತ ಅಥವಾ ಆ ಗೀತಗಾನ ಡಾಲಿಬರ್ ತಲೆ ಕಡಿದು ಹಾಕಿದರೂ ಹಾಡನ್ನು ನಿಲ್ಲಿಸದೆ ಹಾಡುತ್ತಿದೆ ಎಂಬುದು ಜೆಕೊಸ್ಲೋವಾಕಿಯಾದ ಸ್ವಾತಂತ್ರ್ಯದ ಪರವಾಗಿ ಉಳಿದುಕೊಂಡಿದೆ. ಇಂಥಲ್ಲಿ ಸತ್ಯದ

ವೇದನೆ-ಸಂವೇದನೆ ಯಾವ ಯಾವ ರೀತಿ ಎಲ್ಲೆಲ್ಲಿ ಆಗಿ ಕಾರ್ಯಕಾರಿಯಾಗುವುದು ಎಂಬುದರ ಸ್ಥೂಲನಿರ್ದೇಶನವಾದೀತು. ಬೆಲೆಗಳನ್ನು ಕಟ್ಟಿ ಎಣಿಸುವಾಗ, ಇದೇ ಸರಿ, ಅಲ್ಲ ಎನ್ನುವಾಗ ಲೋಕ ಜೀವನ ಅಸಂಖ್ಯಾತವಾದ ಎಷ್ಟು ಪ್ರಕಾರಗಳಲ್ಲಿ ತನ್ನ ಅರಿವನ್ನು ನಡಸಿಕೊಂಡು ಬರುತ್ತದೆಯೋ-ಆ ಎಲ್ಲವೂ ಸತ್ಯವೇ; ಒಂದನ್ನು ಕುರಿತು ಇನ್ನೊಂದು ಅಸಹನೆ ಪಡುವುದು, ಅಲ್ಲಗಳೆಯುವುದು ಸರಿಯಾಗದು ಎಂಬ ಸಂಗತಿಯನ್ನು ತಿಳಿಸುವುದು ಇಲ್ಲಿನ ಉದ್ದೇಶ. ಕಲೆಗಳಲ್ಲಿ ಸತ್ಯವಾವುದು ಎಂದು ಅರಿವಾಗಿ ಕಲೆಗಾರನು ಕಾಣಿಸಬೇಕೆಂದದ್ದು, ಬೇರೆ ಬೇರೆ ಕಲಾ ಮಾಧ್ಯಮಗಳಲ್ಲಿ ರೂಪಿತವಾದ್ದು, ಅದನ್ನು ನೋಡಿ ಕೇಳಿ ಜನ ಮಾಡಿಕೊಂಡದ್ದು - ಎಲ್ಲಾ ಸತ್ಯವೇ. ಅರ್ಥ ಹಾಗಲ್ಲ, ಹೀಗೆ ಎಂಬ ವಿಮರ್ಶಕನ ನುಡಿತವೂ ಸತ್ಯವೇ; ಆ ಸಂಬಂಧದಲ್ಲಿ ಹುಟ್ಟಿದ ಸೂತ್ರ ಸಿದ್ಧಾಂತಗಳೂ ಸತ್ಯವೇ-ಜನ ಒಪ್ಪುವವರೆಗೂ, ಅದು ಹಾಗೆ ವೇದ್ಯ ವಾಗುವವರೆಗೂ.

ಯಾವುದಾದರೊಂದು ಗಾನದ ಅರ್ಥವೇನು? ಒಂದು ಚಿತ್ರದ ಅರ್ಥವೇನು? ಎಂದು ಪ್ರಶ್ನೆ ಕೇಳಬಹುದೊ ಇಲ್ಲವೊ. ಕೇಳಿದರೆ ಬರುವ ಉತ್ತರ ಸಮರ್ಪಕ ವಾಗುತ್ತದೆಯೊ ಇಲ್ಲವೊ. ಪಾಶ್ಚಿಮಾತ್ಯ ಸಂಗೀತದಲ್ಲಿ ಸ್ವರಮೇಳ ಪದ್ಧತಿಯನ್ನು ವಿಶೇಷವಾಗಿ ಬಳಸುತ್ತಾರೆ. ನಮಗಿಂತ ಹೆಚ್ಚಾಗಿ ಬದುಕಿನ ಎಲ್ಲ ಪ್ರಕರಣಗಳಿಗೂ ಹೊಂದುವಂತಹ ಹಾಡನ್ನು ಗಾನವನ್ನು ಬಳಸಿ, ಗಾನಕಲೆಯ ಆ ಎಲ್ಲ ಪ್ರಕಾರಗಳನ್ನೂ ವ್ಯಾಪಿಸುವಂತೆ ಪ್ರಯೋಗಿಸುತ್ತಾರೆ. Symphony, Sonata ಮುಂತಾದ ಅಚ್ಚ ಸಂಗೀತ ಪ್ರಕಾರಗಳು ಕೆಲವೇಳೆ ಯಾವುದೊ ಒಂದು ಕತೆಗೂ ಒಂದು ಕವಿತೆಗೂ ಸಂಬಂಧಪಟ್ಟಂತೆಯೊ ಅಥವಾ ಅಮೂರ್ತವಾಗಿ (Abstract) ಒಂದು ಕಲ್ಪನೆಯನ್ನು ಬೆಳಸುವುದಕ್ಕೊ ಬಳಕೆಯಾಗುತ್ತದೆ. ಅಲ್ಲಿ ನೂರೈವತ್ತು ಇನ್ನೂರು ವರ್ಷಗಳಿಂದ ನಡೆದಿರುವ ರಚನಾತಂತ್ರ ಅನೇಕ ಬಗೆಯ ಕ್ರಾಂತಿಗಳನ್ನು ಸಾಧಿಸಿ ಶುದ್ಧವಾದ ನಾದಮೇಳ ವಾದ್ಯಶಿಲ್ಪಗಳನ್ನು ಸಾಧಿಸಿದೆ. ಅವುಗಳಲ್ಲಿ ಯಾವುದರ ಅರ್ಥವೇನು ಎಂದು ಕೇಳುವುದು ನಗೆಗೆ ಈಡಾಗಬಲ್ಲದು. ನಮ್ಮಲ್ಲಿ ಶಾಸ್ತ್ರ ಸಂಗೀತದ ರಾಗಾಲಾಪನೆ ಆದಾಗ, ಅದಕ್ಕೆ ಯಾವುದಾದರೂ ಅರ್ಥವನ್ನೂ ಭಾವವನ್ನೂ ಆ ಭಾವಾರ್ಥಗಳ ವಿಕಸನವನ್ನೂ ಸೂಚಿಸುವುದು ಶಕ್ಯವಾಗುತ್ತದೆಯೆ? ಗಾಯಕನೇ ನ್ಯಾಯವಾಗಿ ತಿಳಿಸಬಲ್ಲನೆ? ಆದರೆ ಮಂತ್ರಮುಗ್ಧರಾಗಿ ನಾವು ಕುಳಿತು ಕೇಳುವುದಿಲ್ಲವೆ? ಯಾರು ಯಾರಿಗೆ ಆಗುವ ಅರ್ಥ, ಉಂಟಾಗುವ ಅನುಭವ ಅವರವರಿಗೆ ಮಾತ್ರ ವೇದ್ಯ. ಸ್ವರಗಳನ್ನು ಒಂದೊಂದು ರೀತಿಯಲ್ಲಿ ವಿನ್ಯಾಸ ಮಾಡಿ ಭಾವವನ್ನೂ ಕಲ್ಪನೆಯನ್ನೂ ಬೆಳಸಿದಾಗ ಅವುಗಳ ಅರ್ಥವಂತಿಕೆ, ನುಡಿತ ಬೇರೆಯಾದೀತು. ಗಮಕಗಳು ನುಡಿಯುವಾಗ ಮಾಧುರ್ಯವೊ ನವುರೊ ಕೇವಲ ಶ್ರುತಿ ಸುಭಗತೆಯೊ ಇಲ್ಲವೆಂದಾಗಲೂ ಅವು ಹೊಮ್ಮಿಸಿದ ಕಲ್ಪನೆಯ ತುಂಬು, ತೀವ್ರತೆ ವಿಶಿಷ್ಟವಾಗುತ್ತದೆ. ಸ್ಥಾಯಿಗಳ ಮೇಳನ ಮತ್ತು ಲಯವಿನ್ಯಾಸ ಬಗೆಬಗೆಯ ಅನುಭವ ಪರಂಪರೆಗಳನ್ನೂ ವ್ಯತ್ಯಾಸಗಳನ್ನೂ ಕಾಣಿಸಬಲ್ಲವು. ಅದಕ್ಕೆ



ಅದೇ ಅರ್ಥ ಎಂದು ಹೇಳಬೇಕಾಗಿ ಬರುವ ವಿದ್ಯಮಾನ ಅದು. ಮಾತುಗಳಿಂದ ತಿಳಿಸಲಾಗದ, ಸಾಹಿತ್ಯ ರಚನೆಯಲ್ಲಿ ಹೊಮ್ಮಿ ಸಲಾಗದ ಶುದ್ಧ ಅನುಭವವಿಲಾಸ. ನೇರವಾಗಿ ಹೃದಯವನ್ನು ಹೊಕ್ಕು ಮನಸ್ಸಿನ ಮೇಲೆ ಪರಿಣಾಮ ಉಂಟುಮಾಡುವ ಕಲಾಕಾರ್ಯ ಅದರದು. ಯಾವ ಬಗೆಯ ಭಾವಾನುಭವವನ್ನು ಬೇಕಾದರೂ ಈ ನಾದಕಲ್ಪನೆಯಲ್ಲಿ, ತಾಳರೂಪದಲ್ಲಿ ಕಲ್ಪಿಸ ಬಹುದು, ಲಯವಿನ್ಯಾಸದಲ್ಲಿ ಕಾಣಿಸಬಹುದು. ಸಂಗೀತದಲ್ಲಿನಂತಹ ಸಿದ್ಧಿಯ ಅಥವಾ ಭಾವಶುದ್ಧಿಯ ಸಾಧನೆಗೆ ಎಲ್ಲ ಕಲೆಗಳೂ ಆಸೆಪಡುತ್ತವೆ ಎನ್ನುವ ಉಕ್ತಿ ಒಂದುಂಟು.

ಚಿತ್ರಕಲೆಯಲ್ಲಿ ಇತರ ಕಲೆಗಳಲ್ಲಿನಂತೆಯೇ ಹಿಂದೆ ಯಾವುದೊ ಕತೆ, ವರ್ಣನೆ, ಸ್ಫುಟವಾದ ಸನ್ನಿವೇಶ, ಆಕೃತಿ, ವ್ಯಕ್ತಿವಿಶೇಷ ಮೂಡುವಂತೆ ವರ್ಣವಿನ್ಯಾಸವೂ ರೇಖಾವಿನ್ಯಾಸವೂ ನಡೆಯುತ್ತಿದ್ದವು. ಆಗ ಅರ್ಥ ಕಷ್ಟವಾಗುತ್ತಿರಲಿಲ್ಲ. ಮಾತಿನಲ್ಲಿ ಹೇಳಬಹುದಾದ್ದನ್ನು ಬಣ್ಣದಲ್ಲಿಯೂ ರೇಖೆಗಳಲ್ಲಿಯೂ ಕಣ್ಣ ಸೆಳೆಯಾಗಿ ಕಾಣಿಸುತ್ತಿದ್ದರು. ಅದರ ರಂಜನೆ ಪಟದಲ್ಲಿನಂತೆ ಸುಂದರವಾದ ರೂಪಗಳನ್ನು ಕಾಣಿಸುತ್ತಿತ್ತು; ಸಂತೋಷ ಕೊಡುತ್ತಿತ್ತು. ಇಂದಿನ ಚಿತ್ರಕಲೆಯಲ್ಲಿ ಆ ತಂತ್ರ ಹಿಂದೆ ಬಿದ್ದಿದೆ.

Abstract Art, Expressionism ಇತ್ಯಾದಿ ಕಲಾರೂಪ ಪ್ರಬಲವಾಗಿ ವರ್ಣಗಳಿಂದಲೂ ರೇಖೆಗಳಿಂದಲೂ ಚಿತ್ರಗಾರನ ಮನೋವಿಲಾಸವನ್ನೂ ಅವನ ಒಳಗಣ್ಣಿಗೆ ಕಾಣುವ ಯಾವುದೊ ಅರ್ಥಪ್ರಪಂಚವನ್ನೂ ಅನುಭವವನ್ನೂ ದ್ಯೋತನ ಮಾಡಲು ತೊಡಗಿದೆ. ಇದು ಖಾಸಗಿ ಯಾರದೊ ಮನೋಭಾವ. ಚಿತ್ರಗಾರನು ಬಳಸುವ ದ್ರವ್ಯ ವರ್ಣ ರೇಖೆ. ಒಬ್ಬನ ಮನಸ್ಸಿನಲ್ಲಿ ಕುದಿದ ಯಾವುದೊ ಭಾವಕ್ಕೆ ಯಾವುದೊ ಬಗೆಯಲ್ಲಿ ಆಕೃತಿ ಕೊಡಲು ಬಯಸುತ್ತದೆ. ಬಣ್ಣದ ಜೊತೆಗೆ ಇನ್ನೇನೇನೊ ಸೇರಿಸಿ ಬರವಣಿಗೆ ಬರೆದು ಗುರುತುಗಳನ್ನು, ಗಣಿತದ ಸಮೀಕರಣಗಳನ್ನು, ವೃತ್ತಪತ್ರಿಕೆಗಳ ಚೂರುಗಳನ್ನು ಸೇರಿಸಿ ಚಿತ್ರವೆಂದು ಕರೆವ (ಉದಾ. ಪಿಕಾಸ್ಸೊ 'ಗೆರ್ನಿಕ') ವಾಡಿಕೆ ಉಂಟಾಗಿದೆ. ಅಲ್ಲಿ ಕಣ್ಣ ಸಂತೋಷವಿಲ್ಲ; ಆಕೃತಿ ರೂಪಣವಿಲ್ಲ. ಶಕ್ತನಾದ ಚಿತ್ರಕಾರನ ಕೈಯಲ್ಲಿ ಯಾವುದೊ ಒಂದು ಅನುಭವ ಪ್ರಕಾಶನ ಯತ್ನ ಕಣ್ಣಿಗೆ ಹೊಡೆವಂತೆ ಮನಸ್ಸನ್ನು ಸೆರೆ ಹಿಡಿಯುತ್ತದೆ ಎನ್ನುತ್ತಾರೆ. ಯಾವುದೂ ಸ್ಪಷ್ಟವಾಗಿ ಅರ್ಥವಾಗದು. ಪಾಲ್ಲೊ ಪಿಕಾಸೊ, ಪಾಲ್ ಕ್ಲೀ, ಮ್ಯಾಕ್ಸ್ ಅರ್ನೆಸ್ಟ್ ಮುಂತಾದವರು ಮಾಡಿರುವ ಕೃತಿಗಳು ಕೆಲವು ಅತಿ ವಿಸ್ಮಯಕರವಾದ ಚಿತ್ರಗಳು. ಇದರ ಅರ್ಥವೇನೆಂದು ಕೇಳಿದರೆ 'ನೀವು ಮಾಡಿಕೊಂಡದ್ದು' ಎನ್ನುತ್ತಾರೆ. ಪಾಲ್ ಕ್ಲೀ ಒಂದು ಚಿತ್ರವನ್ನು 'Taking a Line for a Walk' - ಒಂದು ಗೆರೆಯನ್ನು ವಾಕಿಂಗ್ ಕರೆದುಕೊಂಡು ಹೋಗುವುದು-ಎಂಬ ಹೆಸರಲ್ಲಿ ಬರೆದಿದ್ದಾನೆ! ಅದಕ್ಕೆ ಅರ್ಥ ಕಟ್ಟಬೇಕಾದರೆ ಚಿತ್ರಕಾರನ ಮನಸ್ಸನ್ನೂ ತಂತ್ರವಿಧಾನವನ್ನೂ ಅರ್ಥಮಾಡಿಕೊಳ್ಳಬೇಕು. ಅದು ಸರಿಯೊ ತಪ್ಪೊ ಎಂಬುದಲ್ಲ ಪ್ರಶ್ನೆ. ಬೇರೆ ರೀತಿ ಅರ್ಥ ಹೊಂದದೆ ಎಂಬುದೂ ಅಲ್ಲ. ಅದು ಅವನ ಮನಸ್ಸಿನಲ್ಲಿ

ಹುಟ್ಟಿದ ಅರ್ಥ. ಅದೇನೇನಾಗಿದೆಯೊ, ಯಾವ ಯಾವ ಸತ್ಯ ಆತನ ಮನಸ್ಸನ್ನು ನಡಸುತ್ತಿರುವ ಭಾವವೊ ಅದರ ಪ್ರಕಾಶನ. ಅದು ಮೋಹಕವೆ, ಸಿದ್ಧವಾಗುತ್ತದೆಯೆ ಇಲ್ಲವೆ ಎಂಬುದು ಮಾತ್ರ ನಿಜ. ಕವಿತೆ, ನಾಟಕ, ಕಾದಂಬರಿಗಳಲ್ಲಿನ ಅರ್ಥ ದ್ಯೋತನೆಯೂ ಹಾಗೇ ಆಗುತ್ತಿದೆ. ಎರಡು ಮೂರು ನೆಲಸಿನಲ್ಲಿ ಸತ್ಯಾರ್ಥ ಪ್ರಕಾಶಗೊಳ್ಳುತ್ತಿರುತ್ತದೆ. ಬೇಂದ್ರೆಯವರ 'ಇದು ಬರಿ ಬೆಳಗಲ್ಲೊ ಅಣ್ಣ' ಎಂಬ ಕವನವನ್ನೂ 'ಜೋಗಿ' ಎಂಬುದನ್ನೂ 'ಮೂರ್ತಿ'ಯನ್ನೂ ತೆಗೆದುಕೊಂಡರೆ, ಹಲವು ಬಗೆಯ ನೆಲಸು ಅನ್ವಯಗಳುಳ್ಳ ಸತ್ಯ ಕಾಣುತ್ತದೆ. ಅಲ್ಲಿ ಸತ್ಯ ಕಾಣುವ ರೀತಿ ವಿಧಾನಗಳೇ ಬೇರೆ. ಅವಕ್ಕೆ ಅರ್ಥ ಮಾಡಿದಂತೆ ಅದು ಕಾಣುತ್ತದೆ. 'ನಾನು ಕವಿತೆ ಬರೆಯುತ್ತೇನೆ, People take what meaning they will ಎಂದರು ಟಾಗೋರರು ಒಂದು ಸಲ. ಜನ ಮಾಡಿದುದು ಅರ್ಥ, ಅದು ಅಲ್ಲಿಗೆ ಹೊಂದುವುದಾದರೆ. ಕೃತಿಕಾರರಿಗೇ ಅಚ್ಚರಿಯಾಗಬಲ್ಲದು. ಟಿ.ಎಸ್. ಎಲಿಯಟ್ ಒಂದು ಸಲ, "ನೀವು ಮಾಡುವ ಅರ್ಥ ನನಗೆ ಹೊಳೆದೇ ಇರಲಿಲ್ಲ" ಎಂದರು. ಇಂಥಲ್ಲಿ ನಿಜ ಯಾವುದು? ಇಂದಿನ ಪ್ರಖ್ಯಾತ ಕವಿಗಳೂ ಕಾದಂಬರಿಕಾರರೂ ನಾಟಕಕಾರರೂ ಕಾಣಿಸುತ್ತಿರುವುದೇನು? ಜಾಯ್ಸ್, ಕಾಫ್ಕಾ, ಬೆಕೆಟ್, ಅನೋವಿ ಮುಂತಾದವರ ಕೃತಿಗಳು ಉದಾಹರಣೆಗಳು. After the Fall, Waiting for Godot, Chairs ಇವುಗಳ ಅರ್ಥವೇನು?

ವೃತ್ತಪತ್ರಿಕಾ ಪ್ರಪಂಚದಲ್ಲಿ ಮೂಡುವ ವಾರ್ತೆಗಳ ಸತ್ಯಾಸತ್ಯತೆ ಇನ್ನೊಂದು ಬಗೆಯದು. ಬಂದ ಸುದ್ದಿಯನ್ನೆಲ್ಲ ಪ್ರಕಟಿಸುವುದೇ ವಾಡಿಕೆ. ಸುದ್ದಿ ಪವಿತ್ರವಂತೆ. ಪ್ರಕಟಿಸಿದ ಸುದ್ದಿ ಒಂದು ಬಗೆಯ ಉದ್ವೇಗಗಳನ್ನು ಉತ್ಸಾಹಗಳನ್ನು ಉಂಟು ಮಾಡಬಹುದು. ಎರಡನೆಯ ದಿನ ಅದಕ್ಕೆ ಆಧಾರವಿಲ್ಲವೆಂದು ಅದರಲ್ಲಿ ಕಾಣಿಸಿದ ಮಾತುಗಳು ಹಾಗಾಡಿದುವಲ್ಲವೆಂದು ಗೊತ್ತಾದಾಗಲೂ ಮೊದಲು ಕಿವಿಗೆ ಬಿದ್ದ ಅಥವಾ ಓದಿದ ಸುದ್ದಿಯ ಪರಿಣಾಮ ಪೂರ್ತಿಯಾಗಿ ನಷ್ಟವಾಗುವುದಿಲ್ಲ. ವೃತ್ತಪತ್ರಿಕಾ ಪ್ರಪಂಚದಲ್ಲಿ ಒಂದು ಮಾತನ್ನಾಡುವುದುಂಟು: ಹತ್ತು ಸಲ ಒಂದೇ ಸುಳ್ಳನ್ನು ಹೇಳುತ್ತ ಹೋದರೆ ಅದು ನಿಜಕ್ಕಿಂತ ನಿಜವಾಗಿ ಉಳಿಯುತ್ತದೆ ಎಂದು. ಅಲ್ಲಿನ ನಿವೇದನೆಗಳಲ್ಲಿ ಯಾವುದು ಪ್ರಾಧಾನ್ಯತೆ ಪಡೆಯುತ್ತದೆಯೊ ಅದಕ್ಕೆ ಹೆಚ್ಚು ಬೆಲೆ, ಮಾನ್ಯತೆ. ದಪ್ಪಕ್ಷರದಲ್ಲಿ ಅಚ್ಚಾದುದರಂತೆ ಕೆಳದನಿಯಲ್ಲಿ ನುಡಿದುದು, ಮೂಲೆಯಲ್ಲಿ ಅಚ್ಚಾದುದು ಜನದ ಗಮನಕ್ಕೆ ಬಾರದೆ ಹೋಗಬಹುದು. ಬಹುವಾಗಿ ಪ್ರಧಾನವಾರ್ತಾವಾಹಕಗಳಿಂದ ಕ್ಷಣ ಕ್ಷಣವೂ ಸುದ್ದಿ ಬರುವುದರಿಂದ ನೇರವಾಗಿಯೊ ಭಾಷಾಂತರಗಳಾಗಿಯೊ ಭಾಷಾ ಪತ್ರಿಕೆಗಳಲ್ಲಿ ಅಚ್ಚಾಗುತ್ತವೆ. ಪರಸ್ಪರ ವಿರುದ್ಧವಾದ ಸುದ್ದಿ ಸಮಾಚಾರಗಳು ಬೇರೆ ಬೇರೆ ವಾರ್ತಾಮೂಲಗಳಿಂದ ತಿಳಿದುಬರಬಹುದು. ಉದ್ದೇಶಪೂರ್ವಕವಾಗಿ ಕೆಲವು ಸುದ್ದಿಗಳು ಹೆಚ್ಚಾಗಿ ಜನದ ಕಿವಿಗಳಿಗೆ ಬೀಳುವಂತೆ ಪತ್ರಿಕಾಮಂಡಲಗಳವರೂ ಸರ್ಕಾರದವರೂ ಪ್ರಬಲರೂ ಮಾಡಬಹುದು. ಕೆಲವು ಸುದ್ದಿಗಳು ಹರಡುವುದು ಜನಕ್ಕೆ ಹಿತವಲ್ಲ; ಭೀತಿ, ಅಪಾಯ, ಶಂಕೆ ಉಂಟಾಗುವುವು; ಬೇರೆ ರಾಷ್ಟ್ರಗಳಿಗೆ ನಾಡಿನ



ವಿಷಯದಲ್ಲಿ ತಪ್ಪು ಕಲ್ಪನೆ ಬರಬಹುದು ಎಂದು ಸರ್ಕಾರಗಳು ಅವನ್ನು ಮುಚ್ಚಿಬಿಡುತ್ತವೆ, ಸೆನ್ಸಾರ್ ಮಾಡುತ್ತವೆ. ನಮ್ಮಲ್ಲಿ ಪಾಕಿಸ್ತಾನದ ಸುದ್ದಿ ಬಾರದು. ಪಾಕಿಸ್ತಾನದಲ್ಲಿ ನಮ್ಮವು ಕೇಳವು. ಬಂದವು ನೂರಕ್ಕೆ ನೂರು ಭಾಗ ಸತ್ಯವಾಗದಿರಬಹುದು. ಈ ವರದಿಗಳನ್ನು ಯಾವ ಯಾವ ಬಗೆಯವರೂ ಏಕೇಕೋ ಮಾಡುತ್ತಿರುತ್ತಾರೆ.

ಅನೇಕ ಪತ್ರಿಕೆಗಳು ಹೇಳಿ ಕೇಳಿ ಜನದ ಅಭಿಪ್ರಾಯವನ್ನು ರೂಪಿಸುವ ಮನಸ್ಸಿನವು. ಜನರಲ್ಲಿ ಪ್ರಭಾವ, ಪಕ್ಷಪಾತ, ವಿರೋಧ ಬೆಳೆವಂತೆ ನೇರವಾಗಿಯೊ ಪರೋಕ್ಷವಾಗಿಯೊ ಮಾಡುತ್ತಿರುತ್ತವೆ. ಕೆಲವು ದೊಡ್ಡ ಪತ್ರಿಕೆಗಳನ್ನು ಓದುವ ಅಭ್ಯಾಸವಾದರೆ ಅಲ್ಲಿ ಪ್ರಕಟವಾಗುವ ರೀತಿ ವಿಧಾನಗಳಿಗೆ ಮನಸ್ಸು ಒಲುತ್ತದೆ. ಅಲ್ಲಿನ ಸಂಪಾದಕೀಯಗಳಲ್ಲಿ ಹೆಚ್ಚು ವಿಶ್ವಾಸ ಉಂಟಾಗುವಂತೆ ಮಾಡುತ್ತವೆ. ಆ ದೃಷ್ಟಿಗೇ ಓದುವವರ ಮನಸ್ಸನ್ನು ಶ್ರುತಿಗೊಳಿಸಿಕೊಳ್ಳುವಂತೆ ಕ್ರಮವಾಗಿ ತಿದ್ದುತ್ತವೆ. Times, Manchester Guardian, New Statesman, Economist, Hindu, Time, Statesman, Times of India, Blitz ಮುಂತಾದುವುಗಳ ವಾಣಿ ಸಂಗತಿಗಳನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡಿ ವ್ಯಾಖ್ಯಾನ ಮಾಡುತ್ತಿರುತ್ತದೆ. ದೇಶದ ರಾಜಕೀಯದಲ್ಲಿ ಆರ್ಥಿಕವಾಗಿ ಅಥವಾ ಬೇರೆ ಬೇರೆ ಪಕ್ಷಗಳಿಗೆ ಸಂಬಂಧಿಸಿದಂತೆ ಪತ್ರಿಕೆಗಳು ನಡೆವಾಗ ಆ ದೃಷ್ಟಿಯಲ್ಲಿ ಘೋಷಿಸುವ, ಬಲಗೊಳಿಸುವ ವಾಣಿಯೇ ಬರವಣಿಗೆಯೇ ನಿರಂತರವಾಗಿ ಬೆಳೆಯುತ್ತದೆ. ಅದನ್ನು ಬರೆಯುವವರೆಲ್ಲ ಅವರವರಿಗೆ ಕಂಡಂತೆ ಸತ್ಯವನ್ನು ದ್ಯೋತಿಸುವರೇ ವಿನಾ ಸಂಪೂರ್ಣವಾದ, ಎಲ್ಲ ಮುಖಗಳಿಂದಲೂ ವೀಕ್ಷಿಸುವ ದೃಷ್ಟಿ ಕಾಣಿಸುವುದಿಲ್ಲ. ವರ್ತಕರೊ, ಉತ್ಪತ್ತಿಕಾರರೊ, ಹಣದ ಪೇಟೆಯವರೊ, ಕಾಂಗ್ರೆಸ್ಸಿನ ಇಬ್ಬಣಗಳವರೊ, ಸ್ವತಂತ್ರ ಪಕ್ಷದವರೊ, ಜನ ಸಂಘದವರೊ, ಲೀಗಿನವರೊ, ಕಮ್ಯೂನಿಸ್ಟರೊ, ಬೇರೆ ಬೇರೆ ಪ್ರಾಂತಗಳವರೊ, ಭಾಷೆಗಳವರೊ, ಮತಗಳವರೊ ಯಾವ ಸಂಗತಿಯನ್ನಾದರೂ ಹೇಗೆ ನೋಡುತ್ತಿದ್ದಾರೆ, ಇಲ್ಲಿನದನ್ನು ಕಂಡ ಇಂಗ್ಲಿಷರು, ರಷ್ಯನರು, ಅಮೆರಿಕನ್ನರು ಯಾವುದನ್ನು ಸತ್ಯವೆಂದು ನುಡಿಯುತ್ತಾರೆ ಎಂಬುದು ಬಹು ವಿಸ್ಮಯಕರ ಸಂಗತಿ. ಆ ಎಲ್ಲ ಬರವಣಿಗೆಯ ಹಿಂದೆಯೂ ದೊಡ್ಡ ಮೇಧಾವಿಗಳು, ರಾಷ್ಟ್ರನಾಯಕರೆಂಬವರು, ದೇಶಕ್ಕೆ ಬಹುಕಾಲ ದಿಂದ ಸೇವೆ ಸಲ್ಲಿಸಿದವರು ಎಂಬವರ ಘೋಷಣೆ ಬೆಂಬಲ ಇದೆ ಎಂದು ತಿಳಿದಾಗ ಸತ್ಯದ ಸ್ವರೂಪ ಒಡೆದು, ಮುರಿದು, ಬಿರುಸಿನಲ್ಲಿ ಯಾಸೆಯಲ್ಲಿ ಕಾಣಬಲ್ಲದು.

ಇನ್ನೊಂದು ರೀತಿ ಇದು: ನಾಡಿನಲ್ಲಿ ಹತ್ತು ಪಕ್ಷಗಳಿರುವಾಗ, ಆ ಪ್ರತಿನಿಧಿಗಳೆಲ್ಲ ಸಂಸತ್ತಿನಲ್ಲಿರುವಾಗ, ಸರ್ಕಾರಕ್ಕೆ ಎಷ್ಟು ಬಹುಮತವಿರಲಿ ವಿರೋಧ ಪಕ್ಷದ ಮುಖ್ಯ ಪ್ರತಿನಿಧಿಗಳು ಒಬ್ಬರಾದ ಮೇಲೊಬ್ಬರು ನಡವಳಿಕೆಗಳನ್ನು ಸಂತತವಾಗಿ ವಿರೋಧಿ ಸುತ್ತಿರುವಾಗ, ಪತ್ರಿಕೆಗಳ ತುಂಬ ಪ್ರತಿ ದಿನವೂ ಇವರ ಮಾತುಗಳಿಗೇ ಪ್ರಾಧಾನ್ಯ

ಬರುತ್ತದೆ. ಸರ್ಕಾರದ ಪರವಾಗಿ ಮಾತನಾಡಬಹುದಾದ ಧ್ವನಿಗಳೇ ಇಲ್ಲವೇನೊ ಎಂಬ ಸಂಶಯ ಬರುವಷ್ಟು ಅಭಿಪ್ರಾಯ ಮೂಡಬಲ್ಲದು. ಅವರು ಸರ್ಕಾರವಾಗಿ ಆಳುತ್ತಿರುವುದೇ ಅವರನ್ನು ಈ ದುರ್ಬಲ ಸ್ಥಿತಿಗೆ ದೂಡುತ್ತದೆ. ಅವರು ಆಡಿದ ನ್ಯಾಯವಾದ ಮಾತು ಸ್ಥಾನರಕ್ಷಣೆಗಾಗಿ ತಮ್ಮ ಕಾರ್ಯಗಳಿಗೆ ಇಲ್ಲದ ಪ್ರಚಾರ ಮಾಡುವುದಕ್ಕೆಂದು ಆಪಾದನೆ ಹೊರಬಲ್ಲದು. ರಾಜ್ಯಗಳ ಶಾಸನ ಮಂಡಲಗಳಲ್ಲಿ ನಡೆಯುವುದೆಲ್ಲ ಇಂಥುದೇ. ಹೆಚ್ಚು ಹಣ ವೆಚ್ಚ ಮಾಡಬೇಕಾಗದೆ ಇರುವ ಒಂದು ಯಾಜಮಾನ್ಯದ ವಾರ್ತಾವಾಹಕ ಸಂಸ್ಥೆಗಳ ಮೂಲಕ ಇಂತಹ ಸುದ್ದಿ ಹರಡುವುದರಿಂದ ಪತ್ರಿಕೆಗಳೆಲ್ಲ ಪುಟಗಳನ್ನೂ ತುಂಬಿ ಜನಗಳ ಮನಸ್ಸಿನ ಮೇಲೆ ವಿಚಿತ್ರ ಪರಿಣಾಮಗಳನ್ನು ಉಂಟುಮಾಡುತ್ತವೆ. 600 ಜನ ಇರುವ ಪಾರ್ಲಿಮೆಂಟಿನಲ್ಲಿ ದಿನಬೆಳಗಾದರೆ ನಮಗೆ ಗಟ್ಟಿಯಾಗಿ ಮೇಲೆ ಮೇಲೆ ಕೇಳಿಬರುವ ಧ್ವನಿಗಳು ಸುಮಾರು 20. ಆಳುವ ಪಕ್ಷಕ್ಕೆ ಎಷ್ಟೇ ದೊಡ್ಡ ಬಹುಮತವಿದ್ದರೂ ತೀರ್ಮಾನಗಳಿಗೆ ಬರುವಾಗ ಅವರ ಪರವಾಗಿ ಶಾಸನ ಸಭೆಯಲ್ಲಿ ಎಷ್ಟು ಬಹುಮತ ಬಂದರೂ ಆ ಬಹುಮತದ ಮೇಲೆ ಆಕ್ರೋಶ ಬೆಳೆದು ಅದರ ಅಪಖ್ಯಾತಿಯನ್ನೇ ಸಾರುವಂತೆ ವ್ಯವಹಾರ ನಡೆಯುತ್ತದೆ. ಮೂದಲೆ, ಆಪಾದನೆ, ಗುಪ್ತಿ ಇವುಗಳಲ್ಲಿ ಸಿಕ್ಕಿ ಸತ್ಯ ಗೊಂದಲಕ್ಕೆ ಬೀಳುವುದು. ಅರಿಯದವರ ಮನಸ್ಸಿಗೆ ಯಾವುದನ್ನು ನಂಬಬೇಕು, ನೆಚ್ಚಬೇಕು ಎಂದು ತೋರದಾಗುತ್ತದೆ. ಇಂಗ್ಲಿಷಿನಲ್ಲಿ ನುಡಿದುದನ್ನು, ಪ್ರಚಾರವಾದ್ದನ್ನು ದೇಶಭಾಷೆಗಳಿಗೆ ಭಾಷಾಂತರ ಮಾಡುವಾಗ ಬಳಸುವ ಮಾತು ಯಾವುದಕ್ಕೆ ಯಾವುದೊ ರೀತಿ ಅರ್ಥಮಾಡಿ ಕ್ಲೇಶ ಪಡಿಸಬಲ್ಲದು. ಯಾವ ಮಾತಿಗೆ ಯಾವ ಅರ್ಥವೊ ರಂಗುಪಡೆದು ಜನದ ಕಣ್ಣಿಗೆ ಬೀಳಬಲ್ಲದು.

## ಸಂಪಾದಕೀಯದ 'ನಾವು'

'ನಾವು' 'ನಮ್ಮ' ಎಂಬ ಧೋರಣೆಯಲ್ಲೇ ಬರುವ ಪತ್ರಿಕಾ ಸಂಪಾದಕನ ಅಭಿಪ್ರಾಯ ಸಾರ್ವಜನಿಕವಾಗಿ ಭಾರತ ಸಮಸ್ತರ ಹಿತವನ್ನೂ ಪ್ರತಿನಿಧಿಸುವಂತೆ ನುಡಿಯುತ್ತದೆ. ಒಬ್ಬೊಬ್ಬ ಸಂಪಾದಕನ ಮಾತೂ ಹಾಗೆಯೇ; ರಾಷ್ಟ್ರದ್ದೇ. ಅನೇಕ ವೇಳೆ ಸಂಪಾದಕರು ಒಂದು ಪಕ್ಷದ ಅಥವಾ ಪ್ರಯೋಜನದ, ನಾಯಕ ಹಣವಂತರೆಂಬವರ ಸಂಬಳಕ್ಕೆ ಇರುವವರು. ಅವರು ಹೇಳಿದಂತೆ ನಡೆಯಬೇಕಾದವರು. ತಮ್ಮ ಅಭಿಪ್ರಾಯಕ್ಕೆ ಹೊಂದುವಂತಹ ಬರವಣಿಗೆಯನ್ನು ಮಾತ್ರ ಯಜಮಾನರು ಅಪೇಕ್ಷಿಸುತ್ತಾರೆ, ಒಂದು ರೀತಿಯ ಬರವಣಿಗೆಯನ್ನು ಒಪ್ಪುತ್ತಾರೆ, ಉಳಿದುದನ್ನು ಅಡಗಿಸೆನ್ನುತ್ತಾರೆ. ಪತ್ರಿಕೆಗಳ ಹಿಂದೆ ಇವುಗಳಿಗೆ ಪ್ರಕಟಣೆ ಕೊಡುವ ಸರ್ಕಾರಿ ಅಥವಾ ಖಾಸಗಿ ಜಾಹಿರಾತು ವರ್ಗ ಇರುತ್ತವೆ. ದೊಡ್ಡ ಪತ್ರಿಕೆಗಳ ಹಿಂದೆ ಸಾವಿರ, ಎರಡು ಸಾವಿರ ರೂಪಾಯಿಗಳ ಸಂಬಳ ತಿನ್ನುವ, ಇತರ ಸುಖಭೋಗಗಳನ್ನು ಅನುಭವಿಸುವ,



ಅಮಾತ್ಯ ಪದವಿ ದೊರಕುವ ಅವಕಾಶ ಇರುತ್ತದೆ. ನಾಡಿನ ಬುದ್ಧಿವಂತರು ಬರೆಯುತ್ತಾರೆಯಾಗಿ ಬರವಣಿಗೆ ಯುಕ್ತವಾಗಿ ಈ ಧೋರಣೆಯೇ ಸರ್ವಥಾ ಸರಿ, ಇದಕ್ಕೆ ವಿರುದ್ಧವಾದುದೆಲ್ಲ ದೇಶಹಿತಕ್ಕೆ ವಿರುದ್ಧವಾದುದು ಎಂಬಂತೆ ವಾದಿಸಬಲ್ಲವರು. ಶ್ರೀಮಂತರು ಕೆಲವರ ಕೈಯಲ್ಲಿ ನಾಲ್ಕಾರು ಭಾಷೆಗಳ-ಇಂಗ್ಲಿಷ್, ದೇಶಭಾಷೆಗಳ-ದಿನಪತ್ರಿಕೆ, ವಾರಪತ್ರಿಕೆ ಇರುತ್ತವೆ. ಇಂಥಲ್ಲಿ ಸತ್ಯವೆಂಬುದರ ಕಲ್ಪನೆ ಧಾತುಗೆಡಬಲ್ಲದು. ಸಾಮಾನ್ಯ ಸಮಯಗಳಲ್ಲಿಯೇ ಹೀಗಾದರೆ ಅಶಾಂತಿಯ ಸಮಯಗಳಲ್ಲಿಯೊ ಯುದ್ಧ ಸಮಯಗಳಲ್ಲಿಯೊ ಚುನಾವಣಾ ಸಮಯಗಳಲ್ಲಿಯೊ ಸಂಪ್ರದಾಯವಾದಿಗಳ, ಅತಿವಾದಿಗಳ ಉದ್ರೇಕ ಹೆಚ್ಚಾಗಿರುವಾಗಲೊ ನಿಜವಾದ ಸತ್ಯವೇನು? ಯಾರ ಯಾವುದು ಸರಿ? ಯಾರ ಯಾವುದು ತಪ್ಪು? ಯಾವ ನಡತೆ, ಶಾಸನ ಕ್ರಿಯೆ ಸರಿಯಾದೀತು; ಯಾವುದಲ್ಲ? ಎಂಬ ತಿಳಿವಳಿಕೆ ತೇರದಾಗುತ್ತದೆ. ಹೆಚ್ಚು ಬಹುಮತದಿಂದ ಆಳುವ ಪಕ್ಷ ಶಾಸನಸಭೆಗಳಲ್ಲಿ ನಿರ್ಣಯಗಳನ್ನು ಮಾಡಿದರೆ ಒಂದು ಪಾಶವೀ ಬಹುಮತ ಶಕ್ತಿಯಿಂದ (Brute Majority) ಮಾಡುತ್ತಾರೆ ಎನ್ನುತ್ತಾರೆ. ಕಡಮೆ ಬಹುಮತದಿಂದ ಬಂದರೆ ಇವರದು ಸಾಕಷ್ಟು ಪ್ರಾತಿನಿಧಿಕವಲ್ಲ-ಎಂದು ಆಕ್ಷೇಪಣೆ ಏಳುತ್ತದೆ. ಒಂದು ಪಕ್ಷ ಪಾಶ್ಚಿಮಾತ್ಯ ರಾಷ್ಟ್ರಗಳ ಪರವಾದಂತೆ ಯಾವ ಕಾರ್ಯ ನಡೆದರೂ ಇವರು Lackeys of the Capitalist States -ಅವರಿಗೆ ಹಂಗಿಗರಾಗಿ ಅವರ ಹಣದಿಂದ ಬಲ ಬೆಳಸಿಕೊಳ್ಳುತ್ತಿದೆ ಸರ್ಕಾರ ಎಂದರೆ, ಯೂರೋಪಿನ ಪೂರ್ವ ರಾಷ್ಟ್ರಗಳ ಪರವಾಗಿ ಯಾವ ಕಾರ್ಯ, ಮಾತು ಬಂದರೂ ಈ ಕಡೆಯ ಜನ ಕಮ್ಯೂನಿಸ್ಟ್ ತಂತ್ರದ ಗುಲಾಮರಾಗಿ ನಡೆಯುತ್ತಾರೆ, ದೇಶವನ್ನೂ ಇದರ ಸ್ವಾತಂತ್ರ್ಯವನ್ನೂ ಅವರಿಗೆ ಮಾರಿಬಿಡುತ್ತಿದ್ದಾರೆ ಎಂದು ವಾದ ಬೆಳಸುತ್ತಾರೆ. ವಾಮ ಪಂಥದ ಅತ್ಯುಗ್ರಪಕ್ಷ ಮಾವೋವಾದ, ಕ್ಯಾಸ್ಟ್ರೊ, ಗ್ವೆವಾರ ರೀತಿಗಳನ್ನು ಹಿಡಿದು ದೇಶದಲ್ಲಿ ಕ್ಷೋಭೆಯನ್ನೂ ಅತಂತ್ರವನ್ನೂ ಅವ್ಯವಸ್ಥೆಯನ್ನೂ ಬೆಳಸುತ್ತ ರಾಜ್ಯಾಂಗ ವ್ಯವಸ್ಥೆಯನ್ನು ಮುರಿಯಬೇಕು, ಇವೊತ್ತಿನ ಜೀವನದ ರೀತಿಯನ್ನು ನಾಡಮಾಡಬೇಕು ಎಂದು ಪ್ರಯತ್ನಿಸುತ್ತಿದ್ದರೆ ಪ್ರಾಚೀನ ಸಂಪ್ರದಾಯವಾದಿಗಳು ಜನವರ್ಗದ ಬಹುಮತ ತಮ್ಮದು, ಆದುದರಿಂದ ತಮಗೇ ತಮ್ಮ ರೀತಿಗೇ ತಮ್ಮ ಮತಪ್ರಕಾರಕ್ಕೇ ಎಲ್ಲವೂ ಕಟ್ಟಿನಡೆಯಬೇಕು ಎಂದು ಸಂಸ್ಥೆ, ಚಳವಳಿ ನಡಸುತ್ತಾರೆ. ಈ ನಡುವೆ ಸತ್ಯಕ್ಕೇ ಗಾಸಿ ಉಬ್ಬಸ ಬಂದಷ್ಟು ಇನ್ನಾವುದಕ್ಕೂ ಇಲ್ಲ. ಒಟ್ಟು ರಾಜಕೀಯದ ಈ ತೊಳಲು ನೇರವಾಗುವ ತನಕ ಇದೇ ಇಷ್ಟೇ ಸತ್ಯ, ಇನ್ನೊಂದಲ್ಲ ಎಂಬುದು ನಿರ್ಣಯವಾಗದು. ಈ ನಡುವೆ ಪ್ರತಿಯೊಬ್ಬರೂ ತಮ್ಮ ಕೋಳಿಗೆ ಮೂರೇ ಕಾಲು ಎಂದು, ಆ ಕೋಳಿಯ ಕೂಗೇ ಸಮಸ್ತವನ್ನೂ ರೂಪಿಸಬೇಕು ಎಂದು ಮಾತಿನಲ್ಲಿ, ಬರಹದಲ್ಲಿ, ನಡವಳಿಕೆಯಲ್ಲಿ, ಕಾರ್ಯತಂತ್ರಗಳಲ್ಲಿ, ಚಳವಳಿಗಳಲ್ಲಿ ಹಿಂಸೆ ಅಹಿಂಸೆಗೆ ಕಾರಣವಾಗುತ್ತಾರೆ. ದೇಶದ ಲಾಭನಷ್ಟಗಳ ಒಟ್ಟು ದೀರ್ಘಕಾಲದ ಹಿತಾಹಿತಗಳ ಯೋಚನೆಯನ್ನು ಮರೆತು ಇಂಥ ಪ್ರಭಾವ ಮಲೆಯುತ್ತ ಇರುವಾಗ ಇಲ್ಲಿ ಸತ್ಯಾಸತ್ಯ ವಿವೇಕ ಹೇಗೆ ಬೆಳಗೀತು?

## ಪ್ರಮಾಣಗಳು

ಒಂದು ಶಾಸ್ತ್ರ ಸತ್ಯಸ್ವರೂಪವಾವುದು ಎಂಬುದನ್ನು ಕುರಿತದ್ದು: 'ಯಾವುದು ಇಂದ್ರಿಯಗೋಚರವಾದುದೊ ಅದು ಸತ್ಯ; ಇರುವುದೆಲ್ಲದಕ್ಕೂ ಹೋಲಿಸಿದರೆ ಅದಕ್ಕೆ ಹೊಂದುವಂತಹದು, ಅದರಿಂದ ಪ್ರಮಾಣ ಪಡೆಯುವದು ಸತ್ಯ; ನುಡಿದುದನ್ನು ಇರುವ ಸಂಗತಿಗಳಿಗೆ ತಾಳೆ ಹಾಕಿ ಆ ತಾಳೆಯಲ್ಲಿ ಅದು ಉತ್ತೀರ್ಣವಾದರೆ ಅದು ಸತ್ಯ; It corresponds to Reality' ಎನ್ನುವುದು. ವಸ್ತುಸತ್ಯ ಎಲ್ಲ ರಂಗಗಳಲ್ಲಿಯೂ ಲಭ್ಯವಲ್ಲ. ಇಷ್ಟು ಮಾತ್ರ ತಾಳೆಯಾದರೆ ಸಾಲದು; ಇದು ಹೊರ ಪ್ರಮಾಣ ಮಾತ್ರ. ಇಲ್ಲಿನ ಸತ್ಯವನ್ನು ಯಾರು ಯಾತಕ್ಕಾದರೂ ದುಡಿಸಿಕೊಳ್ಳಬಹುದು. ಒಂದು ಜನತೆಯ ಲಾಭಾಲಾಭಗಳನ್ನು ಸಾಧಿಸುವುದರಲ್ಲಿ ಇದರ ದುರುಪಯೋಗಪಡಿಸಿಕೊಳ್ಳಬಹುದು. ಆದರೆ ವ್ಯವಹಾರ ಸಮಸ್ಯೆಗಳಲ್ಲಿ ಸತ್ಯ ಜಟಿಲವಾದುದು, ಆದುದರಿಂದ ಇದು ಸ್ಥಾಪಿತವಾಗಬೇಕು ಎನ್ನುವಾಗ, ಆ ಜಟಿಲತೆಯನ್ನು ಹೊಕ್ಕು ಅದನ್ನು ಬಿಡಿಸುವ ಯತ್ನ ಕಷ್ಟವಾಗಬಲ್ಲುದು.... ಇನ್ನೊಂದು ವರ್ಗದವರು: ನಮಗೆ ಈವರೆಗೆ ಸರಿ, ನಿಜ ಎಂದು ಇರುವ ಗಟ್ಟಿ ತಿಳಿವಳಿಕೆಗೂ ವ್ಯವಸ್ಥೆಗೂ ಕ್ರಮಕ್ಕೂ ಈ ಹೊಸ ಸಂಗತಿ ಒಳಪಟ್ಟಿದೆಯೆ? ಅದಕ್ಕೆ ಅನ್ವಯವಾಗುವುದಾದರೆ ಹೊಂದುವುದಾದರೆ ಸತ್ಯ ಎನ್ನುತ್ತಾರೆ. 'It coheres with the whole system of knowledge we have of things'- ಎಂದರೆ ಈವರೆಗೆ ತಿಳಿದಿರುವ ಸಂಗತಿಗಳಿಗೆ ಹೊಂದಬೇಕು, ಒಪ್ಪಬೇಕು; ಹೊಂದದ್ದು ಅಗ್ರಾಹ್ಯ, ಸತ್ಯವಾಗದು-ಎಂದಾಗ, ಈವರೆಗೆ ಗ್ರಹಿಕೆಯಾಗಿರುವುದೆಲ್ಲ ನಿಜ, ಸರಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ವಿಜ್ಞಾನ ಬೆಳೆದಿರುವುದೂ ಅನೇಕ ಬಗೆಯ ಆಧುನಿಕ ಪ್ರಗತಿ ಸಾಧಿತವಾಗಿರುವುದೂ-ಲೋಕ ಈವರೆಗೂ ಯಾವುದು ನಿಜವಾದ ತಿಳಿವಳಿಕೆ ಎಂದು ಒಪ್ಪಿಕೊಂಡಿತ್ತೊ ಅದನ್ನು ಮಾರ್ಪಡಿಸಿ ಬೇರೆ ದರ್ಶನವನ್ನೂ ಸೂತ್ರವನ್ನೂ ತಂತ್ರವನ್ನೂ ಸ್ಥಾಪಿಸಿದುದರಿಂದ. ಹೀಗಿರುವಾಗ ಈ ಮಾತು ಸ್ಥಿತಿಸ್ಥಾಪಕ ಲಕ್ಷಣವನ್ನು ಮಾತ್ರ ಉಳ್ಳದ್ದಾಗುತ್ತದೆ. ಹೊಸದಾಗಿ ಕಂಡ ಸಂಗತಿ, ಬಂದ ಅನುಭವ, ತೇಲಿದ ನ್ಯಾಯ ಎಷ್ಟು ಪ್ರಬಲವಾಗಿ ಸರ್ವವ್ಯಾಪಕವಾಗಬಲ್ಲ ಶಕ್ತಿ ಉಳ್ಳದ್ದಾದರೂ ಅದು ಪರಿಸ್ಥಿತಿಯನ್ನು ಮೆಟ್ಟಿ ಪ್ರಕಾಶಕ್ಕೂ ಬೆಳಕಿಗೂ ಬರಬೇಕಾಗುತ್ತದೆ. ದೂರವೆಂಬ ಒಂದು ಸಂಗತಿ ಇಷ್ಟು ಮೈಲಿಗಳದು ಎಂಬ ಲೆಕ್ಕದ್ದಲ್ಲ. ಇಂದು ವೇಗವಾದ ವಿಮಾನದಲ್ಲಿ ಎಷ್ಟು ಬೇಗ ಮುಟ್ಟಬಹುದು ಎಂಬ ಕಾಲಾವಧಿ ಅದನ್ನು ನಿರ್ಣಯಿಸುತ್ತದೆ. 10 ಗಂಟೆಗಳ ದೂರ ವಿಮಾನದಲ್ಲಿ; ಅದೂ ಸರಿಯಲ್ಲ. ಭೂಮಂಡಲವನ್ನೆಲ್ಲ ಸುತ್ತಬಲ್ಲ ಒಂದು ಬಾಹ್ಯಾಕಾಶ ನೌಕೆ ಎಷ್ಟು ದಿನದಲ್ಲಿ ಚಂದ್ರಗ್ರಹವನ್ನೊ ಇನ್ನೊಂದು ಗ್ರಹವನ್ನೊ ಮುಟ್ಟಬಹುದು? ಒಂದು ದಿನದಲ್ಲಿ ಎಷ್ಟು ಸಲ ಭೂಮಿಯನ್ನು ಸುತ್ತಬಹುದು? ಎಂಬ ಎಣಿಕೆಯಾಗುತ್ತದೆ. ಅಳತೆ ಎಣಿಕೆಯಲ್ಲಿಯೇ ವ್ಯತ್ಯಾಸ ಬಂದಂದು ದೂರದ ಸ್ವರೂಪವನ್ನು ಹಿಂದಿನಂತೆ ನಿರ್ದೇಶಿಸುವುದು ಗೌಣವಾಗದೆ? ಸೆಕೆಂಡಿಗೆ 1,86,000 ಮೈಲಿ ವೇಗದ್ದು ಬೆಳಕು. ಅದಕ್ಕಿಂತ ಹೆಚ್ಚಿನ ವೇಗಗಳುಂಟು ಎಂಬವರುಂಟು. ಬೆಳಕಿನ ವೇಗದ ಅಳತೆಯಲ್ಲಿ ದೂರವನ್ನು ಅಳೆಯುವಾಗ Light year ಎಂದೂ ಲೆಕ್ಕಗೊಳ್ಳುತ್ತದೆ.



ಮತ್ತೊಂದು ರೀತಿ ಸತ್ಯಕ್ಕೆ ಅರ್ಥಕಲ್ಪನೆ ಮಾಡುತ್ತಾರೆ. ಯಾವುದು ಕಾರ್ಯಕಾರಿಯೊ, ಬಯಸಿದ ಪ್ರಯೋಜನಗಳನ್ನು ಮಾಡಿಕೊಡುತ್ತದೆಯೊ, ಯಾವುದು ಜೀವಂತವಾಗಿದೆಯೊ ಅದು. "Truth is what is useful; what works" ಎಂಬುದು ಅಲ್ಲಿ ಪ್ರಮಾಣ. ಬುದ್ಧಿಗೆ ಸಂಬಂಧಪಟ್ಟ, ಜ್ಞಾನಕ್ಕೆ ಸಂಬಂಧಪಟ್ಟ, ಅನುಭವ ವ್ಯಾಪಾರಗಳಿಗೆ ಸಂಬಂಧಪಟ್ಟ ಇತರ ಯಾವ ಸಾಮಂಜಸ್ಯವೂ ಇದಕ್ಕೆ ಬೇಕಾಗುವುದಿಲ್ಲ. ನಮ್ಮ ತಾರ್ಕಿಕರು ಬಳಸುವ ಅನೇಕ ಪ್ರಮಾಣಗಳಲ್ಲಿ ಕೆಲವರು ಕೆಲವನ್ನು ಒಪ್ಪಿ ಕೊಂಡರೂ ಇನ್ನು ಕೆಲವನ್ನು ಒಪ್ಪಲಿಲ್ಲ. ಯಾವ ಪ್ರಮಾಣವನ್ನೂ ಒಪ್ಪದ ನಾಸ್ತಿಕರಿಂದ ಹಿಡಿದು, ಪ್ರತ್ಯಕ್ಷವನ್ನು ಮಾತ್ರ ಒಪ್ಪುವ ಚಾರುವಾಕರಿಂದ ತೊಡಗಿ, ಬ್ರಹ್ಮ ಅಥವಾ ನಿತ್ಯ ಈ ಒಂದು ಮಾತ್ರವೇ ಪ್ರಮಾಣ, ಅನುಮಾನ ಉಪಮಾನ ಶಬ್ದ ಇವು ಕೂಡ ಸಾಲವು, ಲೋಕಾನುಭವಕ್ಕೆ ಮೀರಿದ ದೈವ ಬ್ರಹ್ಮ ಎಂಬ ತತ್ವದ ಪರಮಪ್ರಮಾಣ ಉಳಿದ ಎಲ್ಲಕ್ಕೂ ಬೆಲೆಯನ್ನೂ ಸತ್ಯತೆಯನ್ನೂ ಕೊಟ್ಟಿತು. 'ಬ್ರಹ್ಮಸ್ಸತ್ಯಂ ಜಗನ್ಮಿಥ್ಯಾ ಆತ್ಮಾ ಬ್ರಹ್ಮೈವ ನಾಽಪರಃ'-ಅದರ ಸ್ವರೂಪ ಇದಲ್ಲ, ಹೀಗಲ್ಲ, ಹೀಗಲ್ಲ ಎಂದು ನಾತ್ಮಕ (Negative) ವರ್ಣನೆ ಸತ್ಯಸ್ವರೂಪದ ದ್ಯೋತನೆಗೆ ಒದಗಿತು. ಈ ನಡುವೆ ಜೈನದರ್ಶನದ ಪರಮಸಿದ್ಧಿ ಏಕಾಂತವಲ್ಲ, ಎಷ್ಟು ಜೀವಗಳಿವೆಯೊ ಅಷ್ಟಕ್ಕೂ ಪ್ರತ್ಯೇಕ ಸಿದ್ಧಿ ಉಂಟು-ಎಂಬ ಅನೇಕಾಂತವಾದವನ್ನು ಬೆಳಸಿತು. ಅದು ಸಪ್ತಭಂಗಿನಯ ಎಂಬ ಪ್ರಮಾಣವನ್ನು ಕಲ್ಪಿಸಿತು: ಯಾವುದನ್ನಾದರೂ ಕುರಿತು ಏಳುಬಗೆಯ ಪ್ರಮಾಣವುಂಟು. ಸತ್ಯಕ್ಕೆ ಇದು ಇದೆ, ಇದು ಇಲ್ಲ, ಇದನ್ನು ಕುರಿತು ಏನನ್ನೂ ಹೇಳುವುದಕ್ಕಾಗುವುದಿಲ್ಲ- ಎಂಬ ಮೂರು ಪ್ರಕಾರಗಳನ್ನು ಹಿಗ್ಗಿಸಿ, ಯಾವುದನ್ನು ಕುರಿತು "ಸ್ಯಾದಸ್ತಿ, ಸ್ಯಾನ್ನಾಸ್ತಿ, ಸ್ಯಾದವಕ್ತವ್ಯಂ; ಸ್ಯಾದಸ್ತಿನಾಸ್ತಿ ಅವಕ್ತವ್ಯಂ: ಸ್ಯಾನ್ನಾಸ್ತಿ ವಕ್ತವ್ಯಂ-ಅವಕ್ತವ್ಯಂ" ಇತ್ಯಾದಿ ಎನ್ನಬಹುದು. "ನಾಸ್ತಿ" ಎನ್ನುವಾಗ ಇನ್ನು ಕೆಲವು ಜನ "ನಾಸ್ತಿ" ಎಂಬುದೇ ಒಂದು ಬಗೆಯ ಸತ್ಯದ ಸ್ವರೂಪ ಎಂದರು. ಅಭಾವವೆಂದಾಗ ತಾರ್ಕಿಕರು ಪ್ರಾಗಭಾವ, ಪ್ರಧ್ವಂಸಾಭಾವ, ಅನ್ಯೋನ್ಯಾಭಾವ, ಅತ್ಯಂತಾಭಾವ ಎಂಬವು ನಾಲ್ಕು ಬಗೆಯ ಅಭಾವಗಳೆಂದರೆ, ಇದನ್ನು ಶ್ರೀನಾಥನಂತಹವರು ಲೇವಡಿ ಮಾಡಿದರು!

## ತಪ್ಪು

ಇನ್ನೊಂದು ಪ್ರಶ್ನೆ ಸತ್ಯದ ಪ್ರಕರ್ಷದಲ್ಲಿಯೂ ಅಭಿವೃದ್ಧಿಯಲ್ಲಿಯೂ ತಲೆದೋರುವುದುಂಟು. "Error" - ತಪ್ಪು, ಸತ್ಯವಲ್ಲದ್ದು, ಸರಿಯಲ್ಲದ್ದು - ಎಂಬ ಮಾತು. ಕೆಲವು ಕಾಲ ಸರಿ ಎಂದು ನಂಬಿದ್ದು ಅದು ಸರಿಯಲ್ಲ, ತಪ್ಪು ಎಂದಾಗ ಅದು ಹಿಂದೆ ಬೀಳುತ್ತದೆ. ಸರಿಯಾದ್ದು ಪ್ರಕಾಶಕ್ಕೆ ಬರಬೇಕಾಗುತ್ತದೆ. ತಿಳಿದ ಮೇಲೆ ತಪ್ಪು ತಿಳಿವಳಿಕೆ ಕುಸಿದು ಬೀಳುತ್ತದೆ. ಹೊಸ ತಿಳಿವಿಂದ, ಬೆಳಕಿಂದ ಏರ್ಪಟ್ಟದ್ದು ಜ್ಞಾನವಾಗುತ್ತದೆ - ಅದು ಮಾರ್ಪಡುವವರೆಗೂ. ಜ್ಞಾನದ ಬೆಳವಣಿಗೆ ಜೀವನದ ಎಲ್ಲ ಭಾಗಗಳಲ್ಲಿಯೂ ಈ ರೀತಿ ಅಪೂರ್ಣ, ಅಪಕ್ವ, ಅಬದ್ಧ ನಿಲವಿನಿಂದ ಪೂರ್ಣದ

ಕಡೆಗೆ, ಪಕ್ವತೆಯ ಕಡೆಗೆ, ಸುಬದ್ಧತೆಯ ಕಡೆಗೆ ನಡೆದಿದೆ. "Knowledge is the continually burning up of Error to set free the light of Truth." ಇದು Knowledge, Error, Truth ಮೂರಕ್ಕೂ ಇರುವ ಸಂಬಂಧವನ್ನು ಪ್ರತಿಪಾದಿತವಾಗಲು ಬಯಸುತ್ತದೆ: Truth ಎಂಬುದು ಫಲ; ಅದಕ್ಕೆ ಸಂಬಂಧಪಟ್ಟದ್ದು- "Knowledge". ಆವರೆಗೆ ತಿಳಿದಂತೆ Knowledge ಎಂದು ಗೊತ್ತಾಗಿದ್ದದ್ದು ತಪ್ಪು, ಸರಿಯಲ್ಲ ಎಂದು ಗೊತ್ತಾದ ಕೂಡಲೆ - True ಸತ್ಯ ಎಂದು ಆವರೆಗೆ ಜ್ಞಾನ ಎಣಿಸಿದ್ದದ್ದು ಜ್ಞಾನವಲ್ಲವೆಂದು ಸಂಬಂಧಪಟ್ಟು Truth ಹೊಸದಾಗಿ ನಿಶ್ಚಿತವಾಗುತ್ತದೆ, ಜ್ಞಾನಭಾಗ ಪುನರ್ವ್ಯವಸ್ಥಿತವಾಗುತ್ತದೆ. ಇಲ್ಲಿ ಲೋಕವೆನ್ನುವ ಭಾಗವನ್ನು - ಒಳ ಹೊರ ಎರಡೂ ಬಗೆಯವು - ಕುರಿತದ್ದು, ಜೀವನವೆನ್ನುವುದನ್ನು ಕುರಿತದ್ದು ಜ್ಞಾನದ ವಿಷಯ. ಅದನ್ನು ಕುರಿತು ಯೋಚನೆ ಪರೀಕ್ಷಣೆ ಪರಿಶೀಲನೆ ಮಾಡಬೇಕಾದುದು ಮನುಷ್ಯನ ಬುದ್ಧಿ; ಅವನ ಇತರ ಶಕ್ತಿಗಳು. ಇದರ ಗುಣ ಸತ್ಯ ಎಂಬುದು, ಸತ್ಯವೆ ಅಲ್ಲವೆ ಎಂಬುದು. ಪ್ರಪಂಚದ ಸ್ವರೂಪವನ್ನೇ ಬದಲಾಯಿಸುವ ಸಂದರ್ಭಗಳೂ ಸನ್ನಿವೇಶಗಳೂ ಹುಟ್ಟಿಕೊಳ್ಳಬಹುದು; ಮನುಷ್ಯನ ಬುದ್ಧಿಯನ್ನು ಕುದುರಿಸುವ, ಮದಡು ಮಾಡುವ ಸನ್ನಿವೇಶಗಳು ನಿರಂತರವಾಗಿ ಹುಟ್ಟಿಕೊಳ್ಳಬಹುದು. ಇವನ ಸಾಧನಗಳು ಸಜ್ಜು, ಇವನು ಒಪ್ಪುವ ಪ್ರಮಾಣಗಳು, ಬಳಸುವ ಯಂತ್ರ, ತಂತ್ರ, ಬೆಳಕು, ದರ್ಶಕ ಎಷ್ಟು ಸೂಕ್ಷ್ಮವಾದರೆ ಅಷ್ಟಷ್ಟು ಸೂಕ್ಷ್ಮವಾಗಿ ಇವನ ದರ್ಶನದ ಸತ್ಯವೇದಿತ್ವ ಹೆಚ್ಚು ಕಡಮೆಯಾಗುತ್ತದೆ. ಅಥವಾ ಇವುಗಳಿಂದಲೇ ಪ್ರಪಂಚದ ಸ್ವರೂಪ ಒಂದು ರೀತಿಯಾಗಿದ್ದುದು ಇನ್ನೊಂದು ರೀತಿಯದಾಗಿ ಪ್ರತಿಷ್ಠವಾಗುತ್ತದೆ. ಇಲ್ಲಿಯೂ ಪ್ರಯೋಜನಾಂಶ ಒಂದುಂಟು. ಅನೇಕ ವೇಳೆ ಈ Error ಎನ್ನುವುದು ತಪ್ಪುದಾರಿ ಹಿಡಿಸುತ್ತದೆಂದು ಗೊತ್ತುಮಾಡಿಸಿದರೂ ಈ ಮಾರ್ಗದಲ್ಲಿ ಹೋದರೆ ಸರಿ ಸಿಕ್ಕುವುದಿಲ್ಲ, ಬೇರೆ ಮಾರ್ಗ ಹಿಡಿಯಬೇಕು ಎಂದು ನೆರವನ್ನು, ನಿರ್ದೇಶನವನ್ನು ಕೊಡುತ್ತದೆ. ಅನೇಕ ವೇಳೆ "Trial and Error" ಮಾರ್ಗವನ್ನು ಪರೀಕ್ಷಿಸುವವರು ಯಾವುದು ತಪ್ಪು ಎಂದು ಕಂಡಾಗ, ಅದನ್ನು ಬಿಟ್ಟು ಬೇರೆ ದಾರಿ ಹುಡುಕಿ ಬೇರೆ ಅನುಮಾನಕ್ಕೂ ತೀರ್ಮಾನಕ್ಕೂ ಬರುವುದು ಸತ್ಯಾನ್ವೇಷಣೆಯ ಖ್ಯಾತಮಾರ್ಗ. ಈ ಎಲ್ಲಕ್ಕೆ ಸಂಬಂಧಿಸಿದಂತೆಯೂ ಶಾಸ್ತ್ರ ಬೆಳೆದಿದೆ; ವಿದ್ಯೆ ಬೆಳೆದಿದೆ; ಜಡತೆ, ಚೇಷ್ಟೆ, ಭ್ರಾಂತಿ ಚಿಕಿತ್ಸೆ ಬೆಳೆದಿದೆ. ಇಲ್ಲಿ ನಿಶ್ಚಯಗಳಿಗೆ ಬರುವ ವಿಧಾನ ಅನಂತ. ಸ್ಥಿತಿ ಹೀಗಿರುವಾಗ, ಒಂದು ಮಾತನ್ನೂ ವಾದವನ್ನೂ ಹಟದಂತೆ ಹಿಡಿದುಕೊಂಡು ಅದನ್ನು ಹೇಗಾದರೂ ಮಾಡಿ ಸಾಧಿಸಬೇಕೆನ್ನುವ ಬುದ್ಧಿಯನ್ನೂ ರೀತಿಯನ್ನೂ ಏನೆನ್ನಬೇಕು? ಸತ್ಯನಿಷ್ಠೆಗಿಂತ ಹೆಚ್ಚಾಗಿ ಸ್ವಾಭಿಮಾನ, ಹಟ, ಭ್ರಾಂತಿಗಳ ಕಾಂಡ ಇದು.

ಒಂದು ಸಂಗತಿಯನ್ನು ಈ ಸಂಬಂಧದಲ್ಲಿ ಖಚಿತವಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಇರುವ, ನಡೆದ, ಆಗುವ ಸಂಗತಿಗಳನ್ನು ಯಾರು ಏನು ಆಡುತ್ತಾರೆಯೊ ಬರೆಯುತ್ತಾರೆಯೊ ಅದು ಸತ್ಯ, ಅಸತ್ಯ ಎಂಬ ಮಾತು. ಅದು ಸತ್ಯ, ಹೌದೆ ಅಲ್ಲವೆ



ಎಂಬುದು ಬೇರೆ ಪ್ರಮಾಣಗಳಿಂದ ನಿರ್ಣಯವಾಗಬೇಕು. ಸತ್ಯವೆಂದೇ ಎಲ್ಲರೂ ನುಡಿಯುವುದು. ಇದು ಇತರ ಪ್ರಮಾಣಗಳಿಗೆ ಹೊಂದಿಕೊಳ್ಳುತ್ತದೆಯೆ, ಇಲ್ಲವೆ? ವಸ್ತು ಸಂಗತಿಗಳಿಗೆ ಇಂಥಲ್ಲಿ ತಾಳಿಕೆ ಆಗುವುದೆ, ಇಲ್ಲವೆ? ಎಂಬುದು ಇದರ ಸತ್ಯಾಸತ್ಯತೆಯನ್ನು ನಿರ್ಣಯಿಸುವುದಲ್ಲವೆ? ಒಂದು ಮಾತನ್ನಾಡಿದಾಗ, ಒಂದು ನಡತೆಯನ್ನು ನಡೆದಾಗ, ಹೀಗೆಯೇ ನಡೆಯಿತು ಎಂದು ಒಂದನ್ನು ವರ್ಣಿಸುವಾಗ, ಅದೆಲ್ಲ ಹಾಗೆಯೇ ಆಯಿತೆಂದು ಅದಕ್ಕೆ ಸಂಬಂಧಿಸಿದವರೂ ನೋಡಿದವರೂ ಒಪ್ಪುತ್ತಾರೆಯೆ? ಒಪ್ಪಲು, ಬಿಡಲು ಸಾಕಷ್ಟು ಕಾರಣಗಳಿವೆಯೆ? ಇವುಗಳಿಂದ ಏನೇನು ಪರಿಣಾಮಗಳು ಉಂಟಾಗಿ ಗೊಂದಲ ಕೋಟಲೆ ಇಷ್ಟಾನಿಷ್ಟಗಳು ಹುಟ್ಟಿಕೊಳ್ಳಬಲ್ಲವು? -ಎಂಬುದನ್ನು ನಮ್ಮ ದೇಶದ ಇಂದಿನ ರಾಜಕೀಯದಲ್ಲಿ ಕಾಣಬಹುದು. ಸುಭಾಷ್ ಬೋಸರು ಬದುಕಿದ್ದಾರೆಯೆ, ಇಲ್ಲವೆ? ಶಾಸ್ತ್ರಿಗಳು ಸಹಜವಾಗಿ ತೀರಿಕೊಂಡರೆ? ಕಾಶ್ಮೀರವನ್ನು ಕುರಿತು ಪಾಕಿಸ್ತಾನದವರು ನಮ್ಮ ಸರ್ಕಾರ, ನಮ್ಮ ಜನವರ್ಗಗಳಲ್ಲಿ ಎಲ್ಲ ಪಂಗಡಗಳವರು, ಷೇಕ್ ಸಾಹೇಬರು ಅವರ ಅನುಯಾಯಿಗಳು ಯಾರು ಯಾರು ಏನು ಏನು ಹೇಳುತ್ತಾರೆ? ಜಮ್ಮು ಕಾಶ್ಮೀರ ಭಾರತಕ್ಕೆ ಸೇರಿದುವು ಎಂದಾಗ, ಸರ್ವಾಂಶದಲ್ಲಿಯೂ ಕಡೆಯ ತೀರ್ಮಾನವಾಗಿ ಹಾಗೆ ಆಯಿತೆ ಎಂಬುದು ನಿಶ್ಚಯವಾಗದೆ 23 ವರ್ಷಗಳಿಂದ ವಿವಾದದಲ್ಲಿಯೇ ಬಿದ್ದಿದೆ. ಭಾರತದ ಉತ್ತರದ ಮೇರೆ ಯಾವುದು? ಟಿಬೆಟ್ಟಿನ ದಕ್ಷಿಣದ ಮೇರೆ ಯಾವುದು? - ಎಂದು ನಿರ್ಣಯ ಮಾಡುವಾಗ, ಹಿಂದಿನ ಟಿಬೆಟ್ಟಿನವರೂ ಇಂದಿನ ಭಾರತದವರೂ ಚೀನಾದವರೂ ತೀರ್ಮಾನಕ್ಕೆ ಬಾರದಿರುವಾಗ, ಈ ನಿರ್ಣಯಗಳ ನಿಜ ಯಾವುದು? ಎಷ್ಟೆಷ್ಟು ಸಂಗತಿಗಳು ಚರ್ಚೆಗೆ, ಒಪ್ಪಿಗೆಗೆ ಬಂದಿವೆ. ಬ್ರಿಟಿಷರ ಕೈಯಲ್ಲಿ ಇದು ಭಾರತವನ್ನು ಅವರು ಒಪ್ಪಿಸಿದಂತೆ ನಾವೂ ಪಾಕಿಸ್ತಾನವೂ ಒಪ್ಪಿ ನಿರ್ಣಯ ಮಾಡಿಕೊಂಡೆವು. ಆ ಕಾಲದಲ್ಲಿ ಇದನ್ನು ಕೊಟ್ಟ ಅಧಿಕಾರಿಗಳಲ್ಲಿ ಇವೊತ್ತು ಆಟ್ಲಿ, ಇಸ್ಮೆ, ಮೆನನ್ ಇಲ್ಲ. ಮೌಂಟ್‌ಬ್ಯಾಟನ್ ಇದ್ದಾರೆ. ಅವರ ಸಿಬ್ಬಂದಿಯಲ್ಲಿದ್ದ ಕ್ಯಾಂಬೆಲ್ ಜಾನ್‌ಸನ್, ಮೆಲ್‌ವಿಲ್, ಬಹುಶಃ ಆಗ ಕಾರ್ಯದರ್ಶಿಗಳಾಗಿದ್ದ ಪಟೇಲ್, ಶಂಕರ್ ಇದ್ದಾರೆ. ಇದನ್ನು ನಮಗೆ ಒಪ್ಪಿಸಿದ ಬ್ರಿಟಿಷ್ ಸರ್ಕಾರ ಇದೆ. ಇಂಡಿಯಾ ಪಾಕ್ ಕಾಶ್ಮೀರ ಸಂಬಂಧದಲ್ಲಿ ಬ್ರಿಟಿಷರು ಪಕ್ಷಪಾತ ತೋರಿಸುತ್ತಾರೆಂದರೂ ಟಿಬೆಟ್ ದಕ್ಷಿಣದ ಗಡಿಯ ವಿಷಯದಲ್ಲಿಯಾದರೂ ನಿಷ್ಕೃಷ್ಟವಾಗಿ ತಿಳಿವಳಿಕೆಯನ್ನು ಕೊಟ್ಟಾರು. ಅವರಲ್ಲಿ ಋಜುವಾತು, ನಕ್ಷೆಗಳು ಇರುತ್ತವೆ. ಇವೆಯೆ? ಆದರೂ ಅವರನ್ನು ಕೇಳಲು ಯಾರಿಗೂ ಇಷ್ಟವಿಲ್ಲ. ನಿರ್ಣಾಯಕವಾಗಬಹುದಿದ್ದ ಒಂದು ಸಾಧನ ಹಾಗೆ ಆಗಲು ಅವಕಾಶವೇ ದೊರೆತಿಲ್ಲವಾಗಿ ಸತ್ಯ ಮರೆಯಾಗಿ ಹೋಗಬಹುದು. ಇದಕ್ಕೆ ಸಂಬಂಧಿಸಿದ ಜನ ಆಡುವ ಮಾತು, ಪಕ್ಷಗಳ ಮಾತು ಅಪೂರ್ಣ ಸತ್ಯಗಳೇ. ಇಲ್ಲಿನ ಅಂಶಗಳೆಲ್ಲ ಸೇರಿ, ಒಟ್ಟು ಸತ್ಯದ ಸ್ವರೂಪ ತಿಳಿಯಬೇಕಾಗಿರುವಾಗ ಅದು ರೂಪಗೊಳ್ಳುವವರೆಗೂ ಸನ್ನಿವೇಶ ಅನಿಶ್ಚಿತ, ಕ್ಲಿಷ್ಟ, ಸಂದಿಗ್ಧ. ಇನ್ನು ಕೆಲವು ಸಂದರ್ಭಗಳಲ್ಲಿ ಯಾವುದೊ ಒಂದು ರೀತಿ, ಕ್ರಮ, ವ್ಯವಸ್ಥೆ

ರೂಪಗೊಳ್ಳುವಂತೆ ಸೂಕ್ಷ್ಮವಾಗಿ ಕಾಣಿಸಿಕೊಂಡು ಬೆಳೆದು ವಿಸ್ತಾರಗೊಳ್ಳುವಂತಹ ಘಟ್ಟಕ್ಕೆ ಬರುವ ಲಕ್ಷಣಗಳು ದೇಶೋವಿಶಾಲವಾಗಿ ಕಾಣುತ್ತಿರುತ್ತವೆ. ಇದೊಂದು ಬೆಳೆಯುವ ಸನ್ನಿವೇಶ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಆಸೆಪಟ್ಟ, ನುಡಿದ ಕೆಲವರು ಬಂದು ಕಾಂಗ್ರೆಸ್ಸನ್ನೂ ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯನ್ನೂ ಹೋಂ ರೂಲ್ ಲೀಗನ್ನೂ ಆರಂಭಿಸುವ ಮುಂಚೆಯಿಂದ ಹಿಡಿದು, 50-60 ವರ್ಷ ಕಾಲ ದೇಶದ ಸ್ವಾತಂತ್ರ್ಯ ಸಾಧನೆಗಾಗಿ ನಡಸಿದ ಕಾರ್ಯ-ಚಳವಳಿ, ಪಕ್ಷ, ಬೆಳೆದ ವಿರಸದ-ಅನುಕೂಲದ ಸನ್ನಿವೇಶ, ಬೇರೆಯವರು ಈ ಕಡೆ ಆ ಕಡೆ ನುಡಿದ, ಏರ್ಪಡಿಸಿದ, ಮುರಿದ, ಅಡ್ಡಿಹಾಕಿದ, ಆಗಾಗ ಒಂದೊಂದು ಬಗೆಯ ರಾಜಿಗೆ ಬಂದ ಕಥೆಯನ್ನು ನೋಡಿದರೆ, ಒಳಹೊರ ಸನ್ನಿವೇಶಗಳಲ್ಲಿ ಆ ಪ್ರತಿ ಒಂದು ಮಜಲಿನ ಕ್ರಿಯಾರಂಗಗಳ ನಿಲವು ಮಾತು ನಿರ್ಣಯಗಳ ಬೆಲೆಗಾಣ್ಕೆಗೆ ಹೇಗೆ ದುಡಿದವು? ಇವುಗಳ ಸತ್ಯಾಸತ್ಯತೆಯ ಅಂಶಗಳು ಯಾವಾಗ ಎಷ್ಟೆಷ್ಟು? ಎಂಬ ನಿರ್ಣಯ ಕಷ್ಟವಾಗುತ್ತದೆ.

## ನಡವಳಿಕೆಯ ಹಿಂದೆ

ಇವೆಲ್ಲ ತಿಳಿವಳಿಕೆಯ, ನಡವಳಿಕೆಯ ಭಾಗಗಳು: ಇವುಗಳ ಹಿಂದೆ ಆಸೆ, ಧ್ಯೇಯ, ಅಭಿಮಾನ, ಪ್ರಯೋಜನ, ಭಕ್ತಿ, ಶ್ರದ್ಧೆ, ಇಚ್ಛೆ - ಇವೆಲ್ಲವುಗಳ ಉಗ್ರತೆ ಅಥವಾ ತಾಳ್ಮೆಗಳ ತಾಂಡವ ಇದೆ. ಇವುಗಳಿಂದ ಅವು, ಅವುಗಳಿಂದ ಇವು ಪುಷ್ಟಿಗೊಂಡು ಕಾರ್ಯರಂಗ ಬಲಿದಿರುತ್ತವೆ. ಇಲ್ಲಿ ಇದನ್ನೇ ಸತ್ಯ, ಅದನ್ನೇ ಸತ್ಯ ಎಂದು ಹೇಳುವುದು ಸರಿಯಾಗದು. ಮೂರು ಚುಕ್ಕೆಗಳನ್ನು ಹಾಕಿ ಇದೇನು ಎಂದು ಯೋಚಿಸುವಾಗ, ಇನ್ನೊಂದನ್ನು ಸೂಕ್ತವಾಗಿ ಹಾಕಿದರೆ ಅದು ಒಂದು ಪ್ರಸಂಗದಲ್ಲಿ ಒಂದು ನಕ್ಷತ್ರದಂತೆಯೊ ಪದಕದಂತೆಯೊ ಆಕೃತಿಭೇದದಿಂದ ಸ್ಥಾನಭೇದದಿಂದ ಕಾಣಬಹುದು. ಎಲ್ಲೊ ಹಾಕಿದ ನೇರವಾದ, ಅಡ್ಡವಾದ, ಕೆಳಗೆ ಬಾಗಿದ, ಮೇಲೆ ಉಬ್ಬಿದ ಗೆರೆಗೆ ಒಂದು ಹಟದ, ದುಃಖದ, ಸಂತೋಷದ ಸೂಚಿಕೆಯಾದ ಆಕಾರ, ಅರ್ಥವಂತಿಕೆ ಬರುತ್ತದೆ. ದೇವರಂಥ ಮುಖ ಒಂದು ಗೆರೆಯಿಂದ ರಾಕ್ಷಸವಾಗಬಹುದು. ಆಗ ಆ ಚುಕ್ಕೆ, ಗೀಟು ಇನ್ನಾವುದೊ ಅರ್ಥಕ್ಕೆ ಕಾಣ್ಕೆಗೆ ದುಡಿಯುವ ಅಂಶಗಳು. ಅವು ಗೀಟು ಚುಕ್ಕೆಗಳೇ ನಿಜ. ಆದರೆ ಬೇರೆ ಸತ್ಯವನ್ನು ಕಾಣಿಸುವ ಸಾಧನಗಳು. "ಬೆಳಗಾಯಿತು" ಎಂದು ವರ್ಣಿಸುತ್ತ, ಆ ವೈಭವವನ್ನು ನರಸಿಂಹಸ್ವಾಮಿಯವರು ವರ್ಣಿಸಿ, ಈ ಮನೆಯ, ಊರ, ನಾಡಿನ ಜೀವನ ಸರಸವಿರಸಗಳ ಚಿತ್ರಗಳಲ್ಲಿ ಯಾರು ಯಾರಿಗೆ ಹೇಗೆ ಬೆಳಗಾಯಿತು ಎಂಬುದನ್ನು ಕಾಣಿಸುತ್ತಾರೆ. ಒಟ್ಟು ಕವಿತೆಯಲ್ಲಿ ಹುಟ್ಟಿ ಬೆಳೆದ ಅನುಭವ ಪ್ರಕಾಶ ಸತ್ಯಾರ್ಥದ ಬೇರೊಂದು ನೆಲಸಿಗೆ ನಮ್ಮನ್ನು ಒಯ್ಯುವುದು. ಅಥವಾ, ಏನೊ ಮಾಡಬೇಕಾಗಿದೆ, ಎಲ್ಲಿಗೊ ಹೋಗಬೇಕಾಗಿದೆ, ಯಾರೊ ಬರುತ್ತಾರೆ ಮುಂತಾಗಿ ಧ್ವನಿ ಸಾಧಿಸುತ್ತದೆ. ಮ್ಯಾಕ್‌ಬೆತ್ ನಾಟಕದಲ್ಲಿ ಒಂದು ವಾಕ್ಯವನ್ನು ಪೂರ್ಣವಿರಾಮವಿದ್ದಂತೆ ನುಡಿಯಬೇಕೊ ಪ್ರಶ್ನಾರ್ಥದಂತೆಯೊ ಆಶ್ಚರ್ಯ ಸೂಚಕದಂತೆಯೊ ಎಂದು ಚರ್ಚೆ



ಬೆಳೆದು, ಸನ್ನಿವೇಶದ ಅಥವಾ ಪಾತ್ರದ ರಸವನ್ನೇ ಮಾರ್ಪಡಿಸಿರುವ ಪ್ರಸಂಗಗಳುಂಟು. ಎಂದರೆ ಎಲ್ಲಿ ಅರ್ಥವ್ಯತ್ಯಾಸ, ವಿಸ್ತಾರ ಆಗುವುದೊ ಅಲ್ಲಿ ಸತ್ಯಸ್ವರೂಪ ಬದಲಾಗುತ್ತದೆ ಎಂದಾಯಿತು. ಎಲ್ಲಿ ಹೊರಗಿನ ಘಟನೆ ಮಾತ್ರವೇ ಗಣ್ಯವಾಗುವುದಿಲ್ಲವೊ, ಸೂಕ್ಷ್ಮಗಳು ನವುರು ಜಟಿಲತೆ ವಿಶೇಷವಾಗಿ ಇರುತ್ತದೆಯೊ- ಅಲ್ಲಿ ಸತ್ಯದ ಸ್ವರೂಪವನ್ನು ಅರಿಯುವಾಗ ಹೊರಗೆ ಕಾಣಿಸದ ಎಷ್ಟೋ ಸಂಗತಿ ಎಣಿಕೆಗೆ ಸೇರಿಕೊಳ್ಳುತ್ತವೆ.

ಹಿಂದೆ ಜಿನ್ನಾ ಅವರು ತಮ್ಮ ಒಬ್ಬ ಕಕ್ಷಿಗಾರನನ್ನು ಮರಣದಂಡನೆಯಿಂದ ತಪ್ಪಿಸಿದರೆಂದು ಹೇಳುವ ಸನ್ನಿವೇಶದಲ್ಲಿ ಸತ್ಯದ ನೆಲಸು, ಮೆಟ್ಟಿಲು ಎಷ್ಟಿದೆ ಎಂಬುದು ಗೊತ್ತಾದೀತು. ಇವನ ಬಿಡುಗಡೆಯಾಗುವುದಕ್ಕೆ ಆಗ ತೋರಿಸಿದ ಪುರಾವೆಗಳನ್ನು ಹಾಗೆ ಅರ್ಥಮಾಡುವುದಕ್ಕೆ ಅವಕಾಶ ಸ್ವಲ್ಪವಾದರೂ ಅದನ್ನು ಹಿಡಿದು ತನ್ನ ಕಕ್ಷಿಗಾರನನ್ನು ಬಿಡುಗಡೆ ಮಾಡಲು ನ್ಯಾಯವಾದಿಯ ಜಾಣತನದಿಂದಾಗಿ ನಿರ್ಣಯ ಅವನಿಗೆ ಅನುಕೂಲವಾಯಿತು-ಕಾನೂನು ಪ್ರಕಾರ. ಆದರೆ ನಿಜದ ನಿಜವಾವುದು? ಸತ್ಯಸ್ಯ ಸತ್ಯಂ ಅಂಶವಾವುದು? - ಎಂಬುದರಲ್ಲಿ ಯಾರೂ ಇಷ್ಟೇ ಸರಿಯೆಂದು ನಿರ್ದೇಶಿಸಲಾರರು. ಪ್ರತಿ ಒಂದಕ್ಕೂ ಅದರ ನೆಲೆ ಉಂಟು.

ಲೆಕ್ಕದ ಪ್ರಪಂಚದಲ್ಲಿ ಉದಾ: ಅಪ್ಪ ಆ ಮಗನಿಗೆ ಎರಡು, ಈ ಇವನಿಗೆ ಎರಡು ಭೂಮಿಗಳನ್ನು ಕೊಟ್ಟಿದ್ದಾನೆ. ಇವನವು ಬಂಗಾರ ಬೆಳೆಯುವವು, ಅವನವು ಬಂಜರು. ಇಲ್ಲಿ ಗಣಿತದ ಸತ್ಯವನ್ನು ನ್ಯಾಯವೆನ್ನಲಾಗದು... 6 ಕ್ಕೆ 2 ಸೇರಿಸಿದರೆ 8 ಆಗುತ್ತದೆ. 10 ರಿಂದ 2 ಕಳೆದರೆ 8 ಆಗುತ್ತದೆ. ಗಣಿತ ಪಕ್ಕಾ ಸಮ. ಎಂಟೆಂಬುದನ್ನು ಗೊತ್ತು ಮಾಡುವಾಗ ನಿರ್ಣಯಕ್ಕೆ ಬರುವ ಅಂಶಗಳಾವುವು? ಒಂದು ಊಟಕ್ಕೊ ಒಂದು ನಿಯೋಗಕ್ಕೊ ಮಂತ್ರಿಮಂಡಲಕ್ಕೊ 8 ಮಂದಿಯನ್ನು ಆಯಬೇಕೆಂದಿರುವಾಗ 6 ಮಂದಿ ಇದ್ದ ಕಡೆ ಹೆಚ್ಚು ಇಬ್ಬರಿಗೆ ಪ್ರಯೋಜನ ಉಂಟಾಯಿತು. ಹತ್ತು ಜನರನ್ನು ತೆಗೆದುಕೊಳ್ಳಬೇಕೆಂದು ಮೊದಲು ನಿರ್ಣಯಿಸಿ ಆಸೆ ನಿರೀಕ್ಷೆಗಳನ್ನು ಉಂಟುಮಾಡಿ 8 ಸಾಕು ಎಂದು ನಿರ್ಣಯಿಸಲು ಇಬ್ಬರಿಗೆ ಆ ಸುಯೋಗ ದೊರೆಯದೆ ಲೋಪವಾಯಿತು. ಆ ಲಾಭನಷ್ಟಗಳಿಂದ ಬಗೆಬಗೆಯ ಉತ್ತೇಜನ, ಪ್ರಯೋಜನ, ಆಶಾಭಂಗ, ಆಕ್ರೋಶ ಉಂಟಾಗಲು ಕಾರಣವಾಗುತ್ತದೆ.

## ನಿರ್ಣಾಯಕವಾವುದು?

ಸಂಚಾರಕ್ಕೆ ಒದಗುತ್ತಿದ್ದ ನಮ್ಮ ದೇಶದಲ್ಲಿಯೇ ತಯಾರಾದ ಒಂದು ಆವ್ರೊ ವಿಮಾನ ಯಾವುದೊ ದೋಷವುಳ್ಳದ್ದು, ನಾವು ಅದನ್ನು ಚಾಲನೆ ಮಾಡುವುದಿಲ್ಲ ಎಂದು ಹೇಳಿ ಮುಷ್ಕರ ಹೂಡಿದ ವಿಮಾನ ಚಾಲಕವರ್ಗದ ನಡವಳಿಕೆಯಿಂದ ಎಷ್ಟು ನಷ್ಟ, ಕಷ್ಟ? ದೇಶದ ಯಂತ್ರೋತ್ಪತ್ತಿ ಕೀರ್ತಿಗೆ ಎಷ್ಟು ಧಕ್ಕೆ? ಎಷ್ಟು ಜನರ ಕೆಲಸಕ್ಕೆ ಅಡ್ಡಿ? ಒಳಹೊರ ಪ್ರಯಾಣಿಕರಿಗೆ ಎಷ್ಟು ಅನನುಕೂಲ ಉಂಟಾಗಬಲ್ಲದು? ಇಲ್ಲಿ ಆಗುವ ತೀರ್ಮಾನ ಅವರ ಪರವಾಗಿ ಆಗಲಿಲ್ಲವೆಂದು ಇತರ ಕೆಲಸದ ವರ್ಗಗಳವರು,

ಇತರ ಕೈಗಾರಿಕೆಗಳ ಕೆಲಸಗಾರರು-ನಾಳೆ ರೈಲ್ವೆಗಳವರು-ಸೌಹಾರ್ದದ ಮುಷ್ಕರಗಳನ್ನು ಹೂಡಿದರೆ, ಇದರ ಪರಿಣಾಮ ಎಷ್ಟು ಕ್ಲೇಶಕ್ಕೆ ನಾಡಿನ ಜೀವನವನ್ನು ಈಡುಮಾಡ ಬಲ್ಲದು? ಇಂಥಲ್ಲೆಲ್ಲ ಸತ್ಯ ನಿರ್ಣಯ ಹೇಗಾಗುತ್ತದೆಯೋ? ಇತ್ತ ನಿಜವಾಗಿ ಆ ದೋಷಗಳು ಅಲ್ಲಿದ್ದರೆ? ಅಷ್ಟು ಮಂದಿ ಚಾಲಕರ, ಪ್ರಯಾಣಿಕರ ಜೀವಕ್ಕೆ ಅವು ಅಪಾಯ ಕಾರಣವಲ್ಲವೇ? ಇಲ್ಲಿನ ಪರೀಕ್ಷಕರ ನಿರ್ಣಯದಲ್ಲಿ ವಿಶ್ವಾಸ ಅವಿಶ್ವಾಸ ಕಾರ್ಯಕಾರಿಯಾದೀತು. ಅವರ ತಜ್ಞತೆ, ನಿರ್ಣಾಯಕ ಸತ್ಯ ಪರೀಕ್ಷಕವಲ್ಲ. ಮೂರನೆಯ ಹೊರಗಿನವರ ನಿರ್ಣಯ ಮಾತ್ರ ಪಕ್ಷಪಾತವಿಲ್ಲದ ನಿರ್ಣಾಯಕವಾದೀತು. ನಿರ್ಣಯವಾದುದು ಪೂರ್ತಿ ಸತ್ಯ ಸ್ಥಾಪಿತವಾದ ಮೇಲೆ ಆಗುತ್ತದೆಯೊ ಇನ್ನಾವುವೇ ಕಾರಣಗಳಿಂದಾದರೂ ಆಗುತ್ತದೆಯೊ ಹೇಳಲಾಗುವುದಿಲ್ಲ. ಮನುಷ್ಯನ ಬುದ್ಧಿಶಕ್ತಿ ವಸ್ತು ಸ್ವರೂಪವನ್ನು ಪರೀಕ್ಷೆ ಮಾಡುತ್ತಿರುವಾಗ ಮತ್ತು ಜೀವನದ ರಹಸ್ಯವನ್ನು ಅರ್ಥಮಾಡಿಕೊಂಡು ಇದು ಸಾರ್ವಕಾಲಿಕ ಸತ್ಯ, ನಿಸ್ಸಂದೇಹವಾದ್ದು ಎಂದು ನಿರ್ಣಯಕ್ಕೆ ಬರುವ ಯತ್ನದಲ್ಲಿ ಅನೇಕ ಘಟ್ಟಗಳನ್ನು ಮುಟ್ಟುತ್ತದೆ. ವಿಜ್ಞಾನ ಪ್ರಪಂಚದಲ್ಲಿ ಒಂದು ರೀತಿ, ಮನೋವಿಜ್ಞಾನದಲ್ಲಿ ಒಂದು ರೀತಿ, ಧರ್ಮಕರ್ಮ ಸ್ವರೂಪ, ಅಧ್ಯಾತ್ಮ ಮತ್ತು ಮತಧರ್ಮ ಪ್ರಪಂಚದಲ್ಲಿ ಒಂದು ರೀತಿ, ಸೌಂದರ್ಯ ಮೀಮಾಂಸೆಯಲ್ಲಿ ಒಂದು ರೀತಿ-ಹೀಗೆ. ಇಲ್ಲಿ ಯಾವುದನ್ನು ವಿಜ್ಞಾನಭಾಗವೆನ್ನುತ್ತೇವೊ ಅದಕ್ಕೆ ಸಂಬಂಧಿಸಿದಂತೆ ವಿಧಾನ ಭಾಗವಿರುತ್ತದೆ; ಯಂತ್ರ ತಂತ್ರವಿರುತ್ತದೆ. ಇಂದು ವಿಜ್ಞಾನ, ಯಂತ್ರ ತಂತ್ರ ಸಾಧಿಸುವ ತಿಳಿವಳಿಕೆಯೂ ಪ್ರಯೋಜನವೂ ಅದ್ಭುತವಾದವು. ಯಾವುದನ್ನು ಭೇದಿಸುವುದು ಶಕ್ಯವಿಲ್ಲ ಎಂದಿತ್ತೊ ಅಂಥುದನ್ನೂ ಭೇದಿಸಲು ಯತ್ನ ಇವುಗಳಿಂದ ಸಾಧಿಸಲಾಗುತ್ತಿದೆ. ಈ ಕ್ರಿಯಾ ವಿಧಾನದಲ್ಲಿ ಇದೇ ಸತ್ಯ, ಇಷ್ಟೇ ಸತ್ಯ ಎಂದಿದ್ದ ಅನೇಕ ಸಂಗತಿಗಳು ಮಾರ್ಪಡುತ್ತಿವೆ. ಇವುಗಳಿಂದ ದೊರೆತ ತಿಳಿವಳಿಕೆ ಹೊಸ ಪದಾರ್ಥಗಳ ಮತ್ತು ಜ್ಞಾನದ ನಿರ್ಮಾಣಕ್ಕೆ ಕಾರಣವಾಗಿದೆ. ಹೊಸ ವಿವೇಚನೆಗೂ ಲೋಕದ ಅರ್ಥವಂತಿಕೆಗೂ ಹೊಸ ಸೂತ್ರಗಳನ್ನೂ ಸಜ್ಜನ್ನೂ ಕಂಡು ಹಿಡಿಯಲು ನೆರವಾಗುತ್ತಿದೆ. ಒಂದೇ ಪದಾರ್ಥವನ್ನು ಭೌತಕ್ರಿಯೆಯಿಂದಲೂ ರಸಾಯನ ಕ್ರಿಯೆಯಿಂದಲೂ ಒಂದೊಂದು ರೀತಿ ವಿಶ್ಲೇಷಣ ಮಾಡಬಹುದು. ಪದಾರ್ಥಗಳ ಸ್ವರೂಪ ಲಕ್ಷಣವನ್ನು ಹೇಳುವಾಗ ಈ ಪದಾರ್ಥದ ಸತ್ಯಸ್ವರೂಪವೇನು ಎಂಬ ವಿಷಯದಲ್ಲಿ ವ್ಯತ್ಯಾಸಗಳು ಕಂಡು ಬರುವುವು. ಭೌತದಲ್ಲಿ ನೂರು ಅಂಗಗಳುಂಟು; ರಸಾಯನ ವಿದ್ಯೆಯಲ್ಲಿ ಸಾವಿರ ವಿಭಾಗ ಉಂಟು. ಇವುಗಳ ಜೊತೆಗೆ ಇವು ನಿರ್ಮಾಣ ಮಾಡುವ ಪದಾರ್ಥಗಳ ಗುಣ, ಪ್ರಯೋಜನ ಲೋಕದ ಎಷ್ಟೊ ಸೌಕರ್ಯಗಳಿಗೆ, ಅನುಕೂಲ ಅನಿಷ್ಟಗಳಿಗೆ ಕಾರಣವಾಗುತ್ತವೆ. ಸಸ್ಯ ಮತ್ತು ಜೀವವಿಜ್ಞಾನ ಬೆಳೆಯುವ ರೀತಿ, ಇವುಗಳ ಹಿತಮಿತಗಳು ಯಾವ ತತ್ವ ಸೂತ್ರಗಳ ಆಧಾರದ ಮೇಲೆ ಜೀವ ವಿಕಾಸವಾಗುತ್ತಿದೆ ಎಂಬ ಬಗೆಗೆ ಈ 50-100 ವರ್ಷಗಳಲ್ಲಿ ಆಗಿರುವ ಅನ್ವೇಷಣೆಗಳ ಫಲವಾಗಿ ಆ ಶಾಸ್ತ್ರದ ಜೊತೆಗೆ ರೋಗ ನಿದಾನ, ಚಿಕಿತ್ಸೆ, ಹೊಸಪ್ರಕರಣಗಳ ಅರ್ಥ,



ಔಷಧಗಳ ಉತ್ಪತ್ತಿ ಉಂಟಾಗಿವೆ. ರಸಾಯನ ವಿಜ್ಞಾನ ಮತ್ತು ಈ ಜೀವವಿಜ್ಞಾನ ಇವುಗಳ ಫಲವಾಗಿ ಲೋಕದ ಕ್ಷೇಮ ಸಂರಕ್ಷಣೆಗಳಿಗೇ ಧಕ್ಕೆ ಬಡಿಯುವಂತೆ ವಿನಾಶಕರ ಶಕ್ತಿಗಳ ಉತ್ಪಾದನೆ ಶಕ್ಯವಾಗುತ್ತಿದೆ. ವೈದ್ಯಕೀಯ ಚಿಕಿತ್ಸೆಗೂ ಔಷಧಿ ಉಪಚಾರಗಳ ಪ್ರಪಂಚಕ್ಕೂ ಅದ್ಭುತ ಉಪಕಾರ ಆಗಿದೆ.

ಪ್ರಾಣಿಜೀವನವನ್ನು ದಾಟಿ ಮನುಷ್ಯವರ್ಗಕ್ಕೆ ಬಂದರೆ ಇಲ್ಲಿನ ಬೆಳವಣಿಗೆಯೂ ವಿದ್ಯಾವಿಸ್ತಾರವೂ ಅದ್ಭುತವೇ. ಇವನ್ನೆಲ್ಲ ಮಾಡುವವನು ಮನುಷ್ಯನು. ಲೋಕದ ಮೇಲಿನ ವಿದ್ವಜ್ಜನರೆಲ್ಲರೂ ಬೇರೆ ಬೇರೆ ಶಾಸ್ತ್ರಗಳಲ್ಲಿ ಪ್ರಯೋಗಗಳಲ್ಲಿ ತೊಡಗಿರುತ್ತಾರೆ. ಇವರ ಪ್ರಕಟಣೆಗಳಲ್ಲಿ ದೊಡ್ಡವಾದವನ್ನು 3000 ಕ್ಕೆ ಮೇಲ್ಪಟ್ಟು ಪತ್ರಿಕೆಗಳೂ ನಿಯತಕಾಲಿಕೆಗಳೂ ಪ್ರಕಟಿಸುತ್ತಿವೆ. ಯಾವುದೊ ಒಂದರ ಪ್ರಕಟಣೆಯಿಂದ ಇನ್ನಾವುದೊ ಎಲ್ಲಿಯದೊ ಮೂಲೆಯ ಸಂಗತಿಯ ಮೇಲೆ ಬೆಳಕುಬಿದ್ದು, ಈವರೆಗೆ ಕಾಣದಿದ್ದ ಅಥವಾ ಅನ್ವೇಷಣೆಗೂ ಅಸಾಧ್ಯವೆಂದಿದ್ದ ಸಂಗತಿ ನಾಳೆ ಮನಸ್ಸಿಗೆ ಗೋಚರವಾಗಿ, ಅದು ಅನೇಕ ಪ್ರಯೋಜನಗಳಿಗೂ ಒದಗುತ್ತದೆ.

## ಫಲಾಫಲ

ಇವುಗಳಿಂದ ರಾಜ್ಯಗಳು ತಮ್ಮ ಶಕ್ತಿಯನ್ನೂ ಆಕಾಂಕ್ಷೆಗಳನ್ನೂ ಬೆಳಸಿಕೊಂಡು ಆರ್ಥಿಕ ರಾಜಕೀಯ ಸಾಮಾಜಿಕ ಜೀವನದಲ್ಲಿ ರಾಕ್ಷಸ ದುರ್ವಾರ್ಯ ಶಕ್ತಿಗಳಿಂದ ತೊಡಗಲು ಅವಕಾಶವಾಗುತ್ತದೆ. ಇನ್ನೊಂದು ಕಡೆ ಮನೋವಿಜ್ಞಾನ, ಧರ್ಮ ಕರ್ಮನೀತಿ, ಆಧ್ಯಾತ್ಮಿಕ ಜೀವನ - ಇವಕ್ಕೆ ಸಂಬಂಧಪಟ್ಟಂತೆ ಇರುತ್ತಿದ್ದ ಕಲ್ಪನೆಗಳು ಪೂರ್ತಿಯಾಗಿ ವ್ಯತ್ಯಾಸಗೊಳ್ಳುತ್ತಿವೆ. ಮಾನಸ ಸರೋವರ-ಕೈಲಾಸಗಳಿಗೆ ಹೋದವರಿಗೆ ಶಿವ ಕಾಣಲಿಲ್ಲ; ಚಂದ್ರನ ಮೇಲೆ ಅಮೇರಿಕನ್ನರು, ರಷ್ಯನರು ತಮ್ಮ ಬೂಟ್ಸು ಕಾಲಿಟ್ಟರು-ಎಂದಾದ ಮೇಲೆ ನಮ್ಮ ಕೈಲಾಸ, ಶಿವನ ಪ್ರಭಾವಗಳಲ್ಲಿಯೇ ಜನವರ್ಗಕ್ಕೆ ಅಪನಂಬಿಕೆ ಬಂದು ಸಮಾಜದಲ್ಲಿ ಭಕ್ತಿ ನಡವಳಿಕೆ ಸಡಿಲವಾಗುತ್ತಿದೆ. ಪುರೋಹಿತ ವರ್ಗವನ್ನು ಕಂಡು ಅವಿಶ್ವಾಸ ಬೆಳಸುತ್ತಿದೆ. ಅವರ ಉದ್ಯೋಗ ಅನ್ನಗಳಿಗೆ ಕಲ್ಲು ಬಿದ್ದಾವು. ವ್ಯವಹಾರ ಪ್ರಪಂಚದ ಬುಡಮೇಲಾಗುವ ಎಷ್ಟೊ ಸಂಸ್ಥೆ ಚಳವಳಿ ವ್ಯವಹಾರ ಹುಟ್ಟಿಕೊಂಡು ಲೋಕಶಾಂತಿಗೂ ಕ್ಷೇಮಕ್ಕೂ ಅಪಾಯ ತರಬಲ್ಲ ರೀತಿ ನೀತಿ ಬೆಳೆದಾವು ಕೂಡ.

## ಅಸ್ತಿಮಿತಕ್ಕೆ ಇತರ ಕಾರಣಗಳು

ಬುದ್ಧಿ ಒಂದೇ ಕಾರ್ಯಕಾರಿಯಲ್ಲ, ಅದಕ್ಕೆ ಸಾಧಕವಾದ ಯುಕ್ತಿಯೂ ವಾದವೂ ಮಾತ್ರವೇ ಅಲ್ಲ ಜನಜೀವನವನ್ನು ನಡಸುವುದು;- ಅಜ್ಞಾನ, ಅಭಿಮಾನ, ರಾಗಭರ (Passion) ಕೂಡ. ಧರ್ಮ ನೀತಿ ಎಂಬವು ದಿವ್ಯ ಶಕ್ತಿಗಳು ವಿಧಿಸಿದ್ದಲ್ಲ, ಮಾನವಕೃತ. ದೇವರು, ಸ್ವರ್ಗ, ನರಕ ಮುಂತಾದವು ಕಲ್ಪನೆ; ಮನುಷ್ಯರು ಬೇರೆ ಬೇರೆ ಕಾಲಗಳಲ್ಲಿ

ಪ್ರದೇಶಗಳಲ್ಲಿ ಮಾಡಿಕೊಂಡದ್ದು; ಸ್ವರ್ಗ ಇರಬಲ್ಲದು; ನಾಸ್ತಿಕರೆಂಬವರು ಧರ್ಮಿಷ್ಠರಾಗಿ ಲೋಕಹಿತಸಾಧನೆಯಲ್ಲಿ ತೊಡಗಬಲ್ಲರು; ನರಕ ಎಂಬುದು ಸಂಕೇತ; ದೇವರಲ್ಲಿ ಭಕ್ತಿ ಉಳ್ಳವರೆಂಬವರು ದುರ್ಮಾರ್ಗರಾಗಬಲ್ಲರು; ಮತಕ್ಕೆ ಸಂಬಂಧಿಸಿದ ನಂಬಿಕೆಗಳು ಬಹುಕಾಲದ ಆಚಾರ ಮಾತ್ರ - ಎಂಬ ಅಭಿಪ್ರಾಯಗಳು ಹುಟ್ಟಿದರೆ, ವ್ಯವಹಾರ ಜೀವನದ ರಚನೆಯೇ ಬೇರೆಯಾಗುತ್ತದೆ. ಮನಸ್ಸಿನ ಆಳದಲ್ಲಿ ಎಷ್ಟೆಷ್ಟೋ ಅಜ್ಞಾತ ಪ್ರಭಾವಗಳು ಕಾರ್ಯಮಾಡುತ್ತವೆಯಾಗಿ ಯಾವೊಂದು ಸಮಯದಲ್ಲಿ ಆಗಲಿ, ವ್ಯಕ್ತಿ, ವರ್ಗ, ಒಂದು ಜನಸಮೂಹ ಹೀಗೆಯೇ ನಡೆಯುತ್ತದೆಯೆಂದು ಹೇಳಲಾಗುವುದಿಲ್ಲ. ಸತ್ಯದ ದರ್ಶನವನ್ನು ಮಾರ್ಪಡಿಸಿ ಇದು ಎಲ್ಲವನ್ನೂ ಅತಂತ್ರಗೊಳಿಸುತ್ತದೆ. ಯಾವುದು ಸಿದ್ಧವೆಂದಿತ್ತೊ ಅದರಲ್ಲಿ ಪುನರಾಲೋಚನೆಯಿಂದ ಅನೇಕ ಸ್ತರಗಳು ಕಾಣಿಸಿಕೊಂಡು ಇಷ್ಟೇ ಸರಿ, ನಿಜ ಎಂಬ ಜ್ಞಾನ ಶಿಥಿಲವಾಗುತ್ತಿದೆ. ಸಾಮಾಜಿಕ ಮತ್ತು ಸಂಸ್ಕೃತಿ ರಂಗಗಳಲ್ಲಿ ಅನೇಕ ಬದಲಾವಣೆಗಳು ಉಂಟಾಗಿ, ಜನರ ನಡವಳಿಕೆಯ ತಳಹದಿ ಯಾಗಿರುತ್ತಿದ್ದ ತತ್ವಗಳೂ ಆಚರಣೆಗಳೂ ದೃಷ್ಟಿಗಳೂ ಮಾರ್ಪಟ್ಟು, ಯಾವುದೂ ನಿಶ್ಚಯವಿಲ್ಲವೆಂದಾಗಿ ಅನೇಕ ವಲಯಗಳಲ್ಲಿ ಗೊಂದಲ ಪ್ರಬಲಿಸುತ್ತದೆ. ನಿಷ್ಕರ್ಷೆ ಯಾದ ಬೇರೆ ತೀರ್ಮಾನಕ್ಕೆ ಪುನಃ ಬರುವ ತನಕ ಸತ್ಯದರ್ಶನಕ್ಕೆ ಒಂದು ಗ್ರಹಣ ಹಿಡಿದಂತೆ ಕತ್ತಲು ಕವಿದು ಎಲ್ಲವನ್ನೂ ಅಸ್ತವ್ಯಸ್ತಗೊಳಿಸುತ್ತದೆ. ನ್ಯಾಯ, ಧರ್ಮ, ಪ್ರಾಮಾಣಿಕತೆ, ಶುಚಿ, ಮನುಷ್ಯ ಸ್ವಭಾವ, ಸದ್ಗತಿ ಎಂಬ ಎಲ್ಲ ಮಂಡಲಗಳಲ್ಲಿಯೂ ಪರಸ್ಪರ ವಿರುದ್ಧವಾದ ನಡತೆ ಬೆಳೆಯಲು ಅವಕಾಶವಾಗುತ್ತದೆ. ಈವರೆಗೆ ನಡೆದಿರುವುದೆಲ್ಲ ತಪ್ಪು; ಅಸತ್ಯ; ತಮ್ಮ ತಮ್ಮ ಪ್ರಾಧಾನ್ಯವನ್ನೂ ಪ್ರಭಾವವನ್ನೂ ಗಳಿಸಿಕೊಳ್ಳುವುದಕ್ಕಾಗಿ ದುಷ್ಟರೂ ಧೂರ್ತರೂ ಶಕ್ತರಾದವರೂ ಶೋಷಕರೂ ತಮ್ಮ ತಮ್ಮ ರೀತಿಯಲ್ಲಿ ದುಡಿಸಿಕೊಂಡ ಕ್ರಿಯಾವಿಧಾನಗಳು ಆರ್ಥಿಕ ಪ್ರಪಂಚದಲ್ಲಿ ರಾಜಕೀಯದಲ್ಲಿ ಉಂಟಾಗುತ್ತವೆ; ಮತಧರ್ಮದಲ್ಲಿ ಕ್ರೈಸ್ತ ಪಂಥ, ಅಹಿಂಸಾ ಪಂಥ, ಭಕ್ತಿ ಪಂಥ-ಇವೆಲ್ಲ ದುರ್ಬಲರ ಗುಪ್ತಿ, ಸ್ವಸಂರಕ್ಷಣಾಮಾರ್ಗಗಳು ಮಾತ್ರ; ಗಂಡುತನ, ಧೈರ್ಯ, ಸಾಹಸ ಇವು ನೆಲಸಬೇಕಾದರೆ ಬುದ್ಧಿಯ ವ್ಯಾಪಾರ, ಕೃತ್ಯ ಬೇರೆ ದಾರಿ ಹಿಡಿಯಬೇಕು; ಯಾವುದು ಶುಚಿ ಎನ್ನುತ್ತಾರೆಯೊ ಅದು ಕೂಡ ಗಂಡೊ ಹೆಣ್ಣೊ ಒಂದು ವರ್ಗವೊ ತನ್ನ ಮೌಲ್ಯವನ್ನು ಉಳಿಸಿಕೊಳ್ಳಲು ಮಾಡಿಕೊಂಡ - ರಕ್ಷಣಾತಂತ್ರ ಎನ್ನುವವರೆಗೂ ಯೋಚನೆ ಬೆಳೆಯುತ್ತಿದೆ. ಹಿಟ್ಲರ್ ಹಾಗೆ ಹೇಳಿ ನಡೆದ. ಸಾರ್ವಕಾಲಿಕ, ಸಾರ್ವದೇಶಿಕ, ಸರ್ವಗ್ರಾಹ್ಯ, ನಿತ್ಯ, ಏಕೈಕ, ಪರಮ, ಪೂರ್ಣ ಎಂಬ ಮಾತುಗಳಿಗೆ ನೆಲಗಟ್ಟು ಇಲ್ಲವೇ ಇಲ್ಲವೇನೊ ಎಂಬ ಮಟ್ಟಿಗೆ ಇಂದು ಅರಾಜಕತೆ ಹುಟ್ಟುತ್ತಿದೆ.

ತರ್ಕ ಯಾವುದನ್ನೂ ಪ್ರತಿಷ್ಠೆ ಮಾಡುವುದಿಲ್ಲ; ಸ್ಮೃತಿಗಳು ಬೇರೆ ಬೇರೆ; ಋಷಿಯಾದಂಥ ಯಾರೊಬ್ಬರ ಮತವೂ ವಾಣಿಯೂ ತೀರ್ಮಾನವೂ ಪ್ರಮಾಣವಲ್ಲ; ಧರ್ಮದ ತತ್ವ ಕಾಣದ ಎಲ್ಲಿಯೋ ಅಂತರಾಳದಲ್ಲಿ ಅಡಗಿಹೋಗಿದೆ; ಮಹಾಜನರ ನಡವಳಿಕೆಯೊಂದೇ, ಅವರು ನಡೆದ ದಾರಿಯೊಂದೇ ಸರಿಯಾದ ದಾರಿ ಎಂಬುದು ಸಂಕೇತ. ಇಂದು ಈ ಮಹಾಜನರು ಯಾರು ಎಂಬ ವಿಷಯದಲ್ಲಿ ಸಮ್ಮತಿ ಇಲ್ಲ. ಹಿಂದೆ ಸಿದ್ಧವಾಗಿದ್ದ ಪಂಥಗಳಲ್ಲೆಲ್ಲ ನಾಯಕವರ್ಗವೆಂದು ಒಪ್ಪುತ್ತಿದ್ದವರ ಅಧಿಕಾರ, ಶಾಸನ ತಮ್ಮ ಶಕ್ತಿ ಕಳೆದುಕೊಂಡಿವೆ....



ಇನ್ನೊಂದು ಬಗೆಯನ್ನು ತೆಗೆದುಕೊಳ್ಳೋಣ: ಯಾವುದಾದರೊಂದು ದೊಡ್ಡ ಕಟ್ಟಡ ನೋಡಿ ನಾಲ್ಕು ಬಗೆಯ ಜನ ನಾಲ್ಕು ರೀತಿ ನುಡಿಯಬಹುದು. ಒಬ್ಬರಿಗೆ ಇದು ಸಾಲದು; ಇನ್ನೊಬ್ಬರಿಗೆ ಅತಿ ಹೆಚ್ಚು; ಒಬ್ಬರಿಗೆ ಇದಕ್ಕೆ ವೆಚ್ಚವಾಗಿರುವ ಹಣ ಅತಿ; ಇನ್ನೊಬ್ಬರಿಗೆ ಇದರ ತಳಹದಿ ಗಟ್ಟಿಯಿಲ್ಲ. ಕಟ್ಟಡದ ಸಾಮಗ್ರಿಯನ್ನು ನೋಡಿದರೆ ಇದು ಇಪ್ಪತ್ತು ವರ್ಷ ಬಾಳದು. ಒಂದು ಹಾಸ್ಟೆಲಿಗೂ ಸ್ಕೂಲಿಗೊ ಆಸ್ಪತ್ರೆಗೊ ತಕ್ಕುದಲ್ಲ. ಗಾಳಿ ಬೆಳಕು ಸಾಲವು. ಇದರ ಮೇಲೆ ಇನ್ನೇನೂ ಕಟ್ಟಲಾಗುವುದಿಲ್ಲ. ಇದು ಪೇಟೆ ಕೋಟೆಗೆ ದೂರ, ಅಥವಾ, ಊರಿಗೆ ತುಂಬಾ ಹತ್ತಿರ, ಅಥವಾ ಸಾಗಣೆ ಸಂಚಾರ ಇಲ್ಲಿ ಕಷ್ಟ; ಅಥವಾ ಇದು ಎಲ್ಲ ಕಡೆಯ ದಾಳಿಗೂ ಸುಲಭವಾಗಿ ಈಡಾಗುತ್ತದೆ; ಇಲ್ಲಿ ಸಾಮಾನನ್ನು ಸಂಗ್ರಹಿಸಿದರೆ ಸೈನ್ಯವನ್ನು ತಂದಿಟ್ಟರೆಯೂ ಎರಡು ಗಂಟೆಗಳ ಕಾಲ ಇದನ್ನು ರಕ್ಷಿಸಲಾಗುವುದಿಲ್ಲ; ಇದರಲ್ಲಿ ಸಾವಿರ ಜನಕ್ಕೆ ಸಂತರ್ಪಣೆ ಮಾಡಿಸಲಾಗು ವುದಿಲ್ಲ; ಇಲ್ಲಿ ನೀರಿನ ವಸತಿ ಇಲ್ಲ; ಅಥವಾ ಮಳೆಗೆ ತುಂಬಾ ಈಡಾಗುತ್ತದೆ; ಜೌಗು; ಕಲ್ಲುನೆಲ ಎಂಬ ನೂರಾರು ಅಭಿಪ್ರಾಯಗಳು ಹುಟ್ಟಿಕೊಳ್ಳುವಾಗ ಈ ಕಟ್ಟಡವನ್ನು ಕುರಿತು ಸತ್ಯವಾವುದು? ಎಂದು ಕೇಳುವುದು ವಿಚಿತ್ರ. ಇಂಥುದೇ ಇಲ್ಲಿ ಹಲವಾರು. ಇಂಥವೇ ಹೀಗಿರುವಾಗ ಹೆಚ್ಚು ಸೂಕ್ಷ್ಮವಾದ ಮಾನಸಿಕ, ಸಾಮಾಜಿಕ ಅಥವಾ ಸಂಸ್ಕೃತಿ ವ್ಯವಹಾರಗಳಲ್ಲಿ ಯಾವುದನ್ನು ಕುರಿತಾದರೂ ಇದು ಮಾತ್ರ ಸತ್ಯ, ಇನ್ನೊಂದಲ್ಲ ಎನ್ನುವುದು ಕಷ್ಟ. ಸರಿಯೇ ಆಗದೇನೊ. ಇಲ್ಲಿಯಾದರೂ ನಿರ್ದಿಷ್ಟ ಪ್ರಮಾಣಗಳಿವೆ. ಎಲ್ಲಿ ಅಳತೆ ಪ್ರಮಾಣಗಳು ಬೇರೆ ಬೇರೆಯೊ ಅನಿಶ್ಚಿತವೊ ಅಂಥಲ್ಲಿ? ಆಕ್ರೋಶಗಳ ಚರಿತ್ರೆಯೊ ಪ್ರಯೋಜನ ನಿರೀಕ್ಷೆಗಳೊ ಬಲಿತಿರುವಾಗ? ಕದ್ದಿಂಗಳ ಕತ್ತಲು.

## ಕಲೆ ಕಾವ್ಯಗಳಲ್ಲಿ

ಕಾವ್ಯದ ಅಲಂಕಾರದಲ್ಲಿ ದೀಪಕಾಲಂಕಾರವೆಂಬುದು ಉಂಟು. ಒಬ್ಬನೇ ಅಥವಾ ಒಂದೇ ಹಲವರಿಗೆ ಹಲವು ಬಗೆಯಾಗಿ ಕಾಣುತ್ತಿತ್ತು ಎಂಬ ವರ್ಣನೆ; ಹಲವು ಮುಖಗಳು ಅಲ್ಲಿ ಕಾಣುತ್ತವೆ. ಒಂದು ಕೃತಿಯಲ್ಲಿ ಸೀತಾಕಲ್ಯಾಣದ ವರ್ಣನೆ ಇದೆ. ಲಜ್ಜೆ, ಕೀರ್ತಿ, ಜನಕತನಯೆ ಮೂವರು ರಾಮಭದ್ರನನ್ನು ಮದುವೆ ಮಾಡಿಕೊಳ್ಳಬೇಕೆಂದು ಸ್ಪರ್ಧಿಸಿ ಸ್ವಯಂವರ ಮಂಟಪಕ್ಕೆ ಬಂದಿದ್ದರಂತೆ. ಮನುಷ್ಯ ಕುವರಿಯಾದ ಸೀತೆಯನ್ನು ರಾಮ ಮದುವೆಯಾದಾಗ ಲಜ್ಜೆಗೂ ಕೀರ್ತಿಗೂ ಅಸಮಾಧಾನವಾಯಿತು. ಸ್ವಯಂವರ ಸಭೆಯಲ್ಲಿದ್ದ (ಇದು ವಾಲ್ಮೀಕಿ ರಾಮಾಯಣ ದಲ್ಲಿಲ್ಲ) ಇತರ ರಾಜರನ್ನೆಲ್ಲ ಆಕೆ ವರಿಸಿದಳಂತೆ. ನನಗೆ ಇಲ್ಲಿನ ಹುಲುಮನುಷ್ಯರ ಹಂಗೇನು ಎಂದುಕೊಂಡವಳೇ ಕೀರ್ತಿ ಎಂಟು ದಿಕ್ಕುಗಳಿಗೂ ಹಾರಿ ಈ ಸಂಗತಿಯನ್ನು

ಹರಡಿ ವ್ಯಾಪಿಸಿ ಯಾರನ್ನು ಬೇಕಾದರೂ ತಾನು ಒಲಿಸಿಕೊಂಡೇನು ಎಂದು ಆಕಾಶಕ್ಕೆ ಹೋದಳಂತೆ. ಇಂಥ ಕಲ್ಪನೆಯ ಚಮತ್ಕಾರ, ಬೆಡಗು ಒಂದು ರೀತಿ ಇದ್ದುದನ್ನು ಇನ್ನೊಂದು ರೀತಿ ತೋರಿಸುತ್ತದೆ. ಕಲೆಯ ಕಲ್ಪನೆ ಸತ್ಯ ಸ್ವರೂಪವನ್ನೇ ಮಾರ್ಪಡಿಸಿ ಮನಸ್ಸನ್ನು ಮೋಹಗೊಳಿಸಿ, ಇನ್ನು ಯಾವ ಬಗೆಯ ಜೀವನಕ್ಕೂ ಒಲಿಯದಂತೆ ಕಾವ್ಯಜೀವನಕ್ಕೂ ಕಲಾಜೀವನಕ್ಕೂ ಕಟ್ಟಿಹಾಕಬಹುದು ಎಂಬುದಕ್ಕೆ ಇದು ನಿದರ್ಶನ. ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ ಮಾತ್ರವೇ ಅಲ್ಲ; ಸತ್ಯಸ್ಯ ತತ್ವಂ ಕೂಡ ಅದೇ. ಇನ್ನೊಂದು ಧರ್ಮ ಧರ್ಮಸೂಕ್ಷ್ಮದಲ್ಲಿದೆ ಎಂಬುದು. ಸತ್ಯವೂ ಅಷ್ಟೇ. ಯಾವ ಸನ್ನಿವೇಶದಲ್ಲಿಯೋ ಆಗಲಿ ಒರಟಾಗಿ ಪ್ರಕಟವಾಗಿ ಕಾಣುವ ನಿಜಕ್ಕಿಂತ ನವುರಾಗಿರುವುದೇ ಸತ್ಯವಿರಬಹುದು. ವ್ಯಂಗ್ಯವಾಗಿ ವಿರುದ್ಧವಾಗಿ ಕಾಣಿಸುವುದೇ ಸತ್ಯವಾಗಬಲ್ಲದು. ಪ್ರೇಮ ಪ್ರಪಂಚದ ತುಂಬಾ ಈ ವಿಲಾಸ ಲೋಕ ಸಾಹಿತ್ಯದಲ್ಲಿ ಮೆರೆದಿದೆ. ನುಡಿವ ಸ್ಪಷ್ಟದಲ್ಲಿಲ್ಲದ, ಮೌನದಲ್ಲಿ ಬಿಗುಮಾನದಿಂದೆಂಬಂತೆ ಇರುವ ಸಂದರ್ಭದಲ್ಲಿ ಆಳವಾದ ಭಾವ ಸಂಚಾರವಿರಬಲ್ಲದು. ಅದು ರಮ್ಯವಾಗಿ ಪ್ರಿಯವಾಗಿ ಒಲಿಸಬಲ್ಲದು. ಒಂದು ನುಡಿಯುವುದಕ್ಕೆ ಬದಲಾಗಿ ಬೇರೊಂದು ನುಡಿದು ಸತ್ಯವನ್ನು ಮರೆಮಾಡುವಂತೆ ಇರಬಹುದು. ಟಾಗೋರರ 'ನೌಕಾ ಡುಬಿ' ಯಲ್ಲಿನ ರಮೇಶ ಕಮಲ ಇವರ ಪ್ರಸಂಗದಲ್ಲಿನ ನಡವಳಿಕೆಯ ನಯ ಅತಿಸೂಕ್ಷ್ಮ ಪರೀಕ್ಷೆಗಳಿಗೆ ಅವರನ್ನು ಈಡುಮಾಡುತ್ತದೆ. ಗಾಲ್ಸವರ್ದಿಯ 'Fraternity' ಕಾದಂಬರಿಯಲ್ಲಿನ ಸ್ವಲ್ಪ ಒರಟಾದ ಸಹೋದರ, ಅವನ ಹೆಂಡತಿ ಎಷ್ಟು ಸುಖವಾಗಿ ಸಂಸಾರ ಮಾಡುತ್ತಾರೆ? ಅತಿನಯವಾದ, ಪರಸ್ಪರ ಪ್ರೀತಿ ಇದ್ದಾಗಲೂ ಅತಿ ಮೃದುಸಂಸ್ಕಾರವೂ ಮನೋಧರ್ಮ ನಾಜೂಕೂ ನಡವಳಿಕೆ ಉಳ್ಳ ತಮ್ಮ, ತಮ್ಮನ ಹೆಂಡತಿಯ ಜೀವನ ಬರಡಾಗುತ್ತದೆ; ಎಷ್ಟು ಹರ್ಷಶೂನ್ಯ ಎಂಬುದರ ಚಿತ್ರ ಬರುತ್ತದೆ. 'ಪಾರ್ಫಿರಿಯಾಸ್ ಲವರ್' ಎಂಬ ಬ್ರೌನಿಂಗ್ ಕವಿಯ ಕವಿತೆಯಲ್ಲಿ ಏಕೈಕವಾಗಿ ಯಾರನ್ನು ಒಬ್ಬ ಹೆಣ್ಣು ಪ್ರೀತಿಸುತ್ತಾಳೆಯೊ ಅವನ ಬಳಿಗೆ ತನ್ನ ಮನೆಯ ಉತ್ಸವವನ್ನು ಬಿಟ್ಟು ಬಂದಾಗ, ಇಂಥ ಪ್ರೇಮದ ತುಂಬು ಪ್ರಕಟಣೆ ಇನ್ನೊಂದು ಸಮಯದಲ್ಲಿ ಬಾರದು ಎಂದುಕೊಂಡವನೇ ಆಕೆಯ ಕೇಶ ಪಾಶದಿಂದ ಅವಳ ಕುತ್ತಿಗೆಗೆ ಉರುಲು ಹಾಕಿ ಕೊಂದದ್ದು ಪ್ರೇಮವೊ ಕೊಲೆಯ ವೀರವೊ ವಿಕಾರವೊ? ಹುಚ್ಚೊ! ಅನೇಕ ಸಂದರ್ಭಗಳಲ್ಲಿ ಹತ್ತು ಮುಖದಲ್ಲಿ ಸತ್ಯ ಎಂಬುದರ ಮಿನುಗು ಕಾಣುತ್ತಿರುತ್ತದೆ. ಇದು ಇಷ್ಟು ಮಾತ್ರವೇ ಸತ್ಯ ಎಂದು ಹೇಳುವುದು ತುಂಬಾ ಕಷ್ಟವಾಗುತ್ತದೆ. ಕವಿ ಲೋಕವನ್ನು ನೋಡುವಾಗ ಕಲ್ಪನೆಯ ಸತ್ಯ ಅದನ್ನು ರೂಪಾಂತರಿಸುತ್ತದೆ. ಅವನು ಕಟ್ಟಿ ತೋರಿಸುವ ಅರ್ಥ ಅಮೃತ ಸತ್ಯವಾಗಿ ಸದಾ ಕಾಲಕ್ಕೆ ಜನದ ನೆನಪನ್ನು ಬೆಳಗುತ್ತಿರುತ್ತದೆ.

ಸ್ಮಾರಕ ಪಾತ್ರೆಯ ಮೇಲೆ ಇರುವ ಚಿತ್ರಗಳನ್ನು ನೋಡಿ ಕೀಟ್ಸ್ For ever will he pursue her. For ever will she be fair ಎಂದಂತೆ. ಹಾಗೇ ದೃಷ್ಟಿ ರೀತಿಯಲ್ಲಿನ ಇನ್ನೊಂದು ವಿಕಟ-ಅಮೃತಶಿಲೆಯಲ್ಲಿ ಮಾಡಿದ ಭವ್ಯ ಮಂದಿರ- 'ಕಾಲೇರ್ ಕಪೋಲತಲೇ ಏಕಬಿಂದು ನಯನೇರ ಜಲ್ ಸುಂದರ ಸಮುಜ್ವಲ್' -



ಎಂದು ಟಾಗೋರರು ವರ್ಣಿಸಿದ ತಾಜಮಹಲ್ ಪ್ರೇಮದ ಮಹಾಸ್ಮಾರಕವಾಗಿ ಷಾಜಹಾನ್ ಮುಮ್ತಾಜ್ ಮಹಲರ ಪ್ರೀತಿಯನ್ನು ಉಳಿಸಿದ್ದರೂ ಇದು ಪ್ರೇಮ ಸ್ಮಾರಕವಲ್ಲ, ಒಂದು ಶವವನ್ನು ಹೂಳಿದ ಗೋರಿ; ಅಂದ ಚಂದ ಮಸಣ ಕೀರ್ತಿ, ಅಮೃತ ಶಿಲೆಯಲ್ಲಿ ರೂಪಿಸಿದ ಅಹಂಕಾರ ಮಾತ್ರ ಎಂದರೆ-ಲೋಕಕ್ಕೆ ಬೇರೆ ಬಗೆಯ ಅರ್ಥಮಂಡಲಗಳು ಹಾದು ಬರುತ್ತವೆ. ಒಟ್ಟಿನಲ್ಲಿ ಯಾವ ಅರ್ಥ ಹೇಗೆ ಬೆಳೆವುದೊ ಆ ಅರ್ಥ ಅದರ ಸತ್ಯವನ್ನು ಮಾರ್ಪಡಿಸುತ್ತದೆ. ಹೊಸದಾಗಿ, ಶಾಶ್ವತವಾಗಿ ಅದನ್ನು ಲೋಕದ ಸಂಪತ್ತಿಗೆ ಸೇರಿಸುತ್ತದೆ. ಇದು ಕವಿ ಸೃಷ್ಟ, ಸೃಷ್ಟಿ ಕಲ್ಪನೆಯ ಸತ್ಯ.

ವೇದಾಂತ ಅಥವಾ ದರ್ಶನಗಳಲ್ಲಿ ಸತ್ಯ ಎಂಬುದು ಯುಕ್ತಿಯಿಂದಲೂ ಜೀವನ ಸಾಕಲ್ಯ ದೃಷ್ಟಿಯಿಂದಲೂ ಸ್ಥಾಪಿತವಾಗಬೇಕಾದರೆ ಮತಧರ್ಮದಲ್ಲಿ ವಿಶ್ವಾಸ ಶ್ರದ್ಧೆ ಭಕ್ತಿಗಳು ಒಪ್ಪಿದುದು ಸತ್ಯವಾಗುತ್ತದೆ. ಕಲೆಗಳಲ್ಲಿ ಕಣ್ಣು ಕಿವಿ ಮನಸ್ಸು ಕಂಡದ್ದು, ಕಲ್ಪನೆ ಭಾವನೆ ವಿವರಣೆ ವ್ಯಾಖ್ಯಾನ ಸ್ಥಾಪಿಸಿದ್ದು ಸತ್ಯ ಎಂದಾಗ, ಸರ್ವಕ್ಕೂ ಹೊಂದುವ ಸತ್ಯವೆಂಬ ಮಾತನ್ನು ತುಂಬಾ ಎಚ್ಚರಿಕೆಯಿಂದ ಅರಸಬೇಕು.

ಜೀವನದ ಉಳಿದ ಬೆಲೆಗಳೂ ಸತ್ಯದ ಮೇಲೆ ನಿಲ್ಲುವುದರಿಂದ, ಪ್ರತಿಷ್ಠವಾಗ ಬೇಕಾದ್ದರಿಂದ ಈ ಭಾಗವನ್ನು ಹೀಗೆ ಬೆಳಸಿತು.

* * *

'ಶಿವ' ಎಂಬುದು ಎರಡನೆಯ ಮಾತು. ಒಟ್ಟಿನಲ್ಲಿ 'ಒಳ್ಳೆಯದು' ಎಂದು ಅದರ ಅರ್ಥವನ್ನು ಇಟ್ಟುಕೊಳ್ಳಬಹುದು. 'ಮಂಗಳ', 'ಶುಭ', 'ಕಲ್ಯಾಣ' ಎಂಬವು ಶಿವ ಶಬ್ದದ ಲಕ್ಷಣಕ್ರಿಯೆ. ಲೋಕಹಿತಸಾಧಕವಾದ ಎಲ್ಲ ಕಾರ್ಯಗಳಿಗೂ ಇದು ವ್ಯಾಪಿಸುತ್ತದೆ, ಬೆಲೆ ಕೊಡುತ್ತದೆ. ನಮ್ಮ ದೇಶದ ಚರಿತ್ರೆಯಲ್ಲಿ ರುದ್ರ-ಶಿವ ಎರಡು ಮಾತುಗಳೂ ಒಂದೇ ದೈವಶಕ್ತಿಯ ಎರಡು ಮುಖಗಳು. 'ರುದ್ರ'ದಲ್ಲಿ ಭಯಂಕರತೆ ಇದೆ; 'ಶಿವ'ದಲ್ಲಿ ಕಲ್ಯಾಣ ಶಕ್ತಿ ಇದೆ. ಒಂದು ಕಡೆ ಲಯಕರ 'ಶಿವ'; ಇನ್ನೊಂದು ಕಡೆ ಶುಚಿಗೆ, ತಪಸ್ಸಿಗೆ, ತ್ಯಾಗಕ್ಕೆ, ವಿರಾಗಕ್ಕೆ ಹೆಸರಾದವನು. ಈ ಗುಣಗಳ ಅಧಿಷ್ಠಾತ್ರ ಶಕ್ತಿ 'ಶಿವ' ಎಂದು ಹಿಂದೂ ಸಂಪ್ರದಾಯದಲ್ಲಿ ಎಣಿಕೆ. ಲೋಕ ನಿಯಂತ್ರಣದಲ್ಲಿ ಶಿವಂ ಎಂಬುದು ಇಲ್ಲದಿದ್ದರೆ ಇನ್ನಾವ ಬೆಲೆ ಇದ್ದರೆ ಏನು ಬಂತು? 'ಶಾಂತಂ ಶಿವಂ ಅದ್ವೈತಂ' ಎಂದು ಬ್ರಹ್ಮವನ್ನು ಕುರಿತು ನುಡಿಯುವಾಗ ಅಲ್ಲಿನ ತತ್ವಭಾಗ ಹೇಗೇ ಇರಲಿ, 'ಶಿವ' ಎಂಬ ಗುಣ ಲೋಕವನ್ನು ನಡಸಿದರೆ ಎಲ್ಲ ಕಾಲದ ಬದುಕೂ ನೇರ್ಪಡುತ್ತದೆ. ಎಂದರೆ, ಯಾವುದನ್ನು ನಮ್ಮ ದೇಶದಲ್ಲಿ ಧರ್ಮ ಎಂದರೊ ಅದರ ಅಧಿಪತಿ ರೂಪ 'ಶಿವ'. ಜೀವನದಲ್ಲಿ ತತ್ವದ ವಿಚಾರವನ್ನು, ಅಧ್ಯಾತ್ಮದ ವಿಚಾರವನ್ನು ಕುರಿತು ಯಾರು ಯಾರು ಹೇಗೆ ಅಭಿಪ್ರಾಯವನ್ನೂ ವಾದವನ್ನೂ ಬೆಳಸಿ ಸಿದ್ಧಾಂತಗಳನ್ನು ಮಾಡಲಿ ಶೀಲದ ವಿಚಾರದಲ್ಲಿ, ನಡವಳಿಕೆಯ ವಿಚಾರದಲ್ಲಿ, ಧರ್ಮದ ವಿಚಾರದಲ್ಲಿ ಸಾರತಃ ಒಮ್ಮತವುಳ್ಳವರಾಗಿರುತ್ತಾರೆ. ಸಮಸ್ತ ಜೀವನದ ನೆಲೆಗಟ್ಟು ಧರ್ಮ. ಋತ ಎಂಬ

ಮಾತಿನಲ್ಲಿಯೂ ಇದರದೇ ಪ್ರಕಾಶ. ಆದರೆ ಒಂದೊಂದು ದೇಶದಲ್ಲಿ ಒಂದೊಂದು ಕಾಲದಲ್ಲಿ ಈ ಒಳ್ಳೆಯದು, ಧರ್ಮ ಎಂಬ ವಾಚಕಗಳ ಸ್ವರೂಪ ರೀತಿ ನೀತಿ ಬೇರೆಬೇರೆಯಾಗಿರುತ್ತದೆ. ವೆಸ್ಟರ್‌ಮಾರ್ಕ್ ಅವರ ‘Origin and Development of Moral Idea’ ಎಂಬ ಗ್ರಂಥವನ್ನೂ ನೀತಿಶಾಸ್ತ್ರದ ಇಂದಿನ ಗ್ರಂಥಗಳನ್ನೂ ಓದಿದರೆ ಒಂದು ಕಡೆ ಈ ನೀತಿ ಅಥವಾ ಒಳ್ಳೆಯದರ ಸಮಯಗಳು ಆಚಾರ ಸಂಪ್ರದಾಯ ಎಷ್ಟು ಭಿನ್ನ ಪ್ರಕಾರಗಳನ್ನು ತಾಳುತ್ತವೆ ಎಂಬುದು ಗೊತ್ತಾಗುತ್ತದೆ. ‘ಸತ್ಯಂ ಮಾತಾ, ಪಿತಾ ಜ್ಞಾನಂ, ಧರ್ಮೋ ಭ್ರಾತಾ, ದಯಾ ಸಖಾ, ಶಾಂತಿಃ ಪತ್ನೀ, ಕ್ಷಮಾಪುತ್ರಃ ಷಡ್ಯೈತೇ ಮಮ ಬಾಂಧವಾಃ’ ಎಂದನಂತೆ ಯುಧಿಷ್ಠಿರ. ಅವನು ಕಲ್ಪಿಸಿಕೊಟ್ಟ ಸಂಸಾರಬಂಧ ಹೇಗೇ ಇರಲಿ, ಸತ್ಯ, ಜ್ಞಾನ, ದಯಾ, ಧರ್ಮ, ಶಾಂತಿ, ಕ್ಷಮಾ ಇವು ನಡತೆಗೆ ಮೂಲಾಧಾರವಾದ ಲಕ್ಷಣಗಳು. ಈ ಪ್ರತಿಯೊಂದು ಮಾತಿಗೂ ಆಯಾ ಕಾಲಕ್ಕೆ, ದೇಶಕ್ಕೆ ಅನುಗುಣವಾದ ಅತಿ ವಿಶಾಲ ಅರ್ಥವನ್ನು, ಚರ್ಯೆಯನ್ನು ಕಲ್ಪಿಸಿಕೊಳ್ಳಬೇಕು.

## ಸಾರಶಿಕ್ಷಣ

ಶಾಸ್ತ್ರಗ್ರಂಥಗಳಲ್ಲಿ ಒಳ್ಳೆಯದನ್ನು ಒಳ್ಳೆಯದಾಗಿ ಮಾಡುವ ಗುಣ ಲಕ್ಷಣ ಯಾವುದು? ಇದರ ನೆಲೆಗಟ್ಟು, ಇಲ್ಲಿ ತೀರ್ಮಾನಗಳಿಗೆ ಸ್ಥಾಪಕಶಕ್ತಿ ಕೊಡುವ ಆಧ್ಯಾತ್ಮಿಕ ತತ್ವ ಒಂದಿದ್ದರೆ ಅದು ಯಾವುದು? ಎಂಬ ವಿಚಾರವಿರುತ್ತದೆ. ಆದುದರಿಂದಲೇ ಯಾವುದೊ ಕರ್ತವ್ಯವನ್ನು ಕರ್ಮವನ್ನು ಬೋಧಿಸುವ ಗೀತೆಯಂತಹ ಗ್ರಂಥಗಳಲ್ಲಿಯೇ ಅಧ್ಯಾತ್ಮ ಮತ್ತು ದೈವವಾದ ಬೆಳೆದಿರುವುದು. ಈ ಪ್ರಪಂಚದ ಒಂದು ಕಡೆ ಮಾನವ ವ್ಯಕ್ತಿಜೀವನ, ಸಮಾಜದ ಅಥವಾ ಸಮುದಾಯ ಜೀವನ, ಅಲ್ಲಿನ ಕರ್ಮಗಳನ್ನು ನಡಸುವ ಭಾಗ ಇರುತ್ತದೆ. ರಾಜಕೀಯ, ಸಾಮಾಜಿಕ ಜೀವನಗಳ ಭಾಗ ಒಂದು ಬಗೆ; ಇದು ಲೋಕಹಿತಕರವಾಗಬೇಕಾದರೆ ‘ಸಕಲ ಜನ ಹಿತಾಯ, ಸಕಲ ಜನ ಸುಖಾಯ’ ಎಂಬ ಅಥವಾ ‘The greatest good of the greatest number, the least hurt to the least number’ ಎಂಬ ಮಾತುಗಳು ಕೇವಲ ಸಂಖ್ಯಾದೃಷ್ಟಿಯಿಂದ ನುಡಿದುವೇನೊ ಎನ್ನಿಸೀತು. ಸಾರತಃ ಇದನ್ನೇಕೆ ಮಾಡಬೇಕು? ಇದು ನಮಗೆ ಕರ್ತವ್ಯ ಧರ್ಮವಾಗಿ ಹೇಗೆ ವಿಧಾಯಕವಾಗುತ್ತದೆ ಎಂಬುದಕ್ಕೆ ಒಂದು ತತ್ವದ ಸಾಧನೆಯೇ ಬೇಕಾಗುತ್ತದೆ. ಬಹುಕಾಲದಿಂದ ದೇವರೆಂಬ ಒಂದು ಶಕ್ತಿಯ ಪರಮವ್ಯಾಪನೆ ಇದ್ದು ತಾಯಿ ತಂದೆಯಂತೆ ರಕ್ಷಣೆ, ಪೋಷಣೆ, ಶಿಕ್ಷೆ ಮೂರಕ್ಕೂ ದೈವ ನೆಲೆ, ಅಧಿಪತಿ ಎಂಬ ವರ್ಣನೆ ಇರುತ್ತದೆ. ಎಂದಾಗ ಆಯಾ ಮತಕ್ಕೆ ಸೇರಿದವರು ಆಯಾ ದೇವರ ಮಕ್ಕಳು; ತಮ್ಮ ತಮ್ಮಲ್ಲಿ ಸೋದರರು ಎಂಬ ಭಾವ ಬಲಿಯಲು ಅವಕಾಶವಾಯಿತು. ನನ್ನದು ಆಚಾರ; ಇತರರು ಪಾಷಂಡಿಗಳು! ಅಲ್ಲದೆಯೊ, ಬುಡಕಟ್ಟು ಬೇರೆ, ಭಾಷೆ ಬೇರೆ, ಇತಿಹಾಸ ಬೇರೆ.



## ಜನವರ್ಗದಲ್ಲಿ

ಸಂಖ್ಯಾಮಾನದಿಂದ ಮಾತ್ರ ನಿರ್ದೇಶಿಸುವ ಬೆಲೆ ಲಕ್ಷಣಕ್ಕಿಂತ ಇಲ್ಲಿ ಮಾನವ ಸೋದರತೆಯ ಪರ್ಯಾಲೋಚನೆ ಸೇರಿಕೊಳ್ಳುತ್ತದೆ. ಮಾನವರು ಸೋದರರಾದ ಕಾರಣದಿಂದ ಒಬ್ಬರನ್ನೊಬ್ಬರು ಪ್ರೀತಿಸಬೇಕು; ನೆರವಾಗಬೇಕು; ದ್ವೇಷಮಾಡಬಾರದು; ಕೊಲೆಪಾತಕರಾಗಬಾರದು-ಎಂಬ ಭಾವ ಬೆಳೆಯಲು ತುಂಬಾ ಸಹಾಯಕವಾಯಿತು. ಆದರೆ ಬೇರೆ ಬೇರೆ ಮತಗಳು ಬೇರೆ ಬೇರೆ ವರ್ಗಗಳಾಗಿ ಹಗೆತನ ಬೆಳೆದಾಗ ಒಂದು ದೇವರಿಗೂ ಇನ್ನೊಂದು ದೇವರಿಗೂ ತಿಕ್ಕಾಟ ಬಂದು, ಒಂದು ದೇವರ ಮಕ್ಕಳಿಗೂ ಇನ್ನೊಂದು ದೇವರ ಮಕ್ಕಳಿಗೂ ವೈರ ಉಂಟಾಗಿ, ಅದು ಪ್ರಬಲಿಸಿದಾಗ ಸೋದರತೆ ಎಂಬ ಪದದ ವ್ಯಾಪ್ತಿ ಮಿತವಾಯಿತು. ಒಂದು ದೇಶದ ವ್ಯವಹಾರ ಜೀವನದಲ್ಲಿ ಅನೇಕ ಮತಗಳವರು ಒಡಬಾಳು ಬಾಳಬೇಕಾಗಿರುವಾಗ ಇಲ್ಲಿ ಸೋದರತೆಯನ್ನು ಅನ್ವಯ ಮಾಡುವುದರ ಜೊತೆಗೆ ಒಟ್ಟು ದೇಶದ ಪ್ರಜಾವರ್ಗವನ್ನೇ ಸೋದರವಾಗಿ ಸಮವಾಗಿ ಎಣಿಸಬೇಕಾಗುತ್ತದೆ. ಧರ್ಮ ಕರ್ಮ ನೀತಿ ಒಳಿತು ಎಂಬುದು ಒಟ್ಟು ಈ ಜನವರ್ಗಕ್ಕೆಲ್ಲ ಸಮಾನವ್ಯಾಪನೆ ಉಳ್ಳದ್ದಾಗಬೇಕಾಗುತ್ತದೆ. ವ್ಯಷ್ಟಿಯಲ್ಲಿ ಬೇರೆ ಬೇರೆ ಮತ ಕುಲ ಆಚಾರಗಳವರು ಧರ್ಮಗಳವರು ಒಳ್ಳೆಯದು ಕೆಟ್ಟದ್ದು ಎಂದು ತಿಳಿದು ನಂಬಿಕೆಗಳಿಗೆ, ನಡಸುವ ಆಚಾರಗಳಿಗೆ ಘರ್ಷಣೆಬಾರದೆ ಒಂದಕ್ಕೊಂದು ಅವಿರೋಧವಾಗಿ ಹೊಂದಿಕೊಳ್ಳಬೇಕಾಗುತ್ತದೆ. ಈ ಹೊಂದಿಕೆಯ ಸೂತ್ರವನ್ನು ರೂಪಿಸಿರುವುದು, ಅರ್ಥೈಸುವುದು, ಕಾಪಾಡುವುದು ರಾಜ್ಯದ ಧರ್ಮವೂ ಕರ್ಮವೂ ಆಗುತ್ತದೆ. ಕೋಟಲೆ ಬಂದಾಗ ಅದನ್ನು ನಿವಾರಿಸಿ, ವ್ಯವಹಾರ ಧರ್ಮವೇ ವಿಸ್ತಾರಗೊಂಡು ಸಹನೆ, ಸಮಾನ ದೃಷ್ಟಿ, ನ್ಯಾಯ ಏರ್ಪಡಬೇಕಾಗುತ್ತದೆ. ಇದು ದೇಶದ ಶಾಂತಿಗೂ ಸುರಕ್ಷಣೆಗೂ ಮೊದಲ ನೇಮವಾಗಬೇಕಾಗುತ್ತದೆ. ಹೀಗೆ ಸಂಖ್ಯಾದೃಷ್ಟಿ, ಮತದೃಷ್ಟಿ, ಹೊಂದಿಕೆಯ ದೃಷ್ಟಿ ಸೇರಿ ಪ್ರತಿ ದೇಶದಲ್ಲಿಯೂ ಲೋಕಜೀವನ ವ್ಯವಸ್ಥಿತವಾಗಬೇಕಿರುವಾಗ ಒಳ್ಳೆಯದು, ಹಿತಕರ ಎಂಬ ಮಾತುಗಳ ಕಲ್ಪನೆಯೂ ಕಾರ್ಯರಂಗವೂ ವಿಸ್ತಾರವಾಗುತ್ತದೆ; ಸೂಕ್ಷ್ಮವಾಗುತ್ತದೆ; ನಾಜೂಕಿನದಾಗುತ್ತದೆ. ಇಲ್ಲಿಯೂ ನಿರ್ಣಯಗಳು ಒಟ್ಟು ದೇಶದ ನ್ಯಾಯವನ್ನು ಕಡೆಯ ಮಟ್ಟದಲ್ಲಿ ನಿರ್ಣಯಿಸುವ ನ್ಯಾಯಶಾಲೆಗಳಲ್ಲಿ ನಿರ್ಣಯವಾಗಬೇಕು. ಇವನ್ನು ಪ್ರತಿಭಟಿಸಿ ನಿಲ್ಲುವ ಆದೇಶಗಳೂ ಅಗತ್ಯಗಳೂ ಗಮ್ಯಗಳೂ ಹುಟ್ಟಿಕೊಳ್ಳಬಲ್ಲವು. My Country-Right or Worng ಎನ್ನುವುದು ಧರ್ಮವೆಂದಾಗ ಅಧರ್ಮ ಆಗಿದೆ, ನನ್ನ ಪರಮ ಗಮ್ಯಗಳಿಗೆ ಒಂದು ಧರ್ಮ, ವ್ರತ ಅಥವಾ ಪಂಥದ ಏಳಿಗೆಗೆ ನನ್ನ ದೇಶ ಅಡ್ಡಿ ಬಂದರೆ ನನಗೆ ದೇಶಕ್ಕಿಂತ ಧರ್ಮ ದೊಡ್ಡದು ಎಂದೆಣಿಸಿ, ದೇಶದ ಕಾನೂನನ್ನೇ ನಿಯಮ ಶಾಸನಗಳನ್ನೇ ಪ್ರತಿಭಟಿಸಿ ನಿಲ್ಲುವ ದೃಷ್ಟಿಗಳು ಬಲಿಯಬಲ್ಲವು. ಅಲ್ಲಿ ಶ್ರದ್ಧೆಯೂ ಅಭಿಮಾನ ವಿಶ್ವಾಸಗಳೂ ಬಲಿತಾಗ ರಾಜ್ಯದ ಹಿತರಕ್ಷಣೆ ಮಾಡಬೇಕಾದ ಅಧಿಕಾರಿಗಳ ನಡವಳಿಕೆ ಕ್ಲೇಶಗಳಿಗೂ ಅದೃಢತೆಗಳಿಗೂ ಈಡಾಗುತ್ತದೆ. ಅಂಥ ವಿಶಿಷ್ಟ ಸಂದರ್ಭ, ಅವಸರಗಳಲ್ಲಿ

ಬಿಟ್ಟರೆ ಉಳಿದಾಗ ಸಾಮಾನ್ಯವಾಗಿ ಎಲ್ಲರೂ ಒಪ್ಪುವ ನಿಯಮ ಶಾಸನಗಳು ನಾಡಿನ ಕಾನೂನಿನಲ್ಲಿ ರೂಪಿತವಾಗಿ ತಕ್ಕ ಮಿತಿಯಲ್ಲಿ ನಡೆಯುತ್ತಿವೆ. ಈ ಮಿತಿ ಒಂದು ರೀತಿ ನಮ್ಮನ್ನು ಒತ್ತಾಯ ಮಾಡುವ ಸಂಗತಿ.

## ಪುರುಷಾರ್ಥಗಳು

ಇನ್ನೊಂದು ರೀತಿ ಅವಕಾಶ ಕಲ್ಪನೆಯ ಹಸರವಾದುದರಿಂದಲೇ ಸಮಾಜ ಜೀವನದಲ್ಲಿ ತ್ರಿವರ್ಗವೆಂದು ಕರೆಯುವ ಅರ್ಥ, ಕಾಮ, ಧರ್ಮಗಳಿಗೆ ಸ್ಥಾನ ದೊರೆಯಿತು. ಅರ್ಥ, ಕಾಮಗಳ ಸಾಧನೆ ಬೇಕಾದ ಹಾಗೆ ಮಾಡಿ; ಇದಕ್ಕೆ ಅವಕಾಶವುಂಟು. ಆದರೆ ಧರ್ಮಕ್ಕೆ ಒಳಪಟ್ಟು ನಡೆಯಬೇಕು ಎಂಬುದು ನಿಯಮ. ಅದು ಅವಕಾಶಕ್ಕೆ ಮೇರೆ ಹಾಕಿತು. ಮೋಕ್ಷವೆಂಬ ನಾಲ್ಕನೆಯ ಪುರುಷಾರ್ಥ ಸಮಾಜದ ದಿನಜೀವನಕ್ಕೆ ಸಂಬಂಧಿಸಿದ್ದಲ್ಲ. ಇದು ವ್ಯಕ್ತಿಯ ಪರಮಾರ್ಥ ಸಾಧನೆಗೆ ಸಂಬಂಧಿಸಿದ್ದು. ಕಾಮ, ಅರ್ಥ ತಪ್ಪಲ್ಲ. ಇಲ್ಲಿನ ಸುಖ ಸಂತೋಷಗಳನ್ನು ಬೇಕಾದಷ್ಟು ಅರ್ಜಿಸುವುದು ಸರಿ. ಧರ್ಮಕ್ಕೆ ವಿಧೇಯವಾಗಿ, ಒಳಪಟ್ಟು ಮಾತ್ರ ಎಂಬ ನಿಯಮ ಆರೋಗ್ಯಕರವಾದ ಒಂದು ಅನುಕೂಲ ಅವಕಾಶವನ್ನು ಸಮಾಜದಲ್ಲಿ ಬದುಕಬೇಕಾಗಿರುವ ಜನಕ್ಕೆ ಒದಗಿಸಿಕೊಟ್ಟಿತು. ಈ ಮಿತಿಗಳನ್ನು ಮೀರಿದಾಗ ಲೋಕಹಿತವಾದ ಹದ ಕೆಡುತ್ತದೆ.

## ಲೋಕಸಂಗ್ರಹ

ಮುಕ್ತಿಯನ್ನು ಸಾಧಿಸಬೇಕೆನ್ನುವವರೂ ಲೋಕಹಿತ, ಲೋಕಸಂಗ್ರಹ ಮಾಡಬೇಕು. ಹಾಗೆ ಮಾಡದಂದು ಅವರಿಗೆ ಮುಕ್ತಿಗೆ ಅಧಿಕಾರವಿಲ್ಲ ಎಂಬ ಮಟ್ಟಿಗೆ ಮಾತು ನಮ್ಮಲ್ಲಿ ಬೆಳೆಯಿತು. ತಮ್ಮ ಮುಕ್ತಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ ಹೋದವರಿಗೆ ಪುನಃ ಲೋಕದ ನಡುವೆ ಬಂದು ಧರ್ಮ ಕರ್ಮ ಆಚಾರಗಳನ್ನು ತಿಳಿಸುವ ನಡತೆ ಕಟ್ಟಿಕೊಳ್ಳುತ್ತಿತ್ತು. ಹೀಗಿದ್ದರೂ ಪ್ರಶ್ನೆ ಉಳಿಯಿತೇ. ನಾನೇಕೆ ಒಳ್ಳೆಯವನಾಗಿರಬೇಕು?-ಎಂಬುದಕ್ಕೆ ಉತ್ತರ ಕಷ್ಟ. ನಾನು ಹಾಗಿಲ್ಲದಿದ್ದರೆ ನನ್ನ ಪರವಾಗಿ ಇತರರೂ ಹಾಗಿರಬೇಕಿಲ್ಲ. ಅವರು ನನಗೆ ಅಲ್ಲದುದನ್ನೂ ಕೆಟ್ಟದ್ದನ್ನೂ ಬಯಸಿದರೆ, ಮಾಡಿದರೆ ಅದರಿಂದ ನನಗೆ ಕಷ್ಟ, ನಷ್ಟ. ನಾನು ಆ ರೀತಿ ನಡೆದರೆ ಅವರಿಗೆ ಕಷ್ಟ, ನಷ್ಟ. ನಮ್ಮ ನಮ್ಮ ಕಷ್ಟ, ಪ್ರಭಾವ, ಐಶ್ವರ್ಯ, ಬುದ್ಧಿವಂತಿಕೆ ಎಷ್ಟು ಹೆಚ್ಚಾದರೆ, ಒಳ್ಳೆಯದು ಮಾಡುವ, ಕೆಟ್ಟದ್ದು ಮಾಡುವ ಶಕ್ತಿ ಅಷ್ಟಷ್ಟು ಹೆಚ್ಚಾಗುತ್ತದೆ. ಅಧಿಕಾರ ಪ್ರಭಾವ ಇರುವವರೆಗೆ ಇನ್ನೂ ಹೆಚ್ಚು ಅವಕಾಶ, ಆನುಕೂಲ್ಯ ಇರುತ್ತವೆ. ಎಲ್ಲಕ್ಕೂ ಮೇಲ್ಪಟ್ಟದ್ದು ಆತ್ಮಸಿದ್ಧಿ ಎಂದೂ ಧರ್ಮವನ್ನೂ ಪರಹಿತವನ್ನೂ ಸಾಧಿಸಿ ಕೊಳ್ಳುವುದೇ ಜೀವನದ ಗಮ್ಯ ಎಂದೂ ತಿಳಿದು, ಧರ್ಮಕರ್ಮಗಳಿಗೆ ಆ ತತ್ತ್ವ ಆಧಾರಭೂತ ಎಂದಾಗಲೂ ಆತ್ಮಸಾಧನೆಯಲ್ಲಿ ಸುತ್ತಲಿನ ವ್ಯವಹಾರ ಮಂಡಲದಲ್ಲಿ ತಾನೊಬ್ಬನಾಗಿರುವವರೆಗೂ ಆ ಎಲ್ಲದರ ಹಿತಸಾಧನೆಗೆ ಅವಿರೋಧವಾಗಿ ನಡೆಯ



ಬೇಕು; ಅದಕ್ಕೆ ಹಿತವಾಗಿ ಎಲ್ಲವನ್ನೂ ಸಾಧಿಸಬೇಕಾಗುತ್ತದೆ. ಧರ್ಮಕ್ಕೆ, ಹೊಣೆಗಾರಿಕೆಗೆ ಇದೇ ತಳಹದಿ. (The Basis of Moral Obligation.)

## ಪ್ರವೃತ್ತಿ

ಸಾಧಾರಣವಾಗಿ ಒಳ್ಳೆಯದಾವುದೆಂಬುದು ಎಲ್ಲರಿಗೂ ಆಯಾ ಆವರಣದಲ್ಲಿ ತಿಳಿದಿರುತ್ತದೆ. ಆದರೂ ಪ್ರವೃತ್ತಿ ಆ ಕಡೆಗೆ ಹರಡದಿರುವುದು ಸಾಮಾನ್ಯ. ಇದನ್ನು ಎಲ್ಲರೂ ಬಲ್ಲರು. ಒಳ್ಳೆಯದನ್ನು ಮಾಡದಿರುವುದಕ್ಕೆ ನೂರು ಕುಂಟು ನೆಪ, ಕಳ್ಳ ಸಬೂಬುಗಳನ್ನು ಹೇಳಿ ತಪ್ಪಿಸಿಕೊಳ್ಳುತ್ತೇವೆ. ಧರ್ಮ, ಅಧರ್ಮ-ವಿವೇಕ, ನೀತಿಯ ಪ್ರಪಂಚದ್ದಾದರೆ, ದೈವಕ್ಕೆ ಸಂಬಂಧಪಟ್ಟ ಮತಾಚಾರದಲ್ಲಿ ಅದು ಪಾಪ ಪುಣ್ಯಗಳ ನೆಲೆಯನ್ನು ಮುಟ್ಟುತ್ತದೆ. ದೈವದಲ್ಲಿ ಯಾವ ನಂಬಿಕೆಯೂ ಇಲ್ಲದವರೂ ಧರ್ಮಿಷ್ಠರಾಗಿ ನೀತಿಯುತರಾಗಿ ನಡೆದುಕೊಳ್ಳಬಹುದು-ದೇವರನ್ನು ಮೂದಲಿಸಿ, ಅವನಿಗೆ ಸವಾಲು ಹಾಕಿ. ಮತಭಕ್ತಿ, ಶ್ರದ್ಧೆ, ಆಚಾರಶೀಲತೆ ಉಳ್ಳವರು ಅಧರ್ಮದಲ್ಲಿ ಅನೀತಿಯಲ್ಲಿ ನಡೆದುಕೊಳ್ಳಬಲ್ಲರೆಂಬುದನ್ನು ಸರ್ವತ್ರ ಕಾಣಬಹುದು - ದೇವಾಲಯ, ಉತ್ಸವ, ಸಮಾರಾಧನೆ, ದಾನಧರ್ಮ ಇವುಗಳ ಹಿಂದೆ. ಆದರೆ ಸಾರತಃ ಈ ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಈ ಸಂಬಂಧದಲ್ಲಿ ಎರಡು ಪ್ರಾಚೀನ ವಾಕ್ಯಗಳಿವೆ: 'ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ. ಇಂಥ ಪಾಡು ವ್ಯಸನಕರವಾದುದು. ವಿವೇಕ ಇದ್ದು ಈ ನೋವು ತಿನ್ನುವುದು ಒಂದು ಸ್ಥಿತಿ. ಇಂಥಲ್ಲಿನ ನಡತೆ, ಮೌಲ್ಯಗಣನೆ ಒಂದು ರೀತಿ. ಇಲ್ಲಿ ಹೃದಯದಲ್ಲಿ ಮಾರ್ದವ, ಆರ್ದ್ರತೆಯಾದರೂ ಇದೆ. ಧರ್ಮವಾಗಲಿ ವಿವೇಕವಾಗಲಿ ಕಾರ್ಯಕಾರಿಯಾಗದಿರುವಾಗಲೂ ಇದ್ದೂ ಇಲ್ಲದ ಚಿತ್ತವ್ಯಾಪಾರ, ನಡವಳಿಕೆ ಉಂಟು. ಈ ಬಗೆಗೆ ಯಾವ ಚಿಂತೆಯೂ ಇಲ್ಲದ ಮಹಾನುಭಾವರ ಸಂಖ್ಯೆಯೇ ಲೋಕದ ಬಹುಭಾಗ. ಅಂಥಲ್ಲಿ ನೀತಿ ಎಂಬುದರ ಗಂಧಗಾಳಿಯೂ ಪ್ರಕಾಶಕ್ಕೆ ಬರುವುದಿಲ್ಲ. ಜನ ಹೇಗೆ ನಡೆದರೂ ನಡೆದರು. ಮಾನವನ ಸ್ವಭಾವ ಸಹಜ ಎಂಬುದು ಸಾಧಿತವಾಗಬಯಸುವುದು.

ಇನ್ನೊಂದು ವಾಕ್ಯ: 'ಧರ್ಮಸ್ಯ ಫಲಮಿಚ್ಛಂತಿ, ಧರ್ಮಂ ನೇಚ್ಛಂತಿ ಮಾನವಾಃ ನ ಪಾಪಫಲಮಿಚ್ಛಂತಿ, ಪಾಪಂ ಕುರ್ವಂತಿ ಯತ್ನತಃ' ಎಂಬುದು ಸಾಮಾನ್ಯ ಸೂತ್ರಾಂಶದಲ್ಲಿ ನಡತೆಯ ಪರಿಣಾಮ, ವಿಪರಿಣಾಮ ಎರಡೂ ಕಾಣುತ್ತದೆ. ಧರ್ಮದ ಫಲ ಬೇಕು, ಧರ್ಮಕಾರ್ಯ ಮಾಡುವುದಿಲ್ಲ; ಪಾಪದ ಫಲ ಬೇಡ, ಯತ್ನಪೂರ್ವಕವಾಗಿ ಪಾಪ ಮಾಡುತ್ತಾರೆ. ಲೋಕಚರಿತ್ರೆಯಲ್ಲಿ ಇದು ದಿನಾ ಕಂಡುದು. ಇಷ್ಟದ, ತತ್ತ್ವದ ಒಂದು ಮುಖ ಇಲ್ಲಿದೆ. ನಡತೆ ಬೇರೆ ಕಡೆಗೆ ನಡಸುತ್ತದೆ. ಅಲ್ಲಿ ಬಾರದ ಪ್ರಯೋಜನ, ಫಲಸಿದ್ಧಿ ಈ ಬಗೆಯ ನಡತೆಯಿಂದ ಬರುವುದಾದ್ದರಿಂದ. ಬದುಕಿನಲ್ಲಿ ನೆಲಸು ಹೀಗಿರುವಾಗ ಬೆಲೆಗಳು ಕಲಸಿಕೊಳ್ಳುತ್ತವೆ. ಯಾವುದು ಬೆಲೆ, ಯಾವುದಲ್ಲ ಎಂಬುದು 'ನದೀ ಕೂಲ ಪಂಕಮಿವ' ಎಂಬಂತೆ ಕಳ್ಳಹುದುಲಲ್ಲಿ ಹೂತುಹೋಗುವಂತೆ

ಇರುತ್ತದೆ ಪರಿಸ್ಥಿತಿ. ನಾವು ಸಾಮಾನ್ಯವಾಗಿ ಇಂಥುದನ್ನು ಗುರುತಿಸಬೇಕಷ್ಟೇ ಅಲ್ಲ, ಮನಸ್ಸಿನಲ್ಲಿಟ್ಟುಕೊಂಡೇ ಇರಬೇಕಾಗುತ್ತದೆ, - ಮೌಲ್ಯ ನಿರ್ಣಯಗಳನ್ನು ಮಾಡಿ, ಬಲಾಬಲಗಳನ್ನು ವ್ಯವಹಾರದಲ್ಲಿ ನಿಶ್ಚಯ ಮಾಡಬೇಕಾಗಿರುವಾಗ. ಇಲ್ಲಿ ನೀತಿ-ಅನೀತಿ ಗಣನೆಗೆ ಬಾರವು. ಬೇರೆ ಬೇರೆ ಜನವರ್ಗಗಳವರೂ ಬಣಗಳವರೂ ವ್ಯವಹಾರ ಜೀವನದಲ್ಲಿ ಬೇರೆ ಬೇರೆ ಸರಿ, ತಪ್ಪು ಎನ್ನುತ್ತಿರುವಾಗ, ಒಂದು ಬಣದವರ ಸರಿ ಇನ್ನೊಬ್ಬರಿಗೆ ತಪ್ಪಾಗುತ್ತದೆ. ಕಾದಾಟ, ಪರಸ್ಪರ ನಿರಸನ ಬರುತ್ತವೆ. ಒಂದು ಕಾಲದಲ್ಲಿ ಸರಿ, ಸಭ್ಯ ಎನ್ನಿಸಿದುದು ಇನ್ನೊಂದು ಕಾಲದಲ್ಲಿ ಸುತರಾಂ ಅಗ್ರಾಹ್ಯವಾಗಬಹುದು; ಇಂದು ಯಜ್ಞ, ಸತೀ, ಅಂತ್ಯಜ ವಿಭೇದ ಇದ್ದಂತೆ. ಇಂಥಲ್ಲಿ ಯಾವುದು ಸರಿ, ಏಕೆ ಸರಿ, ಏಕೆ ಅಗ್ರಾಹ್ಯ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ. ಆದ್ದರಿಂದ ನಡವಳಿಕೆಯಲ್ಲಿ ವ್ಯತ್ಯಾಸ ಉಂಟಾಗಬಲ್ಲದು.

ಒಂದೊಂದು ಸಮಯವೂ ಬೇರೆ ಬೇರೆ ದಾರಿ ತೋರಿಸಬಹುದು. ನಡುವೆ ಕೋಟಲೆ, ಘರ್ಷಣೆ ಬರಬಹುದು. ಯಾವುದನ್ನು ಮೇಲ್ತರದ ವರ್ತನೆ ಎಂದು ಕೊಂಡಿರುತ್ತೇವೊ ಅದರ ಮೊನೆ, ತೀವ್ರತೆ, ತುಂಬು ಕೆಟ್ಟು ಅವು ಸವೆದು ಹೋದಂತಾಗಬಹುದು-ಜಡತೆ ಒಂದು ಬಂದು. "Lest one good custom should corrupt the world" ಎಂಬ ಮಾತಿದೆ. ಒಳ್ಳೆಯ ಆಚಾರ ನಡವಳಿಕೆ ಎಂಬುದು ಸವೆದು, ಒಣ ಮರ್ಯಾದೆಯ ಅಥವಾ ಅರ್ಥವಿಲ್ಲದ ಆಚಾರ, ಮಡಿ ಆಗಿ ಅದರ ಗುಣ ಧಾತು ಕೆಡಬಲ್ಲದು; ಇಲ್ಲವೇ, ಒಳ್ಳೆಯದು ಎಂಬುದು ಅದಕ್ಕಿಂತ ಮೇಲ್ತರದ್ದು, ಉತ್ತಮವಾದ್ದು ಎಂಬುದಕ್ಕೆ ಅಡ್ಡಿಯಾಗಿ ನಿಲ್ಲಬಹುದು. ಚೆನ್ನಾಗಿ ನಡೆಯಲು ಕಾಲು ಗಟ್ಟಿಯಾಗಿ ಇರುವಾಗ ವಾಹನವೇಕೆ? ಎತ್ತಿನ ಗಾಡಿ ಇರುವಾಗ ಕುದುರೆಯ ಗಾಡಿ ಏಕೆ? ವಿಮಾನ ಇರುವಾಗ ಮೋಟರ್, ರೈಲು ಇವುಗಳಿಗೆ ಏಕೆ ಬೆಲೆ? ಅವುಗಳ ಬೆಳವಣಿಗೆಗೆ ಇವು ಅಡ್ಡಿ ಆಗಬಲ್ಲವು. ತಕ್ಕಮಟ್ಟಿಗೆ ನಮಗೆ ಬೇಕಾದ ಪ್ರಯೋಜನವನ್ನು ಒಂದು ವ್ಯವಸ್ಥೆ ಮಾಡಿಕೊಡುತ್ತಿರುವಾಗ, ಅದಕ್ಕಿಂತ ನಯವಾದ ಉತ್ತಮವಾದ ವ್ಯವಹಾರವನ್ನು ನಾವು ರೂಪಿಸಿಕೊಳ್ಳಬೇಕೇಕೆ? ಇರುವುದು ಸಾಲದೆ? ಎಂಬ ಆಲೋಚನೆ, ವಾದ ಏಳುತ್ತವೆ. ಅದೇ ಮುನ್ನಡೆ, ನಾಗರಿಕತೆಯೆಂಬ ಎಲ್ಲಕ್ಕೂ ಅಡ್ಡಿಯಾದೀತು. ಮುನ್ನಡೆ, ನಾಗರಿಕತೆ ಬೇಕಿಲ್ಲ ಎಂಬ ಮಾತು ಬೇರೆ. ಮಾರಿ ಮಸಣಿ ಪೂಜೆಗಳಿಂದ ಜನಗಳಿಗೆ ತೃಪ್ತಿ ಬರುತ್ತಿರುವಾಗ ಶುಚಿಪೂಜೆ, ಮಾನಸಪೂಜೆ, ಮುಂತಾದ ಮೇಲ್ತರದ ಪ್ರಸ್ತಾವಗಳಿಗೂ ಹೊಸ ತಿಳಿವಿನ ಚಿಕಿತ್ಸೆ ಆರೋಗ್ಯ ವ್ಯವಸ್ಥೆಗೂ ಎಡೆಯಿಲ್ಲದೆ ಹೋಗುತ್ತದೆ.

> ಯೋ ಯೋ ಯಾಂ ಯಾಂ ತನುಂ ಭಕ್ತಃ
> ಶ್ರದ್ಧಯಾರ್ಚಿತುಮಿಚ್ಛತಿ
> ತಸ್ಯ ತಸ್ಯಾಚಲಾಂ ಶ್ರದ್ಧಾಂ
> ತಾಮೇವ ವಿದಧಾಮ್ಯಹಂ



ಎಂಬ ವಾಕ್ಯಕ್ಕೆ ಇಲ್ಲಿ ಎಚ್ಚರಿಕೆಯಿಂದ ಅನ್ವಯುವನ್ನೂ ಸಾರ್ಥಕ್ಯವನ್ನೂ ಹೇಳಬೇಕಾಗುತ್ತದೆ.

ಮೂರು ಮಕ್ಕಳು ಸಾಕು ನಿಮ್ಮ ಆರ್ಥಿಕ ಮಟ್ಟಕ್ಕೆ; ಮಕ್ಕಳು ಮರಿಯ ಪೋಷಣೆ ವಿದ್ಯಾಭ್ಯಾಸಗಳ ಸಾಧನೆಗೆ; ತಾಯ ಆರೋಗ್ಯಕ್ಕೆ; ದೇಶದ ಆರ್ಥಿಕ ಸುರಚನೆಗೆ ಎಂದಾಗ, ಈ ಜನಕ್ಕೆ ಕೃಷ್ಣ ಹುಟ್ಟುವುದು ಬೇಕಿಲ್ಲ ಎಂದು ಆ ಯತ್ನವನ್ನು ಕುರಿತು ಹಲ್ಕಿರಿವ ವೃತ್ತಿ ಪ್ರತಿಬಂಧಕವಾಗಬಲ್ಲದು. ಇಲ್ಲಿ ಮತದ ಯಾವುದೊ ನಿದರ್ಶನ ಹುಟ್ಟಿ ಬೆಲೆ ಕೆಡುತ್ತದೆ. ಇತ್ತ, ಈ ಕಡೆ ಉತ್ತಮವೆಂಬುದನ್ನು ಸಾಧಿಸುತ್ತೇವೆನ್ನುತ್ತ ಕಡಮೆ ಎನ್ನುವುದನ್ನು ಅಲ್ಲಗಳೆಯಬಹುದು. ಇತೋ ಭ್ರಷ್ಟಃ ತತೋ ಭ್ರಷ್ಟಃ ಎಂಬ ಸ್ಥಿತಿ ಕಾಣಿಸದೆ ಇಲ್ಲ. ಆಗ ಉತ್ತಮ ಎಂಬುದು ಸಾಮಾನ್ಯ ಒಳ್ಳೆಯದು ಎನ್ನುವುದಕ್ಕೆ ಅಡಚಣೆಯಾಗಿ ವೈರಿಯಾಗಿ ನಿಲ್ಲಬಹುದು. ಬ್ರೌನಿಂಗ್ ಕವಿಯ "ವೈಯಾಕರಣಿಯ ಮಸಣಯಾತ್ರೆ" ಯಲ್ಲಿ ಬೆಳಸುವ ಗುಣಪ್ರಶಂಸೆಯ ಹಾಗೆ; ಅವನ ಹಿರಿಮೆಗೆ ಕಾಣಿಕೆ ಕೊಡುವ ಉತ್ಸಾಹದಲ್ಲಿ ಕಡಮೆಯ ಪ್ರಯೋಜನಗಳ ದೃಷ್ಟಿ ವಿಫಲ. ಆದರೆ ಎಷ್ಟು ಚೆಲು! ದೊಡ್ಡ ದೇಶದಲ್ಲಿ ಹಲವು ಮಟ್ಟಗಳ ಜನ, ಹಲವು ಪ್ರಾಂತ ಸಂಪ್ರದಾಯಗಳ ಹಲವು ಪ್ರಯೋಜನಾಕಾಂಕ್ಷೆಗಳ ಜನ ಜೊತೆಗೆ ಬದುಕಬೇಕಿರುವಾಗ, ಒಬ್ಬರಿಗೆ ಒಳ್ಳೆಯದೆನ್ನುವುದು ಇನ್ನೊಬ್ಬರಿಗೆ ಅಹಿತವೂ ನಷ್ಟವೂ ಆಗಬಹುದು. ಪಟ್ಟಣಗಳಲ್ಲಿ ಅತಿ ರೂಕ್ಷ ಜನರಿಂದ ಹಿಡಿದು ಅತಿ ನವುರು ಸಂಸ್ಕಾರವಿರುವ ಅತ್ಯಾಧುನಿಕ ಮನಸ್ಸುಳ್ಳವರ ವರೆಗೂ ಜನ ಇರುತ್ತಾರೆ. ಒಂದು ರೀತಿ ಪಟ್ಟಣಗಳು ಒಂದು ದೇಶದ ಅಡಕವಾದ ಸಂಗ್ರಹವಾದ ಕೈಪಿಡಿಗಳು: ಇಂಥ ಒಂದು ಜೀವಕೋಶ; ಅವು ನಾಡ ಜೀವನದ ಪ್ರತೀಕಗಳು.

## ಯಾರ ಒಳ್ಳೆಯದು

ಇಲ್ಲಿ ಒಳ್ಳೆಯದನ್ನು ಸಾಧಿಸಬೇಕೆಂದಾಗ ಯಾರ ಯಾವ ಗುಂಪಿನ ಒಳ್ಳೆಯದು? ಎಂಬುದು ಪ್ರಶ್ನೆ. ಸೂಕ್ಷ್ಮಗಳಿಗೆ ಹೋಗದೆ ಸ್ಥೂಲವಾದ ಒಂದನ್ನು ಮಾತ್ರ ಏಕದೇಶವಾಗಿ ಆರಿಸಿಕೊಳ್ಳೋಣ. ಪರಸ್ಪರ ವಿರುದ್ಧ ಪ್ರಯೋಜನಗಳಿಗೆ ಎಡೆಯಾದ ವರ್ಗಗಳನ್ನು ನೋಡಿ: ಕೆಲಸಗಾರರ ಹಿತ ಒಳ್ಳೆಯದೊ, ಮಾಲಕರ ಹಿತ ಒಳ್ಳೆಯದೊ? ಮನೆಗಳ ಒಡೆಯರದೊ, ಬಾಡಿಗೆಯವರದೊ? ಹಣ ಸಾಲ ಕೊಡುವ ಧನಿಕರದೊ, ಸಾಲ ತೆಗೆದುಕೊಂಡು ಬಡ್ಡಿ ತೆರುವ ಸಾಲಗಾರರದೊ? ಅಧಿಕಾರಿಗಳದೊ, ನೌಕರರದೊ? ಆಳರಸರದೊ, ಪ್ರಜೆಗಳದೊ? ಉತ್ಪತ್ತಿಕಾರರದೊ, ತಿನ್ನುವವರದೊ? ರಾಜ್ಯಗಳದೊ, ಕೇಂದ್ರಗಳದೊ? ಇತ್ಯಾದಿ. ಎರಡೂ ಹಿತಗಳೇ. ಇಂಥಲ್ಲಿ ಯಾರದು ಒಂದು ಮಾತ್ರ ದೇಶದ ಅಥವಾ ರಾಷ್ಟ್ರದ ಏಕಮಾತ್ರ ಹಿತವಾದೀತು? ಇಲ್ಲಿ ತೂಲನ ಹಿತಪ್ರಮಾಣ, ಮೀನಮೇಷ ವ್ಯಾಪ್ತಿ, ಅವಸರಗಳು, ಮೌಲ್ಯಗಳ ಎಣಿಕೆ ತುಂಬಾ ಎಚ್ಚರಿಕೆಯಿಂದ ನಡೆಯಬೇಕು. ಇಂಥಲ್ಲಿ-ಶಾಂತಿಕಾಲಗಳಲ್ಲಿ ಒಂದು ರೀತಿಯದಾದರೆ, ಯುದ್ಧಾದಿ ಕೋಟಲೆಗಳಲ್ಲಿ ಅದು ಇನ್ನೂ ಉಲ್ಬಣಕ್ಕೆ ಬರುತ್ತದೆ. ವಿಭೀಷಣನಿಗೆ, ರಸ್ಸೆಲ್

ಮುಂತಾದವರಿಗೆ ಅವರು ಎಷ್ಟೇ ಧರ್ಮಿಷ್ಠರಾಗಲಿ, ಯುದ್ಧ ಹೊತ್ತಿ ಉರಿಯುತ್ತಿರುವಾಗ ಸ್ವತಂತ್ರವಾಗಿ ತಮ್ಮ ರಾಜ್ಯಗಳಲ್ಲಿ ಸ್ಥಾನವಿಲ್ಲ. ಇಲ್ಲಿ ಧರ್ಮಾಧರ್ಮ ವಿವೇಚನೆ ಲೆಕ್ಕಕ್ಕೆ ಬರುವುದಿಲ್ಲ. ಸತ್ಯವಲ್ಲದುದನ್ನು ಸತ್ಯವೆಂದೂ ಧರ್ಮವಲ್ಲದುದನ್ನು ಧರ್ಮವೆಂದೂ ಪಕ್ಷಗಳ, ವರ್ಗಗಳ ನಾಯಕರು ಪ್ರಬಲವಾಗಿ 8-10 ದಿನಪತ್ರಿಕೆ-ವಾರಪತ್ರಿಕೆಗಳನ್ನು ಕೈಯಲ್ಲಿಟ್ಟುಕೊಂಡು, ತಿಂಗಳಿಗೆ ಸಾವಿರಾರು ರೂಪಾಯಿ ಸಂಬಳ ಕೊಟ್ಟು, ನಾಡಿನ ಅತಿ ಮೇಧಾವಿ ಜನರನ್ನು ತಮ್ಮ ದೃಷ್ಟಿಗೇ ಪ್ರಯೋಜನಕ್ಕೇ ಅಭಿಪ್ರಾಯ ಸಾಧನೆಗೇ ದುಡಿಸಿಕೊಳ್ಳುತ್ತಿರುತ್ತಾರೆ. ತಾವೂ ತಮ್ಮ ಪತ್ರಿಕೆಗಳವರೂ ನುಡಿಯುತ್ತಿರುವುದು ಮಾತ್ರ ದೇಶಹಿತ, ಧರ್ಮ, ನೀತಿ ಎಂದು ತುಂಬ ಪ್ರೌಢ ರೀತಿಯಲ್ಲಿ ಅರಿಯದ ಜನದ ಮನಸ್ಸು ಒಲಿಸುವ ರೀತಿ ಬೆಳಿಗ್ಗೆ ಮಧ್ಯಾಹ್ನ ಸಂಜೆ ನುಡಿಯುತ್ತಿದ್ದರೆ, ಇಂಥಲ್ಲಿ ಈ ಪತ್ರಿಕೆಗಳವರು ರೂಪಿಸುವುದೇ ಜನಾಭಿಪ್ರಾಯ, ಇದೇ ಸರಿ, ಇದೇ ಧರ್ಮ, ಇದೇ ನ್ಯಾಯ ಎಂಬ ಅಭಿಪ್ರಾಯ ರೂಪಗೊಳ್ಳುವುದಕ್ಕೂ ಬಲಿಯುವುದಕ್ಕೂ ಅವಕಾಶ ವಾಗುತ್ತದೆ. ಪತ್ರಿಕೆಗಳವರೊ: ತಮ್ಮ ಹಿಂದೆ ನಿಂತ ಧನಿಕ ಅಥವಾ ಶಕ್ತಿವರ್ಗಗಳ ಅಂಕೆಗೂ ಪ್ರಭಾವಕ್ಕೂ ಪ್ರಚೋದನೆಗಳಿಗೂ ಆಮಿಷಗಳಿಗೂ ಒಳಪಡುವವರೇ. ಇಲ್ಲಿ ಬೆಲೆಗಳು ಇನ್ನಷ್ಟು ವಿಚಿತ್ರವಾಗುತ್ತವೆ. ದೇಶದ ನೂರು ಪೇಪರುಗಳನ್ನು-ಟೈಮ್ಸ್, ಹರ್ಸ್ಟ್ ಕಂಪನಿಯಂತೆ, ಥಾಮಸನ್ ಅಂತೆ-ದೈತ್ಯ ಧನಿಕರು ತಮ್ಮ ಕೈಯಲ್ಲಿ ಇಟ್ಟುಕೊಂಡು ವಾರ್ತೆಯನ್ನು ಹರಡುತ್ತಿರುವಾಗಲೊ, ಸರ್ಕಾರದ ಅಥವಾ ಖಾಸಗಿ ಆಕಾಶವಾಣಿಗಳೂ ದೂರಚಿತ್ರದರ್ಶನಿಗಳೂ ಪ್ರಚಾರಗಳನ್ನು ನಡಸುತ್ತಿರುವಾಗಲೊ ದೇಶದ ಜನ ದಿಗ್ಭ್ರಾಂತರಾಗುವರು. ಹೀಗೆ ಹಾಗೆ ಸೋಲುವರು. ನಿಜವಾದ ಧರ್ಮಾಧರ್ಮ ವಿವೇಕವನ್ನು ಕಳೆದುಕೊಳ್ಳುವರು. ಎಲ್ಲರಿಗೂ ಸ್ವತಂತ್ರವಾಗಿ ಯೋಚಿಸುವ ಶಕ್ತಿ ಇರುತ್ತದೆಯೊ ?.... ಅಥವಾ ಯೋಚಿಸುವವರೆಲ್ಲ ಧರ್ಮಿಷ್ಠರೊ ?

## ವ್ಯಷ್ಟಿ–ಸಮಷ್ಟಿ

ವ್ಯಷ್ಟಿಗೂ ಸಮಷ್ಟಿಗೂ ಘರ್ಷಣೆ ಉಂಟಾದಾಗ ಯಾವುದಕ್ಕೆ ಬೆಲೆ ಬರಬೇಕು ? ಒಟ್ಟು ಸಮಾಜದ ಹಿತವೆ? ಅಂಗ, ಅಂಶ ಹಿತವೆ? ಎಂಬುದನ್ನು ಪರ್ಯಾಯವಾಗಿ ಹಿಂದೆ ಆಗಲೇ ಹೇಳಿದೆ. ಭಾಗಗಳ ಅಥವಾ ಅಂಗಗಳ ಹಿತವನ್ನೂ ಒಟ್ಟಿನ ಹಿತವನ್ನೂ ಒಟ್ಟಿಗೆ ಹೊಂದಿಸಿ ಸಮರಸದಲ್ಲಿ ನಡಸಿಕೊಂಡು ಹೋಗುವುದು ಕಷ್ಟ. ಒಂದೊಂದು ಅಂಶಕ್ಕೂ ಪ್ರತ್ಯೇಕವಾಗಿ ಬೆಲೆ ಕಟ್ಟಿ ಇವುಗಳಲ್ಲಿ ಯಾವ ಒಟ್ಟು ನಡತೆ ಹೆಚ್ಚು ಅಂಗಗಳಿಗೆ ಹಿತ ಉಂಟುಮಾಡುತ್ತದೆ ಎಂಬುದನ್ನು ನಿರ್ಣಯಿಸಬೇಕು. ಒಳ್ಳೆಯದರ ಒಳ್ಳೆಯತನ ಎಂಬುದು ಏತರಲ್ಲಿದೆ? - ಎಂಬ ಪರಿಶೀಲನೆ ಕ್ಲಿಷ್ಟ. ಅನೇಕ ವೇಳೆ ಭಯದಿಂದ ಜನ ಒಳ್ಳೆಯವರಾಗುತ್ತಾರೆ: ಮನೆಯಿಂದ ಓಡಿಸುತ್ತಾರೆ, ದಿಕ್ಕಿಲ್ಲದೆ ಅನ್ನವಿಲ್ಲದೆ ಆಗುತ್ತದೆ, ಇನ್ಯಾರೊ ಎಲುಬು ಮುರಿಯುತ್ತಾರೆ, ಸರ್ಕಾರದ ಶಿಕ್ಷೆಗೆ ಈಡಾಗ ಬೇಕಾಗುತ್ತದೆ, ಕಾಯಿಲೆ ಬರುತ್ತದೆ, ಸ್ವರ್ಗದಲ್ಲಿ ಮೋಕ್ಷ ಬಾರದು, ನರಕಕ್ಕೆ



ಬೀಳಬೇಕಾದೀತು, ಕಂಡ ನಾಲ್ಕು ಜನ ಹೇಸುತ್ತಾರೆ, ದೂರವಿಡುತ್ತಾರೆ, ಸರಿಕರಲ್ಲಿ ಸ್ಥಾನ ದೊರೆಯುವುದಿಲ್ಲ-ಮುಂತಾದ ಭಯಗಳು ಅನೇಕರ ಒಳ್ಳೆಯತನಕ್ಕೆ ಕಾರಣ. ನೀತಿಶಾಸ್ತ್ರದಲ್ಲಿ, ಸಾಮಾಜಿಕ ಧಾರ್ಮಿಕ ಆರ್ಥಿಕ ರಾಜಕೀಯ ಮತಕ್ಕೂ ಅಧ್ಯಾತ್ಮಕ್ಕೂ ಸಂಬಂಧಿಸಿದ ಅನೇಕ ಕಾರಣಗಳನ್ನು - ಶ್ರುತಿ, ಸ್ಮೃತಿ, ದೇಶ, ಕುಲ, ಮನೆ, ಕಾಲದ ಕಾರಣ ಹೇಳಿ, ಕೊಟ್ಟು ಸ್ಥಾಪಿಸುತ್ತಾರೆ, - ಆತ್ಮತುಷ್ಟಿಗೆ ಕಡೆಯ ಗೌರವವನ್ನು ತೊಡಿಸಿ. ನಡತೆ ಇಂಥಲ್ಲಿ ಇಷ್ಟೇ ಸರಿ ಎಂಬುದನ್ನು ಪ್ರತಿಯೊಂದು ಸನ್ನಿವೇಶದಲ್ಲಿ ಚರಿತ್ರೆಯನ್ನೂ ವ್ಯಕ್ತಿ ಅಂಶಗಳ ಬಲಾಬಲಗಳನ್ನೂ ಸಾಧಿಸಲು ಬಯಸಿರುವ ಪರಿಣಾಮಗಳ ಒಳಿತು ಕೆಡಕುಗಳ ಒಟ್ಟು ಆವರಣವನ್ನೂ ಮನಸ್ಸಿನಲ್ಲಿಟ್ಟುಕೊಂಡು ಅಳೆಯಬೇಕಾಗುತ್ತದೆ. ಒಳ್ಳೆಯನಾಗಿರುವುದು ಒಳ್ಳೆಯದು; ಒಳ್ಳೆಯದರಲ್ಲಿ ನಂಬಿಕೆಯನ್ನು ಕಳೆದುಕೊಂಡರೆ ಲೋಕಕ್ಕೆ ಗತಿಯಿಲ್ಲ ಎಂಬ ಮಾತುಂಟು ನಿಜ. ಇಂಥ ಮಾತುಗಳನ್ನು ಹೇಳಿಕೊಂಡು ತೀರ್ಮಾನಕ್ಕೆ ಬಂದೆವೆಂದೂ ಅಲ್ಲಿಂದ ಮುಂದಿನ ಯೋಚನೆ, ಕ್ರಿಯಾವಂತ ಬಾಳು ಅನಗತ್ಯವೆಂದೂ ನಮ್ಮನ್ನು ನಾವು ಇಂಥಲ್ಲಿ ಭ್ರಾಂತಿಗೊಳಿಸಿಕೊಳ್ಳುವ ಅವಕಾಶವುಂಟು. ಇಂಥವರಿಗೆ ಮುಕ್ತಿ ಶಕ್ಯ.

ಸಾಮಾಜಿಕ ಸಂಬಂಧಗಳಲ್ಲಿ ಇನ್ನೊಂದು ನೆಲಸಿದೆ. ನಾಲ್ಕೂ ಕಡೆ ನಿಟ್ಟಿಸಿ ನೋಡಿ, ಅಲ್ಲಿನ ಒಳಿತನ್ನೆಲ್ಲ ಸಂಗ್ರಹಿಸಿ ತೀರ್ಮಾನಗಳಿಗೆ ಬರುವುದು ಸರ್ವೋತ್ಕೃಷ್ಟ ವಿವೇಕ. ಅದು Sportsmanship ಕೂಡ ಹೌದು. ಇದನ್ನು ಗ್ರಹಿಸುವಲ್ಲಿ ಎದುರಿಗಿರುವ ಕಾರ್ಯಕ್ಕೆ ಅಡ್ಡಿ ಬರುತ್ತದೆ. ಕಾರ್ಯಪ್ರವೃತ್ತಿ ಚುರುಕಾಗಬೇಕಾಗಿರುವಾಗ ನುಗ್ಗುವ ಕಾಲು ಹಿಮ್ಮೆಟ್ಟುತ್ತದೆ; ಮಾಡುವ ಕೈ ತಡೆಯುತ್ತದೆ. ಏನಾದರೂ ನಿರ್ಣಯಕ್ಕೆಡೆ ಕೂಡ ಬರಬೇಕು-ಕಾರ್ಯ ಸಾಧನೆಯ ಅಗತ್ಯ ಅವಸರದ್ದು ಎಂಬಾಗ, ಧರ್ಮಜಡರಂತೆ ಮೀನಮೇಷ ಎಣಿಸುವುದೂ ಸಕಲ ಪರೀಕ್ಷಣ ದೃಷ್ಟಿಯಿಂದ ಎಲ್ಲವನ್ನೂ ತಡಮಾಡು ವುದೂ ಕೆಲಸ ಕೆಡಿಸಬಲ್ಲದು; ಸಾಧನೆಯನ್ನು ಕಸಿದುಕೊಳ್ಳಬಹುದು. ಅಥವಾ Too little, too late ಎಂಬ ನ್ಯೂನತೆ ಸೋಲಿಗೆ ಕಾರಣವಾಗಬಹುದು. ಭಾರತೀಯ ಚರಿತ್ರೆಯಲ್ಲಿ ಸ್ವಲ್ಪ ಮಟ್ಟಿಗೆ ಇಂಥ ಜಡತೆಗೆ ಉದಾಹರಣೆ ಯುಧಿಷ್ಠಿರ. ಆದರೆ ಕಾರ್ಯಪ್ರವೃತ್ತರಾಗುವಾಗ ಎಲ್ಲ ಕ್ರಿಯಾ ವ್ಯಾಪಾರಗಳ ಹಿಂದೆ ನೂರು ಸಂಗತಿಗಳಿವೆ; ಹಿತಾಹಿತಗಳಿವೆ. ದುಡುಕಬಾರದು ಎಂಬ ಚಿಂತನೆ ಜಾಗ್ರತವಾಗಿದ್ದರೆ ಕಾರ್ಯದ ಧರ್ಮತ್ವ ಗುಣವುಳ್ಳದ್ದಾಗುತ್ತದೆ. ಇನ್ನೊಂದು ಪಕ್ಷವನ್ನೂ ಅರ್ಥಮಾಡಿಕೊಳ್ಳಬೇಕು; ಅದಕ್ಕೂ ಬೆಲೆ ಕೊಡಬೇಕು. ನಮಗಿರುವ ಅಧಿಕಾರ, ಸ್ವಾತಂತ್ರ್ಯ, ಆಕಾಂಕ್ಷೆ ಅದಕ್ಕೂ ಇದೆ. ಉದಾಹರಣೆಗೆ: ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್, ಯೆಹೂದಿ, ಪಾರ್ಸಿ ಮುಂತಾದ ಸರ್ವರಿಗೂ ಅವಕಾಶ ಬೆಳೆಯುವಂತೆ ಪರಿಸ್ಥಿತಿ ರೂಪಗೊಳ್ಳಲಿ. ಎದುರಿರುವುದನ್ನೂ ಬೇರೆಯದನ್ನೂ ಅರ್ಥಮಾಡಿಕೊಳ್ಳೋಣ, ಕೇಳೋಣ, ನೋಡೋಣ, ಒಪ್ಪಿಸೋಣ, ಹೊಂದಿಸೋಣ ಎಂಬ ಬುದ್ಧಿ ಧರ್ಮಜೀವನದಲ್ಲಿ ಪರಮಕರ್ತವ್ಯವಾದರೆ ಒಳಿತು. ಇಂದಿನ ಪ್ರಪಂಚದಲ್ಲಿ ಒಳ್ಳೆಯವರು ದುರ್ಬಲರು,

ಶಕ್ತರಲ್ಲ, ಕಾರ್ಯದಕ್ಷರಲ್ಲ ಎಂಬ ನಂಬಿಕೆಯಿದೆ. ದಕ್ಷತೆ, ಸಾಧನಶಕ್ತಿ, ಬಲಿಷ್ಠ ಎಂಬವು ಜನ ಗೌರವಿಸುವ ಮೌಲ್ಯಗಳು. ಒಳ್ಳೆಯವನಿಗೆ ಸಪ್ಪೆ, ಕಾರ್ಯಕರ್ತನಲ್ಲ, ಕೇವಲ ಉಪದೇಶ ಪಟು, ಛಾತಿವಂತನಲ್ಲ ಎಂಬ ಅಪಪ್ರಥೆ ಇದೆ. ಮೌಲ್ಯಗಳನ್ನೂ ಈ ಪ್ರಪಂಚದ ಸಿಕ್ಕುಗಳನ್ನೂ ನವುರುಗಳನ್ನೂ ಮನಸ್ಸಿನಲ್ಲಿ ಇಟ್ಟುಕೊಂಡಿದ್ದರೆ ಮೇಲು.

* * *

ಮೊದಲನೆಯ ತ್ರಿವರ್ಗದಲ್ಲಿ ಉಳಿದಿರುವುದು 'ಸುಂದರ' ಎಂಬ ಮಾತು. ಈ ಪದದ ವ್ಯುತ್ಪತ್ತಿಯೇ ಹಾಗೂ ಹೀಗೂ ಇದೆ. ಸು-ನೃ-ನರ ಎಂಬುದು ಸುಂದರವಾಗಿದೆ ಎಂಬ ನಿಷ್ಪತ್ತಿ ಇದೆ; 'ಉದ್' 'ಉನ್‌ದ್'-ನೀರು, ಆರ್ದ್ರ ಎಂಬ ಮೂಲಾಂಶದಿಂದ ಕರಗಿರುವುದು, ನೀರು ಮಾಡುವುದು, ತೇವ ಮಾಡುವುದು ಎಂಬ ಅರ್ಥವನ್ನು ಡಿ.ವಿ.ಜಿ. ಸೂಚಿಸಿದ್ದರು. ಹೊರನೋಟಕ್ಕೆ ರೂಪ ಚೆನ್ನಾಗಿದ್ದರೆ ಚೆಲುವೆನ್ನುವುದು ರೂಢಿ. ಅಂಗರಚನೆ, ಪ್ರಮಾಣ, ಸಮಕಟ್ಟು, ಬಣ್ಣ, ಅಂಗಾಂಗಗಳ ರಚನೆ, ನಡೆ, ನಿಲವು, ಧ್ವನಿ, ವಿಲಾಸ, ಒಟ್ಟು ಆಕೃತಿ ಇವಕ್ಕೆ ತಕ್ಕಂತೆ ರೂಪದ ಚೆಲುವನ್ನು ಮೆಚ್ಚುವುದು ರೂಢಿ. ಒಂದು ಕಳೆಯೊ ವಿಲಾಸವೊ ಮಿರುಗೊ ಇದ್ದಾಗ ಅವು ಆಕೃತಿಯನ್ನು ಹೆಚ್ಚು ಜೀವಂತ ಮಾಡುತ್ತವೆ. ಇದಾಗಲೇ ಹೊರ ಲಕ್ಷಣದಲ್ಲಿ ಕಾಣದ ಸಂಗತಿ. ಸಾಲಂಕೃತವೆಂಬುದೊಂದಿದೆ; ನಿರಾಭರಣಸುಂದರ ಎಂಬುದಿದೆ. ಲಾವಣ್ಯ ಇದಕ್ಕೆ ಮೇಲ್ಪಟ್ಟ ಲಕ್ಷಣ. ಪ್ರಾಣಿಗಳಲ್ಲಿ, ಮನುಷ್ಯರಲ್ಲಿ ಇಂಥ ಲಕ್ಷಣಗಳು ಮೆರೆದರೆ ಕಲೆಯಲ್ಲಿ ಇದಕ್ಕೆ ಬೇರೆ ನೆಲಸು ಸೇರುತ್ತದೆ. ಏರು, ತಗ್ಗು, ದೂರ, ನೆಳಲು ಬೆಳಕು, ನೋಡುವ ಕಣ್ಣ ನಿಲುಕಿಂದ ಗ್ರಾಹ್ಯವಾಗುವ ತೋಲಗಳು, ವರ್ಣವಿನ್ಯಾಸ ರೇಖೆ ಸೇರಿದ, ಬೇರೆಯಾದ, ಹರಡಿರುವ, ಸಂಬಂಧಗೊಂಡ ರೀತಿ, ಒಂದು ಸಮವಾಯ ಶೋಭೆ, ಎಂದರೆ ಒಟ್ಟಂದ, ಒಟ್ಟು ಚಿತ್ರವೊ ಶಿಲ್ಪವೊ ಬಿಂಬಿಸುವ ಅಥವಾ ಪ್ರಕಾಶಪಡಿಸುವ ಅರ್ಥವಂತಿಕೆ, ಹೃದ್ಭಾವ ಎಲ್ಲವೂ ಎಣಿಕೆಗೆ ಬರುತ್ತವೆ. ಇನ್ನೇತಕ್ಕೊ ಸಂಕೇತ, ತಂತ್ರ ಕುಶಲತೆ, ಒಂದು ಶೈಲಿ ಅಥವಾ ಅಂಕಿತಗಳಿಗೆ ವಿಶೇಷ ಲಕ್ಷಣವಾಗುವ ಸಂಗತಿಗಳು, ಈ ಕೃತಿ ಇಂಥ ಕಾಲದ್ದೇ, ಇಂಥವರದೇ, ಈ ಶೈಲಿಯದೇ ಸರಿ ಮುಂತಾದ ಅಂಶಗಳು ಪ್ರಕಾಶಿಕೆಗಳಾಗುತ್ತವೆ. ಸಂಗೀತದಂತಹ ಕಲೆಯಲ್ಲಿ ನಾದವಿಲಾಸಕ್ಕೂ ಲಯವಿನ್ಯಾಸಕ್ಕೂ ನಾನಾ ಬಗೆಯ ಅರ್ಥ, ಭಾವಸಂಚಾರ ಸೇರುತ್ತವೆ. ನಾದ ಶಿಲ್ಪಗಳ ಅಭ್ಯಾಸ ಅನುಭವ ಜಾಣತನಗಳಿಂದ ಹೊಮ್ಮುವ ಕಲ್ಪನೆಗಳೊ ನುಣುಪೊ ಸೇರಿ ಹೊರಮೈ ಕಾಣಿಸಿದರೆ, ಗಾನದ ಭಾವವಿಲಾಸ ಇಷ್ಟೇ ಹೀಗೇ ಎಂದು ಹೇಳುವುದು ಕಷ್ಟ. ಸ್ವರ ವ್ಯಂಜನ ಸಂಯೋಗ ಅಥವಾ ಲಯದ ನಡೆ ವಿಲಾಸಗಳು ಕಂಡು ಒಳ ಯಾವುವೊ ಅರ್ಥವನ್ನು ಸೂಚಿಸುವುವು; ಹೊಮ್ಮಿಸುವುವು. ಸಂಗೀತದಲ್ಲಿ ಅರ್ಥಸೂಚನೆ, ಭಾವಸೂಚನೆ ಒಬ್ಬೊಬ್ಬರಿಗೆ ಒಂದೊಂದು. ಕೃತಿಯ ಅರ್ಥ ಒಂದನ್ನು ರೂಪಿಸಿದರೆ, ಅದನ್ನೇ ವಾದ್ಯದಲ್ಲಿ ನುಡಿಸಿದರೆ ಆ ಅರ್ಥಭಾವ ಹೊಮ್ಮದೆ ಇರಬಹುದು.



ಭಾವ, ಲಯ ಎಂಬ ಮಾತುಗಳಿಗೆ ಸಂಗೀತದ ಅರ್ಥ ಬೇರೆ, ಸಾಹಿತ್ಯದಲ್ಲಿ ಬೇರೆ ಎಂಬುದನ್ನು ಮರೆಯಬಾರದು. ಅಲ್ಲಿಗೂ ಒಂದು ರಾಗಾಲಾಪನೆಯ ಅರ್ಥವೇನು ಎಂದು ಕೇಳಿದರೆ ಯಾರೂ ಸೋತಾರು. ಸಂಗೀತದಲ್ಲಿ ಶುದ್ಧ ಭಾವ ಎನ್ನುವುದು ಇರುವುದಾದರೆ ಆಲಾಪನೆಯಲ್ಲಿನ ಅನುಭವ ಅಂಥದು. ಅನುಭವಿಸುವವನು ಮತ್ತು ಪ್ರೇಕ್ಷಕನ ಮನಸ್ಸಿನಲ್ಲಿ ಸಿದ್ಧವಾಗುವಂಥಾದ್ದು ರಸ ಎಂಬ ಮಾತು ರಾಗಾಲಾಪನದಂತಹ ಗಾನವಿಶೇಷದಲ್ಲಿ ಕಾಣುವ ಹಾಗೆ ಬೇರೆಲ್ಲಿಯೂ ಕಾಣದು. ತಿಳಿದವರಿಗೆ ಎಲ್ಲವೂ ವೇದ್ಯವೇ. ಆದರೂ ಆ ವೇದ್ಯವಾದುದು ಎಂಬುದು ನಾಲ್ವರಿಗೆ ನಾಲ್ಕಾಗಬಲ್ಲದು. ಬೇರೆ ಬೇರೆ ಮಟ್ಟದ ಜನರಿಗೆ ಬೇರೆ ಬೇರೆ ಮಟ್ಟದ ನಯದ ಅನುಭವವಾಗಬಲ್ಲದು. ಎಂದರೆ ಅರ್ಥ ಹಲವು ಮಟ್ಟಗಳಲ್ಲಿ ಗ್ರಾಹ್ಯ. ರಘುವಂಶಕಾವ್ಯದ ಪಾಠದಿಂದ ತೊಡಗುವ ಸಣ್ಣ ವಯಸ್ಸಿನ ವಿದ್ಯಾರ್ಥಿಗೆ ಆಗುವ ಅರ್ಥವೊಂದು; ಕಾವ್ಯದಲ್ಲಿ ಪರಿಣತನಾಗಿ ಜೀವನ ಸಂಸ್ಕಾರವನ್ನು ಪಡೆದವನಿಗೆ, ಲೋಕಾನುಭವದಲ್ಲಿ ನುರಿತು ಹಣ್ಣಾಗಿ 60-70 ವರ್ಷ ವಯಸ್ಸಿನ ರಸಿಕನಿಗೆ ಅದೇ ಕಾವ್ಯವನ್ನು ಓದಿದರೆ ಆಗುವ ಅರ್ಥ ಬೇರೆ; ಹೆಚ್ಚು ಆಳ, ಗಂಭೀರ. ಎಳಮಟ್ಟಕ್ಕೆ ಎಳಮಟ್ಟ ; ಹಣ್ತು ವಿವೇಕಕ್ಕೆ ಪಕ್ವವಾದ ಅರ್ಥ. ಉದಾ: 'ಭಾಗ್ಯಾಯತ್ತಂ ಅತಃಪರಂ ನಖಲು ವಾಚ್ಯಂ ವಧೂಬಂಧುಭಿಃ' ಎಂದು ಕಣ್ವರು ದುಷ್ಯಂತನಿಗೆ ಹೇಳಿಕಳಿಸುವಾಗ ನನಗೆ 40-45 ವರ್ಷಗಳ ಹಿಂದೆ ಆಗಿದ್ದ ಅರ್ಥ ಪ್ರಾಥಮಿಕ; ಸುಮಾರು, ವಾಚ್ಯಾರ್ಥ ಮಾತ್ರ. ವಯಸ್ಸಾಗಿರುವ ಈಗ ಅಲ್ಲಿನ ಜೀವನವಿವೇಕ ಬಹುದೊಡ್ಡ ಸಂಸ್ಕಾರದ್ದು. ಈಗ ಅದನ್ನು ನಾನು ಅರಿಯುವ ರೀತಿಯೇ ಬೇರೆ. ನುಡಿಯಲ್ಲಿ ಹಾಳತವಿದೆ, ಸಂಯಮವಿದೆ, 'ಅಸ್ಮಾನ್ ಸಾಧು ವಿಚಿನ್ತ್ಯ ಸಂಯಮಧನಾನ್' ಎಂದು ಕಣ್ವರು ಸ್ವನಿವೇದನೆ ಮಾಡಿಕೊಳ್ಳುತ್ತಾರೆ. ತಾವು ಕೋಪ ಮಾಡಿಕೊಳ್ಳರೆಂಬ ಸೂಚನೆ ಕೂಡ ಅಲ್ಲಿ ಅಡಗಿದೆ. ಸಮಾಜ ಜೀವನದಲ್ಲಿ ಯಾವುದನ್ನು ಬಯಸಬಹುದು, ಬಾರದು ಎಂಬ ಪ್ರಜ್ಞೆ, ಯಾವ ಸನ್ನಿವೇಶದಲ್ಲಿ, ಯಾರಿಗೆ ಹೇಳಿಕಳಿಸುತ್ತಿದೆ - ಎಂಬ ಯೋಚನೆ ಎಲ್ಲ ಸೇರಿ ರಸನಿಸ್ಯಂದಿಯಾಗಬಹುದಾದ ಸುಂದರ ಅರ್ಥ ಇಲ್ಲಿ ಧ್ವನಿತ. ಸತ್ಕವಿತೆಯ ಅರ್ಥವೆಂಬುದು ಅನೇಕ ಮಟ್ಟಗಳದು ಎಂಬುದನ್ನು ಜೀವನದ ಎಲ್ಲ ಸಂದರ್ಭಗಳಲ್ಲಿಯೂ ಹೇಳಬಹುದು. ಹೊರಗಣ್ಣಿಗೆ, ಬುದ್ಧಿಗೆ ಗೋಚರವಾಗುವುದಕ್ಕಿಂತ ಹೆಚ್ಚಾಗಿ ಆಯಾ ಸನ್ನಿವೇಶಗಳಲ್ಲಿ ಆಯಾ ವ್ಯಕ್ತಿಗಳಿಗೆ ಆಗುವ ಅರ್ಥ ಹೆಚ್ಚು. ಉದ್ದಿಷ್ಟವಾದ ಅರ್ಥ ಯಾವುದು? ಸ್ವೀಕೃತವಾದ ಅಥವಾ ಗ್ರಹಿಸಿದ ಅರ್ಥ ಯಾವುದು? ಇದರಿಂದ ಮನಸ್ಸಿನ ಮೇಲೆ ಆಗುವ ಪರಿಣಾಮ ಯಾವುದು? ಇವು ಯಾರಾರನ್ನು ಯಾವ ಕಾರ್ಯಕ್ಕೆ ನಡಸುತ್ತವೆ? ಅಥವಾ, ಆಂತರಿಕ ಭಾವಗಳಿಗೆ ಪೋಷಣೆ ಕೊಟ್ಟು ಆಳಮಾಡುತ್ತವೆಯೆ? ಎಂಬ ಸಂಗತಿ ಮುಖ್ಯ ಕಾವ್ಯದಲ್ಲಿ. ಯಾವುದು ಯಾರ ಮನಸ್ಸನ್ನು ಹೇಗೆ ಮೃದು ಮಾಡುತ್ತದೆ, ಆರ್ದ್ರ ಅಥವಾ ನಯ ಮಾಡುತ್ತದೆ - ಎಂಬುದು ವಿಶೇಷ ಸಂಗತಿ. ಆರ್ದ್ರವಾಗಿ ಮಾಡುವ ಕಲ್ಪನೆ, ಉಕ್ತಿ, ಕೃತಿ, ಕ್ರಿಯೆಗಳಿಂದೆಲ್ಲ ಈ ಬಗೆಯ ಸೌಂದರ್ಯ ಹೊಮ್ಮುತ್ತದೆ. ಆದುದರಿಂದಲೇ

ಕಲೆಗೆ ಜನ ಬಂದಿಯಾಗುವುದು. ಇದು ನೋಡುವ ಕಣ್ಣಿಗೆ, ಅರ್ಥಮಾಡಿಕೊಳ್ಳುವ ಅಥವಾ ಅನುಭವಿಸುವ ವ್ಯಕ್ತಿಗೆ, ಅವನ ಚರಿತ್ರೆ ಶಕ್ತಿ ಸಂಸ್ಕಾರಗಳಿಗೆ ತಕ್ಕಂತೆ ಆಗುತ್ತದೆ. ಒಟ್ಟಿನಲ್ಲಿ ಜನಕ್ಕೆ ಹೀಗಾಗುತ್ತದೆ, ಹಾಗಾಗುತ್ತದೆ ಎನ್ನುವಾಗ ಯಾವ ಬಗೆಯ ಜನಕ್ಕೆ?- ಎಂಬ ಪ್ರಶ್ನೆ ಇದ್ದೇ ಇರುತ್ತದೆ.

ಸೌಂದರ್ಯದ ಈ ಅರ್ಥವನ್ನು ಗ್ರಹಿಸಿ, ಸತ್ಯ ಶಿವಗಳ ಜೊತೆಗೆ ಇದು ಎಂತಹ ಮೌಲ್ಯ ಎಂಬುದನ್ನು ಗ್ರಹಿಸಬೇಕು.

ಇದರ ಚೆನ್ನು, ಚೆನ್ನ ಎನ್ನಬಹುದಾದ ಸಣ್ಣ ಲಕ್ಷಣದಿಂದ ಸುಂದರ, ಮಹಾ, ಗಂಭೀರ, ಭವ್ಯ ಅಥವಾ ಮಹೋನ್ನತ, ದಿವ್ಯ ಎನ್ನುವವರೆಗೂ ನಿಲವು, ವ್ಯಾಪ್ತಿಯುಂಟು. ಆಗ ಅದು ದೇವರ ಲಕ್ಷಣ.

## ಸುಂದರ ವ್ಯಾಪ್ತಿ ; ಮೂಲಪದವೆ ತ್ರಿವರ್ಗದಲ್ಲಿ?

ಈ ತ್ರಿವರ್ಗವನ್ನು ಮೊದಲಿಂದಲೂ ನಮ್ಮವರು ಶಾಂತಂ ಶಿವಂ ಸುಂದರಂ ಎಂಬಂತೆ ನುಡಿದರೊ ಇಲ್ಲವೊ ಅರಿಯೆ. ಗುಂಪನ್ನು ಈ ರೀತಿಯಾಗಿ ರಚಿಸಿದುದು ಈಚಿನ ಕಾಲದಲ್ಲಿ. ಬಹುಶಃ ಪಾಶ್ಚಿಮಾತ್ಯಗಣನೆಯ The True, the Good, the Beautiful ಎಂಬ ಮಾತಿನ ಪ್ರಕಾಶ ಬಂದ ಮೇಲೆಯೇ ಏನೊ. ತುಲಸೀದಾಸ ರಾಮಾಯಣದ ಸಂದರ್ಭದಲ್ಲಿ ಈ ಮಾತುಗಳ ಸೇರುವೆಯನ್ನು ಹೇಳುತ್ತಾರೆ. ಅದರ ನಿಜತ್ವವನ್ನು ಪ್ರಶ್ನೆ ಮಾಡಿದವರಿದ್ದಾರೆ. ಅದರದೂ 16ನೆಯ ಶತಮಾನದ ಕಾಲ. ಸೌಂದರ್ಯಂ ಅಲಂಕಾರಃ ಎಂದಿದ್ದು ವಾಮನ. ಸಗುಣೋಪಾಸನೆ ಆರಂಭವಾದಾಗಿನಿಂದ ಸುಂದರ, ಸೌಂದರ್ಯ ಎಂಬ ಕಲ್ಪನೆ ನಮ್ಮಲ್ಲಿ ದೇವ ಸಂಬಂಧದಲ್ಲಿ ಇದೆ. ಮನ್ಮಥನಿಗೆ ಮಿಗಿಲು ರೂಪ ಅವನ ತಂದೆಯದು. 'ಚೆಲುವುತನದಲಿ ನೋಡೆ ಲೋಕಮೋಹಕ ನಯ್ಯ' ಎನ್ನುವಾಗ ಸೌಂದರ್ಯ ರೂಪ ಎಂದು ಪ್ರಕಾರವಾಗಿ ದೇವರ ಆರಾಧನೆ ಸಿದ್ಧವಾಗಿತ್ತು. ಸುಂದರರ್, ಶೆಲ್ವನ್, ಚೆಲುವರಾಯಸ್ವಾಮಿ ಎಂಬಂತೆ ಲಕ್ಷ್ಮೀ, ತ್ರಿಪುರಸುಂದರಿ, ಸುಂದರೇಶ್ವರ ಮುಂತಾದ ಕಲ್ಪನೆಗಳಲ್ಲಿಯೂ ಶ್ರೀ ಸೂಕ್ತಾದಿಗಳಲ್ಲಿಯೂ ಈ ಎಣಿಕೆ ಇದೆ. ಭಕ್ತಿ ಪಂಥ, ಮಧುರಭಾವದ ಗಣನೆ, ಶೃಂಗಾರ ಭಾವಗಳು ಬೆಳೆವಾಗ ಮತ್ತು ಇತರ ಶುದ್ಧ ಕಲ್ಪನೆಗಳಲ್ಲಿ ಸೌಂದರ್ಯದ ಲಕ್ಷಣಗಳು ಎಣಿಕೆಗೆ ಬರುತ್ತವೆ. ಆದರೂ ತ್ರಿವರ್ಗದಲ್ಲಿ ಈ 'ಸುಂದರ' ಎಂಬ ಪದ ಸೇರಿಬಂತೊ ಇಲ್ಲವೊ; - ಸತ್ಯಕ್ಕೆ, ಶಿವಕ್ಕೆ ಹೆಗಲೆಣೆಯಾಗಿ.

## ಭಿನ್ನರುಚಿ, ಕಲ್ಪನೆ, ಸಂವೇದನೆ

ಯಾವ ಅರ್ಥದಲ್ಲಿಯೇ ಆಗಲಿ ಒಬ್ಬರಿಗೆ ಚೆಲುವಾಗಿ ಭಾವನೆಯನ್ನು ತೃಪ್ತಿಗೊಳಿಸಿದುದು ಇನ್ನೊಬ್ಬರಿಗೆ ಇಲ್ಲದಿರಬಹುದು. ಈ ಪದದ ಅರ್ಥ ಯೋಚಿಸಿದಷ್ಟೂ ಸ್ಪಷ್ಟತೆಯಲ್ಲಿ ನುಸುಳಿಕೊಳ್ಳುತ್ತದೆ. ಸುಂದರವೆಂದರೆ ಏನು ಎಂಬುದರ



ಸ್ವರೂಪ ಲಕ್ಷಣಗಳ ಸೂತ್ರೀಕರಣವೂ ವಿಶ್ಲೇಷಣವೂ ನಾನಾ ರೂಪ ತಾಳಿದೆ. ಯಾವುದು ಮನಸ್ಸನ್ನು (ಪ್ರಿಯವಾಗಿ) ತಟ್ಟುವುದೊ, ಅರ್ಥವತ್ತಾದ ಸಂತೋಷದಾಯಕ ಆಕೃತಿಯೊ ಕಲ್ಪನೆಯೊ ಆಗಿ ತೃಪ್ತಿತರಬಲ್ಲದೊ, ತರುವಂತೆ ಲೋಕದ ಸಂಗತಿಗಳನ್ನೂ ಜೀವನ ವನ್ನೂ ಅನುಭವವನ್ನೂ ಪುನರ್ರಚಿಸಿ ಕಲಾಕೃತಿಗಳಾಗಿ ತೋರಿಸಬಲ್ಲದೊ - ಇಂಥುದನ್ನು ಕಲೆಯಲ್ಲಿ ಸುಂದರವೆನ್ನುವುದು ವಾಡಿಕೆ. ಈ ಪ್ರಿಯ, ಸಂತೋಷ ಯಾವ ಬಗೆಯದು ಎಂಬಲ್ಲಿ ವಾದಗಳಿವೆ. ಚೆಲುವು ನೋಡುವವನ ಕಣ್ಣಲ್ಲಿ (Beauty lurks in the eye of the gazer) ಆಡುವುದು ಎಂದರೆ ಆಟ ಬಿಟ್ಟುಕೊಟ್ಟ ಹಾಗೆ. ಇಲ್ಲಿ ಹುಟ್ಟಬಲ್ಲ ಅರಾಕಜತೆಗೆ ಮಿತಿಯಿಲ್ಲ, ಮೇರೆಯಿಲ್ಲ. ಮನುಷ್ಯನ ಆಸೆ ಆಕಾಂಕ್ಷೆಗಳಿಗೆ ಕೊನೆಯಿಲ್ಲದ ಚಾಪಲ್ಯಗಳ ಪೀಡೆ ಉಂಟಾಗಿ ಎಲ್ಲೆಲ್ಲಿಗೊ ನಡಸಬಹುದು. ಇಲ್ಲಿ ಪರಿಶೀಲನೆಗೆ ಬರುವ ಪ್ರತಿಯೊಂದು ಮಾತೂ ಎಣಿಕೆಯೂ ಪರಿಷ್ಕಾರಹೊಂದಬೇಕು; ವಿಶದಗೊಳ್ಳಬೇಕು. ದುಷ್ಟರೋ ದಡ್ಡರೊ ಇವನ್ನು ದುರುಪಯೋಗಪಡಿಸಿಕೊಳ್ಳದಂತೆ ಇದನ್ನು ನಿಶ್ಚಯಗೊಳಿಸಬೇಕಾಗುತ್ತದೆ. ಇನ್ನೊಂದು ವಾಕ್ಯವಿದೆ: ಯಾವುದು ಚೆಲುವಾದ ಕಾರ್ಯ ಮಾಡುವುದೊ ಅದು ಚೆಲುವು- 'Beauty is what beauty Does' ಎಂಬುದು. ಇದು ನೀತಿಗೆ ಹೆಚ್ಚು ಹತ್ತಿರದ ಸೂಕ್ತಿ. ಚೆಲುವನ್ನು ಚೆಲುವಾಗಿ ಬೆಲೆ ಕಟ್ಟದು. ಎರಡು ಬೇರೆ ಬೇರೆ ವರ್ಗಗಳಿಗೆ ಸೇರಬೇಕಾದ ಅರ್ಥಗಳು ಇಲ್ಲಿ ಸಿಕ್ಕಿಹಾಕಿಕೊಂಡು ಕಾಟ ಕೊಡುತ್ತವೆ. ವಸ್ತ್ರ ಬೇರೆ, ಒಡವೆ ಬೇರೆ, ಹೂ ಬೇರೆ. ಒಂದಕ್ಕೊಂದಕ್ಕೆ ಹೋಲಿಕೆ, ಗುಣ ಮೌಲ್ಯಗಳ ತಾರತಮ್ಯ ನಡೆಯಬಾರದು. ಹಣ್ಣು ಎಂದು ಒಂದು ಜಾತಿ ಯಾದಾಗಲೂ ಮಾವು ಮೇಲೆ, ಕಿತ್ತಿಳೆ ಮೇಲೆ ಎಂದು ಕೇಳಬಾರದು. ಎದುರಿಗಿರುವ ಒಂದೇ ಜಾತಿಯ ಮಾವಿನಲ್ಲಿ ಅಥವಾ ಕಿತ್ತಿಳೆಯಲ್ಲಿ ಬಣ್ಣ, ರಸ, ಗಾತ್ರ, ರುಚಿಗಳ ದೃಷ್ಟಿಯಿಂದ ಯಾವುದು ಮೇಲು ಎಂಬುದು ನ್ಯಾಯವಾದ ಪ್ರಶ್ನೆಯಾದೀತು. ಮಾವೊ ಕಿತ್ತಿಳೆಯೊ ಎಂದು ಕೇಳುವುದು ವರ್ಗಭೇದಕ್ಕೆ ಸಂಬಂಧಿಸಿದ್ದು. ಅಂಥ ವಿವೇಚನೆ ತಪ್ಪು. Do not confuse kinds ಎಂದ ಅರಿಸ್ಟಾಟಲ್. ಅಲ್ಲಿಯೂ ಪೂರ್ತಿ ಸಿಹಿ ಕೆಲವರಿಗೆ ಪ್ರಿಯ; ಸ್ವಲ್ಪ ಹುಳಿ ಇದ್ದು ಸಿಹಿ ಪ್ರಬಲವಾಗಿ ಊರಿದ್ದರೂ - ಹಿಂದಿನ ಕಾಲದ ಬೆಂಗಳೂರು ಸೇಬು ತಿಂದಿದ್ದವರಿಗೆ ಇದು ತಿಳಿದೀತು. ಇನ್ನು ಕೆಲವರಿಗೆ ಸಾಕ್ರಟೀಸನ್ನು ಕುರಿತು ಗ್ಲೌಕಾನ್ ಎಂಬವನೊ ಆಲ್ಕಿಬಿಯಾಡಿಸ್ ಎಂಬವನೊ 'ಸಾಕ್ರಟೀಸ್ ಎಷ್ಟು ಚೆಲುವ' ಎಂದ ಮಾತು ಒಂದಿದೆ. ಸಾಕ್ರಟೀಸನ ಮುಖವಲ್ಲ, ಆಕೃತಿಯಲ್ಲ, - ಅವು ವಿಕಾರ - ಅವನ ಆತ್ಮ, ಜೀವಗುಣ ಎಷ್ಟು ಸುಂದರ ಎಂದಾಗ, 'ಸುಂದರ' ಪದದ ವ್ಯಾಪ್ತಿಯೇ ಬೇರೆ. ಸಾಮಾನ್ಯ ಸುಂದರ ಎಂಬ ಅರ್ಥದ್ದಲ್ಲ; ಬೇರೊಂದೆತ್ತಿಗೆ ನುಡಿವ ಮಾತು. ಒಂದು ಗಣನೆಯ ಪ್ರಕಾರದಿಂದ ಇನ್ನೊಂದಕ್ಕೆ ಹಾರಿಹೋಗುತ್ತದೆ ಆ ಅಂಶ. 'ಸತ್ಯವೇ ದೇವರು' ಎಂಬ ಸಂಬಂಧದಲ್ಲಿ ಹೇಗೆ ಅರ್ಥದಲ್ಲಿ ವರ್ಗವ್ಯತ್ಯಾಸ ವಾಗುವುದೋ ಇಲ್ಲಿಯೂ ಹಾಗೇ. ಎಂದರೆ, ಸತ್ಯ ಒಂದು ವರ್ಗ; ಶುಭ, ಶಿವ ಎನ್ನುವುದು ಇನ್ನೊಂದು ವರ್ಗ; ಸುಂದರ ಎಂಬುದು ಮೂರನೆಯ ಬೇರೆ ವರ್ಗ. ಈ

ಮೂರರ ಅರ್ಥವ್ಯಾಪಾರವೂ ನೆಲಸೂ ವ್ಯಾಪ್ತಿಪರಿಶೀಲನೆಯ ಸಮಯಗಳೂ ಬೇರೆ ಬೇರೆ. ಸಚ್ಚಿದಾನಂದ ಎಂದು ಬ್ರಹ್ಮವನ್ನು ಕುರಿತು ಹೇಳುವಾಗಲೂ ಆ ಕಲ್ಪನೆಯ ಮೂರು ವರ್ಗಗಳ ಸಂಯೋಗವನ್ನು ಒಟ್ಟಿಗೆ ಸೇರಿಸಿ ಅರ್ಥಮಾಡುತ್ತೇವೆ. 'ಸತ್' ಎಂಬುದೆಲ್ಲಾ 'ಚಿತ್' ಎಂಬುದೆಲ್ಲಾ 'ಆನಂದ'ದಲ್ಲಿ ಕರಗಿ ಪರವಸ್ತುವಿಗೆ ಲಕ್ಷಣವಾಗಿ ಅಲ್ಲಿ ನುಡಿಯುತ್ತದೆ ಅಷ್ಟೇ. ಅಲ್ಲಿ ಸದಂಶವಿದೆ; ಚಿದಂಶವಿದೆ ; ಆನಂದದ ಸಾಮರಸ್ಯ ವಿದೆ ಎನ್ನುತ್ತಾರೆ : ಅ+ಉ+(ಮ್ ಓಂ) ಔಂ = ಆದಹಾಗೆ.

## ಪರಸ್ಪರ ವಿರುದ್ಧವಾದಾವು

ಸತ್ಯ ಶಿವ ಸುಂದರ ಎಂಬ ಈ ಮೂರು ಲೌಕಿಕ ಅರ್ಥವ್ಯಾಪಾರಗಳಲ್ಲಿ ಬೇರೆ ಆಗಿರುವುದಲ್ಲದೆ ಒಂದಿದ್ದಲ್ಲಿ ಇನ್ನೊಂದು ಇಲ್ಲದಿರಬಹುದು. ಒಂದಕ್ಕೆ ಇನ್ನೊಂದು ವಿರುದ್ಧವಾಗಿರಬಹುದು. ಎಂದರೆ ಸತ್ಯ ಒಳ್ಳೆಯದಾಗಿರಬೇಕಾಗಿಲ್ಲ ಅಥವಾ ಶುಚಿಯಾಗಿರಬೇಕಾಗಿಲ್ಲ ; ಅಥವಾ, ಚೆಲುವಾಗಿರಬೇಕಾಗಿಲ್ಲ. ಹೀಗೇ ಇನ್ನೆರಡರ ವಿಷಯವೂ. ಒಬ್ಬರು ಬದ್ಮಾಷ್ ಆಗಿಯೊ ಒಂದು ಪದಾರ್ಥವು ಕೊಳೆಯಾಗಿಯೊ ಕೊಳೆತೊ ವಿಕಾರವಾಗಿಯೊ ಇರಬಲ್ಲದು. ತುಂಬಾ ಸಜ್ಜನನಾಗಿರುವ ಮನುಷ್ಯ ಕುರೂಪಿಯಾಗಿರಬಹುದು; ಚೆಲುವಾಗಿರುವ ವ್ಯಕ್ತಿ ಕಪಟಿ, ಕ್ರೂರಿ ಆಗಿರಬಹುದು. ವೇದಾಂತದ ಅರ್ಥದಲ್ಲಿಯೊ ಪರಮಾತ್ಮ ಸ್ವರೂಪವನ್ನು ವರ್ಣಿಸಬೇಕಾದಾಗಲೊ ಎಲ್ಲ ಅಂಶಗಳೂ ಅದರಲ್ಲಿ ಸೇರಿದರೂ ಅದರದರ ಸ್ಥಾನ, ಕ್ರಿಯೆ ಅದಕ್ಕಿದೆ ; ಅಥವಾ, ಅಲ್ಲಿ ಕರಗಿ ಹೋಗುತ್ತದೆ ಎಂದು ಹೇಳಿದರೂ ಅದಕ್ಕೆ ಕಡಮೆಯ ಸಂಬಂಧಗಳಲ್ಲೆಲ್ಲ ಅವು ಬೇರೆ ಬೇರೆ ಪ್ರಕಾರಗಳೇ. ತುಂಬ ಸತ್ಯವಂತರು, ಪ್ರಾಮಾಣಿಕರು ಎನ್ನುವ ಕೆಲವರಿಗೆ ನಯ, ಸೂಕ್ತ ಹಿಡಿಸದು. ಇಂಗ್ಲಿಷಲ್ಲಿ 'ಗುದ್ದಲಿಯನ್ನು ಗುದ್ದಲಿ ಎಂದೇ ಹೆಸರು ಹಿಡಿದು ಕರೆಯುತ್ತೇನೆ' ಎನ್ನುವ ಪ್ರಾಮಾಣಿಕನ ಮಾತುಂಟು. ಯಾವ ಭಾಷೆಯಲ್ಲಿ ಆಗಲಿ ಗುದ್ದಲಿ ಎಂಬ ವಸ್ತು ಗುದ್ದಲಿಯೇ ಆದರೂ ಅದನ್ನು ನುಡಿಯುವ ಮನಸ್ಸಿನಲ್ಲಿ, ನುಡಿವ ಕಾಕುವಿನಲ್ಲಿ ನುಡಿಯುವವರು ಮಾತ್ರ ಪ್ರಾಮಾಣಿಕರು ಎಂದು ಜನ ತಮ್ಮ ಪ್ರಾಮಾಣಿಕತೆಯನ್ನು ಕೊಚ್ಚಿಕೊಂಡು ಬೀಗುತ್ತಾರೆ. ಮೃದುವಾಗಿ ಪರ್ಯಾಯವಾಗಿ ನುಡಿಯುವವರು ಅಷ್ಟು ಪ್ರಾಮಾಣಿಕರಲ್ಲ ಎಂಬ ಭಾವನೆ ಇದೆ. ಆಗ ಪ್ರಾಮಾಣಿಕತೆ ಎಂಬುದು ಒರಟುತನದ, ರೂಕ್ಷತೆಯ ಪ್ರಕಾರ ಮಾತ್ರವಾಗುತ್ತದೆ. ಒಂದು ಪದಾರ್ಥ ಗುದ್ದಲಿ ಎನ್ನುವ ವಿಷಯದಲ್ಲಿಯೂ ಅಭಿಪ್ರಾಯ ಬೇರೆ ಇರಬಹುದು. ಇದು ವೈದ್ಯನ ಶಸ್ತ್ರವಲ್ಲ, ಗುದ್ದಲಿ; ನನ್ನ ನಿಬ್ ಗುದ್ದಲಿಯಾಗಿದೆ ಎನ್ನಬಹುದು! ಕೆಲವು ಸಂದರ್ಭಗಳಲ್ಲಿ ಆ ಪದಾರ್ಥವನ್ನು ಅದರ ಹೆಸರಿಂದ ಕರೆಯುವುದು ಅಲೌಕಿಕ, ಅಯುಕ್ತ ಆಗಬಲ್ಲದು. ಇವುಗಳ ಜೊತೆಗೆ ಕೆಲವು ಮಂದಿ ತಾವು ಸತ್ಯವಂತರು, ಶುಚಿವಂತರು, ಆಚಾರವಂತರು; ಎಲ್ಲ ಕರ್ಮಗಳನ್ನೂ ನಿಷ್ಠೆಯಿಂದ ಮಾಡುತ್ತಿದ್ದೇವೆ; ದಿನದ ಪ್ರತಿ ಕರ್ತವ್ಯದಲ್ಲಿಯೂ



ಶಾಸ್ತ್ರ ವಿಧಿಸಿದಂತೆ ಚತು ತಪ್ಪದಂತೆ ನಡೆದುಕೊಳ್ಳುತ್ತಿದ್ದೇವೆ; ಸ್ವರ್ಗ ತಮಗೆ ದೊರಕದಿದ್ದರೆ ಇನ್ನಾರಿಗೆ ದೊರಕಬೇಕು ಎಂಬಂತೆ ಬೀಗುವರು. ಇವರು Pharisees ಎಂಬವರು. ತಾವು ಸರ್ವಥಾ ಸರಿಯಾಗಿದ್ದೇವೆ ಎಂಬುದು ಒಂದು ಜಾಡ್ಯ. ಅದರ ದುಷ್ಫಲಗಳು ವಿಪರೀತ. ಇನ್ನು ಕೆಲವರು ವಿನಯದಿಂದಲೊ ಭೀತಿಯಿಂದಲೊ ಇನ್ನಾವುದೊ ಕಾರಣದಿಂದಲೊ ತಗ್ಗಿ ಬಗ್ಗಿ ತಮ್ಮ ಹಿರಿಮೆಯನ್ನು ತಗ್ಗಿಸಿಕೊಂಡು, ತಮ್ಮದೇ ಲೋಪ ದೋಷ ಎನ್ನುತ್ತಾರಲ್ಲದೆ 'ಸರ್ವಾಪರಾಧಂ ಕ್ಷಮಸ್ವ' ಎನ್ನುವವರೆಗೆ ಹೋಗುತ್ತಾರೆ. ಧೀರವಾಗಿ ಗಂಡಾಗಿ ನಿಲ್ಲಬೇಕಾಗಿರುವಾಗ ಈ ಬುದ್ಧಿ ತಪ್ಪು ವಿನಯದಿಂದಾಗಿ ದುರ್ಬಲವಾಗುತ್ತದೆ. ಹರಿಶ್ಚಂದ್ರ ಕಾವ್ಯದಲ್ಲಿ ವಿಶ್ವಾಮಿತ್ರನ ಪರವಾಗಿ ಮಹಾರಾಜನು ನಡೆದುಕೊಳ್ಳುವ ನಡತೆ ಈ ಶೈಥಿಲ್ಯದ್ದು. ತದ್ವಿಪರೀತವಾಗಿ, ಶತಾಯುಗತಾಯು, ನನ್ನ ಧರ್ಮದಲ್ಲಿ ನಾನು ಎಲ್ಲವನ್ನೂ ಎದುರಿಸಿ ನಿಲ್ಲುತ್ತೇನೆ ಎಂಬ ಗೌರವವನ್ನು ಮೆರೆಯಬಹುದಾಗಿತ್ತು ಅವನು. ತನ್ನ ನಿಲವು ಧರ್ಮವಾದ್ದು, ಅದರಲ್ಲಿ ಸಂದೇಹವಿಲ್ಲ ಎಂಬ ನಂಬಿಕೆ ಮಾತ್ರ ಇರಬೇಕು. ಅದಕ್ಕೆ ಕಡಮೆಯಾದ ಬೇರೆ ಸೂಕ್ತ ರೀತಿಯಲ್ಲಿ ಇದೇ ಫಲವನ್ನು ಸಾಧಿಸಬಹುದು ಎಂಬ ಪರಿವೆ ಇಲ್ಲದೆ ಇರಬಹುದು. ಇಂಥವು ಜೀವನದಲ್ಲಿ ಎಷ್ಟೋ ಪ್ರಸಂಗಗಳು. ಇಂಥಲ್ಲೆಲ್ಲ ಸತ್ಯ, ಮೌಲ್ಯ ಎಂಬ ಪದಗಳ ಮತ್ತು ಎಣಿಕೆಗಳ ನೆಲೆಯನ್ನು ಕಾಣುವುದು ಸುಲಭವಲ್ಲ. ಇಂಥ ಸ್ಥಿತಿಗಳು ಉಂಟು. ಸಂಸ್ಕಾರಗೊಂಡ ಬಾಳಿಗೆ ಈ ವಿವೇಚನೆಗಳು ಸ್ವರೂಪಾಂಶ ಲಕ್ಷಣ.

## ಅತಿವಿಶ್ಲೇಷಣೆ ಒಲ್ಲದವರು

ಇನ್ನೊಂದು ಬಗೆಯ, ನಡತೆಯ ಜನ ಇದ್ದಾರೆ ; ಅವರು ಯೋಗ್ಯರು, ಮೇಧಾವಿಗಳು; ಬುದ್ಧಿಯ, ವಾದದ ಇಂಥ ಅತಿ ವಿಶ್ಲೇಷಣಗಳಿಗೆ ಹೋಗಲು ಅವರಿಗೆ ಇಷ್ಟವಿಲ್ಲ; ಅಷ್ಟೂ ಯೋಚನೆಮಾಡಿ ಯಾವ ತೀರ್ಮಾನಕ್ಕೂ ಬರುವುದು ಕಠಿಣ; ಮನಸ್ಸಿಗೆ ನೆಮ್ಮದಿ ಬಾರದು; ಆದ್ದರಿಂದ ಪರಮಸತ್ಯದ ಸ್ವರೂಪ ಬುದ್ಧಿಗೆ ಗ್ರಾಹ್ಯವಲ್ಲ ವೆಂದು ಅರಿತು ತರ್ಕದಿಂದ ಅಪ್ರತಿಷ್ಠಃ ಎಂದೂ ಅಪ್ರಾಪ್ಯ ಮನಸಾ ಸಹ ಎಂದೂ ಉಪನಿಷತ್ತಿನ ಉಕ್ತಿಯನ್ನು ನೆನೆಯುತ್ತ ಬುದ್ಧಿಯನ್ನೇ ನಿರಸನ ಮಾಡುತ್ತಾರೆ. ವಾದ ಖಂಡ, ವಿಚಾರಗಳಲ್ಲಿ ಅನಾಸ್ಥೆ ಉಳ್ಳವರಾಗುತ್ತಾರೆ. I mistrust the analytical intellect altogether – ಬುದ್ಧಿ ಎಲ್ಲಿಯ ತನಕ ನಮ್ಮನ್ನು ನಡಸೀತು? ಎಲ್ಲಿಗಾದರೂ ಒಯ್ದೀತಲ್ಲವೆ? ಅನವಸ್ಥೆಗೆ ನಡಸುತ್ತದೆ ಎನ್ನುವರು. ಇವರಾದರೂ ಬುದ್ಧಿಯನ್ನು ಮನಸ್ಸನ್ನು ನಿಜವೆಂದು ಒಪ್ಪಿಕೊಳ್ಳುವವರು. ಇನ್ನು ಕೆಲವರು ಪ್ರತ್ಯೇಕವಾದ ಮನಸ್ಸು (Mind) ಎಂಬುದೊಂದಿದೆ ಎಂಬುದನ್ನೇ ಒಪ್ಪಿಕೊಳ್ಳರು. ನರಮಂಡಲದ ವ್ಯಾಪಾರ ಗಳಲ್ಲಿ ಅದು ಒಂದು ಬಗೆಯ, ಒಂದು ಮಟ್ಟದ ಅಭಿವ್ಯಕ್ತಿ, ಕ್ರಿಯೆಯ ಗುಣದ ಇಲಾಖೆ ಮಾತ್ರ, ಮಾನಸಿಕ ಎಂಬ ಬೇರೆ ಇಯತ್ತೆ ಇಲ್ಲ, ಇದರಲ್ಲಿ ತೀವ್ರತೆಯೂ ತುಂಬೋ

ಇವೆಯೆಂದುಕೊಳ್ಳಿ; ಇದು ರಚನಾಂಗವಲ್ಲ; ಕ್ರಿಯೆಯ, ಗುಣದ ಒಂದು ಪ್ರಕಾರ ಎಂದುಕೊಳ್ಳಿ ಎಂದು ಮಿದುಳಿನ ವ್ಯಾಸಂಗ ಮಾಡಿದವರು ಹೇಳುವುದುಂಟು.

## ಅನುಭಾವಿ ಯೋಗಿಜನ

ಕೆಲವರು ಈ ಮನಸ್ಸೆಂಬುದಕ್ಕೆ ಯಾವ ಪ್ರಾಧಾನ್ಯವನ್ನೂ ಕೊಡದೆ ಅದರ ಶಕ್ತಿ ಕೆಳಮಟ್ಟದ್ದು ; ಮೇಲ್ಮಟ್ಟದ ಅನುಭಾವವನ್ನೊ ಅನುಭವ ಪ್ರಕಾರಗಳನ್ನೊ ಅದು ಅರ್ಥ ಮಾಡಿಕೊಳ್ಳಲಾರದು; ಆ ನೆಲಸು, ಭೂಮಿ ಮನಸ್ಸನ್ನು ಮೀರಿದ್ದು ಎಂದು ಯೋಗದಂತಹ ಯಾವುದೊ ವಿಶೇಷ ವರ್ಗಕ್ಕೂ ವಿಧಾನಕ್ಕೂ ಸಾಧನಕ್ಕೂ ತಿರುಗುತ್ತಾರೆ. ಮನಸ್ಸು ಅರಿಯಲಾಗದು ಎಂದಾಗಲೂ ಇದಕ್ಕಿಂತಲೂ ಅದು ಬೇರೆ, ಮೇಲು ಎಂಬ ಅರಿವು ಇದ್ದು, ಆ ಅನುಭವ ಲಕ್ಷಣದ ವರ್ಣನೆಗಳಲ್ಲಿ ಮನಸ್ಸೇ ವಿಶೇಷ ಬಗೆಯ ಪ್ರಜ್ಞೆಯಾಗಿ ವ್ಯಾಪಾರ ಮಾಡುತ್ತಿದೆ ಎಂಬುದನ್ನು ಅವರು ಲೆಕ್ಕಿಸರು. ಭಾವನೆ, ಕಲ್ಪನೆ, ಆನಂದಗಳು, ಭಾವ, ಇವೆಲ್ಲ ಆ ನೆಲಸಿನ ವಿಸ್ತರಣಗಳೇ, ವಿಶೇಷಗಳೇ. ನರಮಂಡಲದ ಕಾರ್ಯಶಕ್ತಿಗೂ ಮನಸ್ಸು, ಬುದ್ಧಿ ಎಂಬವಕ್ಕೂ ಇರುವಂತಹ ಮಟ್ಟ ನೆಲಸುಗಳ ವ್ಯತ್ಯಾಸ ಇದಕ್ಕೂ ಅಂತಹ ಪ್ರಜ್ಞೆಗೂ ಇರಬಲ್ಲದು. ಅದನ್ನು ಅತಿಮಾನಸವೆನ್ನಿ ; ಅಧಿಮಾನಸವೆನ್ನಿ. Meta-Supra, Transcendental. ಆದರೂ ಮನುಷ್ಯನ ಅನುಭವ ಪ್ರಪಂಚಕ್ಕೆ ಸಂಬಂಧಿಸಿದ್ದು. ಇಂಥಲ್ಲಿ ಎಲ್ಲ ನೆಲಸುಗಳೂ ಸಾಮಾನ್ಯವಾಗಿ ಗೋಚರವಲ್ಲ. ಸಂಚಾರ ಶಕ್ಯವಿಲ್ಲ. ಯಾರು ಯಾರಿಗೆ ಎಂತೆಂತಹ ಅನುಭವ ಬೇಕೊ ಅಂಥುದೆಲ್ಲ ಅಲ್ಲಿ ದೊರಕುತ್ತದೆನ್ನಬಹುದು. ಅಲ್ಲಿ ಇನ್ನಾವ ನಿರ್ಣಾಯಕ ಪ್ರಮಾಣವೂ ಇರದು. ಸತ್ಯವಂತರ ಮತ್ತು ನಿಜವಾಗಿ ಶುದ್ಧರೆಂಬವರ ನುಡಿಗೂ, ಆ ನೆಲೆಯನ್ನು ಮುಟ್ಟಲಾರದ ಒಂದು ಸಾವಿರ ಮಂದಿ ಅಪಕ್ವಗಳಿಗೂ ಕಪಟರಿಗೂ, ಅದನ್ನು ದುಡಿಸಿ ಲಾಭ ಪಡೆವವರಿಗೂ ಬೇಕಾದಷ್ಟು ಎಡೆಯುಂಟು. ನಂಬಿದುದನ್ನೆಲ್ಲ ಕಲ್ಪನೆಯಲ್ಲಿ ಕಾಣುವ ಶಕ್ತಿ ಇದೆ; ಧ್ಯಾನಕ್ಕೆ ಒದಗಿಸಿಕೊಳ್ಳಬಲ್ಲ ಅವಕಾಶವಿದೆ. ಇವು ಸಾಧಾರಣ ಮನುಷ್ಯರಿಗೆ ಸಾಮಾನ್ಯವಾಗಿ ಎಟುಕದ ಸಿದ್ಧಿಗಳು. ಅತ್ಯಸಾಧಾರಣವೆನ್ನುವ, ಅತೀಂದ್ರಿಯ ಸತ್ಯಸಿದ್ಧಿಯನ್ನು ಪಡೆದುಕೊಳ್ಳಬಲ್ಲವರು ಯಾರೋ, ಭ್ರಾಂತಿಗೊಂಡವರು ಭ್ರಾಂತಿ ಉಂಟು ಮಾಡುವವರು ಯಾರೊ, ಆ ಆಟ ಕಟ್ಟಿ ಜನರನ್ನು ಮೋಹ ಅಥವಾ ಮೋಸ ಗೊಳಿಸುವವರು ಯಾರೊ ಹೇಳಲಾಗುವುದಿಲ್ಲ. ಬೂಟಾಟಿಕೆ ದಾಸಯ್ಯಗಳುಂಟು. ಮನುಷ್ಯನ ಬುದ್ಧಿಶಕ್ತಿಯೂ ಶಕ್ತಿಯೂ ಮಾತ್ರ ಈ ಎಲ್ಲಕ್ಕೂ ಕಾರಣ. ವಿಧಾನ, ಯುಕ್ತಿ ಹೇಳಿ ಅದನ್ನು ನಂಬುವ ಹಾಗೆ, ಒಪ್ಪುವ ಹಾಗೆ ಮಾಡಿಕೊಡಬಹುದು. ಇಂಥಲ್ಲಿ ಯಾವುದು ಸತ್ಯ, ಯಾವುದು ಮೌಲ್ಯ? ನಿಜ ಯಾವುದು, ಖೋಟ ಯಾವುದು? ಆ ಬದುಕಿನ ಚರಿತ್ರೆ, ಕೃತ್ಯ ಮಾತ್ರ ಸತ್ಯವನ್ನು ಕಾಣಿಸಬೇಕು. ಎರಡರ ಆಕಾರ ಆವಟ ಒಂದೇ ಆಗುವಾಗ ಮನಸ್ಸಿನ ಇಂತಹ ವಿಹಾರಗಳಲ್ಲಿ ನಾವು ಎಚ್ಚರವಾಗಿರಬೇಕಾದುದು ಅಗತ್ಯ.



## ಅತಿಭಕ್ತಿ ಅಸಹನೆ

ಕೆಲವರಿಗೆ ಸತ್ಯವೊಂದೇ ಉಪಾಸನೆ. ಕೆಲವರಿಗೆ ಸೌಂದರ್ಯದ್ದೇ. ಇನ್ನು ಕೆಲವರಿಗೆ ನೀತಿ ಅಥವಾ ಕಲ್ಯಾಣ ಒಂದೇ. ಬೇರೊಂದರಲ್ಲಿ ಆಸಕ್ತಿ ಇಲ್ಲ, ಬೆಲೆಯಿಲ್ಲ. ಅಷ್ಟು ಸಾಕು ಎನ್ನುವ ಮನಸ್ಸಿನಲ್ಲಿ ಉಳಿದುದನ್ನು ನಿರ್ಲಕ್ಷಿಸುವುದು ಮಾತ್ರವಲ್ಲ, ಅದಕ್ಕೆ ಅಸಹನೆ ತೋರಿಸುತ್ತಾರೆ; ಅವನ್ನು ಹಳಿಯುತ್ತಾರೆ. ಅವು ತಮ್ಮ ಪ್ರಪಂಚವಲ್ಲ, ತಮ್ಮನ್ನು ಆ ವಿಷಯದಲ್ಲಿ ಕೇಳಬೇಡಿ ಎಂದು ಕ್ಷಮೆ ತೋರುವುದಿಲ್ಲ. ಅವನ್ನು ಕಂಡರೆ ತಿರಸ್ಕಾರ. ಸಂಗೀತದಲ್ಲಿಯೊ ಚಿತ್ರಕಲೆಯಲ್ಲೊ ಸುತರಾಂ ಪ್ರವೃತ್ತಿ, ಕ್ಷಮೆ ಇಲ್ಲದ ಕೆಲವರು ತುಂಬಾ ಸತ್ಯವಂತರು; ಸಮಾಜಹಿತಸಾಧಕರು. ನೃತ್ಯ, ಗೀತ, ಚಿತ್ರ ಮುಂತಾದ ಕಲೆಗಳಲ್ಲಿ ಯಾವ ವಿಶ್ವಾಸವೂ ಆಸಕ್ತಿಯೂ ಇಲ್ಲದವರು ಅವನ್ನು ಅನಾವಶ್ಯಕ, ಅಪ್ರಯೋಜಕ ಕಾಲಹರಣ ಎನ್ನುವರು. ಸತ್ಯ ಪ್ರಪಂಚ ನಿರಂತರವಾಗಿ ಹುಡುಕು ನೋಟದ ಶೋಧನದ ನೋಟ. ಎಲ್ಲವನ್ನೂ ಅರಿಯಬೇಕು. ಅದರ ಚರಿತ್ರೆ, ಸ್ವರೂಪ, ಇವೊತ್ತಿನ ಸ್ಥಿತಿ, ನಾಳೆಯ ಗತಿ, ವಿಧಾನ ಇವು ಎಲ್ಲಿನವರೆಗೆ ನಡಸಿಕೊಂಡು ಹೋಗುತ್ತವೆಯೊ ಅಲ್ಲಿನವರೆಗೂ ಹೋಗಿ ಅರ್ಥ ಮಾಡಿಕೊಳ್ಳಬೇಕು–ಎಂಬ ಜ್ಞಾನಭಾಗ. ಶಿವ ಅಥವಾ ಸತ್ಕರ್ಮದ ಭಾಗ ನಿರಂತರವಾಗಿ ಒಳ್ಳೆಯ ನಡತೆ ನಡೆಯಬೇಕು, ಒಳ್ಳೆಯದಾವುದೊ ಕಂಡುಕೊಂಡು ನಮ್ಮ ಶುಚಿಯನ್ನೂ ಹಿತಕಾಂಕ್ಷೆ ಯನ್ನೂ ಸಾಧಿಸಬೇಕು ಎಂಬುದು. ದಿನದಿನಕ್ಕೆ ಮನಸ್ಸೂ ಹೃದಯವೂ ವಿಸ್ತಾರವಾಗಿ ಸಣ್ಣದರಿಂದ ದೊಡ್ಡದರ ಕಡೆ ಸತ್ಕಾರ್ಯದ ವ್ಯಾಪ್ತಿಯನ್ನು ಬೆಳಸಿಕೊಂಡು ಹೋಗಬೇಕು ಎಂಬುದು. ಸತ್ಯಾನ್ವೇಷಣೆಯಂತೆಯೇ ಇಲ್ಲಿಯೂ ಅಡ್ಡಿ, ಆತಂಕ, ನಿರ್ಬಂಧ ಇಲ್ಲದೆ ಸರ್ವವ್ಯಾಪಕವಾಗಬೇಕು. ಅಲ್ಲಿನದು ಜ್ಞಾನದ ಆಕಾಂಕ್ಷೆ. ಸೌಂದರ್ಯಸಾಧನೆಯಲ್ಲಿಯೂ ಹಾಗೇ: ಯಾವುದು ಸುಂದರವೋ ಅದರ ರೂಪಣಕ್ಕೆ ಎಲ್ಲ ಕಲೆ ಕುಶಲ ಕರ್ಮಗಳಲ್ಲಿಯೂ ಆಕೃತಿ ಕೊಟ್ಟು ಅದನ್ನು ಅನುಭವಿಸಬೇಕು. ಅದರ ಸಾಧನೆಯಲ್ಲಿ ಜೀವವನ್ನು ವಿನಿಯೋಗಿಸಬೇಕು. Making life Beautiful ಎಂಬುದುಂಟು. ಕಲೆಗಾರನ ಜೀವಗುಣ, ಕುಶಲತೆ ಎಂಥವಾದರೆ ಕಲೆ ಅಂಥದಾಗುತ್ತದೆ. ಕಡೆಗೆ? ಅದು ಸತ್ಯದ ವಿಷಯಸೀಮೆಗೆ ಒಳಪಡದು. ಲೋಕದ, ಜೀವನದ ಅನ್ವೇಷಣೆ ಮುಗಿದಂದು ಅದು ಗೊತ್ತಾದೀತು. ಈ ಚರಿತ್ರೆ, ವಿಧಾನಕ್ರಿಯೆ ಎಲ್ಲ ಮೊದಲಿಂದಲೂ ಗೊತ್ತಿರುವ ವರಿಗೆ; ಎಂದರೆ ದೇವರೊಬ್ಬರಿಗೆ? ಅವನು ಅನಾದಿ, ಆದಿ, ಅಂತ್ಯ ಎಲ್ಲವೂ ಆದ್ದರಿಂದ.

## ಇಲ್ಲಿಯೂ ಅನಿಶ್ಚಿತತೆ

ಇದೂ ಗೊತ್ತಾಗಿ ಇಷ್ಟೇ ಹೀಗೇ ಎಂದು ನಿಶ್ಚಿತವಲ್ಲ. ದೇಶ ವಿದೇಶಗಳ, ಜನಜನಾಂಗಗಳ ಸಮಾಜ ವ್ಯವಸ್ಥೆ, ನಡವಳಿಕೆಗಳನ್ನು ಹೋಲಿಸಿ ನೋಡಿದರೆ ಪರಸ್ಪರ ವ್ಯತಿರಿಕ್ತವಾದ ಎಷ್ಟು ಆಚಾರ, ಸಂಪ್ರದಾಯ ರೀತಿಗಳು, ಸುಂದರ ಅಸುಂದರ ಎಂದು ಎಣಿಕೆಗೆ ಬಂದಿವೆ ಎಂಬುದು ಗೊತ್ತಾದಾಗ, ವಿಸ್ತಾರಗೊಂಡ ತಿಳಿವಳಿಕೆಯಲ್ಲಿ ನಮಗೆ

ಸಹನೆ ಉಂಟಾಗುತ್ತದೆ. ಹಟಗಳೂ ಇದು ಮಾತ್ರವೇ ಸರಿ, ನೀತಿ, ಇದಲ್ಲ ಎಂಬಂಶದಲ್ಲಿ ವಿವಿಧಗಳ, ಸಕಲದ ಸಮೀಕ್ಷೆಯಿಂದ ಔದಾರ್ಯ ಹುಟ್ಟುತ್ತದೆ. ಒಂದು ನಡತೆ, ಕಲ್ಪನೆ, ತತ್ವ ಹೇಗೆ ಹುಟ್ಟಿತು, ಹೇಗೆ ಬೆಳೆಯಿತು, ಯಾವ ನೆಲೆಗೆ ನಿಂತಿತು, ಯಾವ ಧಾತ್ವಂಶ ಅದಕ್ಕಿರುವವರೆಗೂ ಮಾನ್ಯವಾಗಿದ್ದು, ಅದು ಹೇಗೆ ಆಮೇಲೆ ಜಡವಾಗಿಯೊ ನಿಸ್ಸತ್ವವಾಗಿಯೊ ಆಯಿತು ಎಂಬುದು ಗೊತ್ತಾದಾಗ ನಮ್ಮ ಬೆಲೆಗಳು ಕಂಗೆಡುತ್ತವೆ. ಹಿಂದಿನ ಅನೇಕ ಭಾವನೆಗಳೂ ಕಲ್ಪನೆಗಳೂ ನೆಲೆಯಿಲ್ಲದೆ ಕೆಳಗೆ ಬೀಳುತ್ತವೆ. ಇವುಗಳಲ್ಲೆಲ್ಲ ಜೀವಂತಭಾಗ ಸವೆದು ಜಳ್ಳುಭಾಗ ಯಾವುದು ಎಂದು ಎಣಿಸುವಾಗ ಅವಕ್ಕೆ ಕಾಣಿಸುವ ಭಕ್ತಿ, ಕೊಡುವ ಬೆಲೆ ಹೆಚ್ಚು ಕಡಮೆಯಾಗುತ್ತದೆ. ಆಗ ಅದು ಪ್ರಾಕ್ತನವಾದ ಒಂದು ವಸ್ತು; ವಸ್ತು ಪ್ರದರ್ಶನಗಳಲ್ಲಿ ಮಾತ್ರ ಉಳಿಸಿಡಬಲ್ಲ ಸಂಗತಿಯಾದೀತು ಮಾತ್ರ. ಒಂದು ರೀತಿ ನೋಡಿದರೆ ಯಾವುದನ್ನು ವಸ್ತುಸತ್ಯ ಅಥವಾ ಇರವು–Reality–ಎನ್ನುತ್ತೇವೆಯೊ, ಯಾವುದನ್ನು ಕ್ರಿಯಾಪದ ಎನ್ನುತ್ತೇವೆಯೊ ಅವು Facts. ಇಲ್ಲಿ ಸಂದೇಹ ಕಡಮೆ. ಗುಣವಾಚಿ, ವಿಶೇಷಣ, ಮೌಲ್ಯದ ಭಾಗ ಖಚಿತ. ಇಲ್ಲಿ ಅಭಿಪ್ರಾಯ ಭಿನ್ನತೆಗೆ ಬೇಕಾದಷ್ಟು ಎಡೆಯುಂಟು. ಖಚಿತ, ಅಳೆಯಬಲ್ಲವು ಎಂಬುದನ್ನು ಕುರಿತ ತಿಳಿವು ಜ್ಞಾನಭಾಗ. ಇಲ್ಲಿ ಹೆಚ್ಚು ಕಡಮೆ ಬೆಳವಣಿಗೆಯ ಮಾರ್ಪಾಡೂ ಸುಧಾರಣೆಯೂ ಶಕ್ಯ, ಅಗತ್ಯ. ಈ ತಿಳಿವಳಿಕೆ ಹೆಚ್ಚಿದಂತೆಲ್ಲ, ನಯ ಸೂಕ್ಷ್ಮ ಆದಂತೆಲ್ಲ. ಶಾಸ್ತ್ರ, ವಿಜ್ಞಾನ, ನೀತಿ, ಧರ್ಮ, ಮತ ಇವೆಲ್ಲ ಮನುಷ್ಯನ ನಿರ್ಮಾಣ. ಮನುಷ್ಯನಲ್ಲದ ಪ್ರಾಣಿವರ್ಗಕ್ಕೆ ಇದರ ಸತ್ಯಾಸತ್ಯತೆ ಹೇಗೊ? ಬುದ್ಧಿಗ್ರಹಣಶಕ್ತಿ, ಸಂವೇದನೆ ಸುಮಾರು ಲೋಕದಲ್ಲಿ ಒಂದೇ ಬಗೆಯಾಗಿರುವುದರಿಂದ ಒಂದೆಡೆ ನಡೆದುದು ಇನ್ನೊಂದಕ್ಕೆ ಅರ್ಥವಾಗುತ್ತದೆ. ಗ್ರಾಹ್ಯವೊ ಅಗ್ರಾಹ್ಯವೊ ಪ್ರಿಯವೊ ಅಪ್ರಿಯವೊ ಆಗುತ್ತದೆ. ಅಷ್ಟು ಗೊತ್ತು.

ಜ್ಞಾನದಲ್ಲಿ ಯಾವುದನ್ನು Universal ಎನ್ನುತ್ತಾರೊ ಆ ಭಾಗದಲ್ಲಿ ಬುದ್ಧಿಕಲ್ಪಿತ, ಅಮೂರ್ತ (Ideal, Abstract) ಭಾಗ ಹೆಚ್ಚು. ಅವು ವಸ್ತು ಕ್ರಿಯಾ ಪ್ರಪಂಚಗಳ ವರ್ಗದ ಅಡಕರೂಪಣಗಳು. ಹಣ್ಣು ಹೂವು ಎಂಬುದಿಲ್ಲ, ಕೇವಲವಾಗಿ, ವಸ್ತು ಪ್ರಪಂಚದಲ್ಲಿ : ಜಾತಿ, ಸ್ಥಿತಿ, ಪ್ರಕಾರ ವಾಚಕ ಅದು. ಈ ಹಣ್ಣು ಅದು, ಈ ಹೂ ಅದು, ಈ ಬಗೆಯ ಶೂಲೆ, ಸುಖ ಇತ್ಯಾದಿ ಉಂಟು. ಇವುಗಳ ಪ್ರಾತಿನಿಧಿಕ ಅಮೂರ್ತರೂಪ ಜ್ಞಾನ ಬೆಳೆಯುತ್ತಿರುವಂತೆ ಇವುಗಳ ಪ್ರಭಾವ ಹೆಚ್ಚಾಗಿ, ಲೋಕಪರಿಜ್ಞಾನದಲ್ಲಿ ವಾದದ ಅಂಶ ಸಂಬಂಧ ಕಲ್ಪನೆಗಳ ಅಂಶ, ವಿವೇಚನೆಯ ಅಂಶ, ಕೂಗು ಪಕ್ಷಪಾತ ಕೃತಿಗಳ ಅಂಶ, ಅತಿಯಾಗುತ್ತದೆ. ರಾಗಾವೇಶಗಳು ಹುಟ್ಟಿಕೊಳ್ಳುತ್ತವೆ. ಪ್ರಯೋಜನಕಾಂಡ ಅವಕ್ಕೆ ಚುರುಕು ಕೊಡುತ್ತದೆ. ಜನದ ಮನಸ್ಸು ಹಾಗೆ ಹೀಗೆ ಸೇರಿಕೊಂಡು ವ್ಯವಹಾರ ಪ್ರಪಂಚದಲ್ಲಿ ಪ್ರಬಲಿಸುತ್ತದೆ. ಇದರ ಸ್ವರೂಪ ಗುಣಕ್ರಿಯೆ ಫಲಾದಿಗಳನ್ನು ಮನಸ್ಸೇ ಹೀಗೆ ಹಾಗೆ ಎಂದು ಹೇಳುವುದೂ, ಒಂದೊಂದಕ್ಕೂ ಒಂದೊಂದು ಹೆಸರು ಕೊಟ್ಟು ನಿಷ್ಕರ್ಷೆ ಮಾಡುವುದೂ ಮನುಷ್ಯರು ಬಳಸುವ



ಭಾಷೆಯೇ. ಆದರೆ ಅವುಗಳಿಂದ ಹೊರಡುವ ಅರ್ಥ ಒಬ್ಬೊಬ್ಬರಿಗೆ ಒಂದೊಂದು. ಗಣಿತ, ವಿಜ್ಞಾನಗಳಲ್ಲಿ ಎಲ್ಲ ಖಚಿತ, ನಿಯತ, 100ಕ್ಕೆ ನೂರು ಸಮ. ಇಲ್ಲಿ ಜನದ ಸಂಬಂಧ, ರುಚಿ, ಕಾಲ, ಚರಿತ್ರೆ, ಲಾಭ ನಷ್ಟ, ಭಾವುಕತೆ ಎಲ್ಲ ಸೇರಿಕೊಂಡು, ಒಂದು ರೀತಿ ಇರುವುದನ್ನು ಇನ್ನೊಂದು ರೀತಿ ಕಾಣಿಸುತ್ತವೆ. ಮೂಲಭೂತವಾದ ಈ ಸಂಗತಿಯನ್ನು ಮರೆಯಬಾರದು. ಮರೆತರೆ ದಂಡ ತೆರಬೇಕಾಗುತ್ತದೆ. ನಷ್ಟ ನಮ್ಮದು.

# ಎರಡನೆ ತ್ರಿವರ್ಗ – ನ್ಯಾಯ, ಸ್ವಾತಂತ್ರ್ಯ, ಸಮಾನತೆ

## ರಾಜ್ಯಾಂಗದಲ್ಲಿ

ಎರಡನೆಯ ವರ್ಗ ಬಹುಮಟ್ಟಿಗೆ ಇಂದಿನ ರಾಜಕೀಯ ಜೀವನಕ್ಕೆ ಸಂಬಂಧಿಸಿದ್ದು. ರಾಜಕೀಯದಲ್ಲಿ ನಿಜ, ಮೌಲ್ಯ ಎಂಬವು ವಿಶೇಷ ವ್ಯಾಪ್ತಿಯುಳ್ಳವು. ರಾಜಕೀಯ ವ್ಯವಸ್ಥೆಗೆ ಒಂದು ನೆಲೆಗಟ್ಟುಂಟು. ಏಕಾಂಗ ನಿಷ್ಠವಾಗಿ ರಾಜರೊ ಅಧ್ಯಕ್ಷರೊ ಆಳುವ ಅಥವಾ ಇನ್ನಾರೊ ಕೆಲಮಂದಿ ಕುಲಗಳವರು ವರ್ಗಗಳವರು ಆಯಾ ನಾಯಕರ ಸರ್ವಾಧಿಕಾರದಲ್ಲಿ ನಡಸತಕ್ಕದ್ದೂ ಅಲ್ಲ. ಯಾವುದನ್ನು ಪ್ರಜಾಸತ್ತಾತ್ಮಕ ಎನ್ನುತ್ತೇವೊ ಅಂಥ ಪ್ರಜಾಸತ್ತೆಯಲ್ಲಿಯೂ ಎಷ್ಟೋ ಪ್ರಕಾರಗಳುಂಟು. ಅಮೇರಿಕದಲ್ಲಿರುವಂತೆ ಕಾಂಗ್ರೆಸ್ ಅಥವಾ ಜನ ಆಯ್ದ ಅಧ್ಯಕ್ಷರೊಬ್ಬರ ಮೇಲಾಳ್ತನದಲ್ಲಿ ರಾಜ್ಯಾಂಗ ಶಾಸನಕ್ಕೆ ಒಳಪಟ್ಟು ನಡೆವ ಕಾಂಗ್ರೆಷನಲ್ ಪದ್ಧತಿ ಇರಬಹುದು. ಇಂಗ್ಲಂಡಲ್ಲಿರುವಂತೆ ವಂಶಪಾರಂಪರ್ಯವಾಗಿ ನಡೆದು ಬಂದ ರಾಜರಾಣಿಯರ ಸಾಂಕುಶ ಆಡಳಿತವಾಗಿ ಪ್ರಜಾಪ್ರತಿನಿಧಿಗಳು ನಡಸುವ ಪಾರ್ಲಿಮೆಂಟರಿ ಅಥವಾ ಸಂಪುಟ-Cabinet- ಸರ್ಕಾರವಾಗಿರಬಹುದು. ಏಕಕೇಂದ್ರವಾದ ರಾಜ್ಯಾಂಗ ಇಂಗ್ಲಂಡಲ್ಲಿದ್ದರೆ, ಅನೇಕ ರಾಜ್ಯಗಳ ಅಂಶಸ್ವಾತಂತ್ರ್ಯದಲ್ಲಿ ವ್ಯಾಪಿಸಿ ಸಂಯುಕ್ತ ರಾಜ್ಯಾಂಗವಾಗಿ ಏರ್ಪಟ್ಟದ್ದು ಅಮೇರಿಕದ ಆಡಳಿತ. ಇವೆರಡರ, ಇನ್ನು ಕೆಲವು ರಾಜ್ಯಗಳ ಲಕ್ಷಣಗಳನ್ನು ಬಳಸಿಕೊಂಡು ಆಯ್ದ ಅಧ್ಯಕ್ಷರೊಬ್ಬರನ್ನು ಪರಮಾಧಿಕಾರಿಯಾಗಿ ಮಾಡಿ, ಬ್ರಿಟನ್ನಿನ ಪಾರ್ಲಿಮೆಂಟರಿ ಪದ್ಧತಿಯ ಪ್ರಕಾರಗಳನ್ನು ಹಿಡಿದು 19-20 ರಾಜ್ಯಗಳಲ್ಲಿ ಕೆಲವೆಡೆ ಕೇಂದ್ರಾಧಿಕಾರವನ್ನು ನಡಸುತ್ತ, ಸಂಯುಕ್ತ ರಾಜ್ಯ ಪದ್ಧತಿಯ ರೂಪದ ರೀತಿ ನೀತಿಗಳನ್ನು ನಡಸುತ್ತಿರುವ ನಮ್ಮ ನಾಡಿನಂಥ ಪ್ರಜಾಸತ್ತೆ ಉಂಟು. ಇಲ್ಲೆಲ್ಲ ಬಹುಮತದ್ದೇ ಆಡಳಿತ. ಇಂಗ್ಲಂಡಲ್ಲಿಯೂ ಅಮೇರಿಕದಲ್ಲಿಯೂ ಸದ್ಯಕ್ಕೆ ಪ್ರಧಾನವಾಗಿ ಎರಡೇ ಪಕ್ಷಗಳು. ಒಂದು ಸೋತರೆ ಇನ್ನೊಂದು ಅಧಿಕಾರಕ್ಕೆ ಬರುತ್ತದೆ. ಭರತ ಖಂಡದಲ್ಲಿ ಇನ್ನೂ ಇಂತಹ ದ್ವಿಪಕ್ಷ ಪ್ರಾಧಾನ್ಯ ಏರ್ಪಟ್ಟಿಲ್ಲ. 1967 ರ ವರೆಗು ಒಂದು ಪಕ್ಷದ ಬಹುಮತ ಪ್ರಾಧಾನ್ಯದಿಂದಾಗಿ ಇಲ್ಲಿ ಸರ್ಕಾರ ನಡೆದಿದ್ದರೂ ಸರ್ವಜನ ಅಭಿಪ್ರಾಯ ಎಂಬುದು



ರೂಪಗೊಳ್ಳುವಂತೆ ಚರ್ಚೆ, ವಾದ, ಪರೀಕ್ಷಣ ನಡೆದು ಪಾರ್ಲಿಮೆಂಟಲ್ಲಿ ನಿರ್ಣಯ ಆಗಿ ರಾಜ್ಯಭಾರ ನಡೆಯಿತು. ಈಚೆಗೆ ರಾಜಕೀಯ ಜೀವನದಲ್ಲಿ ಕೆಲವೆಡೆ ಬೇರೆ ಬೇರೆ ಪಕ್ಷಗಳವರು ಆಳುತ್ತಿದ್ದು - ಪುನಃ 3-4 ರಾಜ್ಯಗಳಲ್ಲಿ ಬಿಟ್ಟು, - ಒಂದೇ ಪಕ್ಷದ ಆಡಳಿತಕ್ಕೆ ಬಂದಿದೆ. ಹೇಗೇ ಆಗಲಿ, ಪಾರ್ಲಿಮೆಂಟಲ್ಲಿ, ರಾಜ್ಯ ಶಾಸನ ಸಭೆಗಳಲ್ಲಿ ಯಾರು ಬಹುಮತದಿಂದ ಕಾರ್ಯಗಳನ್ನು ನಡಸಬಹುದೊ/ಬಲ್ಲರೊ, ಅಂಥವರು ಕೇಂದ್ರದ ಅಥವಾ ರಾಜ್ಯಗಳ ಬಹುಮತ ಬಲದಿಂದ ನಾಯಕರಾಗಿ ರಾಜಕೀಯ ಆಡಳಿತವನ್ನು ನಡಸುತ್ತಾರೆ. ಈ ಬಹುಮತ ದೊಡ್ಡದಾಗಿರಬಹುದು; ಸಣ್ಣದಾಗಿರಬಹುದು. ಪಾರ್ಲಿಮೆಂಟಿನ ವಿಶ್ವಾಸ ನಡೆಯುವವರೆಗೂ ಆಳುವ ವರ್ಗಕ್ಕೆ ಚ್ಯುತಿಯಿಲ್ಲ. ರಾಜ್ಯದ ಸಾರ್ವಜನಿಕ ಜೀವನಕ್ಕೆಲ್ಲ ಸಂಬಂಧಿಸಿದ ವ್ಯವಹಾರ ಇದು.

## ಚುನಾವಣೆ

ಚುನಾವಣೆ ನಡೆವಾಗ ತುಂಬಾ ಹೆಚ್ಚು ಬಹುಮತ ಕೊಡಬೇಡಿ ಎಂದು ಯಾರೂ ಕೇಳುವ ಹಾಗಿಲ್ಲ. ಮತದಾರರ ಇಚ್ಛೆಗೆ ಒಳಪಟ್ಟ ಸಂಗತಿ ಅದು. ಎರಡೇ ಪಕ್ಷಗಳಿರುವಾಗ ಬಹುಮತ ಖಚಿತ. ಬಹುಮತ ಸ್ವಲ್ಪವೇ ಆದರೆ ಹೆದಹೆದರಿಕೊಂಡು, ಸಂತತ ಸಂಕೋಚಗಳಿಂದ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ಹೆಚ್ಚು ಬಹುಮತವಿದ್ದಾಗ ಪ್ರತಿಪಕ್ಷದ ಆರೋಪಣೆ: ನಿಮಗೆ ಪಾಶವೀ (Brute majority) ಬಹುಮತದ ಬಲವಿದೆ, ಆದ್ದರಿಂದ ದಬ್ಬಾಳಿಕೆ ಮಾಡುತ್ತಿದ್ದೀರಿ ಎನ್ನುವ ಅವಕಾಶವುಂಟು. ಕಡಮೆಯಿತ್ತು: ನಿಮ್ಮ ಬಹುಮತ ಅಲ್ಪ, ನಾಳೆ ಚುನಾವಣೆ ಮಾಡಿ, ನಮ್ಮ ಕಡೆಗೇ ಅಭಿಮತ ದೊರಕುತ್ತದೆ ಎಂದು ಉಗ್ಘಡಿಸಿ, ಸರ್ಕಾರದ ಧಾರಾಳಗಳನ್ನು ಮೊಟಕು ಮಾಡುವೆವೆನ್ನಬಹುದು. ಎರಡಕ್ಕೆ ಜಾಸ್ತಿ ಪಕ್ಷಗಳಿದ್ದು ಆಳುವ ಬಹುಮತ ಕಡಮೆ ಸಂಖ್ಯೆಯದೇ ಆದರೆ ಆಪಾದನೆ ಮತ್ತಷ್ಟು ತಟ್ಟುತ್ತದೆ. ಸಣ್ಣ ಸಣ್ಣ ಹಲವು ಪಕ್ಷಗಳು ಸೇರಿ ಆದವರ ಆಡಳಿತವಾದರೂ ಐಕಮತ್ಯ ಕಡಮೆ; ಶಿಸ್ತು ಸಡಿಲ. ಯಾರು ಯಾವಾಗ ಕಳಚಿಕೊಳ್ಳುವರೊ ಎಂಬ ಶಂಕೆ ಸರ್ವದಾ. ಅವರನ್ನು ಉಳಿಸಿಕೊಳ್ಳುವ ಯತ್ನ ಚಿಂತಾಜಡ. ನಿತ್ಯಭಯ, ಅತಂತ್ರ, ಅಸ್ತಿಮಿತಕ್ಕೆ ಕಾರಣ. ಪಕ್ಷಗಳೇ ಬೇಡ, ಸರ್ವಯೋಗ್ಯರ ಆಳಿಕೆ ಆಗಲಿ ಎಂದರೆ ಆರಿಸುವವರು ಯಾರು? ಅವರು ನಡೆಯದಿದ್ದರೆ ಅವರನ್ನು ಹೊಂದಿಸಿಕೊಳ್ಳುವ ಬಗೆ ಹೇಗೆ? ಅವರು ಯಾರಿಗೆ ಹೊಣೆ? ಯಾರನ್ನು ಅವರು ಪ್ರತಿನಿಧಿಸುತ್ತಾರೆ? ಎಂಬ ಪ್ರಶ್ನೆಗಳೇಳುತ್ತವೆ. ಇವನ್ನು ಜನ ಪರ್ಯಾಲೋಚಿಸಬೇಕು. ಆಗ ಟೀಕೆಗಳ ಉಗ್ರತೆ ಕಡಮೆಯಾಗುತ್ತದೆ.

## ಪ್ರಜಾಸತ್ತೆ

ಜನದ ಬಹುಮತ ಇದ್ದಲ್ಲೆಲ್ಲ ಪ್ರಜಾಸತ್ತೆ ಇದೆಯೆಂದು ಹೇಳಲಾಗುವುದಿಲ್ಲ. ಪ್ರತಿನಿಧಿಗಳು ನಡಸುವ ಆಡಳಿತ ಒಂದು ಬಗೆಯ ವಿಧಾನ. ಯಾವುದಾದರೊಂದು

ದೇಶದಲ್ಲಿ ಸರ್ವಜನಾಭಿಪ್ರಾಯಕ್ಕೆ ಒಪ್ಪುವಂತಹ ನಾಯಕನು ರಾಜ್ಯ ನಡಸಿದರೆ - ಹಿಟ್ಲರ್, ಮುಸ್ಸೋಲಿನಿಯಂತಹ ನಾಯಕರು - ತಮ್ಮ ರಾಜ್ಯಗಳ ಬಹುಮತವೆಂದು ಪ್ಲಬಿಸೈಟ್ ತೆಗೆದುಕೊಂಡು ಏಕಕಂಠವಾಗಿ ಕೆಲವೇಳೆ ತಾವು ಹೇಳಿದ್ದಕ್ಕೆಲ್ಲ ಜನ ಒಪ್ಪುವಂತೆ ಮಾಡಿಕೊಳ್ಳುತ್ತಿದ್ದರು. ಹೆಚ್ಚು ಸೌಮ್ಯರಾದ ಜನರಲ್ ದಗಾಲ್ ಅವರು (De Gaulle) ಫ್ರಾನ್ಸಲ್ಲಿ ಈಚೆಗೆ ಹಾಗೆ ಒಂದು ಮರ್ಯಾದೆಯಲ್ಲಿ ನಡಸಿಕೊಂಡರು. ಒಂದು ಕಾಲದಲ್ಲಿ ಗ್ರೀಸಲ್ಲಿ ಒಂದು ಸೈನ್ಯದ ನಾಯಕನು ತನ್ನ ಸೈನಿಕರನ್ನೆಲ್ಲ ಉದ್ದೇಶಿಸಿ ಮಾತನಾಡಿ ಇದನ್ನು ಮಾಡೋಣವೊ ಬೇಡವೊ ಎಂಬ ವಿಷಯದಲ್ಲಿ ಅಭಿಪ್ರಾಯ ಕೇಳಿ, ಅವರು ಆಯುಧವನ್ನು ಎತ್ತುವ ಅಥವಾ ಅಲ್ಲಾಡಿಸುವ ಅಥವಾ ಒಕ್ಕೊರಲಿಂದ ಕೂಗುವ ವಿಧಾನದಿಂದ ಮಾಡುವ, ಬಿಡುವ ತೀರ್ಮಾನ ಮಾಡುತ್ತಿದ್ದನಂತೆ. ಇಂಥ ಬಹುಮತದ ತೀರ್ಮಾನ ಪ್ರಜಾಸತ್ತಾತ್ಮಕವಲ್ಲ. ಹಾಗೆಯೇ ಬಹುಮತದ ಪಕ್ಷವೆಂದು ಇರುವ ಒಂದೇ ಪಕ್ಷದಿಂದ ಆಯ್ದು ಬಂದ 8-10 ಮಂದಿ ನಾಯಕರು ಪ್ರಜಾಸರ್ವರ ಜೀವನವನ್ನು ಸರ್ವಾಧಿಕಾರದಿಂದ ನಡಸುವ ಕಡೆಯಲ್ಲಿಯೂ ಕೆಲವು ಕಮ್ಯೂನಿಸ್ಟ್ ದೇಶಗಳಲ್ಲಿನಂತೆ ರಾಜ್ಯಭಾರ ನಡಸಿದರೆ ಅಲ್ಲಿಯೂ ಈ ಬಗೆಯ ಜೀವನವಿದೆಯೆನ್ನಲಾಗದು. ಪ್ರತಿನಿಧಿ ರಾಜ್ಯದ ಮೇಲಾಡಳಿತವನ್ನು ನಡಸುವವರು ಜನಾಭಿಪ್ರಾಯವನ್ನು ನಡಸುತ್ತಾರೆ. ಅವರನ್ನು ಗೊತ್ತಾದ ಕಾಲದಲ್ಲಿ ನಿರ್ಭೀತಿಯಿಂದ ಧಾರಾಳವಾಗಿ ಆಯ್ಕೆ ಮಾಡಲಾಗುತ್ತದೆ. ಪ್ರತಿನಿಧಿಗಳು ತೃಪ್ತಿ ಪಡುವಂತೆ ವಿಧಾಯಕ ಸಭೆಗಳಲ್ಲಿ ಚರ್ಚೆ ನಡೆದು ಪರ ವಿರುದ್ಧ ಎರಡೂ ಅಭಿಪ್ರಾಯಗಳಿಗೆ ಮಾನ್ಯತೆ ಕೊಟ್ಟು ಪ್ರತಿ ಸಂದರ್ಭದಲ್ಲಿಯೂ ತೀರ್ಮಾನಕ್ಕೆ ಬಂದು, ಅಲ್ಲಿ ಬಹುಮತ ದೊರೆತು ನಡಸುವ ವ್ಯವಹಾರ ಇಲ್ಲಿನದು. ಅನೇಕ ವೇಳೆ ಉಪಸಮಿತಿಗಳಲ್ಲಿ ವಿವರವಾಗಿ ಸಂಗತಿಗಳು ಪರ್ಯಾಲೋಚನೆಗೆ ಬಂದು ಪಾರ್ಲಿಮೆಂಟಿನ ಪರಿಶೀಲನೆಯಲ್ಲಿ ಕುದುರಿ ಎರಡು ಮೂರು ಮಜಲಲ್ಲಿ ಒಂದು ಬಹುಮತಾಭಿಪ್ರಾಯ ರೂಪಗೊಳ್ಳಬೇಕಾಗುತ್ತದೆ. ಹೀಗೆ ಒಂದೊಂದು ಕಡೆ ಒದೊಂದು ಬಗೆಯ ಆಡಳಿತ ವ್ಯವಸ್ಥೆಯ ಸಂಪ್ರದಾಯಗಳಿರುವುದು ಅಲ್ಲಲ್ಲಿನ ವರ್ಣರಂಜನೆ. ಆ ದೃಷ್ಟಿಯಿಂದ ಅವರು ಎಲ್ಲವನ್ನೂ ತೂಗುತ್ತಾರೆ; ಪರವಾಗಿ, ವಿರುದ್ಧವಾಗಿ. ಪ್ರತಿನಿಧಿಗಳನ್ನು ಆಯುವಾಗ ಚುನಾವಣೆಗಳು ನಡೆದು ಆಯುವ ಹಕ್ಕುಳ್ಳವರೆಲ್ಲರೂ ಮತಗಟ್ಟೆಗಳಿಗೆ ಹೋಗಿ ತಾವು ಯಾರಿಗೆ ತಮ್ಮ ಅಭಿಮತವನ್ನು ಕೊಡುತ್ತಾರೆಂಬುದು ಯಾರಿಗೂ ಗೊತ್ತಾಗದಂತೆ ರಹಸ್ಯವಾಗಿ ಕೊಡುವ ಏರ್ಪಾಡು ಇರುತ್ತದೆ. ಹೀಗೆ ರಹಸ್ಯ ಮತದಾನ ಪದ್ಧತಿಯಿಂದ ಬಹುಮತ ಬಂದವರಿಗೆ ಪ್ರಾತಿನಿಧ್ಯ. ಅವರಲ್ಲಿ ಬಹುಮತ ಗಳಿಸಿದವರಿಗೆ ಪಕ್ಷಪ್ರಾಧಾನ್ಯ: ಅಥವಾ ಶಾಸನ ಸಭೆಗಳಲ್ಲಿ ಪ್ರಾಧಾನ್ಯವುಳ್ಳ ಬಹುಮತ. ಅದು ಇರುವವರೆಗೆ ಮಾತ್ರ ಆಡಳಿತಾಧಿಕಾರ. ಹೀಗೆ ಸತತವಾಗಿ ಆಳುವವರನ್ನು ಬದಲಿಸಬಲ್ಲ ಅವಕಾಶ ಇರುವ ರಾಜ್ಯವಿಧಾನ ನಮ್ಮಲ್ಲಿ ಪ್ರಜಾಸತ್ತಾತ್ಮಕವಾದ್ದೆಂದು ಎಣಿಸಿದೆ. ಈ ವಿಧಾನಗಳಿಗೆ ಮಾನ್ಯತೆ ಇರುವವರೆಗೂ ಈ ಲಕ್ಷಣ ಸಲ್ಲುತ್ತದೆ.



## ಲಿಖಿತ ರಾಜ್ಯಾಂಗ ಶಾಸನ

ಗ್ರೀಸಲ್ಲಿಯೊ ಬೇರೆ ಕೆಲವು ಕಡೆಗಳಲ್ಲಿಯೊ ಸ್ವತಂತ್ರರಾದ ಪ್ರಜೆಗಳೆಲ್ಲ ಆಳುವ, ನ್ಯಾಯನಿರ್ಣಯ ಮಾಡುವ ಅಧಿಕಾರ ಬೇಡುತ್ತಿದ್ದಂಥ ಪ್ರಜಾಸ್ವಾಮ್ಯ ಇರುತ್ತಿತ್ತು. ಅವರೆಲ್ಲರ ಪರವಾಗಿ ಒಬ್ಬರೊ ಕೆಲವು ಮಂದಿಯೊ ನಿರಂಕುಶರಾಗಿ ಆಳುವ ಪದ್ಧತಿಯೂ ಇಲ್ಲ. ಲಿಖಿತವಾದ ಒಂದು ರಾಜ್ಯಾಂಗ ಶಾಸನದಲ್ಲಿ ಉದಾ: ಅಮೇರಿಕದಲ್ಲಿ, ನಮ್ಮಲ್ಲಿ ಇರುವಂತೆ ಎಲ್ಲವೂ ನಡೆಯತಕ್ಕದ್ದು. ನೂರಾರು ವರ್ಷಗಳ ಸಂಪ್ರದಾಯ ಬೆಳೆದು ಬಂದಂತೆ ನಡೆವ, ಗೊತ್ತಾದ ಸಮಯಗಳನ್ನೂ ನಡವಳಿಕೆಗಳನ್ನೂ ಮೀರದೆ ನಡೆವ ಬ್ರಿಟಿಷ್ ಪದ್ಧತಿಯಲ್ಲಿನಂತೆ ಬೆಳೆದ ರಾಜಕೀಯ ಜೀವನ ಶಾಂತವಾಗಿ ಪಕ್ಷಾಭಿಮತವನ್ನು ತಿಳಿದುಕೊಳ್ಳುತ್ತದೆ. ಸ್ವತಂತ್ರ ಅಭಿಪ್ರಾಯ ಸೂಚಿಸುವ ಅಧಿಕಾರ ಪಡೆದ ಜನ ವಿಧಾನ ಸಭೆಗಳಲ್ಲಿ, ಹೊರಗೆ ವೇದಿಕೆಗಳಿಂದ, ಪತ್ರಿಕೆಗಳ ಮೂಲಕ ಅಭಿಪ್ರಾಯಗಳನ್ನು ರೂಪಿಸುವ, ಸಾವಧಾನದಿಂದ ನಿರ್ಣಯಕ್ಕೆ ಬರುವ ಅವಕಾಶ ತೆರೆದಿರುತ್ತದೆ. ಒಂದು ಸಲ ಹೀಗೆ ತೀರ್ಮಾನವಾಯಿತೆಂದರೆ ಇನ್ನೊಂದು ಸಲ ಅದನ್ನು ಬೇರ್ಪಡಿಸಲೂ ರದ್ದು ಮಾಡಲೂ ಶಾಂತವಾದ ಅವಕಾಶ ಇರುತ್ತದೆ. ಹೀಗೆ ಸ್ವತಂತ್ರವಾದ ಚರ್ಚೆಗೆ ಅವಕಾಶವೂ ಪ್ರತಿನಿಧಿಗಳ ಸಂಖ್ಯೆಯಲ್ಲಿ ಪರ ವಿರುದ್ಧ ಇಷ್ಟು ಎಂದು ಎಣಿಸಿ ತೀರ್ಮಾನಮಾಡಿ ಅದರಂತೆ ನಡೆಯುವುದೂ ಪದ್ಧತಿ. ಸಂದಿಗ್ಧತೆ ಬಂದಾಗ, ನ್ಯಾಯದ ಅಥವಾ ಕಾನೂನಿನ ವಿರೋಧ ಬಂದಾಗ, ಹೀಗೆ ಹೀಗೆ ತೀರ್ಮಾನಿಸಬೇಕು ; ಪರಮ ನ್ಯಾಯಶಾಲೆಗಳಲ್ಲಿ ಕಡೆಯ ನಿರ್ಣಯವಾದ ಮೇಲೆ ವಿರುದ್ಧ ಅಭಿಪ್ರಾಯ ಬಂದುದನ್ನು ಬಿಟ್ಟುಬಿಡುವುದು ರೂಢಿ ; ಇಲ್ಲವಾದರೆ ಹೊಸ ಶಾಸನ ರಚಿಸಬೇಕು.

## ಪ್ರಜಾಸ್ವಾತಂತ್ರ್ಯ

ಇದು ಶಾಸನಗಳ ಮತ್ತು ರಾಜಕೀಯ ನಡವಳಿಕೆಯ ವಿಧಾನವಾಯಿತು. ಇಲ್ಲಿ ಪ್ರಜಾಸ್ವಾತಂತ್ರ್ಯ ಮೂಲಲಕ್ಷಣ ; ಪ್ರಧಾನ ಲಕ್ಷಣ. ಮಾತಿನ ಸ್ವಾತಂತ್ರ್ಯ, ಬರವಣಿಗೆಯ ಸ್ವಾತಂತ್ರ್ಯ, ಧಾರಾಳವಾಗಿ ಅಭಿಪ್ರಾಯ ಮೂಡಿಸುವ, ಕೂಡಿಸುವ ಸ್ವಾತಂತ್ರ್ಯ, ಚರ್ಚೆಯ ಸ್ವಾತಂತ್ರ್ಯ, ನಿರ್ಣಯ ಸ್ವಾತಂತ್ರ್ಯ ಇವು ಸಾಧನ ಮಾತ್ರ. ಈ ಮೂಲಕ ಜನಹಿತವನ್ನು ಸಾಧಿಸಬೇಕು ಎಂದಾಗ ಈ ಹಿತವಾವುದು, ಯಾವ ವರ್ಗಗಳದು, ಯಾವುದು ಮೊದಲಾಗಬೇಕು, ಯಾವುದು ಸ್ವಲ್ಪ ಕಾಲ ತಡೆಯಬಹುದು ಎಂಬುದನ್ನು ಶಾಸನಗಳೂ ಚರ್ಚೆಗಳೂ ರೂಪಿಸಬೇಕು. ಗಮ್ಯ ಮಾರ್ಗ ಅದು. ಇಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬಳಕೆಯಲ್ಲಿರುವ ಪ್ರಜಾಸತ್ತೆಯ ಪದ್ಧತಿಗಳಿಗೂ ಸೋಷಲಿಸ್ಟ್ ಸಮಾಜವಾದಿ ಅಥವಾ Egalitarian Democracyಗೂ ಸಮಾನತಾವಾದಿ ಡೆಮಾಕ್ರಸಿಗಳಿಗೂ ಕ್ರಮಭೇದವುಂಟು. ಇಲ್ಲಿ ಸ್ವಾತಂತ್ರ್ಯಕ್ಕೆ, ನಿಯತ ವಿಧಾನಗಳಿಗೆ ಬೆಲೆ

ಹೆಚ್ಚು. ಅಲ್ಲಿ ಈ ವಿಧಾನವಲ್ಲ. ನಾಲ್ವರೊ ಒಬ್ಬರೊ ನಾಯಕರೆಂಬುದು ಪಕ್ಷದಲ್ಲಿ ತಮ್ಮ ಪ್ರಾಧಾನ್ಯದ ಬಲದಿಂದ ತೀರ್ಮಾನ ಮಾಡಿ ಇದು ಸಮಾಜಹಿತ, ಇದನ್ನು ಹೀಗೆ ಸಾಧಿಸಬೇಕೆಂದು ತೀರ್ಮಾನಿಸಿದ್ದೇವೆ, ಆ ವ್ಯವಹಾರಗಳು ದೇಶದ ಉತ್ಪತ್ತಿ, ವಿನಿಮಯ, ವರಮಾನ ಹಂಚಿಕೆ - ಎಂದು ನಿರ್ಧರಿಸಿರುತ್ತಾರೆ. ಅದರಂತೆ ನಡೆಯತಕ್ಕದ್ದು, ಇಲ್ಲವಾದವರು ದೇಶಕ್ಕೆ ಅಹಿತರು ಎಂದು ನಿರ್ಣಯವಾಗುತ್ತದೆ. ಈ ಎಲ್ಲ ಕಡೆಯೂ 'ಡೆಮಾಕ್ರಸಿ' ಎಂಬ ಮಾತನ್ನು ಬಳಸಿದರೂ ಮಾತಿನ ಅರ್ಥವ್ಯಾಪ್ತಿ, ವಿಧಾನಕ್ರಿಯೆ ಬೇರೆ. ನಮ್ಮ ದೇಶದಲ್ಲಿ ಉಕ್ತಿಸ್ವಾತಂತ್ರ್ಯಕ್ಕೆ, ಚರ್ಚೆಗೆ, ವಿಧಾನ ಸಭೆಗಳ ಮತ್ತು ನ್ಯಾಯಮಂದಿರಗಳ ಪರಮಾಧಿಕಾರಕ್ಕೆ ಬೆಲೆ. ಸ್ವತಂತ್ರ ಚುನಾವಣಾ ಪದ್ಧತಿಗಳಿಗೆ ಒಳಪಡುವ ಪ್ರಜಾಸತ್ತೆಯೇ ಮಾರ್ಗ.

## ದಂಡು

ಈ ಎಲ್ಲ ರಾಜ್ಯಗಳ ಹಿಂದೆಯೂ ರಾಜ್ಯದ ಕಾನೂನು, ಅದರ ಹಿಂದೆ ಶಿಕ್ಷೆ, ರಕ್ಷೆ, ಅಧಿಕಾರ ; ಶಾಂತಿ ಕಾಲದಲ್ಲಿ ಪೊಲೀಸ್ ದಳ, ಉದ್ರಿಕ್ತ ಕಾಲಗಳಲ್ಲಿಯೂ ಯುದ್ಧಕಾಲಗಳಲ್ಲಿಯೂ ಸೈನ್ಯಶಕ್ತಿ ಬೆಂಬಲವಾಗಿ ಕಾದಿರುತ್ತವೆ. ಅದು ರಾಜ್ಯ ದಂಡ ಶಕ್ತಿಯ ಆಧಾರ. ಶಾಂತಿಯ ನಿಯಂತ್ರಣ, ಯುದ್ಧಕಾಲದ ಜಯಸಾಧನೆ ಇವೆರಡಕ್ಕೂ ರಾಜ್ಯಾಂಗ ಶಾಸನ ಕೊಟ್ಟ ದಂಡಾಧಿಕಾರವೇ ಸಾಧಕ.

ಆಡಳಿತದವರೂ ಪಕ್ಷಪ್ರತಿಪಕ್ಷಗಳೂ ತೀರ್ಮಾನಿಸಿದಂತೆ, ಅದಕ್ಕೆ ಜನ ಒಪ್ಪಿದಂತೆ, ನಾವು ಡೆಮಾಕ್ರಸಿ ಎನ್ನುವಾಗ ಯಾವ ಬಗೆಯ ಡೆಮಾಕ್ರಸಿ? ಇದರ ಸಮಯಗಳೇನು, ವಿಧಾನಗಳೇನು? - ಎಂಬುದನ್ನು ಅರಿಯಬೇಕು. ಎಲ್ಲ ಬಗೆಯನ್ನೂ ಆ ಅರ್ಥದಲ್ಲಿ ಬಳಸಲಾಗುವುದಿಲ್ಲ. ಒಂದು ಪದ್ಧತಿಯನ್ನು ಇನ್ನೊಂದು ಪದ್ಧತಿಯವರು ಒಪ್ಪರು ; ಒಂದರ ವಿಧಾನಕ್ರಿಯೆ ಇನ್ನೊಂದರಲ್ಲಿ ನಡೆಯದು. ಆದುದರಿಂದ ಪ್ರಜೆಯ ಹಿತಾಕಾಂಕ್ಷೆ ಎಲ್ಲೆಲ್ಲಿ ಹೇಗೆ ಹೇಗೆ ಸಾಧಿತವಾಗುತ್ತದೆಯೊ ಅದರಂತೆ ತಮಗೆ ಒಪ್ಪಿತವಾಗುವ ಪ್ರಜಾರಾಜ್ಯ ತಮಗಿದೆಯೊ ಇಲ್ಲವೊ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮಂಥ ದೇಶದಲ್ಲಿ ಈ ಮೂರು ಬಗೆಯ ಪಂಥಗಳು ಸರ್ವಸ್ವಾತಂತ್ರ್ಯದಿಂದ ತಮ್ಮ ಪರ ಪ್ರಚಾರ ನಡಸುತ್ತಿರುವಾಗ, ಹತ್ತಾರು ಪಕ್ಷಗಳು - ಹತ್ತಾರೇನು? ಕೇಂದ್ರದಲ್ಲಿ ಕಡಮೆಯೆಂದರೆ 14-15; ರಾಜ್ಯಗಳಲ್ಲಿ ಇನ್ನೂ ಹೆಚ್ಚು ಸಂಖ್ಯೆ - ಇರುವಾಗ, ಪ್ರತಿಯೊಬ್ಬರೂ ತಮ್ಮ ಪರವಾಗಿ ತೀಕ್ಷ್ಣವಾಗಿ ಪ್ರಚಾರ ಮಾಡುತ್ತಿರುವಾಗ ಸತ್ಯಸಂಗತಿ ಎಂಬುದು ಭಿನ್ನಾಭಿಪ್ರಾಯಗಳಿಗೆ ಒಳಪಡುತ್ತದೆ. ಸ್ವತಂತ್ರ ಪ್ರತಿನಿಧಿಗಳಾಗಿ ಆಯ್ದು ಬಂದವರು ಪೂರ್ತಿ ಸ್ವತಂತ್ರರು. ಇನ್ನಾರನ್ನೂ ಅವರು ಪ್ರತಿನಿಧಿಸರು. ಅವರು ಹೇಗೆ ಬೇಕಾದರೂ ನಡೆಯಲೂ ನುಡಿಯಲೂ ಸ್ವತಂತ್ರರು. ಈಗ ಹೀಗೆ, ಬೇರೆ ಸಮಯದಲ್ಲಿ ಇನ್ನೊಂದು ರೀತಿ ನಡೆಯಲು ಅವರಿಗೆ ಅವಕಾಶವುಂಟು. ಇವರೆಲ್ಲರ ಮೌಲ್ಯ ದೃಷ್ಟಿ ಬೇರೆ ಬೇರೆ.



ಭಾಷಣಗಳಲ್ಲಿ, ಲೇಖನಗಳಲ್ಲಿ, ಪ್ರಭಾವ ಮಂಡಲಗಳಲ್ಲಿ, ಪಕ್ಷಸತ್ಯಗಳು ಪೂರ್ಣಸತ್ಯಗಳೆಂಬಂತೆ ಪ್ರತಿಪಾದಿತವಾಗುತ್ತವೆ. ಎಲ್ಲರ ಗುರಿಯೂ ದೇಶಹಿತವೇ! ಅಂಥ ಕಾರ್ಯಪ್ರವೃತ್ತವಾಗಬೇಕೆಂಬವೇ ಹೆಚ್ಚು. ಪ್ರತಿನಿಧಿ ಸಂಖ್ಯಾಬಲ ಉಳ್ಳವರು ಹೆಚ್ಚು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಆಳುತ್ತಿರುವ ಪಕ್ಷವನ್ನು ಕೆಳಗಿಳಿಸಿ ತಾವು ಆಡಳಿತವನ್ನು ಸ್ವೀಕರಿಸಲು ಬರುವ ಅವಕಾಶವಿದ್ದಷ್ಟೂ ಈ ಹೊಣೆಗಾರಿಕೆ ಹೆಚ್ಚು. ತುಂಬಾ ಸಣ್ಣ ಪಕ್ಷವಾಗಿದ್ದು ಎಂದಿಗೂ ಮೇಲ್ಗೈ ಆಗುವ ವಿಶ್ವಾಸ ಇಲ್ಲದಿರುವವರ ಮಾತಿಗೆ, ನಡತೆಗೆ ಯಾವ ಹಿತಕರ ಮಿತಿಯೂ ಹೊಣೆಗಾರಿಕೆಯೂ ಇಲ್ಲವಾಗಿ ವಾದವನ್ನು ಸರ್ವದಾ ಕಟುವಾಗಿಯೇ ಮಾಡಲು ಉತ್ತೇಜನ ದೊರೆಯುತ್ತದೆ.

## ರಾಜಕೀಯದಲ್ಲಿ ಧರ್ಮ, ನೀತಿ

ಹಲವೇಳೆ ರಾಜಕೀಯ ಜೀವನದಲ್ಲಿ ನೀತಿ, ಧರ್ಮ ಎಂಬ ಪದಗಳನ್ನು ಅತಿ ವ್ಯಾಪ್ತಿಯಲ್ಲಿ ಬಳಸಿ ಬೆಂಡಾಗುವುದು ವಾಡಿಕೆ. ಅಲ್ಲಿ ಧರ್ಮ ಮತ್ತು ನೀತಿ ಎನ್ನುವುದು ರಾಜಕೀಯ ಜೀವನದ ಕಷ್ಟನಿಷ್ಠುರಗಳಿಗೆ ಒಳಪಟ್ಟು ಸಲ್ಲುವಂಥದು. ಅದು ಹೇಳಿಕೇಳಿ ಬಲಾಬಲ ಸಾಧನೆಗಳ ಪ್ರಪಂಚ, ಅಧಿಕಾರ ಪ್ರಯೋಜನಗಳ ಗಳಿಕೆಗೆ ಯತ್ನಿಸುವ ಕಾರ್ಯಮಂಡಲ. ಪ್ರಜಾರಾಜ್ಯಗಳಲ್ಲಿ ರಾಜಕೀಯ ಜೀವನ ಪಕ್ಷವಿನ್ಯಾಸದಲ್ಲಿ ನಡೆಯುವುದೆಂದೆ ; ಪಕ್ಷ ಎಂಬ ಹೆಸರು ಕೂಡ ಯಾವ ರಾಜ್ಯಾಂಗ ಶಾಸನದಲ್ಲಿಯೂ ಇರದು. ಶಾಸನ ಸಭೆಗಳಲ್ಲಿ ಬಹುಮತ ಪಡೆದವರು ನಾಯಕರಾದಾಗ ಪಕ್ಷಗಳವರು ಸಾಧಿಸಿಕೊಳ್ಳುವ ಬಹುಮತ ಎಂಬುದು ರೂಢವಾಗಿರುತ್ತದೆ. ಇದು ಪಕ್ಷದ ನಾಯಕರು ತಮ್ಮ ಸಭೆಗಳಲ್ಲಿ ತೀರ್ಮಾನಿಸಿದ್ದು, ಒಪ್ಪಿದ್ದು. ಅದರಷ್ಟು ಗಟ್ಟಿನಿಂತುದು, ಪ್ರಭಾವಯುತವಾದ್ದು ರಾಜಕೀಯ ಜೀವನದಲ್ಲಿ ಬೇರಾವುದೂ ಇರುವುದಿಲ್ಲ. ಜೊತೆಗೆ ಪಕ್ಷಗಳ ಶಿಸ್ತಿರುತ್ತದೆ ; ಆ ಶಿಸ್ತಿಗೆ ಅಧೀನವಾಗಿ ನಡೆಯದಿದ್ದರೆ ಆ ಸದಸ್ಯನನ್ನು ಹೊರಗೆ ಹಾಕುತ್ತಾರೆ. ಹೊರಗೆ ಹಾಕಿದಾಗಲೂ ಶಾಸನ ಮಂದಿರಗಳಲ್ಲಿರುವವರು ಒತ್ತಾಸೆಕೊಟ್ಟರೆ ಅವರು ಅಧಿಕಾರದಲ್ಲಿರಬಲ್ಲರು, ಮುಂದಿನ ಚುನಾವಣೆಗಳಲ್ಲಿ ಆತನಿಗೆ ಆ ಪಕ್ಷದಲ್ಲಿ ಆಯ್ಕೆ, ಎಣಿಕೆ ಇಲ್ಲದೆ ಅದೀತು. ವೋಟಿಗೆ ಹಾಕುವಾಗ ಇಂಥಿಂಥ ಸಮಯದಲ್ಲಿ ಈ ಪಕ್ಷದವರೆಲ್ಲ ಹೀಗೆ ಹೀಗೆ ವೋಟುಮಾಡಬೇಕು ಎಂಬ ಶಿಸ್ತು ಆಯಾ ಪಕ್ಷಗಳ ಸಚೇತಕರ-Whips-ಉಸ್ತುವಾರಿಯಲ್ಲಿ ನಡೆಯುತ್ತದೆ. ಅವುಗಳಿಂದ ತಪ್ಪಿಸಿಕೊಳ್ಳುವ ಅವಕಾಶ ಕಡಮೆ. ರಾಜಕೀಯ ಸ್ವಾತಂತ್ರ್ಯದ ಮಿತಿ ಕೇವಲ ಸ್ವಾತಂತ್ರ್ಯವಲ್ಲ - ಪಕ್ಷದ ಶಿಸ್ತಿನಿಂದ ನಿರ್ಣಯವಾಗುವುದು. ಸಚೇತಕನು ಗೊತ್ತು ಮಾಡಿದವರೇ ನಿರ್ಣಯಗಳನ್ನು ಮಂಡಿಸಬೇಕು : ಈ ಕ್ರಮದಲ್ಲಿ ಮಾತನಾಡಬೇಕು ಎಂದಿರುತ್ತದೆ. ಅದರಲ್ಲಿ 'Three Line Whip' ಎಂಬ ಒಂದು ಕಡ್ಡಾಯವಾದ ಮುಪ್ಪುರಿ ಶಿಸ್ತು ಹಾಕಿದಾಗಂತೂ ಪಕ್ಷದ ಯಾವ ಸದಸ್ಯನೂ ಕಮಕ್ ಕಿಮಕ್ ಎನ್ನುವ ಹಾಗಿಲ್ಲ. ಇದು ಸರಿಯೆ? ತಪ್ಪೆ? ಹಿತವೆ?

ಅಲ್ಲವೆ? ಎಂಬುದಲ್ಲ ಆಗ ಮುಖ್ಯ. ಶಾಸನ ಸಭೆಯಲ್ಲಿ ವೋಟಿನ ಗಂಟೆ ಬಾರಿಸಿದಾಗ ಆಯಾ ಪಕ್ಷಗಳವರು ಅವರವರ ಸ್ಥಾನಗಳಿಗೆ ಓಡಿಬಂದು ನಿಂತು ಕೈಯೆತ್ತಬೇಕು; ವೋಟು ಚಾಲನೆ ಮಾಡಬೇಕು. ನಾಯಕರು, ಪಕ್ಷ ಹೇಗೆ ತೀರ್ಮಾನಿಸಿದ್ದಾರೆಯೊ ಹಾಗೆ ನಡೆಯತಕ್ಕದ್ದು. ಬೇರೆ ಸ್ವಾತಂತ್ರ್ಯವಿಲ್ಲ. ಇದನ್ನು ಸ್ವಾತಂತ್ರ್ಯ, ಧಾರಾಳ ಎನ್ನಬಹುದೆ? ಎಂದೀರಿ. ಬೇರೆ ಪಕ್ಷಕ್ಕೆ ಹೋಗಬಹುದು, ವೋಟು ಮಾಡದೆ ಸುಮ್ಮನಿರಬಹುದು. ಸಭೆಯಲ್ಲಿ ಪ್ರತ್ಯಕ್ಷವಾಗಿದ್ದು ವೋಟು ಮಾಡದಿರುವುದು ದುಸ್ತರ. ಇವೆಲ್ಲ ದಾರುಣ ಸತ್ಯ ಸಂಗತಿಗಳು. ಮೌಲ್ಯಗಳ ದರ್ಶನಕ್ಕೆ ಈ ಸತ್ಯದ ಅರಿವು ಅಗತ್ಯ.

ಇನ್ನೊಂದಂಶ: ರಾಜಕೀಯ ಜೀವನದಲ್ಲಿ ನೀತಿ, ಧರ್ಮ ಎಂದಾಗ ಹಿಂದಿನ ಪ್ರಕರಣದಲ್ಲಿ ಸೂಚಿಸಿದ ಧರ್ಮ, ನೀತಿಯನ್ನಲ್ಲ ನಾವು ಯೋಚಿಸುವುದು. ಆಡಳಿತಪಕ್ಷ ತನ್ನ ಕಡೆಗೆ ಬಹುಮತವನ್ನು ಉಳಿಸಿಕೊಂಡು ತಾನು ಆಡಳಿತದಲ್ಲಿ ಇರುವಂತೆ ನಿರಂತರವಾಗಿ ಯತ್ನಿಸುತ್ತಿರುತ್ತದೆ, ತಮ್ಮ ದೌರ್ಬಲ್ಯಗಳನ್ನು ಕಡಮೆಮಾಡಿಕೊಂಡು ತನ್ನ ಶಕ್ತಿಯನ್ನೂ ಪ್ರಭಾವವನ್ನೂ ಹೆಚ್ಚಿಸಿಕೊಳ್ಳಲು ಸರ್ವದಾ ಯತ್ನಿಸುತ್ತಿರುತ್ತದೆ. ಮುಂದಿನ ಚುನಾವಣೆಯಲ್ಲಿಯೂ ಅಧಿಕಾರದಲ್ಲಿರಲು ಅದು ಸರ್ವದಾ ಯತ್ನಿಸುವಂತೆ, ಅದನ್ನು ಕೆಳಗಿಳಿಸಲೂ ಅದಕ್ಕೆ ಅಧಿಕಾರ ತಪ್ಪಿಸಿ ತಾವು ಮೇಲಕ್ಕೆ ಬರಲೂ ವಿರೋಧ ಪಕ್ಷಗಳು ಸರ್ವದಾ ಯತ್ನಪಡುತ್ತಿರುತ್ತವೆ. ಅದಕ್ಕಾಗಿ ಆಮಿಷಗಳನ್ನು ಹಾಕುತ್ತಿರುತ್ತವೆ. ಎಂದರೆ ಉಳಿಯಲು ಅವರು, ಉರುಳಿಸಲು ಇವರು ಮಾಡುವ ಕೆಲಸ ರಾಜಕೀಯ ಜೀವನದಲ್ಲಿ ನಡೆಯುವ ನಿರಂತರ ವ್ಯವಹಾರ. ಅಸಹ್ಯ; ಆದರೆ ನಿಜ. ಇಲ್ಲಿ ನಿಯಮಗಳೊ ಸಮಯಗಳೊ ದೊಡ್ಡ ಸಂಪ್ರದಾಯಗಳೊ ಸಂಕೇತಗಳೊ ಕಾನೂನಿನ ನಿರ್ಬಂಧಗಳೊ ಇದ್ದು ಕಾಪಾಡವಾದರೆ ಇದು ಕಾಡು ಜೀವನ. ಈ ಮೂರು ವರ್ಷಗಳಲ್ಲಿ ಭರತಖಂಡದಲ್ಲಿ ಎದ್ದು ಕಂಡಿರುವ ಪ್ರವೃತ್ತಿಗಳನ್ನು ನೋಡಿದರೆ ಯಾರಿಗೂ ಈ ಸಂಗತಿ ವೇದ್ಯವಾದೀತು. ಇಲ್ಲಿ ಧರ್ಮಬೋಧೆ ಯಾರಿಗೆ ಯಾರು ಮಾಡುವುದು? ಉಳಿಯುವುದಕ್ಕೆ, ಗೆಲ್ಲುವುದಕ್ಕೆ, ಸೋಲಿಸುವುದಕ್ಕೆ, ತಾವು ಅಧಿಕಾರಕ್ಕೆ ಒದಗುವ ವಿಧಾನ ಕ್ರಿಯೆಗೇ ರಾಜಕೀಯ ಜೀವನವೆನ್ನುವದು. ಅಲ್ಲಿ ಧರ್ಮಸೂಕ್ಷ್ಮಗಳನ್ನು ಉಪದೇಶಿಸಹೋಗುವುದೂ ನಿರೀಕ್ಷಿಸಹೋಗುವುದೂ ಸಲ್ಲದ ವ್ಯಾಪಾರ. ಅವು ನಡೆಯುವುದಿಲ್ಲ. Power Politics ಎಂಬ ಮಾತಾಡಬಹುದು. ಎಲ್ಲ ರಾಜಕೀಯವೂ Power ರಾಜಕೀಯವೇ. ಆಳುವ ಅಧಿಕಾರ ಪಕ್ಷಗಳ ಬೆನ್ನಿಗಾಗಲಿ ವಿರುದ್ಧ ಪಕ್ಷಗಳವರ ಬೆನ್ನಿಗಾಗಲಿ ಯಾವ ಯಾವ ಬಲವಿದೆ, ದೊರಕಬಲ್ಲದು ಎಂಬುದು, ಇವನ್ನು ಪ್ರಭಾವಗೊಳಿಸುವವು ಆಡಿಸುವವು ಯಾವುವು? ಅವುಗಳ ವಿಧಾನಗಳು ಎಷ್ಟು ಅದ್ಭುತ? ಎಂಬ ಕಾಂಡ ರಾಜಕೀಯದ ಹಾಸುಹೊಕ್ಕು. ಪಕ್ಷ ಪ್ರಧಾನನೌಕರವರ್ಗ, ಸೈನ್ಯದ ಬಲ ಪಕ್ಷಪಾತ ಮತ, ಧನಶಕ್ತಿ, ವೃತ್ತಪತ್ರಿಕೆಗಳ ಬಲ ಮುಂತಾದವು ಶಕ್ತಿ ಪ್ರಭಾವವಲಯಗಳಾಗಿ ಕಾರ್ಯಮಾಡುತ್ತವೆ.



## ಸ್ವಾತಂತ್ರ್ಯ, ನ್ಯಾಯ, ಸಮಾನತೆ

ಈ ಹಿನ್ನೆಲೆಯಲ್ಲಿ 'ನ್ಯಾಯ' (ಜಸ್ಟಿಸ್), 'ಸಮಾನತೆ' (ಈಕ್ವಾಲಿಟಿ), 'ಸ್ವಾತಂತ್ರ್ಯ'(ಲಿಬರ್ಟಿ) ಎನ್ನುವ ಮಾತುಗಳಿಗೆ ಅರ್ಥವೇನು? ಬೆಲೆ, ಸ್ಥಾನ ಮಾನ ಏನು? ಎಂಬುದನ್ನು ಪ್ರಜೆಗಳು ಅರ್ಥಮಾಡಿಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ 'ಸ್ವಾತಂತ್ರ್ಯ'ವೆಂಬ ಮಾತಿಗೆ ಇರುವ ಬೆಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಅದೊಂದಿದ್ದರೆ ಉಳಿದ ಏನನ್ನಾದರೂ ಸಾಧಿಸಬಹುದು ಎಂಬುದು ಎಣಿಕೆ. ನಿಜ. ಈ ಪದಕ್ಕೆ ನಿರ್ಬಂಧ ಇಲ್ಲದಿರುವುದು ಎಂಬ ಒಂದು ಮುಖವಿದೆ. ಬೇಕಾದುದನ್ನು ಮಾಡುವ ಅವಕಾಶ ಎಂಬ ಇನ್ನೊಂದು ಮುಖವಿದೆ. ಮೊದಲನೆಯದು 'ಫ್ರೀಡಂ', ಎರಡನೆಯದು 'ಲಿಬರ್ಟಿ'. ಏನನ್ನು ಮಾಡುವುದಕ್ಕೆ, ಹೇಗೆ ಮಾಡುವುದಕ್ಕೆ? ಎಂಬುದು ಒಂದು ಕಡೆ ಅಡ್ಡಿ ಉಳ್ಳದ್ದು ; ಇನ್ನೊಂದು ಕಡೆ ಅವಕಾಶ ಇರುವುದು ಇರದ್ದು, ಈ ಯಾವುದಕ್ಕೆ ಕಾನೂನಿನ ಮಂಡಲ ಸಹಾಯಕ ? ಯಾವುದಕ್ಕೆ ವಿರುದ್ಧ? ಕಾನೂನು ಮಾರ್ಪಡಲಾಗುವಂಥದೆ? ಮಾರ್ಪಡಲಾಗದ್ದೆ? ಯಾವುದು ಸುಲಭವಾಗಿ, ಬೇಗ ಮಾರ್ಪಡಬಲ್ಲದ್ದು? ಯಾವುದರ ಮಾರ್ಪಾಡು ಕ್ಲಿಷ್ಟ, ಅಶಕ್ಯ? ಎಂಬ ಭಾಗವಿರುತ್ತದೆ. ಅಶಕ್ಯವೆಂಬುದಿರಬೇಕೆ ಎಂಬುದು ಮತ್ತೊಂದು. ಒಂದು ವೋಟಿನ ಅಧಿಕತೆ ಸಾಕು, ಒಟ್ಟು ಲೋಕಸಭೆಯಲ್ಲಿ ಬಹುಮತದಿಂದ ಒಪ್ಪಿದ್ದು ರಾಜ್ಯಸಭೆಯ 2/3 ಭಾಗದವರಿಂದ ಒಪ್ಪಲು. 0.33 ಮಾತ್ರ ವೋಟು ಪ್ರಮಾಣದಿಂದ ಇನ್ನೊಂದು ವಿಧೇಯಕ ಬಿದ್ದುಹೋಗಬಹುದು. 'ದೇಶ' ಇದನ್ನು ಒಪ್ಪಲಿಲ್ಲ ಎಂಬ ಆಪಾದನೆ ಏಳಬಹುದು: ದೇಶ 1 ರಲ್ಲಿ 1/3 ಪ್ರಮಾಣಕ್ಕಿಳಿಯಿತು.

## ಸ್ವಾತಂತ್ರ್ಯ

ಸ್ವಾತಂತ್ರ್ಯವೆಂಬ ಹೆಸರಲ್ಲಿ ತೆರೆದ ವಾತಾವರಣವೂ ಅವಕಾಶವೂ ಇದ್ದರೂ ಒಂದು ರಾಜ್ಯದ ಆಡಳಿತ ನಡೆಯುತ್ತಿರುವಾಗ ಇದು ಎಲ್ಲ ಸಮಯದಲ್ಲಿಯೂ ದೊರಕಲೇ ದೊರಕುತ್ತದೆಂಬ ಖಾತರಿ ಇರುವುದಿಲ್ಲ. ಆಡಳಿತ ನಡಸುವವರು ಜನರ ಧಾರಾಳದ ಮೇಲೆ ನೂರಾರು ಬಗೆಯಲ್ಲಿ ಒತ್ತಾಯ ಹಾಕುತ್ತಲೇ ಇರುತ್ತಾರೆ. ದಿನ ಬೆಳಗಾದರೆ ನಗರಸಂಸ್ಥೆಗಳೂ ಪೊಲೀಸ್ ಅಧಿಕಾರಿಗಳೂ ಕಚೇರಿಗಳಲ್ಲಿ ಕೆಲಸ ಮಾಡುವವರೂ ಕಾರ್ಖಾನೆಗಳ ಅಧಿಕಾರಿಗಳೂ ಮಾಡುವ ತೀರ್ಮಾನ, ವಿಧಿಸುವ ನಿಯಮ ಸರ್ವಥಾ ನಿರ್ಬಂಧವೇ. ಇವನ್ನು ಮೀರುವ ಹಾಗಿಲ್ಲ. ಒಂದು ರಸ್ತೆ ಹಾದು ಹೋಗಬೇಕಾಗಿರುವಾಗ ಅನುಸರಿಸಬೇಕಾದ ನಿಯಮ ಕೂಡ ಪೀಡೆಯೇ. ಆದರೆ ಸಾರ್ವಜನಿಕ ಸೌಕರ್ಯಕ್ಕಾಗಿ ಕ್ಷೇಮಕ್ಕಾಗಿ ಇವನ್ನು ಮಾಡಿರುವುದರಿಂದ ಇವಕ್ಕೆ ಬದ್ಧರಾಗಿ ನಡೆಯುವುದು ಅಗತ್ಯ. ಇಲ್ಲವಾದರೆ ವ್ಯಕ್ತಿಯ ಪ್ರಾಣ ರಕ್ಷಣೆಗೇ ಸಂಚಾರಕ್ಕೇ

ಅಂಗಡಿಮನೆ ಮುಂಗಟ್ಟುಗಳ ಸುಭದ್ರತೆಗೇ ಅವಕಾಶವಿಲ್ಲವಾಗುತ್ತದೆ. ರಾಜ್ಯದ ಕಾನೂನು ಜನರ ಆಸ್ತಿಪಾಸ್ತಿ, ವ್ಯವಹಾರ, ದೇಹದ ಸುರಕ್ಷಣೆಗಳನ್ನು ರಕ್ಷಿಸುವುದು ಧರ್ಮವೆಂದು ಇವು ಎಲ್ಲ ಹಕ್ಕು ಎಂದು ಒಪ್ಪುತ್ತೇವೆ. ಅದಕ್ಕೆ ತಕ್ಕ ಹಾಗೆ ಶಿಸ್ತನ್ನು ಮಾಡಿರುತ್ತಾರೆ. ಕಾನೂನಿನಂತೆ ನಡೆಯುವವರೆಗೂ ಈ ರಕ್ಷಣೆ ಸಿಕ್ಕುತ್ತದೆ. ಇದನ್ನು ಮುರಿದವರು ಶಿಕ್ಷೆಗೆ ಗುರಿಯಾಗುತ್ತಾರೆ. ಈ ಶಿಕ್ಷೆ ಸಾಮಾನ್ಯ ದಂಡವೊ ಆಜೀವ ತುರಂಗವಾಸವೊ ಮರಣವೊ ಆಗಬಲ್ಲದು. ಸಮಾಜದ ಜನ ದೀರ್ಘಕಾಲದ ಸರ್ವಜನ ಹಿತರಕ್ಷಣೆಯ ದೃಷ್ಟಿಯಿಂದ ಈ ಅಧಿಕಾರವನ್ನು ತೆಗೆದುಕೊಳ್ಳಬಹುದು; ಮಾರ್ಪಡಿಸಬಹುದು. ಜನ ನಡಸಿಕೊಡುವವರೆಗೆ ಅದು ನಡೆಯುತ್ತದೆ. ಮಿತಿ ಮೀರಿದರೆ ಜನ ದಂಗೆಯೆದ್ದಾರು ಎಂಬ ಭಯ ಎಲ್ಲಿಯೂ ಸರ್ವದಾ ಉಂಟು. Contingent Anarchy, ಅರಾಜಕತೆ ಗಿಳಿದೀತು. ಅದನ್ನು ಬಯಸಬಾರದು ಎಂಬುದು ಎಣಿಕೆ.

ಕಾನೂನಿನ - ರಾಷ್ಟ್ರಕರಿಗೆ ಸಲ್ಲುವ ಸಮಾನಾವಕಾಶ - ಎದುರು ಪ್ರಜೆಗಳೆಲ್ಲ ಸಮರು ಎಂಬುದು ದೃಷ್ಟಿ ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿ. ಇದಕ್ಕೆ ಮೊದಲ ಪ್ರಾಧಾನ್ಯ. ವರ್ಗವರ್ಗಗಳಿಗೆ ಮೇಲು ಕೀಳು ಎಂಬ ಭಿನ್ನತೆ ಇರದು, ಸಲ್ಲದು. ಅಧಿಕಾರಿಗಳು, ಸಾಮಾನ್ಯರು, ಸರ್ಕಾರ, ಪ್ರಜೆ ಎಂಬ ಭಿನ್ನತೆಯೂ ಇರುವುದಿಲ್ಲ. ಬೇರೆ ಬೇರೆ ನ್ಯಾಯಮಂಡಲಗಳಲ್ಲಿ ವಿಚಾರಣೆ, ಕ್ರಮ ಇರುವುದಿಲ್ಲ. ನಾಡಿಗೆಲ್ಲ ಒಂದು Common Law ಇರುತ್ತದೆ (ಸೈನ್ಯಶಾಸನ ಮಾತ್ರ ಎಲ್ಲೆಲ್ಲಿಯೂ ಬೇರೆ). ಆದುದರಿಂದ ಎಲ್ಲರಿಗೂ ಒಂದೇ ನ್ಯಾಯ ದೊರಕುವುದೆಂದು ನಂಬಿಕೆ ಇರುತ್ತದೆ. ನ್ಯಾಯ ಮಂಡಲದಲ್ಲಿ 2-3 ಮೆಟ್ಟಿಲಲ್ಲಿ ಕೆಳಗಣ ನ್ಯಾಯಾಲಯಗಳಿಂದ ಮೇಲಿನ ನ್ಯಾಯಸಂಸ್ಥೆಗಳಿಗೆ, ಅಲ್ಲಿಂದ ಎಲ್ಲಕ್ಕೂ ಮೇಲ್ಮಟ್ಟದ ಸರ್ವೋಚ್ಚ ನ್ಯಾಯಾಲಯಗಳಿಗೆ - ದೊರೆಯವರೆಗೆ ದೂರು ಎಂಬಂತೆ - ದೂರು ಹೋಗುವ ಅವಕಾಶ ಇರುತ್ತದೆಯಾಗಿ, ನ್ಯಾಯನಿರ್ಣಯ ದೇಶದ ಕಾನೂನಂತೆ ಖಂಡಿತವಾಗಿ ಆಗುತ್ತದೆ. ಇದು ಜನಕ್ಕೆ ಸ್ವಾತಂತ್ರ್ಯ ಒದಗಿಸಿಕೊಟ್ಟಿರುವ ಅವಕಾಶವಾದರೂ ಇದಕ್ಕೆ ಹಣವ್ಯಯ, ಕಾಲವ್ಯಯ ಬಹುವಾಗಿ ಹಿಡಿಯುತ್ತದೆ. ಆದ್ದರಿಂದ ನ್ಯಾಯ ದೊರಕುವುದು ತಡವಾಗಬಹುದು. ವೆಚ್ಚ ಮಾಡಲು ಶಕ್ತಿ ಇರುವವರಿಗೆ ಹೊರತು ಹಣಶಕ್ತಿ ಇಲ್ಲದವರಿಗೆ ನ್ಯಾಯ ಸುಲಭವಾಗಿ ದೊರೆಯದೆಂಬ ಹಂಬಲಿಕೆ ಉಂಟಾಗಬಹುದು. ತೀರ್ಮಾನವಾದಾಗಲೂ ದೊರೆಯುವುದು ಕಾನೂನೇ (ಲಾ) ಹೊರತು ನ್ಯಾಯವಲ್ಲ (ಜಸ್ಟಿಸ್) ಎಂಬ ಒಂದು ಮಾತುಂಟು. ನ್ಯಾಯ ಎನ್ನುವುದು ನೀತಿಗೆ, ಧರ್ಮಕ್ಕೆ ಸಂಬಂಧಪಟ್ಟ ಮಾತು; ಕಾನೂನು ದೇಶದ ನ್ಯಾಯಶಾಲೆಗಳಲ್ಲಿ ನಿರ್ಣಯವಾಗುವ ಮಟ್ಟಿಗೆ ಶಾಸನ ರೀತ್ಯಾ ದೊರಕುವ ನ್ಯಾಯ. ಕಾನೂನನ್ನೂ ಸಲಸಲಕ್ಕೂ ಬದಲಾಯಿಸಲಾಗುವುದಿಲ್ಲ. ಅದು ಹೀಗೇ ಎಂದು ಜನಗಳ ಮನಸ್ಸಿನಲ್ಲಿ ದೃಢವಾಗಿ ನೆಲಸಿರಬೇಕು. ಅದರಲ್ಲಾಗುವ ಮಾರ್ಪಾಡುಗಳು ಬಹಿರಂಗ ವಾಗಿ ಬಹುಜನಸಮ್ಮತವಾಗಿ ರಚಿತವಾಗಬೇಕು. ನಾಡಿನ ಧರ್ಮಬುದ್ಧಿ ಬೆಳೆದ ಹಾಗೆ



ಇದು ಮಾರ್ಪಡುತ್ತದೆ. ಆ ಬುದ್ಧಿ ಎಷ್ಟು ಜನದ ಅವಸರದಿಂದ ಎಷ್ಟು ತೀವ್ರವಾಗಿ ಬೆಳೆಯುತ್ತದೆಯೊ ಮುನ್ನಡೆಯುತ್ತದೆಯೊ ಅದನ್ನು ಅನುಸರಿಸಿ ನಾಡಿನ ಕಾನೂನು ನಡೆಯಬೇಕಾಗಿರುತ್ತದೆಯಾಗಿ ಕಾನೂನಿನ ಗತಿ ಜನದ ನ್ಯಾಯ ಕಲ್ಪನೆಗಿಂತ ಮಂದ ಗಮನ ಉಳ್ಳದ್ದು. ಅದರಲ್ಲಿ ಸ್ಥಿತಿರಕ್ಷಣೆ, ಸ್ಥಿತಿಸ್ಥಾಪನೆ (Conservatism) ಸಾಧಾರಣ ಲಕ್ಷಣ.

## ಕಾನೂನು, ಮಾರ್ಪಾಡು

ಆದರೆ ಇಲ್ಲಿಯ ಅವಕಾಶ ಒಂದು. ಕಾನೂನು ಒಂದು ರೀತಿಯಾಗಿರುವಾಗ ಅದರ ಅನುಕೂಲ ಸನ್ನಿವೇಶಗಳನ್ನು ಬಳಸಿಕೊಂಡು ಹಣವುಳ್ಳವರ, ಪ್ರಭಾವವುಳ್ಳವರ ಒಂದೊಂದು ವರ್ಗ ಹುಟ್ಟಿಕೊಂಡು ಅದನ್ನು ದುಡಿಸಿಕೊಳ್ಳುತ್ತದೆ ; ಜೊತೆಗೆ ಆ ಅನುಕೂಲಗಳು ತಮ್ಮ ಸ್ವಾತಂತ್ರ್ಯದ ಹಕ್ಕುಗಳೆನ್ನುತ್ತ ಅವಕ್ಕೆ ಹೋರಾಡನಿಲ್ಲುತ್ತವೆ. ಇಂಥವರನ್ನೇ ಪಟ್ಟಭದ್ರ ಹಕ್ಕುಗಳವರು (Vested Interests) ಎನ್ನುವುದು. ಮಾರ್ಪಾಡು ತುಂಬ ಅಗತ್ಯವಾಗಿರುವಾಗ ಇಂಥವರು ಮಾರ್ಪಾಡಿಗೆ ಅಡ್ಡಿಬರುತ್ತಾರೆ. ಈ ಸ್ಥಿತಿಯನ್ನು ಸ್ಥಾಪಿಸಿರುವುದು ಹಿಂದಿನಿಂದ ಬಂದ ಕಾನೂನು, ಸಂಪ್ರದಾಯ ಆಗಿರುವಾಗ, ಅದರ ರಕ್ಷಣೆ ನಿರ್ಣಯ ಸಾಮಾನ್ಯವಾಗಿ ಕಾನೂನಿನ ಮಂದಿರಗಳಲ್ಲಿ ಅವರಿಗೆ ಅನುಕೂಲವಾಗಿಯೇ ಆಗುತ್ತವೆ. ಬದಲಾವಣೆಯಿಂದ ಇಂಥ ಜನಕ್ಕೆ ಅಸಮಾಧಾನವೂ ಅಶಾಂತಿಯೂ ಹುಟ್ಟಲು ಅವಕಾಶವಾಗುತ್ತದೆ. ಹಳೆಯ ಕಾನೂನು ಹೊಸದಾಗಿ ಪ್ರಬಲವಾಗುತ್ತಿರುವ ನ್ಯಾಯಕ್ಕೆ ವಿರುದ್ಧವಾಗುತ್ತಿರುವಾಗ ಎರಡು ಬಗೆಯ ಮನಸ್ಸುಗಳು, ಪ್ರಯೋಜನಾಕಾಂಕ್ಷೆಗಳು ಸಮಾಜದಲ್ಲಿ ಹುಟ್ಟಿಕೊಂಡು, ಮೌಲ್ಯ ಎರಡು ಬೇರೆ ಬೇರೆ ಬಗೆಯವಾಗುತ್ತವೆ. ಕಾನೂನು (ಲಾ) ಬದಲಾದ ಹೊರತು ಪರಿಸ್ಥಿತಿ ಉತ್ತಮ ಪಡದು. ಬದಲಾವಣೆ ಮೃದುವಾಗಿ ಆಗುವುದೊ, ಕೋಟಲೆಯಿಂದ ಉಗ್ರರೀತಿಗಳಲ್ಲಿ ಆಗುವುದೊ, ಅದು ಆಯಾ ಕಾಲಕ್ಕೂ ದೇಶಕ್ಕೂ ಈ ಎರಡು ಪಂಗಡಗಳ ಬಲಾಬಲ ಹಟಗಳಿಗೂ ಸಿಕ್ಕಿ ಆಗುವಂಥದು. ಉಗ್ರಘರ್ಷಣೆಗಳಾಗದೆ, ಕೊಲೆ ನಾಶ ಆಗದೆ ಮಾತುಕತೆಯಿಂದ, ರಾಜಿ ಒಡಂಬಡಿಕೆಗಳಿಂದ ಹೊಸ ಸಮಯ ಸಂಪ್ರದಾಯಗಳು ಹುಟ್ಟಿ ಇವು ಮಾರ್ಪಡಲು ಪ್ರಜಾಧಿಪತ್ಯದಲ್ಲಿ ಬೇಕಾದಷ್ಟು ಅವಕಾಶವಿದೆ. ಕೆಲವೇಳೆ ತಡವಾದರೂ ಈ ಮಾರ್ಗವೇ ಹೆಚ್ಚು ಸಮಾಜ ಹಿತಕರವಾದುದರಿಂದ ಬಹುಮತದಿಂದ ಕಾನೂನನ್ನು ಮಾರ್ಪಡಿಸಿ ಮುಂದುವರಿಯುವುದೇ ಮೇಲ್ತರದ ಪದ್ಧತಿಯಾದೀತು.

ನಮ್ಮ ದೇಶದಲ್ಲಿ ಈಚೆಗೆ ಬೆಳೆದಿರುವ ರಾಜ್ಯಾಂಗ ರಚನೆಯಲ್ಲಿ ಮೂಲಭೂತ ಮಾರ್ಪಾಡಿನ ಒಂದು ಸನ್ನಿವೇಶ ಇದನ್ನು ಇನ್ನಷ್ಟು ಜಟಿಲಮಾಡಬಹುದು. ಸಾಮಾನ್ಯ ಶಾಸನ, ರಾಜ್ಯಾಂಗ ವಿಧಾಯಕ ಶಾಸನ ಎಂಬುದಕ್ಕೂ ಬರೆದಿಟ್ಟ ರಾಜ್ಯಾಂಗ

ಪದ್ಧತಿಯಲ್ಲಿ ಎಲ್ಲೆಲ್ಲಿಯೂ ವ್ಯತ್ಯಾಸವಿರುತ್ತದೆ. ವಿಧಾಯಕ ಶಾಸನಗಳನ್ನು ಮಾರ್ಪಡಿಸಲು ವಿಶೇಷ ವಿಧಾನ, ನಿರ್ಬಂಧ, ತಡೆ ಉಂಟು. ಅವನ್ನು ನಿವಾರಿಸಿ ಬದಲಾವಣೆ ಮಾಡಿಕೊಳ್ಳಲು ಅನುಕೂಲವಿರುವಾಗಲೂ ಕೆಲವು ಮೂಲ ಶಾಸನಗಳನ್ನು ಅಥವಾ ಹಕ್ಕುಗಳನ್ನು ಪಾರ್ಲಿಮೆಂಟ್ ಅಥವಾ ಶಾಸನ ಸಭೆಗಳು ಮುಟ್ಟತಕ್ಕದ್ದೇ ಅಲ್ಲ; ಮುಟ್ಟಲು ಅವಕ್ಕೆ ಅಧಿಕಾರವೇ ಇಲ್ಲ ಎಂದು ದೇಶದ ಪರಮೋಚ್ಚ ನ್ಯಾಯಸ್ಥಾನ ತೀರ್ಮಾನ ಮಾಡಿಬಿಟ್ಟರೆ ಪರಿಸ್ಥಿತಿ ಹದಗೆಡಬಲ್ಲದು. ಇಲ್ಲಿ Constituent Power, Amending Power ಎಂಬ ವ್ಯತ್ಯಾಸಗಳನ್ನು ತೋರಿಸುತ್ತ ಪಾರ್ಲಿಮೆಂಟಿಗೆ ಮೊದಲನೆಯದಿಲ್ಲ, ಅಮೆಂಡಿಂಗ್ ಪವರ್ ಮಾತ್ರ ಇದೆ; ಮೊದಲನೆಯದು ಇನ್ನೊಂದು ರಾಜ್ಯಾಂಗ ರಚನಾಸಭೆ-Constituent Assembly-ಮಾತ್ರ ಮಾಡತಕ್ಕದ್ದು ಎಂದು ವಾದವೇಳುತ್ತದೆ. ಈಗಿನ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯಲ್ಲಿ, ಏರ್ಪಾಡುಗಳಲ್ಲಿ ಅಂಥ ಒಂದು ಸಭೆ ಇದಕ್ಕಿಂತ ಉತ್ತಮವಾಗಬಲ್ಲದೆ ಎಂಬುದು ಆಲೋಚಿಸಬೇಕಾದ ಸಂಗತಿ. ಅಮೆಂಡ್ ಎಂದರೆ Deconstitute, Deconstitute ಎಂದರೆ Reconstitute ಎಂಬ ಸಂಗತಿಯಲ್ಲವೆ? ಸುಧಾರಣೆಗಾಗಿ ತವಕಪಡುತ್ತಿರುವ ವರ್ಗ ಒಂದು ಕಡೆ ನ್ಯಾಯಾಲಯವನ್ನು ಏನೇ ಆಗಲಿ ಮಾನ್ಯ ಮಾಡಬೇಕು ಎಂಬ ಹಿರಿಮೆಯನ್ನು ಮಾನ್ಯಮಾಡದೆ-ನ್ಯಾಯಾಂಗವೂ ಸಂವಿಧಾನ ಸ್ಥಾಪಿಸಿದ ಅಂಗ ಎಂಬುದು ಲೆಕ್ಕಕ್ಕೆ ಬಾರದೆ-ಘರ್ಷಣೆಗೆ ಬಿದ್ದು ಕ್ರೋಧಾವೇಶ, ಚಲ, ಚಳವಳಿ ಮಸೆದು ನಿಂತಾವು. ಹೊಸದಾಗಿ ಒಂದು ರಾಜ್ಯಾಂಗ ವಿಧಾನವನ್ನು ರಚಿಸುವುದಕ್ಕೆ ಬೇಕಾಗುವ ಒಂದು Constituent Assembly ನೇಮಿಸಿಕೊಂಡು, ಅದರಲ್ಲಿ ಹೊಸ ನಿಯಮ ಶಾಸನಗಳನ್ನು ಮಾಡಿಕೊಳ್ಳುತ್ತೇವೆ ಎನ್ನುವವರೆಗೂ ಸುಧಾರಕರು ಒತ್ತಾಯ ಮಾಡಬಹುದು. ಇಂಥ ಮೂಲಭೂತವಾದ ಸ್ವಾತಂತ್ರ್ಯಗಳನ್ನು ಮಾರ್ಪಡಿಸಲು ಅವಕಾಶ ಕೊಡುವುದಿಲ್ಲವೆಂದು ನಿಂತು ದೇಶದಲ್ಲಿ ಹುಟ್ಟಿದ ಉದ್ರಿಕ್ತತೆ ಒಳಯುದ್ಧದಂತೆಯೇ ಉಲ್ಬಣಿಸಬಲ್ಲದು. ಇಂಥಲ್ಲಿ ನ್ಯಾಯ ಯಾವುದು? ನ್ಯಾಯಾಲಯ ಯಾವ ಕಡೆ ಇದೆ? - ಎನ್ನುವುದರ ನಿರ್ಣಯ ತುಂಬಾ ನಾಜೂಕಿನದು.

ಈ ಸಂಬಂಧದಲ್ಲಿ ಒಂದು ಪ್ರಶ್ನೆ ರಾಜ್ಯಶಾಸ್ತ್ರದ ಚರಿತ್ರೆಯಲ್ಲಿಯೂ ಅದರ ತತ್ವಪರಿಶೀಲನೆಯಲ್ಲಿಯೂ ಮೊದಲಿಂದ ಎದ್ದಿದೆ. ಸಮಾಜದಲ್ಲಿರುವ ಜನವನ್ನು ಯಾವ ಕಾನೂನೂ ನ್ಯಾಯಪದ್ಧತಿಯೂ ಮುಟ್ಟಕೂಡದು; ಅವರ ಅಧಿಕಾರಗಳಲ್ಲಿ, ಹಕ್ಕುಗಳಲ್ಲಿ Natural Rights ಎಂಬವು ಇವೆ; ಅವನ್ನು ಯಾವ ರಾಜ್ಯಾಂಗವೂ ಮುಟ್ಟಬಾರದು ಎನ್ನುತ್ತಾರೆ. ಅವನ್ನು ಯಾವ ರಾಜ್ಯಾಂಗವಾದರೂ ಎಂದಾದರೂ ಒಪ್ಪಿವೆಯೆ ಎಂಬುದು ಪ್ರಶ್ನೆ. ಪ್ರಜಾಸತ್ತೆಯಲ್ಲಿಯಂತೂ ಜನ ನಿರಂತರವಾಗಿ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಅವಕಾಶ ಉಂಟು - ಪೂರ್ವನಿರ್ಣೀತ ನಿಯಮ, ನಿರ್ಬಂಧ, ವಿಧಾನಗಳಿಗೆ ಒಳಪಟ್ಟು - ಎಂಬ ನಡವಳಿಕೆ ನಡೆದುಕೊಂಡು ಬಂದಿದೆ. ಇಲ್ಲಿ ತತ್ವ



ಆಚಾರಗಳ ಜೊತೆಗೆ ಭಾವಾವೇಶ ಬೆಳೆದು ಮೌಲ್ಯಗಳನ್ನೆಲ್ಲ ಕಲಕುತ್ತದೆ. ಒಂದು ಹಕ್ಕೆಂಬುದು ಒಂದು ಸಂಸ್ಥೆಯೊ ಸಮಾಜವೊ ರಾಜ್ಯಾಂಗವೊ ಒಪ್ಪಿ ಕೊಟ್ಟದ್ದು. ಒಪ್ಪಿಕೊಡದಾದರೆ ಯಾರಿಗೂ ಹಕ್ಕೂ ಇಲ್ಲ; ಅಧಿಕಾರವೂ ಇಲ್ಲ. Who gave them the Right ಎಂಬುದುಂಟು. ಇದು ನಡೆದುಕೊಂಡು ಬಂದಿರುವ ವಿಧಾನಕ್ರಿಯೆ. ಯುದ್ಧಕಾಲದಲ್ಲಿ ಹೇಗೆ ಎಲ್ಲ ಜನರ ಎಲ್ಲ ಖಾಸಗಿ ಹಕ್ಕು ಅಧಿಕಾರಗಳೂ ಸಾಮಾನ್ಯವಾಗಿ ಮುರಿದು ಬೀಳುತ್ತವೆ, ಯುದ್ಧದಲ್ಲಿ ಜಯವನ್ನು ಸಾಧಿಸುವ ಒಂದು ಕಾರ್ಯಕ್ಕಾಗಿ ದೇಶರಕ್ಷಣೆಯ ಸಮಗ್ರ ದೃಷ್ಟಿಯಿಂದ ಹೇಗೆ ಇಲ್ಲವಾಗುತ್ತವೆ ಎಂಬ ಸಂದರ್ಭ ಈ ಸ್ಥಿತಿಯ ಮೇಲೆ ಬೆಳಕು ಚೆಲ್ಲೀತು. ಹಾಗೆಯೇ ಒಂದು ರಾಜ್ಯ ಒಂದು ರೀತಿ ನಡೆವಾಗ ರಾಜ್ಯ ಅಂತಾರಾಷ್ಟ್ರೀಯ ಒಡಂಬಡಿಕೆಯನ್ನೂ ಮರ್ಯಾದೆಗಳನ್ನೂ ಮೀರದೆ ನಡೆದುಕೊಳ್ಳಬೇಕಾಗುತ್ತದೆ. ಉದಾ : ನಮ್ಮ ಸರ್ಕಾರ ಹೊರ ಚಿನ್ನದ ಪೇಟೆಯಲ್ಲಿ ಧಾರಾಳವಾಗಿ ಚಿನ್ನ ಕೊಂಡು ಇಲ್ಲಿ ಲಾಭಕ್ಕೆ ಮಾರುವ ಹಾಗಿಲ್ಲ. ಆ ಅವಕಾಶವಿದ್ದಿದ್ದರೆ ಹೊರ ಪೇಟೆಯಿಂದ ಕೊಂಡುತಂದು ಒಳ ಪೇಟೆಯಲ್ಲಿ ಮಾರಿ, ಕೊಂಡ ಬೆಲೆಗೆ ಎರಡು ಪಟ್ಟು ಲಾಭ ಪಡೆಯಬಹುದಿತ್ತು... ನಾವು ಒಡ್ಡಿರುವ ಅಹವಾಲು ಸೆಕ್ಯೂರಿಟಿ ಕೌನ್ಸಿಲಲ್ಲಿ ನಿಷ್ಕರ್ಷೆ ಆಗುವವರೆಗೂ ಕಾಶ್ಮೀರ ಪ್ರಶ್ನೆ ಕಡೆಯದಾಗಿ ಬಗೆಹರಿಯುವ ಹಾಗಿಲ್ಲ, 370 ನೆ ಕಲಮನ್ನು ರದ್ದು ಮಾಡುವ ಹಾಗಿಲ್ಲ. ಈ ನಡುವೆ ಅದೇ ಕಾಶ್ಮೀರಕ್ಕೆ ಸ್ವನಿರ್ಣಯದ ಅವಕಾಶವಿದೆಯೆಂದು ತಿಳಿಸುವುದೆಂದು ಒಬ್ಬರೆಂದರೆ, ಅದನ್ನು ಕೂಡಲೆ ರದ್ದು ಮಾಡತಕ್ಕದ್ದು ಎಂದು ಇನ್ನೊಬ್ಬರು ಹಟ ಹಿಡಿಯಬಹುದು. ಯಾರದು ಸ್ವಾತಂತ್ರ್ಯ ಇಲ್ಲಿ ?

## ಕಾನೂನಿಗೆ ಎಲ್ಲರೂ ಸಮಾನ

ಶಾಂತ ಸಮಯಗಳಲ್ಲಿ ದೇಶದ ಎಲ್ಲ ಕಾನೂನುಗಳ ದೃಷ್ಟಿಯಲ್ಲಿಯೂ ಪ್ರತಿ ಪ್ರಜೆಗೂ ಸಮಾನ ಗಣ್ಯತೆ ಇರುತ್ತದೆ ಎಂಬುದು ಎಲ್ಲ ಪ್ರಜಾರಾಜ್ಯಗಳೂ ಒಪ್ಪಿಕೊಂಡ ಪದ್ಧತಿ. ಪ್ರಜೆಗಳೆಲ್ಲ ಎಲ್ಲ ವಿಷಯಗಳಲ್ಲಿಯೂ ಸಮಾನರು ಎಂದಲ್ಲ. ಕಾನೂನಿನ ದೃಷ್ಟಿಯಿಂದ ಬಡವರು, ಬಲ್ಲಿದರು, ಅಧಿಕಾರಿಗಳು, ಅಲ್ಲದವರು, ಶಕ್ತರು, ಅಶಕ್ತರು, ಹೆಚ್ಚು ಸಂಖ್ಯೆಯವರು, ಅಲ್ಪಸಂಖ್ಯಾತರು ಎಂಬ ಎಣಿಕೆ ನ್ಯಾಯ ನಿರ್ಣಯದಲ್ಲಿ ಸಲ್ಲದು. ಇದು ಸಮಾನತೆಯ ಒಂದು ಲಕ್ಷಣ.

## ಮೂಲಭೂತ ಹಕ್ಕುಗಳು

ಪ್ರಜೆಯ 'ಮೂಲಭೂತ ಹಕ್ಕುಗಳು' ಎಂಬಲ್ಲಿ ಬೇಕಾದಂತೆ ಮಾತನಾಡುವ, ಬರೆಯುವ, ಅಭಿಪ್ರಾಯ ಪ್ರಚಾರಮಾಡುವ, ಬೇಕಾದಂತೆ ಸಂಘ, ಸಮಾಜ ಏರ್ಪಡಿಸಿಕೊಂಡು ನಡೆಯುವ, ರಾಜ್ಯದಲ್ಲಿ ಬೇಕಾದ ಕಡೆ ನೆಲಸುವ, ಬೇಕಾದ ಉದ್ಯೋಗಗಳಲ್ಲಿ ತೊಡಗಿ ಉದ್ಯೋಗ ವರಮಾನ ಸಂಪತ್ತು ಹೆಚ್ಚಿಸಿಕೊಳ್ಳುವ, ಅದನ್ನು

ಬೇಕಾದಂತೆ ಸಂಪಾದನೆ ಹೂಡಿ ಐಶ್ವರ್ಯವಂತರಾಗುವ, ಬೇಕಾದ ಕಡೆಗೆ ಧಾರಾಳ ವಾಗಿ ಸಂಚಾರಮಾಡುವ, ಈ ಆಸ್ತಿಪಾಸ್ತಿಗಳನ್ನೂ ಅವಕ್ಕೆ ಸಂಬಂಧಿಸಿದ ಹಕ್ಕು ಬಾಧ್ಯತೆಗಳನ್ನೂ ಒಪ್ಪಂದ ಒಡಂಬಡಿಕೆಗಳ ಮೂಲಕ ಬೇಕಾದ ಹಾಗೆ ವರ್ಗಮಾಡುವ, ಐಹಿಕ ಪಾರಮಾರ್ಥಿಕ ಸುಖಸಾಧನೆಗೆ ಬೇಕಾಗುವ ಎಲ್ಲವನ್ನೂ ಕಾನೂನಿನ ವಿರುದ್ಧವಾಗದೆ - ಇನ್ನೊಂದು ವರ್ಗದವರಿಗೆ ನಷ್ಟ, ಹಿಂಸೆ ಆಗದಂತೆ - ಅದಕ್ಕೆ ಒಳಪಟ್ಟು ನಡಸುವ ಅಧಿಕಾರವುಳ್ಳವರಾಗುತ್ತಾರೆ. ವ್ಯಕ್ತಿ ಸ್ವಾತಂತ್ರ್ಯ ಎಂಬುದರಲ್ಲಿ ಯಾರೇ ಆಗಲಿ- ಸರ್ಕಾರ ಕೂಡ - ವ್ಯಕ್ತಿಯನ್ನು ಅನ್ಯಾಯವಾಗಿ ನಿರ್ಬಂಧಿಸಕೂಡದು. ವಿಚಾರಣೆ ಇಲ್ಲದೆ, ವಿಚಾರಣೆಗೆ ಅವಕಾಶ ಕೊಡದೆ ಸೆರೆಗೆ ಹಾಕಬಾರದು. ಅಪರಾಧಗಳು ಹೊತ್ತಾಗಲೂ ತನಗೆ ಸರಿಕರಾದ ಪಂಚಾಯಿತರ (ಜ್ಯೂರಿ) ಎದುರು ಪ್ರಕಟವಾಗಿ ವಿಚಾರಣೆ ನಡೆದು, ತನ್ನ ಪರವಾದ ಎಲ್ಲ ಸಾಕ್ಷಿ ಪ್ರಮಾಣಗಳನ್ನೂ ಧಾರಾಳವಾಗಿ ನಿರ್ಭಯವಾಗಿ ಒದಗಿಸಿಕೊಂಡು, ತನ್ನ ನಿರಪರಾಧಿತ್ವವನ್ನು ಸ್ಥಾಪಿಸಿಕೊಳ್ಳುವ ಅವಕಾಶ ಆರೋಪಣೆ ಹೊತ್ತವನಿಗೆ ಇರಬೇಕು. ನ್ಯಾಯಾಧೀಶರ ಅಪ್ಪಣೆಯ ಪತ್ರವಿಲ್ಲದೆ (ವಾರಂಟ್) ದಸ್ತಗಿರಿ ಆಗುವಂತಿರಕೂಡದು ಮುಂತಾದ ನಿಯಮಗಳಿರುತ್ತವೆ. ಇವುಗಳಲ್ಲಿ ಯಾವುದನ್ನೂ ಶಾಸನಗಳ ಮೂಲಕವಲ್ಲದೆ ಸರ್ಕಾರ ಹ್ರಸ್ವಗೊಳಿಸುವ ಹಾಗಿಲ್ಲ. ಇವು ರಾಜ್ಯಾಂಗ ಶಾಸನದಲ್ಲಿ ಮೂಲಭೂತ ಹಕ್ಕುಗಳು ; Fundamental Rights ಎಂಬ ಹೆಸರಿನವು. ಯಾರ ಆಸ್ತಿಪಾಸ್ತಿಗಳನ್ನೂ ಅಪಹರಿಸಬಾರದು. ಸರಕಾರಕ್ಕೆ ಅಗತ್ಯವಾದ್ದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆಗೆದುಕೊಂಡಾಗಲೂ ತಕ್ಕ ಪರಿಹಾರವನ್ನು ಕೊಟ್ಟು ತೆಗೆದುಕೊಳ್ಳ ತಕ್ಕದ್ದು ಎಂಬುದು ನಿರ್ಬಂಧ. ಇವಕ್ಕೆಲ್ಲ ತಳಹದಿಯಾಗಿ ಮೂಲಭೂತವಾಗಿ ಪ್ರಜಾ ವರ್ಗಕ್ಕೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ದೊರಕಿಸಿ ಕೊಡುವುದೇ ರಾಜ್ಯಾಂಗ ಶಾಸನದ ಪರಮೋದ್ದೇಶ ಎಂಬ ಪ್ರಕಟಣೆ, ವಿಶ್ವಾಸ ಇರುತ್ತವೆ. ಉಳಿದುದನ್ನು ಸಾಧಿಸುವುದಕ್ಕೆ ಸ್ವಾತಂತ್ರ್ಯ ಸಾಧನವಾಗಬೇಕಾಯಿತು.

ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ಪರಮ ಪದಕ್ಕೇರಿಸಿ ಈವರೆಗೂ ಯಾರು ಯಾರಿಗೆ ಯಾವ ಯಾವ ಹಕ್ಕು ಅಧಿಕಾರ ಆನುಕೂಲ್ಯ ಇದ್ದವೊ ಅವೆಲ್ಲವನ್ನೂ ಉಳಿಸಿಕೊಳ್ಳಲೂ ಬೆಳಸಿಕೊಳ್ಳಲೂ ಮೂಲಭೂತವಾದ ಹಕ್ಕಿದೆಯೆಂದು ಪಟ್ಟುಹಿಡಿದರೆ ಯಾವ ಮುನ್ನಡೆಯೂ ಸಾಮಾಜಿಕ ಸಮತೆಯ ಸಾಧನೆಗೆ ಆಗದೆ ಹೋಗುತ್ತದೆ. ನಮ್ಮ ರಾಜ್ಯಾಂಗ ಶಾಸನವನ್ನು ರಚಿಸುವಾಗ ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಬಹುಶಃ ಗುರಿಗಳಲ್ಲಿ ಮೊಟ್ಟಮೊದಲಿಗೆ ನ್ಯಾಯ (ಜಸ್ಟಿಸ್) - ಅದರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಎಂದು ಆ ಕ್ರಮದಲ್ಲಿ ರಚಿಸಿದ್ದು. ಎಷ್ಟು ಬಗೆಯ ರಾಜಕೀಯ ಸಮಾನತೆ, ಸ್ವಾತಂತ್ರ್ಯ ಅವಕಾಶ, ಸಮತೆ ದೊರಕಿಸಿಕೊಟ್ಟರೂ ಸಾಮಾಜಿಕ, ಆರ್ಥಿಕ ಮಟ್ಟಗಳಲ್ಲಿ ಗುರುತರ ಭಿನ್ನತೆ ಇದ್ದರೆ ಯಾವ ಲಾಭವೂ ದೊರಕದು. ಆದರೆ ಐದು ಬೆರಳುಗಳಿಗೂ ಸಮಾನತೆಯೆಲ್ಲಿ? ಒಬ್ಬ ಪಠಾಣನೂ ನಾನೂ ಸಮವೆ? ಡಾ. ಸಿ.ವಿ. ರಾಮನ್



ಮೇಧಾವಿತೆಗೂ ಭೌತಶಾಸ್ತ್ರದ ಸಾಮಾನ್ಯ ಪದವೀಧರನೊಬ್ಬನಿಗೂ ಶಾಸ್ತ್ರಜ್ಞತೆಯಲ್ಲಿ ಸಮಾನತೆ ಇಲ್ಲ. ಶಸ್ತ್ರಗಳಲ್ಲಿ ಸಮಸ್ತ ಸಜ್ಜನ್ನೂ ಉಳ್ಳ, ಬೇಕಾದ ಪ್ರಮಾಣದಲ್ಲಿ ಒದಗಿಸಿಕೊಳ್ಳಬಲ್ಲ, ಅಪರಿಮಿತ ಸಂಪನ್ಮೂಲ ಉಳ್ಳ ರಾಜ್ಯಗಳಿಗೂ ವಿಸ್ತಾರದಲ್ಲಿ ಜನಸಂಖ್ಯೆ ಮಾತ್ರದಿಂದ ದೊಡ್ಡ ದೇಶಗಳು ಎಂದ ಮಾತ್ರಕ್ಕೆ ಒಂದಕ್ಕೊಂದು ಸಮನಲ್ಲ. ಧನಿಕನೂ ಬಡವನೂ ಅಧಿಕಾರದಲ್ಲಿರುವವನೂ ಇಲ್ಲದವನೂ ಸಮಾನರಲ್ಲ. ಡಬ್ಲ್ಯೂ.ಬಿ. ಯೇಟ್ಸ್ ಒಂದು ಮಾತನ್ನು ಹೇಳಿದರು: ಎತ್ತಿಗೂ ಸಿಂಹಕ್ಕೂ ಒಂದೇ ಕಾನೂನು ಎನ್ನಬಹುದೆ? ಸಿಂಹ ಎರಡು ನಿಮಿಷದಲ್ಲಿ ಎತ್ತನ್ನು ತಿಂದು ಹಾಕುತ್ತದೆ, ಇದು ದಬ್ಬಾಳಿಕೆಗೆ ಇನ್ನೊಂದು ಹೆಸರು ಎಂದು. ಸಾಮಾಜಿಕವಾಗಿ, ಆರ್ಥಿಕವಾಗಿ ತಕ್ಕಮಟ್ಟಿಗೆ ಉಪಪತ್ತಿ, ಸಮಸ್ಥಿತಿ ಇಲ್ಲವಾದರೆ ಕೇವಲ ರಾಜಕೀಯ ಸ್ವಾತಂತ್ರ್ಯ ದಬ್ಬಾಳಿಕೆ ಆಗಬಲ್ಲದು. ಬೆಲೆ ಹತ್ತು ರೂಪಾಯಿಗೇರಿದರೂ ಒಂದು ಕಿಲೊ ಅಕ್ಕಿ ಕೊಂಡುಕೊಳ್ಳಬಲ್ಲವನ ಧನಶಕ್ತಿ ಸಾಧಾರಣನಿಗಿಂತ ಹತ್ತು ಪಟ್ಟು ಶೋಷಣೆಗಳಿಗೆ ನೆಲಗಟ್ಟಾಗಬಹುದು. ಆ ಅವಕಾಶ ಇರುತ್ತದೆ. ಅಷ್ಟು ಹಣ ಕೊಡುವವನು ಇರುವಾಗ ಒಂದು ರೂಪಾಯಿ ಮಾತ್ರ ತೆರಬಲ್ಲನೆಂಬವನಿಗೆ ಅಕ್ಕಿ ಹೇಗೆ ಸಿಗಬೇಕು? ಒಂದು ರೂಪಾಯಿ ತೆರಬಲ್ಲ ಶಕ್ತಿಯೂ ಪೌರನಾದ ಇನ್ನೊಬ್ಬ ಸ್ವತಂತ್ರನಿಗೆ ಇಲ್ಲದೆ ಅವನನ್ನು ಹಸಿವು ಕಾಡಬಹುದು. ಹತ್ತು ತೆರಬಲ್ಲವನು ಇವನನ್ನು ಆಳು ಮಾಡಿಕೊಳ್ಳಬಹುದು. ಹೀಗಿರುವಾಗ ಆರ್ಥಿಕ ಸಮಾನತೆಯನ್ನು ಸಾಧಿಸುವುದು, ಅಸಮತೆಯನ್ನು ಕಡಮೆ ಮಾಡುವುದು ಜನತೆಯ ಮತ್ತು ರಾಜ್ಯದ ಆದ್ಯಕರ್ತವ್ಯವಾಗುತ್ತದೆ. ಧನವೂ ಶಕ್ತಿಯೂ ಕೆಲವರಿಗೆ ಮಾತ್ರ ಮಿತವಾದವು. ಬಡವರ ಸಂಖ್ಯೆ ದುರ್ಬಲರ ಸಂಖ್ಯೆಯವರಿಗೆ ಲಕ್ಷ ಪಟ್ಟಿರುತ್ತದೆ. ಈ ಅಸಮತೆಯನ್ನು ನಿವಾರಣೆ ಮಾಡಿದ ಹೊರತು ಸ್ವಾತಂತ್ರ್ಯಕ್ಕೆ ಬೆಲೆ ಇರದು. ಸ್ವಾತಂತ್ರ್ಯವೆಂಬ ಮಾತು ಮೋಹಕವಾದ್ದು, ಮಂತ್ರದಂತೆ. ಜನ ಬುದ್ಧಿವಂತರಾದಷ್ಟೂ ಅದನ್ನು ದುಡಿಸಿಕೊಳ್ಳಬಲ್ಲರು. ಶಕ್ತರೂ ಪ್ರಭಾವಶಾಲಿಗಳೂ ಶ್ರೀಮಂತರೂ ಅದರಿಂದ ಸಮಸ್ತ ಪ್ರಯೋಜನಗಳನ್ನು ಅತಿಶಯವಾಗಿ ಪಡೆಯುತ್ತಾರೆ. ಅನ್ನ, ವಸತಿ, ವಾಹನ, ಚಿಕಿತ್ಸೆ, ವಿದ್ಯಾಶಿಕ್ಷಣ, ಬಗೆ ಬಗೆಯ ಉಡುಗೆ ತೊಡುಗೆ, ಪ್ರವಾಸ, ಸಂತೋಷ, ದೊಡ್ಡ ಪದವಿಗಳಲ್ಲಿ ಪ್ರವೇಶ ಎಲ್ಲವನ್ನೂ ಪಡೆಯಬಹುದು. ಅಸಮಾನತೆಯಿಂದಾಗಿ ಅತೃಪ್ತಿ ಅಸೂಯೆ ಕ್ರೋಧಾವೇಶ ಬೆಳೆಯುತ್ತವೆ. ಇಂಥವರ ನಡುವೆ ಒಂದು ಅಣಕದ ಮಾತು ಬರುತ್ತದೆ: ದೇಶದಲ್ಲಿ ಸರ್ವರಿಗೂ ಸಮಾನ ಸ್ವಾತಂತ್ರ್ಯವಿದೆ, ಆದರೆ ಕೆಲವರು ಇತರರಿಗಿಂತ ಹೆಚ್ಚು ಸ್ವತಂತ್ರರು ಎಂದು! ನ್ಯಾಯದ ಮತ್ತು ಸಮಾನತೆಯ ಒಳಪಟ್ಟಿನಲ್ಲಿ ಸ್ವಾತಂತ್ರ್ಯದ ಜೊತೆಗೆ ನಡೆದರೆ ಮಾತ್ರ ಅದು ಸರ್ವಾರ್ಥಸಿದ್ಧ, ಇಲ್ಲವಾದರೆ ಸಾಮಾಜಿಕ ನ್ಯಾಯಕ್ಕೆ ಸಮಾನತೆಗೆ ಒಂದು ಕಡೆ, ಸ್ವಾತಂತ್ರ್ಯಕಾಂಕ್ಷೆಗೆ ಇನ್ನೊಂದು ಕಡೆ ಕೋಟಲೆ ಉಂಟಾಗುತ್ತದೆ. ಒಂದನ್ನು ಸಾಧಿಸುವುದು ಇನ್ನೊಂದಕ್ಕೆ ವಿರುದ್ಧವಾಗಿರುತ್ತದೆ. ಇಂಥಲ್ಲಿ ಸಮಾಜ ನ್ಯಾಯಕ್ಕೂ ಸ್ವಾತಂತ್ರ್ಯಕ್ಕೂ

ವಿರುದ್ಧವುಂಟು. ಒಂದನ್ನು ಸಾಧಿಸಬೇಕೆಂದಾಗ ಇನ್ನೊಂದು ಮೊಟಕಾದೀತು. ಮೂರನ್ನೂ ಒಟ್ಟಿಗೆ ಕೂಗುವುದು ತಿಳಿವಳಿಕೆಯಲ್ಲ.

ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಈಗ ನಡೆಯುತ್ತಿರುವ ಸ್ವಾತಂತ್ರ್ಯಕಾಂಕ್ಷೆಯ ಹೋರಾಟವನ್ನೂ ಕೊಲಾಹಲವನ್ನೂ ಪರಿಶೀಲಿಸಬೇಕು. ಇಲ್ಲಿ ಪುನಃ ಮೌಲ್ಯಗಳಿಗೆ ಹೋರಾಟ ಬಂದು ದೊಡ್ಡ ಪಾಳೆಯಗಳೇ ಏರ್ಪಡುತ್ತಿವೆ. ಸೋಷಿಯಲಿಸ್ಟ್ ಎಂದರೆ ಕಮ್ಯೂನಿಸ್ಟ್ ಎಂದು ಅಪಪ್ರಚಾರ ಆಗಬಲ್ಲದು. ಸಮಾನತೆ ಎಂದರೆ ಸೋಷಿಯಲಿಸಂ ಎಂದೂ ಸ್ವಾತಂತ್ರ್ಯವೆಂದಾಗ ಕೇವಲ ರಾಜಕೀಯ ಸ್ವಾತಂತ್ರ್ಯ ಪಕ್ಷಪಾತವುಳ್ಳ ಧನಿಕ ಪ್ರಜಾಸತ್ತಾತ್ಮಕ ಪದ್ಧತಿಯೆಂದೂ ಕೋಟಲೆ ಬೆಳೆದು ಒಂದಕ್ಕೆ ಲೋಪ ಬರಬಲ್ಲದು. ಸಮಸ್ತ ಸ್ವಾತಂತ್ರ್ಯವಿರುವ ಕಾಡುಗಳಲ್ಲಿ ಯಾವ ಜಂತು ಅತಿ ಶಕ್ತವೊ ಅತಿ ಕಪಟಿಯೊ ಅದಕ್ಕೆ ಜಯಲಾಭ. ಅದೊಂದು ಗೊಂಡಾರಣ್ಯದ ಜೀವನ. ಆದರೆ ಸ್ವಾತಂತ್ರ್ಯದ ದನಿ ಬಹಳ ಆಕರ್ಷಕವಾದ್ದು. ಇದನ್ನು ಬಳಸಿಕೊಳ್ಳುವ ಜನರ ಕೈಯಲ್ಲಿ ಹಣ, ವೃತ್ತ ಪತ್ರಿಕೆಗಳು, ವಾರ್ತಾ ಸಾಧನಗಳು, ಲೇಖಕ ವರ್ಗ, ಜನದ ಮೇಲೆ ಅಧಿಕಾರ ಅಧಿಕವಾಗಿ ಇರಬಲ್ಲವಾದಾಗ ಅವರು ತಮಗೆ ವಿರುದ್ಧವಾದ ಎಲ್ಲ ಚಳವಳಿ, ಮಂತ್ರತಂತ್ರ, ಸಂಘಸಂಸ್ಥೆ, ವಿಚಾರ, ಸ್ನೇಹಮಂಡಲ ಇವನ್ನು ಮುರಿಯಬಹುದು; ಭ್ರಷ್ಟಗೊಳಿಸಬಹುದು. ಸಕಲ ಜನಹಿತಕ್ಕಾಗಿ ಅದನ್ನು ಬಳಸಿದರೆ ಅದು ಅಮೃತ ಸಂಪತ್ತಿ. ಅದಕ್ಕಿಂತ ಉತ್ತಮ ಸಾಧನ ಬೇರಾವದಿದೆ? ಹಾಗೆ ಬಳಸುವುದು ಅಪರೂಪ.

ನಮ್ಮ ದೇಶದಲ್ಲಿ ಬಹುಕಾಲದಿಂದ ವರ್ಣಪದ್ಧತಿ ಪ್ರಬಲವಾಗಿತ್ತು. ಆರಂಭದಲ್ಲಿ ಉದ್ದೇಶ ಹಾಗಿಲ್ಲದಿದ್ದರೂ ಗುಣ, ಕರ್ಮದಿಂದಲೇ ಈ ವರ್ಣ ವಿಭಾಗ ಉಂಟಾಗಿದೆಯೆಂದಿದ್ದರೂ ಕಾಲಕ್ರಮದಲ್ಲಿ ಹುಟ್ಟು ಜಾತಿಯಾಯಿತು. ಕಸಬೂ ಉದ್ಯೋಗಗಳೂ ಹೇಗೆ ಹೇಗೂ ಆಗಬಹುದಾಯಿತು. ಒಂದು ಮೇಲ್ಮಟ್ಟ, ಒಂದು ಕೆಳಮಟ್ಟ ಎಂಬಂತೆ ಲೋಕಾಚಾರ ಬೆಳೆಯಿತು. ಇವು ಯಾವುದಕ್ಕೂ ಸೇರದೆ ಹೊರಗಾದ ಇನ್ನೊಂದು ವರ್ಗ ಯಾವ ಗಣ್ಯತೆಯೂ ಇಲ್ಲದೆ ನಿಮ್ನವಾಗಿತ್ತು. ಅದನ್ನು ಮುಟ್ಟಲು ಆಗದು ಎಂಬಂತೆ ದೂರವಿತ್ತು. ಮನುಷ್ಯರಾಗಿ ಒಂದು ಸಮಾನತೆ ಅವರಿಗೆ ದೊರಕಬೇಕೆಂದು ಶಾಸನವಾದ್ದು ಈಚೆಗೆ. ಕಾನೂನು ರೀತ್ಯಾ ಜನಜೀವನದಲ್ಲಿ ಏಕತಂತ್ರದ ಆ ಅವಕಾಶ ಏರ್ಪಟ್ಟಿದೆ. ಹಾಗೆ ಶಾಸನ ಏರ್ಪಟ್ಟಿದ್ದರೂ ಜನದ ಮನಸ್ಸು ಅದಕ್ಕೆ ಪೂರ್ತಿ ಇನ್ನೂ ಕುದುರಬೇಕಿದೆ. ಈ ನಡುವೆ ಕಾಡುತನ ಬೆಳೆಯದಿದ್ದರೆ ನಾವು ಬದುಕಿದೆವು. ಇಲ್ಲವಾದರೆ ಇದು ಬಾಳಹದವನ್ನು ಕೆಡಿಸೀತು. ಆ ವರ್ಗಕ್ಕೆ ವಿದ್ಯೆ, ಅಧಿಕಾರದಲ್ಲಿ ಭಾಗ, ಸಮಾಜದಲ್ಲಿ ಸ್ಥಾನ ಏರ್ಪಡುವವರೆಗೂ ನಮ್ಮ ಸ್ವಾತಂತ್ರ್ಯಕ್ಕೆ ಬೆಲೆ ಬರುವುದಿಲ್ಲ, ಅದಕ್ಕೆ ಕ್ಷೇಮವಿಲ್ಲ. ಎಲ್ಲರೂ ಸಮಾನರು ಎಂಬುದನ್ನು ಜೀರ್ಣಿಸಿಕೊಳ್ಳಬೇಕಾದರೆ ಒಂದು ಕಡೆ ಗಂಡಸರ ಹೆಂಗಸರ ಸಮಾನತೆ, ಇನ್ನೊಂದು ಕಡೆ ವರ್ಗ ಸಮಾನತೆ ಸರ್ವ ಪ್ರಕಾರದಲ್ಲಿಯೂ ಬೆಳೆದು ಸಮರಸ ಏರ್ಪಡಬೇಕು. ಅದಕ್ಕೆ ಇನ್ನೂ 50-100 ವರ್ಷ ಹಿಡಿದೀತು.



## ಸೋದರಿಕೆ

ರಾಜ್ಯಾಂಗ ಶಾಸನದ ಆರಂಭಘೋಷಣದಲ್ಲಿನ ನಾಲ್ಕನೆಯ ಗಮ್ಯವಾಗಿ 'Fraternity'- ಸೋದರಿಕೆ ಎಂಬ ಇನ್ನೊಂದು ಮಾತನ್ನು ಹಾಕಿದೆ. ಎಲ್ಲ ವ್ಯಕ್ತಿಗಳ ಮರ್ಯಾದೆ ಗೌರವ ಸಾಧಿಸಬೇಕು, ರಾಷ್ಟ್ರದ ಐಕಮತ್ಯವನ್ನು ಸಾಧಿಸಬೇಕು, ಹಾಗಾಗುವಂತೆ ಜನರಲ್ಲೆಲ್ಲ ಸೋದರ ಭಾವವನ್ನು ಘೋಷಿಸಬೇಕು ಎಂಬುದು ಅದು. ತಾಯಿ, ತಂದೆ ದೇವರು; ಅವರ ಮಕ್ಕಳು ಸೋದರರು ಎಂಬುದು ನಮ್ಮಲ್ಲಿ ಕಾರ್ಯಕಾರಿಯಲ್ಲ; ದೇವರು, ಭಕ್ತಿಗಳು ಬೇರೆ ಬೇರೆಯಾದ್ದರಿಂದ. ನಾವೆಲ್ಲ ಭಾರತದ ಮಕ್ಕಳಾದ್ದರಿಂದ ಸೋದರರು ಎಂಬ ಲೌಕಿಕ ಗಣನೆಯೇ ಇಲ್ಲಿ ತಥ್ಯಾಂಶ. ಈ ನ್ಯಾಯ, ಸಮಾನತೆ, ಸೋದರತೆಗಳ ಸಾಧನೆಗಾಗಿಯೇ ರಾಜ್ಯಾಂಗ ಶಾಸನದ ನಾಲ್ಕನೆಯ ಪ್ರಕರಣದಲ್ಲಿ ಯಾವ ದೃಷ್ಟಿಯಿಂದ ರಾಜ್ಯದ ಆಡಳಿತವನ್ನು ನಡಸಬೇಕು, ಕಾನೂನನ್ನು ಶಾಸನಗಳನ್ನು ಮಾಡುವಾಗ ಯಾವ ಮಹಾತತ್ವಗಳನ್ನು ಅನುಸರಿಸಬೇಕು, ಜನಗಳ ಹಿತವನ್ನು ಸಾಧಿಸಲು ಪ್ರಯತ್ನಿಸುವುದರಲ್ಲಿ ಯಾವ ಸಾಮಾಜಿಕ ಪ್ರಜ್ಞೆ, ವ್ಯವಸ್ಥೆ ಸೋಷಿಯಲಿಸ್ಟ್ ಆರ್ಡರ್ - ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ-ದೊರಕಿಸುವಂತೆ ರಾಷ್ಟ್ರ ಜೀವನದಲ್ಲಿ ಸಂಸ್ಥೆ ಸಂಪ್ರದಾಯ ರೂಪಗೊಳ್ಳಬೇಕು ಎಂದು ಕಲಂ 37-38 ರಲ್ಲಿ ಹೇಳಿ, 39 ರಲ್ಲಿ - ಅದರಲ್ಲಿಯೂ ನೀತಿಗಳೂ, ವಿತರಣೆಯ ವಿನ್ಯಾಸವೂ ಆಗುವುದರ ಮೂಲಕ ಈ ಸಮತೆ ನ್ಯಾಯ ಏರ್ಪಡುವಂತೆ ದೃಷ್ಟಿ ಹರಡಬೇಕು ಎಂದು ನಿರ್ದೇಶವಾಗಿರುತ್ತದೆ. ಅಲ್ಲಿನ ಸಮಾಜದರ್ಶನ ರಾಜ್ಯಾಂಗ ಶಾಸನವೊಂದನ್ನೇ ಅಲ್ಲ ಈ ರಾಷ್ಟ್ರ ಜೀವನದಲ್ಲಿ ರೂಪಗೊಳಿಸಬಯಸಿದ್ದು. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಸೋದರತೆ ಇವೆಲ್ಲಾ ಮೌಲ್ಯಗಳೇ; ರಾಜಕೀಯ ಗಮ್ಯಗಳು ಎಂಬ ಮಟ್ಟಿಗೆ ಹಿರಿಯವು. ಇದಕ್ಕೆ ಸಂಬಂಧಿಸಿದ ಮೂಲಭೂತ ಹಕ್ಕುಗಳ ಪ್ರಕರಣ, ಶಾಸನರೂಪ, ವಿಧಾನತತ್ವ (ಅಧ್ಯಾಯ iv) ಎಲ್ಲವೂ ಒಂದು ಸೂತ್ರದಲ್ಲಿ ನಡೆಯುವಂತೆ ಧರ್ಮ, ಕರ್ಮ, ನೀತಿ, ನಿಯಮ, ಶಾಸನ ನಡೆಯಬೇಕಾಗಿರುವಾಗ, ಯಾವ ಒಂದಕ್ಕೆ ಅತಿ ವಿವಕ್ಷೆ ಕೊಡುವುದೂ ಸರಿಯಿಲ್ಲ. ಗಮ್ಯ ವಿಧಾನಗಳಿಗೂ ಅವಕ್ಕೂ ಸಾಧನೆಗಳಿಗೂ ಸಾಮಂಜಸ್ಯ ಕಲ್ಪನೆ ಆಗಬೇಕು. ಪ್ರತಿಯೊಂದಂಶದಲ್ಲಿಯೂ ಮಜಲಲ್ಲಿಯೂ ಸ್ಥಿತಿ ಗತಿ, ಆಶೋತ್ತರ, ರಾಗ ದ್ವೇಷ, ಪೂರ್ವಗ್ರಹ, ಪಕ್ಷಪಾತ ರೂಢಮೂಲವಾಗಿ ನೆಲಸಿವೆ. ಈ ಮೌಲ್ಯಗಳ ಬಳಕೆಯಲ್ಲಿ ಜನದ ಪ್ರವೃತ್ತಿ, ನಡವಳಿಕೆ, ವ್ಯಾಪಾರ, ಜನಜೀವನವನ್ನು ಹಿಗ್ಗಾಮುಗ್ಗಾ ಎಳೆದಾಡುತ್ತಿವೆ. ಈಗ ಪುನಃ ಕೇಳಬಹುದೇನೊ - ಸತ್ಯಕ್ಕೆ ಒಂದೇ ಮುಖವಿದೆಯೆ? ಮೌಲ್ಯಗಳು ಒಂದೇಯೆ? ಎಂದು.

ಎಂದರೆ ನೂರಾರು ವರ್ಷಗಳಿಂದ ಸಮಾಜ ವ್ಯವಸ್ಥೆಯ ದೃಷ್ಟಿಯಲ್ಲಿಯೂ ಆರ್ಥಿಕವಾಗಿಯೂ ಹಿಂದುಳಿದ ಜನವರ್ಗಗಳವರು ರಾಜಕೀಯವಾಗಿ ಸ್ವಾತಂತ್ರ್ಯವನ್ನು ಪಡೆದಿದ್ದಾರೆ, ಚುನಾವಣೆಗಳಲ್ಲಿ ಸ್ವತಂತ್ರವಾಗಿ ಅಭಿಮತವನ್ನು ಕೊಡಬಹುದು, ಯಾರ ಭೀತಿಯೂ ಇಲ್ಲದೆ ಯಾವ ಅಭಿಪ್ರಾಯವನ್ನಾದರೂ ನುಡಿಯಬಹುದು, ತಿಳಿಸ

ಬಹುದು, ದೇಶದ ಅತ್ಯುಚ್ಚ ನ್ಯಾಯಾಲಯಗಳವರೆಗೂ ಹೋಗಿ ಕಾನೂನು ದೊರಕಿಸುವ ಎಲ್ಲ ಪ್ರಯೋಜನಗಳನ್ನೂ ಪಡೆಯಬಹುದು-ಎಂದ ಮಾತ್ರದಿಂದಲೇ ಅವರ ಸ್ವಾತಂತ್ರ್ಯ ಸಫಲವಾಯಿತೆಂದು ಎಣಿಸುವ ಹಾಗಿಲ್ಲ. ಅದಕ್ಕೆ ಎಲ್ಲರಿಗೂ ವಿದ್ಯೆಬೇಕು. ಹಣಬೇಕು. ಆತ್ಮವಿಶ್ವಾಸ ಬೆಳೆಯಬೇಕು. ಸಾಧಕವಾಗಿ ಸರ್ವರಿಗೂ ವಿದ್ಯಾಭ್ಯಾಸ - ಹೈಸ್ಕೂಲು ಮಟ್ಟದವರೆಗಾದರೂ - ದೊರೆತು ಸಮಾನ ಉದ್ಯೋಗಾವಕಾಶ ಏರ್ಪಟ್ಟು ಜನಕ್ಕೆ ವರಮಾನ ಕಲ್ಪನೆ ಆಗಬೇಕು. ಉದ್ಯೋಗ ವರಮಾನ ಇಲ್ಲದವರಿಗೆ ಉಳಿದ ಯಾವ ರಾಜಕೀಯ ಹಕ್ಕು ಅಧಿಕಾರ ದೊರೆತರೂ ನಿಷ್ಪ್ರಯೋಜಕ. ಸಾಮಾನ್ಯ ಜನದ ಬಡತನದ ನಿವಾರಣೆ ಸರ್ಕಾರವೂ ಖಾಸಗಿ ಉತ್ಪತ್ತಿ ವರ್ಗಗಳವರೂ ನಿರ್ವಂಚನೆಯಾಗಿ ಶ್ರಮಿಸಿದಲ್ಲದೆ ಆಗದು. ರಾಜ್ಯಾಂಗ ಒಂದು ಕೈಯಲ್ಲಿ ಕೊಟ್ಟ ಪ್ರಯೋಜನವನ್ನು ಇನ್ನೊಂದರಲ್ಲಿ ಕಿತ್ತುಕೊಂಡ ಹಾಗಾಗುತ್ತದೆ. ನ್ಯಾಯವೆಂದಾಗ, ಯಾವ ಬಗೆಯ ನಿರ್ಬಂಧಗಳೂ ಅಸಮತೆಗಳೂ ಇಲ್ಲದೆ ಒಬ್ಬರು ಇನ್ನೊಬ್ಬರಿಗೆ ಸಮವಾಗಿ ವ್ಯವಹರಿಸಲು ಶಕ್ತಿ, ಅನುಕೂಲ, ಅವಕಾಶ ಇರಬೇಕಾಗುತ್ತದೆ. ಇದು ಪ್ರಥಮತಃ ರಾಜಕೀಯವಾದ್ದಲ್ಲ. ಸಮಾಜದ ಮತ್ತು ನೀತಿ ನಡವಳಿಕೆಗಳ ಆವರಣ, ನೆಲೆಗಟ್ಟು ಉಳ್ಳದ್ದು. ದೇಶದ ಸಮಸ್ತ ಶಾಸನಕಾರ್ಯವೂ ಈ ಸಮಾನತೆಯನ್ನೂ ನ್ಯಾಯವನ್ನೂ ಸ್ಥಾಪಿಸಬೇಕಾಗುತ್ತದೆ. ಇದು ಸೋಷಿಯಲಿಸ್ಟಿಕ್ ಆಗದಾದರೆ ಸೋಷಿಯಲಿಸಂ ಯಾವುದು? ರಾಜ್ಯಾಂಗದ 395 ಕಲಮುಗಳೂ ಪ್ರಬಲರ, ಅಧಿಕಾರಿಗಳ ಮಾರ್ಗ ದರ್ಶನಕ್ಕಾಗಿ ವಿಧಿಸಿದ ಮಿತಿಗಳೇ ನಿರ್ಬಂಧಗಳೇ ಅಲ್ಲವೆ? ಒಂದು ದೇಶದವರೆಲ್ಲರ ನಡವಳಿಕೆಯ ಮೇಲೆ ಎರಗಿದವು. ಅವು ಕೊಡುವಷ್ಟು ಅವಕಾಶ ಮಾತ್ರ ಆಳುವವರಿಗಿದೆ. ಅವಕ್ಕೆ ಒಳಪಟ್ಟು ಸಾಮಾಜಿಕ ಹಿತವನ್ನು ಸಾಧಿಸಬೇಕು. ಕೇವಲ ಸ್ವಾತಂತ್ರ್ಯ ಒಂದನ್ನು ಮಾತ್ರ ಗಮನದಲ್ಲಿಟ್ಟುಕೊಂಡರೆ ಈವರೆಗೂ ಯಾರು ಯಾರು ಅಸಮ ಅನುಕೂಲ ಗಳನ್ನು ಅನುಭವಿಸುತ್ತಿದ್ದರೊ ಅವೆಲ್ಲವನ್ನೂ ಅವರಿಗೆ ಉಳಿಸಿ ಉಂಬಳಿಕೊಟ್ಟ ಹಾಗಾ ಗುತ್ತದೆ. ಸಮಾಜದ ಇತರರ ಮೇಲೆ ಅವರ ಪ್ರಾಜಾಪತ್ಯ ನಿರಂತರವಾಗಿ ನಡೆಯುವಂತೆಯೇ ಆಗುತ್ತದೆ. ಇವೊತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತು ಹಟದ ಮಾತನ್ನಾಡುತ್ತಿರುವ ಒಬ್ಬ ಮೇಧಾವಿ ಹಿರಿಯರು ತಾವು ಕೇಂದ್ರದ ಮಹಾಮಂತ್ರಿ ಯಾಗಿದ್ದಾಗ ನುಡಿದರು: 'ಎಲ್ಲರ ಎಲ್ಲ ಹಕ್ಕುಗಳನ್ನೂ ಇರುವಂತೆ ಉಳಿಸಿಕೊಟ್ಟರೆ ಯಾವ ಸಾಮಾಜಿಕ ಮುನ್ನಡೆ ಶಕ್ಯ?' ಎಂದು. 56 ಕೋಟಿಗೆ ಮೀರಿದ ಜನಕ್ಕೆ ಅವಕಾಶ ಕಲ್ಪನೆ ಆಗಬೇಕಾಗಿರುವಾಗ ಹಣ, ಅಧಿಕಾರ ವಿದ್ಯಾಬಲ, ರಾಜಕೀಯ ಸ್ವಾತಂತ್ರ್ಯದ ಬಲ, ವರಮಾನ ಮತ್ತು ಪ್ರಚಾರ ಬಲ ಇರುವ ಜನ ತಮಗೆ ಬೇಕಾದುದನ್ನು ಸಾಧಿಸಿಕೊಳ್ಳುತ್ತಿರುವಾಗ, ಉಳಿದ ಜನವರ್ಗವನ್ನೆಲ್ಲ ದುಡಿಸಿಕೊಳ್ಳುವ ಅವಕಾಶವನ್ನು ಮಾತ್ರ ಅವರಿಗೇ ಊಡುವ ಹಾಗಾಗುತ್ತದೆ. ಈ ಎಲ್ಲವನ್ನೂ ಮಾರ್ಪಡಿಸಲು ಜನಕ್ಕೆ, ಶಾಸನ ಮಂದಿರಗಳಿಗೆ ಸ್ವಾತಂತ್ರ್ಯ, ಧಾರಾಳ ಇವೆ. ತಕ್ಕಂತೆ ಕಾನೂನನ್ನೂ ಸಂಸ್ಥೆಗಳನ್ನೂ



ಯೋಜನೆಗಳನ್ನೂ ರೂಪಿಸಿಕೊಳ್ಳುವುದು ಪರಮಾಗತ್ಯ. ಮೂಲಭೂತ ಸ್ವಾತಂತ್ರ್ಯಗಳನ್ನು ರಾಜ್ಯಾಂಗಶಾಸನ ಕೊಟ್ಟಿದೆ ಎಂಬ ಕಾರಣವೇ ಅವುಗಳಿಂದ ಸಾರ್ವತ್ರಿಕ ಹಿತಕಾರ್ಯಗಳ ಬೆಳವಣಿಗೆಗೆ ಅಡ್ಡಿಯಾಗುವಂತೆ ನಿಲ್ಲಬಾರದು. ಆ ಕಡೆಯಿಂದ ಅವರು ಉಳಿದ ಜನವರ್ಗದ ಮೇಲೆ ಆಕ್ರೋಶ ಬೆಳಸದೆ ನಮ್ಮ ವ್ಯವಹಾರ ಹಿತದ ಮಾರ್ಗವನ್ನು ಹಿಡಿಯಬೇಕು. ಭಾರತ ಭಾಗ್ಯ ವಿಧಾತರು ಇದನ್ನು ಹೇಗೆ ರೂಪಿಸುತ್ತಾರೊ!

## ಸುಧಾರಣೆಯ ಆವರಣ

ಆ ಹಕ್ಕುಗಳನ್ನು ಅನುಭವಿಸುವವರು ಎಂದಿಗೂ ತಾವಾಗಿ ಅವನ್ನು ಬಿಟ್ಟು ಕೊಡುವುದಿಲ್ಲ. ಅವನ್ನು ಸರ್ಕಾರವೇ ಶಾಸನಗಳೇ ದೊರಕಿಸಿಕೊಡಬೇಕು. ಇಲ್ಲಿದೆ ಘರ್ಷಣೆ; ಈ ಎರಡು ಕಡೆಯ ವಾದಗಳೂ ಜನರ ಮನಸ್ಸಿಗೆ ಭ್ರಾಂತಿಗಳನ್ನೂ ಉದ್ವೇಗಗಳನ್ನೂ ತಂದು ದಿನಜೀವನದಲ್ಲಿ ಕ್ರಿಯಾ ವ್ಯಾಪಾರಗಳನ್ನೂ ಮೌಲ್ಯಗಳನ್ನೂ ಮಾರ್ಪಡಿಸುತ್ತವೆ. ಸ್ವಾತಂತ್ರ್ಯವನ್ನು ಚಲಾವಣೆಗೆ ತರುವುದಕ್ಕೆ ಎಷ್ಟು ಅವಕಾಶಗಳಿವೆಯೊ ಅಷ್ಟೇ ಅವುಗಳನ್ನು ಸಂಯಮದಲ್ಲಿ, ಮಿತಿಯಲ್ಲಿ ನಡಸುವ ಅಗತ್ಯದ ಮೇಲೆ ಹೊರುತ್ತದೆ. ಸಮಾಜಕ್ಕೆ ಅಹಿತಕರವಾದ ಹಕ್ಕು ಯಾರಿಗೂ ಇಲ್ಲ. ಜನವರ್ಗ ಕೊಡದ, ಕೊಡಲೊಪ್ಪದ ಹಕ್ಕುಗಳು ಎಂಬುವಿಲ್ಲ. ಯಾವುದನ್ನು ಒಂದು ಜನತೆ ಒಪ್ಪಿ ನಡೆದುಕೊಳ್ಳಲು ಬಯಸುತ್ತದೆಯೊ ಅದನ್ನು ಮಾತ್ರ ಆ ಜನತೆ ಏರ್ಪಡಿಸುವ ಸರ್ಕಾರ ಕೊಟ್ಟೀತು. ಎಂದೇ ಆಗಲಿ, ಯಾರೇ ಆಗಲಿ, ಸಮಾಜದ ಒಟ್ಟು ಜೀವನದ ಮೇಲೆ ಪ್ರಯೋಗಿಸಲು ತಮಗೆ ಹಕ್ಕಿದೆಯೆಂದು ನುಡಿಯಲಾರರು. ಸಮಾಜದ ಸ್ತಿಮಿತ, ನೆಮ್ಮದಿ, ಸುರಕ್ಷಣೆಗೆ ವಿರುದ್ಧವಾಗಿ ಹಕ್ಕುಗಳು ಸರ್ವಥಾ ಇಲ್ಲ. ಸಹಜವಾದ ಮಾನವ ಹಕ್ಕುಗಳು (Natural Rights) ಎಂಬ ಮಾತಿಗೆ ಕಾನೂನಿನ ಹೊರಗೆ ಅರ್ಥ ವಿರಬಲ್ಲದೇನೋ! ಕಾನೂನಿಗೆ ಒಳಪಟ್ಟದ್ದು ಎಂಬುದು ಮಾತ್ರ ಸಕ್ರಿಯ ಶಾಸನ (Positive Law). ಇದನ್ನು ದೇಶದ ನ್ಯಾಯ ಪದ್ಧತಿಯೂ ಸರ್ಕಾರದ ನಡವಳಿಕೆಯೂ ನಡೆಸಿಕೊಂಡು ಹೋಗುತ್ತದೆ. ಈ ದೃಷ್ಟಿಯಿಂದ ಮಾತ್ರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು; ಅದರಂತೆ ನಡೆಯಬೇಕು. ಇಲ್ಲಿ ಬಳಕೆಗೆ ಬರುವ ಮಾತುಗಳೂ ಅರ್ಥಗಳೂ ಚಾಲನೆಗೆ ತರುವ ನಡವಳಿಕೆಗೂ ಪರಸ್ಪರ ಸಮಯದಲ್ಲಿ (Conventions), ರೂಢಿ, ಸಂಪ್ರದಾಯದಲ್ಲಿ ನಡೆಯಬೇಕಾಗುತ್ತವೆ. ಬಲಪ್ರಕಾಶದಿಂದ, ದಬ್ಬಾಳಿಕೆಯಿಂದ ಸ್ಥಾಪಿಸಿದ ಶಾಂತಿ ಕ್ರಮ, ಸ್ತಿಮಿತ, ಆರೋಗ್ಯಕರ ಹಿತಕರ ರಕ್ಷಣಗಳಲ್ಲ. ತೃಪ್ತಿಯಿಂದ, ನೆಮ್ಮದಿಯಿಂದ ಹುಟ್ಟಿ ಮಾನವತೆಯ ದೃಷ್ಟಿ ಹೆಚ್ಚಿ ಜನ ತಾವೇ ನಡೆಸಿಕೊಡುವಂಥವು. ಹಕ್ಕುಗಳೆಂಬವು ಸಮಜೀವನಕ್ಕೆ ವಿರುದ್ಧವಾಗಕೂಡದು. ನ್ಯಾಯ ಏಕಪಕ್ಷವಾಗಿ ನಿರ್ಣೀತವಾಗಬಾರದು. ಆರ್ಥಿಕ ಸಾಮಾಜಿಕ ಹಕ್ಕುಗಳನ್ನು ಒಪ್ಪಿಕೊಂಡು ಸ್ಥಾಪಿಸಿ ನಡಸಲು ಜನಜೀವನದ ಆವರಣದಲ್ಲಿ ಅವಕಾಶಗಳು ಇದ್ದ ಹೊರತು ಅಲ್ಲಿ ಪ್ರಜಾಸತ್ತಾತ್ಮಕವಾದ ಜೀವನ ನಟ್ಟು

ನಡೆಯಲಾರದು. ಈ ನಡುವೆ ಈ ನಿಟ್ಟಿನ ಆ ನಿಟ್ಟಿನ ಸ್ವತಂತ್ರವಾದ, ಸಮಾಜ ಸಮತಾವಾದ, ಕ್ರಾಂತಿವಾದ ಮುಂತಾದ ಮಾತುಗಳು ನಿಜವಾದ ಮೌಲ್ಯಗಳಾಗವು.

## ಇಲ್ಲಿನ ಸಿಕ್ಕು

ಒಂದೇ ಮಾತನ್ನು ಬೇರೆ ಬೇರೆ ಉದ್ದೇಶಗಳ ಪ್ರಯೋಜನ ಸಾಧಕ ಬುದ್ಧಿಯುಳ್ಳ ಜನ ಬೇರೆ ಬೇರೆ ಅರ್ಥದಲ್ಲಿ ಪರಸ್ಪರ ವಿರುದ್ಧವಾಗಿ ಪ್ರಯೋಗಿಸದಂತೆ ಕೂಗುಗಳನ್ನೂ ತಿಳಿದುಕೊಳ್ಳುವುದು ಅಗತ್ಯ. ಸಾವಿರಾರು ವರ್ಷದ ಚರಿತ್ರೆ ಉಳ್ಳ, ವಿಭಿನ್ನ ಭಾಷೆ, ಮತ, ಸಂಪ್ರದಾಯ, ಆಹಾರ ವಿಹಾರ, ವೇಷಭೂಷಣ, ಪಕ್ಷಪಾತ ಉಳ್ಳ ಜನವರ್ಗ ನಮ್ಮದು. ಪ್ರಾಂತ ಪ್ರಾಂತ ವೈಷಮ್ಯಗಳಿವೆ. ಜಾತಿ ಸಂಪ್ರದಾಯದಲ್ಲಿ, ಮತ ಸಂಪ್ರದಾಯಗಳಲ್ಲಿ, ಆಡುವ ಮಾತಿನಲ್ಲಿ ಬೇರೆ ಬೇರೆಯಾಗಿರುವ ಈ ಸಮಾಜವನ್ನು ಹಟಾತ್ತಾಗಿ ನೂರಕ್ಕೆ ನೂರಂಶ ಪ್ರಜಾಸತ್ತಾತ್ಮಕ ವ್ಯವಹಾರಕ್ಕೊ ವಿಧಾನಗಳಿಗೊ ತಿರುಗಿಸುವುದು ಶಕ್ಯವೆ? ಅದಕ್ಕೆ ಕಾಲ ಹಿಡಿಯುತ್ತದೆ. ಗೊತ್ತಾದ ಜನ, ಹತ್ತಿರದ ಕೋಮು ಬಣಗಳವರು ಸುಲಭವಾಗಿ ಕೂಡುವ ಜನಮಂಡಲಗಳು. ಮೊದಲ ನಾಲ್ಕು ದಿನ ರಾಜಕೀಯ, ಆರ್ಥಿಕ ಪ್ರಯೋಜನ ಗಳಿಕೆಯ ಭಾಗಗಳಲ್ಲಿ ಈ ಕೋಮುಭಾವ ಪ್ರಬಲಿಸುವುದು ಸಹಜ. ಒಟ್ಟು ದೇಶದ ಹಿತದೃಷ್ಟಿಯಿಂದ ನಡೆಯುವಂತೆ ಅದನ್ನು ಬೇಗ ತಿದ್ದಬೇಕು. ಒಟ್ಟು ನಾಡಿನ ಕಲ್ಪನೆ, ದೇಶದ ಹಿತದೃಷ್ಟಿ, ರೀತಿನೀತಿಗಳು ಏರ್ಪಡಬೇಕು. ಅದು ಏರ್ಪಡುವ ಮುಂಚೆ ಕಾರ್ಪಣ್ಯಗಳೂ ಪಕ್ಷಗಳೂ ಹುಟ್ಟಿ ಜನದ ಕಾರ್ಯಗಳನ್ನೂ ಗುಂಪುಗಳನ್ನೂ ಪರಸ್ಪರ ವಿರುದ್ಧವಾದ ದಾರಿಗಳಿಗೆ ಎಳೆಯುತ್ತಿವೆ. ಮತಗಳ ವರ್ಗ, ಭಾಷೆಗಳ ವರ್ಗ, ಪ್ರಾಂತವರ್ಗ, ಪಟ್ಟಭದ್ರ ಹಿತಗಳ ವರ್ಗ, - ಇವುಗಳ ಜೊತೆಗೆ ಪಶ್ಚಿಮ ಯೂರೋಪಿನ ಅಮೇರಿಕದ ರೀತಿನೀತಿಗಳಿಗೆ ಹೊಂದುವ ಬಣ, ಎರಡು ಮೂರು ಧಾತುಗಳ ಕಮ್ಯುನಿಸ್ಟ್ ತತ್ವಕ್ಕೊ ರಾಜ್ಯಪದ್ಧತಿಗಳಿಗೊ ಹೊಂದುವ ವರ್ಗಗಳ ನಡುವೆ ಜನತೆ ಸಿಕ್ಕಿಕೊಂಡು, ಇಲ್ಲಿನ ಜೀವನ ಸುಸ್ಪಷ್ಟವಾದ ಒಂದು ಗುರಿ ಇಲ್ಲದೆ ತೊಳಲುತ್ತಿದೆ. ಅಡ್ಡಿ ಆತಂಕಗಳ, ಪ್ರತಿಭಟನೆಯ, ಹಿಂಸೆಯ ಮಾರ್ಗಗಳನ್ನು ಹಿಡಿಯುತ್ತಿದೆ.

## ಮನೋರಂಗದಲ್ಲಿ

ಹೊರಜೀವನದಲ್ಲಿ ಹೀಗಾದರೆ ಮಾನಸಿಕ ಜೀವನದಲ್ಲಿಯೂ ಧಾರ್ಮಿಕ ಜೀವನದಲ್ಲಿಯೂ ಅನಿಶ್ಚಯ, ಸಂದಿಗ್ಧತೆ, ಗೊಂದಲ ಉಂಟಾಗಿವೆ. ಯೇಟ್ಸ್ ಒಂದು ಕಡೆ ಹೇಳಿದ ಹಾಗೆ -

ಕೇಂದ್ರದ ಬಲ, ಹಾಳತ ಹೋಗಿವೆ ;
ನಾಡ ಜೀವನದ ಮೂರ್ತಿತ್ವ ಒಡೆದು ಚೂರು ಚೂರಾಗಿದೆ.



ನಡವಳಿಕೆಯ ಪ್ರಚೋದನೆಗಳೊ ಪ್ರವೃತ್ತಿಗಳೊ ವಿಧಾನಗಳೊ
ಯಾವ ಒಂದು ತತ್ವಕ್ಕೂ ಹೆಚ್ಚಾಗಿ ಒಲಿಯದಿದೆ.
ಉತ್ತಮರೆಂಬವರಲ್ಲಿ ಯಾವ ಮನೋನಿಶ್ಚಯವೂ ವಿಶ್ವಾಸವೂ ಇಲ್ಲ.
ಅತಿ ನೀಚರೆಂಬವರ ಹೊಟ್ಟೆತುಂಬಾ ರಾಗದ್ವೇಷಗಳ ಭರಭಾರವಿದೆ.
The best lack all conviction, while
The worst are full of passionate intensity.

## ಗುಣ, ನುಡಿ, ನಡೆ

ಈ ದೇಶ ಕಂಡಷ್ಟು ಉನ್ನತದರ್ಶನ ಬೇರಲ್ಲಿಲ್ಲ. ಇಲ್ಲಿ ಬೆಳೆದಷ್ಟು ಜಡತೆ ಕೀಳ್ಮೆ ಕಾರ್ಪಣ್ಯಗಳು ಬೇರೆ ಯಾವಕ್ಕೂ ಕಡಮೆಯಲ್ಲ. 'ಕಣ್ಣೆಲ್ಲೋ ಎತ್ತರದಲಿ ತುಟಿ ದುಃಖದ ಬಿರುಕು' - ಎಂದರು ಕವಿ. ನಡೆ, ಶಾಂತಿ, ವಿರಕ್ತಿ, ಪರಸಾಧನೆಯ ಆಕಾಂಕ್ಷೆಗಳನ್ನೇ ಪ್ರಧಾನಗಮ್ಯವಾಗಿ ಎಣಿಸುತ್ತಿದ್ದ ದೇಶ ಆ ಕಡೆಗೆ ಇಂದು ವಿಮುಖವಾಗಿದೆ. ಇದು ಸರಿಯೊ ತಪ್ಪೊ ಎಂಬುದಲ್ಲ ಪ್ರಶ್ನೆ ; ಸ್ಥಿತಿ ಅದು. ಗಟ್ಟಿಯಾಗಿ ಲೌಕಿಕ ಪ್ರಯೋಜನದ ಹಾದಿಯನ್ನು ಮಾತ್ರ ಹಿಡಿದಿದೆ. ಆಹಾರ ವಿಹಾರ, ಸಂಪಾದನೆ, ಜೀವನ ಸಂಪರ್ಕ, ಆಶೋತ್ತರಗಳು ಎಲ್ಲದರಲ್ಲಿಯೂ ಈವರೆಗೂ ಜನ ಒಲಿಯದಿದ್ದ ರೀತಿನೀತಿಗಳ ಕಡೆಗೆ ಗಮನ ಹೋಗುತ್ತಿದೆ. ಎಂದೂ ಹಾಗೆಯೇ ಏನೊ! ಅದನ್ನು ನುಡಿಯುತ್ತಿರಲಿಲ್ಲ ಅಷ್ಟೇ. ಇಲ್ಲಿ ಅಷ್ಟಿಷ್ಟು ಸುಧಾರಣೆಗಳ ಮೂಲಕವಾಗಿ ಮಾರ್ಪಾಡನ್ನು ಸಾಧಿಸಿಕೊಳ್ಳೋಣ ಎಂಬ ಬುದ್ಧಿಗಿಂತ ಬೇಗ ಎಲ್ಲವನ್ನೂ ಬೇರ್ಪಡಿಸಿಕೊಳ್ಳೋಣ ಎಂಬ ಬುದ್ಧಿ ಬೆಳೆಯುತ್ತಿದೆ. ಶಾಂತಮಾರ್ಗಗಳಿಗಿಂತ ಅವಸರದ ಮಾರ್ಗ, ಪಡೆಗಳ ನಿರ್ಮಾಣ, ಉಗ್ರಕಾರ್ಯ, ಮುಯ್ಯಿ, ವೈರ, ದರ್ಪ, ಕ್ರೋಧ, ಪ್ರಚೋದನೆ; ಲಕ್ಷಾಂತರ ಜನ ನುಗ್ಗಿ ಹಿಂಸೆ, ಕೊಲೆ, ಸಾವು, ನೋವುಗಳಿಗೆ ಕೊಕ್ಕರಿಸದೆ ಆ ಗುರಿಯನ್ನು ಸಾಧಿಸಬೇಕೆಂಬ ಹುಚ್ಚಿನಲ್ಲಿದೆ. ಮಾರ್ಗದರ್ಶನವೂ ಯುವಜನತೆಯನ್ನು ಪಳಗಿಸುವ ಶಕ್ತಿಯೂ ವಿದ್ಯಾಮಂಡಲಕ್ಕೆ ಇಲ್ಲ. ಅದಕ್ಕೆ ಮಾರ್ಗದರ್ಶನ ಮನೆಯಲ್ಲಿಲ್ಲ ; ಶಾಲೆಗಳಲ್ಲಿಲ್ಲ ; ನಾಡಿನ ನಾಯಕರೆಂಬವರಿಂದ ಇಲ್ಲ. ಅಷ್ಟೇ ಅಲ್ಲ, ನಾಯಕರೆಂಬವರೇ ಇವರ ಅಶಿಕ್ಷೆಗೆ ಕಾರಣರಾಗುತ್ತಿರುವ ನೋಟ ದುರ್ಭರ. ಎಲ್ಲರಿಗೂ ಎಲ್ಲವೂ ಈಗಲೇ ಬೇಕು ಎಂದಾಗ, ಕಾರ್ಯ ಹೇಗೆ ರೂಪುಗೊಳ್ಳಬಹುದು? ಎಲ್ಲರೂ ಒಮ್ಮನಸ್ಸಿನಿಂದ ನಾಲ್ಕುವರ್ಷ ದುಡಿದರೆ ಆದೀತು! ಯಾರಿಗೆ ಆ ತಾಳ್ಮೆ? ಇಷ್ಟ? ಸಮಾಧಾನದಲ್ಲಿ ಹೊಂದಿಸಿ ದುಡಿಸಬಲ್ಲವರು ಯಾರು? ಇಂಥ ಸನ್ನಿವೇಶಗಳಲ್ಲಿ ಸತ್ಯ ಸತ್ಯವಾಗದು ; ಸುಳ್ಳು ಸುಳ್ಳಾಗದು. ಆಯಾ ಜನ ಬಳಸುವ ಮೌಲ್ಯಗಳು ಆಯಾ ವರ್ಗಗಳಿಗಷ್ಟೇ ಪ್ರಧಾನ. ಇದು ಒಂದು ಕಾಡುಸ್ಥಿತಿಯ ಘಟ್ಟಕ್ಕೆ ಜೀವನವನ್ನು ತಾರದಂತೆ ನೋಡಿಕೊಳ್ಳಬೇಕಾದುದು ನಾಯಕರ ಆದ್ಯ ಕರ್ತವ್ಯ. ಆದರೆ ಹಳೆಯ ತೆರದ, ಹಳೆಯ ಕಾಲದ ನಾಯಕವರ್ಗ

ಅಳಿಸಿ ಹೋಗಿದೆ. ಚುನಾವಣೆಗೆ ನಿಲ್ಲುವ ವರ್ಗಗಳು ಮಾತ್ರವೇ ಇಂದು ಅವಕ್ಕೆ ಪೋಷಕ. ಅಂತಹ ಕ್ರಿಯಾಮಂಡಲಗಳು ಪ್ರಬಲಿಸಿ ಅಧಿಕಾರ, ಹಣ, ಆಶ್ರಯ, ಸ್ವಪ್ರಯೋಜನದ ವಿಸ್ತರಣೆಗಳಿಗೆ ಒಲಿವ ಗುಂಪುಗಳೇ ಪ್ರಬಲಿಸುತ್ತಿವೆ. ಅವರು ಕಾರ್ಯಮಾಡುವ ರೀತಿಯಲ್ಲಿ ನಾಡಿಗಾಗಲಿ, ಸಣ್ಣವಯಸ್ಸಿನ ಇತರರಿಗಾಗಲಿ ಸಾತ್ವಿಕವಾದ ಯಾವ ಮಾರ್ಗದರ್ಶನ ದೊರೆತೀತು?... ಒಂದು ಬಗೆಯಲ್ಲಿ ಅವರು ಜಯಶೀಲರಾಗಿರುವುದರಿಂದ ಜಯಪಡೆಯಲು ಅದೇ ಮಾರ್ಗ ಎಂಬ ಬೆಲೆಯೆಣಿಕೆ ಎಲ್ಲರಲ್ಲಿಯೂ ಹರಡುತ್ತಿದೆ. 20-30 ವರ್ಷಗಳ ಅವಕಾಶದಲ್ಲಿ ದೊಡ್ಡ ಸಂಪ್ರದಾಯಗಳು ಬೆಳೆಯಲೂ ದೇಶದ ಅಖಂಡತೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದನ್ನು ಸಾಧಿಸುವಂತೆ ನಾಡಜೀವನವು ಬಲಿಯಲೂ ಅವಕಾಶವಾಗಿಲ್ಲ. ಒಡೆವ, ಮುರಿವ, ನಾಶಕರ ಪ್ರವೃತ್ತಿಗಳ ಉರುಬು ಉಬ್ಬಸ ತರುತ್ತಿದೆ. ಅದರಿಂದ ನಾನಾ ಮೌಲ್ಯಗಳು, ನಾನಾ ಆಕಾಂಕ್ಷೆಗಳು, ನಾನಾ ವಿಧಾನಗಳು. ಪ್ರತಿ ಒಂದೂ ತಾನು ಹಿಡಿದ ಮಾರ್ಗವೇ ಸರಿ ಎನ್ನುತ್ತ ಉಗ್ರ ಪ್ರತಿಭಟನೆಗಳನ್ನೂ ರೀತಿ ವಿಧಾನಗಳನ್ನೂ ಮೆರಸುತ್ತಿರುವಾಗ ಇನ್ನೇನಾದೀತು? ಸತ್ಯಸ್ಥಿತಿ ಇದು. ಸತ್ಯಮೇವ ಜಯತೆ ಎಂದು ಈ ಸ್ಥಿತಿಗೆ ಕಿರೀಟಧಾರಣೆ ಮಾಡೋಣವೆ? ಇವೆಲ್ಲ ಮೌಲ್ಯಗಳೇ ಆಗಿ ಜನಜೀವನ ಗೊಂದಲದಲ್ಲಿ ಸಿಕ್ಕಿಕೊಂಡಿದೆ. ಸತ್ಯಸಾಧನೆಗೆ ದುಡಿಮೆ, ಋಜುತ್ವ ಬೇಡವೆ?

ಗಂಡು ಹೆಣ್ಣು ಒಬ್ಬೊಬ್ಬರೇ ಇರುವಾಗ ಅವರ ಧರ್ಮಬುದ್ಧಿ, ನೀತಿ ಬಹು ಮಟ್ಟಿಗೆ ಚೊಕ್ಕವಾಗಿಯೇ ಇರುತ್ತದೆ. ಬಾಂಧವ್ಯಗಳನ್ನು ಬೆಸೆದು, ಒಬ್ಬರ ಸುಖದುಃಖಗಳಿಗೆ ಇನ್ನೊಬ್ಬರು ಆಗುವಂತೆ ದುಡಿಯುತ್ತದೆ. ಗುಂಪಿನಲ್ಲಿ, ಸಂಘಗಳಲ್ಲಿ ಆ ಬುದ್ಧಿ ಮಂದವಾಗುತ್ತದೆ. ಸರಪಣಿಯ ಶಕ್ತಿ ಇರುವುದು ಅದರ ಅತಿದುರ್ಬಲ ಕೊಂಡಿಯಲ್ಲಿ ಎನ್ನುವುದುಂಟು. ಗುಂಪಿನಲ್ಲಿ ಗೆಲ್ಲುವ ಮಾತು ಸಮಯಸಾಧಕರ ಬಾಯಿಮಾತಿನಲ್ಲಿಯೊ ವಾಗ್ಮಿತೆಯ ಜಾಲಗಳಲ್ಲಿಯೊ ತೋಳಬಲದಲ್ಲಿಯೊ ಹಣಪ್ರಭಾವದಲ್ಲಿಯೊ ಇರುತ್ತದೆ. ಯಾರು ಎಲ್ಲರಿಗಿಂತ ನಯವಾಗಿ ಉಪಾಯದ ಮಾತನಾಡಬಲ್ಲರೊ, ಯಾರು ಹೆಚ್ಚಾಗಿ ತಕ್ಷಣದ ಪ್ರಯೋಜನವನ್ನು ಅಥವಾ ರಾಗದ್ವೇಷಗಳನ್ನು ಬೆಳಸುವರೊ ಅವರ ಕಾರ್ಯಗಳಿಗೆ ಒಳಪಡುತ್ತದೆ. ಎಂಥೆಂಥ ಜನ ಹೇಗೆ ಸಮಯವನ್ನು ದುಡಿಸಿಕೊಳ್ಳಲು ಯತ್ನಮಾಡುತ್ತಾರೆ ಎಂಬುದರ ಮೇಲೆ ಪರಿಸ್ಥಿತಿ ಹೊಂದಿರುತ್ತದೆ. ಅಲ್ಲಿನ ಸತ್ಯಸ್ಥಿತಿ ಯಾರೊಬ್ಬರದೂ ಅಲ್ಲ. ತೀರ್ಮಾನ ಏಕಮುಖವಾಗಿ ಆಗಬಹುದು. ಅದು ಅಲ್ಲಿರುವವರೆಲ್ಲರ, ಒಂದು ಒಟ್ಟು ಜನಮನದ, ಯಾರೊಬ್ಬರ ಹೊಣೆಯೂ ಅಲ್ಲದ ಭಾವ ಎನ್ನಬಹುದು. ಮೌಲ್ಯದ ದೃಷ್ಟಿಯಿಂದ ಆಗ ಕ್ರಿಯಾಕಾರಕವಾಗತಕ್ಕದ್ದು ಹಾಗೆ; ಸಂಘಗಳಲ್ಲಿ ಹಾಗೆ; ಸಂಸತ್ತುಗಳಲ್ಲಿ ಹಾಗೆ; ಕಾರ್ಮಿಕ ಮಂಡಲಗಳಲ್ಲಿ, ಚಳವಳಿಕಾರರ ಗುಂಪುಗಳಲ್ಲಿ ಹಾಗೆ. ಇವೆಲ್ಲ ಸಂಸ್ಥೆಗಳ ಲಕ್ಷಣ. ಅವು ನಾಯಕರ ಗುಣ, ಗೌರವಗಳ ಮೇಲೆ ನಡೆಯುತ್ತವೆ. ಶೀಲ? ಶುಚಿ? ಶುಭ?



## ಆತ್ಮೀಯತೆ

ನ್ಯಾಯ ಮೂಲಭೂತ ಧರ್ಮಬುದ್ಧಿಗೆ ಸಂಬಂಧಿಸಿದ್ದು. ಸ್ವಾತಂತ್ರ್ಯವೆಂಬುದು ಅನಿರ್ಬದ್ಧ ಅವಕಾಶಕ್ಕೂ ಆವರಣಕ್ಕೂ ಸಂಬಂಧಿಸಿದ್ದು. ಸಮಾನತೆ ಪರಸ್ಪರವಾಗಿ ಜನ ತೋರಿ ನಡೆದುಕೊಳ್ಳವುದು; ಒಟ್ಟು ದೃಷ್ಟಿಯಲ್ಲಿ, ನಡವಳಿಕೆಗಳಲ್ಲಿ ನೆಲಸಿರುವ ಭಾವನೆ. ಇವುಗಳಿಂದೆಲ್ಲ ಒಂದು ಸೋದರತೆ ಜನವರ್ಗದಲ್ಲಿ ಉಂಟಾಗುವಂತೆ ವರ್ತಿಸಬೇಕೆನ್ನುವಾಗ ಒಂದು ಮಾನವೀಯತೆಯ ದೃಷ್ಟಿ, ಆತ್ಮೀಯ ಸಂಬಂಧ ಕಲ್ಪನೆ ಬೇಕು. ನಾಡಿನಲ್ಲಿ ಒಂದೇ ಮತದ ಜನ ಇರುವಾಗ ಇದು ಸುಲಭ. ಆ ಮತದ ಅಧಿಷ್ಠಾತೃಗಳಾದ ದೇವರು ತಾಯಿ ತಂದೆ, ಮತವನ್ನು ಒಪ್ಪಿರುವವರೆಲ್ಲ ಆ ದೇವರ ಮಕ್ಕಳು, ಆದುದರಿಂದ ಸೋದರರು ಎಂಬ ಭಾವನೆ ಅಲ್ಲಿ ಸುಲಭ. ಮತಪ್ರಜ್ಞೆ ಹೆಚ್ಚಾಗಿಲ್ಲದಿರುವಾಗ, ಅಥವಾ ಮನಸ್ಸನ್ನು ನಡಸದಿರುವಾಗ, ಈ ನಾಡಿನ ನಾವೆಲ್ಲ ಸಮಾನರೆಂಬ ಭಾವವೊಂದು ಮಾತ್ರ ಸೋದರತೆಯ ಕಲ್ಪನೆಗೆ ಆಧಾರವಾಗಬೇಕು. ಆಗ ಮಾತ್ರ ಈ ಎಣಿಕೆ ಜನಜೀವನವನ್ನು ಜಾಗ್ರತಗೊಳಿಸೀತು. ಇದರಿಂದ ನಾವು ನಮ್ಮವರು ಎಂಬ ಮಮತೆ, ಅಭಿಮಾನ ನಾಡಿನಲ್ಲಿ ಹುಟ್ಟಿ ಅದು ಒಂದು ದೊಡ್ಡ ಮೌಲ್ಯವಾಗಲು ನೆರವಿಗೆ ಒದಗಿ ಪ್ರತಿಯೊಬ್ಬರ ಜೀವಕ್ಕೂ ಬೆಲೆ ಗೌರವಗಳ ಕಾಣಿಕೆ ಸಲ್ಲುತ್ತದೆ. ಹೀಗಾಗಬೇಕು, ಹೀಗಾಗುವಂತೆ ಜನಜೀವನ ಬೆಸೆಯಬೇಕು. ಇದಕ್ಕಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಹಾರ ರೂಪಗೊಳ್ಳಬೇಕು. ಒಟ್ಟಿನಲ್ಲಿ ಇಲ್ಲಿನ ವ್ಯಾಪಾರಗಳೆಲ್ಲ ಇಂಥ ಒಂದು ಗುರಿಗೆ ನಡೆಯಬೇಕು. ಇಲ್ಲವಾದರೆ ಅವುಗಳ ಪ್ರಯೋಜನವಿಲ್ಲ. ಜನರನ್ನು ಸಮಾನತೆಗೆ ಸೋದರತೆಗೆ ನಡಸುವಾಗ ನ್ಯಾಯ ಧರ್ಮಗಳ ತತ್ವ ಸಂತತವಾಗಿ ಮನಸ್ಸಲ್ಲಿ, ಮಾತಿನಲ್ಲಿ, ನಡತೆಯಲ್ಲಿ ಕಾಣುವಂತೆ ನಡವಳಿಕೆ ಹೊಮ್ಮಬೇಕು. ಪ್ರತಿಯೊಬ್ಬನೂ ತನ್ನ ಸ್ವಾತಂತ್ರ್ಯಕ್ಕೆ ಯಾವ ವಿಧವಾದ ಅಡ್ಡಿಯೂ ಮಿತಿಯೂ ಇಲ್ಲದೆ ಸಿಕ್ಕಿದುದನ್ನು ಬಾಚಿ, ದೋಚಿ ತನ್ನ ಪ್ರಭಾವನ್ನು ಮಾತ್ರ ನೋಡಿಕೊಂಡರೆ ಅದು ದರೋಡೆಕಾರ ವೃತ್ತಿ. ತನ್ನ ವೃತ್ತಿ ಆಗ ಸ್ವಾತಂತ್ರ್ಯವಲ್ಲ; ಅವಕಾಶದ ಅಪಯೋಗ. ಸಾಮಾನ್ಯವಾಗಿ ಜನರ ಮಟ್ಟ, ಸ್ಥಿತಿ ಅಸಮವಾಗಿರುವಾಗ. ಎಲ್ಲ ದೇಶಗಳಲ್ಲಿಯೂ ಕಾಲಗಳಲ್ಲಿಯೂ ಹಾಗೇ; ನಮ್ಮಲ್ಲಿ ಅತ್ಯಧಿಕಾಂಶ ಹಾಗೆ. ಮೂಲಭೂತ ಹಕ್ಕುಗಳು, ಸ್ವಾತಂತ್ರ್ಯ ಎಂಬ ಮಾತನ್ನಾಡಿ ಬಹು ಜನಶೋಷಣೆ ಆಗದಂತೆ ನೋಡಿಕೊಳ್ಳಬೇಕಲ್ಲವೆ?

## ಸುಧಾರಣೆಯಲ್ಲಿ ದಕ್ಷಿಣವರ್ಗ, ವಾಮವರ್ಗ

ಇನ್ನೊಂದು ಮಾತೆದ್ದು ನಮ್ಮ ಜನತೆಯ ಮನಸ್ಸನ್ನು ಈಗ ಕಲಕುತ್ತಿದೆ. ಆಡಳಿತದ ಮೂಲಭೂತ ಶಾಸನಗಳನ್ನು ಮಾರ್ಪಡಿಸಿದಲ್ಲದೆ ಯಾವ ಸುಧಾರಣೆಯೂ ಪ್ರಗತಿಯೂ ಆಗದು ಎಂಬುದು. ಇದಕ್ಕೆ ಅನುಕೂಲ ಪ್ರವೃತ್ತಿಗಳು ಒದಗಬೇಕು. ತಕ್ಷಣದ

ಯಾವುದೊ ಆವೇಶಗಳಲ್ಲಿ, ಉದ್ರೇಕಗಳಲ್ಲಿ ಇಂತಹ ಮಾರ್ಪಾಡುಗಳನ್ನು ಕೈಕೊಂಡು ಜೀವನದ ಆವರಣವನ್ನೇ ದೀರ್ಘಕಾಲದ ಎಣಿಕೆಯಲ್ಲಿ ಹದಗೆಡಿಸದಂತೆ ನೋಡಿಕೊಳ್ಳಬೇಕಾದುದು ಅಗತ್ಯ. ಈಗಿನ ನಿಯಮ ನಿರ್ಬಂಧಗಳೂ ಕಟ್ಟುಪಾಡೂ ಇಕ್ಕಟ್ಟಿನವು. ಮನಸ್ಸು ಒಪ್ಪುವಂತೆ ಸುಧಾರಣೆಗಳನ್ನು ಮಾಡಿಕೊಂಡು ಜನದ ಪ್ರಗತಿ ಸಾಧಿಸಬೇಕು ಎಂಬುದು ನಿಲವು ನಿಜ. ಈ ಆಕಾಂಕ್ಷೆಗಳು ಯಾರವು? ಯಾವುವು? ಬಹುಕಾಲದಿಂದ ನಡೆದುಕೊಂಡು ಬಂದು ಸಂಪ್ರದಾಯವಂತರ ಸ್ಥಿತಿನಿಷ್ಠೆಯ ಮನೋಭಾವದವರದೊ, ಅವರ ಹಿಂಬಾಲಕರದೊ? ಅಥವಾ, ಮುಂದೆ ನುಗ್ಗಿ ಹೋಗಿ ಮಾರ್ಪಾಡುಗಳನ್ನು ಕುದುರಿಸಿ ಜೀವನದ ನಿಯಂತ್ರಣವನ್ನು ಬೇರೆ ಒಂದು ಮುಖಕ್ಕೆ ತಿರುಗಿಸಬೇಕೆನ್ನುವವರದೊ? ಒಂದು ಬಲವರ್ಗ (ರೈಟ್); ಇನ್ನೊಂದು ಎಡವರ್ಗ (ಲೆಫ್ಟ್) ಎಂದು ಇವನ್ನು ಕರೆಯುವುದು ರೂಢಿ. ಈ ಎರಡರಲ್ಲಿಯೂ ಅತಿಗಳುಂಟು. ಕೇವಲ ಸ್ಥಿತಿನಿಷ್ಠರ ಜಡತೆಯನ್ನು ಹೋಗಲಾಡಿಸಿ ಪ್ರಗತಿವಾದಿಗಳ ಅತ್ಯಾತುರವನ್ನು ಹಿತಕರ ಮಿತಿಗಳಲ್ಲಿಟ್ಟು ಬದುಕಿನ ಯಂತ್ರವನ್ನು ನಡಸಬೇಕಾಗುತ್ತದೆ. ಇಲ್ಲಿ ಕಡಮೆಯೆಂದರೆ ಮೂರು ತರಹದ ಮೌಲ್ಯಗಳಾಯಿತು. ಇವಕ್ಕೆ ಕೋಟಲೆ ನಡೆಯುತ್ತಲೇ ಇರುತ್ತದೆ. ಯಾರ ಮನಸ್ಸು, ರೀತಿ ಯಾವ ಪಾಳೆಯದಲ್ಲಿದೆ? - ಎಂಬುದು ಅವರ ಬದುಕಿನಲ್ಲಿ ಪ್ರೇರಕವಾದ, ನಿರ್ಣಾಯಕವಾದ, ಸಾಧಕವಾದ ಅಂಶ. ಈ ಜನವನ್ನೆಲ್ಲ ಒಂದು ಎಂದು ಒಟ್ಟಿನಲ್ಲಿ ಎಣಿಸುವ ಮುಂಚೆ ಈ ಸಂಗತಿಯನ್ನು ಮನಸ್ಸಿನಲ್ಲಿಟ್ಟುಕೊಂಡೇ ಇರಬೇಕು. ಪರಿಶೀಲನೆ ಮಾಡುವವರು, ಸ್ಥಿತಿಯ ವೀಕ್ಷಕರು, ಎಲ್ಲರಿಗೂ ಒಪ್ಪುವಂಥ ಆಲೋಚನೆಯಲ್ಲಿ ತೊಡಗಿರುವವರು, 'ಸರ್ವಭೂತ ಹಿತೇ ರತಾಃ' - ಹೋಗಲಿ, 'ಸರ್ವಜನ ಹಿತೇ ರತಾಃ' ಅಥವಾ 'ಸಾರ್ವಜನಿಕ ಹಿತೇ ರತಾಃ' ಎಂಬವರು 'ಅಲೂಕ್ಷಾ ಧರ್ಮ ಕಾಮಾಸ್ಯುಃ' ಆಗಿರಬೇಕು. ಅಧಿಕಾರ, ಸ್ವಾತಂತ್ರ್ಯ ಎರಡಕ್ಕೂ ಮಿತಿಗಳುಂಟು.

## The Elite

"The Elite" ಎಂಬುದರ ಹೊಣೆಗಾರಿಕೆಯನ್ನು ನಿರ್ದೇಶಿಸುವುದುಂಟು. ಇಂಥ ಆಯ್ದ ಸಂಸ್ಕೃತ ಬುದ್ಧಿವಂತರ ವರ್ಗ ಯಾವುದೊ? ಇದನ್ನು ಒಂದು ದಾರಿಗೆ ತಿರುಗಿಸುವುದು ಕಷ್ಟ. ಬುದ್ಧಿವಂತರೆಂಬವರಲ್ಲಿ ಏಕತ್ವ ಸಾಧನೆ ದುಸ್ತರ. ಆದರೂ ಅವರಲ್ಲಿ ಕೆಲವರಾದರೂ ಮೂಲಭೂತ ಯೋಚನೆ ಮಾಡಬಲ್ಲವರು ಎಂಬ ಸಂಗತಿ ಅವರ ಅಭಿಪ್ರಾಯಗಳಿಗೂ ದೃಷ್ಟಿ ರೀತಿಗಳಿಗೂ ಬಲಕೊಡುತ್ತದೆ. ಒಂದೇ ಅಭಿಪ್ರಾಯ ಇಲ್ಲದಾದಾಗಲೂ ನಾಲ್ಕು ಬೇರೆ ಬೇರೆ ಬಗೆಯ ಸೂಕ್ತ ಅಭಿಪ್ರಾಯಗಳು ಅಂಥವರಿಂದ ದೊರಕುವುದು ಶಕ್ಯ. ನಾಲ್ಕೂ ಮಾರ್ಗಗಳ ಮಾರ್ಗದರ್ಶನ, ಸೂಚನೆ ಜನತೆಗೆ ಸಿಕ್ಕುತ್ತದೆ. ಅವುಗಳಲ್ಲಿ ಯಾವುದನ್ನಾದರೂ ಒಂದನ್ನು ಆಯ್ದುಕೊಳ್ಳಬಹುದು. ಅಥವಾ ಹಲವು ಅಭಿಪ್ರಾಯಗಳ ಗುಣಾಂಶಗಳನ್ನು ಸಂಗ್ರಹಿಸಿ ಹೊಸ ಮಾರ್ಗವನ್ನು ರೂಪಿಸಿಕೊಳ್ಳಬಹುದು.



## ಕೂಗುಗಳು

ನಮ್ಮಲ್ಲಿ ಎರಡು ಕೂಗುಗಳು ಬಲವಾಗುತ್ತಿವೆ. ನಮಗೆ ತೃಪ್ತಿತಾರದ ವ್ಯವಹಾರ ಪದ್ಧತಿಯನ್ನು ಉರುಳಿಸಲು ಅಧಿಕಾರ ಉಂಟು : ಪ್ರತಿಭಟಿಸಲೂ ದಂಗೆ ಏಳಲೂ ಈಗಿರುವ ಸಂವಿಧಾನವನ್ನು ನಾಶಮಾಡಲೂ ಅಧಿಕಾರ ಉಂಟು. ನಾವು ಅವಕ್ಕೆ ವಿರುದ್ಧವಾಗಿ ದಂಗೆ ಎದ್ದರೆ ಅದು ಅನ್ಯಾಯವಲ್ಲ. ಸಾಧುಮಾರ್ಗದಲ್ಲಿ ಅವನ್ನು ಮಾರ್ಪಡಿಸಲು ಅಶಕ್ಯ, ಹೊಸ ರಚನೆಯಾದ ಹೊರತು ಬಹುಜನ ಸುಭಿಕ್ಷವಿಲ್ಲ - ಎಂಬುದು ಒಂದು. ಇದಕ್ಕೆ ರಾಜ್ಯಾಂಗ ಕೊಡುವ ಅವಕಾಶವನ್ನು ಉಪಯೋಗಿಸಿಕೊಂಡು - ಅಗತ್ಯ ಬಿದ್ದರೆ ಒಂದು ಹೊಸ Constituent Assembly ನಿರ್ಮಾಣ ಮಾಡಿಕೊಂಡು - ಬೇರೆ ರಾಜ್ಯಾಂಗ ವ್ಯವಸ್ಥೆಯನ್ನೇ ಮಾಡಿಕೊಳ್ಳೋಣ ಎಂಬುದು ಒಂದು ಮಾರ್ಗ. ಇನ್ನೊಂದು ಮಾರ್ಗ, ಸ್ವಲ್ಪ ಹೆಚ್ಚು ಕಡಮೆ ಅದೇ ಆದರೂ ಅಗತ್ಯವಾದರೆ ಈ ಕಾರ್ಯಕ್ಕೆ ಹಿಂಸೆಯನ್ನೂ ವಿನಾಶಕರ ಮಾರ್ಗಗಳನ್ನೂ ಅನುಸರಿಸಿದರೆ ತಪ್ಪಲ್ಲ ಎಂಬುದು. ಕೊಟ್ಯಂತರ ಜನಕ್ಕೆ ಅನ್ನವಿಲ್ಲ, ಬಟ್ಟೆಯಿಲ್ಲ, ನೆಲೆಯಿಲ್ಲ, ಆಸ್ತಿಪಾಸ್ತಿ ಇಲ್ಲ, ಉದ್ಯೋಗವಿಲ್ಲ. ಎಷ್ಟು ಶಕ್ತರಾದವರಿಗೂ ಸಂಪಾದನೆ ಮಾರ್ಗ ತೆರೆದಿಲ್ಲ. ಉಳ್ಳವರು ಇಲ್ಲದವರನ್ನು ಶೋಷಿಸುತ್ತಿದ್ದಾರೆ. ಅವರ ಕೈಯ ಹಿಂದೆ, ಬೆನ್ನ ಹಿಂದೆ ದೇಶದ ವೃತ್ತಪತ್ರಿಕೆಗಳೂ ನ್ಯಾಯಶಾಲೆಗಳೂ ದಂಡಶಕ್ತಿಯೂ ಸೈನ್ಯವೂ ಇವೆ; ಇವನ್ನು ಮುರಿದ ಹೊರತು ಜನವರ್ಗಕ್ಕೆ ನಿಸ್ತಾರವಿಲ್ಲ ಎಂಬ ವಾದ ಅದು. ಇದು ನಿರಾಶೆಯ ಕಾಣ್ಕೆ. ದಿಕ್ಕು ಕಾಣದೆ ಕ್ರೋಧಾವೇಶ ಬೆಳಸಿಕೊಂಡು ಇರುವ ಸ್ಥಿತಿಯನ್ನು ಮತ್ತಷ್ಟು ದುಃಸ್ಥಿತಿಗೂ ಅರಾಜಕತೆಗೂ ಎಳೆಯುವ ಮಾರ್ಗ. ಇಂಥವರು ಒಂದು ಸಲ ಪ್ರಾಬಲ್ಯಕ್ಕೆ ಬಂದರೆ ತಮಗೆ ವಿರುದ್ಧವಾಗುವ ಇಂಥದೇ ಕೂಗುಗಳನ್ನು ತುಳಿದು ದಬ್ಬಾಳಿಕೆ ಏರ್ಪಡಿಸುವವರು.

## ಪ್ರಜಾಸತ್ತೆಯ ಶಿಕ್ಷಣಶಕ್ತಿ

ಉಳಿದ ಎಲ್ಲ ಬಗೆಯ ರಾಜ್ಯಪದ್ಧತಿಗಳಿಗಿಂತ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ - ಏಕತಂತ್ರದ್ದಾಗಿರಲಿ (Unitary), ಸಂಯುಕ್ತ ಪದ್ಧತಿಯ (Federal) ದಾಗಲಿ - ಇರುವ ಒಂದು ವಿಶೇಷ ಲಕ್ಷಣ: ಜನಕ್ಕೆ ಅದು ರಾಜಕೀಯ ಶಿಕ್ಷಣವನ್ನು ಧಾರಾಳವಾಗಿ ಕೊಡುತ್ತದೆ ಎಂಬುದು. ಇಂಗ್ಲಂಡಿನಲ್ಲಿ ಐದು ವರ್ಷಕ್ಕೊಂದು ಸಲ ವೋಟಿಂಗ್ ಸಮಯದಲ್ಲಿ ಮಾತ್ರ ಕ್ಷಣಕಾಲ ಜನ ಸ್ವತಂತ್ರರು ಎಂದು ಇಂಗ್ಲಂಡಿನ ಸ್ವಾತಂತ್ರ್ಯವನ್ನು ಹಿಂದೆ ಅಣಕಿಸಿದುದುಂಟು. ಆಗಲಾದರೂ ಸರಕಾರಗಳನ್ನು ಬದಲಾಯಿಸುವ ಅಧಿಕಾರ, ಅವಕಾಶ ಜನಕ್ಕೆ ಇದೆಯಲ್ಲವೆ? ಜನ ವಹಿಸಿದ ಸ್ವಾತಂತ್ರ್ಯದಿಂದ ಇನ್ನೈದು ವರ್ಷಗಳ ವರೆಗೆ ಅವರು ಒಪ್ಪುವ ಪ್ರತಿನಿಧಿಗಳು ರಾಜಕಾರ್ಯವನ್ನು ನಿರ್ವಹಿಸುತ್ತಾರೆ. ಇವರ ಅಭಿಪ್ರಾಯಕ್ಕೆ ಸಮ್ಮತವಾಗಿ ನಡೆಯುತ್ತಾರೆ. ಹಾಗೆ ನೋಡಿದರೆ ಸಮಾಜದಲ್ಲಿ ಸಂಸಾರಗಳಲ್ಲಿ ಬದುಕಬೇಕಾಗಿರುವವರಿಗೆ, ಬೆಳೆಯಬೇಕಾಗಿರುವವರಿಗೆ ಎಷ್ಟು

ಸ್ವಾತಂತ್ರ್ಯವಿರುತ್ತದೆ? ಹಿಂದಿನ ಕೂಡುಕುಟುಂಬಗಳಲ್ಲಿ ಎಷ್ಟಿತ್ತು? ಚುನಾವಣೆಯ ಸಮಯದಲ್ಲಿ ಉಮೇದುವಾರರೂ ಮತದಾರರೂ ಹೇಗೇ ನಡೆದುಕೊಳ್ಳಲಿ, ಮತದಾರರಿಗೆ ವಿಶ್ವಾಸವಿರುತ್ತದೆ; ತಮಗೂ ತಮ್ಮ ವೋಟಿಗೂ ಬೆಲೆಯಿದೆ ಎಂದು. ತಮ್ಮ ಪ್ರಜಾತ್ವದಲ್ಲಿ ಅಭಿಮಾನ ಬರುತ್ತದೆ. ವೋಟು ಕೇಳಲು ಬರುವವರಿಗೆ ತಮ್ಮ ಮತ್ತು ತಮ್ಮ ಕಡೆಯವರ ಇಷ್ಟಾರ್ಥಗಳೂ ಪಕ್ಷಪಾತಗಳೂ ಇಂಥವು ಎಂದು ಹೇಳಿ ತಿಳಿಸಬಹುದು. ಅದರಂತೆ ನಡೆಯುತ್ತೇವೆ ಎಂಬುವರನ್ನು ಮಾತ್ರ ನಾವು ಆಯುತ್ತೇವೆ ಎನ್ನಬಹುದು. ಮಾಡದಿದ್ದರೆ ಇವರದು ತಪ್ಪು. ಟೀಕೆಯ ಅಧಿಕಾರ ಅಂಥವರಿಗೆ ಇರುವುದಿಲ್ಲ. ಆಗ ಉಮೇದುವಾರರು ತಾವು ಇಂಥಿಂಥವರನ್ನು ಮಾಡಲು ಹೀಗೆ ಹೀಗೆ ತೊಡಗುತ್ತೇವೆ ಎಂದು ಪ್ರಕಟನಗಳಲ್ಲಿ, ಭಾಷಣಗಳಲ್ಲಿ ಹೇಳಿ ರಾಜ್ಯದ ಅನೇಕ ಪ್ರಚಲಿತ ಸಂಗತಿಗಳನ್ನು ವಿಶದಪಡಿಸುತ್ತಾರಾಗಿ ಅವರಿಗೆ ಪ್ರಜೆಯಾಗಿ ಒಂದು ಮಾನ ಉಂಟು - ಆಮೇಲೆ ಅವರನ್ನು ಹೇಗೇ ಕಾಣಲಿ. ಪ್ರತಿನಿಧಿಗಳಾಗಿ ಶಾಸನ ಸಭೆಗಳಿಗೆ ಹೋಗುವವರು ಪಾರ್ಲಿಮೆಂಟಲ್ಲಿ ಸಭೆಯ ಅಧ್ಯಕ್ಷರ (ಸ್ಪೀಕರ್) ಅಂಕಿತಕ್ಕೆ ಮಾತ್ರ ಒಳಪಟ್ಟು ಬೇಕಾದ್ದನ್ನು ಬೇಕಾದಂತೆ ಮಾತಾಡಬಹುದು. ಹೊರಗಿನ ನ್ಯಾಯಶಾಲೆಗಳು ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವ ಹಾಗಿಲ್ಲ. ಶಾಸನ ಮಂಡಲಿಯನ್ನು ಹದ್ದುಮೀರಿ ಪತ್ರಿಕೆಗಳವರು ಕೂಡ ತೆಗಳುವ ಹಾಗಿಲ್ಲ. ಈ ನಡುವೆ ಧಾರಾಳವಾಗಿ ಇವರು ಸಂಘಗಳನ್ನು ಸ್ಥಾಪಿಸಿಕೊಳ್ಳಬಹುದು. ವೇದಿಕೆಗಳ ಮೇಲೆ ನಿಂತು ಚಾಲ್ತಿಯಲ್ಲಿ ರುವ ಪ್ರಬಲ ವಿಷಯಗಳನ್ನು ಕುರಿತು ಮಾತನಾಡಿ ಎಷ್ಟು ತೀವ್ರವಾಗಿಯಾಗಲಿ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಕ್ರಮಬದ್ಧ ರೀತಿಗಳಿಗೇ ಪ್ರತಿಭಟನೆ ಸಲ್ಲಿಸ ಬಹುದು. ಇವೆಲ್ಲ ಇವರನ್ನು ಆಯ್ದವರ ಗಮನಕ್ಕೆ ಬರುತ್ತದೆ. ಶಾಸನ ಸಭೆಗಳಲ್ಲಿ ಇಂಥಿಂಥ ಸಂಗತಿಗಳನ್ನು ಮಸೂದೆಗಳನ್ನು ಹೀಗೆ ಹೀಗೆ ಚರ್ಚೆಗೆ ಒಳಗು ಮಾಡಿ ಚರ್ಚೆ ಸಂಪೂರ್ಣವಾಗಿ ನಡೆದ ಮೇಲೆಯೇ ಸಭೆಯ ಅಭಿಮತಕ್ಕೆ - ವೋಟಿಗೆ - ಹಾಕಿ, ಬಹುಮತದ ನಿರ್ಣಯದಂತೆ ಶಾಸನಗಳೂ ರಾಜಕಾರ್ಯಗಳೂ ನಡೆಯಬೇಕು ಎಂದಿರುತ್ತದೆ.

### ಕಾನೂನಿನ ಅಧಿಕಾರ

ಒಂದು ಸಲ ಕಾನೂನಿಗಾಗಿ ಒಪ್ಪಿದುದಕ್ಕೆ ಎಲ್ಲರೂ ಬಾಗಿ ಅದು ಪುನಃ ಮಾರ್ಪಡುವವರೆಗೂ ಅದರಂತೆ ನಡೆದುಕೊಳ್ಳಲು ಬದ್ಧರು. ಚರ್ಚೆ, ಸಮ್ಮತಿ, ಬಹುಮತ ದೃಷ್ಟಿ, ಸ್ವಾತಂತ್ರ್ಯ ಇರುವುದರಿಂದ, ಶಾಸನ ಸಭೆಗಳಲ್ಲಿ ಅನೇಕ ಮರ್ಯಾದೆ ಗಳೂ ಕ್ರಿಯಾ ವಿಧಾನಗಳೂ ಲೋಪದೋಷಗಳ ಪರಿಶೀಲನವೂ ಇರುವುದರಿಂದ ರಾಜಕೀಯವಾಗಿ ಒಂದು ವಿದ್ಯಾಶಿಕ್ಷಣ ಬಹುಮಂದಿಗೆ ದೊರೆಯುತ್ತದೆ. ಭಾರತದ ಕೇಂದ್ರದಲ್ಲಿಯೂ ರಾಜ್ಯಗಳಲ್ಲಿಯೂ ಈ ರೀತಿ ರಾಜಕಾರ್ಯ ಪರಿಶೀಲನೆಯ ಅನುಭವ ಪಡೆದುಕೊಳ್ಳುವ ಅವಕಾಶವಿರುತ್ತದೆ. ಹೊರಗೆ ಶಾಲೆ ಕಾಲೇಜುಗಳಲ್ಲಿ, ಪಕ್ಷಗಳಲ್ಲಿ,



ಸಾರ್ವಜನಿಕ ಮಂಡಲಿಗಳಲ್ಲಿ, ವಿದ್ವಾಂಸರ ಬರವಣಿಗೆಯಲ್ಲಿ, ಬಗೆಬಗೆಯ ಮನಸ್ಸಿನ ಮತ್ತು ಪ್ರಯೋಜನ ದೃಷ್ಟಿಯುಳ್ಳ ವೃತ್ತಪತ್ರಿಕೆಗಳಿಂದ ನಿರ್ದಾಕ್ಷಿಣ್ಯ ಲೇಖನಗಳಲ್ಲಿ ಈ ಸ್ವಾತಂತ್ರ್ಯದ ಆವರಣ ಒಂದು ವಿಶೇಷ ಶಿಕ್ಷಣವನ್ನು ದೊರಕಿಸುತ್ತದೆಯಾಗಿ ಪ್ರಜಾಪ್ರತಿನಿಧಿತಂತ್ರ ಉಳಿದ ರಾಜತಂತ್ರಗಳಿಗಿಂತ ಮೇಲ್ಮಟ್ಟದ್ದೆಂಬ ಭಾವನೆ. ಅಥವಾ, ಒಮ್ಮೆ ಚರ್ಚ್‌ಹಿಲ್ ಎಂದಂತೆ : ಈ ಬಗೆಗೆ ಇತರ ಪದ್ಧತಿಗಳು ಇದಕ್ಕಿಂತ ಕೀಳು ಎಂಬ ಭಾವನೆ ನಮ್ಮ ದೇಶದಲ್ಲಿಯೂ ನೆಲಸಿದೆ. ಇದನ್ನು ಸರಿಯಾಗಿ ಬಳಸಿ ಕೊಳ್ಳುವೆವೆ, ಇಲ್ಲವೆ ಎಂಬುದು ನಮಗೆ ಸೇರಿದ್ದು. ಬದಲಾವಣೆ ಆಗಬಹುದು. ಆಗಬೇಕೆಂದಾಗ ಮಾಡಿಕೊಳ್ಳಬಹುದು. ಇದನ್ನು ಶಾಂತಿಯಲ್ಲಿ, ಸಾವಧಾನದಲ್ಲಿ, ಕ್ರಮಬದ್ಧವಾಗಿ ಮಾಡಬಹುದು ಎಂಬ ತತ್ವ ರಾಜ್ಯಾಂಗ ಶಾಸನದ ಸಾವಧಾನ ನಡವಳಿಕೆಯ ಮೂಲಕ ಏರ್ಪಟ್ಟಿರಬೇಕು. ಹಿಂಸೆ, ಕ್ರಾಂತಿ, ಬಲಪ್ರದರ್ಶನದಿಂದ, ಕೊಲೆ ಮತ್ತು ನಾಶ ಪ್ರಕರಣಗಳ ಮೂಲಕವಾಗಿ ಸಾಧಿಸುತ್ತೇವೆಂಬ ಮಾರ್ಗ ಯಾವ ಕಾಲಕ್ಕೂ ಯಾವ ನಾಡಿಗೂ ಹಿತಕರವಲ್ಲ. ಇವೊತ್ತು ಇವರು ಹೀಗೆ ಮಾಡಿದುದನ್ನು ಇನ್ನೊಂದು ವರ್ಷದಲ್ಲಿ ವಿರುದ್ಧ ಮನಸ್ಸಿನವರು ಇವರಿಗೂ ಹೀಗೇ ಮಾಡುತ್ತಾರಲ್ಲವೆ? ದೇಶದಲ್ಲಿ ಅರಾಜಕತೆಯ ಪ್ರವೃತ್ತಿಯನ್ನು ಬೆಳಸಿ ದೊಡ್ಡದಾದ ಏನನ್ನೂ ಸಾಧಿಸಲಾಗದು. ಈ ಎರಡು ಪ್ರವೃತ್ತಿಗಳೂ ಈ 4-5 ವರ್ಷಗಳಿಂದ ನಾಡಿನಲ್ಲಿ ಬೆಳೆಯುತ್ತಿರುವಾಗ, ಈ ಎರಡು ವರ್ಷಗಳಲ್ಲಿ ಕೆಲವು ರಾಜ್ಯಗಳಲ್ಲಿ ಉಚ್ಛೃಂಖಲ ಮಾತು, ನಡತೆ, ವೃತ್ತಿಗಳಿಗೆ ಎಡೆಕೊಟ್ಟಿವೆ. ಅದರಿಂದಾಗಿ ಇಲ್ಲಿನ ಗುಣಮೌಲ್ಯಗಳನ್ನು ನಾಡು ಪರ್ಯಾಲೋಚಿಸ ಬೇಕಿದೆ. ಯಾವುದು ನಷ್ಟವಾದರೂ ದೇಶಕ್ಕೆ ನಷ್ಟ. ವಸ್ತುನಾಶಕ್ಕೆ, ಜೀವನಾಶಕ್ಕೆ ಎಲ್ಲರೂ ಹಿಮ್ಮೆಟ್ಟಬೇಕು. ಲಕ್ಷಾಂತರ ಮಂದಿ ವರ್ಷಕ್ಕೆ 40-50 ದಿನ ಕೆಲಸ ಬಿಟ್ಟು ಉತ್ಪತ್ತಿಯಂತ್ರಗಳನ್ನು ನಿಲ್ಲಿಸಿ ಉತ್ಪತ್ತಿ ಮಾಡದಾದರೆ ಉದ್ಯೋಗ ಹೇಗೆ ನಡೆದೀತು? ಉದ್ಯೋಗ, ಕೆಲಸಗಾರಿಕೆ ಕಟ್ಟೀತು ಹೇಗೆ? ಉತ್ಪತ್ತಿ ನಡೆಯದೆ ವರಮಾನ ಎಲ್ಲಿ? ನಿರುದ್ಯೋಗಿಗಳಿಗೆ ಹೊಸ ಕೆಲಸಗಳು ಒದಗುವುದು ಹೇಗೆ? ಕೆಲಸವನ್ನು ತಡೆವ, ಪೀಡಿಸುವ, ನಾಶಗೊಳಿಸುವ, ನಷ್ಟ ಉಂಟುಮಾಡುವ ಕ್ರಿಯೆಗಳಿಂದ ಯಾವ ಪ್ರಯೋಜನವೂ-ವ್ಯಕ್ತಿಗಾಗಲಿ ಸಮಾಜಕ್ಕಾಗಲಿ ಇಲ್ಲ. ಈ ಪದ್ಧತಿಯಲ್ಲಿ ಮಿತಿಗಳಲ್ಲಿ ಅವಕಾಶಗಳಾಗಿ ರಾಜಕೀಯ ಜೀವನವನ್ನು ನಡಸುತ್ತ ಇದರಿಂದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರಗತಿಯನ್ನು ಸಾಧಿಸುವುದು ಒಳ್ಳೆಯದೆಂದು ಯಾರಿಗಾದರೂ ಗೊತ್ತಾದೀತು. ದಮ, ಸಹನೆ, ಸೌಹಾರ್ದ, ಕೊಟ್ಟು ತೆಗೆದುಕೊಳ್ಳುವ ಮನಸ್ಸು, ಒಪ್ಪಿಕೆ ಯಾಗದಿದ್ದಾಗ ಸ್ಪಷ್ಟವಾಗಿ ಒಪ್ಪಿಕೆಯಾಗಲಿಲ್ಲವೆಂದು ಹೇಳಿ ಮಾತನ್ನು ಅಲ್ಲಿಗೆ ಆ ಕ್ಷಣಕ್ಕೆ ಮುಗಿಸುವ - agree to differ - ರಾಜಿ ಮಧ್ಯಸ್ಥಿಕೆಯ ಮನಸ್ಸು ನಿಜವಾಗಿ ಮನಸ್ಸಿಗೆ ದೊರೆವ ದೊಡ್ಡ ಸಂಸ್ಕಾರ. ಬೇಗ ನಡೆವ ಇನ್ನೊಬ್ಬರ ಮನಸ್ಸನ್ನು ಬಲಾತ್ಕಾರದಿಂದ ತನ್ನ ಕಡೆಗೆ ತಿರಿಚುವ ವಿಧಾನ ದೀರ್ಘಕಾಲದ ಹಿತದೃಷ್ಟಿಯಿಂದ ಕಾರ್ಯಕಾರಿಯಾಗ ಲಾರದು ಎಂಬ ಭಾವನೆ ಇಲ್ಲಿ ಮುಖ್ಯ. ಇವೊತ್ತು ನಮ್ಮಲ್ಲಿನ ಪಕ್ಷಗಳವರ ಮನಸ್ಸಿನ

ಕ್ರಿಯಾವಿಧಾನಗಳನ್ನೂ ಮಾತಿನ ಉರುಬನ್ನೂ ಮೌಲ್ಯಗಳನ್ನೂ ಈ ವಿವೇಚನೆ ನಡಸಬೇಕು. ಯಾವುವು ನಡಸುತ್ತವೆಂಬುದು ನಾಳೆಯ ಜೀವನದ ಮೇಲೆ ಗುರುತರ ಪರಿಣಾಮಗಳನ್ನು ಉಂಟುಮಾಡುತ್ತವೆ. ಆಳುವವರಿಗೆ ಇಂಥಲ್ಲಿ ಒಂದು ಲೌಕಿಕ ಮಿತಿ ಇರುತ್ತದೆ. "The worst of despots want one disloyal citizen to keep him sane" ಎಂದರು ಷಾ. ಅಂಥವರಿದ್ದಾರೆ ಎಂಬುದು ಈ ತಂತ್ರದಲ್ಲಿ ಮಾತ್ರ ಶಕ್ಯ.

## ಚಾಲ್ತಿ ಪ್ರಭಾವಗಳು

ಈ ವಿಚಾರಗಳು ಯಾವುವೂ ಹೊಸವಲ್ಲ. ಯಾರಿಗೂ ತಿಳಿಯವು ಎಂದಲ್ಲ. ಆದರೆ ಜನದ ನಡವಳಿಕೆಯಲ್ಲಿ ಇವುಗಳ ಕಲ್ಪನೆ ಅನೇಕ ವೇಳೆ ಸ್ಪಷ್ಟವಾಗಿ ಇರದು. ಇದ್ದರೂ ಕಾರ್ಯಮಾಡದು. ಲೋಕಜೀವನದಲ್ಲಿ ಕಾರ್ಯಕಾರಿಯಾಗಿರುವ ಪ್ರಭಾವಗಳು ಅಜ್ಞಾನ, ರಾಗ ದ್ವೇಷ, ಪ್ರಯೋಜನಾಭಿಲಾಷೆ - ಈ ಮೂರು ಎಂದು ಕೇನ್ಸ್ ಒಂದು ಸಲ ಹೇಳಿದರು. ಕೇನ್ಸ್ ಏನು? ಪ್ರಪಂಚ ಹುಟ್ಟಿದಾಗಿನಿಂದ ಎಲ್ಲಿಯೂ ಇದನ್ನು ಹೇಳುತ್ತಲೇ ಇದ್ದಾರೆ. ಅರ್ಥಶಾಸ್ತ್ರಜ್ಞರು ಇದನ್ನು ಹೇಳುವುದು ಹೆಚ್ಚು. ಇಂದಿನ ಪರಿಸ್ಥಿತಿಯಲ್ಲಿ ಇವಕ್ಕೆ ಒಂದು ಹೆಚ್ಚಿನ ಪ್ರಭಾವ ಬಂದಿದೆ. ಈವರೆಗೂ ಎಲ್ಲ ದೇಶಗಳ ನೀತಿಯ ಅಡಿಯಲ್ಲಿ ಮತಧರ್ಮ ಇರುತ್ತಿತ್ತು. ಅದಕ್ಕೆ ಆಶ್ರಯ ಪರ ಮತ್ತು ದೇವರು ಎಂಬ ಕಲ್ಪನೆ. ಇಂದು ಆ ಕಲ್ಪನೆ ಸಡಿಲವಾಗಿದೆ. ಹೇಳಿ ಕೇಳಿ ಭಾರತದ ವ್ಯವಹಾರಜೀವನ ಯಾವ ಒಂದು ಧರ್ಮದ ಕಟ್ಟಿಗೂ ಕಟ್ಟಿಬೀಳದ ಲೌಕಿಕ ದೃಷ್ಟಿ ಉಳ್ಳದ್ದು. ಆ ದೃಷ್ಟಿಯನ್ನು ಅಪಾರ್ಥ ಮಾಡುವವರುಂಟು. ರಾಜಕೀಯ ವ್ಯವಹಾರದಲ್ಲಿ ಜನ ಯಾವ ವರ್ಗದವರೂ ತಮ್ಮ ಧರ್ಮ, ಮತಾಚಾರಗಳನ್ನು ಬಿಟ್ಟಿದ್ದಾರೆಂದಾಗಲಿ ಬಿಡಬೇಕೆಂದಾಗಲಿ ಅಲ್ಲ. ಯಾರೂ ತಮ್ಮ ವಿಶ್ವಾಸಕ್ಕೆ ತಕ್ಕ ಯಾವ ಮತಪಂಥವನ್ನೂ ಹಿಡಿಯಬಹುದು. ಮತದ ಸಾಧನೆ ವ್ಯಕ್ತಿಶವಾಗಿ ಒಂದು ಜೀವನಕ್ಕೊ ಒಂದು ಮನೆತನಕ್ಕೊ ಒಂದು ಜನವರ್ಗಕ್ಕೊ ಖಾಸಗಿಯಾಗಿ ಒಳಪಟ್ಟ ವಿಷಯ. ಅದಕ್ಕೆ ಸರ್ಕಾರದ ಅಡ್ಡಿಯಿಲ್ಲ. ಎಲ್ಲ ಮತಗಳನ್ನು ಕುರಿತೂ ನಮ್ಮ ಸರ್ಕಾರಕ್ಕೆ ಸಮ್ಮತಿ ಇದೆ; ಸರ್ಕಾರ ಮಾತ್ರ ತಾನು ಯಾವ ಮತಕ್ಕೂ ಪಕ್ಷಪಾತ ತೋರಿಸುವುದಿಲ್ಲ; ಅದು ತನ್ನದೆಂದು ಯಾವ ಮತಧರ್ಮವನ್ನೂ ಆರಿಸಿಕೊಂಡಿಲ್ಲ ಎಂಬುದು. ಅನೇಕ ದೇಶಗಳಲ್ಲಿ ಕ್ರೈಸ್ತ ಪಂಥವೊ, ಬೌದ್ಧ ಪಂಥವೊ, ಯೆಹೂದಿ ಪಂಥವೊ, ಇಸ್ಲಾಂ ಪಂಥವೊ ರಾಜ್ಯದ ಮತಗಳು. ಆ ಮತಗಳಿಗೆ ಸೇರದವರು ರಾಜರಾಗಿ, ಅಧ್ಯಕ್ಷರಾಗಿ ಸಲ್ಲರು. ನಮ್ಮಲ್ಲಿ ಅಂಥ ನಿರ್ಬಂಧವಾವುದೂ ಇಲ್ಲ. ಎಲ್ಲರಿಗೂ ಸಮಭಾವನೆ ಇಲ್ಲಿನ ತತ್ವವಾಗಿದೆಯೇ ಹೊರತು ಇದು ದೇವರನ್ನು ಬಿಟ್ಟದ್ದು, ದೈವ ಭಾವನೆಗೆ ವಿರುದ್ಧವಾದ್ದು ಎಂಬುದಲ್ಲ. ಕೆಲವು ವರ್ಗಗಳವರ ಪ್ರಚಾರ ಮಾತ್ರ ಆ ರೀತಿ ನಡೆಯುತ್ತಿದೆ. ಆ ಮೂಲಕ ಪಕ್ಷ ಪ್ರಯೋಜನ ಸಾಧನೆ ಮಾಡುವುದೂ ಕ್ರೋಧವನ್ನೂ ವಿರೋಧವನ್ನೂ ಬೆಳಸುವುದೂ ಕೆಲವರಲ್ಲಿ ಕಾಣುತ್ತಿದೆ. ಇದು ಅನ್ಯಾಯ. ಸತ್ಯವಲ್ಲದ್ದನ್ನು ಸತ್ಯವೆನ್ನುವುದು,



ಸತ್ಯವಾದುದನ್ನು ಅಲ್ಲವೆನ್ನುವುದು ಎರಡೂ ಘೋಷಣೆಗಳಾದಾಗ ಸತ್ಯಕ್ಕೆ ಚ್ಯುತಿ ಉಂಟುಮಾಡಿದಂತಾಗುತ್ತದೆ. ಪರಿಸ್ಥಿತಿಯಲ್ಲಿರುವ ಈ ಅಂಶವು ಗುಣದೆಣಿಕೆಗೆ, ಬೆಲೆಯೆಣಿಕೆಗೆ ಒದಗುತ್ತಿರುವುದರಿಂದ ಈ ಮಾತನ್ನು ಹೇಳಬೇಕಾಯಿತು. ಪ್ರಚಾರ ಅಪಪ್ರಚಾರಗಳು ನಿಜವಾದ ಮೌಲ್ಯಗಳನ್ನು ಘಾತಿಸುತ್ತವೆ.

## ಮೌಲ್ಯಗಳ ತಿಕ್ಕಾಟ; ಕೆಲವು ಮಾತುಗಳು

ಮೌಲ್ಯಗಳೆಂಬ ಅನೇಕ ಎಣಿಕೆಗಳು ಜನರ ಭಕ್ತಿಯನ್ನೂ ವಿಶ್ವಾಸವನ್ನೂ ಬೇಡುತ್ತಿವೆ. ಇಲ್ಲಿ ಅಂಥ ಅನೇಕಕ್ಕೆ ತಿಕ್ಕಾಟ ಹುಟ್ಟಿಕೊಂಡು ಒಂದು ಗೊಂದಲದಂತಹ ಸ್ಥಿತಿ ಕವಿದಿದೆ. ಲೋಕದ ಮೇಲೆಲ್ಲ ಇವೊತ್ತು ಇದೇ ಪರಿಸ್ಥಿತಿ. ದಿಕ್ಕೆಟ್ಟ ಹಾಗೆ ಆಗಿ ಸ್ವೀಕಾರ್ಯ ಮೌಲ್ಯಗಳೇ ಇಲ್ಲವೆಂಬಂತೆ ಬುದ್ಧಿವಂತರೆನಿಸಿಕೊಂಡವರ ನಡತೆ ಕೂಡ ವಿಚಿತ್ರವಾಗುತ್ತಿದೆ. ಲೋಕದ ಸಂಗತಿಗಳಲ್ಲಿ ಅರ್ಥವಿಲ್ಲ, ಸಮಂಜಸಿಕೆ ಇಲ್ಲ ಎಂದರೆ ಎಲ್ಲವನ್ನೂ ಯಾರು ಅರ್ಥ ಮಾಡಿಕೊಂಡಿರುವವರು ಎಂಬ ಪ್ರಶ್ನೆ ಏಳುತ್ತದೆ. ದೇವರು ಎಂಬ ತತ್ವವನ್ನು ಒಪ್ಪಿಕೊಂಡರೆ ಅವನ ಇಚ್ಛೆ ಎಂದು ಎಲ್ಲಕ್ಕೂ ಸಮಜಾಯಿಷಿ ಹೇಳಬಹುದುದಾಗಿತ್ತು. ಅಂಥ ಒಂದು ಸರ್ವವ್ಯಾಪ್ತಿಯ ಅಧಿಮಾನವ, ಆಧ್ಯಾತ್ಮಿಕ ತತ್ವವನ್ನು ಒಪ್ಪದಿದ್ದರೆ ಈ ಎಲ್ಲ ಕ್ಲೇಶ ಅತಂತ್ರ ಉಂಟಾಗುತ್ತದೆ. ಅರಿಯಲು ಇವರೇನು ಯತ್ನ ಮಾಡುತ್ತಿದ್ದಾರೆ? ಎಲ್ಲಿಯೂ ಸಾಂಗತ್ಯ ಸಾಮಂಜಸ್ಯ ಇಲ್ಲ. Absurd ಎಂಬುದು ಒಂದು ಪಂಥವಾಗಿ, ತತ್ವವಾಗಿ ಕಲೆಯಲ್ಲಿ, ಸಾಹಿತ್ಯದಲ್ಲಿ ಪ್ರಬಲಿಸುತ್ತಿದೆ. ಮನಸ್ಸು, ಬುದ್ಧಿ ಎಂಬವಕ್ಕೆ ಹದದ ನೆಲಸು ಒಂದುಂಟು ಎಂಬ ಭಾವಕ್ಕಿಂತ ಹೆಚ್ಚಾಗಿ ಜನ ನಡೆಯುವುದು ನೇರವಾಗಿ ಒಂದು ಮಟ್ಟದ ಪ್ರಜ್ಞೆಯಿಂದಲ್ಲ; ಎಷ್ಟೋ ಬಗೆಯ, ಸ್ತರದ ಪ್ರಜ್ಞೆಗಳ ನೆಲಸಲ್ಲಿ, ಪ್ರಚೋದನ ಆಕಾಂಕ್ಷೆಗಳಲ್ಲಿ, ಉಪಪ್ರಜ್ಞೆ ಅಪಪ್ರಜ್ಞೆಗಳಲ್ಲಿ ಎನ್ನುತ್ತಾರೆ. ಇದು ಹಲವೇಳೆ ಒಣಮಾತು, ಅಬ್ಬರದ ಮಾತು ಮಾತ್ರ. ಆಡುವ ಮಾತಿನಲ್ಲಿ, ಮಾಡುವ ಕೆಲಸದಲ್ಲಿ ಗೊತ್ತುಗುರಿಗಳನ್ನು ಕಾಣುವ ಹಾಗಿಲ್ಲ. ಅಥವಾ ಮಾಡುವ ಕೆಲಸದಿಂದಲೇ ಚರ್ಯೆ ಚೇಷ್ಟೆ ವಿಕಾರಗಳಿಂದಲೇ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಪ್ರಮಾಣವಾವುದು? ರುಗ್ಣ ಸ್ಥಿತಿಯಲ್ಲಿರುವ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುವಾಗ ಚಿಕಿತ್ಸಾಲಯಗಳಲ್ಲಿ ಕಂಡುಕೊಳ್ಳುವ ಹಾಗೆ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹಾಗೆಯೇ Alienation ಎಂಬ ಮಾತು ಹುಟ್ಟಿಕೊಂಡು ನಡೆಯುತ್ತಿರುವ ಎಲ್ಲ ಪದ್ಧತಿ ಸಂಸ್ಥೆ ಸಂಪ್ರದಾಯಗಳಿಂದಲೂ ಕಲೆಗಾರರ, ಮೇಧಾವಿಗಳ ಮನಸ್ಸು ವಿಮುಖಗೊಂಡಿದೆ. ಅವುಗಳಿಂದ ಹೊರಬೀಳಲು ಬಯಸುತ್ತಿದೆ ; ಇಂಥವು ಅನೇಕವಾಗಿ ಹಿಂಸಾವಾದ, ನಗ್ನತಾ-(ದಿಗಂಬರ)-ವಾದ, ಕಾತರತೆಗಳ (Anxiety) ಪ್ರಕಾಶನ, ಕಳವಳ (Angst) ಮುಂತಾದ ಭಾವಗಳು ಉಲ್ಬಣವಾಗುತ್ತಿವೆ. ನವ್ಯ, Avant garde ಎಂಬ ಪಂಥಗಳಲ್ಲಿ ನೂರಾರು ಪ್ರಕಾರಗಳು ಯೂರೋಪಲ್ಲಿ ಅಮೇರಿಕದಲ್ಲಿ, 1900 ರಿಂದ ಈಚೆಗೆ ಎರಡನೆಯ ಮಹಾಯುದ್ಧ

ವಾದ ಮೇಲೆ ವಿಶೇಷವಾಗಿ, ವಿಪರೀತಗಳಿಗೆ ಬೆಳೆದಿವೆ. ಬಗೆಬಗೆಯ ಬುದ್ಧಿಭ್ರಮಣೆ, ಆವೇಶ ಅಥವಾ ಉತ್ಥಾನ ಭಾವವನ್ನೂ ಮರೆವುಗಳನ್ನೂ ತರುವುವೆನ್ನುವ ಮಸ್ಕಲಿನ್, ಎಲ್.ಎಸ್.ಡಿ., ಹೆರಾಯಿನ್ ಮುಂತಾದ ದ್ರವ್ಯಗಳನ್ನು ಸೇವಿಸಿ ಬುದ್ಧಿವಂತರೆನ್ನ ಬಹುದಾದ ಜನ ಕೂಡ ಮನೋವಿಕಾರಗಳನ್ನು ಬರಿಸಿಕೊಳ್ಳುತ್ತಿದ್ದಾರೆ. ಈ ಹೊರಗಿನವರು ಆಡುತ್ತಿರುವ ಮಾತುಗಳು ಕಚ್ಚಾ ಆಮದು. ಅವೂ ದಿಕ್ಕೆಟ್ಟವರದು. ಶುದ್ಧಿ ಮಾಡದ ಜಾಪಾಳ ಹೇಗೆ ದೇಹಕ್ಕೆ ಕೆಡುಕು ಮಾಡಬಹುದೊ ಹಾಗಾಗುತ್ತಿದೆ ಇತರರಿಗೆ ಇವುಗಳ ಸೇವನೆ. ಯಾವುದು ಸಭ್ಯವಲ್ಲ, ಯೋಗ್ಯವಲ್ಲ, ಮಾಡದಿದ್ದರೆ ಮೇಲು ಎಂದು ಜನ ಈವರೆಗೆ ನಂಬುತ್ತಿತ್ತೋ ಅಂಥ ಅವ್ಯವಹಾರ, ಅವುಗಳ ಪರವಾಗಿ ಸಹಿಷ್ಣುತೆ ಬಲಿಯುತ್ತಿರುವುದು ನಮ್ಮ ದೌರ್ಭಾಗ್ಯ. ಗಂಡು ಹೆಣ್ಣಿನ ಸಂಬಂಧದಲ್ಲಿಯಂತೂ ಯಾವ ಕಟ್ಟುನಿಟ್ಟೂ ಇರಬೇಕಿಲ್ಲವಂತೆ. ಯಾರೆಂದರೆ ಅವರೊಡನೆ ಸಂಗ ಸಹಜ, ಸರಿ ಎಂಬಂತೆ ಪ್ರಚಾರ ನಡೆಯುತ್ತಿದೆ. ಲಿಂಗ ವ್ಯವಹಾರದಲ್ಲಿ ಸರ್ಕಾರದ ವಿಚಾರಣಾ ಮಂಡಲಿಗಳು ಏರ್ಪಟ್ಟು ಇಂಥ ಸಂಗತಿಗಳನ್ನು ವಿದೇಶಗಳು ಪರಿಶೀಲಿಸಿವೆ, ಅವಕಾಶ ಕೊಟ್ಟಿವೆ. ಹೊರಗೆ ಏನು ನಡೆದರೆ ತಕ್ಷಣದಲ್ಲಿ ಅದು ಇಲ್ಲಿಗೆ ಬರುತ್ತದೆ. ನ್ಯೂಯಾರ್ಕ್, ಪ್ಯಾರಿಸ್, ಲಂಡನ್‌ಗಳಲ್ಲಿ ಯಾರಿಗಾದರೂ ನೆಗಡಿ ಹಿಡಿದರೆ ಬೊಂಬಾಯಿ, ಡೆಲ್ಲಿ, ಬೆಂಗಳೂರುಗಳಲ್ಲಿ ಯಾರಿಗೊ ಸೀನು ಹಿಡಿದುಕೊಳ್ಳುತ್ತದೆ ಎಂಬಂತಹ ಮಾತುಗಳನ್ನು ಕುಚೋದ್ಯವಾಗಿ ಆಡುವುದುಂಟು. ಕುಚೋದ್ಯವೂ ಒಂದು Fact. ಇದರ ಸತ್ಯಾಸತ್ಯತೆ ಹೇಗೇ ಇರಲಿ, ಪರಿಸ್ಥಿತಿಯನ್ನು ಪರಿಶೀಲಿಸುವಾಗ ಇಂಥವನ್ನೂ ಗಮನಕ್ಕೆ ತಂದುಕೊಳ್ಳಬೇಕು. ಅಂಡಮಾನ್ ದ್ವೀಪದಲ್ಲಿ ಮೋಡಗಳ ಭಾರರಚನೆಯ ಗತಿಗಳನ್ನು ಅನುಸರಿಸಿ ನಮಗೆ ಮಳೆ, ಜಡಿ ಹಿಡಿಯುವುದಿಲ್ಲವೇ ಹಾಗೆ.

## ನಮ್ಮ ವಿಶದತೆ

ಇಂಥ ಸನ್ನಿವೇಶದಲ್ಲಿ ನಮ್ಮ ಮನಸ್ಸನ್ನು ವಿಶದವಾಗಿ ಇಟ್ಟುಕೊಳ್ಳಬೇಡವೆ? ಎಂಬುದನ್ನು ತಿಳಿಸಲು ಮಾತ್ರ ಈ ಯತ್ನ. ಒಂದೆರಡು ಕಡೆ ಹೇಳಿರುವ ಸಂಗತಿಗಳೂ ವಿವರಣೆಗಳೂ ಜನ ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವ ಮುಂಚೆ, ವ್ಯಕ್ತಪಡಿಸುವ ಮುಂಚೆ, ನಾಯಕರೆಂಬವರ ನುಡಿಗಳ ಹಿಂದೆ, ಜನ ವರ್ಗದ ನಡವಳಿಕೆಯ ಹಿಂದೆ ಎಂತೆಂತಹ ಅಸಾಂಗತ್ಯ, ಅಪಕ್ವತೆ ಇರಬಲ್ಲವು ಎಂಬುದನ್ನು ಸೂಚಿಸುವುದಕ್ಕೆ ಮಾತ್ರ. ನಮ್ಮ ಆಲೋಚನೆಗಳಲ್ಲಿ ಒಂದು ಸುಸಾಂಗತ್ಯ, ಹೊಸತನ, ಮೊನೆ ಹೋಗಿವೆ; ನಿಚ್ಚಳವಾದ, ನಿರಂತರವಾದ ಎಚ್ಚರವಿಲ್ಲದೆ ನಿತ್ಯ ಹೊಸತನ ಬಾರದು, ಊರದು. ಸುಮಾರು 1920 ರವರೆಗೂ ನಾವು ಪ್ರಾಚೀನಕಾಲದ ಮತ್ತು ಮಧ್ಯಯುಗದ ಬೆಲೆಗಳನ್ನೇ ಮತವಿಚಾರಗಳಲ್ಲಿ, ಸಮಾಜ ಜೀವನದಲ್ಲಿ, ರಾಜಕೀಯ ವ್ಯವಸ್ಥೆಗಳಲ್ಲಿ ನಡಸಿಕೊಂಡು ಬಂದೆವು. ಇವೊತ್ತಿನ ಮಾತುಕತೆ ನೋಡಿದರೆ ಅನೇಕರಿಗೆ ಹಿಂದಿನ ವಿಧಾನಕ್ಕೆ ಹೋಗುವುದೇ ಮೇಲು ಎನ್ನಿಸುತ್ತದೆ. ಆದರೆ ಅದು ಶಕ್ಯವಾಗುವುದೆಂದು ಹೇಗೆ ಎಣಿಸುತ್ತಾರೊ ತಿಳಿಯದು. ಬಯಲು ಸೀಮೆಗೆ ಕಾಶಿಯವರೆಗೆ ಇಳಿದ ಗಂಗೆ ಪುನಃ ಋಷಿಕೇಶಕ್ಕೆ, ಬದರಿಯಲ್ಲಿ ಅಲಕನಂದಾ ಮಂದಾಕಿನಿಗೆ ಏರಬೇಕೆಂದರೆ ಶಕ್ಯವೆ? ನಾವು ಪ್ರಜಾಸತ್ತಾತ್ಮಕವಾದ ಜೀವನಕ್ಕೆ ತಕ್ಕವರಲ್ಲ; ನಮಗೆ ಈ ವಿಧಾನ ಹೊಂದದು; ಅದರ ಸಂಸ್ಥೆಗಳೂ ಕ್ರಿಯಾ ರೀತಿಗಳೂ ನಮ್ಮ ಜೀವನ ರೀತಿಗೆ ಒಪ್ಪವು- ಎಂದು ಮತದಾನ ಪದ್ಧತಿ, ಸರ್ವಸಮತಾ ಘೋಷಣೆ, ಪ್ರತಿನಿಧಿ ಪದ್ಧತಿ, ಪಾರ್ಲಿಮೆಂಟರಿ ಪದ್ಧತಿ ಎಲ್ಲವನ್ನೂ ಅನೇಕರು ಹಳಿಯುತ್ತಿದ್ದಾರೆ. ಇನ್ನು ಕೆಲವರು ಸೈನ್ಯದ ಅಧಿಕಾರಕ್ಕೆ ನಾಲ್ಕು ದಿನ ರಾಜ್ಯವನ್ನು ಒಪ್ಪಿಸಿದರಾದೀತು ಎಂಬ ಪ್ರಾಮಾಣಿಕ ಅಭಿಪ್ರಾಯ ಉಳ್ಳವರು. ಸ್ವಾತಂತ್ರ್ಯ ಸಾಲದು ಎಂದು ಒಂದು ಕಡೆ ಜನ ಹೇಳುತ್ತಿದ್ದರೆ ಸ್ವಾತಂತ್ರ್ಯ ಹೆಚ್ಚಾಯಿತು, ಸರ್ಕಾರವನ್ನು ಕಂಡರೆ ಯಾರಿಗೂ ಭಯವಿಲ್ಲ, ಅದಕ್ಕೆ ಅದಬ್ ಸಾಲದು, ಆದುದರಿಂದ ನಡವಳಿಕೆ ಜಾಳಾಗುತ್ತಿದೆ ಎಂಬ ಅಭಿಪ್ರಾಯ ಉಳ್ಳವರು ಇದ್ದಾರೆ. ಅನೇಕರಿಗೆ ಈ ಸ್ವಾಧೀನತೆಯ ಪರಿಸ್ಥಿತಿಗಿಂತ ಬ್ರಿಟಿಷರ ಕಾಲವೇ ಮೇಲೆನ್ನಿಸುತ್ತಿದೆಯಂತೆ. ಇನ್ನಷ್ಟು ದಿನ ಇದು ಹೀಗೇ ನಡೆದರೆ ರಷ್ಯನರೊ ಅಮೇರಿಕನ್ನರೊ ಪಾಕಿಸ್ತಾನದವರೊ ಇದನ್ನು ನುಂಗಿಬಿಡುತ್ತಾರೆ ಎಂಬ ಭಾವನೆಯವರು ಇನ್ನಷ್ಟು ಮಂದಿ. ಇದು ತಮ್ಮದೇ ದೇಶ, ತಮ್ಮ ಸ್ಥಿತಿಯನ್ನು ಕುರಿತು ತಾವು ಬೇಜವಾಬ್ದಾರಿಯಿಂದ ನುಡಿಯುತ್ತಿದ್ದೇವೆ, ನಡೆಯುತ್ತಿದ್ದೇವೆ ಎಂದರಿಯರು; ತಮಗೆ ಇದರ ಪರವಾಗಿ ಯಾವ ಕರ್ತವ್ಯವೂ ಕಾರ್ಯವೂ ಇಲ್ಲ ಎಂಬಂತೆ ಕಾಣುತ್ತದೆ ಈ ಮಾತು-ನಡತೆ. ದೇಶ ಬೇರೆ ಯಾರದೊ ; ತಮ್ಮದಲ್ಲ ಎಂಬಂತೆ. ಇವೆಲ್ಲ ಸತ್ಯವೆಂದು ಪ್ರಾಮಾಣಿಕವೆಂದು ಅವರು ನಂಬಿರುವ ಸಂಗತಿಗಳು. ತಾವು ಸೂಚಿಸುವ ದಾರಿಗಳು ಯುಕ್ತವಾದವು ಎಂದು ನೆಚ್ಚಿ ಘೋಷಿಸುತ್ತಾರೆ. ಮಾವೊತ್ಸೆ ತುಂಗ್ ಹೇಳಿದನು: 'ಎಲ್ಲ ಸ್ವಾತಂತ್ರ್ಯವೂ ಏಳಿಗೆಯೂ ಕೋವಿಯ ಕೊಳವಿಯಲ್ಲಿ ಹುಟ್ಟುತ್ತದೆ' ಎಂದು. ಅವನ್ನು ಪ್ರಚಾರ ಮಾಡಲು ಇರುವ ಎಲ್ಲವನ್ನೂ ಸುಟ್ಟು ಅರಾಜಕಕ್ಕೆ ಎಳೆಯಲು ಕೆಲವು ಪಕ್ಷಗಳು ಪ್ರಚೋದಿಸುತ್ತವೆ. ಅವನು ಹೇಳಿದ್ದಕ್ಕೆ ಕಿವಿಕೊಡುವ ಮಾರ್ಗವೇ ಹೊರತು ಆ ಮಾತು ಸತ್ಯವೆಂಬ ಕಾರಣದಿಂದಲ್ಲ. ಇತರರು ಹೇಳಿದ್ದನ್ನು ಕೇಳುವ ಮನಸ್ಸೇ ಹೊರತು ಅದರ ಸತ್ಯಾಸತ್ಯತೆ ಎಷ್ಟು ಎಂದು ವಿಚಾರಿಸುವ ಗೊಡವೆ ಯಾರಿಗೆ?

## ದೃಷ್ಟಿ-ನಿರ್ದೇಶನ

ಒಂದು ನಿಯತಿಯಲ್ಲಿ ಜೀವನವನ್ನು ನಡಸುತ್ತಿದ್ದ ಪ್ರಭಾವಗಳೆಲ್ಲ ಈಗ ಮಾಯವಾಗಿವೆ. ಅವಕ್ಕೆ ಭಕ್ತಿ, ಪ್ರೀತಿ, ವಿಶ್ವಾಸ ಇಲ್ಲ. ಕೆಲವರು ಬಾಯಿ ಮಾತಲ್ಲಿ ಹಿಂದಿನ ಕಾಲದ ಹಳ್ಳಿಗಳಂತಹ ಹಳ್ಳಿಗಳಿಗೂ (ಅವನ್ನು ಈಗ ಎಲ್ಲಿಂದ ತರೋಣ! ಹೋಗಿ ನೋಡಿ ಗೊತ್ತಾಗುತ್ತದೆ!) ಹೋಗಿ ವಾಸ ಮಾಡೋಣ; ಆಧುನಿಕ ಯಂತ್ರೋದ್ಯೋಗಕ್ಕಾಗಲಿ, ಪಟ್ಟಣಗಳ ಕೃತಕ ಜೀವನಕ್ಕಾಗಲಿ ಸೋಲುವುದು ಬೇಡ; ಸ್ವಸಂಪೂರ್ಣವಾಗಿ ಇನ್ನೊಬ್ಬರ ಸಂಕ್ರಮಣ, ಸಂಪರ್ಕ ಇಲ್ಲದೆ ಬದುಕೋಣ ಎನ್ನುತ್ತಾರೆ.

ಹೊಸಕಾಲದ ವಿಜ್ಞಾನ ಯಂತ್ರವಿದ್ಯೆ, ದೈತ್ಯಕಾರ್ಖಾನೆಗಳ ಜೀವನ ವ್ಯವಸ್ಥೆ ಇವುಗಳಿಗೆ ಮನಸು ತೆರಬೇಕೊ, ಗ್ರಾಮಾಂತರಗಳಲ್ಲಿ ನೆಮ್ಮದಿಯಾಗಿ ಸರಳವಾದ ನೈಸರ್ಗಿಕವಾದ ಜೀವನವನ್ನು ಯಾರ ಗೋಜೂ ಇಲ್ಲದೆ ತೃಪ್ತಿಯಲ್ಲಿ ನಡಸುವುದೊ ಎಂಬ ಗಮ್ಯಗಳ ನಡುವೆ ಇನ್ನೂ ಬಹುಮಂದಿ ಮನಸಾ ತೀರ್ಮಾನ ಮಾಡಿಲ್ಲ. ನಮ್ಮ ದೊಡ್ಡ ಕಾರ್ಖಾನೆಗಳ ಒಳಗೆ ಹೋಗಿ ತಾನೆ ಎಷ್ಟು ಜನ ನೋಡಿದ್ದಾರೊ! ಅಲ್ಲಿಗೆ ನಮಗೆ ಪ್ರವೇಶ ಸಿಕ್ಕುತ್ತದೆಯೆ? ಇತ್ತ: ಈ ದೇಶದಲ್ಲಿ ಪಾರ್ಲಿಮೆಂಟರಿ ಪದ್ಧತಿಯ ಪ್ರಕಾರ ಬಹುಮತದವರೇ ಅಲ್ಲವೆ ಮೇಲ್ಗೈ ಆಗಬೇಕಾದ್ದು ಎಂದು ಹೊರಮಾತಿಗೆ ಒಲಿದು, 'ಹಿಂದೂಗಳದೇ ಪ್ರಭಾವವಾಗಬೇಕಲ್ಲವೆ; ಉಳಿದವರು ಅವರ ಕೈಗೆ ತಗ್ಗಿ ಬಾಳಬೇಕು. ಉಳಿದವರೆಲ್ಲ ತಾವು ಈ ರಾಷ್ಟ್ರೀಯರೆಂದು ಶಪಥ ಮಾಡಲಿ; ಇಲ್ಲವಾದರೆ ಅವರು ಅರಾಷ್ಟ್ರಕರು' ಎಂಬ ಅತಿಗೆ ಬಹುಮತವನ್ನು ಒತ್ತುತ್ತಿದ್ದಾರೆ. ಎಂಟುನೂರು ವರ್ಷ ಈ ದೇಶವನ್ನಾಳಿದ ಮತ್ತು ಬ್ರಿಟನ್ನಿನ 1½ ಯಷ್ಟು ಜನಸಂಖ್ಯೆ ಉಳ್ಳ ತಾವು ಅಲ್ಪ ಸಂಖ್ಯಾತರೆಂದುಕೊಂಡು, ಎರಡನೆಯ ದರ್ಜೆಯ ಪ್ರಜೆಗಳೆಂದು ಕರೆಸಿಕೊಂಡು ಬಾಳಲು ಅವರಾದರೂ ಸಮ್ಮತಿಸುತ್ತಾರೆಯೆ? ಅವರನ್ನು ಅದುಮಿ ಆಳಬಹುದು ಎಂಬುದು ಶಕ್ಯವೆ? ಒಂಬತ್ತು ಹತ್ತು ಕೋಟಿ ಜನ ಜಾತಿ ಪದ್ಧತಿಗೆ ಹೊರಗಾಗಿದ್ದವರು ಸಾಧುವಾಗಿ ವರ್ಣಪದ್ಧತಿಯ ವಿಕಾರ ಪ್ರಕಾರಗಳನ್ನು ಒಪ್ಪಿಕೊಂಡು ಹೀನಾಯದಲ್ಲಿಯೇ ಉಳಿಯುತ್ತಾರೆ ಎಂಬುದನ್ನು ಈ ಕಾಲದವರು ಒಪ್ಪಬಹುದೆ? ನಂಬಬಹುದೆ? ಬಲಾತ್ಕಾರದಿಂದ ಹಾಗೆ ಮಾಡುವುದು ಸರಿಯೆ? ಇಂಥ ತುಮುಲ ದೇಶದಲ್ಲಿ ಹಬ್ಬಿದೆ; ಜೀವನವನ್ನು ಹಿಸುಕಿದೆ. ಆಲೋಚನೆ ಶುಚಿಯಾಗಬೇಕು; ನೋಡುವ ಕಣ್ಣೋಟ ವಿಶದವಾಗಬೇಕು; ಹೃದಯ ವಿಶಾಲವಾಗಬೇಕು. ಒಡ್ಡಿರುವ ಹೊಸಕಾಲದಲ್ಲಿ ಯಾವ ಮೌಲ್ಯಗಳ ಸ್ವೀಕರಣ, ವಿಸ್ತರಣ, ಉದಾರ ನೀತಿಯನ್ನು ಸಾಧಿಸಿ ಈ ನಾಡಿನ ಸಮಸ್ತ ಜೀವನವನ್ನೂ ಮಂಗಳಕ್ಕೆ ನಡಸುವುದು? ಹೊಸಕಾಲಕ್ಕೆ ಹೊಂದಿಕೊಳ್ಳುವಂತೆ, ಅಂತಾರಾಷ್ಟ್ರೀಯ ಜೀವನದಲ್ಲಿನ ಹೊಸ ಒತ್ತಡಗಳಿಗೂ ಅಗತ್ಯಗಳಿಗೂ ಹೊಂದುವಂತೆ ರೀತಿಗಳನ್ನೂ ಸಂಸ್ಥೆ ಸಂಪ್ರದಾಯಗಳನ್ನೂ ರಚಿಸಿಕೊಳ್ಳಬೇಕಿದೆ. ಹೆಚ್ಚು ಸಾಕಲ್ಯದಿಂದ ಎಲ್ಲ ಜನವರ್ಗವನ್ನೂ ಒಲಿಸಿಕೊಂಡು ಪ್ರೀತಿ ವಿಶ್ವಾಸಗಳನ್ನು ಉಳಿಸಿಕೊಂಡು ಬೆಳಸಬೇಕಾಗಿದೆ.

## ಖಿಲ ಸಂಸ್ಥೆ, ಪದ್ಧತಿಗಳು

ಆಶ್ರಮಧರ್ಮ ಸವೆದು ಎಷ್ಟೊ ಶತಮಾನಗಳಾದವು. ವರ್ಣ ವಿಭೇದ, ಅಸಮಾನತೆ ಇಂದು ನಿಷಿದ್ಧ. ದೇವರ ಹೆಸರಲ್ಲಿ ಆಣೆಗಳನ್ನು ಇಟ್ಟುಕೊಳ್ಳುವುದು ಅಣಕವಾಗಿದೆ. ಒಂದು ದೇವರ ಹೆಸರಲ್ಲಿ ಮಾಡಿದ ಪ್ರಮಾಣ ಇನ್ನೊಬ್ಬರಿಗೆ ಒಪ್ಪದು. ದೇಶಕ್ಕೆಲ್ಲ ಒಂದು ಸಿವಿಲ್ ಕೋಡ್ ಮಾಡುವುದು ಈವರೆಗೂ ಶಕ್ಯವಾಗಿಲ್ಲ. ಹಿಂದಿನ ಕಾಲದಲ್ಲಿ ಸ್ವರ್ಗ ನರಕದ ಕಲ್ಪನೆ, ಋಷಿಗಳು, ವರ ಶಾಪ ಎಂಬ ಮಾತು ನಡೆಯಿತು.



ಆ ಪದ್ಧತಿಯನ್ನು ಕಾಪಾಡಲು ರಾಜರು ಅಧಿಕಾರದಲ್ಲಿದ್ದರು. ವರ್ಣಾಶ್ರಮ ಧರ್ಮದ ಜೊತೆಗೆ ಅದರ ಸಂರಕ್ಷಕರೆಂಬ ಈ ರಾಜರ ಆಳಿಕೆ ಮಾಯವಾಯಿತು. ಅವರಾದರೂ ಈಚೆಗೆ ಅವನ್ನು ನಡಸಿದರೆ? - ಇವೊತ್ತಿನ ಶಾಸನಗಳು, ಶ್ರುತಿ ಸ್ಮೃತಿ ಸದಾಚಾರದ ಮೇರೆಗಳನ್ನು ಮೀರಿ ಜನದ ಪ್ರತಿನಿಧಿ ಸಂಸ್ಥೆಗಳು ಶಾಸನ ಸಭೆಗಳಲ್ಲಿ ಸೂತ್ರಗಳನ್ನು, ಕಾನೂನುಗಳನ್ನು ಮಾಡುತ್ತಿವೆ. ಕರ್ಮ, ಜನ್ಮಾಂತರವಾದ ಪ್ರಬಲವಾಗಿದ್ದ ಕಾಲ, ಭಕ್ತಿ, ವೈರಾಗ್ಯ, ಶಾಂತಿ, ಮುಕ್ತಿ ಇವಕ್ಕೆ ಒಲಿದು ಬದುಕನ್ನು ತಿದ್ದಿಕೊಳ್ಳಬೇಕೆನ್ನುತ್ತಿದ್ದ ಕಾಲ ಮುಗಿದು ಹೋಯಿತು. ಎಷ್ಟು ಬಾಯಳಿದು ಕೂಗಿದರೂ ಮರಳಿಬಾರದು. ಇವೊತ್ತು ಬದುಕು ಆ ಸಮಯ, ದೃಷ್ಟಿರೀತಿಗಳಿಗೆ ಒಳಪಟ್ಟು ಆ ಗುರಿಗಳನ್ನೂ ಗಮ್ಯಗಳನ್ನೂ ಸಾಧಿಸುವೆನೆಂದರೆ ನಡೆಯದು. ಪುರುಷಾರ್ಥಗಳ ತತ್ವ ಚೆನ್ನಾಗಿದೆ. ಕಾಮಾದಿಗಳ ಸಾಧನೆಯಂತೂ ಎಂದಿಗೂ ಮಿತಿಯಿಲ್ಲದೆ ನಡೆದದ್ದೇ. 'ಧರ್ಮ' ವೆಂಬುದರ ಸ್ವರೂಪ ಮಸುಕಾದಾಗ? ಅದರ ಅಧಿಕಾರ ಸಡಿಲವಾದಾಗ? ಇವೊತ್ತು ಆ ಸ್ಥಿತಿ ಬಂದಿದೆ. ಇನ್ನು ಮೋಕ್ಷ, ಅಲೌಕಿಕ, ಅಧ್ಯಾತ್ಮಕ್ಕೆ ಸಂಬಂಧಿಸಿದ್ದು ಅದು; ವ್ಯಕ್ತಿಗಳ ಗುರಿ ಸಮಾಜಕ್ಕೆಲ್ಲ ಅದನ್ನು ವಿಧಿಸಿದ್ದರೂ ನಡೆದಿದೆಯೆ? ನಡೆಯಬಲ್ಲದೆ? ಜೀವನದ ಸುಖ ಸಂತೋಷಗಳು ಇಂಥವು ಎಂದು ಬಲ್ಲವನು ಅದರ ಸಾಧನೆಗೆ ತೊಡಗಿದರೆ ಅದು ಒಂದು ಪುಣ್ಯ; ನಿಜವಾದ ಗಮ್ಯ; ಅರಿಯದವನ ಆಶೆ ಎಂತಾದೀತು? ಅನ್ನ ಕಾಣದ ನಮ್ಮ ಜನತೆಗೆ ಅಲ್ಪತೃಪ್ತಿ, ತುಷ್ಟಿ, ಶಾಂತಿಗಳನ್ನು ಉಪದೇಶಿಸುವುದು ಅಣಕವೆನ್ನಿಸುತ್ತದೆ. ಸಂಸ್ಕೃತಿ, ಸಂಪ್ರದಾಯ, ಸಭ್ಯ ಎಂದು ಯಾವುದನ್ನು ಹುಡುಗರಿಗೆ ಶಾಲೆ ಕಾಲೇಜುಗಳಲ್ಲಿ ಬೋಧಿಸುತ್ತಿದ್ದೆವೊ ಅವುಗಳಲ್ಲಿ ಹಲವು ಮೃತಿಹೊಂದಿ ಸವೆದು ಹೋದ ನಿರ್ವೀರ್ಯ ಪ್ರಾಚೀನತೆಗಳು; ನಿಷ್ಕ್ರಿಯವಾದವನ್ನು ಉಳಿಸುವ ವಾದ, ಏರ್ಪಾಡು ಮಾತ್ರ. ಇವೊತ್ತಿನ ಜೀವನದಲ್ಲಿ ಅಂಥ ಮಾತು, ನಡತೆ ಉಸಿರು ಕಟ್ಟುತ್ತವೆಯಾಗಿ ಹುಡುಗರಿಗೆ ಒಪ್ಪವು. ಇಂದಿನ ಜೀವನದ ಚಿಲುಮೆಗಳು ಬೇರೆ ಎಂಬ ಭಾವನೆ ವಿದ್ಯಾರ್ಥಿವೃಂದದಲ್ಲಿ ಬಲಿಯುತ್ತಿದೆ. ಇದೆಲ್ಲದರ ಪರಿಣಾಮವಾಗಿ ಮಕ್ಕಳ ಮನಸ್ಸು ಭಂಗಕ್ಕೆ ಸಿಕ್ಕಿ ಅವರ ಮೋಹ, ಭಕ್ತಿ, ಮುರಿದಿವೆ. ವಿದ್ಯಾಮಂದಿರಗಳಲ್ಲಿ ಅವರು ಕಲಿಯುವ ರೀತಿನೀತಿಗಳೆಲ್ಲ ಅಸಾಂಪ್ರತ ವಿದ್ಯಮಾನಗಳನ್ನು ಬೋಧಿಸುವ ಪ್ರಣಾಳಿಕೆಗಳು ಮಾತ್ರ ; ಇಂದಿನ ಧರ್ಮಸಂಚಿಕೆಗಳೂ ನಿರ್ಣಾಯಕಗಳೂ ಅಲ್ಲ; ಅವಕ್ಕೆ ನಮ್ಮ ಭಕ್ತಿ ಸಲ್ಲದು ಎಂಬ ಮನಃಸ್ಥಿತಿ ಹರಡುತ್ತಿದೆ. ಇದು ಸರಿ ತಪ್ಪು ಎಂದಲ್ಲ ಇದು ಮುರಿಯಬೇಕಾದರೆ ಬೋಧನ ವಿಷಯ, ವಿಧಾನ ಬೇರೆಯಾಗಬೇಕು. ಹಿರಿಯರೆಂಬವರು ಇದನ್ನು ಕಾಣುತ್ತಿಲ್ಲ.

## ಹಿಂದಿನ ವಾಣಿ, ಆಚಾರ

ಹಿರಿಯರಿಗೆ ಒಪ್ಪಲಿ, ಒಪ್ಪದಿರಲಿ, ಇವೊತ್ತಿನವರಿಗೆ ಹಳೆಯ ಕಾಲದ ಅಧಿಕಾರವಾಣಿಗಳು ಒಪ್ಪವು ; ಅವುಗಳಲ್ಲಿ ಇವರಿಗೆ ನಂಬಿಕೆಯಿಲ್ಲವಾಗಿ. ಯಾವುದೊ ಕಾಲಕ್ಕೆ ಸಂಬಂಧಿಸಿದಂತೆ ಅವು ಕಾಣುತ್ತವೆ. ಈ ಕಾಲದ ನಂಬಿಕೆಗಳಿಗೆ ಅವು

ತಕ್ಕುವಲ್ಲವೆಂದು ಅವರೆಣಿಕೆ. ಬೇರೆ ಪ್ರಮಾಣಗಳೂ ವಿಶ್ವಾಸಸ್ಥಾನಗಳೂ ಯಾವುವು ಎಂದು ಅವರನ್ನು ಕೇಳಿದರೆ ಅವರು ಹೇಳಲಾರರು. ಬಿಟ್ಟುದರ ಸ್ಥಾನದಲ್ಲಿ ಏನನ್ನು ನೆಚ್ಚಿಕೊಳ್ಳುತ್ತೀರಿ ಎಂದರೆ ಖಚಿತವಾಗಿ ಏನೂ ಹೇಳಲಾರರು. ಯಾವ ದೇಶದಲ್ಲಿಯೂ ಇದೇ ಪರಿಸ್ಥಿತಿ. ಪಾಶ್ಚಿಮಾತ್ಯರು ಇಲ್ಲಿಗಿಂತ ಉತ್ತಮ ಜೀವನದ ಪ್ರಣಾಳಿಕೆಗಳನ್ನೂ ಭಕ್ತಿಮೂಲಗಳನ್ನೂ ಒದಗಿಸಬಲ್ಲರೆ ಎಂದರೆ ಅವರೂ ನಮ್ಮಂತೆ ತೊಳಲುವುದು ಕಾಣುತ್ತಿದೆ. ಅವರ ಆಧ್ಯಾತ್ಮಿಕ ದೃಷ್ಟಿಯೂ ಈಗ ನೂರು ವರ್ಷಗಳ ಹಿಂದೆ ಮ್ಯಾಥ್ಯೂ ಆರ್ನಲ್ಡ್ ಕವಿ 'ಬಾಲ್ಡರ್' ಎಂಬವನ ಸ್ಥಿತಿಯಲ್ಲಿ ಹೇಳಿದ ಮಾತುಗಳಂತೆ ಇದೆ :

"Wandering between two worlds, one dead,
The other powerless to be born,
with nowhere yet to rest my head"

'ಎರಡು ಪ್ರಪಂಚಗಳ ನಡುವೆ ತಿರಿಯುತ್ತಿದ್ದೇವೆ ; ಒಂದು ಮೃತ; ಇನ್ನೊಂದಕ್ಕೆ ಜನನಶಕ್ತಿಯಿಲ್ಲದಿದೆ; ತಲೆಗೆ ಇಂಬಾಗಿ ವಿಶ್ರಾಂತಿ ತರಲು ಇನ್ನೂ ಯಾವ ನೆಲೆಯೂ ಸಿಕ್ಕಿಲ್ಲ' - ಎಂಬ ಸ್ಥಿತಿ ಅವರದೂ. ಇದನ್ನು ಇಲ್ಲಿ 50 ವರ್ಷಗಳಿಂದ ಹೇಳಿ ಆಗಿದೆ. ಹೀಗಿರುವಾಗ ಹಳೆಯದನ್ನು - ಎಂದರೆ ಪೂರ್ವಾಚಾರವನ್ನು - ಬಿಟ್ಟು ಪ್ರಯೋಜನ ವೇನಾಯಿತು ಎಂದು ಕೇಳಬಹುದು. ಅದೇನೊ ಹೇಗೊ. ಇದಂತೂ ನಮಗೆ ಒಪ್ಪಲ್ಲ, ಇದರಲ್ಲಿ ನಡೆಯಲಾರೆವು ಎಂಬ ಮನಃಸ್ಥಿತಿ ಇಂದಿನ ಹಲವರದು. ಇದೂ ದೇಶದ ಎಲ್ಲರ ಮನಸ್ಸಿನಲ್ಲಿ ಉಂಟಾಗಿದೆ ಎಂದಲ್ಲ. ಆಲೋಚನಾಪರರೆನ್ನುವ ಕೆಲವರನ್ನು ಪೀಡಿಸುತ್ತಿರುವ ಭೂತ. ಯಾರನ್ನು ಜನನಾಯಕರೆಂದು ಒಪ್ಪಬಹುದೊ ಅಂಥವರ ನಡವಳಿಕೆಯಲ್ಲಿ ಸಾಮಾನ್ಯರಿಗೆ ವಿಶ್ವಾಸವಿಲ್ಲ. ಆದುದರಿಂದ ಯುಕ್ತ ಅಯುಕ್ತ ತಿಳಿದವರು, 'ಸಮ್ಮರ್ಶಿನಃ' ಎಂಬವರು, ಎಲ್ಲರೂ ಒಪ್ಪುವಂತಹ 'ಶಿಷ್ಟರು' 'ಮಹಾಜನಾಃ' ಎಂಬ ವರ್ಗದ ಆಗಮನಕ್ಕೆ ಕಾದಿದ್ದಾರೆನ್ನಬಹುದು. ಧರ್ಮದ ತತ್ವವನ್ನು ತಿಳಿಸಬಲ್ಲವರಾರು? ಎಂದಿನಂತೆಯೇ ಅದು ನಿಹಿತಂ ಗುಹಾಯಾಂ. ಗೊತ್ತಿಲ್ಲ. ಹೊರ ಜಗತ್ತಿನಲ್ಲಿ ಇವೊತ್ತಿನ ಪರಿಸ್ಥಿತಿಯನ್ನೆತ್ತಿ ಗಟ್ಟಿಯಾಗಿ ಕರ್ಕಶವಾಗಿ ಕೂಗುತ್ತಿರುವ ಗಟ್ಟಿಗರ ದನಿಗಳೂ ಪ್ರಭಾವಗಳೂ ನಮ್ಮ ಒಳಜೀವನವನ್ನು ಒಡೆದು ಚೂರು ಮಾಡುತ್ತಿವೆ; ಕೋಟಲೆಗಳನ್ನು ಹುಟ್ಟಿಹಾಕುತ್ತಿವೆ. ರಾಗದ್ವೇಷಗಳನ್ನೂ ಹಿಂಸಾಪ್ರವೃತ್ತಿಗಳನ್ನೂ ಹೆಚ್ಚಿಸಿ ವಿಷಮತೆ ಬೆಳಸುವ ಪ್ರಭಾವಗಳೇ ಅವುಗಳಲ್ಲಿ ಬಲವಂತ. ಇಂತಹ ಪರಿಸ್ಥಿತಿಯಲ್ಲಿ ಆಲೋಚನಾ ಪರರೆಲ್ಲರೂ ಸ್ಥಿತಿಯನ್ನು ಅರಿಯುವ ಮಟ್ಟಿಗಾದರೂ ಜಾಗ್ರತಗೊಳ್ಳಬೇಕು. ನಮ್ಮ ನಮ್ಮ ಬದುಕುಗಳನ್ನು ಹೇಗೆ ನಿಯಂತ್ರಿಸಿಕೊಳ್ಳುವುದು, ಇದನ್ನು ರೂಪಿಸುವ ಮೌಲ್ಯಗಳು ಯಾವುವು ಎಂದು ನಿರ್ಧರಿಸಿಕೊಳ್ಳಬೇಕು. ಇದನ್ನು ಖಚಿತ ಮಾಡಿಕೊಂಡ ಹೊರತು ಬದುಕು ಒಂದು ಹದಕ್ಕೆ ಬಾರದು. ಬೆಲೆಗಳ ವ್ಯವಸ್ಥೆ ಆದ ಹೊರತು ಜೀವನದ ವಿಧಾನಗಳು, ನಾವು ನಿರ್ಮಿಸುವ ಸಂಸ್ಥೆಗಳು, ನಡವಳಿಕೆಗಳು ಹೊಸ ಕಾಲದ, ಪ್ರಗತಿಪರ ರಾಷ್ಟ್ರಕವರ್ಗವನ್ನಾಗಿ ನಮ್ಮನ್ನು ಮಾಡವು. ಒಂದು ಕಡೆ ವಿಜ್ಞಾನ ಯಂತ್ರವಿದ್ಯೆಗಳ



ಪರಿಮಂಡಲ, ಇನ್ನೊಂದು ಕಡೆ ಅಂತಾರಾಷ್ಟ್ರೀಯ ನಿರ್ಬಂಧಗಳು, ಒತ್ತಾಯಗಳು ಕಾರ್ಯಕಾರಿಯಾಗುತ್ತಿವೆ. ಆದರೆ ಮನಸ್ಸನ್ನೂ ಕ್ರಿಯಾವ್ಯಾಪಾರಗಳನ್ನೂ ಬದಲು ಮಾಡುವಂತೆ ರಾಗದ್ವೇಷಗಳನ್ನು ಹೊತ್ತಿಸಿ ಎಲ್ಲವನ್ನೂ ಅಸ್ತಿಮಿತಕ್ಕೆ ತರುವ, ಬುದ್ಧಿಯ ಮೇಲೆ ಕತ್ತಲು ಕವಿಸುವ ಪ್ರಭಾವಗಳೇ ಹತ್ತಾರು. ಅಭಿವೃದ್ಧಿ ಪ್ರಯತ್ನಗಳಿಗೆ ಒಳಗಿಂದಲೂ ಹೊರಗಿಂದಲೂ ಇವು ಅಡ್ಡಿ. ಈ ಸನ್ನಿವೇಶ ದಾರುಣವಾದ್ದು. ಯಾರು ಸಜ್ಜನರು, ಸಾತ್ವಿಕರು ಎನ್ನಬಹುದೊ ಲೋಕಹಿತದಲ್ಲಿಯೂ ವ್ಯಕ್ತಿ ಜೀವನದಲ್ಲಿಯೂ ಶುಚಿಸತ್ವ, ಶಕ್ತಿ, ನ್ಯಾಯ ಬೆಳೆಸಬೇಕೆಂದು ಮನಸ್ಸುಳ್ಳವರೊ ಅಂಥವರು ತಮ್ಮ ಹೃದಯ ಗಳನ್ನು ಪರಿಶೋಧನೆ ಮಾಡಿಕೊಳ್ಳಬೇಕು. ತಮ್ಮ ನಿಲವು ಅಭಿಪ್ರಾಯ, ತಾವು ಪ್ರತಿಪಾದಿಸುವ ಸಮಸ್ಯಾಪರಿಹಾರ ಮಾರ್ಗಗಳು, ತಮ್ಮ ನಂಬಿಕೆಗಳು, ನೀತಿತತ್ವಗಳು ಒಂದಕ್ಕೊಂದು ಸಮಂಜಸವೆ? ಋಜುವೇ? ಎಂಬುದನ್ನು ಪರ್ಯಾಲೋಚಿಸಬೇಕು.

## ಋಜುತೆ ಕಾಲದ ಅಗತ್ಯ

ಋಜುಮಾರ್ಗವೆಂದು ನಿರ್ಣಯಿಸುವುದೇ ಈ ಕಾಲದ ಬದುಕಿನ ರೀತಿ ಪ್ರಕಾರಗಳಿಗೆ ಬೆಲೆಕೊಟ್ಟು, ಅವನ್ನು ಯುಕ್ತವಾಗಿ ಬದುಕಿನಲ್ಲಿ ನಿಯಾಮಿಸುವಂತಿರ ಬೇಕು. ಈಗ ಸುತ್ತಲೂ ಉಪದೇಶಕ್ಕೆ ನಿಂತಿರುವ ಆಲೋಚನೆಗಳೂ ಪ್ರಣಾಳಿಕೆಗಳೂ ಕ್ರಾಂತಿಯನ್ನು ಬಯಸುವ ಕಮ್ಯುನಿಸ್ಟ್ ಮಾರ್ಗವನ್ನು ಬಿಟ್ಟು ಸಹಜ ಅನಿರ್ಬದ್ಧ ಚಿತ್ತವೃತ್ತಿ, ಬದುಕು ಅರಿಯದವರ (Innocents) ಕಿವಿಗೆ ಸವಿಯಾಗಿ ಕೇಳಬಹುದು, ಸೊಗಸಾಗಿ ಕಾಣುತ್ತ ಇರಬಹುದು. ಕೇವಲ ಸ್ವಾತಂತ್ರ್ಯವಾದಿಗಳ ಮಾತು ಹೊಟ್ಟೆತುಂಬಿದವರ ಮಾತು. ಹೊಟ್ಟೆಗಿಲ್ಲದ ಕೋಟಿಗಳ ಪಾಡು? ಅಲ್ಲಿಗೂ ಅವು ಹಿಂದಿನ ಯಾವುದೊ ಒಂದು ಕಾಲದ ರೀತಿಗೊ ಜೀವನ ಪ್ರಕಾರಕ್ಕೊ ಹೆಚ್ಚಾಗಿ ಹೊಂದುವಂಥವು. ಹಲವೇಳೆ ಯಾರನ್ನು ಹಿರಿಯರು, ನಾಯಕರು ಎಂದು ಅವರ ಶೀಲಕ್ಕಾಗಿ ಚಾರಿತ್ರ್ಯಕ್ಕಾಗಿ, ಕರ್ಮನಿಷ್ಠೆಗಾಗಿ ಒಪ್ಪಬಹುದೊ, ಮೆಚ್ಚಬಹುದೊ ಅವರು ಈಗ 60-70 ವರ್ಷಗಳಿಗೆ ವಯಸ್ಸಿನಲ್ಲಿ ಮೀರಿದವರು. ಆ ಮನಸ್ಸುಗಳಿಗೂ ಇವೊತ್ತು ತಳಮಳದಲ್ಲಿರುವ ಮನಸ್ಸುಗಳಿಗೂ ಸಂವಾದವಿಲ್ಲ. ಇದನ್ನು 'Generations gap' ಎನ್ನುತ್ತಾರೆ ಇಂಗ್ಲಿಷಿನಲ್ಲಿ. ಈ 'Generation' 40-50 ವರ್ಷಗಳಷ್ಟು ಆರಂಭವಾದ ದಶಕಕ್ಕೆ ಹಿಂದೆಯೇ ತಮ್ಮ ಮನಸ್ಸನ್ನೂ ಅಭಿಪ್ರಾಯಗಳನ್ನೂ ವೃತ್ತಿ ರೀತಿಗಳನ್ನೂ ರಚಿಸಿಕೊಂಡು ಮುಚ್ಚಿ ಹೋದವರು. ಅವರ ಮನಸ್ಸು ಅಲ್ಲಿಯೇ ಘನಿಸಿ ಕಲ್ಲು ಹೆಪ್ಪುಕಟ್ಟಿದೆ. ವಾದಕ್ಕೆ, ಕೇಳುವುದಕ್ಕೆ ಅವರ ಮಾತು ಸೂಕ್ತವಾಗಿ ಸಂಪ್ರದಾಯ ಪಕ್ಷಪಾತವುಳ್ಳ ಮನಸ್ಸುಗಳಿಗೆ ಸುಷ್ಠುವಾಗಿ ಕೇಳಿಸುತ್ತದೆ. ಅವರು ಬೆಳೆದು, ತಮ್ಮ ಮನಸ್ಸನ್ನು ಒಂದು ಹದಕ್ಕೆ ತಂದುಕೊಂಡವರು. ಯಾವುದನ್ನು 'ಲಿಬರಲ್' ಪಂಥ ಎಂದು ಕರೆಯುತ್ತಿದ್ದರೊ ಅದನ್ನು ರೂಪಿಸಿ ಪೋಷಣೆ ಮಾಡಿದ ಉದಾರ ತತ್ವ ಸಂಪ್ರದಾಯ ಇಂಗ್ಲೆಂಡಲ್ಲೇ ಎಂದೋ ಮುರಿದು ಬಿತ್ತು. ಆಸ್ಕ್ವಿತ್ ಅವರ ಕಡೆಯ ರಾಜಕೀಯದಲ್ಲಿ

ಅವರನ್ನೂ ಅದನ್ನೂ ಲಾಯ್ಡ್ ಜಾರ್ಜ್ ಮುರಿದರು; ಆ ತತ್ವ ಪ್ರತಿಪಾದನೆಗೆ ಪ್ರಾಬಲ್ಯಕ್ಕೆ ಅವಕಾಶವಿಲ್ಲದೆ ಮಾಡಿದರು. ಅಲ್ಲಿಂದೀಚೆಗೆ ಯೂರೋಪಿನಲ್ಲಿ ಮಾರ್ಕ್ಸ್, ಫ್ರಾಯಿಡ್ ಮುಂತಾದ ತತ್ವಬೋಧಕರ ಪ್ರಭಾವ ಬೆಳೆದಿದೆ. ಫ್ಯಾಸಿಸ್ಟ್, ನಾಟ್ಸಿ, ಕಮ್ಯೂನಿಸ್ಟ್ ಪ್ರಭಾವಗಳು ಲೋಕದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಹೆಚ್ಚಾಗಿ ಹೆಚ್ಚು ಜನಕ್ಕೆ ಹೆಚ್ಚು ಸೌಕರ್ಯಗಳನ್ನು ಒದಗಿಸುತ್ತೇವೆನ್ನುತ್ತ ಸಾಮುದಾಯಿಕ ಕಾರ್ಯಕ್ರಮಗಳನ್ನೂ ಸಂಘರ್ಷಣೆಯ ನೇರ ಮಾರ್ಗಗಳನ್ನೂ ಸರ್ವಾಧಿಕಾರದ ಹಿಂಸಾಮಾರ್ಗಗಳನ್ನೂ ಬೋಧಿಸುತ್ತಿವೆ. ಕ್ರಾಂತಿತತ್ವಗಳು ನಾನಾ ರೀತಿಯಲ್ಲಿ ಪ್ರಬಲವಾಗಿ ದೇಶದ ಮೂಲೆ ಮೂಲೆಯಲ್ಲಿಯೂ ಕಾರ್ಯಕ್ರಮಗಳನ್ನು ರೂಪಿಸಿಕೊಡುತ್ತಿವೆ. ವೃತ್ತಪತ್ರಿಕೆಗಳು, ದೇಶ ವಿದೇಶಗಳ ಆಕಾಶವಾಣಿ, ಬಗೆಬಗೆಯ ಪುಸ್ತಕಗಳು, ಪ್ರಚಾರ ಸಾಹಿತ್ಯ ಎಲ್ಲವೂ ಜನರ ತಳಮಳವನ್ನೂ ಅಶಾಂತಿಯನ್ನೂ ಹೆಚ್ಚಿಸುತ್ತವೆ. ಅವಕ್ಕೆ ಸಮವಾಗಿ, ಹೆಚ್ಚಾಗಿ ಮನಸ್ಸಿನ ಮತ್ತು ಇತರವಾದ ಶಿಸ್ತು ಸಂಯಮಗಳನ್ನು ಸಡಿಲಗೊಳಿಸುವ ಅರಾಜಕ ವಾದವೂ ಆಕರ್ಷಕವಾಗುತ್ತಿವೆ. ಆದುದರಿಂದ ಸಮಾಜ ಹಿತವನ್ನು ಬಯಸಿ ಅದನ್ನು ಹೊಸಕಾಲಕ್ಕೆ ತಕ್ಕಂತೆ ರೂಪಿಸಬೇಕೆನ್ನುವವರು ಹೊಸಕಾಲದ ಚೈತನ್ಯವನ್ನು ಕೂಡ ಇಂದಿನವರ ಮನಸ್ಸು ಒಲಿವಂತೆ, ಅದನ್ನೇ ಕುರಿತು ಬೆಳಸಬೇಕು. ಅವರನ್ನು ಪ್ರಭಾವಗೊಳಿಸುವ ತತ್ವರಚನೆಗಳನ್ನೇ, ಉಪದೇಶ ತಂತ್ರಗಳನ್ನೇ ದೊರಕಿಸಬೇಕು. ನಮ್ಮ ಜನಕ್ಕೆ 5000 ವರ್ಷಗಳ ಚರಿತ್ರೆ ಇದೆ. ನಾನಾ ಬಗೆಯ ತಳಮಳಗಳನ್ನೂ ವಿಪ್ಲವಗಳನ್ನೂ ಎದುರಿಸಿ ಉಳಿದುಕೊಂಡ ಒಂದು ಧರ್ಮ ಸಂಪ್ರದಾಯವಿದೆ. ಇಂಥ ದೇಶದಲ್ಲಿ ಹೊಸದರ್ಶನವೂ ಕ್ರಿಯಾತ್ಮಕ ನಾಯಕತ್ವವೂ ಅಶಕ್ಯವಾಗಬಾರದು.

## ಇನ್ನೊಂದು ಭ್ರಾಂತಿ

ನಮ್ಮ ಜನದಲ್ಲಿ ಇನ್ನೊಂದು ಭ್ರಾಂತಿ ಉಳಿದುಕೊಂಡಿದೆ. ಜನತೆಯ ಬಹುಮಂದಿ ಬೇರೆ ದೇಶಗಳಲ್ಲಿಯೇ ಇದ್ದರೂ ದರಿದ್ರವಾಗಿಯೇ ಅಜ್ಞಾನ ಜಡವಾಗಿಯೇ ಮದಡಾಗಿಯೇ ಇದ್ದರೂ ಅವರನ್ನು ಕುರಿತು ಸಮಷ್ಟಿಯಲ್ಲಿ ಬಹು ಸುಂದರವಾದ ಮಾತುಗಳನ್ನಾಡಿಕೊಳ್ಳುವುದು ಇದು. ಆ ಮಾತುಗಳನ್ನು ನಿಜವೆಂದು ನಂಬಿ ತಿಳಿಯದ ಜನ ಮೋಹಗೊಳ್ಳುವುದು ಸಾಮಾನ್ಯ. ಇದು ಏಳಿಗೆಗೆ ಘಾತಕವಾಗಿರುವ ಒಂದು ಸಂಗತಿ. ಸಾಮಾನ್ಯರೇ ಏನು, ಗಾಂಧೀಜಿಯವರೇ ನಮ್ಮ ಜನ ತುಂಬಾ ಸಾಧುಗಳು ಎಂದು ನಂಬಿದ್ದವರು; ನೆಹ್ರೂ ನಮ್ಮದನ್ನು A Mature Population ಎಂದು ಹೇಳಿ, ಆ ವಿಶ್ವಾಸದಲ್ಲಿ ನಮ್ಮ ದೇಶದ ಧೋರಣೆಗಳನ್ನು ಕಟ್ಟಿದರು. ಒಳಗೆ ಟೊಳ್ಳೋ ಟೊಳ್ಳು! ವೇದ, ಉಪನಿಷತ್ತು, ಗೀತೆ ಮುಂತಾದವು ಗಳಿಂದ ವಾಕ್ಯಗಳನ್ನು ಉದ್ಧರಿಸಿಕೊಂಡು ಅವನ್ನು ಹೇಳುತ್ತಿದ್ದೇವೆಂಬ ನಾವೂ ಅದು ನಮ್ಮ ವಾಕ್ಯ ಎಂದೂ, ನಮ್ಮ ನಾಡು Spiritual- ಅಧ್ಯಾತ್ಮಗರ್ಭವುಳ್ಳದ್ದು ಎಂದು ಹಿಗ್ಗಿ ಹೇಳುವವರೂ, ಅಂಥದನ್ನು ಕೇಳುತ್ತಿದ್ದೇವೆಂದು ಕೇಳುವವರೂ, ತಮ್ಮ ಗುಣ



ಅದು ಎಂದುಕೊಂಡು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೇವೆ.

ನಾವು ದೈವ ದೃಷ್ಟಿಯಲ್ಲಿ ಎಲ್ಲರಿಗಿಂತ ಮೇಲು, ವಿಶೇಷವಾಗಿ ದೇವರು ನಮ್ಮನ್ನು ಆಯ್ದುಕೊಂಡಿದ್ದಾನೆ ಎಂಬುದು ನಮ್ಮ ಎಣಿಕೆ; ಗಂಭೀರ ಆತ್ಮವಿಶ್ವಾಸ. ಈ ಮಾತನ್ನು ಮುಸ್ಲಿಮರು, ಯೆಹೂದಿಯರು, ಕ್ರಿಶ್ಚಿಯನ್ನರು, ಸಿಖ್ಖರು ನಮ್ಮ ಹಾಗಯೇ ನಂಬಿದ್ದಾರೆ. ಆದರೆ ನಮ್ಮ ಆತ್ಮವಿಶ್ವಾಸ ಬೇರೆಯವರ ಹಿರಿಮೆಯನ್ನು ನಂಬದು. ಇಂಥ ಹಿರಿಮೆಯಲ್ಲಿ ಉಬ್ಬಿ ಹೋಗುತ್ತಿದ್ದೇವೆ. ಆಡುವ ಮಾತು ದೊಡ್ಡದು ; ಬಾಳು ಕೀಳು.

## ಮೂಲ ವೈಭವ

ನಮ್ಮ ಜನವರ್ಗವೂ ಮೂಲ ಪ್ರವೃತ್ತಿಗಳ (Instincts) ಆಘಾತಕ್ಕೆ ಸಿಕ್ಕಿ ಗಾಸಿ ಪಡುತ್ತಿರುವ ಪ್ರಾಣಿವರ್ಗವೇ. ರಾಗದ್ವೇಷಗಳಿಗೂ ಪ್ರಯೋಜನಕಾಂಕ್ಷೆಗೂ ಇತರ ಎಲ್ಲ ಜನರಂತೆಯೇ ಎಲ್ಲ ಮಟ್ಟಗಳವರೂ ಈಡಾದವರೇ. ಬುದ್ಧಿವಂತಿಕೆಯೆ (Intelligence) ? ಎಷ್ಟು ಜನಕ್ಕೆ ಇದು ಸಹಜವಾಗಿ ಉಂಟು? Reason, Spirit, Creativity ಎಂಬ ಮಾತುಗಳನ್ನು ಬಳಸುವುದೂ ರೂಢಿ. ಯುಕ್ತಿ (Reason) ? ಎಲ್ಲದರಲ್ಲಿಯೂ ಯುಕ್ತಿ ನಮ್ಮ ಜೀವನವನ್ನು ನಡಸುತ್ತ ಇದೆಯೆ? ನಡಸುವಾಗ ಎಂತಹ ಯುಕ್ತಿ? ರಾಗದ್ವೇಷ, ಪೂರ್ವಗ್ರಹ, ಪ್ರಯೋಜನ ಸಾಧನೆ ಇವಕ್ಕೆ ವಿರುದ್ಧವಾಗಿ ಪ್ರಯೋಗಿಸುವ ಯುಕ್ತಿಯೆ? ಆ ಮೂಲಕ ವಿವೇಕ ಎಷ್ಟು ಮಟ್ಟಿಗೆ ಒದಗುತ್ತಿದೆ? ಆತ್ಮ- ಅಧ್ಯಾತ್ಮ - ಶಕ್ತಿಯೇ? ವೇದಿಕೆಗಳಿಂದ ಮಾತನಾಡುತ್ತಿರುವವರ ಬಾಯಲ್ಲಿ ಮಾತ್ರ ಇದೆ. ಅಂಥ ದೊಡ್ಡ ಮಾತುಗಳಿಂದ ಹತ್ತು ವರ್ಷ ರಜಾ ತೆಗೆದುಕೊಂಡು ಸಾಮಾನ್ಯ ಮಾನವರಾಗಿ ಬಾಳುವೆವಾದರೆ ದೇಶ ಬದುಕಿಕೊಂಡೀತು. ಮಹಾ ವಾಕ್ಯಗಳಿಂದ ಜನತೆ ಉದ್ಧಾರವಾಗುವ ಹಾಗಿದ್ದಿದ್ದರೆ ಈವರೆಗೆ ಭಾರತ ಸ್ವರ್ಗ ಮುಟ್ಟಿ ಸಾವಿರಾರು ವರ್ಷವಾಗುತ್ತಿತ್ತು. ಇಂಥ ಮಾತನ್ನಾಡುತ್ತಿರುವುದಕ್ಕೆ ಕ್ಷಮೆ ಬೇಡುತ್ತೇನೆ. 'ವ್ಯಪೇತಭೀಃ ಪ್ರೀತಮನಾಃ' ಎಂಬುದೊ 'ದುಃಖೇಷು ಅನುದ್ವಿಗ್ನ ಮನಃ ಸುಖೇಷು ವಿಗತಸ್ಪೃಹಃ' 'ವೀತರಾಗಭಯಕ್ರೋಧಾಃ' ಎಂಬವೊ ಸಾಲವೇ ಒಂದು ಜೀವದ ತಾರಣೆಗೆ? ಎಲ್ಲಿ ಬೆಳೆಯಿತು ಇದು? ಹೊರಗಿನವರು ಬೇಕಾದರೆ ನಮ್ಮನ್ನು ಹೊಗಳಲಿ- ಇಂಥ ಮಾತುಗಳ ಬಲವೂ ಇಲ್ಲದವರು.

ನಾವು ಉದ್ಧಾರವಾಗಬೇಕು, ನಮ್ಮ ಲೋಪದೋಷಗಳನ್ನು ನಾವೇ ಅರಿಯಬೇಕು ಎಂಬ ಮನಸ್ಸಿನಿಂದ ಇದನ್ನು ಹೇಳುತ್ತಿದೆ. ನಮ್ಮಲ್ಲಿ ಆ ಪಕ್ಷಪಾತ ಇದ್ದಿದ್ದರಾಗುತ್ತಿತ್ತು; ಅಧ್ಯಾತ್ಮದ ದಿವ್ಯಜ್ವಾಲೆ ಹೊಳಪಾಗಿ, ಶುದ್ಧವಾಗಿ, ಚೊಕ್ಕವಾಗಿ, ವಾಸನೆ ಹೊಗೆ ಇಲ್ಲದೆ ಬೆಳ್ಳುರಿಯಾಗಿ ಉರಿಯುತ್ತಿದ್ದರೆ ಮೇಲಾಗಿತ್ತು. ಅಥವಾ ಸೃಜನಶೀಲತೆ (Creativity) ಇದೆಯೆ? ಇವೊತ್ತು ಎಲ್ಲ ದೇಶಗಳವರಿಗಿಂತ ಹೆಚ್ಚಾಗಿ ನಮ್ಮ ವ್ಯಕ್ತಿತ್ವ, ಮೂರ್ತಿತ್ವ ಒಡೆದು ಚೂರಾಗಿದೆ. ಇತರರ ಕಸದ ಬುಟ್ಟಿಗಳಿಂದ ಚೂರು

ಪಾರು ಆಯ್ದು ಬಾಳುತ್ತಿದ್ದೇವೆ ಎಂದು ಟಾಗೋರರು ಹೇಳಿ 50 ವರ್ಷಗಳಾದುವು. ಪ್ರತಿವರ್ಷವೂ ಸಾರ್ವಜನಿಕ ಜೀವನದಲ್ಲಿ, ವ್ಯಕ್ತಿ ಜೀವನದಲ್ಲಿ ಆಲೋಚನೆಯ ಮಟ್ಟಗಳೂ ಅನುಭವದ ಮಟ್ಟಗಳೂ ಕೆಳಗೆ ಕೆಳಗೆ ಹೋಗುತ್ತಿವೆ. ವಿದ್ವತ್ತಾ ಅಥವಾ ಪಾಂಡಿತ್ಯ ಕ್ವಚಿತ್ತಾಗಿ ಬೆಳೆಯಬಲ್ಲದಾದರೂ ಮೂಲಭೂತ ಚಿಂತನದ ಪ್ರಕಾಶವೂ (Thought) ಸೃಷ್ಟಿಕತ್ ಎನ್ನಬಹುದಾದ ನಿರ್ಮಿತಿಯೂ ಬೆಳೆಯುತ್ತಿಲ್ಲ ವೇನೊ. 800-1000 ವರ್ಷಗಳಿಗೆ ಹಿಂದೆ ನಮ್ಮ ನಿರ್ಮಾಣ ಶಕ್ತಿ ಮುಚ್ಚಿ ಹೋಯಿತು. ನಮ್ಮಲ್ಲಿಯೂ ಹೆಚ್ಚು ಜನಕ್ಕೆ ಅಧಿಕಾರ ಬೇಕು, ಹಣ ಬೇಕು, ಬಲ, ಸ್ಥಾನ ಬೇಕು - ಎಂದು ನುಗ್ಗುತ್ತಿರುವವರೇ ಹೊರತು ಸಮಸ್ತರ ಹಿತದಲ್ಲಿ ತೊಡಗಬೇಕೆಂಬ ಬುದ್ಧಿ ಕಾಣದಾಗಿದೆ. ಗೀತಾಚಾರ್ಯನು ಒಂದು ಸಮಯದಲ್ಲಿ 'ವಿಮೃಸ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು' ಎಂದು ಸ್ವಾತಂತ್ರ್ಯವನ್ನು ಕೊಟ್ಟನು. ಕೂಡಲೆ ಎನ್ನೋಣವೆ? "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂದು ಬೋಧಿಸಿ ಅರ್ಜುನನನ್ನು ಒಪ್ಪಿಸಿದ. 'ಮಾಮೇಕಂ ಶರಣಂ ವ್ರಜ' ಎಂದು ನಂಬಿಕೆ ಕೊಟ್ಟು ಒಲಿಸುವ ಒಂದು ದೇವತೆ ಈಗಿಲ್ಲ. ಹಲವರು ಆ ಅಧಿಕಾರವನ್ನು ಬೇಡುತ್ತಿದ್ದಾರೆ. 'ಸರ್ವಧರ್ಮಾನ್ ಪರಿತ್ಯಜ್ಯ ಯಥೇಚ್ಛಸಿ ತಥಾ ಕುರು' ಎಂಬಂತಾಗಿದೆ ಇವೊತ್ತಿನ ಗತಿ, ರೀತಿ, ನೀತಿ, ನಡವಳಿಕೆ. ಯಾರಿಗೂ ಯಾವುದನ್ನು ಮಾಡುವುದಕ್ಕೂ ಲಜ್ಜೆ, ಆತಂಕ ಇಲ್ಲ. ಎಲ್ಲಕ್ಕೂ ರಹದಾರಿ ದೊರೆತಿರುವ ನಡತೆ ಏರ್ಪಡುತ್ತಿದೆ. ಇದು ವಿನಾಶಕರ.

## ಕ್ರಿಯಾಪ್ರವೃತ್ತಿ

ಇಚ್ಛೆಯ ಮೂಲಗಳು ಯಾವುವು? ನಡತೆಯನ್ನು ಪ್ರಚೋದಿಸುವ ಪ್ರವೃತ್ತಿಗಳು ಯಾವುವು? ಚಿತ್ತವೃತ್ತಿ ಶುದ್ಧವಾಗದಿದ್ದರೆ ನಡತೆಯಲ್ಲಿ ಧರ್ಮ, ಸತ್ಯ ಹೇಗೆ ಬರಬೇಕು? ಇವುಗಳ ಮೂಲಾಧಾರವಾಗಿ ಸಾರ್ವಜನಿಕ ಜೀವನ ಉತ್ತಮ ಪಡಬೇಕು ಎಂಬುದಿಲ್ಲ ದಿದ್ದರೆ ಜನಜೀವನದಲ್ಲಿ ವಿಶಾಲತೆಯಾಗಲಿ ಔದಾರ್ಯವಾಗಲಿ ಹೇಗೆ ಬೆಳೆದೀತು? ಆದ್ದರಿಂದ ಧಾರ್ಮಿಕ ಜೀವನವೆಂಬುದರ ಅಗತ್ಯಗಳನ್ನೂ ನಿರೀಕ್ಷೆಗಳನ್ನೂ ಇವೊತ್ತು ಪುನಃ ಸಮೀಕ್ಷಿಸುವುದು ಅಗತ್ಯ. ಆದರೆ ಇವೊತ್ತಿಗೆ ತಕ್ಕಂತೆ ಅವನ್ನು ರೂಪಿಸಿಕೊಳ್ಳಬೇಕು ಮಾತ್ರ. ವ್ಯಕ್ತಿಗಳ ಜೀವನ ಶುಚಿಯಾಗಿ ಸ್ವತಂತ್ರ ಯೋಚನೆಗೂ ಧಾರಾಳವಾದ ಭಾವನೆಗೂ ಅನುಕೂಲವಾದ ಒಂದು ಚೌಕಟ್ಟಿನಲ್ಲಿ ಹೊಸಕಾಲದ 'Charter' ಏರ್ಪಟ್ಟರಾದೀತು. ಇದಕ್ಕೆ ತುಂಬ ಬುದ್ಧಿವಂತಿಕೆಯಿಂದ, ವಿವೇಕದಿಂದ, ಹೊಣೆಗಾರಿಕೆ ಗಳನ್ನು ಸಂತೋಷದಿಂದ, ಧಾರಾಳದಿಂದ ಒಪ್ಪಿಕೊಳ್ಳುವಂತೆ ಪ್ರಚಲಿತ ಜೀವನ ಮಂಡಲದಲ್ಲಿ ಬದುಕಲು ಅನುವಾಗಬೇಕು. ಸತ್ಯಸ್ಥಿತಿಯನ್ನು ಅರಿತು ಮೌಲ್ಯಗಳೆಂಬ ವನ್ನು ಪುನಃ ಪರಿಶೀಲಿಸಬೇಕೆಂಬುದು ನನ್ನ ಬೇಡಿಕೆ. ಧರ್ಮದ ಯಾವ ಪ್ರಕಾರ ಹೆಚ್ಚು ಹಿತವಾಗಿ ನಮ್ಮ ಕಾಲಕ್ಕೆ ಹೊಂದುತ್ತದೆಯೊ ಅಂಥುದನ್ನು ಕಂಡುಕೊಂಡು ಆ ರೀತಿ ಬದುಕಿನ ರೀತಿಯನ್ನೂ ಸಂಸ್ಥೆ ನಡವಳಿಕೆಗಳನ್ನೂ ನಂಬಿಕೆಗಳನ್ನೂ ವ್ಯವಸ್ಥೆಗೊಳಿಸಿ



ಕೊಂಡೇವೆ? ಅವು ಆಧುನಿಕ ಸಮಯಗಳಿಗೂ ಆಶೋತ್ತರಗಳಿಗೂ ತಕ್ಕಂತೆ ಅಭಿವ್ಯಕ್ತವಾಗುವಂತೆಯೂ ಫಲಸಿದ್ಧಿ ಪಡೆಯುವಂತೆಯೂ ರೂಪಿತವಾದಾವೆ?

ಸತ್ಯವೆನ್ನುವಾಗ ಕಡೆಗೆ ಒಂದು ಮಾತನ್ನಾಡಿ ಮುಗಿಸುತ್ತೇನೆ. ಕಿಂಗ್ ಲಿಯರ್ ನಾಟಕದ ಕಡೆಯ ಮಾತನ್ನು ಆಲ್ಬನಿ ಹೀಗೆ ಹೇಳುತ್ತಾನೆ: Speak what we feel, not what we ought to say. ಇದು ಪ್ರಾಮಾಣಿಕವಾಗಿ ನಡತೆಯಲ್ಲಿ, ಜನಜೀವನದಲ್ಲಿ ಆಕೃತಿಗೊಳ್ಳಬೇಕು.

# ಜ್ಞಾನ - ವಿಜ್ಞಾನ

## ಜ್ಞಾನ-ವಿಜ್ಞಾನ

ಒಂದು ಸಣ್ಣ ಪುಸ್ತಕಕ್ಕೆ 'ಜ್ಞಾನ-ವಿಜ್ಞಾನ' ಎಂದು ಹೆಸರಿಡುವುದು ಅಬ್ಬರವೆನ್ನಿಸೀತು. ಬೇರೆ ಏನೂ ತೋರದೆ ಇದನ್ನು ಬಳಸಿದೆ. ವಿಷಯ, ಮನುಷ್ಯನ ತಿಳಿವಳಿಕೆಯ ನೆಲಸನ್ನೂ ಕೆಲವು ಪ್ರಕಾರಗಳನ್ನೂ ಕುರಿತದ್ದು. ಅದರಲ್ಲಿ ಈ ದಿನ ಯಾವುದನ್ನು 'ಸೈನ್ಸ್' ಎನ್ನುತ್ತಾರೊ ಅದನ್ನು ವಿಜ್ಞಾನ ಎನ್ನುವುದು ವಾಡಿಕೆ. ಅದೂ ಜ್ಞಾನದ ಒಂದು ವಿಶೇಷವೇ. ಆದರೆ ಅದರ ಸ್ವರೂಪ, ಮಾರ್ಗ, ಸಾಧನ, ದೃಷ್ಟಿ, ಸಿದ್ಧಿ ಬೇರೆಯಾದ್ದರಿಂದ ಅದನ್ನು 'ವಿ' ಎಂದರೆ ವಿಶೇಷ(ವಿವಿಧವೂ, ವಿಕೃತವೂ ಆಗಬಹುದು)ವೆಂದುಕೊಂಡು, ಸದ್ಯ ಆ ಹೆಸರನ್ನು ಉಪಯೋಗಿಸುತ್ತಿದೆ. ಇವೆಲ್ಲದರಲ್ಲಿ ನಿಜಗಳೆಂದು ಸ್ಥಾಪಿತವಾದ ಸಂಗತಿಗಳನ್ನು ಸಮಂಜಸಗೊಳಿಸಿಕೊಳ್ಳದಿದ್ದರೆ ಯಾವುದನ್ನು ಫಿಲಾಸಫಿ ಎನ್ನುತ್ತಾರೊ ಅದು ಒಪ್ಪಿತವಾಗುವುದಿಲ್ಲ. ಇಂದು ವಿಜ್ಞಾನದ ಪ್ರಪಂಚವೂ ಪ್ರಭಾವವೂ ಬಹುದೊಡ್ಡವು. ಅದರಿಂದ ಹುಟ್ಟಿದ ಯಂತ್ರ, ತಂತ್ರ, ಶಿಲ್ಪ ಮನುಷ್ಯನ ಬದುಕನ್ನು ಅತಿಶಯವಾಗಿ ಅದ್ಭುತವಾಗಿ ಮಾರ್ಪಡಿಸಿದೆ. ಅಲ್ಲಿ ತಿಳಿವಳಿಕೆ ಖಚಿತ. ನಿಶ್ಚಯಗಳು ಪ್ರಯೋಗಗಳಿಂದ ಮಾಡಿತೋರಿಸಬಲ್ಲವು. ಇವು ಹೀಗೇ ಸರಿ ಎಂದು ಸ್ಥಾಪಿಸಬಲ್ಲವು; ಬೇರೆ ಪ್ರಯೋಗ ನಡೆದು ಅದನ್ನು ನಿರಸನ ಮಾಡುವವರೆಗು. ನಿರಂತರವಾಗಿ ಅಂಥ ಪ್ರಯೋಗ ನಡೆದು ಅದನ್ನು ಹಿಂದಕ್ಕೆ ಹಾಕಿ ಹೊಸ ಸೂತ್ರ ಸ್ಥಾಪಿಸುವುದು ಅದರ ಸ್ವರೂಪ ಲಕ್ಷಣ. ಇಷ್ಟು ನಿಶ್ಚಯ, ಖಚಿತತೆ, ವ್ಯಾಪ್ತಿ ಉಳಿದ ಜ್ಞಾನಭಾಗಕ್ಕೆ ಇಲ್ಲ. ಆದುದರಿಂದ ವಿಜ್ಞಾನ ಪ್ರತ್ಯೇಕ ಭಾಗವಾಗಿದೆ.

ಜ್ಞಾನವೆಂಬ ಮಾತು ಮನುಷ್ಯನ ಎಲ್ಲ ತಿಳಿವಳಿಕೆಗೂ ಸಲ್ಲುತ್ತದೆ; ಚೂರು ಸುದ್ದಿಯಿಂದ ಹಿಡಿದು ವೇದಾಂತದ ಪರಮಾರ್ಥದವರೆಗೂ. ಐಲನಿಗೆ (Idiot) ಯಾವ ತಿಳಿವಳಿಕೆಯೂ ಇಲ್ಲವೆನ್ನುತ್ತಾರೆ. ಇದ್ದರೆ ಅದಕ್ಕೆ ಪ್ರಕರ್ಷವಿಲ್ಲ; ಪ್ರಯೋಜನವಿಲ್ಲ. ಕಾನೂನಲ್ಲಿ 'ಇಡಿಯಟ್' ಎಂಬವನನ್ನು ತಾಯಿ-ತಂದೆಯರನ್ನು ಬೇರೆಬೇರೆಯಾಗಿ ಗುರುತಿಸಿ ತಿಳಿಯಲಾರದವನು, ತೋರಿಸಲಾರದವನು, ಒಂದರಿಂದ ಹತ್ತು ಅಂಕೆಗಳನ್ನು ಕ್ರಮವಾಗಿ ನುಡಿಯಲಾರದವನು, ತಿಳಿಯಲಾರದವನು ಎಂಬುದುಂಟು. ದಡ್ಡನಿಗೆ ಪ್ರಪಂಚವೆಲ್ಲಾ ಒಂದೇ. ಸೊನ್ನೆ. ಏಕೊ, ಏನೋ-ಕನ್ನಡದಲ್ಲಿ 'ದೊಡ್ಡ' ಎಂಬುದಕ್ಕೆ ದಡ್ಡ ಎಂದು ಬೇರೊಂದು ರೂಪವಿದೆ. ಕನ್ನಡದ ದೊಡ್ಡವರು ದಡ್ಡರೆಂದು ಅಲ್ಲವಾಗಿರಬೇಕು. ಇದು ಜ್ಞಾನಾಜ್ಞಾನಗಳ ಪ್ರಪಂಚ. ಜ್ಞಾನಿ ಎಲ್ಲಕ್ಕೂ ಮೇಲ್ಪಟ್ಟವನು. ದಡ್ಡ

ಎಲ್ಲಕ್ಕೂ ಕೆಳಗಿನ ಮಟ್ಟದವನು. ಬಹುಶಃ ಈ ಮಿತಿಗಳ ನಡುವಿರುವ ಸಮಸ್ತವನ್ನು ಅರಿತವನು ದೊಡ್ಡವನು. ಆ ತಿಳಿವಳಿಕೆಯಲ್ಲಿ ದೊಡ್ಡತನವಿದೆ. ಅದು ವಿವೇಕ.

ಸಮಾಜದಲ್ಲಿ ಬಗೆಬಗೆಯ ಜನರಿರುತ್ತಾರೆ. ಜಾಣರು, ಅಲ್ಲದವರು ಇಬ್ಬರೂ ಇರುತ್ತಾರೆ. ಕಪ್ಪಿಗೂ ಬಿಳುಪಿಗೂ ನಡುವೆ ಕೋಟಿ ನೆರೆ, ಮಾಸಲು ಬಣ್ಣವುಂಟು. ಇಲ್ಲಿಯೂ ಒಂದು ಲಕ್ಷ ತೆರದ ಅಂತರ ವಿಶೇಷ ಇರುತ್ತವೆ. ಎಲ್ಲೆಲ್ಲಿನದೊ ಯಾವ ಯಾವದೊ ಸುದ್ದಿ ಸಮಾಚಾರ ಸಂಗ್ರಹಿಸಿ ನೆನಪಿನಲ್ಲಿಟ್ಟುಕೊಂಡು, ಜೊತೆಯವರಲ್ಲಿ 'ಅಬ್ಬ! ಇವರಿಗೆಷ್ಟು ಸಂಗತಿ ಗೊತ್ತು!' ಎಂದು ಉಬ್ಬಸವುಂಟಾಗುವಂತೆ ಮಾತನಾಡ ಬಲ್ಲವರಿರುತ್ತಾರೆ. ಅಷ್ಟೇ; ಅದಕ್ಕಿಂತ ಹೆಚ್ಚು ಸಂಗತಿ ಅವರಿಗೆ ತಿಳಿಯದು. ಅಂಥವರಿಗೆ ಎಲ್ಲೆಲ್ಲಿಯೂ ಪ್ರವೇಶ ಉಂಟು. ಅವರು ಸಾಮಾನ್ಯವಾಗಿ ಮಾತುಗಾರರು, ಮೋಜಿನವರು. ಅವರ ಮಾತು ಬೆಡಗಿನದು. ಆದರೆ ಒಂದು ಲಕ್ಷ ಸಂಗತಿಗಳು ಚೂರುಪಾರಾಗಿ ಮಾತ್ರ ಅವರ ಅರಿವಿನಲ್ಲಿರುತ್ತವೆ. ಹುಲ್ಲಿನ ಹರಹಿನ ಹಾಗೆ. ಕಸದ ಬುಟ್ಟಿಗಳಂತೆ ಕೂಡ. ಒಡ್ಡಿದ ಹಸಿರು ಹಾಸು; ಬೇರು, ಕಾಳು ಇಲ್ಲ. ಆ ಪ್ರತಿ ಸಂಗತಿಗೆ ಸಂಬಂಧಿಸಿದಂತೆ ಅವರಿಗೆ ಇನ್ನೇನೂ ತಿಳಿಯದು. ಈ ಸಂಗತಿಗಳನ್ನೆಲ್ಲ ವರ್ಗಗಳಾಗಿ ವಿಂಗಡಿಸಿ ಒಂದಕ್ಕೊಂದಕ್ಕೆ ಏನು ಗ್ರಹಚಾರ ಹಿಡಿದಿದೆ ಎಂದು ತಿಳಿಸಲಾರರು. ಯಾವುದರ ಪ್ರಯೋಜನವೇನು? ಯಾವುದು ಗುಣ, ಯಾವುದು ದೋಷ? ಏಕೆ?– ಎಂಬುದನ್ನು ತಿಳಿಸಲಾರರು. ಎಂದರೆ ಅವರ ತಿಳಿವಳಿಕೆಯಲ್ಲಿ ಕ್ರಮ ಸಂಬಂಧದ ಅರಿವೂ ವ್ಯವಸ್ಥೆಯೂ ಇರವು. ಒಂದು ಕಟ್ಟುಪಾಡಿಗೆ ಅಂಥವರ ಮನಸ್ಸು ಒಳಪಟ್ಟಿಲ್ಲವಾದ್ದರಿಂದ ಅಸಂಗತವಾದ ಏನೇನೊ ನುಡಿಯುತ್ತಿರುತ್ತವೆ. ಇದು ಹೊರಗಿನದು; ಇದು ಒಳಗಿನದು; ನಿನ್ನೆಯದು, ನಾಳೆಯದು. ನಿಜ, ಸುಳ್ಳು ಅಥವಾ ಸಂದೇಹ. ಇದನ್ನು ನಂಬಬಹುದು, ಬಾರದು; ಇದು ಸರಿ, ತಪ್ಪು; ಪ್ರಯೋಜನ ಉಳ್ಳದ್ದು, ಅಲ್ಲ; ಇದು ಇಂಥ ಕಾರಣ, ಇದು ಕಾರ್ಯ, ಇದು ಫಲ ಎಂಬುದೂ ಗೊತ್ತಿಲ್ಲ. ಜೀವನದ ಪ್ರತಿಯೊಂದು ರಂಗವನ್ನೂ ಸ್ಪಷ್ಟವಾಗಿ ವಿಂಗಡಿಸಿಕೊಂಡು, ಆ ರಂಗಕ್ಕೆ ಮಾತ್ರವೇ ಸೇರಿದ ಅಂಶಗಳನ್ನು ಸರಿಯಾಗಿ ಸೂಕ್ತವಾಗಿ ಕೂಡಿಸಿ, ಅಲ್ಲಿ ಆ ಸಂಗತಿಗಳಿಗೆ ಯಾವ ಬಗೆಯ ನೆಲಸಿದೆ ಎಂಬುದನ್ನು ಅರಿತು, ಆ ಭಾಗವನ್ನು ವಿಶೇಷವಾಗಿ ಪರಿಶೀಲಿಸುವುದೂ, ಅದರಲ್ಲಿ ಒಂದು ಕ್ರಮವನ್ನು ಅನುಸರಿಸುವುದೂ, ಅವಕ್ಕೆ ಸಂಬಂಧಿಸಿದಂತೆ ಇದು ಹೀಗೆ, ಬೇರೆಯಲ್ಲ ಎಂದು ಗೊತ್ತಾಗಿ ತಿಳಿದು, ಇದರ ಸ್ವರೂಪ–ಎಂದರೆ ಮುಖ್ಯ ಲಕ್ಷಣ–ಯಾವುದು ಇದರ ಉಪಲಕ್ಷಣಗಳು ಯಾವುವು, ಇದು ಯಾಕೆ ಹೀಗಾಯಿತು, ಇದರ ಕ್ರಿಯೆ ಹೇಗೆ, ಇದರ ಪ್ರಯೋಜನಗಳನ್ನು ಹೇಗೆ ಹೇಗೆ ಪಡೆಯಬಹುದು? – ಕೆಟ್ಟದಕ್ಕೆ, ಒಳ್ಳೆಯದಕ್ಕೆ? – ಎಂದು ತಿಳಿದು ವ್ಯವಸ್ಥೆಗೊಳಿಸಿಕೊಂಡರೆ, ಆಗ ಆ ವರ್ಗೀಕರಣ, ಬಳಸುವ ಕ್ರಮ, ವ್ಯವಸ್ಥೆ, ಗುಣದೋಷಗಳ ತಿಳಿವಳಿಕೆ ಅದನ್ನು ಜ್ಞಾನದ ಒಂದು ಖಂಡವಾಗಿ, ಶಾಸ್ತ್ರವಾಗಿ ಮಾಡುತ್ತದೆ.



ಸಂಸ್ಕೃತದಲ್ಲಿ ಮೂರು ಮಾತುಗಳು ಈ ಬಗೆಗೆ ಇವೆ. ಜ್ಞಾನ–ಜ್ಞಾತೃ–ಜ್ಞೇಯ ಎಂದು. ಸಾಮಾನ್ಯಾರ್ಥದಲ್ಲಿ ಅದನ್ನು ಇಲ್ಲಿ ಸೂಚಿಸುತ್ತೇನೆ. ವೇದಾಂತದ್ದು ಪರಿಭಾಷೆಯ ಅರ್ಥ. ಯಾವುದು ತಿಳಿಯಬೇಕಾದ್ದಿದೆ ಎಂಬುದು ಜ್ಞೇಯ. ಜ್ಞಾತೃ ತಿಳಿಯಲು ಯತ್ನಿಸುವವನು. ಜ್ಞಾನ ಇವನು ತಿಳಿವ ಯತ್ನದ ಫಲ. ಲೋಕ ಹುಟ್ಟಿದ ಕಾಲದಿಂದ– ಎಂದರೆ ಮನುಷ್ಯನು ತನ್ನ ಸುತ್ತ ಮುತ್ತಲಿನ ಮತ್ತು ಎಲ್ಲ ವಿಶೇಷಗಳನ್ನೂ ತಿಳಿದು ಗೊತ್ತಾಗಿ ಮಂದಟ್ಟು ಮಾಡಿಕೊಂಡುಬಂದ ಕಾಲದಿಂದ–ಅವನ ಮನಸ್ಸಿನಲ್ಲಿ ಒಂದು ಜ್ಞಾನದ ಪ್ರಪಂಚ ಹುಟ್ಟಿಕೊಂಡಿರುತ್ತದೆ. ಏನನ್ನಾದರೂ ಹೇಳಬೇಕೆನ್ನಿಸಿದಾಗ ಅದಕ್ಕೆ ಅವನು ನುಡಿ ಕೊಡುತ್ತಾನೆ. ಅದಕ್ಕೆ ಮಾತುಗಳನ್ನು ನಿರ್ಮಾಣ ಮಾಡಿಕೊಂಡಿರುತ್ತಾನೆ. ಏನನ್ನಾದರೂ ಮಾಡಬೇಕಾದಾಗ ಅದರ ಬೆಳಕಿನಲ್ಲಿ ನಡೆಯುತ್ತಾನೆ. ಅವನ ಸಂತೋಷ, ಹಿಮ್ಮೆಟ್ಟು, ಭೀತಿ, ಆಸೆ ಈ ತಿಳಿವಳಿಕೆಯಿಂದ ರಚಿತವಾಗುತ್ತವೆ. ಇದನ್ನು ಕಲಿಸುವುದು ಶಿಕ್ಷಣ. ಇದನ್ನು ಬರೆದಿಟ್ಟರೆ ಲೇಖನವಾಗುತ್ತದೆ. ಇನ್ನಷ್ಟು ಆಳವಾಗಿ ಈ ಪ್ರಪಂಚವನ್ನು ಅರಿಯಲು ಯತ್ನಿಸಿದರೆ, ಇಲ್ಲಿನ ಸೂಕ್ಷ್ಮ ವಿವರ, ಮರ್ಮ, ಅಂತರಾಂತರಗಳನ್ನು ತಿಳಿಯಲು ಯತ್ನಿಸಿದರೆ ಅದು ಒಂದು ವ್ಯಾಸಂಗವಾಗುತ್ತದೆ. ಸಾವಿರಾರು ವರ್ಷಗಳಿಂದ ಪ್ರಪಂಚದಲ್ಲಿ ಇದು ನಡೆದಿದೆ. ಈ ತಿಳಿವಳಿಕೆ ಎಲ್ಲ ಜನದ ಜೀವನದಲ್ಲಿಯೂ ಅವರನ್ನು ನಡಸಿದೆ.

ಜ್ಞಾನ ಪೂರ್ತಿಯಾಗಿ ಮನುಷ್ಯನಿಗೆ ಸಂಬಂಧಿಸಿದ್ದು. ಭೂತಗಳಿಗೆ ದೇವತೆಗಳಿಗೆ ಹೇಗೊ ಏನೊ; ನಮಗೆ ತಿಳಿಯದು. ಪ್ರಾಣಿಗಳಿಗೆ ಯಾವ ಬಗೆಯ ತಿಳಿವಳಿಕೆ ಇದೆಯೊ ಎಷ್ಟೊ–ಅದನ್ನು ಸ್ವಲ್ಪ ಮಟ್ಟಿಗೆ ಗ್ರಹಿಸಬಹುದು. ಅವುಗಳ ಪ್ರತಿಕ್ರಿಯೆಯಿಂದ, ನಡವಳಿಕೆಯಿಂದ ರೂಢಿಸಿಕೊಳ್ಳಬಹುದು. ಆದರೆ ಎಷ್ಟು ಮಟ್ಟಿಗೆ ಮನುಷ್ಯನ ಜ್ಞಾನ ಅವಕ್ಕೆ – ಕುದುರೆ, ನಾಯಿ, ದುಂಬಿ, ಇರುವೆ ಇವುಗಳಲ್ಲಿ ವಿಶೇಷವಾಗಿ – ವೇದ್ಯವಾಗಬಲ್ಲದು: ಅದನ್ನು ಸಂವೀಕ್ಷಿಸಿ ವಿವರಿಸಿದವರಿದ್ದಾರೆ. ಆದರೂ ಆ ತಿಳಿವಳಿಕೆ ಸಾಲದು. ಸಸ್ಯಾದಿಗಳಿಗೂ ಜೀವವಿಲ್ಲವೆಂದು ನಾವು ತಿಳಿದಿರುವ ಇತರ ವಸ್ತುಗಳಿಗೂ ಇದರ ಪರಿಚಯ ಇಲ್ಲ. ಅವು– ಮೇಲಾಗಿ ಬೀಳಾಗಿ – ವಸ್ತುಗಳು ಮಾತ್ರ. ಅವನ್ನು ಹೇಗೆ ಬೇಕಾದರೆ ಹಾಗೆ ನಮ್ಮ ಬದುಕಿಗೆ ಉಪಯೋಗಿಸಿಕೊಳ್ಳಬಹುದು ಎಂದಾಗ ಮನುಷ್ಯನ ಜೀವನವನ್ನು ಒಂದು ಭಾಗವಾಗಿ ಮಾಡಿಕೊಂಡು, ಹೊರಗಿನ ಇನ್ನೆಲ್ಲವನ್ನೂ ಪ್ರಕೃತಿ ಅಥವಾ ನಿಸರ್ಗ ಎನ್ನುತ್ತೇವೆ. 'ಸೃಷ್ಟಿ'[1]ಯಲ್ಲಿ ಇದೊಂದು ಬಳಕೆಯ ಮಾತು. ಪ್ರಕೃತಿಯ ಒಂದು ಭಾಗವೇ ಆದ ಮನುಷ್ಯನು ತನ್ನನ್ನು ಬೇರೆಯಾಗಿ ಮಾಡಿಕೊಂಡು ಕಾರ್ಯಭಾರ ಮಾಡುವುದು ಪದ್ಧತಿ. ಒಟ್ಟು ಪ್ರಕೃತಿಯಲ್ಲಿ ಮಾನವ ಪ್ರಕೃತಿಯೂ ಸೇರಿದ್ದೇ. ಅದರಿಂದ ಮಾನವನ ಪ್ರಕೃತಿ ಮಾರ್ಪಡುತ್ತದೆ. ಮನುಷ್ಯನು ಪ್ರಕೃತಿಯನ್ನು ಹೇಗೆ ಬೇಕು ಎಂದರೆ ಹಾಗೆ ತನ್ನ ಅನುಕೂಲಕ್ಕೆ ತಿರುಗಿಸಿಕೊಳ್ಳಬಲ್ಲನೊ ಅಷ್ಟೇ

1. ಈ ಮಾತನ್ನು ಕುರಿತ ಚರ್ಚೆ ಬಹುವಾಗಿ ಬೆಳೆದಿದೆ.

ಬಗೆಯಲ್ಲಿ ಅಲ್ಲದಿದ್ದರೂ ತಕ್ಕಮಟ್ಟಿಗೆ ಹೊರಗಿನ ಪ್ರಕೃತಿ ಮನುಷ್ಯನ ಬದುಕನ್ನೂ ಮಾರ್ಪಡಿಸುತ್ತದೆ: ವಿರುದ್ಧವಾಗುತ್ತದೆ; ನೆರವಾಗುತ್ತದೆ. ನೆರವಾಗುವುದನ್ನು ಇವನು ಉಳಿಸಿಕೊಳ್ಳುತ್ತಾನೆ. ವಿರುದ್ಧವಾದುದನ್ನು ಮೆಟ್ಟುತ್ತಾನೆ; ನಾಶಮಾಡುತ್ತಾನೆ; ಅಥವಾ ಪಳಗಿಸಿಕೊಳ್ಳುತ್ತಾನೆ. ಮನುಷ್ಯನ ಚರಿತ್ರೆ ಹೀಗೆ ರೂಪಗೊಂಡಿದೆ. ಇದಕ್ಕೆಲ್ಲ ಸಂಬಂಧಿಸಿದಂತೆ ಇವನ ತಿಳಿವಳಿಕೆ ಕಾಲಕಾಲಕ್ಕೂ ವ್ಯತ್ಯಾಸವಾಗುತ್ತ ಬಂದಿದೆ. ತಪ್ಪು, ಸೋಲು, ನಷ್ಟಗಳನ್ನು ಸರಿಪಡಿಸಿಕೊಂಡು ತನ್ನ ಹಿತಕ್ಕೆ ಎಲ್ಲವನ್ನೂ ಬಳಸಿಕೊಳ್ಳಲು ಮನುಷ್ಯನು ಯತ್ನಿಸಿದ್ದಾನೆ. ಇವನು ಹೇಗೆ ತನ್ನ ಹೊರಗಿನ ಪ್ರಪಂಚವನ್ನು–ಎಂದರೆ ಮನುಷ್ಯನಲ್ಲದ ಭಾಗವನ್ನು – ಹೀಗೆ ಬಳಸಿಕೊಂಡಿದ್ದಾನೊ ಅದು ಇವನ ಸಂಸ್ಕೃತಿ; ಇವನಿಗೆ ಮೂಲಸಾಮಗ್ರಿ, ಸಲಕರಣೆ, ಸಾಧನೆ ಅಥವಾ ಸಜ್ಜಿನ ಭಾಗ. ಪ್ರಕೃತಿಯಿಂದ ಇವನು ಒದಗಿಸಿಕೊಂಡದ್ದು ಪ್ರಯೋಜನಗಳು ಇವನ ಕೃಷಿ ಅಥವಾ ವ್ಯವಸಾಯದ ಫಲ: ಎಂದರೆ ಇವನ ಕಾರ್ಯಗಳ ಸಿದ್ಧಿಕಾಂಡ. ಪ್ರಕೃತಿ–ಸಂಸ್ಕೃತಿ ಎರಡೂ ದೊಡ್ಡ ಮಾತುಗಳು. ಮೂಲಭೂತವಾಗಿ ಪ್ರಪಂಚದಲ್ಲಿ ಇರುವುದೆಲ್ಲ ಪ್ರಕೃತಿ; ಮನುಷ್ಯನು ಮಾಡಿಕೊಂಡಿರುವುದೆಲ್ಲ ಸಂಸ್ಕೃತಿ[2].

ಇದು ಹೊರಗಿನ ಭಾಗಕ್ಕೆ ಸಂಬಂಧಿಸಿದ ಅಂಶವಾದರೆ ತನ್ನ ಶಕ್ತಿಯನ್ನು ಹೆಚ್ಚಿಸಿ ಕೊಳ್ಳಲು, ತನಗೆ ವಿರುದ್ಧವಾದುದನ್ನು ನಿವಾರಿಸಿಕೊಳ್ಳುವುದಕ್ಕೆ ಒಂದು ಕಡೆ ಸಾಧನಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಅದು ಸಜ್ಜು, ಸಾಧನೆ, ಸಾಮಗ್ರಿ. ಏತಕ್ಕೊ, ಎತ್ತಲೊ, ಏನನ್ನೊ ಎದುರಿಸಲು ಶಕ್ತಿ ಬೇಕು. ಮೈ ಕೈಕಾಲುಗಳನ್ನು ಗಟ್ಟಿಮಾಡಿಕೊಳ್ಳುತ್ತಾನೆ. ಹತ್ತಿರದ ಆತ್ಮೀಯ ವರ್ಗವನ್ನು ಕಲ್ಪಿಸಿಕೊಂಡು ಹೆಂಡತಿ ಮಕ್ಕಳು, ಮನೆಯವರು ನೆರೆಯವರು, ಊರವರು ದೇಶದವರು ಎಂದು ಸಾಮಾಜಿಕ ಸಂಬಂಧಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಇವೆಲ್ಲ ಹೊರಗಿನ ಮಾರ್ಗಗಳು. ಇವುಗಳ ಹಿಂದೆ ಇವನ ಮನಸ್ಸಿನ ಶಕ್ತಿಯೊಂದು ಇರುತ್ತದೆ. ಇವನ ಪ್ರವೃತ್ತಿಗಳ ಭಾಗ; ಆಲೋಚನೆ ಅದಕ್ಕೆ ಸೇರುತ್ತದೆ. ಸ್ಪಷ್ಟವಾಗಿ ಅದು ಒಂದು ಕಡೆ ರಾಗದ್ವೇಷಗಳ ಪ್ರಪಂಚ. ಇನ್ನೊಂದು ಕಡೆ ಚಿತ್ತವ್ಯಾಪಾರ; ಬುದ್ಧಿ ಅಥವಾ ಯುಕ್ತಿ (Reason). ಇನ್ನೊಂದು ಇಚ್ಛಾ (Will). ಮನಸ್ಸು ಅಥವಾ ಚಿತ್ತ ಸಮಸ್ತ ಮನೋವ್ಯಾಪಾರವನ್ನೂ ವ್ಯಾಪಿಸುವುದು. ಇಚ್ಛೆ ಏನೇನನ್ನೊ ಬಯಸುವುದು, ನಿಶ್ಚಯಿಸುವುದು. ಬುದ್ಧಿ ಈ ಎಲ್ಲವನ್ನೂ ಅರ್ಥಮಾಡಿಕೊಂಡು ಯಾವುದು ಯುಕ್ತ, ಅಲ್ಲ; ಯಾವುದು ಮೇಲು, ಬೀಳು; ಯಾವುದು ಸಮಯ, ಅಸಮಯ; ಯಾವುದು ಸಾಧಕ, ಬಾಧಕ – ಎಂದು ಮುಂತಾಗಿ ಮಾರ್ಗವನ್ನು ತೋರಿಸಿಕೊಡುತ್ತದೆ. ಈ ಮನೋಜಗತ್ತು ಮನುಷ್ಯಜೀವಕ್ಕೆ ವಿಶೇಷ ಸಂಪತ್ತು. ಇತರ ಪ್ರಾಣಿವರ್ಗದಿಂದ ಮನುಷ್ಯನನ್ನು ವಿಶೇಷ, ಬೇರೆ ಮಾಡಿರುವ ಲಕ್ಷಣ; ಅವನ ಪರಮಸಾಧನಗಳಿಗೆ ನೆಲೆ, ಗುಪ್ತಿ ಸ್ಥಾನ. ಈ ಮೂರೂ ಬಗೆಯ ಸಂಪತ್ತಿನಿಂದ ಮನುಷ್ಯ–ಸಂಸ್ಕೃತಿ,

2. ಒಟ್ಟರ್ಥದಲ್ಲಿ ಹೀಗೆ ಹೇಳುತ್ತಿದೆ ಮಾತ್ರ.



ನಾಗರಿಕತೆ, ಸಮಸ್ತ ಜ್ಞಾನ–ವಿಜ್ಞಾನ ಪ್ರಂಚ ಬೆಳೆದಿದೆ. ಮೂಲಭೂತವಾಗಿ ಮನುಷ್ಯನ ಚರಿತ್ರೆಯನ್ನೆಲ್ಲ ನಡಸಿ ಅವನನ್ನು ಇವೊತ್ತಿನ ಸ್ಥಿತಿಗೆ ತಂದಿರುವುದು ಇದು. ಇದಕ್ಕೆ ಸಂಬಂಧಿಸಿದಂತೆಯೂ ಮನುಷ್ಯ ಆಳವಾಗಿ ಯೋಚನೆಮಾಡಿ ಅನೇಕ ತೀರ್ಮಾನಗಳಿಗೆ ಬಂದಿರುತ್ತಾನೆ. ಆ ಎಲ್ಲ ಅಂಶಗಳನ್ನೂ ಕುರಿತು ಪರ್ಯಾಲೋಚನೆ ಮಾಡಿ ಶಾಖೆ ಶಾಖೆ ಮಾಡಿಕೊಂಡು, ವಿವೇಚನೆಗಳನ್ನು ಬಲಿಸಿ, ಆ ಸಂದರ್ಭದಲ್ಲಿಯೂ ಜ್ಞಾನ–ವಿಜ್ಞಾನಗಳನ್ನು ಬಳಸಿಕೊಂಡಿರುತ್ತಾನೆ. ಯಾವ ಒಂದು ಕಾಲದಲ್ಲಿಯೇ ಆಗಲಿ, ಇದೆಲ್ಲ ಸೇರಿ ತಿಳಿವಳಿಕೆಯ ಪ್ರಪಂಚ – Knowledge: ವಾಸ್ತವ ಪ್ರಪಂಚ–ವಸ್ತು ಪ್ರಪಂಚ ದೈವದತ್ತ. ಜ್ಞಾನ ಮನುಷ್ಯ ಕಟ್ಟಿದ್ದು. ಬುದ್ಧಿಯಿಂದ–ಜ್ಞಾನದಿಂದ ಉತ್ಪತ್ತಿ ಮಾಡಿಕೊಂಡ ಇನ್ನೊಂದು ಅವನ ಎರಡನೆಯ ಆವರಣ. ಈ ಎರಡೂ ಆವರಣ ಗಳನ್ನು ದುಡಿಸಿ ಕೊಂಡು ತಾನು ಅದಕ್ಕೆ ತೂಗುತ್ತ ಲೋಕ ಚರಿತ್ರೆಯನ್ನು ಮನುಷ್ಯನು ಬೆಳಸಿದ್ದಾನೆ. ಯಾವುದು ಎಲ್ಲಿ ಹೇಗೆ ತೊಡಗಿತು, ಬೆಳೆದು ಮಾರ್ಪಟ್ಟು ಇವೊತ್ತಿನ ಸ್ಥಿತಿಗೆ ನುಡಿಗೆ ಗತಿಗೆ ಮುಟ್ಟಿದೆ, ನಾಳೆ ಏನಾದೀತು, ಆಗಬೇಕು ಎಂಬುದು ಅವನ ಪ್ರಜ್ಞಾರಂಗ; ಕ್ರಿಯಾರಂಗ. ವಿಜ್ಞಾನ–ಜ್ಞಾನ ಇದರ ಅಂಗಗಳು, ಅಂಶಗಳು. ಪ್ರತಿ ದೇಶದಲ್ಲಿಯೂ ಇದು ಮೊದಲಿಂದ ನಡೆದಿದೆ. ಈ ಬಗೆಗೆ ಏನು ಕಾರ್ಯ ನಡೆದಿದೆ, ಜನ ಹೇಗೆ ಬದುಕಿದ್ದಾರೆ, ಬೆಳೆದಿದ್ದಾರೆ, ಏನು ಬಿಟ್ಟಿದ್ದಾರೆ, ಕಟ್ಟಿದ್ದಾರೆ, ಏನು ಹೇಗೆ ಆಗಲು ಬಯಸಿದ್ದಾರೆ, ಸಾಧನ ಸಮಾರಂಭಗಳಲ್ಲಿ ಶಿಸ್ತು ವ್ಯವಸ್ಥಾಪನೆಗಳನ್ನು ಮಾಡಿ ಕೊಂಡಿದ್ದಾರೆ ಎಂಬುದರ ಚಿತ್ರ ಅದ್ಭುತವಾದ ಸಂಗತಿ. ಇದು ಚರಿತ್ರೆ. ಇದರ ಅಂಶ ಗಳನ್ನೂ ವಿವರಗಳನ್ನೂ ಪರಿಶೀಲಿಸಿ, ಬೋಧನೆ, ಪರಿಷ್ಕರಣ, ಪ್ರಯೋಗ ನಡಸ ಬಹುದು. ಒಟ್ಟಿನಲ್ಲಿ ತತ್ವಜ್ಞಾನದ ಸೌಧಗಳನ್ನು ರಚಿಸಿಕೊಳ್ಳಬಹುದು. ಇವು ಶಾಸ್ತ್ರಗಳು, ತತ್ವಜ್ಞಾನ (Philosophy); ದರ್ಶನಗಳು. ಇವುಗಳ ಸಾಮಾನ್ಯ ಸ್ವರೂಪವನ್ನು ಬಿತ್ತರಿಸುವ ಸ್ಥೂಲ ಯತ್ನ ಇಲ್ಲಿ ನಡೆಯುತ್ತದೆ.

## – 2 –

ನಮ್ಮ ಸುತ್ತ ಹೊರಪ್ರಪಂಚವಿದೆ. ಪ್ರಪಂಚ ಎಂದರೆ ವಿಸ್ತಾರವಾದ್ದು ಎಂದರ್ಥ. ಇಂದು ಪೂರ್ವಗೋಳ, ಪಶ್ಚಿಮಗೋಳ ಎಂಬ ಎರಡರ್ಧಗಳು ಸೇರಿ ಭೂಮಂಡಲ ವಾಗಿದೆ. ಇದರ ಸುತ್ತಲೂ ಮಹಾಸಾಗರವಿದೆ. ನೆಲದ ನೆಲಸಿಗಿಂತ ನೀರಿನ ನೆಲಸೇ ಹೆಚ್ಚು ವಿಸ್ತಾರವಾದದ್ದು. ಇಲ್ಲಿನ ತುಂಬಾ ಎತ್ತರವಾದ ಪರ್ವತಸಾಲು ನಮ್ಮ ಹಿಮಾಲಯ. ಅದರ ಶಿಖರ ಎವರೆಸ್ಟ್ ಎಂಬುದು. ಅತಿ ಆಳವಾದ ಮಹಾಸಾಗರ ಪೆಸಿಫಿಕ್ ಎಂಬ ಶಾಂತಿಸಾಗರ. ಅಲ್ಲಿ ಶಾಂತಿ ಇದೆಯೊ ಇಲ್ಲವೊ, ಅದಕ್ಕೆ ಆ ಹೆಸರಿದೆ. ಈ ಭೂಭಾಗ ವಿವರಣೆ, ಜಲಭಾಗದ ವಿವರಣೆ ಇವು ವಿಸ್ತಾರಕ್ಕಿಂತ ಹೆಚ್ಚು ರಂಜನೆಯುಳ್ಳವು ಎನ್ನುತ್ತಾರೆ. ಈ ಎಲ್ಲವನ್ನೂ ಆವರಿಸಿ ನಿಂತಿರುವುದು ಆಕಾಶ; ಇದನ್ನು Sky (ಬಾನು) ಎಂದರೂ ಇದು ಆಳವಾದ ವಿಶಾಲವಾದ ಬಯಲು (Space); ಅನಂತ ನೆಲಸಿನದು. ಖಜಾನೆಯಲ್ಲಿ ಆಕಾಶವಿದೆಯೆಂದರೆ ಅಲ್ಲೇನೂ ಇಲ್ಲ ಎಂದರ್ಥ.

ಆಕಾಶದಲ್ಲಿ ಮೋಡಗಳು ಹಾರಾಡುತ್ತಿರುವುದು ಕಾಣುತ್ತಿರುತ್ತದೆ. ಚಂದ್ರ, ಸೂರ್ಯ, ನಕ್ಷತ್ರ ಕಾಣುತ್ತವೆ. ಭೂಮಿಯನ್ನು ಅಗೆದರೆ ಕಲ್ಲು, ಮಣ್ಣು, ಲೋಹ, ನೀರು, ತೈಲ ದೊರೆಯುತ್ತವೆ. ಸಮುದ್ರಗಳ ಆಳದಲ್ಲಿಯೂ ಹಾಗೇ. ಬಗೆಬಗೆಯ ಪ್ರಾಣಿವರ್ಗ, ಸಸ್ಯವರ್ಗ, ತೈಲ, ಅಮೂಲ್ಯವಾದ ಇತರ ಪದಾರ್ಥಗಳು ಅಲ್ಲಿಯೂ ಸಿಕ್ಕುತ್ತವೆ. ಇವು ನೆಲ–ಜಲ ಸಂಪತ್ತು. ಇವುಗಳ ತಳವನ್ನು ಮುಟ್ಟಬಹುದೇನೊ. ಆಗ ಅಲ್ಲಿ ಸಿಕ್ಕುವುದೇನು ಎಂಬುದನ್ನು ನಾವು ಭಾವಿಸಲಾರೆವು. ನಮ್ಮ ಭೂಮಂಡಲ ಸೂರ್ಯನ ಸುತ್ತ ಸುತ್ತುತ್ತಿದೆಯಂತೆ. ತನ್ನ ಅಕ್ಷದ ಮೇಲೆ ಎಡದಿಂದ ಬಲಕ್ಕೆ ಉರುಳಿಕೊಂಡು ಸೂರ್ಯನ ಸುತ್ತ ಸುತ್ತುತ್ತಿದೆಯಂತೆ. ಒಂದು ಸುತ್ತು ಪೂರ್ತಿ ಬರಲು ಒಂದು ಕಾಲದ ಲೆಕ್ಕವನ್ನು ಹಾಕಿದ್ದಾರೆ. ಆಕಾಶ ಹೇಗೆ ಒಂದು ಕಲ್ಪನೆಯೊ ಕಾಲವೂ ಹಾಗೇ. ಅದಕ್ಕಿಂತ ಹೆಚ್ಚು ಸೂಕ್ಷ್ಮವಾದುದು. ಸದ್ಯಃ ನಾವು ಸೂರ್ಯ ಚಂದ್ರರ ಮೂಡು–ಮುಳುಗುಗಳಿಂದ ಈ ಕಾಲವನ್ನು ಅಳೆಯುತ್ತೇವೆ. ಸೂರ್ಯನಿಂದ ಅಳೆಯುವುದು ಕಷ್ಟವಾಗಿ, ಹೆಚ್ಚು ಕ್ಲುಪ್ತವಾಗಿ ಸ್ಪಷ್ಟಪಡುವ ಚಂದ್ರನ ಮೂಡು–ಮುಳುಗುಗಳಿಂದ ಅಳೆಯುತ್ತೇವೆ. ಚಂದ್ರ ಒಂದು ಗ್ರಹ. ಸೂರ್ಯನ ಸುತ್ತ ಭೂಮಿ ಸುತ್ತುವ ಹಾಗೆ ನಮ್ಮ ಭೂಮಿಯ ಸುತ್ತ ಚಂದ್ರ ತಿರುಗುತ್ತದೆ. ಇದು ಒಂದು ಸುತ್ತು ಭೂಮಿಯನ್ನು ಸುತ್ತಲು ಸುಮಾರು 28– 29 ದಿವಸಗಳಾಗುತ್ತವಂತೆ. ಚಂದ್ರ ಎಂಬುದಕ್ಕೆ ಕನ್ನಡದ ಹೆಸರು ತಿಂಗಳು. ಈ ತಿಂಗಳಲ್ಲಿ ದಿನಾ ಸೂರ್ಯೋದಯದಿಂದ ಸೂರ್ಯಾಸ್ತಮಯದ ವರೆಗೆ ಹಗಲು, ಅಸ್ತಮಯದಿಂದ ಉದಯದವರೆಗೆ ರಾತ್ರೆ. ಒಂದು ಹಗಲು, ಒಂದು ರಾತ್ರಿ ಸೇರಿ ಒಂದು ದಿನ. ಇದು ಕಾಲದ ಅಳತೆಯನ್ನು ಸೂಚಿಸುವ ಒಂದು ಮಾರ್ಗ. ಭೂಮಿಯನ್ನು ಸುತ್ತುವ ತಿಂಗಳು ಸೂರ್ಯನ ಪ್ರಬಲ ಪ್ರಕಾಶದಿಂದಾಗಿ ಹಗಲಲ್ಲಿ ಕಾಣುವುದಿಲ್ಲ, ರಾತ್ರಿ ಒಂದು ಕ್ರಮದಲ್ಲಿ ಕಾಣುತ್ತದೆ. ಸೂರ್ಯನಿಂದ ಅಳೆದ ದಿನದ (ಅಹೋರಾತ್ರಿ) ಸುಮಾರು 14 ಚಿಲ್ಲರೆ ದಿವಸಗಳ ಕಾಲ ಚಂದ್ರನು ಸಣ್ಣಗೆರೆಯಂತೆ ಕಂಡು ತುಂಬು ಗುಂಡಾಗಿ ಕಾಣುವ ಒಂದು ಭಾಗವನ್ನು ಶುಕ್ಲಪಕ್ಷ ಎನ್ನುತ್ತೇವೆ. ಅಲ್ಲಿಂದ ದಿನದಿನಕ್ಕೆ ಸಣ್ಣದಾಗಿ ಕಡೆಯದಿನ ಚಂದ್ರನು ಪೂರ್ತಿ ಕಾಣದೆ ಹೋಗುವ ದಿನಗಳನ್ನು ಕೃಷ್ಣಪಕ್ಷ ಎನ್ನುತ್ತೇವೆ. ಆ ದಿನವನ್ನು ಇಂಗ್ಲಿಷ್‌ನಲ್ಲಿ ಕರೆವಂತೆ "New Moon Day" – ಹೊಸ ತಿಂಗಳ ದಿವಸ – ಎಂದು ಕರೆಯುತ್ತೇವೆ. ಇಂಗ್ಲಿಷಿನ ಮೂನ್ (ಚಂದ್ರ) ಇಂದಲೇ 'ಮನ್ತ್' ಬಂದಿರುವುದು (Month). ಸೂರ್ಯನ ಪ್ರಕಾರ ಅಳೆದ 365 ಚಿಲ್ಲರೆ ದಿನಗಳಿಗೆ ಒಂದು ವರ್ಷವಾದರೆ, ಚಂದ್ರನ ಪ್ರಕಾರ ಸುಮಾರು ಹನ್ನೆರಡು ತಿಂಗಳಾಗುತ್ತದೆ. ತಿಂಗಳನ್ನು ಪಕ್ಷಗಳನ್ನಾಗಿ ಮಾಡಿದರೆ ಅದು 24. ಒಟ್ಟು ಲೆಕ್ಕ ಒಂದು ವಾರಕ್ಕೆ ಏಳು ದಿನವಾಗಿಟ್ಟುಕೊಂಡು 52 ವಾರ. ದಿನಕ್ಕೆ 24 ಗಂಟೆ, ಗಂಟೆಗೆ 60 ಮಿನಿಟ್ಟುಗಳು, ಒಂದು ಮಿನಿಟ್ಟಿಗೆ 60 ಸೆಕೆಂಡ್ಸ್ ಎಂದು ಸ್ಥೂಲವಾಗಿ ಕಾಲವನ್ನು ನಾವು ವಿಂಗಡಿಸುತ್ತೇವೆ. ಹೀಗೆ ಈ ಕಾಲ ಯಾವ ಯಾವ ದೇಶದಲ್ಲಿ ಹೇಗೆ ಹೇಗೆ ಅಳೆಯುತ್ತಾರೆ, ಒಂದು ದೇಶದಲ್ಲಿನ ಕಾಲಕ್ಕೂ ಇನ್ನೊಂದು ದೇಶದಲ್ಲಿನ ಕಾಲಕ್ಕೂ ಏನು ವ್ಯತ್ಯಾಸವಿದೆ ಎಂದು ಗೊತ್ತು ಮಾಡಿದಾಗ, ಒಂದು



ಕಡೆ ರಾತ್ರಿಯಾದಾಗ ಇನ್ನೊಂದು ಕಡೆ ಹಗಲಾಗಿರುತ್ತದೆ. ಈ ಕಾಲದ ಮಾನವನ್ನು ನೆಲವನ್ನು ಅಳೆಯುವಂತೆ, ಸಮುದ್ರವನ್ನು ಅಳೆಯುವಂತೆ ಅಳೆಯುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಭೂವಿವರಣೆ ಮತ್ತು ಭೂಚರಿತ್ರೆ, ಸಾಗರ ಪ್ರಪಂಚ ಮತ್ತು ಅದರ ಚರಿತ್ರೆ ವಿಶೇಷವಾಗಿ ರೂಪುಗೊಂಡಿವೆ.

ಕಾಲ ದೇಶ ವರ್ತಮಾನ ಪರಿಸ್ಥಿತಿ ಸನ್ನಿವೇಶ ಎಂಬ ಮಾತುಗಳು ನಮ್ಮಲ್ಲಿ ಮೊದಲಿಂದಲೂ ಬಳಕೆಯಲ್ಲಿರುವ ಮಾತುಗಳು. ಕಾಲ ಎಂಬುದನ್ನು ಕುರಿತು ಒಂದೆರಡು ಮಾತು ಹೇಳಿತು. ಇದನ್ನು ದಿನ, ವಾರ, ತಿಂಗಳು, ವರ್ಷಗಳಂತೆ ಎಣಿಸುವ ಹಾಗೆ ದಿನವನ್ನು ಗಂಟೆ, ಮಿನಿಟ್, ಸೆಕೆಂಡ್ಸ್ ಎಂದೂ ವಿಭಾಗ ಮಾಡಿ ಅಳೆ ಯುತ್ತಾರೆಂದಿತು. ಒಂದು ಗಡಿಯಾರವನ್ನು ತೆಗೆದುಕೊಂಡರೆ ಅದರಲ್ಲಿ ಎಷ್ಟು ಬಗೆಯ ಗಾಲಿಗಳು, ಅವುಗಳ ಚಲನೆಯನ್ನು ನಿರ್ಣಯಿಸುವ ಸ್ಪ್ರಿಂಗ್‌ಗಳು ಇರುತ್ತವೆ ಎಂಬುದು ಕಾಣುತ್ತದೆ. ಅತಿಸೂಕ್ಷ್ಮವಾದ ಸೆಕೆಂಡ್ ಭಾಗಗಳನ್ನು ಅಳೆಯುವುದುಂಟು. ಎಷ್ಟು ಸೂಕ್ಷ್ಮವಾಗಿ ಅಳೆಯಬಹುದು ಎಂಬುದನ್ನು ಈಗಿನ ಕಾಲದ ವಿಜ್ಞಾನ ತೋರಿಸಿಕೊಟ್ಟಿದೆ. ಅಷ್ಟು ಸೂಕ್ಷ್ಮವಾಗಿ ಕಾಲಮಾನವನ್ನು ಅಳೆಯದಿದ್ದರೆ ಇಂದಿನ ಅಣುವಿಜ್ಞಾನ, ವಿದ್ಯುತ್ ಮತ್ತು ಪರಮಾಣು ಪ್ರಪಂಚದ ಚಲನೆಗಳ ನಿಯಂತ್ರಣ ಶಕ್ಯವಾಗುತ್ತಿರಲಿಲ್ಲ. ಸ್ಥೂಲವಾಗಿ ಒಂದು ಸೆಕೆಂಡ್ ಎಂದರೆ ಒಂದು ಲೋಲಕ (Pendulum) ತನ್ನ ಅಳತೆಗೆ ತಕ್ಕಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬರುವಷ್ಟು ಕಾಲದ ಅಂಶದ ಅಳತೆಯಾಗುತ್ತದೆ. ಸೆಕೆಂಡನ್ನು ಅಳೆಯಲು ಇದು ನಾವು ಮಾಡಿಕೊಂಡಿರುವ ಸಾಧನ, ಏರ್ಪಾಡು. ಕಾಲವೆಂಬ ಶಕ್ತಿ–ಅದು ಶಕ್ತಿಯೊ ಇನ್ನೇನೊ ಯಾರಿಗೆ ಗೊತ್ತು?– ಈ ನಮ್ಮ ಸೆಕೆಂಡಿನ ಅಳತೆಗೆ ಒಳಪಡಬೇಕು ಎಂಬುದಿಲ್ಲ. ನಮ್ಮ ಲೋಕಕ್ಕೆ, ಗಣಿತ ಗುಣಿತಗಳಿಗೆ ನಾವು ಅದನ್ನು ಗೊತ್ತು ಮಾಡಿಕೊಳ್ಳುವ ವಿಧಾನ ಅದು; ಅಷ್ಟೇ. ಒಂದು ಸಲ ಈ ಕೊನೆಯಿಂದ ಆ ಕೊನೆಗೆ ಬಂದರೆ ಸೆಕೆಂಡ್ ಮುಳ್ಳು ಎರಡನೆಯದಕ್ಕೆ ಹೋಗುತ್ತದೆ. ಸೆಕೆಂಡ್ ಮುಳ್ಳು ಒಂದರಿಂದ ಇನ್ನೊಂದಕ್ಕೆ ಸಾಗಲು ಗಡಿಯಾರದೊಳಗೆ ಅದರ ಚಲನೆಯನ್ನು ನಿರ್ಣಯಿಸುವ ಗಾಲಿ ತಿರುಗುತ್ತದೆ. ಇದು 60 ಸಲ ತಿರುಗಿದರೆ ನಿಮಿಷದ ಮುಳ್ಳು ಒಂದು ಸಲ ತಿರುಗುತ್ತದೆ. ಆ ಗಾಲಿ 60 ಸಲ ತಿರುಗಿದರೆ ಒಂದು ಗಂಟೆ. ಹೀಗೆ ಚಾಲನೆಯನ್ನು ಕಾಲವಾಗಿ ನಾವು ನಮ್ಮ ಅನುಕೂಲಕ್ಕಾಗಿ ಗೊತ್ತುಮಾಡಿಕೊಳ್ಳುತ್ತೇವೆ. ಪಶು, ಪಕ್ಷಿ, ಪ್ರಾಣಿಗಳಿಗೆ ಹೇಗೊ, ದೇವತೆಗಳಿಗೆ ಹೇಗೊ, ಗ್ರಹ ತಾರೆಗಳಿಗೆ ಹೇಗೊ–ನಾವು ಕಾಣೆವು. ಅದು ಒಂದು ಆನಂತರ್ಯ ಸಂಗತಿ. ಎಂದಿನಿಂದ ಆರಂಭವಾಯಿತೊ, ಆ ಮುಂಚೆ ಏನಿತ್ತೊ ಅರಿಯದಂತಿದೆ. ಆದ್ದರಿಂದ ಅನಾದಿ ಎಂಬ ಮಾತು. ಎಲ್ಲಿಗೆ ಮುಗಿಯುವುದೊ ಅಂದಿಗೆ ನಿಲ್ಲುತ್ತದೆ. ಅಂಥದು ಅನಂತ. ದೇವರು ಅನಾದಿ, ಅನಂತ ಎಂದು ನುಡಿಯುವುದು ವಾಡಿಕೆ. ಅದನ್ನೂ ಅಳೆಯಬಹುದೇನೊ, ಅದರ ವಿಚಾರ ಮುಂದೆ ಹೇಳುತ್ತೇನೆ. ಇತ್ತ ದಶಮಾನ, ಶತಮಾನ, ಸಹಸ್ರಮಾನ–ಹೀಗೆ

ಕಾಲವನ್ನು ಅಳೆಯುವುದುಂಟು. ಮುಖ್ಯವಾಗಿ ಇಲ್ಲಿ ನಾವು ನೋಡುವುದು ಸೂರ್ಯ ಚಂದ್ರರ ಬೆಳಕನ್ನು ಗಮನದಲ್ಲಿಟ್ಟುಕೊಂಡು ಕಾಲವನ್ನು ಅಳೆವ ವಿಧಾನವನ್ನು, ಅದರ ಗತಿಯನ್ನು. ಸೂರ್ಯನು ಒಂದು 'ಸ್ಟಾರ್'–ನಕ್ಷತ್ರ. ಅದರ ಸುತ್ತ ಅನೇಕ ಗ್ರಹಗಳು–ಬಗೆಬಗೆಯ ಗಾತ್ರದವು, ಗುಣ ಲಕ್ಷಣಗಳವು, ಶಾಖಗಳವು, ವೇಗಗಳವು – ಯಾವುದೋ ಕಾಲನೇಮಕ್ಕೆ ಒಳಪಟ್ಟು ಸುತ್ತುತ್ತಿರುತ್ತವೆ. ಈ ಚಲನೆಗೆ ವಿಶ್ರಾಂತಿಯಿಲ್ಲ. ಇಂಥ ನಕ್ಷತ್ರಗಳು ಲಕ್ಷಾಂತರ, ಕೋಟ್ಯಂತರ ಇವೆಯಂತೆ. ಒಂದು ಕಾಲಕ್ಕೆ 'ಕೋಟಿ ಸೂರ್ಯಪ್ರಭಾ' ಎಂದು ನುಡಿದು ಅತ್ಯುಕ್ತಿಯನ್ನು ಬಳಸುತ್ತಿದ್ದೆವು. 'ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕ' ಎಂಬ ಮಾತನಾಡುತ್ತಿದ್ದೆವು. ಇಂಥ ಮಂಡಲಗಳಿಗೆಲ್ಲ ಈಶ್ವರನಾದವನು ಅವುಗಳ ಸೃಷ್ಟಿಕರ್ತ, ಅವನ್ನು ನಡಸುವವನು, ಅವುಗಳ ಗತಿಯನ್ನು ನಿರ್ಣಯಿಸುವವನು ಎಂಬ ಮಾತು ಸಲ್ಲುತಿತ್ತು. ಒಂದು ಆಕಾಶಗಂಗೆಯ (milkyway) ವ್ಯಾಸ ಮೂರು ಲಕ್ಷ ದೀಪಸಂವತ್ಸರಗಳಷ್ಟು ದೊಡ್ಡದು ಎಂದಾಗ, ಈ ಭೂಮಂಡಲ ಎಷ್ಟು ಅದ್ಭುತವಾದುದು ಎಂದು ಭಾವಿಸಬಹುದು. ಅಂಥ ಒಂದು ಶಕ್ತಿ ಮೊದಲಿಂದಲೂ ಇದೆಯೆ, ಇಲ್ಲವೆ? ಈ ನಮ್ಮ ಪ್ರಪಂಚ ಗ್ರಹತಾರೆಗಳ ಪ್ರಪಂಚ. ಇದೆಲ್ಲ ಸೇರಿದ್ದು ವಿಶ್ವ. ಅವುಗಳಿಗಿರುವ ಸಂಬಂಧ, ಅವುಗಳ ಗತಿಯನ್ನು ಯಾವ ಶಕ್ತಿ ನಡಸುತ್ತಿದೆ ಎಂಬುದು ಇನ್ನೂ ಖಚಿತವಾಗಿ ಗೊತ್ತಿಲ್ಲ. ಇವು ಎಂದು, ಹೇಗೆ, ಏಕೆ ಹುಟ್ಟಿದವು? ಇವಕ್ಕೆ ಆದಿ, ಅಂತ್ಯ ಉಂಟೆ? ಎಂಬ ಬಗೆಗೂ ಮನುಷ್ಯನ ಬುದ್ಧಿ ವ್ಯಾಸಂಗ ನಡಸುತ್ತಿದೆ. ಆದಿ–ಅಂತ್ಯ ಎನ್ನುವವೇ ಕಾಲದ ಒಂದು ಪರಿಸರ. ಈ ನಡುವೆ ಹುಟ್ಟಿ ನಡೆದವು ಎಷ್ಟೊ ಈಗಿಲ್ಲ. ನಾಳೆ, ಮುಂದಿನ ವರ್ಷಗಳು ಇನ್ನೂ ಬಂದಿಲ್ಲ. ಹಿಂದೆ, ಇಂದು, ಮುಂದೆ, ನಾಳೆ ಎಂಬುದು ಕಾಲದ ಮಾನದಲ್ಲಿ ಮನುಷ್ಯರ ಅನುಭವಕ್ಕೆ ಇರುವ ಸಂಗತಿ. ಇದನ್ನು ಗೊತ್ತು ಮಾಡುವುಕ್ಕೆ ಯಾರಾರೊ, ಏನೇನೊ ಇದ್ದವು. ಇಂಥದು ನಡೆಯಿತು, ಇಂಥದು ನಡೆಯಲು ಈ ಸಂಗತಿಗಳು (Events) ಗೊತ್ತು ಮಾಡುತ್ತವೆ, ಈ ಸಂಗತಿಗಳ ಆನುಪೂರ್ವಿ ಇಲ್ಲದಿದ್ದರೆ ಹುಟ್ಟು ಬೆಳೆ ಸಾವುಗಳ, ಕಾಲದ ಗತಿಯ ಅರಿವು ಇರುತ್ತಿರಲಿಲ್ಲ. ನಾವು ಆಯುರ್ಮಾನ ಎಣಿಸಬಲ್ಲೆವು. ಒಂದು ಗಿಡ, ಒಂದು ಪ್ರಾಣಿ ಇವಕ್ಕೆ ಇವುಗಳ ಪರಿವೆ ಇವೆಯೊ ಇಲ್ಲವೊ ಹೇಳುವುದು ಕಷ್ಟ. ಹಾಗೆಯೇ ಇತರ ತಾರಾಮಂಡಲಗಳಲ್ಲಿ ಯಾರಾದರೂ ಇರುವುದಾದರೆ, ಒಂದೇ ಸಮಯದಲ್ಲಿ ಅವರ ಕಾಲಮಾನ ಒಂದು ಆಗಿರಬಹುದು, ನಮ್ಮದು ಬೇರೆ ಇರಬಹುದು, ಎರಡೂ ಒಟ್ಟಿಗೆ ನಡೆಯುತ್ತಿರಬಹುದು. ನಮಗೆ ಅದು ತಿಳಿಯದು. ಅತಿ ಸೂಕ್ಷ್ಮವಾದ ಗಡಿಯಾರದೊಳಗಿರುವ ಕಾಲಮಾನದ ಅತಿ ಸೂಕ್ಷ್ಮಾಂಶವನ್ನು ತಿಳಿಸುವಾಗಲೂ ಅದರ ಕಾಲಮಾನದ ಪರಿವೆ ಅದಕ್ಕಿರುವುದಿಲ್ಲ. ಅದು ಸವೆದೊ, ದುಡಿದೊ ಹಳತಾದಾಗ ನಾವು ಅದನ್ನು ಸರಿಮಾಡಿ ತಿದ್ದಿಕೊಳ್ಳುತ್ತೇವೆ. ಅದಕ್ಕೆ ತಿಳಿವಳಿಕೆ ಇಲ್ಲ. ಪುರಾಣಗಳಲ್ಲಿ ಕಲ್ಪ, ಯುಗ, ಮನ್ವಂತರ ಎಂಬ ಮಾತು ಬರುತ್ತದೆ. ಹಾಗೆಯೇ ಎಲ್ಲಕ್ಕೂ ಅಧೀಶ್ವರನಾದ ಒಂದು ಶಕ್ತಿ ಬ್ರಹ್ಮ ಎಂದುಕೊಂಡು, ಬ್ರಹ್ಮಮಾನ ಎಂದು



ಕೋಟಿ, ಕೋಟಿ ಸಂವತ್ಸರಗಳ ಅಳತೆ ಮಾಡುತ್ತೇವೆ. ಎಂದಾಗ, ಇವೊತ್ತಿನ ನಕ್ಷತ್ರಮಂಡಲಗಳ ಚಲನೆ, ಗತಿಗಳ ಲೆಕ್ಕಗಳು ಹೇಗೆ ಅಂತಹ ಎಣಿಕೆಗೆ ಅರ್ಥಕೊಡಲು ನೆರವಾಗುತ್ತವ್ವೆ? ಇವೆಲ್ಲ ಮನುಷ್ಯನ ಕಲ್ಪನೆಗಳು, ಅಳತೆಗಳು. ಇವೆಲ್ಲದರ ತಿಳಿವಳಿಕೆ ಮನುಷ್ಯನ ಪ್ರಜ್ಞೆಗೂ ಅಳತೆಗೂ ಬಂದು ಆಗಿರುವುದೇ ತಿಳಿವಳಿಕೆಯ ಪ್ರಪಂಚ.

ದೇಶವೂ ಹಾಗೆಯೇ. ನೀರು, ನೆಲ, ನಕ್ಷತ್ರಾದಿಗಳ ಮಂಡಲ ಇವೆಲ್ಲವೂ ಸೇರಿ, ಇವು ಯಾವುವೂ ಆಕ್ರಮಿಸದೆ ಇರುವ ಶೂನ್ಯ ಭಾಗವೂ ಸೇರಿಕೊಂಡು, ದೇಶ. ವರ್ತಮಾನ – ತಕ್ಷಣಕ್ಕೆ ನಡೆಯುತ್ತಿರುವ ಸಂಗತಿ. ಸನ್ನಿವೇಶ, ಯಾವುದೊ ಎರಡು ಸಂಗತಿಗಳು ಒಂದಕ್ಕೊಂದು ಸೇರುವ ಅಥವಾ ಸೇರದ ಸಂಗತಿ, ಅಥವಾ ವಿಗತಿ, ಅಥವಾ ದುರ್ಗತಿ. ಇವನ್ನೆಲ್ಲ ಮನುಷ್ಯನು ಅಳೆಯುತ್ತಾನೆ, ಗುರುತಿಸುತ್ತಾನೆ, ನೆನಪಿನಲ್ಲಿ ಇಟ್ಟುಕೊಳ್ಳುತ್ತಾನೆ, ಬರೆದಿಡುತ್ತಾನೆ. ತನ್ನ ಜೀವನವನ್ನು ಸ್ಥಿತಿಗತಿಗಳನ್ನು ಅರಿತುಕೊಳ್ಳುತ್ತಾನೆ. ಈ ಪ್ರಪಂಚ ಹುಟ್ಟಿದ ಕಾಲದಿಂದ – ಇಲ್ಲಿ 'ಪ್ರಪಂಚ ಹುಟ್ಟಿದ ಕಾಲದಿಂದ' ಎಂಬುದು ಸಂಕೇತ – ಯಾರ ಯಾರ ಪ್ರಜ್ಞೆಗೆ ಏನೇನು ಬಂತು, ಯಾವ ಸಂಗತಿಗಳನ್ನು ಅರಿತುಕೊಂಡಿತು, ಬಿಟ್ಟಿತು ಎಂಬ ಸ್ವಭಾವ ಕಾರ್ಯವನ್ನು ಗೊತ್ತು ಮಾಡಿಕೊಂಡು, ನಡೆದುದು ಎಂಬುದನ್ನು ಬರೆದಿಟ್ಟರೆ – ಚ, ತು ತಪ್ಪದೆ ಕ್ರಮವಾಗಿ ಬರೆದುದಾದರೆ – ಅದು ಮಾನವನ ತಿಳಿವಳಿಕೆಯ ಕಥೆಯಾಗುತ್ತದೆ. ಇಲ್ಲಿ ಸ್ಫುಟವಾಗಿ, ಪ್ರಾಮಾಣಿಕವಾಗಿ, ಪರಿಪೂರ್ಣವಾಗಿ ಬರೆದರೆ ಎಂಬುದು ಅಧ್ಯಾಹಾರ. ಎಲ್ಲ ಕಾಲದ, ಎಲ್ಲ ದೇಶದ, ಎಲ್ಲ ಬಗೆಯ ಮನುಷ್ಯರ ಪ್ರಜ್ಞೆಯ ಪರಿಸರದಲ್ಲಿ ಸುಳಿದು ಉಂಟಾದ ಅನುಭವವೆಲ್ಲ ಇದಕ್ಕೆ ವಿಷಯ. ಇದೆಷ್ಟೋ ಎಂದು ಯಾರು ಬಲ್ಲರು? ಇನ್ನೆಷ್ಟೋ ಕಾಲ, ಎಷ್ಟೋ ಜನ, ಎಷ್ಟೋ ಬಗೆಯ ಅನುಭವಗಳನ್ನು ಪಡೆಯುತ್ತಾರೆ ಎಂಬುದು ಒಟ್ಟು ಮನುಷ್ಯ ನುಡಿದದ್ದು, ನಡೆದದ್ದು, ಬರೆದಿಟ್ಟದ್ದು, ಬೇರೊಬ್ಬರ ತಿಳಿವಳಿಕೆಗೆ ಬಂದುದು. ಇದರ ಫಲಾಫಲಗಳು, ಇವು ಒಂದೊಂದರಿಂದ ಏನೇನು ನಡೆಯಿತು, ಬಿಟ್ಟಿತು, ಅದರ ಕ್ರಿಯಾಕಾಂಡವಾವುದು ಎಂಬುದನ್ನೆಲ್ಲ ರಾಸಿ ಹಾಕಿ ನೋಡಿದರೆ, ಇದು ಮಾನವರ 'ಜ್ಞಾನ ಪ್ರಪಂಚ.' ಇದು ಅಗಾಧವಾದುದು. ಅಡಗಿದ್ದು, ಅತ್ಯಲ್ಪವಾದ್ದು, ನಡೆದದ್ದು, ನಡೆಯದ್ದು, ಅಂತರ, ಉದ್ದಿಷ್ಟ ಇತ್ಯಾದಿ ಎಲ್ಲ ಭಾಗಗಳೂ ಸೇರುವುದು ಕಷ್ಟ. ಇಷ್ಟನ್ನು ಕ್ರಮವಾಗಿ ತಿಳಿದ ಜನ ಯಾರು?

ಆದರೆ ಗೊತ್ತಾಗಿ ಅನುಭವಕ್ಕೆ ಬಂದುದನ್ನು ಒಂದು ಕ್ರಮವಾಗಿ ವಿಂಗಡಿಸಿ ಅರಿತುಕೊಳ್ಳುವ ಯತ್ನ ಮೊದಲಿಂದ ನಡೆದಿದೆ. ಮನುಷ್ಯನ ಪ್ರಜ್ಞೆ, ಅನುಭವ ಇವಕ್ಕೆ ಅವಕಾಶ ಕೊಟ್ಟಿದೆ. ಇವನ್ನೂ ಕೆಲವು ಕಾರ್ಯಗಳಿಗೋಸ್ಕರ – ಮುಖ್ಯವಾಗಿ ಅನುಕೂಲಕ್ಕೋಸ್ಕರ–ಜನ ಬಳಸಿಕೊಂಡಿದ್ದಾರೆ, ಉಳಿಸಿಕೊಂಡಿದ್ದಾರೆ. ಕೇಡುಗಳನ್ನು ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಯಾವುದಾದರೂ ಕ್ರಮ ಸಂಗತಿಗಳಲ್ಲಿ ಕಂಡರೆ ಅದನ್ನು ಒಂದು ಶಾಸ್ತ್ರವೆಂಬಂತೆ ಬರೆದಿಟ್ಟಿದ್ದಾರೆ. ಇಂಥ ಸಂದರ್ಭಗಳು ಹೀಗೆ ಉಂಟಾದಾಗ ಇಂಥಿಂಥ ಪರಿಣಾಮ ಆಗಿವೆ ಎಂಬ ಅನುಭವ, ಇಲ್ಲಿನ ಕಾರ್ಯಕಾರಣ ಸಂಬಂಧ,

ಫಲಪ್ರಾಪ್ತಿ, ಗುಣಾವಗುಣಗಳ ತಿಳಿವಳಿಕೆ ಮುಂತಾದವು ಪ್ರತಿಯೊಂದು ಸಂಗತಿಯ ಸುತ್ತಲೂ ಸೇರಿಕೊಳ್ಳುತ್ತವೆ. ಇವಕ್ಕೆ ಸಂಬಂಧಿಸಿದ ಆ ಕ್ರಮವನ್ನು, ನೇಮವನ್ನು ಜನ ಅರಿತುಕೊಳ್ಳುತ್ತಾರೆ. ಇಂಥ ತಿಳಿವಳಿಕೆಯನ್ನು ವಿಧವಿಧವಾಗಿ ವಿಂಗಡಿಸಿಕೊಂಡು ಒಂದು ಮಿತಿಗೆ ಒಳಪಡಿಸಿ, ಆ ಅನುಭವಕ್ಕೆ ಸಂಬಂಧಿಸಿದ ತಿಳಿವಳಿಕೆಯನ್ನು ಶಾಸ್ತ್ರಗಳಾಗಿ, ಸಿದ್ಧಾಂತಗಳಾಗಿ ಬೆಳಸಿದ್ದಾರೆ. ಈ ಸಮಷ್ಟಿಗೆ 'ಜ್ಞಾನ' ಎಂದು ಹೆಸರು. ಕೆಲವು ಪೂರ್ತಿಯಾಗಿ ಇನ್ನೂ ಗ್ರಾಹ್ಯವಾಗಿಲ್ಲ. ತಿಳಿಯಬೇಕಾದ ಸಂಗತಿಗಳೆಲ್ಲ ತಿಳಿದಿಲ್ಲ. ಆದರೂ ಅವಕ್ಕೆ ಸಂಬಂಧಿಸಿದಂತೆ ಮನಸ್ಸು ಆಡಿ, ವಿವರಾಂಶಗಳನ್ನು ಪರೀಕ್ಷಿಸಿ, ಖಚಿತವಾಗಿ ಇದು ಈ ಶಾಸ್ತ್ರ, ಇದು ಇನ್ನೊಂದು ಶಾಸ್ತ್ರ ಎಂದು ವಿಂಗಡಿಸಿಕೊಳ್ಳುತ್ತವೆ. ಇದಕ್ಕೆ ಬೇಕಾದಂಥ ಸಾಧನಗಳನ್ನು, ವಿಧಾನಗಳನ್ನು, ಯಂತ್ರ ತಂತ್ರಾದಿಗಳನ್ನು ನಿರ್ಮಿಸಿಕೊಂಡು, ಈ ತಿಳಿವಳಿಕೆ ಎಷ್ಟು ನಿಷ್ಕೃಷ್ಟವಾಗೆಂದರೆ ಅಷ್ಟು ನಿಷ್ಕೃಷ್ಟವಾಗಿ ಮಾಡಿಕೊಳ್ಳಲು ಈ ಶಾಸ್ತ್ರಜ್ಞರು ಯತ್ನಿಸಿದ್ದಾರೆ. ಇದುವರೆಗೆ ನಡೆದುದೆಲ್ಲ ಆ ಭಾಗದ ಚರಿತ್ರೆ. ಈಗ ನಡೆಯುತ್ತಿರುವುದರ ಮೇಲೆ ಅದು ಬೆಳಕು ಹಾಯಿಸುತ್ತದೆ. ಇಂದಿನದು ನಿನ್ನೆಯದಕ್ಕೆ ಸೇರಿ, ನಾಳೆಯದನ್ನು ಅರ್ಥಮಾಡಿಕೊಳ್ಳಲು, ಸ್ವೀಕರಿಸಲು ಅಥವಾ ನಿರಾಕರಿಸಲು ದಾರಿ ಕಾಣಿಸುತ್ತದೆ.

**–3–**

ಈ ಜ್ಞಾನದ ಭಾಗವನ್ನು ಸ್ಥೂಲವಾಗಿ ಇಲ್ಲಿ 1) ಪ್ರಕೃತಿ ವಿಜ್ಞಾನ 2) ಮಾನವ ಜೀವನದ ವಿಜ್ಞಾನ ಎಂದು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಮನುಷ್ಯನು ತನ್ನ ಹೊರಗಿರುವ ಪ್ರಪಂಚವನ್ನು ವಸ್ತುನಿಷ್ಠವಾಗಿ (Objectively) ಸ್ವಂತ ಅನುಕೂಲ ಪ್ರತಿಕೂಲ, ಇಷ್ಟ ಅನಿಷ್ಟ, ಪಕ್ಷಪಾತ ಅಥವಾ ವಿರೋಧ ಬಿಟ್ಟು ಖಚಿತವಾಗಿ ಅರಿಯಲು ಯತ್ನಿಸುವಾಗ, ಆ ಪ್ರಪಂಚದ ತಿಳಿವಳಿಕೆಯೇ ಮುಖ್ಯವಾಗುತ್ತದೆ. ಇಲ್ಲಿ ಒಂದು ಪ್ರಶ್ನೆ ಮೊದಲಿಂದಲೂ ಎದ್ದಿರುವುದುಂಟು: ಮನುಷ್ಯನ ಪ್ರಜ್ಞೆಗೆ ಹೊರಗಿರುವ ಬೇರೆ ಪ್ರಪಂಚ ಇದೆಯೆ, ಇಲ್ಲವೆ ಎಂಬುದು. ಈಗ ಇರುವ ಎಲ್ಲ ಮನುಷ್ಯರೂ ಅವರ ಪ್ರಜ್ಞಾ ವ್ಯಾಪಾರವೂ ನಿಂತು ಹೋದರೂ ಉಳಿವ ನೆಲ, ಜಲ, ಸಸ್ಯ, ಪ್ರಾಣಿ, ನಕ್ಷತ್ರಾದಿ ಮಂಡಲ ಇರುತ್ತವೆ; ಅದರ ವಿಷಯದಲ್ಲಿ ಮನುಷ್ಯರೆಂಬವರ ಜ್ಞಾನ ಪ್ರಜ್ಞೆಗಳು ಕಾರ್ಯಮಾಡದಿದ್ದರೂ ಮಾನವ ಜೀವನದ ಹೊರಗಿನ ಒಂದು ಪ್ರಕೃತಿ ಉಂಟು, ಇರುತ್ತದೆ; ಅದರ ಕ್ರಮವನ್ನೂ ವಿಧಾನವನ್ನೂ ಅನುಸರಿಸಿ ಅದು ನಡೆಯುತ್ತಿರುತ್ತದೆ; ಅದಕ್ಕೆ ಸಂಬಂಧಿಸಿದ ಮನುಷ್ಯಜ್ಞಾನ ಇಲ್ಲದೆ ಬೆಳೆಯದೆ ಹೋಗಬಹುದು– ಎಂಬ ಸಂಗತಿಯನ್ನು ಈ ಶಾಸ್ತ್ರಗಳು ಸುಮಾರು ಒಪ್ಪುತ್ತವೆ. ಅವನ್ನು ಕಂಡಾಗ ಅನುಭವಿಸಿದ ಮನುಷ್ಯರೆಲ್ಲರಿಗೂ–ಅವರು ಆರೋಗ್ಯವಂತರಾಗಿದ್ದರೆ–ಒಬ್ಬೊಬ್ಬರಿಗೂ ಅನೇಕ ಸಲ, ಬೇರೆ ಬೇರೆ ಕಾಲಗಳಲ್ಲಿ ಒಂದೇ ರೀತಿಯ ಅನುಭವ ಆಗುತ್ತದೆ; ಅನೇಕ ಜನ ಅದನ್ನು ಒಂದೇ ಸಮಯದಲ್ಲಿ ನೋಡಿದರೆ, ಅವರಿಗೆ ಅದೇ ಬೋಧೆಯಾಗುತ್ತದೆ ಎನ್ನುವುದು ಇದು ಸತ್ಯ ಎಂದು ಹೇಳುವಂತಾಗುತ್ತದೆ. ಇದನ್ನು ಎಲ್ಲರೂ



ಒಪ್ಪುತ್ತಾರೆ. ಇದು ವಸ್ತು ಸ್ವರೂಪವನ್ನು ತಿಳಿಯುವುದಕ್ಕೆ ಆಧಾರ. ಈ ಸತ್ಯವನ್ನು ಬೇರೆ ಬೇರೆ ವಿಜ್ಞಾನಭಾಗಗಳವರು ಬೇರೆ ಬೇರೆ ತಿಳಿಯಲು ಪ್ರಯತ್ನಿಸುತ್ತಾರೆ. ಈ ರೀತಿ ವಿಧಾನಗಳ ಸ್ವರೂಪ, ಸಾಮಾನ್ಯವಾಗಿ ಆಯಾ ವಿಜ್ಞಾನ ವಿಧಾನಗಳ ಸೂತ್ರಗಳಿಗೆ ಒಳಪಟ್ಟಿರುತ್ತವೆ. ಇದು ಮನುಷ್ಯನಿಗೆ ಗ್ರಾಹ್ಯವಾದ ಭಾಗ; ಅವನ ಜ್ಞಾನದಲ್ಲಿ ಸಿದ್ಧವಾದ್ದು. ಇದಕ್ಕೆ ಗೊತ್ತಾಗದ ನಿಜ ಏನೊ, ಹೇಗೊ? – ಮನುಷ್ಯನಿಗೆ ತಿಳಿಯದು.

ಈವರೆಗೆ ಇದ್ದ ಹಾಗೆಯೇ ನಾಳೆಯೂ ಮುಂದಕ್ಕೂ ನೆಲ ಗಟ್ಟಿಯಾಗಿರುತ್ತದೆ. ಆಕಾಶ ಕವಿದು ನಮ್ಮ ತಲೆಯ ಮೇಲೆ ಬೀಳುವುದಿಲ್ಲ. ಪ್ರಕೃತಿಯ ಸ್ವರೂಪ ಲಕ್ಷಣಗಳೂ ವಿದ್ಯಮಾನಗಳೂ ಎಂದಿನಂತೆಯೇ ಮುಂದುವರೆಯುತ್ತವೆ. ಎಂದರೆ, ಈ ನಡವಳಿಕೆಯಲ್ಲಿ ಯಾವುದೋ ಕ್ರಮವಿದೆ. ಈ ಕ್ರಮವನ್ನು ಅರ್ಥಮಾಡಿಕೊಳ್ಳಬಹುದು; ಕಂಡು ಹಿಡಿಯಬಹುದು. ಒಟ್ಟಿನಲ್ಲಿ ಒಂದು ಕಾರ್ಯ–ಕಾರಣ ಸಂಬಂಧ ಲೋಕ ಘಟನೆಗಳ ಹಿಂದೆ ಇರುತ್ತದೆ. ಇದನ್ನೆಲ್ಲ ಅರ್ಥಮಾಡಿಕೊಳ್ಳಲು ಮಾನವನಿಗೆ ಬುದ್ಧಿ ಒದಗುತ್ತದೆ. ಬುದ್ಧಿ ಎಲ್ಲ ಕಾಲದಲ್ಲಿಯೂ, ಎಲ್ಲ ಜನಗಳಿಗೂ ಒಂದೇ ರೀತಿಯದು. ಈ ರೀತಿ ಕಾಣಿಸಿದರೆ, ಪ್ರತಿಪಾದಿಸಿದರೆ, ಯುಕ್ತಿ (Reason) ಸ್ಥಾಪಿಸಬಲ್ಲುದಾದರೆ ಇದು ಎಲ್ಲರಿಗೂ ಒಪ್ಪಿತವಾಗುತ್ತದೆ. ಯಾವುದನ್ನು ಯುಕ್ತಿ (Reason), ಒಂದರ ಸ್ವರೂಪ ಲಕ್ಷಣ ಎಂದು ಸ್ಥಾಪಿಸಬಲ್ಲದೊ ಅದು ತನ್ನತನವನ್ನು ಕೇವಲವಾಗಿ ಉಳಿಸಿಕೊಂಡಿರುತ್ತದೆ. ಪರಸ್ಪರ ಅಸಂಗತವಾದವು ಎರಡೂ ಸರಿಯಲ್ಲ. ಯಾವ ಘಟನೆಯನ್ನೂ ನಿರ್ಣಯಿಸಿ ಸಾಧಿಸುವುದಕ್ಕೆ ಸಾಕಷ್ಟು ಯುಕ್ತಿ, ಪ್ರಮಾಣ ಬೇಕು ಎಂಬ ಭೂಮಿಕೆ ಎಲ್ಲವನ್ನೂ ಏರ್ಪಡಿಸುತ್ತದೆ. ಇವನ್ನು 'Laws of Thought' – ಆಲೋಚನಾ ಸುಷ್ಠುತೆಯ ನೇಮಗಳು, ವಿಧಿಗಳು–ಎನ್ನಬಹುದು. ಇವು ಮೂಲಭೂತ ಸಂಗತಿಗಳು. ಸ್ವಂತ ಪ್ರಯೋಜನ ಅಥವಾ ಪಕ್ಷಪಾತಬಯಕೆ ಇಲ್ಲದೆ ಮಾತ್ರ ಇವನ್ನು ಪರಿಶೀಲಿಸಬೇಕು. ವಸ್ತುಸ್ವರೂಪವನ್ನು, ಲಕ್ಷಣಗಳನ್ನು ಅವುಗಳ ಸತ್ಯತೆಗಾಗಿಯೇ ಪರೀಕ್ಷಿಸಿ ತಿಳಿಯಬೇಕು. ಯಾವ ಭೀತಿಯೂ ಆಶೋತ್ತರಗಳೂ ಇಂಥ ಅನ್ವೇಷಣೆಗೆ ಕಾರಣ, ತಡೆ ಆಗಬಾರದು ಎಂಬುದು ಇಲ್ಲಿನ ಮಿತಿ. ಇಷ್ಟನ್ನು ಮನಸ್ಸಿನಲ್ಲಿಟ್ಟುಕೊಂಡು ಲೋಕ ಸಮಸ್ತದ ಸತ್ಯವನ್ನು ಅರಿಯುವುದರಲ್ಲಿ ವಿಜ್ಞಾನ ತೊಡಗಿರುತ್ತದೆ. ಈ ಅಂಶದಲ್ಲಿ ಪರೀಕ್ಷೆ ಪ್ರಯೋಗಗಳನ್ನು ಮಾಡುವಾಗ ಸತ್ಯ (Truth) ಒಂದಕ್ಕೇ ಬೆಲೆ, ಅದೊಂದಕ್ಕೇ ಪೂಜ್ಯತೆ (Reverence) ಎಂಬ ಭಾವನೆ ಇರುತ್ತದೆ. ಈ ಅನ್ವೇಷಣೆಗೆ ಸಹಾಯಕವಾಗಿ ಸೂಕ್ಷ್ಮ ಪ್ರತ್ಯಕ್ಷಾನುಭವ, ಅನುಮಾನ (Inference) ಸೂತ್ರಸಾಧಕಗಳಾಗುತ್ತವೆ. ಹೀಗೆ ವೀಕ್ಷಿಸಿ, ಪರೀಕ್ಷಿಸಿ, 'ಇಂಥದು ಹೀಗೇ ಸರಿ, ಬೇರೊಂದು ಸರಿಯಾಗುವುದಿಲ್ಲ, ಇಷ್ಟು ಮಾತ್ರ ಖಂಡಿತವಾಗಿ ಸಲ್ಲುತ್ತದೆ' ಎಂದು ಆಯಾ ಮಟ್ಟದಲ್ಲಿ ಅದನ್ನು ನಿಷ್ಕರ್ಷೆಮಾಡಿ ತೋರಿಸಿ, ಇವೊತ್ತಿನವರೆಗೆ ಮಾಡಿರುವ ಪರೀಕ್ಷಣ, ಸಂಶೋಧಗಳಲ್ಲಿರುವ ಇಷ್ಟು ಮಾತ್ರ ಸರಿ ಎಂದು ಸಪ್ರಮಾಣವಾಗಿ ಸಾಧಿಸಿ ತೋರಬಹುದು. ಇದನ್ನೆಲ್ಲ ಒಳಪಡಿಸಿದಂತೆ ಇನ್ನಷ್ಟು ಸಾಕಲ್ಯದಿಂದ (comprehensive) ಸಾಮಾನ್ಯತತ್ವವನ್ನು (generalization) ಮಾಡುವವರೆಗೂ ಇದು ತಾತ್ಕಾಲಿಕವಾಗಿ

ಸುಸ್ಥಾಪಿತ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಬೇರೆ ಪ್ರಯೋಗ ಪರೀಕ್ಷೆಗಳ ಫಲವಾಗಿ ಏರ್ಪಾಡಾಗುವವರೆಗೂ ಇದೇ ಸತ್ಯ ಎಂದು ಸ್ವೀಕರಿಸತಕ್ಕದ್ದು ಎಂಬುದು ಬಲಿದಿರುತ್ತದೆ.

ಈ ಸಾಧನೆಗೆ ಆಧಾರಭೂತವಾಗಿ ವಿಲಕ್ಷಣ ಪರೀಕ್ಷಾ ಪ್ರಯೋಗಗಳ ಜೊತೆಗೆ ಯುಕ್ತಿ ಒದಗಿಸುವ ತರ್ಕ (Logic) ಪೂರ್ತಿ ಸಹಾಯವನ್ನು ಒದಗಿಸುತ್ತದೆ. ತರ್ಕದಿಂದ ವಾದಗಳು (Arguments) ಹೊಮ್ಮುತ್ತವೆ. ಸಾಧನಗಳಲ್ಲಿ ಒಂದು ವಿಶಿಷ್ಟ ರೂಪ ಗಣಿತ. ಅದರ ಸಮೀಕರಣಗಳು, ಸಂಬಂಧ ಸಾಧನಗಳು, ದೃಷ್ಟಿ ಸ್ಥಾಪನೆ, ನಕ್ಷೆ, ಆಕೃತಿ, ರೇಖಿ, ಬೀಜ ಮತ್ತು ಅವುಗಳ ಅತ್ಯಂತ ಮುಂದುವರಿದ ಕ್ರಿಯಾ–ವಾದ–ವಿಚಕ್ಷಣೆಗಳು ಒದಗುತ್ತವೆ. ಇಂದು ಈ ಗಣಿತ ಸ್ಥಾಪಿಸದ, ಸಾಧಿಸದ ಶಾಸ್ತ್ರಗಳಿಗೆ ಮಾನ್ಯತೆ ಕಡಮೆ. ಇದೆಷ್ಟು ಮಟ್ಟಿಗೆ ಬೆಳೆದಿದೆ ಎಂದರೆ, ಸಲ್ಲದ ಕಡೆಗೆ ಗಣಿತವನ್ನು ಗಿಡಿದು, ಇಲ್ಲದಂಥ ಸಹಜ ಅಸಹಜ ಕಲ್ಪಿತ ಸಂದರ್ಭದಲ್ಲಿ ಈ ಈ ತೀರ್ಮಾನಗಳು ಸರಿಯಾಗುತ್ತವೆ, ತಪ್ಪಾಗುತ್ತವೆ ಎಂಬ ಗಣಿತ ಲಕ್ಷಣಗಳೂ ಪ್ರಕ್ರಿಯೆಗಳೂ ಹುಟ್ಟಿಕೊಳ್ಳುತ್ತಿವೆ. ವಾದಗಳು, ಸಿದ್ಧಾಂತಗಳು ಅವುಗಳ ಮೇಲೆ ಬೆಳೆಯುತ್ತಿವೆ. ಈ ಎಲ್ಲ ಸಂಬಂಧಗಳಲ್ಲಿಯೂ ಮಾನವನು ಸಾಧನಗಳನ್ನು ಯಂತ್ರಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಅವನ್ನು ಶುದ್ಧಿಮಾಡಿ ಸೂಕ್ಷ್ಮಮಾಡಿ ಬೇಕಾದ ಎಲ್ಲ ಶಕ್ತಿಯನ್ನೂ ಚಾಲಕ ಶಕ್ತಿಗಳನ್ನೂ ಯಂತ್ರ ತಂತ್ರಗಳನ್ನೂ ಬಳಸಿಕೊಳ್ಳುತ್ತಾನೆ. ಸಾಮಾನ್ಯ ಕಣ್ಣಿಗೆ ದುರ್ಲಭವಾದ ಸಂಗತಿಗಳನ್ನು ಈ ಪರೀಕ್ಷಣ ವಿಧಾನಗಳಿಂದಲೂ ಯಂತ್ರ–ತಂತ್ರಗಳ ನೆರವಿನಿಂದಲೂ ದೊರಕಿಸಿಕೊಂಡು ಈ ಪರಿಶೀಲನೆಯ ಫಲಗಳನ್ನು ನಿರಂತರವಾಗಿ ಪ್ರಕಟಿಸಿರುತ್ತಾರೆ. ಈ ಪ್ರಯೋಗ ಶಾಲೆಗಳು ನಡೆಯುತ್ತಿರುವುದು ಸರಿ ತಪ್ಪು, ಸಾಕು ಸಾಲದು ಎಂದು ಇತರ ವಿಜ್ಞಾನಿಗಳು ಅಂಥುವನ್ನು ಮಾಡಿನೋಡಿ, ಯೋಚಿಸಿ, ಪರೀಕ್ಷಿಸಿ, ಅದರ ಅನುಭವಗಳ ಬೆಳಕನ್ನು ಸತ್ಯಸಾಧನೆಯ ಮೇಲೆ ಹಾಯಿಸುತ್ತಾರೆ. ಇಂದು ಈ ಪರೀಕ್ಷಾ ಪ್ರಯೋಗಗಳು ಅದ್ಭುತವಾಗಿ ಬೆಳೆದಿವೆ. ಒಂದೊಂದು ವಿಜ್ಞಾನ ಸಾಧನವನ್ನು ನಿರ್ಮಾಣ ಮಾಡಲೂ ಹತ್ತಾರು ಕೋಟಿ ರೂಪಾಯಿಗಳ ಯಂತ್ರ–ತಂತ್ರಗಳ ಸಜ್ಜು ಏರ್ಪಟ್ಟಿರುತ್ತದೆ. ಒಟ್ಟಿನಲ್ಲಿ ಎಣಿಕೆ, ತೂಕ, ಅಳತೆ ಎಂಬ ಮಾರ್ಗ ಇಲ್ಲಿ ಪ್ರಧಾನ. 'ಅಳತೆಗೆ ತೂಕಕ್ಕೆ ಎಣಿಕೆಗೆ ವಿಷಯ ಮಾರ್ಗವು ಲೋಕ ಸಮಸ್ತಂ' ಎಂದು ಪಂಪನು ನುಡಿದ ಮಾತು ಇಲ್ಲಿ ಸರ್ವಗ್ರಾಹ್ಯವಾದ್ದು. ಪ್ರಕೃತಿಗೆ ಸಲ್ಲದ ಅಥವಾ ಅದನ್ನು ಮೀರಿದ ಕಲ್ಪನೆಗೆ ಒಳಪಡದ್ದು; ಅವುಗಳ ಪ್ರಭಾವಕ್ಕೆ ಒಳಪಡುವ ಪ್ರಾಕೃತಿಕವಾದ (Natural) ಸಮಸ್ತ ವಿಷಯಗಳನ್ನೂ ಅರಿಯುವ ಮಾರ್ಗ ವಿಜ್ಞಾನದ್ದು.

ಇದರ ಜೊತೆಗೆ ಎಲ್ಲ ಶಾಖೆಗಳ, ವಿಧಾನಗಳ ಚರಿತ್ರೆಯನ್ನೂ ವಿಜ್ಞಾನ ಇದೇ ನಿಷ್ಪಕ್ಷಪಾತದಿಂದ ಸಂಗ್ರಹಿಸಿ, ಹುಟ್ಟು ಬೆಳೆ ಪರಿಣಾಮ, ಇವೊತ್ತಿನ ಸ್ಥಿತಿ, ನಾಳೆಗೆ ಹೇಗಾಗಬಹುದು ಎಂಬ ವ್ಯಾಸಂಗವನ್ನು ಮುಂದುವರಿಸಿ, ಇದಕ್ಕೆ ಸಂಬಂಧಿಸಿದ ತತ್ವನಿಷ್ಠೆಯನ್ನು ಪರಿಪಾಲಿಸುತ್ತದೆ. ವಿಮರ್ಶನಪೂರ್ವಕವಾಗಿ ಪ್ರತಿಯೊಂದು



ಮಜಲಲ್ಲಿಯೂ ವಾದವನ್ನೂ ಪರೀಕ್ಷಣಗಳನ್ನು ಶೋಧನ ಮಾಡಿಕೊಳ್ಳುತ್ತಾರೆ. ಸಾಕಾದಷ್ಟು ಪ್ರಮಾಣ, ಪುರಾವೆ ಇಲ್ಲದ್ದನ್ನು ಬಿಟ್ಟುಬಿಡುತ್ತಾರೆ. ಯಾವ ತೀರ್ಮಾನಕ್ಕೆ ಬಂದರೂ 'other things being equal', ಪ್ರಕೃತಿಯಲ್ಲಿನ ಸಂದರ್ಭಗಳು ಎಂದಿನಂತೆಯೇ ಇದ್ದರೆ, ನಡೆದರೆ–ಎಂಬುದು ಅಧ್ಯಾಹಾರವಾಗಿ ಹಿನ್ನೆಲೆಯಾಗಿರುತ್ತದೆ. ಈವರೆಗೆ ನಡೆದ ಪರೀಕ್ಷಾಪ್ರಯೋಗ, ಅಭ್ಯಾಸ ಸರಿಯಾಗಿ ನಡದಿದೆಯೆ, ಇಲ್ಲವೆ ಎಂಬುದನ್ನು ನಿಷ್ಕರ್ಷೆ ಮಾಡಿಕೊಳ್ಳುವುದಕ್ಕೂ ಯಾವ ಯಾವುದನ್ನು ಅಧ್ಯಾಹಾರ ಮಾಡಿಕೊಂಡಿರುತ್ತೇವೆ ಎಂಬುದು ಸರಿಯೆ ತಪ್ಪೆ, ಸೂಕ್ತವೆ ಅಸೂಕ್ತವೆ ಎಂಬುದೂ ನಿರಂತರವಾಗಿ ಪರೀಕ್ಷಣಕ್ಕೊಳಪಡುತ್ತಿರುವುದು ಇದಕ್ಕೆ ಕಾರಣ. 'ಇದರಿಂದ ಈ ಫಲ' ಎಂದು ನಿರ್ಣಯಿಸುವಾಗ, ಪ್ರಮಾಣ ಪುರಾವೆಗಳಿಗೆ ಸಂಬಂಧಿಸಿದಂತೆ ಒಂದು ಸಂಖ್ಯಾಮಾನ ನಿರ್ಣಯಕ್ಕೆ ಒದಗುತ್ತದೆ. ಇದು ಸಂಖ್ಯಾಶಾಸ್ತ್ರ (Statistics). ಕೆಲವು ವಿಜ್ಞಾನಗಳಲ್ಲಿ ಇದರಿಂದ ನಿರ್ಣಯವಾಗಬಲ್ಲ ಪ್ರಮಾಣಗಳು ನಿರ್ಣಯಕ್ಕೆ ಸಹಾಯ ಒದಗಿಸುತ್ತದೆ. ಈ ಎರಡು ರೀತಿಯಲ್ಲಿಯೂ ತೀರ್ಮಾನವಾಗಬೇಕಾದುದು; ಈ ಕಾರಣವೆನ್ನವುದರಿಂದ: 1) ಬೇರೆ ಕಾರ್ಯ ಘಟಿಸಲಾರದೆ, ಘಟಿಸಬಾರದೆ ಎಂಬ ಸಂಗತಿ; ಈ ಫಲ, ಈ ನಿರ್ಣಯ ಎಂಬುದಕ್ಕೆ ಬೇರೆ ಕಾರಣ ಇರಲಾರದೆ, ಇರಬಾರದೆ ಎಂಬ ಸಂಗತಿ. 2) ಇದೇ ಕಾರಣ, ಇದೇ ಫಲ ಏಕಾಗಬೇಕು ಎಂಬ ವಿಚಾರ ನಡೆದಿರುತ್ತದೆ (ಒಂದು ಇನ್ನೊಂದಕ್ಕೆ ಕಾರಣವಾಗಬೇಕಾದರೆ). 3) ಸಂಪೂರ್ಣವಾಗಿ ಒಂದನ್ನು ಇನ್ನೊಂದು ಹೋಲುವಂತಿದ್ದರೆ ಕಾರ್ಯಸಾಧನೆಗೆ ಅಷ್ಟೇ ಸಾಲದು. 4) ಇಂಥ ಸಂಗತಿ ನಡೆದಾಗ ಇದು ಅದು ಯಾವಾಗಲೂ ಎಲ್ಲಿಯೂ ಜೊತೆಗೂಡಿ ಕಾಣುತ್ತದೆ ಎಂಬ ಸಂಗತಿ ಸಾಲದು. 5) ಇದಾದ ಮೇಲೆ ಅದು ನಡೆದುದು ಕಾಣುತ್ತದೆ ಎಂಬ ಅಂಶವೂ ಸಾಲದು (similarity, simultaneity and succession). 6) ಯಾವುದು ಪೂರ್ವಭಾವಿ ಸಂಗತಿಯಾಗಿದ್ದು, ಅದು ಇಲ್ಲದಿದ್ದರೆ ಇನ್ನೊಂದು ಆಗಲೇ ಆಗದು; ಅದು ಇದ್ದರೆ ಮಾತ್ರ ಆಗುತ್ತದೆ, ಅಷ್ಟು ಮಾತ್ರ ಕಾರ್ಯಕ್ಕೆ ಕಾರಣವಾಗುತ್ತದೆ ಎಂಬುದುಂಟು. 7) ಹಲವು ಕಾರಣಗಳು ಒಂದು ಕಾರ್ಯಕ್ಕೆ ಕಾರಣವಾಗಬಹುದು. 8) ಈ ಕಾರಣವೆನ್ನುವುದು ಅಖಂಡವಾಗಿ, ಸಮಗ್ರವಾಗಿ, ಸಂಪೂರ್ಣವಾಗಿ ಒದಗಬೇಕು (sine que non), that without which not ಎಂಬುದೂ ಕಾರಣವನ್ನು ಸ್ಥಾಪಿಸುವ ಸಂಗತಿ. ಈ ಕಾರ್ಯಕಾರಣ ಸೂತ್ರದ ಬಲದಿಂದ ಫಲವನ್ನೂ ಪರಿಣಾಮಗಳನ್ನೂ ಮುಂದೆ ನಡೆಯಬಹುದಾದ ಸಂಘಟನೆಗಳನ್ನೂ ಊಹಿಸಬಹುದು, ನಡೆಯುವುದೆಂದು ತೋರಿಸಿಕೊಡಬಹುದು. ಉದಾಹರಣೆಗೆ: 50,000 ಮೈಲಿ ದೂರ ನಿಮಿಷಕ್ಕೊ ಗಂಟೆಗೊ ಇಷ್ಟು ವೇಗದಲ್ಲಿ ಸಾಗುತ್ತಿರುವಾಗ, ಒಂದು ಯಂತ್ರದಲ್ಲಿ ಯಾವುದೊ ಒಂದು ಭಾಗ ಹೊತ್ತಿಕೊಂಡು ಇದು ಹೊತ್ತಿಸಿದ ಕಿಚ್ಚು ಬೆಳಕಾಗಿ ಶಾಖವಾಗಿ ಇನ್ನಿಷ್ಟು ನಿಮಿಷಗಳಲ್ಲಿ ಸ್ಫೋಟಗೊಳ್ಳಬಹುದು ಎಂಬಂತೆ ಯಂತ್ರ ತಂತ್ರ ಸಜ್ಜು ನಿರ್ಮಾಣವಾಗುವಾಗ, ಹೀಗೆ ಆಗಿಯೇ

ಆಗುತ್ತದೆ ಎಂದು ಸ್ಥಾಪಿಸಬಲ್ಲಂತೆ ಪರೀಕ್ಷಾ ಪ್ರಯೋಗ ನಡೆದು ಯಂತ್ರೋಪಕರಣಗಳನ್ನು ಸಿದ್ಧ ಮಾಡಿಕೊಳ್ಳುತ್ತಾರೆ. ಇಂದಿನ ಬಾಹ್ಯಾಕಾಶ ಸಂಚಾರಕ್ಕಾಗಿ ನಿರ್ಮಿಸಿದ ಯಂತ್ರ ಇದೇ ದಿಕ್ಕಿನಲ್ಲಿ ಇದೇ ವೇಗದಲ್ಲಿ ಇಷ್ಟೇ ದಿನದಲ್ಲಿ ಇಂಥ ಕಡೆಗೇ ಹೋಗಿ ಮುಟ್ಟುತ್ತದೆ; ಅಲ್ಲಿನ ಏರ್ಪಾಡುಗಳನ್ನು ಅಲ್ಲಿ ಸರಿಯಾಗಿ ಮಾಡಿದ್ದರೆ ಈ ದಿಕ್ಕಿನಲ್ಲಿ ಈ ಸ್ಥಳದಲ್ಲಿ ಇಷ್ಟು ಗಂಟೆಗೆ ಸರಿಯಾಗಿ ಬಂದು ಇಳಿಯುತ್ತದೆ; ಅಥವಾ ತ್ರಿಶಂಕು ಸ್ವರ್ಗದಲ್ಲಿ  ಇಷ್ಟು ಕಾಲ, ದಿನ ನಿಲ್ಲುತ್ತದೆ ಎಂದು ನಿರ್ಣಯಿಸಬಹುದು. ಇದಕ್ಕಾಗಿ ಸಾಧನವನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ. ಅವುಗಳ ಉತ್ಪಾದನೆಯ ಸಂಬಂಧದಲ್ಲಿ ದೊಡ್ಡ ವಿಶಿಷ್ಟ ಕೌಶಲ್ಯ ವಿಜ್ಞಾನವನ್ನು ಬಳಸಿ ಯಂತ್ರ ಶಾಲೆಗಳನ್ನು ನಿರ್ಮಾಣ ಮಾಡಿಕೊಳ್ಳಬೇಕಾಗುತ್ತದೆ. ಇದು ವಿಜ್ಞಾನ ಸಾಧನದ ಭಾಗ ಎಂದಾಗ, ವಿಜ್ಞಾನದಲ್ಲಿ ಸೂತ್ರ ಮತ್ತು ತತ್ವಭಾಗಗಳ ಅನ್ವೇಷಣೆ, ಸ್ಥಾಪನೆ, ಇದನ್ನು ಸಾಧಿಸುವ ಉಪಕರಣಗಳು, ಯಂತ್ರ ತಂತ್ರ ಎರಡೂ ಸೇರುತ್ತವೆ. ಈ ಮಂತ್ರ, ತಂತ್ರ, ಉಪಕರಣಗಳ ಭಾಗ ವಿಜ್ಞಾನದ ಒಂದು ಯಂತ್ರ–ಕಲಾಶಾಸ್ತ್ರ (Technology), ಸಲಕರಣೆಗಳ ಉತ್ಪಾದನ ಶಿಲ್ಪತಂತ್ರ ಹುಟ್ಟುತ್ತದೆ. ವಿಜ್ಞಾನದ ಸೂತ್ರಗಳಲ್ಲಿ ಪ್ರಯೋಗಕ್ಕೆ ತರಲು ನಿರ್ಮಾಣ ಮಾಡಿಕೊಳ್ಳುವ ತಂತ್ರವಿದ್ಯೆ ಬಹುದೊಡ್ಡ ಕೌಶಲ್ಯದ ಪ್ರಪಂಚ. ವಿಜ್ಞಾನ ಸೂತ್ರಗಳನ್ನೂ ತಂತ್ರಗಳನ್ನೂ ಅನುಸರಿಸಿ ನಿರ್ಮಾಣವಾದ ಈ ಸೂತ್ರವನ್ನು ಅನ್ವಯಿಸಿ ಸಾಧಿಸುವ ಫಲಪ್ರಯೋಜನವನ್ನು, ಪ್ರಯೋಗಭಾಗವನ್ನು ರೂಪಿಸುವ ವಿದ್ಯೆ ಒಂದನ್ನು Applied Science ಎನ್ನುವುದುಂಟು. ಒಂದು ತತ್ವ ಅಥವಾ ಸೂತ್ರಭಾಗ, ಇನ್ನೊಂದು ಅದರ ಪ್ರಯೋಗ ಅಥವಾ ಉಪಯೋಗಭಾಗ. ಅದೇ ವಿಜ್ಞಾನದಲ್ಲಿ ವಿದ್ಯುಚ್ಛಕ್ತಿ ಎಂಬುದು ಒಂದು ಶಕ್ತಿ. ಅದನ್ನು, ಅದರ ಸ್ವರೂಪವನ್ನು ಅರಿತು, ಅದರ ಉತ್ಪಾದನೆಯನ್ನು ಮಾಡಿ ಅದರಿಂದ ಬೆಳಕು, ಶಾಖ, ಚಲನೆ ಮುಂತಾದ ಎಲ್ಲ ಕಾರ್ಯಗಳ್ನೂ ಸಾಧಿಸಲು ಮಾಡಿಕೊಳ್ಳುವ ಕೋಟ್ಯಂತರ ಕೃತಿಗಳು ಒಂದು ಶುದ್ಧ ಜ್ಞಾನ, ಇನ್ನೊಂದು ಪ್ರಯೋಗ ವಿಜ್ಞಾನ. ಯಾವುದೇ ಗುಣ ಪ್ರಯೋಜನಗಳಾಗಲಿ ಪರೀಕ್ಷಣೆಗಳಾಗಲೀ ಇಲ್ಲಿಯೂ ನಮ್ಮ ಅಪೇಕ್ಷೆ ಮುಖ್ಯ ವಸ್ತು ಸ್ವರೂಪ ತಿಳಿಯುವುದು ಮಾತ್ರ. ಮುಂದೆ ಸ್ಥೂಲವಾಗಿ ಇಲ್ಲಿನ ಮುಖ್ಯ ವಿಭಾಗಗಳನ್ನು ಸೂಚಿಸುತ್ತೇನೆ.

**– 4 –**

ವಿಜ್ಞಾನವೆಂದು ನುಡಿವಲ್ಲಿ ಮುಖ್ಯವಾಗಿ ಎರಡು ಶಾಸ್ತ್ರಗಳು ಎಣಿಕೆಗೆ ಬರುತ್ತದೆ. ಒಂದು ಭೌತಶಾಸ್ತ್ರ, ಇನ್ನೊಂದು ರಸಾಯನಶಾಸ್ತ್ರ. ಇವೆರಡರಲ್ಲಿ ಭೌತಶಾಸ್ತ್ರಕ್ಕೆ ಇರುವ ವೈಜ್ಞಾನಿಕ ಘನತೆ ರಸಾಯನಶಾಸ್ತ್ರಕ್ಕಿಲ್ಲವೇನೊ! ಎಂದರೆ ಪ್ರಾಮುಖ್ಯತೆಯಲ್ಲಿ ಅದು ಕಡಮೆ ಎಂದಲ್ಲ. ಶುದ್ಧವಾಗಿ ವಸ್ತುಪ್ರಪಂಚವನ್ನು, ಅಲ್ಲಿನ ಗುಣ, ಲಕ್ಷಣ, ಶಕ್ತಿ ಚಲನಗಳ ಸ್ವರೂಪವನ್ನು ಮೂಲಭೂತವಾಗಿ ಅರಿಯುವುದು ಅಲ್ಲಿ. ಪದಾರ್ಥ (matter), ಅದರ ಆಕಾರ, ರಚನೆ, ಚಲನೆ, ಶಕ್ತಿ ಅಥವಾ ಚೈತನ್ಯ, ಶಬ್ದ, ಶಾಖ



ಮುಂತಾದವನ್ನು ವಿಶ್ಲೇಷಿಸಿ, ಅವನ್ನು ಅರಿತುಕೊಳ್ಳುವ ಶಾಸ್ತ್ರ. ಇದಕ್ಕೆ ಗಣಿತದ್ದೇ ಮುಖ್ಯ ಸಾಧನೆ. ಯಾವುದನ್ನು ನಮ್ಮವರು ಪಂಚಭೂತಗಳು ಎನ್ನುತ್ತಿದ್ದರೋ– ಪೃಥ್ವಿ, ಅಪ್, ತೇಜಸ್, ಆಕಾಶ, ವಾಯು – ಇವೇ ಮೂಲ ಅಥವಾ ಮೂಲರೂಪಗಳು, ಇವು ಸಂಯುಕ್ತ ಸತ್ವಗಳು, ಎಂಬವುಗಳೆಲ್ಲದರ ಮೂಲ ಪರಿಶೋಧನೆ ಇಲ್ಲಿ ಬರುತ್ತದೆ. ಆಕಾಶವೆಂದಾಗ ಲೋಕವನ್ನೆಲ್ಲ ಆವರಿಸಿರುವ ಮಂಡಲ. ನಾವು ಆಕಾಶವೆಂದಾಗ ಈ ಲೋಕದ ಮೇಲ್ಭಾಗದಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರಗಳ ಭಾಗಗಳನ್ನೂ ಖಾಲಿಯಾಗಿರುವ ಸಮಸ್ತ ಪ್ರದೇಶವನ್ನೂ ಮಾತ್ರ ಎಣಿಸುತ್ತೇವೆ. ಹಿಂದೆ ಹೇಳಿದಂತೆ ಭೌತಾಕಾಶದಲ್ಲಿ ಸತತವಾಗಿ ಸುತ್ತುತ್ತಿರುವ, ಉರಿಯುತ್ತಿರುವ, ಜ್ವಲಿಸುತ್ತಿರುವ, ಬಗೆಬಗೆಯ ಗಾತ್ರದ, ಶಕ್ತಿಯುಳ್ಳ, ಒಂದನ್ನೊಂದು ಆಕರ್ಷಿಸುವ ವಿಕರ್ಷಿಸುವ ಎಷ್ಟೋ ಮಂಡಲಗಳಿರುತ್ತವೆ. ಚಂದ್ರನಿಗೆ ಕಾಂತಿ, ತಂಪು ಇದೆ. ಸೂರ್ಯನಿಗೆ ಉರಿಯುವ, ಉರಿಸುವ, ಹತ್ತಿರ ಸುಳಿದ ಪದಾರ್ಥಗಳನ್ನು ನಾಶಮಾಡುವ ಶಕ್ತಿಯಿದೆ. ಅದೇ ನಮ್ಮ ಪ್ರಪಂಚದ ಎಲ್ಲ ಶಾಖಕ್ಕೂ ಬಹುತರ ಚೈತನ್ಯಕ್ಕೂ ಕಾರಣ. ಸೂರ್ಯನ ಬೆಳಕೇ ಚಂದ್ರನ ಮೇಲೆ ಬಿದ್ದು ಅದರ ಯಾವುದೊ ವಸ್ತು–ಲಕ್ಷಣಗಳಿಂದ ನಮಗೆ ಬೆಳುಕಾಂತಿಯನ್ನೂ, ಬೆಳಕು ಸೌಂದರ್ಯಗಳನ್ನೂ ಶಾಂತವಾಗಿ ಪ್ರಸನ್ನವಾಗಿ ಕೊಡುವುದು. ಹಿಂದೆ ನಮ್ಮಲ್ಲಿ ಗ್ರಹಗಳೆಂದು ಹೇಳುತ್ತಿದ್ದೆವಲ್ಲ ಆ ಒಂಭತ್ತು ಗ್ರಹಗಳಲ್ಲಿ ಸೂರ್ಯ ಒಂದು ಕೂಡ ಸೇರುತ್ತಿತ್ತು. ಅದು ನಿಜವಾಗಿ ಒಂದು ನಕ್ಷತ್ರಮಂಡಲ. ಸಣ್ಣವೂ ದೊಡ್ಡವೂ ಒಂಟೊಂಟಿಯಾಗಿರುವುವು, ಗುಂಪು ಗುಂಪಾಗಿರುವುವು. ಗುಂಪಾಗಿರುವುದರಲ್ಲಿ ಆಕಾಶಗಂಗೆಯಂತೆ ಅಸಂಖ್ಯಾತವಾಗಿ ಜ್ವಲಿಸುತ್ತಿರುವುದು, ರಾಕ್ಷಸಾಕಾರವೂ ಸಣ್ಣಗಾತ್ರದವೂ ಮಂಡಲಗಳುಂಟು. ನಮಗೆ ಸದ್ಯ ಸೂರ್ಯನ ಪ್ರಭಾವ ಜೀವನವನ್ನು ನಡಸುವ ಶಕ್ತಿ. ಅದರ ಚಲನೆಯಿಂದ, ಬೆಳಕು ಶಾಖಗಳಿಂದ ನಾವು ಬದುಕಬೇಕಾಗಿರುವುದರಿಂದ, ಅದರ ಸ್ವರೂಪಗಳನ್ನು ಅರಿತುಕೊಳ್ಳಲು ನಮ್ಮ ಲೋಕದಲ್ಲಿ ಯತ್ನ ವಿಶೇಷವಾಗಿ ನಡೆಯುತ್ತಿದೆ. ಅದರ ಸುತ್ತಲೂ ಚಲಿಸುತ್ತಿರುವ ಗ್ರಹಗಳು ನಮ್ಮ ಬದುಕನ್ನು ಪ್ರಾಕೃತಿಕವಾಗಿ ರೂಪಿಸುತ್ತದೆ. ಭೂಮಿಯ ತೂಕ ಗಾತ್ರ ನೆಲಸು ಇಷ್ಟು, ಇದನ್ನು ಯಾವುದೋ ಒಂದು ಆಕರ್ಷಕ ಶಕ್ತಿ ಹಿಡಿದು ನಿಲ್ಲಿಸಿದೆ, ನಡೆಯುವಂತೆ ಮಾಡುತ್ತದೆ. ಆಯಸ್ಕಾಂತಶಿಲೆ ಹೇಗೆ ಲೋಹದ ಪದಾರ್ಥವನ್ನು ಚುಂಬಕದಂತೆ ಹಿಡಿದಿರುತ್ತದೆಯೊ ಹಾಗೆ, ಪಂಚಮಹಾಭೂತವಾದ ಈ ಮಹಾಗೋಳವನ್ನು ತಾರಾಗಣ ಪಂಜರದೊಳಗೆ ನಡಸುತ್ತಿದೆ. ಆ ಶಕ್ತಿಯ ಸ್ವರೂಪ ಇಂಥದು, ಗುರುತ್ವಾಕರ್ಷಣ ಶಕ್ತಿಯ ಸ್ವರೂಪ ಇಂಥದು ಎಂದು ಅಳೆದಿದ್ದಾರೆ. ಗಾಳಿ, ಮಳೆ, ಚಳಿ, ಸೆಕೆ ಇವೆಲ್ಲ ಪ್ರಕೃತಿಯ ಈ ನೆಲಸಿನಿಂದ, ಭಾರದಿಂದ, ಚಲನೆಯಿಂದ, ಚಲನೆಯ ವೇಗಗಳಿಂದ ಎಂದು ತಿಳಿಸುತ್ತಿದ್ದಾರೆ. ಗ್ರಹ–ನಕ್ಷತ್ರ ಆಕೃತಿ, ನೆಲಸು ಇಷ್ಟಿಷ್ಟು, ಇವುಗಳ ಚಲನೆ ವೇಗ ಹೀಗೆ, ಈ ಪ್ರತಿಯೊಂದೂ ಚಲಿಸುತ್ತಿರುವಾಗ ಒಂದು ಸಲ ಪೂರ್ತಿ ಸುತ್ತಿಬರುವುದಕ್ಕೆ ಇಷ್ಟೆ ಮಾನವ ವತ್ಸರಗಳು ಹಿಡಿಯುತ್ತವೆ ಎಂದೆಲ್ಲ ಲೆಕ್ಕ ಮಾಡಿದ್ದಾರೆ.

ಗಣಿತ ಇದನ್ನು ಗೊತ್ತುಮಾಡುತ್ತದೆ. ಇದನ್ನು ಕಾಣಲು ಆಯಾ ಕಾಲಗಳಲ್ಲಿ ಪರೀಕ್ಷಣಗಳು ನಡೆದಿವೆ. ಇಂಥ ದಿನ ಚಂದ್ರ ಇಲ್ಲಿರುತ್ತಾನೆ, ಇತರ ಗ್ರಹಗಳು, ನಕ್ಷತ್ರಗಳು ಈ ಈ ದಿಕ್ಕಿನಲ್ಲಿ ಇರುತ್ತವೆ, ಇವು ಹತ್ತಿರ ಬಂದಾಗ ಹೀಗೆ ಕಾಣುತ್ತದೆ, ಭೌತಿಕವಾಗಿ ಈ ಫಲಗಳನ್ನು ಕೊಡುತ್ತವೆ – ಜೋತಿಷ್ಯದ ಅರ್ಥದಲ್ಲಿ ಮಾತ್ರ ಅಲ್ಲ, ಸ್ವರೂಪತೆಯಲ್ಲಿ – ಎಂದು ಗೊತ್ತಾಗುತ್ತದೆ. ಭೌತವಿಜ್ಞಾನ ಶಾಲೆಗಳಲ್ಲಿ ಮತ್ತು ಖಗೋಳಶಾಸ್ತ್ರವನ್ನು ವ್ಯಾಸಂಗ ಮಾಡುವ ಪರೀಕ್ಷಣ ಶಾಲೆಗಳಲ್ಲಿ ದೊಡ್ಡ ದೊಡ್ಡ ಅತಿ ಪ್ರಖರವಾದ ಶಕ್ತಿಯುಳ್ಳ ದೂರದರ್ಶಿನಿಗಳನ್ನು ಸ್ಥಾಪಿಸಿ, ಇದಕ್ಕೆ ಸಂಬಂಧಿಸಿದ ಸಂಗತಿಗಳನ್ನೆಲ್ಲ ಸಂಗ್ರಹಿಸಲಾಗುತ್ತದೆ. ಅದಕ್ಕೆ ದರ್ಶನಾಫಲಕಗಳನ್ನು ತಯಾರಿಸುವ ವಿದ್ಯೆ ಬೇರತ್ತ ನಡೆಯುತ್ತದೆ. ಸ್ವಚ್ಛ ಆಕಾಶದಲ್ಲಿ ರಾತ್ರಿಯ ಹೊತ್ತು ಸಾವಿರಾರು ಮಿನುಗುವ ನಕ್ಷತ್ರಗಳು, ಜ್ಯೋತಿ ಖಂಡಗಳು ಕಣ್ಣಿಗೆ ಬೀಳುತ್ತವೆಯಲ್ಲವೆ? ಇವನ್ನೂ ಗುರುತಿಸಿದ್ದಾರೆ, ಅಳೆದಿದ್ದಾರೆ. ಅವುಗಳಿಂದ ಬರುವ ಬೆಳಕು ಭೂಮಿಗೆ ಇಷ್ಟು ದೂರದ ಪ್ರದೇಶದಿಂದ ಬರುತ್ತವೆಂದು ನಿರ್ಧರಿಸಿದ್ದಾರೆ. ಒಂದು ಸೆಕೆಂಡಿಗೆ 1,86,000+ ಚಿಲ್ಲರೆ ಮೈಲಿ ವೇಗದಲ್ಲಿ ಬೆಳಕು ಸಂಚಾರ ಮಾಡುತ್ತದೆ. ಕೆಲವು ನಕ್ಷತ್ರಗಳಿಂದ ನಮಗೆ ಬರುವ ಬೆಳಕು ದೀಪವತ್ಸರದ (light years) ಹಿಂದೆ ಅಲ್ಲಿಂದ ಹೊರಟುದು. ಎಂದರೆ, ಅಷ್ಟೇ ದೂರ ನಮಗೂ ಆ ದೀಪದ ಮೂಲಕ ಇದೆ ಎಂದು ಗೊತ್ತುಮಾಡಿ ಸ್ಥಾಪಿಸಿದ್ದಾರೆ. ಬೆಳಕಿಗಿಂತ ವೇಗವಾಗಿ ಸಂಚರಿಸುವ ಅಂಶ ಯಾವುದಾದರೂ ಇದೆಯೆ ಎಂಬುದನ್ನು ಕುರಿತು ವ್ಯಾಸಂಗ ನಡೆಯುತ್ತಿದೆಯಂತೆ. Taclyon ಎಂಬ ಅಂಶ ಇದೆ ಎಂದು ಭಾರತೀಯ ವಿಜ್ಞಾನಿ, ತಜ್ಞ ಡಾ. ಸುದರ್ಶನ್ ಮುಂತಾದವರು ಹೇಳುತ್ತಿದ್ದಾರೆ. ಬೆಳಕಿನ ಸ್ವರೂಪವೇನು ಎಂಬುದನ್ನು ವಿಶ್ಲೇಷಣೆ ಮಾಡಿ, ಬೆಳ್ಳಗೆ ಕಾಣುವ ಬೆಳಕು ಶುದ್ಧ ಬಿಳಿಯಲ್ಲ, ಬಿಳಿ ಎಂಬುದೇ ಕಾಮನಬಿಲ್ಲಿನ ರಂಗುಗಳಲ್ಲಿನಂತಹ ಬಗೆ ಬಗೆಯ ಬಣ್ಣಗಳ ಸಂಯುಕ್ತ; ಅದನ್ನು ಒಂದು ಪಾರದರ್ಶಕದ ಮೂಲಕ ನೋಡಿದರೆ ಕೆಳ ಕೊನೆಯಲ್ಲಿ ಕೆಂಪು, ಮೇಲೆ ಹೋಳಿವ ನೀಲಿ ಬಣ್ಣ ಒಡೆದು ಕಾಣುತ್ತದೆ. ಮಳೆಗಾಲದಲ್ಲಿ ಅಥವಾ ನೀರು ಚಿಮ್ಮುತ್ತಿರುವಾಗ ಅದನ್ನು ಈ ಕೋನದಲ್ಲಿನ ರೀತಿ ಬೆಳಗಿಸಿದಾಗ ಅನೇಕ ಕಾಮನ ಬಿಲ್ಲುಗಳನ್ನು ಕಾಣುವ ಹಾಗೆ ಕಾಣಿಸುತ್ತದೆ; ಈ ಕೆಂಪಿನ ಕೆಳಗೆ ಇರುವ ಕಿರಣಗಳ ಬೆಳಕು 'Infrared rays', ಆ ತಿಳಿ ನೀಲದ ಮೇಲಿನ ಕಣಗಳು 'Ultraviolet' ಎಂದು ಗೊತ್ತುಮಾಡಿ, ಅವುಗಳನ್ನು ಸಂಗ್ರಹಿಸುವ, ದುಡಿಸುವ ಯತ್ನ ನಡೆದಿದೆ. ಬಹು ಪ್ರಬಲವಾದ ದರ್ಶಿನಿಗಳ ಸಹಾಯದಿಂದ ಈ ಗ್ರಹತಾರಾ ನಕ್ಷತ್ರಗಳ ಪ್ರಪಂಚವನ್ನು ಅರಿಯಲು, ಅಳೆಯಲು ಯತ್ನ ನಡೆದಿದೆ. ಈಚೆಗೆ ಚಂದ್ರ, ಅಂಗಾರಕ ಗ್ರಹಗಳಿಗೆ ಪ್ರಯಾಣ ನಡಸಿ ಅಲ್ಲಿನ ರಹಸ್ಯಗಳನ್ನು ತಿಳಿದುಕೊಳ್ಳಲು ಆಗಿದೆ. ಇದಕ್ಕೆ ಒದಗಿರುವ ಯಂತ್ರ, ತಂತ್ರ ಮತ್ತು ಗಣಿತ ವಿಸ್ಮಯಕರವಾದುದು. ಸಾವಿರಾರು ಕೋಟಿ ರೂಪಾಯಿಗಳ ವೆಚ್ಚದಿಂದಲೂ ಪರೀಕ್ಷಾ ಪ್ರಯೋಗಗಳಿಂದಲೂ ಯಂತ್ರವಿನಿಯೋಗದಿಂದಲೂ ಯಂತ್ರ ಚಾಲನೆ



ಗೊದಗುವ ಚಾಲಕ ಶಕ್ತಿಯ ನಿರ್ಮಾಣದಿಂದಲೂ ಅದನ್ನು ನಡಸುವ ಚಾಲಕರು ಪಡೆಯುವ ಶಿಕ್ಷಣದಿಂದಲೂ ತಜ್ಞತೆಯಿಂದಲೂ ಅವರ ಜೀವರಕ್ಷಕ ಮಾರ್ಗಗಳನ್ನು ರೂಪಿಸುವುದರ ಮೂಲಕವೂ ಈ ಪ್ರಯೋಗಗಳು ನಡೆದಿವೆ. ಈ ಎಲ್ಲಕ್ಕೂ ಸಂಬಂಧಿಸಿದ ಶಾಸ್ತ್ರಗಳೂ ವಿಧಾನಗಳೂ ಬೇರೆಬೇರೆಯಾಗಿ ವ್ಯಾಸಂಗಗೊಂಡು, ಅವಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳೂ ಸಾಧನಸಂಪತ್ತೂ ಅಭಿವೃದ್ಧಿಗೊಂಡಿವೆ. ಇವಕ್ಕೆ ಒದಗಿರುವ ಗಣಿತಕ್ರಿಯೆ ಅತಿಸೂಕ್ಷ್ಮವಾದ್ದು. ಬೆಳಕನ್ನು ಎಷ್ಟು ಬಗೆಯಲ್ಲಿ ಪಡೆಯ ಬಹುದು, ದುಡಿಸಬಹುದು? ಬೆಳಕಿನ ಲಕ್ಷಣವೇನು? ಶಾಖಕ್ಕೂ ಬೆಳಕಿಗೂ ಸಂಬಂಧ ವೇನು? ಅತ್ಯುಷ್ಣ ಅಥವಾ ಅತಿಶೀತವಾದ ಸನ್ನಿವೇಶಗಳಲ್ಲಿ ಹೇಗೆ ಸಾಧಿಸಬಹುದು, ಕಾರ್ಯತಂತ್ರಕ್ಕೆ ಒದಗಿಸಿಕೊಳ್ಳಬಹುದು ಎಂಬುದನ್ನು ಅನ್ವೇಷಣೆ ಗೊತ್ತುಮಾಡುತ್ತದೆ. ಉದಾಹರಣೆಗೆ: ವಿದ್ಯುಚ್ಛಕ್ತಿ ಇತರ ಚಾಲಕ ಶಕ್ತಿಗಳಿಗಿಂತ ಎಷ್ಟು ವಿಶಿಷ್ಟವಾದುದು, ಇದನ್ನು ಉತ್ಪತ್ತಿ ಮಾಡುವ ವಿಧಾನಗಳಾವುವು ಎಂಬುದರ ಪ್ರಪಂಚ ಬಹುಗಹನ ವಾದುದು. ಬ್ಯಾಟರಿಗಳನ್ನು ಬಳಸಿ ಅವನ್ನು ತಯಾರು ಮಾಡುವುದರಲ್ಲಿ, ಬಗೆಬಗೆಯ ತೈಲಗಳನ್ನು, ಶಾಖೋತ್ಪತ್ತಿಯ ಪದಾರ್ಥಗಳನ್ನು, ಕಲ್ಲಿದ್ದಲು ಮುಂತಾದ ಇಂಧನಗಳನ್ನು ಬಳಸಿ ಮಾಡುವ ವಿದ್ಯೆ ಒಂದು. ಜಲವಿದ್ಯುತ್ ಒಂದು. ಇವೊತ್ತು ಥರ್ಮೋ ನ್ಯೂಕ್ಲಿಯರ್ ಎಂದು ಅಣುಶಕ್ತಿಯ ನಿರ್ಮಾಣದಿಂದ ಮಾಡಿದ ಶಾಖವೊಂದು. ಇಷ್ಟಿಷ್ಟು ದೊಡ್ಡ ಪ್ರಮಾಣದಲ್ಲಿ ಅದನ್ನು ಅಡಕವಾಗಿ ಸಂಗ್ರಹಿಸಬಹುದು ಎಂಬುದು ಪ್ರಕಾಶಕ್ಕೂ ಪ್ರಯೋಗಕ್ಕೂ ಬಂದಿವೆ. ಎಷ್ಟೊ ಕೋಟಿ ಬಗೆಯ ಕಾರ್ಯಗಳಿಗೆ ಬೆಳಕುಗಳನ್ನು ವಿದ್ಯುಚ್ಛಕ್ತಿಯನ್ನು ಬಳಸುತ್ತಾರೆ ಎಂಬುದು ನಮ್ಮ ಕಾಲದ ಪವಾಡ.

ಶಬ್ದದ ಸ್ವರೂಪವೂ ಹಾಗೆಯೇ ಅಳತೆಗೆ ಬಂದಿದೆ. ಅದರ ಪ್ರಯೋಜನವನ್ನು ಸಾವಿರಾರು ಬಗೆಯಲ್ಲಿ ಪ್ರಯೋಜನಕ್ಕೆ ತಿರುಗಿಸಲಾಗಿದೆ. ಇವೊತ್ತಿನ ನಾಗರಿಕತೆಯನ್ನು ಕಿವಿ ಕಿವುಡುಮಾಡುವ ಗಲಾಟೆಗಳ ನಾಗರಿಕತೆಯೆನ್ನಬಹುದು. ಹಾಗೆಯೇ ಆಕಾಶ ವಾಣಿಗಳಲ್ಲಿ ಅತಿಸೂಕ್ಷ್ಮವಾದ, ಮೃದುವಾದ, ಕೋಮಲವಾದ ಶಬ್ದಗಳನ್ನೂ ಒಂದೆರಡು ಸೆಕೆಂಡುಗಳಲ್ಲಿ ಸಾವಿರಾರು ಮೈಲಿಗಳ ದೂರದಲ್ಲಿರುವವರೂ ಕೇಳುವಂತೆ ಬಾನುಲಿಗಳ ಪ್ರಸಾರಗಳ ಏರ್ಪಾಡು ನಡೆದಿದೆ. ಎಂಥ ಶಬ್ದಗಳನ್ನೂ, ಮಾತುಗಳನ್ನೂ, ಗಾನಗಳನ್ನೂ ರೇಖಿಸಿಕೊಂಡು ಗ್ರಾಮಾಫೋನ್, ದೂರವಾಣಿ, ಧ್ವನಿಲೇಖನ ವಿಧಾನ ಗಳಲ್ಲಿ ಅವು ಉಳಿಯಲೆಂದು ಕೂಡಿಸಿಡುತ್ತಾರೆ. ಚುಂಬಕದ ಶಕ್ತಿ ಹೇಗೆ ಹೇಗೆ ಯಾವ ಯಾವ ಬಗೆಯಲ್ಲಿ ಸಂಬಂಧಗಳಲ್ಲಿ ಏನೇನು ಕಾರ್ಯಗಳನ್ನು ಸಾಧಿಸುವುದು ಎಂಬುದನ್ನು ಕಂಡುಹಿಡಿದಿದ್ದಾರೆ. ದೂರದ ಪ್ರಯಾಣಗಳಿಗೆ, ವೇಗಗಳ ನಿಯಂತ್ರಣಕ್ಕೆ, ಸಂಚಾರಕ್ಕೆ ದುಡಿಸಿಕೊಳ್ಳುವುದು ಶಕ್ಯವಾಗುವಂತೆ ತತ್ವಭಾಗ, ಯಂತ್ರ ತಂತ್ರ ಕುಶಲತೆ ಜೊತೆಯಲ್ಲಿ ನಡೆದಿವೆ. ಚಲನೆಯ ಅಂಶ, ಸ್ಥಾಯಿತ್ವದ ಅಂಶ ಇವುಗಳ ಪ್ರಕರಣಗಳೂ ಹಾಗೆಯೆ. ಇವೆಲ್ಲದರ ಹಿಂದೆ ಪದಾರ್ಥ ವಿಜ್ಞಾನ ಖಚಿತವಾಗಿ ಈ ಸ್ವರೂಪದ್ದು ಎಂದು, ಪದಾರ್ಥಗಳ (ದ್ರವ್ಯದ) ಮೂಲರಚನೆ ಈ ಬಗೆಯದು ಎಂದು ಅಭ್ಯಾಸ

ನಡೆದು ಗಟ್ಟಿ ಪದಾರ್ಥ, ದ್ರವ ಪದಾರ್ಥ, ಅನಿಲ ಪದಾರ್ಥ ಎಂದು ಮಾತ್ರ ಬೋಧೆಯಾಗುತ್ತಿದ್ದುದು ನಿಜವಾಗಿ ಅಣುಪರಮಾಣುಗಳಿಂದಾದುದು, ಅವುಗಳನ್ನಿನ್ನೂ ಸೂಕ್ಷ್ಮಾಂಶಗಳಾಗಿ ವಿಭಾಗಿಸಬಹುದು; Atom, Molecule, Proton, Neutron, Photon ಮುಂತಾದ ಅಂಶಗಳಾಗಿ ವಿಂಗಡಿಸಬಹುದು; ಅಣುಪರಮಾಣು ಎಂಬ ಪದಾರ್ಥವು ಒಂದು ಚಲನೆ, ಚೇತನವುಳ್ಳದ್ದು; ಅದರಲ್ಲಿ ಹೃದ್ಭಾಗ, ಪರಿಮಂಡಲ, ಚಲನೆ ಹೀಗೆ, ಇವನ್ನು ಮಾರ್ಪಡಿಸಬಹುದು ಎಂದು ವಿವೇಚನೆ ನಡೆದಿದೆ. ಇವುಗಳ ಪ್ರಸರ ಅಲೆ ಅಲೆಯಾಗಿ ಇರುತ್ತದೆಯೊ (Waves), ಅಂಶಕಣಗಳಿಂದ ಕೂಡಿದುದೊ (Corpuscles) ಅಥವಾ ಸೂಕ್ಷ್ಮವಾದ Particlesನಿಂದ ಆಗಿದೆಯೊ ಎಂದು ಪ್ರಯೋಗಗಳು ನಡೆಯುತ್ತಿವೆ. ಇದರ ಮತ್ತು ನಕ್ಷತ್ರ ಶಾಸ್ತ್ರದ ಗಣಿತಗಳಿಂದ ವಸ್ತು ಹುಟ್ಟಿದ್ದು ಹೀಗೆ, ಈ ಸ್ಥಿತಿಗೆ ಬರುವುದಕ್ಕೆ ಇಷ್ಟು ಕಾಲ ಹಿಡಿಯಿತು, ಇದು ಹೇಗೆ ಮುಂದೆ ರೂಪಗೊಳ್ಳಬಹುದು, ನಾಶವಾಗಬಹುದು, ನಿಜವಾಗಿ ಏನಾದರೂ ನಾಶವಾಗುತ್ತದೆಯೆ? – ಎಂಬುದರ ಅಭ್ಯಾಸ ನಡೆದಿದೆ. ಇದು ಹೇಗೆ ನಡೆಯಿತೆಂಬುದನ್ನು ಅಳೆಯುವಾಗ ಇದು ಏಕೆ ಹೀಗಾಯಿತು, ಎಲ್ಲಕ್ಕೂ ಆರಂಭ ಒಂದಿದೆಯೆ, ಈ ಆರಂಭ ನಿಜಕ್ಕೂ ಆಯಿತೆ, ಇನ್ನೂ ಯಾವುದಾದರೂ ಅತಿ ಪ್ರಾಕೃತಿಕವಾದ ಶಕ್ತಿಯ ಇಚ್ಛೆಯಿಂದ, ಬಲದಿಂದ ಆಗಿರಬಹುದೊ? ಈ ಪ್ರಕೃತಿ ನಿರ್ಮಾಣವಾದುದು ಎನ್ನಬಹುದೊ? ಯಾವುದು ಮುಂದು, ಯಾವುದು ಹೇಗೆ?– ಎಂಬುದು ವಿಜ್ಞಾನ ತಂತ್ರದಲ್ಲಿ ಪರಿಗಣನೆಗೆ ಬಂದರೂ ನೇರವಾಗಿ ಅದನ್ನು ಕುರಿತು ನುಡಿಯಲು ವಿಜ್ಞಾನ ತೊಡಗುವುದಿಲ್ಲ. ಅದರ ನಿರ್ಣಯಕ್ಕೆ ಭೌತವಿಜ್ಞಾನ ಮತ್ತು ನಕ್ಷತ್ರ ಮಂಡಲಗಳ ವಿಜ್ಞಾನ (Physics and Astrophysics) ಬೆಳಕು ಹಾಯಿಸಬಲ್ಲದೇನೊ; ನಿರ್ಣಯಕ್ಕೆ ಬೆಲೆಯುಳ್ಳ ಒಂದು ಬಗೆಯ ಪ್ರಮಾಣವನ್ನು ಒದಗಿಸಬಹುದೇನೊ. ಅದು ಮನುಷ್ಯನ ಬುದ್ಧಿಶಕ್ತಿ, ಅವನು ಬಳಸುವ ಸಾಧನಗಳು, ಅವನು ಪ್ರಮಾಣವೆಂದು ಅಂಗೀಕರಿಸುವ ಮೌಲ್ಯಗಳು, ಗಣಿತ ಪ್ರಕ್ರಿಯೆ, ದೂರದರ್ಶಿನಿ ಮುಂತಾದ ಸಾಧನಗಳು ಮಾತ್ರವೇ ಸಾಧಕ ಪ್ರಮಾಣ. ಎಲ್ಲಕ್ಕೂ ಕಾರ್ಯಕಾರಣ ಸಂಬಂಧ, ನಿರ್ಣಯವನ್ನು ಖಚಿತವಾಗಿ ಕಂಡುಹಿಡಿದು, ಎಲ್ಲಿನ ಯಾರು ಈ ಪ್ರಯೋಗವನ್ನು ಮಾಡಿದರೂ ಇದೇ ತೀರ್ಮಾನಕ್ಕೆ ಬರುವಂತೆ ನೋಡಿಕೊಳ್ಳುತ್ತಾರೆ. ಅತಿಮಾನವ, ಅತಿಪ್ರಾಕೃತಿಕ ಎಂಬ ಯಾವ ಅಂಶಕ್ಕೂ ಈ ವ್ಯಾಸಂಗದಲ್ಲಿ ಎಡೆಯಿಲ್ಲ. ಅಂಥುದಿದ್ದರೆ ಅದರ ಪರ್ಯಾಲೋಚನೆಯ ವಿಷಯವಲ್ಲ ಅದು.

ಭೌತಶಾಸ್ತ್ರದ ಬೆಳವಣಿಗೆ ಅದ್ಭುತವಾಗಿದೆ ಎಂದೆ. ಅದರ ತಿಳಿವಳಿಕೆ ಇಲ್ಲದಿದ್ದರೆ ಇಂದಿನ ಯಾವ ಯಂತ್ರ ತಂತ್ರಾದಿಗಳೂ ಇಷ್ಟು ಸೂಕ್ಷ್ಮವಾಗಿ ಬೆಳೆಯುವುದಕ್ಕಾಗುತ್ತಿರಲಿಲ್ಲ. ಚಲನೆ, ಶಾಖ, ವೇಗ, ಶಕ್ತಿ, ಚೈತನ್ಯಗಳ ಅನುಕೂಲ–ವಿರೋಧ, ಶಬ್ದ, ಬೆಳಕು, ನೂಕು ಒತ್ತಡ, ಹಗುರ, ಬಿಗಿ, ತೂಕ, ಧಾರಣಾಶಕ್ತಿ, ಪದಾರ್ಥಗಳ ಗುಣ ಲಕ್ಷಣ, ಪ್ರಯೋಜನ ಇವೆಲ್ಲ ಒಂದು ಕಡೆ ಅರಿವಿನ ಅಂಶಗಳು. ಇನ್ನೊಂದು ಕಡೆ



ಸೂಕ್ಷ್ಮವಾದ, ಪ್ರಖರವಾದ ಉಪಕರಣಗಳನ್ನು ಯಂತ್ರವಿಧಾನಗಳನ್ನು ನಿರ್ಮಿಸಿಕೊಳ್ಳಲಾಗುತ್ತಿರಲಿಲ್ಲ. ವಿದ್ಯುಚ್ಛಕ್ತಿ ಅಣುಶಕ್ತಿಗಳಂಥ ಮಹಾಶಕ್ತಿಗಳನ್ನು ಲೋಕ ಹಿತಕ್ಕೂ, ನಾಶಕ್ಕೂ ಬಳಸಿಕೊಳ್ಳಬಲ್ಲ ವಿಶ್ವಾಸಗಳು ಉಂಟಾಗುತ್ತಿರಲಿಲ್ಲ. ವಸ್ತು ಪ್ರಪಂಚದ ಮೂಲಾಂಶವಾವುದು; ಅದು ಅತ್ಯವಿಭಾಜ್ಯವಾದಾಗ ಯಾವ ಮೂಲಾಂಶಗಳಿಂದ ಕೂಡಿದೆ; ಘನ ದ್ರವ ಅನಿಲ ಎಲ್ಲಾ ಒಂದರ ಪ್ರಕಾರ ಇನ್ನೊಂದು ಘನವೆಂದರೆ, ಚೈತನ್ಯ (Energy) ಇನ್ನೊಂದು ಪ್ರಕಾರ ಮಾತ್ರ. ಇದು ಏಕೆ ಹೀಗಾಯಿತೊ ಕಾಣೆವು. ಇದೆಲ್ಲದರ ಅಳತೆಯಲ್ಲಿ ಕಾಲದ ಪ್ರಭಾವ, ಆದ್ದರಿಂದ ದರ್ಶನದ ಪ್ರಭಾವ ವ್ಯತ್ಯಾಸಗೊಳ್ಳಬಹುದು ಎಂಬುದನ್ನು ಈ ಶಾಸ್ತ್ರ ಅನ್ವೇಷಿಸುತ್ತದೆ, ತಿಳಿಸುತ್ತದೆ.

ರಸಾಯನಶಾಸ್ತ್ರ ದ್ರವ್ಯದ ಇನ್ನೊಂದು ಮುಖವನ್ನು ತೋರಿಸುತ್ತದೆ. ಇಲ್ಲಿಯೂ ಪರೀಕ್ಷಾ ಪ್ರಯೋಗಗಳೇ ಮುಖ್ಯ. ವಸ್ತುಗಳ ಸ್ವರೂಪವನ್ನು ಇದು ಕಾಣುವ ರೀತಿ ಇನ್ನಷ್ಟು ವಿಚಕ್ಷಣೆಯದು. ಇದರಲ್ಲಿ ಎರಡು ಭಾಗಗಳುಂಟು. ಒಂದು ಸಾವಯವ ಪ್ರಪಂಚಕ್ಕೆ ಸಂಬಂಧಿಸಿದ್ದು. ಅಣುಶಾಸ್ತ್ರಜ್ಞರು ಲೋಕಸಮಸ್ತವೂ ಅಣ್ವಂಶದಿಂದ ಆದದ್ದು, ಮೂಲಾಂಶದ ರಚನೆ ಹೀಗೆ ಹೀಗೆ ಎಂದು, ಸುಮಾರು **92** ಮೂಲದ್ರವ್ಯಗಳು ವಿಶಿಷ್ಟವಾಗಿವೆ ಎನ್ನುತ್ತಾರೆ. ಸ್ವಲ್ಪ ಹೆಚ್ಚು ಕಡಮೆ, ಜಲಜನಕವನ್ನು ಇತರ ಎಲ್ಲಕ್ಕಿಂತಲೂ ಆಧಾರ ಅಥವಾ ಮೂಲ ಮಾನವಾಗಿಟ್ಟುಕೊಂಡು ಅವುಗಳ ಅಣುಗುರುತ್ವವನ್ನು (Atomic Weight) ನಿರ್ಣಯಿಸಿದ್ದಾರೆ. ಈ ಜಲಜನಕದ ಅಣು **27** ಸೊನ್ನೆಗಳಿಂದ ಕೂಡಿದ **1.649** ಸಂಖ್ಯೆಯೊಂದರ ಗ್ರಾಮಿನ ಭಿನ್ನಾಂಶವಾಗಿದೆ ಎಂದು ಲೆಕ್ಕ ಮಾಡಿದ್ದಾರೆ. ಇದನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಈ ವಸ್ತುಗಳ ಉತ್ಪತ್ತಿ, ಅದರ ಲಕ್ಷಣಗಳು,ಇಂಥ ಪದಾರ್ಥಕ್ಕೆ ಇನ್ನೊಂದು ಪದಾರ್ಥ ಸೇರಿದರೆ ಏನೇನು ಪರಿಣಾಮಗಳಾಗುತ್ತವೆ, ಎಂಥೆಂಥ ಪದಾರ್ಥಗಳು ಹುಟ್ಟಿಕೊಳ್ಳುತ್ತವೆ ಎಂಬುದನ್ನು ಪ್ರಯೋಗಶಾಲೆಗಳಲ್ಲಿ ನಿರಂತರವಾಗಿ ಪ್ರಯೋಗಮಾಡಿ ಇವೊತ್ತು ಪ್ರಪಂಚದಲ್ಲಿನ ಎಲ್ಲ ಮಾನವ ಸಾಮಗ್ರಿಗಳನ್ನೂ ನಿರ್ಮಾಣ ಮಾಡಿದ್ದಾರೆ. ಶಾಖವನ್ನು ಬಳಸಿಕೊಂಡು ಗಟ್ಟಿ ಪದಾರ್ಥಗಳ ಮೇಲೆ, ದ್ರವ ಪದಾರ್ಥಗಳ ಮೇಲೆ, ಇನ್ನೂ ಎಷ್ಟೆಷ್ಟೋ ಬಗೆಯಲ್ಲಿ ಸಂಯೋಜನಗಳು ಎಂಥವಾಗುತ್ತದೆ ಎಂಬ ಕಾರ್ಯ ಅಲ್ಲಿಗೆ ಸಂಬಂಧಿಸಿದುದು. ಆಹಾರ ಸಾಮಗ್ರಿಗಳು, ಬಟ್ಟೆ ಬರೆ, ಉಕ್ಕು ಮುಂತಾದ ಕಬ್ಬಿಣದ ಪ್ರಕಾರ ವಿಶೇಷಗಳು, ಔಷಧಗಳು, ಬಿಗಿ, ಸಡಿಲತೆ, ಘನತೆ, ದೀರ್ಘತೆ, ಮೊನೆ, ಹದ, ಮುಂತಾದವೆಲ್ಲ ಇಲ್ಲಿ ರೂಪಿತವಾಗುವ ಪದಾರ್ಥ ಲಕ್ಷಣಗಳು. ನಿರವಯವ ಭಾಗಗಳೆಂದರೆ ಇವು, ಸಾವಯುವವೆಂದಾಗ ಇಂಥವು; ಇಂಥಲ್ಲಿ ರಾಗ, ರಸ, ಗಂಧ, ಲೇಪನ, ಮೃದು ಕಠಿಣ, ಮಿತ, ಅಧಿಕ, ಕರ್ಕಶ, ನುಣುಪು ಮುಂತಾದ ಮಾರ್ಪಾಡುಗಳು ಈ ರಾಸಾಯನಿಕ ವಿಜ್ಞಾನದಿಂದ ಸಾಧಿತವಾಗುತ್ತವೆ. ಭೌತ ಮತ್ತು ರಸಾಯನ ಸಂಬಂಧಗಳೂ ಸೇರಿ ಕ್ರಿಯಾಪ್ರಪಂಚ ಅತ್ಯದ್ಭುತವಾಗಿ ಇಂದಿನ ಜೀವನ ತಂತ್ರಕ್ಕೆ ನೆರವುಕೊಟ್ಟು ಸಮಸ್ತ ಉತ್ಪತ್ತಿಗೂ ಸುಖ ದುಃಖಾದಿಗಳಿಗೂ ಕಾರಣವಾಗುತ್ತಿವೆ.

ಒಂದು ಸಂಗತಿಯನ್ನು ಮಾತ್ರ ಮರೆಯಬಾರದು: ಪ್ರಕೃತಿಯಲ್ಲಿ ಪದಾರ್ಥಗಳೂ ಶಕ್ತಿಗಳೂ ಇಲ್ಲವಾಗಿದ್ದಿದ್ದರೆ ಹೊಸದಾಗಿ ಕೇವಲವಾಗಿ ಬುದ್ಧಿ ಕುಶಲತೆಗಳು ತಾವೇ ಏನನ್ನೂ ಮಾಡಲಾರವು. ನಿಸರ್ಗ ಸಂಪತ್ತು ಹೀಗೆ ಈ ಭೌತ, ರಾಸಾಯನಿಕ ತಂತ್ರಕ್ಕೆಲ್ಲ ಮೂಲ. ಆಧಾರ ತತ್ವಗಳನ್ನು ಕಂಡುಹಿಡಿಯುವುದು ಭೌತಶಾಸ್ತ್ರದ ಕೆಲಸ. ಅವನ್ನು ಪ್ರಯೋಗಿಸಿ ಸಂಯೋಜನೆಗಳನ್ನು ವಿಶ್ಲೇಷಣೆಗಳನ್ನು ಮಾಡುವುದು ರಸಾಯನಶಾಸ್ತ್ರದ ಕಾರ್ಯ. ಸಂಯೋಜನೆಯ ಕಾರ್ಯ, ವಿಭಜನೆಯ ಕಾರ್ಯ, ಆ ಮೂಲಕ ಹೊಸ ದ್ರವ್ಯಗಳ ಉತ್ಪತ್ತಿ ಇದರ ಕೆಲಸ.

**–5–**

ಖಗೋಳ ಮತ್ತು ವಾಯು ವಿಜ್ಞಾನ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಇವು ಪ್ರಪಂಚದ ಒಂದು ಮುಖವನ್ನು ಅನ್ವೇಷಿಸುವ ವಿಧಾನಗಳು. ಸಸ್ಯ, ಪ್ರಾಣಿ ವರ್ಗದ ಪರೀಕ್ಷಣ ವಿಜ್ಞಾನದ ಇನ್ನೊಂದು ಶಾಖೆಯ ಕೆಲಸ. ಅಲ್ಲಿನ ಭಾಗಗಳು, ಅಂಶಗಳು ಪರೀಕ್ಷಣ ಸಮಯದಲ್ಲಿ, ಸ್ವರೂಪದಲ್ಲಿ, ಗುಣದಲ್ಲಿ ಬೇರೆಯಾಗುವುದಿಲ್ಲ. ಆದುದರಿಂದ ಲೋಹ ಹೀಗೇ ಇರುತ್ತದೆ, ಧಾತು ಹೀಗೇ ನಡೆಯುತ್ತದೆ, ಚಲನೆ ವೇಗಗಳ ಸ್ವರೂಪ ಇಷ್ಟೇ ಸರಿ ಎಂಬುದನ್ನು ಶಾಶ್ವತ ಗುಣಗಳು ಎಂದು ಎಣಿಸಬಹುದು. ಪರೀಕ್ಷೆಯ ಯಾವ ಸಂದರ್ಭದಲ್ಲಿಯೂ ಕೆಲವು ಸಂಗತಿಗಳನ್ನು ಇವು ಸ್ಥಿರ, ನಿತ್ಯ ಎಂಬಂತೆ ನಂಬಿ ಮುಂದೆ ಹೋಗಬಹುದು. ಸಸ್ಯ, ಪಕ್ಷಿ, ಪ್ರಾಣಿಗಳಲ್ಲಿ ಬೆಳವಣಿಗೆ, ಮಾರ್ಪಾಡು, ಕ್ಷೀಣತೆ, ಅನಾರೋಗ್ಯ, ಸಾವು ಕಾಣುತ್ತದೆ. ಕಣ್ಣಿಗೆ ಕಾಣುವಂತೆ ಸಸ್ಯಗಳು ನೆಲದ ಒಡಲಿಂದ ಹುಟ್ಟಿ ಮೊಳಕೆಯಾಗಿ, ಗಿಡವಾಗಿ, ರೆಂಬೆ, ಕೊಂಬೆ, ಎಲೆ, ಹೂ, ಹಣ್ಣು, ಬಿತ್ತವಾಗಿ ಪುನಃ ಅವುಗಳಿಂದ ಅಂಥವೇ ಜಾತಿಗಳ ಮತ್ತು ಜೀವಗಳ ಉತ್ಪತ್ತಿ ನಡೆಯುತ್ತಿರುತ್ತದೆ. ಕೆಲವಕ್ಕೆ ಆಯುರ್ಮಾನ ಉಂಟು. ಅತ್ಯಲ್ಪ ಕಾಲದಲ್ಲಿ ಹುಟ್ಟು, ಬೆಳೆ, ಸಾವು ಇಲ್ಲಿ ಗೋಚರ. ಗಾಳಿ, ಮಳೆ, ಕೃಷಿ, ಪೀಡೆ, ರಕ್ಷಣೆ, ಪೋಷಣೆ ಇವುಗಳಿಂದ ಇವು ಮಾರ್ಪಡಬಲ್ಲವು. ಹುಟ್ಟಿದಾಗ ಇದ್ದ ಲಕ್ಷಣ, ಗುಣ, ವರ್ಣ, ಗಡಸು, ಕೋಮಲತೆ ಅವುಗಳ ಜೀವಮಾನದಲ್ಲಿ ವ್ಯತ್ಯಸ್ತವಾಗುತ್ತದೆ. ಅವುಗಳಲ್ಲಿ ಗಾಳಿ ಮಳೆ ಶಾಖಗಳಿಗೆ ಮಾರ್ಪಡುವ ಅಂಶವಿರುತ್ತದೆ. ಕೆಲವು ವಾಯುಗುಣಗಳಲ್ಲಿ ಉಳಿಯುತ್ತವೆ, ಕೆಲವು ಉಳಿಯವು. ಕೆಲವು ಹುಟ್ಟು ಕಾಣುವುದು ಅಲ್ಲಿ ಅಶಕ್ಯ. ಇವೆಲ್ಲವೂ ಯಾವುದೊ ಒಂದೊಂದು ವರ್ಗಕ್ಕೆ ಸಂಬಂಧಿಸಿದಂತೆ ಬೇರು, ನಾರು, ಎಲೆ ಇತ್ಯಾದಿಗಳುಳ್ಳವಾಗಿ ರೆಕ್ಕೆ ಪುಕ್ಕ ಚಲನೆ ನಡೆ ಉಳ್ಳಂತೆ ಬೆಳೆಯುತ್ತದೆ. ಅವಕ್ಕೆ ಗೊತ್ತಿದೆಯೊ ಇಲ್ಲವೊ ಕಾಲ ಎಂಬುದೊಂದಿದೆ ಎಂಬ ಸಂಗತಿ. ಮನುಷ್ಯರು ತಮ್ಮನ್ನು ಕುರಿತು ಏನು ಮಾಡುತ್ತಿದ್ದಾರೆ ಎಂಬ ಪ್ರಜ್ಞೆಯೂ ಇದೆಯೋ ಇಲ್ಲವೊ ಗೊತ್ತಿಲ್ಲ. ಯಾವುದೋ ಜೀವರಸವೆನ್ನಬಹುದಾದ ಒಂದು ದ್ರವ್ಯ ಅವುಗಳಲ್ಲಿ ಸಂಚಾರ ಮಾಡುತ್ತದೆ. ಪರೀಕ್ಷಣಗಳಿಂದ ಯಾವುದರಲ್ಲಿ ಪ್ರವಹಿಸುವ ಜೀವ ಎಂಥದು ಎಂಬುದನ್ನು ಕಂಡುಹಿಡಿಯಬಹುದು. ಈ ವರ್ಗಗಳಲ್ಲಿ ಇದು ಮೂಲವರ್ಗ, ಇದು



ಸಂತತಿ, ಇದರಿಂದ ಹುಟ್ಟಿದವೂ ಬೆಳೆದವೂ ಇನ್ನೊಂದು, ಇದರಿಂದ ಉತ್ಪನ್ನವಾದವು, ವಿಭಕ್ತವಾದವು, ಮಿಶ್ರವಾದವು ಇಂಥವು ಎಂಬ ಎಣಿಕೆ ಮಾಡಬಹುದು. ರಸಾಯನ ಶಾಸ್ತ್ರದಲ್ಲಿಯೂ ಒಂದು ಪದಾರ್ಥದಿಂದ ಇನ್ನೊಂದು ಪದಾರ್ಥವನ್ನು ಬಣ್ಣ ಗಂಧಾದಿಗಳನ್ನು ಮಾರ್ಪಡಿಸಬಹುದಾದರೂ ಅಲ್ಲಿ ದ್ರವ್ಯಗಳು ನಾವು ಹೇಳಿದ ಹಾಗೆ ನಡೆದುಕೊಳ್ಳುತ್ತವೆ. ಎಲ್ಲಿಯೂ ಅವುಗಳ ಸ್ವಭಾವದಲ್ಲಿ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಇಲ್ಲಿ ಮಾನವರು ಮಾಡಿದ್ದೆಲ್ಲ ನಡೆಯುತ್ತದೆ ಎನ್ನುವ ಹಾಗಿಲ್ಲ. ನಿರ್ಣಾಯಕವಾಗಿ ಕೆಲವು ವರ್ಗಗಳು ಬೆರೆಯುತ್ತವೆ, ಕೆಲವು ಇಲ್ಲ. ಇದಕ್ಕೆ ಹುಟ್ಟು, ಸಾವು ವಿಶಿಷ್ಟ ಲಕ್ಷಣ. ಮೂಲ ಅಥವಾ ಜನಕವರ್ಗ, ಅದರ ಶಾಖೆ (Species), ಅದರ ಕಡೆಯ ಸಂತತಿಯಲ್ಲಿ ಯಾವುದೊ ಒಂದು ನಿರ್ದಿಷ್ಟವಾದ್ದು (The particular) ಎಂಬ ವರ್ಗೀಕರಣ ಇಲ್ಲಿ ಹೆಚ್ಚು ನಿಷ್ಕೃಷ್ಟ. ಇಲ್ಲಿ ರಸಾಯನಶಾಸ್ತ್ರಕ್ಕೆ ಸಂಬಂಧಿಸಿದ ಎಷ್ಟೋ ಅಂಶಗಳು ಉಪಯೋಗಕ್ಕೆ ಬರುತ್ತವೆ. ರಾಸಾಯನಿಕ ಕ್ರಿಯೆ ಇಲ್ಲಿ ಉಪಕರಣ ಸಾಮಗ್ರಿ–ಇವನ್ನು ಬೆಳಸಲು, ನಾಶ ಮಾಡಲು, ರೂಪಾಂತರ ಮಾಡಲು, ಫಲಾಫಲ ಗಳನ್ನು ಹೆಚ್ಚಿಸಲು. ಆದರೆ ಆಯಾ ವರ್ಗ ಮೂಲ ಲಕ್ಷಣಗಳನ್ನು ಬಹುವಾಗಿ ಉಳಿಸಿ ಕೊಳ್ಳುತ್ತವೆ. ಬೆಳೆದ ಪ್ರತಿಯೊಂದು ಸಸ್ಯವೂ, ಪ್ರಾಣಿಯೂ ತನ್ನಂಥ ಇನ್ನೊಂದನ್ನೊ ಹಲವನ್ನೊ ಲೋಕದಲ್ಲಿ ಹುಟ್ಟುಹಾಕಿಯೇ ನಾಶವಾಗುತ್ತದೆ. ಒಂದು ಗಿಡ, ದಿಂಡು, ಪಟ್ಟೆ, ಎಲೆ, ಹೂ, ಕಾಯಿ, ಹಣ್ಣು ಕೊಡುವಾಗ ಒಂದು ಗೊನೆ ಚಿಕ್ಕದೊ, ದೊಡ್ಡದೊ ಬಿಟ್ಟಮೇಲೆ ಜೀವವನ್ನು ಮುಗಿಸಿಕೊಳ್ಳುತ್ತದೆ. ಅದರ ಸುತ್ತ ನಾಲ್ಕಾರು ಸಣ್ಣ ಮೊಳಕೆ ಅಂಥವೇ ಆಗಬಲ್ಲವು. ಹೊಸವು ಹುಟ್ಟಿಕೊಳ್ಳುವಂತೆ ಮೊಳಕೆಗಳನ್ನು ಉಳಿಸುತ್ತದೆ. ಯಾವುದರದೊ ಒಂದು ಸಣ್ಣ ಬಿತ್ತ ಮರವಾಗಿ ಬೆಳೆದು, ಸಾವಿರಾರು ಹೂಗಳನ್ನು ತಳೆದು, ಅವುಗಳಲ್ಲಿ ಹಲವಾದರೂ ಕಾಯಾಗಿ ಹಣ್ಣಾಗಿ, ಒಂದೊಂದು ಕಾಯಲ್ಲಿ ನೂರು, ಸಾವಿರ ಬಿತ್ತಗಳನ್ನು ಉಳಿಸಿಕೊಳ್ಳುತ್ತವೆ. ಹತ್ತಾರು, ನೂರಾರು ವರ್ಷ ಇಂಥ ಫಲಗಳನ್ನು ಕೊಡುವ ಬಿತ್ತ ಸಸಿಗಳನ್ನು ಕೊಟ್ಟು ತಮ್ಮ ತಳಿಯನ್ನು ಬೆಳಸಿ, ಸಾಗುವಾನಿ ಮುಂತಾದವಾಗುವ ಮರಗಳಿರುತ್ತವೆ. ಸಾವಿರ ವರ್ಷ ಬೆಳೆದ ಮರಗಳು ತಮ್ಮ ಚರಿತ್ರೆಯನ್ನು ಕಾಣಿಸುವಂತೆ ಬೆಳೆದಿರುತ್ತವೆ. ಒಂದೊಂದರ ಆಯುರ್ಮಾನ ಅವಕ್ಕೆ ತಕ್ಕಂತೆ ಗುರುತಿಸಲಾಗುವಂತೆ ರೇಖೆಗಳನ್ನು, ಉಂಗುರದ ಗುರುತುಗಳನ್ನು ಧರಿಸುತ್ತವೆ. ಒಂದು ತೆಂಗು, ಅಡಕೆ ಗೊತ್ತಾದ ಕಾಲಕ್ಕೆ ಇಷ್ಟು ಸಲ ಗರಿ ಕಳಚಿದೆ, ಒಂದು ಪ್ರಾಣಿ ಇಷ್ಟು ಮರಿ ಹಾಕಿದೆ, ಹೀಗೇ ಒಂದು ಹೆಣ್ಣು ಎಷ್ಟೋ ಮಕ್ಕಳ ತಾಯಾಗಿದ್ದಾಳೆ ಎಂಬ ಲೆಕ್ಕದ ಗುರುತು ಸಿಕ್ಕುತ್ತದೆ. ಹೊರಗಣ್ಣಿಗೆ ಕಾಣಿಸದಿದ್ದಾಗ ಅದನ್ನು ಸೂಕ್ಷ್ಮ ದರ್ಶಿನಿ ಯಂತ್ರಗಳಲ್ಲಿ – ನಕ್ಷತ್ರ ಮಂಡಲಗಳನ್ನು ಅಳೆಯಲು ದೂರದರ್ಶಿನಿಗಳು (Telescopes) ಬೇಕಾದರೆ, ಇಲ್ಲಿ ಸೂಕ್ಷ್ಮದರ್ಶಿನಿಗಳು (Microscopes) ಬೇಕು– ದರ್ಶಿಸುತ್ತಾರೆ. ಒಂದು ಎಲೆ, ಹೂವಿನ ಒಂದು ದಳ, ಅದರ ಬಣ್ಣದ ವಿನ್ಯಾಸ, ಒಂದು ಸಣ್ಣ ಸೂಕ್ಷ್ಮಾಂಶವನ್ನು ತೆಗೆದುಕೊಂಡು ಅದರ ಜೀವ ಲಕ್ಷಣಗಳನ್ನು, ಅಲ್ಲಿನ ರಸ ಸಂಚಾರದ ವಿಶೇಷಗಳನ್ನು, ಅಂಗರಚನೆಯನ್ನು ಅಳೆದು, ಹೇಗೆ ಅದರ ಪೋಷಣೆ,

ಕ್ಷಯ, ನಾಶ ಆಗುತ್ತದೆ ಎಂಬುದನ್ನು ನಕ್ಷೆ ಹಾಕಿ ತೋರಿಸಬಹುದು. ಬಣ್ಣಗಳ ಉತ್ಪತ್ತಿ ಹೇಗೆ, ರಸದ ಉತ್ಪತ್ತಿ ಹೇಗೆ, ಮಾರ್ಪಾಡು–ಬೆಳವಣಿಗೆ ಹೇಗೆ, ಯಾವುದು ಮೂಲಾಂಶ, ಆ ಜೀವಗುಣದ ಮಜಲುಗಳಾವುವು? – ಇತ್ಯಾದಿಗಳನ್ನೆಲ್ಲ ಪರಿಶೀಲಿಸಬಹುದು. ಇಂಥವೆಲ್ಲ ಹಿಂದೆಯೂ ನಡೆದಿದ್ದವು. ಅದಕ್ಕೆ ಸಂಬಂಧಿಸಿದ ತಿಳಿವಳಿಕೆ, ಆ ಪ್ರಪಂಚದ ಅನುಭವವಿದ್ದವರಿಗೆ ಸ್ಥೂಲವಾಗಿ, ಸೂಕ್ಷ್ಮವಾಗಿ ವಿದಿತವಾಗಿದ್ದುವು. ಈಗ ಅವುಗಳ ಸೂಕ್ಷ್ಮಾತಿಸೂಕ್ಷ್ಮಗಳ ಅರಿವು ಗೋಚರವಾಗುವಂತೆ ಒಂದು ಲೆಕ್ಕ ಅಳತೆಗೆ ಸಿಕ್ಕಿ, ತಮ್ಮ ಜೀವದ ಕ್ರಿಯೆ ಕ್ರಮ ವಿಧಾನಗಳನ್ನು ತೋರಿಸಿ ಕೊಡಬಲ್ಲ ಶಾಸ್ತ್ರದಲ್ಲಿ ವೇದ್ಯವಾಗುತ್ತದೆ. ಭೂಮಂಡಲದ ಜಲ ಮುಂತಾದ ಯಾವ ಯಾವ ವಲಯಗಳಲ್ಲಿ ಏನೇನು ಹೇಗೆ ಹೇಗೆ ಇವೆಯೊ, ಬೆಳೆಯುತ್ತವೆಯೊ ಇವುಗಳೆಲ್ಲದರ ಚರಿತ್ರೆ, ಸ್ವರೂಪಲಕ್ಷಣ, ಕ್ರಿಯಾವ್ಯಾಪಾರ ಪ್ರಕಟವಾಗುತ್ತದೆ. ಅವುಗಳ ವ್ಯಾಸಂಗ ವಿವರವಿವರವಾಗಿ, ಕೂಲಂಕಷವಾಗಿ ಪತ್ರಿಕೆಗಳಲ್ಲಿ, ಶಾಸ್ತ್ರಾಗಾರಗಳಲ್ಲಿ ಪ್ರಚಾರವಾಗುತ್ತವೆ. ದೊಡ್ಡ ಕ್ಷೇತ್ರಗಳಲ್ಲಿ ಅವುಗಳನ್ನು ಬಳಸಿ ಪರೀಕ್ಷಾಪ್ರಯೋಗಗಳು ತಜ್ಞರಿಂದ ನಡೆಯುತ್ತಿರುತ್ತವೆ. ಕೇವಲವಾಗಿ ಒಂದರ ವ್ಯಾಸಂಗವೂ ಅದರಿಂದ ಹುಟ್ಟಿಸಿ ಉತ್ಪತ್ತಿ ಮಾಡಿದ ಇನ್ನೊಂದು ಯಾವುದೋ ಸಸ್ಯದ, ಪ್ರಾಣಿಯ ಜೀವಗುಣವೂ ಹೇಗೆ ಮಾರ್ಪಡುತ್ತದೆ ಎಂಬುದರ ವಿಧಾನ, ಚರಿತ್ರೆ ಗೊತ್ತಾಗುತ್ತದೆ. ಇಲ್ಲಿ ಈ ಪ್ರತಿಯೊಂದು ಜೀವಕ್ಕೂ ಒಂದು ಚರಿತ್ರೆ ಉಂಟು. ರಸಾಯನಶಾಸ್ತ್ರದಲ್ಲೂ ಕಬ್ಬಿಣ, ಜಲಜನಕ, ಪಾದರಸ ಒಂದೇ ಗುಣವನ್ನು ಉಳ್ಳವು. ಇಲ್ಲಿ ಹಾಗಲ್ಲ, ಒಂದೊಂದು ಕಾಲಕ್ಕೆ, ಒಂದೊಂದು ದೇಶಕ್ಕೆ, ಒಂದೊಂದು ಮಾರ್ಪಾಡಿಗೆ, ಅವಸ್ಥೆಗೆ ತಕ್ಕಂತೆ ಈ ಚರಿತ್ರೆ ಎಡೆಯುಳ್ಳವಾಗುತ್ತದೆ. ಇಲ್ಲಿ "GENE", ಬೆಳೆ, ಮೃತಿ ಅಂಗಾಂಗ ವಿಭಾಗ, ಅವುಗಳಿಗೆ ಸಂಬಂಧಿಸಿದಂತೆ ವೀಕ್ಷಣೆ, ಕ್ರಮ, ಫಲ ಬೇರೆಯಾಗುತ್ತವೆ. ಒಳಗಿನ ಜೀವರಸ ಹೇಗೊ ಅದು ಪ್ರವಹಿಸುವ ಒಂದು ಮಾರ್ಗವೂ ಇರುತ್ತದೆ. ಅದನ್ನು ಕಾಪಾಡಲು ಒಂದು ತೊಗಟೆಯೊ, ದಿಂಡೊ, ಕಾಂಡವೊ ಇರುತ್ತದೆ. ಮೊಗ್ಗು ಒಂದು ಸಣ್ಣ ರಂಗಿನ ಅಂಶವಾಗಿ ಕಂಡದ್ದು ಬಲಿಯುತ್ತ ಬಲಿಯುತ್ತ ಅವಿಭಾಜ್ಯದಂತೆ ಕಾಣುವ ರೇಕುಗಳ ಉಂಡೆಯಾಗಿ, ಈ ಪ್ರತಿಯೊಂದು ರೇಕೂ ದಳವಾಗಿ ಬಿರಿದು ಅರಳುವಾಗ ತನ್ನಲ್ಲಿನದೊ ಹೊರಗಿನದೊ ಯಾವುದೋ ಒಂದು ಶಕ್ತಿ, ಜೀವಗುಣ ಅದನ್ನು ಫಲವತ್ತಾಗಿ ಮಾಡಲು, ದಳ ಉದುರಿ ಅದರ ಪರಿಮಳವೊ ಕೇಸರವೊ ಎಲ್ಲ ಹೋಗಿ ಮಿಡಿಯಾಗಿ ಕಾಯಾಗಿ, ಕಾಯಲ್ಲಿ ತಿರುಳು ರಸ ರುಚಿ ಹುಟ್ಟಿ ಬೆಳೆಯುತ್ತ ಬೆಳೆಯುತ್ತ ಬೇರೆ ರುಚಿಗೆ ತಿರುಗಿ, ಅದೇ ಖಾದ್ಯವಾಗಿ ಆಹಾರವಾಗಿ ಅದರ ಒಳಗೆ ತನ್ನ ಬಿತ್ತವನ್ನೂ – ಒಂದೊ ಎರಡೊ ಇನ್ನೆಷ್ಟೊ – ಬಲಿಸಿ, ಮೊದಲು ಕೀಳಲು ಬಾರದೆ ಇದ್ದದ್ದು ಪೂರ್ತಿ ಹಣ್ಣಾಗಿ ಕಳಿತು, ಒಣಗಿ, ಒಡೆದು ಮೇಲಿನ ತೊಗಟೆ ಬಿರಿದು, ನೆಲದ ಮೇಲೆ ಬೀಳುತ್ತದೆ. ಆಗ ಮನುಷ್ಯರೊ, ಇತರ ಪ್ರಾಣಿಗಳೊ ಅದನ್ನು ಮುಟ್ಟದಿದ್ದರೆ, ಗಾಳಿಯೊ ಮಳೆಯೊ ಎಲ್ಲೆಲ್ಲಿಯೊ ಹೊಡೆದುಕೊಂಡು



ಹೋಗಿ ಇನ್ನೆಲ್ಲಿಯೊ ಬಿದ್ದು ಮೊಳೆತು, ಒಂದೊಂದು ಬಿತ್ತವೂ ಮರವಾಗಬಲ್ಲದು. ಪ್ರಕೃತಿಯ ಈ ಸಂತತಿ ನಿರ್ಮಾಣ ಶಕ್ತಿ ವಿಸ್ಮಯಕರವಾದುದು. ಇದರಿಂದಲೆ ಹೊಸ ಕಾಡುಗಳನ್ನು ಬೆಳಸುವುದು; ಹಣ್ಣು ಹೂ ತರಕಾರಿ ಬೆಳೆವುದು; ಸಸ್ಯಾದಿಗಳ ಕೃಷಿ ಮಾಡಿ ತೋಟ ಗಾರಿಕೆ, ವ್ಯವಸಾಯಾಭಿವೃದ್ಧಿ ಮಾಡುವುದು. ಕೆಲವು ಗಾಳಿಗೆ ಹಾರಿಹೋಗುತ್ತವೆ. ಕೆಲವು ಮಳೆಗೆ ಸಿಕ್ಕಿ ದೂರ ಸಾಗುವುದು. ಕೆಲವು ಬಿದ್ದಲ್ಲಿಯೇ ಮೊಳೆಯುತ್ತವೆ. ಒಂದು ಬಿತ್ತವು ಇನ್ನೊಂದು ಅಂಥುದೇ ಮರದ ಜೀವಕ್ಕೆ ಕಾರಣ ಆಗಬಲ್ಲದ್ದಾಗಿರುವಾಗ ಇತರ ಜೀವಗಳಿಗೆ ಅವಕಾಶವಿಲ್ಲದಂತೆ ಲೋಕವೆಲ್ಲ ಕಾಡಾಗಬಹುದು.

ಇವೆಲ್ಲ ಸಾವಯವವಾದ್ದು, ಹುಟ್ಟಿ, ಬೆಳೆದು, ನಾಶವಾಗುವವರೆಗೂ ಯಾವುದೊ ಒಂದು ಬಗೆಯ ಅಂಗರಚನೆ, ಕಾರ್ಯಶಕ್ತಿ ಮತ್ತು ಅದರ ಬೆಳವಣಿಗೆ ಉಳ್ಳ (structure and function) ಹಾಗೆ ಫಲ ಉಳ್ಳದ್ದು. ಇವುಗಳ ಮೂಲವಾಗಿ ಒಂದು ಲೈಂಗಿಕ ಗುಣ ಕಾಣುತ್ತದೆ. ಗಂಡು ಹೆಣ್ಣು ಸತ್ವಗಳು ಶಕ್ತಿಗಳು ಮಿಳಿತವಾಗಿ, ಬೆಳವಣಿಗೆ– ಉತ್ಪತ್ತಿ, ಎಂದರೆ ಅದರ ಸಂತತಿ ಸಂಖ್ಯಾಬಲ ಬೆಳೆಯುತ್ತದೆ. ಈ ಗಂಡು ಹೆಣ್ಣುಗಳ ಉತ್ಪತ್ತಿ ಮೂಲಕಾರಣ ಹೀಗೆಯೆ ಎಂಬುದು ಇನ್ನೂ ಪೂರ್ತಿಯಾಗಿ ಗೊತ್ತಿಲ್ಲ. ಕೆಲವು ಪ್ರಾಣಿಗಳಲ್ಲಿ ಎರಡು ಶಕ್ತಿಗಳೂ ಒಂದರಲ್ಲಿಯೇ ಸೇರಿಕೊಂಡಿರುತ್ತದೆ. ಸಂತಾನೋತ್ಪತ್ತಿಗೆ ಸಂಬಂಧಿಸಿದ ಅನೇಕ ಕಾರ್ಯವಿಶೇಷ, ಅಂಗರಚನಾವಿಶೇಷ ಆಕರ್ಷಣ ಮತ್ತು ಕ್ರಿಯಾ ವಿಶೇಷಣ ಬೆಳೆಯುತ್ತ ಬರುತ್ತದೆ. ಈ ಆಕರ್ಷಣೆ ಗಂಡನ್ನು ಹೆಣ್ಣು, ಹೆಣ್ಣನ್ನು ಗಂಡು ಕೂಡಿಸಿಕೊಳ್ಳಲು ತೊಡಗುವ ಯತ್ನ, ಬಣ್ಣ, ಧ್ವನಿ, ಮೃದುತೆ, ಪರಿಮಳ, ಚಟುವಟಿಕೆ, ಆಟಪಾಟ, ಎರಡರ್ಥದಲ್ಲಿಯೂ ಋತುಚರ್ಯೆ ಇಂಥಲ್ಲಿ ಕಾಣುತ್ತದೆ. ಪ್ರಾಣಿವರ್ಗದಲ್ಲಿ ಸಾಹಸ, ಧೈರ್ಯ. ಒಂದೊಂದು ಜಾತಿಯ ಸಸ್ಯ, ಪ್ರಾಣಿವರ್ಗದಲ್ಲಿಯೂ ಗಂಡು ಹೆಣ್ಣುಗಳಿಗೆ ವಿಶೇಷವಾಗಿ ಅಂಗರಚನೆ, ಕೂಟ ಒಂದೊಂದು ಬಗೆಯದಾಗುತ್ತದೆ. ಸಸ್ಯಗಳಲ್ಲಿ, ಪಕ್ಷಿಗಳಲ್ಲಿ, ಪ್ರಾಣಿಗಳಲ್ಲಿ, ಸರ್ಪಗಳಲ್ಲಿ, ಜಲಚರಗಳಲ್ಲಿ ಇವುಗಳ ಸಂಚಾರ, ವ್ಯಾಪಾರ ಆಯಾ ವರ್ಗಕ್ಕೇ ವಿಶೇಷವಾದ್ದು. ಇವುಗಳಲ್ಲೆಲ್ಲಾ ಪರೀಕ್ಷಾಪ್ರಯೋಗಗಳನ್ನು ನಡಸಿ ಉತ್ಪತ್ತಿ ಹೆಚ್ಚಿಸುವುದು, ಕಡಮೆ ಮಾಡುವುದು, ಬೇರೆ ಮಾಡುವುದು, ಕಸಿ ಮಾಡುವುದು, ಹೊಸ ಬಗೆಯ ನಿರ್ಮಾಣ, ಮನುಷ್ಯನ ಪ್ರಯೋಜನಕ್ಕಾಗಿ ಮಾರ್ಪಡಿಸುವುದು, ಅವುಗಳ ಫಲವಂತಿಕೆ ಹೆಚ್ಚುವಂತೆ ಮಾಡುವುದರ ಜೊತೆಗೆ ಅವಕ್ಕೆ ತಗಲಬಹುದಾದ ಜಾಡ್ಯಗಳನ್ನು ಪರಿಹಾರ ಮಾಡುವುದು, ಬಣ್ಣಗಳಿಂದ ಬಣ್ಣಗಳನ್ನು, ಫಲದಿಂದ ಫಲವನ್ನು, ಬಿತ್ತದ ಸಾರದಿಂದ ಬಿತ್ತದ ಸಾರವನ್ನು ಮಾಡುವುದು, ಒಂದು ಕಡೆಯಲ್ಲಿ ಬೆಳೆದುದನ್ನು ಇನ್ನೊಂದೆಡೆಗೆ ಸಾಗಿಸುವುದು, ಒಂದು ಜಾತಿಯ ಸಸ್ಯಗಳನ್ನೇ ಕೆಡುಕಿನವೆಂದು ನಾಶಮಾಡುವುದು– ಇವೆಲ್ಲ ಇಲ್ಲಿ ನಡೆಯುತ್ತದೆ. ಇಲ್ಲಿನ ಪರೀಕ್ಷಾ ಪ್ರಯೋಗದ ಲಕ್ಷಣ ರಾಸಾಯನಿಕ

ಪ್ರಯೋಗಗಳನ್ನೆಲ್ಲ ಇವು ಬಳಸಿಕೊಳ್ಳುತ್ತವೆ. ಬಳಸುವವರು ಮನುಷ್ಯರು. ಅವೇ ಕೇವಲವಾಗಿ ಸಹಜ ಲಕ್ಷಣಗಳನ್ನು ಮೀರುವುದಿಲ್ಲ.

ಇವುಗಳಲ್ಲಿಯೂ ಮಟ್ಟಗಳಿವೆ. ಇಲ್ಲಿ ಹಣ್ಣು ಕಾಣುತ್ತವೆಯೊ ಇಲ್ಲವೊ ಎಂಬಂತೆ ಒಂದು ರಾಗಿಯ ಕಾಳಿನಂತೆ ಕಾಣುವ ಹಣ್ಣಿಂದ ಹಿಡಿದು ಕಿತ್ತಳೆಯ ಹಣ್ಣಿನಂಥ ವಿಶಿಷ್ಟ ಸಾವಯವ ಸಂಪತ್ತು ಬಹುರಮಣೀಯವಾಗಿ ಬೆಳೆದು ಕಾಣುತ್ತದೆ. ಒಂಟೊಂಟಿಯಾಗಿ ಬೆಳೆವವುಗಳಿಂದ ಗೊಂಚಲುಗೊಂಚಲಾಗಿ ಬೆಳೆವವಿರುತ್ತವೆ. ಕಿತ್ತಳೆ, ಹಲಸು, ಮಾವು, ಬಾಳೆ, ದ್ರಾಕ್ಷಿ ಮುಂತಾದವುಗಳನ್ನು ನೋಡಿದರೆ ಎಷ್ಟು ಸುಂದರ ವಿನ್ಯಾಸವೊ! ಕಿತ್ತಳೆಯೊಂದನ್ನು ಉದಾಹರಿಸೋಣ: ಹೊರಗೆ ತೊಗಟೆ, ಅದರ ಬಣ್ಣ ಆ ತೊಗಟೆಯಲ್ಲಿನ ಒಳಭಾಗ ಬೇರೆ ಲಕ್ಷಣದ್ದು. ಒಳಗೆ ತೊಳೆ, ತೊಳೆಯ ಸುತ್ತ ನಾರು, ಅದನ್ನು ಬಿಡಿಸಿದರೆ ಎಂಟು ಹತ್ತು ತೊಳೆಗಳನ್ನು ತೆಳ್ಳನೆಯ ಪೊರೆಯಿಂದ ಮಾಡಿದ ಪ್ರತ್ಯೇಕ ಪ್ರತ್ಯೇಕ ತೊಳೆಗಳು. ಪ್ರತಿಯೊಂದು ತೊಳೆಯ ಬಾಯಿಗೂ ಅದನ್ನು ರಕ್ಷಿಸುವ, ಕಾಪಾಡಿ ಬೇರೆಮಾಡುವುದಕ್ಕೆ ಎಂಬಂತೆ ಆ ತೊಳೆಯ ಬಾಯನ್ನು ರಕ್ಷಿಸುವ ದಾರದ ಎಳೆಯ ಕಟ್ಟು, ಪೊರೆ. ಒಂದರಿಂದ ಒಂದು ಬೇರೆಯಾಗಿ ಗುಂಡಗೆ ಸುತ್ತಲೂ ಇರುವ ತನ್ನಂತಹ ಇತರ ತೊಳೆಗಳಿಂದ ಅವನ್ನು ಬೇರೆ ಮಾಡಿ, ಹೊರಗಿಗಿಂತ ಒಳಗೆ ಗುಂಡಗೆ ಸುಂದರವಾದ ಭದ್ರ ವಲಯವನ್ನು ಮಾಡಿಕೊಂಡಿರುತ್ತದೆ. ಒಂದೊಂದು ತೊಳೆಯ ಬಾಯಿ ತೆರೆದರೆ, ಒಂದೊಂದರಲ್ಲಿಯೂ ಮೃದುವಾದ ರಸವತ್ತಾದ ಕುಸುಮೆ. ಅದರೊಳಗೆ ಆ ಕಡೆ, ಈ ಕಡೆ ಮೂರೊ ನಾಲ್ಕೊ ಬಿತ್ತ ಇರುತ್ತವೆ. ತಿನ್ನುವವರಿಗೆ ತೊಳೆ, ಕುಸುಮೆ; ಬೆಳೆಯುವವರಿಗೆ ಬಿತ್ತ. ಈ ಸೌಂದರ್ಯ, ರುಚಿ, ಬಣ್ಣ ರಚನೆ, ಭವ್ಯವಾದ ಸೃಷ್ಟಿಯೆ ಒಂದು ಅಚ್ಚರಿ. ಒಂದೊಂದು ಜಾತಿಯಲ್ಲಿ ಒಂದೊಂದು ಬಗೆಯ ಜೀವಕ್ಕೆ ರುಚಿ ಪೋಷಣೆ, ರೋಗರುಜಿನಗಳಿಗೆ ಉಪಯುಕ್ತ ಅಥವಾ ದ್ರಾಕ್ಷಿಯಲ್ಲಿನಂತೆ ಮಾದಕದ್ರವ್ಯ ಒದಗಿಸುತ್ತವೆ. ಬಿತ್ತ ಕೆಲವು ಹಾರಿ ಹೋಗುವವು. ಕೆಲವು ಸಾಮಾನ್ಯವಾಗಿ ತಾನೇ ಹಾರಿಹೋಗದು. ಗಾಳಿ ಹೊಡೆದುಕೊಂಡು ಹೋಗಬೇಕು, ಮನುಷ್ಯರೊ ಪ್ರಾಣಿಗಳೊ ತಿಂದುಕೊಂಡು ಹೋಗಬೇಕು, ಇನ್ನೆಲ್ಲೆಲ್ಲಿಯೊ ಅದನ್ನು ಬೀಳಿಸಬೇಕು.

**–6–**

ಪ್ರಾಣಿ, ಪಕ್ಷಿ ಹಾಗಲ್ಲ, ಸ್ವಂತವಾಗಿ ಚಲಿಸುತ್ತವೆ. ಕೆಲವು ನೆಲದ ಮೇಲೆ ಮಾತ್ರ, ಕೆಲವು ನೀರಿನಲ್ಲಿ ಮಾತ್ರ, ಕೆಲವು ಎರಡೂ ಕಡೆ. ಭೂಚರ, ಜಲಚರಗಳಂತೆ ಆಕಾಶ ಚರಗಳು ಕೆಲವು. ನೆಲದೊಳಗೆ, ಕಣ್ಣಿಗೆ ಬೀಳದೆ ಕೂಡ ಕೆಲವು. ಕ್ರಿಮಿ, ನೀರಲ್ಲಿ ಮೀನು, ಮೊಸಳೆ, ಆಮೆ, ತಿಮಿಂಗಿಲ, ಹಾವು, ನೀರಾನೆ ಇತ್ಯಾದಿ. ಒಂದು ಇನ್ನೊಂದಕ್ಕೆ ಆಹಾರ; ಒಂದರ ವೈರಿ ಇನ್ನೊಂದು. ಕೆಲವು ಕ್ರೂರ, ಕೆಲವು ಸಾಧು. ಸಸ್ಯದ ಆಹಾರವನ್ನು ತಿಂದು, ಮಾಂಸ ರಕ್ತ ಬೆಳಸಿಕೊಂಡು, ಬಲವಾಗಿರುವುದರ



ಮೇಲೆರಗಿ, ಉಗುರು ಹಲ್ಲು ಬೆಳಸಿಕೊಂಡು ಅವುಗಳ ರಕ್ತಹೀರುವ, ಮಾಂಸತಿನ್ನುವ, ಎಷ್ಟೋ ಅಡಿ ಎತ್ತರ ನೆಗೆಯುವ, ಎಷ್ಟೋ ದೂರದಿಂದ ನೆಗೆದು ಮೇಲೆ ಬೀಳುವವು ಉಗ್ರ ಮೃಗಗಳು. ಜಿಂಕೆ, ಮೊಲ, ಹಸು, ಕುರಿಯಂಥ ಸಾಧುಗಳೂ ಉಂಟು. ಸಸ್ಯಾಹಾರದಿಂದ ಇವು ರುಚಿಯಾದ ಸೊಂಪಾದ ಮೈ ಬೆಳಸಿ ರಕ್ತ ತುಂಬಿಕೊಂಡರೆ ಕ್ರೂರಮೃಗಗಳು ಇವನ್ನು ತಿಂದು ಪುಷ್ಟವಾಗುತ್ತವೆ. ಇವುಗಳ ಮಾಂಸ ತುಂಬಾ ರುಚಿಯಂತೆ. ಕ್ರೂರ ಮೃಗಗಳ ಮಾಂಸದಲ್ಲಿ ರುಚಿ ಇಲ್ಲವಂತೆ. ಸಣ್ಣ ಕ್ರಿಮಿಗಳಿಂದ ಚಿಗುಟ, ನೊಣ, ಇರುವೆಯಂತೆ ಕೆಲವು ಗುಬ್ಬಿ ಕಾಗೆ, ಹದ್ದು ಮುಂತಾದ ಪಕ್ಷಿಗಳು ಗರಿಗೆದರಿ ರೆಕ್ಕೆ ಇಟ್ಟುಕೊಂಡು ಎತ್ತರಕ್ಕೆ ಹಾರಿ ವೇಗವಾಗಿ ವಾಯುಸಂಚಾರ ಮಾಡಬಲ್ಲವು. ಅವುಗಳೊಳಗೂ ಒಂದಕ್ಕೊಂದು ವೈರ. ಕೆಲವು ಮನುಷ್ಯನಿಗೆ ಕಾಟ ಕೊಡುವಂತಿದ್ದರೂ, ಇನ್ನೆಷ್ಟೋ ಜಾತಿ ಯಾವುದನ್ನೋ ಕೊಂದು ತಿಂದು ಪ್ರಕೃತಿಯ ಹಾಳತವನ್ನೂ ಆರೋಗ್ಯವನ್ನೂ ಕಾಪಾಡುತ್ತವೆ. ಈ ಎಲ್ಲ ಬಗೆ ಬಗೆಯ ಆಹಾರ ದ್ರವ್ಯ, ಸಂಚಾರಸ್ವಾತಂತ್ರ್ಯವನ್ನು ಹೊಂದಿವೆ. ತಮಗೆ ಬೇಕಾದ್ದನ್ನು ಹುಡುಕಿಕೊಂಡು ತಿರುಗಲು ಧಾರಾಳ, ಸಾಹಸ, ಶಕ್ತಿ ಇವೆ. ಅವಕ್ಕೆ ಕಣ್ಣು, ಕಿವಿ, ಬಾಯಿ, ಕಾಲು, ರೆಕ್ಕೆ ಇವುಗಳ ನೆರವುಂಟು. ಇವುಗಳಲ್ಲಿಯೂ ಲಿಂಗಭೇದ, ರತಿ, ಸಂತಾನಾಪೇಕ್ಷೆ, ಆಕರ್ಷಣೆ ಮುಂತಾದವುಂಟು. ಒಂದು ಸಲ ಸಂತಾನೋತ್ಪತ್ತಿಯಾಗಿ ಸಾಯುವ ಗಂಡೊ ಹೆಣ್ಣೊ ಪ್ರಾಣಿಗಳಿಂದ ಹಿಡಿದು ಹತ್ತಾರು ವರ್ಷ ಉಳಿವ ಪ್ರಾಣಿಗಳುಂಟು. ಜೀವಲೋಕ ಬಹುರಮ್ಯವಾದ್ದು – ಎಂದರೆ ಭೌತಸಾಮಗ್ರಿಸ್ಥಾವರ. ಏನಾದರೂ ಮಾಡುವವರೆಗೂ ಇದ್ದ ಸ್ಥಿತಿಯಲ್ಲಿರುವುವು. ಸಸ್ಯಗಳು ಮರಗಳಂತೆ ನಿಂತವಾದರೆ ಬಳ್ಳಿಗಳು ಹರಡುವುವು. ಪಕ್ಷಿ ಪ್ರಾಣಿಗಳು ಹಾಗಲ್ಲ, ಇಲ್ಲಿನ ಜೀವ ವಿಲಾಸ, ಬೆಳವಣಿಗೆ, ಚಲನೆ, ಸ್ವಂತವಾಗಿ ಸಂತಾನೋತ್ಪತ್ತಿಶಕ್ತಿ, ಚರಿತ್ರೆ, ಅಂಗರಚನೆ ಮತ್ತು ಕ್ರಿಯಾವ್ಯಾಪಾರಗಳ ವೈವಿಧ್ಯ ವರ್ಗಗಳಲ್ಲಿ ಕೀಳು–ಮೇಲು, ಶಕ್ತ–ದುರ್ಬಲ ಮುಂತಾದ ಸಂಗತಿ ಹೊಸದಾಗಿ ಬರುತ್ತದೆ. ಈ ಪ್ರಾಣಿಗಳು ಒಂದನ್ನೊಂದು ತಿಂದೊ, ದುಡಿಸಿಕೊಂಡೊ ನಿಸರ್ಗ ಜೀವನದಲ್ಲಿ ಬದುಕುವ ಹಾಗೆ ಮನುಷ್ಯನು ಇವನ್ನು ಆಹಾರ ಮಾಡಿಕೊಳ್ಳುತ್ತಾನೆ. ಇವನ್ನು ಸಾಧು ಮಾಡಿಕೊಳ್ಳುತ್ತಾನೆ. ತೋಳವನ್ನು ನಾಯಿ ಮಾಡಿಕೊಳ್ಳುತ್ತಾನೆ; ಕಾಡುಖರವನ್ನು ಕುದುರೆ ಮಾಡಿಕೊಳ್ಳುತ್ತಾನೆ. ಆನೆಯನ್ನು, ಒಂಟೆಯನ್ನು ಕೆಲಸಕ್ಕೆ ಯುದ್ಧಕ್ಕೆ ಸಂಚಾರಕ್ಕೆ ದುಡಿಸುತ್ತಾನೆ. ಬೆಕ್ಕಿನಂಥ ಪ್ರಾಣಿಗಳನ್ನೊ ಮನೆಯ ಪ್ರೀತಿಯ ಒಂದು ಆಟದ ಪ್ರಾಣಿ ಗಿಣಿಯನ್ನೊ, ಮೈನಾವನ್ನೊ, ನವಿಲನ್ನೊ ಜಿಂಕೆಯನ್ನೊ ಪಾರಿವಾಳವನ್ನೊ ಯಾವುದೊ ಸಂತೋಷಕ್ಕೆ ಪ್ರಯೋಜನಕ್ಕೆ ಬಳಸಿಕೊಳ್ಳುತ್ತಾನೆ. ಹೂವಿನ ಗಿಡದಿಂದ ಅಲಂಕರಣ ಮಾಡಿಕೊಳ್ಳುತ್ತಾನೆ. ಹಣ್ಣಿನ ಗಿಡಗಳನ್ನು ನಟ್ಟುಕೊಳ್ಳುತ್ತಾನೆ. ತನ್ನ ಆಹಾರಕ್ಕೆ, ಪೋಷಣೆಗೆ, ಚಿಕಿತ್ಸೆಗೆ ಕಾಯಿಪಲ್ಲೆಗಳನ್ನು ಬೆಳಸಿಕೊಳ್ಳುತ್ತಾನೆ. ಜೇನುಗೂಡಿಟ್ಟರೆ ಮಧುಸಂಗ್ರಹ ಮಾಡಿಕೊಳ್ಳುತ್ತಾನೆ. ರೇಷ್ಮೆಯ ಹುಳುಗಳನ್ನು ಸಾಕಿ ದಾರ ಎಳೆದು ರೇಷ್ಮೆಯ ಜವಳಿ ನೇಯುತ್ತಾನೆ. ಹಲವು ಬಗೆಯ

ಹಣ್ಣುಗಳಿಂದ ಸೀಕರಣೆಯನ್ನು ಮಾಡಿಕೊಳ್ಳುತ್ತಾನೆ. ಬಗೆಬಗೆಯನ್ನು ಕಸಿಮಾಡಿಕೊಂಡು ರಸವನ್ನು ತಿರುಳನ್ನು ಬಿತ್ತವನ್ನು ಮಾಡಿಕೊಳ್ಳುತ್ತಾನೆ. ಉಗುರು, ಹಲ್ಲು, ಕೊಂಬು, ತೊಗಟೆ, ನಾರು, ಬೇರು, ಉಣ್ಣೆ, ಚರ್ಮ, ಮಲಮೂತ್ರಾದಿಗಳನ್ನು ತನ್ನ ಪ್ರಯೋಜನಕ್ಕಾಗಿ ದುಡಿಸಿಕೊಳ್ಳುತ್ತಾನೆ. ಅವುಗಳಲ್ಲಿರುವ ಭೌತಗುಣ, ರಾಸಾಯನಿಕ ಗುಣ, ಸಸ್ಯ ಬಣ್ಣಗಳ ಗುಣ, ರುಚಿ ನಾದಗಳ ಗುಣ, ಸಾಹಸ, ಬೇಟೆಯ ಶಕ್ತಿ, ನೋಟ, ಚಲನೆ, ಯಾನ, ವಾಹನ ಸಾಮರ್ಥ್ಯ, ವರ್ತಮಾನ, ಸಾಗಣೆ ಶಕ್ತಿ ಉಪಯೋಗಿಸಿಕೊಂಡು ಅನುಕೂಲಗಳನ್ನು ಒದಗಿಸಿಕೊಳ್ಳುತ್ತಾನೆ. ಒಂದರಿಂದ ಒಂದಕ್ಕೆ ಚಿಕಿತ್ಸಕ ಯೋಜನೆಗಳನ್ನು ದೊರಕಿಸಿಕೊಳ್ಳುತ್ತಾನೆ. ದೊಡ್ಡ ಮರವನ್ನು ಸಾಗುವಾನಿಯಾಗಿ ಪೆಟ್ಟಿಗೆ, ದೋಣಿ, ಹಡಗುಗಳಿಗೆ, ಪೀಠೋಪಕರಣಗಳಿಗೆ, ಅಲಂಕಾರಗಳಿಗೆ, ಕಲೆಗಳಿಗೆ, ಶಸ್ತ್ರಾಸ್ತ್ರಗಳ ಚೌಕಟ್ಟಿಗೆ ಒದಗಿಸಿಕೊಳ್ಳುತ್ತಾನೆ.

ಮನುಷ್ಯರು ಎಂದಾಗ ಕಾಡುಮನುಷ್ಯನ ಹಾಗಿರುವ ಒಂದು ಕಾಡುಪಾಪ, ಚಿಂಪಾನ್‌ಜಿ, ಒರಾಂಗೊಟಾಂಗ್ ಗುಂಪುಗಳಲ್ಲಿ ಸಂಸಾರ ಕ್ರಮವನ್ನು ನಡಸುವ ಪ್ರಾಣಿಗಳಿಂದ ಹಿಡಿದು, ಕಾಡು ಅನಾಗರಿಕ ಜನರ ನಾಗರಿಕತೆ ಸಂಸ್ಕಾರಗಳಿಲ್ಲದ ವರ್ಗಗಳಿಂದ ಹಿಡಿದು, ಅತಿನಾಗರಿಕರೆಂದು ಶಾಸ್ತ್ರ ವಿದ್ಯೆ ಕಲೆ, ದರ್ಶನವುಳ್ಳ ಪರಮ ತಜ್ಞರವರೆಗೂ ಇರುವ ಜನವರ್ಗ. ಪ್ರಾಣಿವರ್ಗದಲ್ಲಾಗಲೇ ಸಸ್ಯವರ್ಗಕ್ಕಿಂತ ಹೆಚ್ಚಾಗಿ ಒಂದು ಪ್ರಜ್ಞೆ, ಸ್ನೇಹ ಅಥವಾ ವೈರ ಬುದ್ಧಿ ಉಂಟು. ಮನುಷ್ಯನಿಗೆ ಪಳಗಿ ಒದಗುವ ಪ್ರಾಣಿ ಪಕ್ಷಿ, ವೇಗಕ್ಕೆ ಒದಗುವ ಕುದುರೆ, ಯುದ್ಧಾದಿಗಳಿಗೆ ಪದಾರ್ಥಗಳನ್ನು ಒಯ್ಯುವುದಕ್ಕೆ ಒದಗುವ ಆನೆ, ಒಂಟೆ, ಬೇಟೆಗೆ ಒದಗುವ ನಾಯಿ, ಉಳುಮೆಗೆ ಗಾಡಿಗಳನ್ನು ಎಳೆಯಲು ಒದಗುವ ಎತ್ತು, ಕುದುರೆ, ಸುದ್ದಿಯನ್ನು ಮುಟ್ಟಿಸುವ ಹಕ್ಕಿಗಳು ಎಷ್ಟೋ ಇರುತ್ತವೆ. ಪ್ರಕೃತಿದತ್ತವಾದ ಕಲ್ಲು, ಲೋಹ, ಮರಗಳಿಂದ ಹೇಗೆ ಸುಖ ಸೌಕರ್ಯಗಳನ್ನು, ಶಿಲ್ಪ ಸಾಮಗ್ರಿಗಳನ್ನು, ಪೀಠೋಪಕರಣಗಳನ್ನು ಮಾಡಿಕೊಂಡಿದ್ದೇವೆಯೊ ಹಾಗೆಯೇ ಇವಕ್ಕೆಲ್ಲ ಸಂಬಂಧಿಸಿದಂತೆ ಎಷ್ಟೆಷ್ಟೊ ಬಗೆಯ ವಿದ್ಯೆ, ಕುಶಲತೆ, ಕಲೆ, ಹತಾರು, ಉಪಕರಣ, ಹದಮಾಡುವ ವಿಧಾನ, ಚಿತ್ರಕರ್ಮ ಲೋಕದಲ್ಲಿ ಬೆಳೆದಿವೆ. ಮಾನವನ ಸಂಸ್ಕೃತಿಗೂ ಆರ್ಥಿಕ ಜೀವನಕ್ಕೂ ಸಂಬಂಧಿಸಿದಂತೆ ವೃತ್ತಿಗಳು, ಕಲೆಗಳು ಬೆಳೆದಿವೆ. ಯಾವುದನ್ನು ಸಂಸ್ಕೃತಿಯ ಜೀವನ ಎನ್ನುತ್ತೇವೆಯೊ ಆ ಭಾಗ ಅತಿಶಯವಾಗಿ ವೃದ್ಧಿಗೊಂಡು ಬಾಳನ್ನು ಸಂಪನ್ನವಾಗಿಸಿವೆ. ಈ ಎಲ್ಲ ವಿದ್ಯೆಗಳೂ ಜ್ಞಾನದ ಕ್ರಿಯೆಯ ಅಂಗಗಳೇ. ಇವುಗಳಿಂದ ಮನುಷ್ಯ ತನ್ನ ಸುಖವನ್ನು ಸಂಪತ್ತನ್ನು ಪೋಷಣೆಯನ್ನು ಆರ್ಥಿಕ ಪ್ರಯೋಜನವನ್ನು ಮಾಡಿಕೊಳ್ಳುತ್ತಾನೆ.

ಅವುಗಳಲ್ಲಿ ಕೆಲವಕ್ಕೆ ಪ್ರಜ್ಞೆ ಇದೆ, ಪ್ರೀತಿ ವಿಶ್ವಾಸವಿದೆ. ಸಾಯುವವರೆಗೂ ಮಮತೆ ವಿಶ್ವಾಸ ಬೆಳಸುವ ನಡವಳಿಕೆ, ಭಕ್ತಿ ಇರುತ್ತವೆ. ಇವುಗಳಿಂದ ಆಟ, ಪಾಟ, ವಿನೋದಗಳನ್ನು ಪಡೆದುಕೊಳ್ಳುವ ನೂರಾರು ಮಾರ್ಗಗಳುಂಟು, ಅಲಂಕಾರಗಳುಂಟು. ಇವನ್ನೆಲ್ಲ ನೋಡಿ ನೋಡಿ ಇವುಗಳ ಹುಟ್ಟು ಬೆಳವಣಿಗೆ ನಾಶ, ಶಕ್ತಿ ದೌರ್ಬಲ್ಯ



ಮೇಲು ಬೀಳು, ಒಲವು ವೈರ, ಗುಣಲಕ್ಷಣ ಪ್ರಯೋಜನಾದಿಗಳನ್ನು ಪರೀಕ್ಷಿಸಿ ವಿಶ್ಲೇಷಣ ಮಾಡಿ, ತಂತ್ರಗಳನ್ನು ರಚಿಸಿಕೊಂಡು, ಈ ಪ್ರತಿಯೊಂದಕ್ಕೂ ಸಂಬಂಧಿಸಿದಂತೆ ಗುಣಾವಗುಣಗಳನ್ನು ಪ್ರಕೃತಿಯ ಒಂದಂಶವೇ ಆದ ಮನುಷ್ಯ ಬಳಸಿಕೊಳ್ಳುವುದರಲ್ಲಿ ನಿರಂತರವಾಗಿ ತೊಡಗಿದ್ದಾನೆ. ಇದು ಇವನ ಜ್ಞಾನ, ತಂತ್ರಜ್ಞತೆ, ಸಾಹಸ ಸಿದ್ಧಿಗಳ ಮಂಡಲ. ಇವನದು ಜ್ಞಾನ–ವಿಜ್ಞಾನ ಪ್ರಪಂಚ; ಅಡಿಯಲ್ಲಿ, ಮುಡಿಯಲ್ಲಿ, ವಿಸ್ತರದಲ್ಲಿ, ವೈವಿಧ್ಯದಲ್ಲಿ. ಪಶು, ಪಕ್ಷಿ ಪ್ರಾಣಿಗಳಿಗಿಂತ ಇವನು ಬೇರೆಯಲ್ಲವೆ? ಶಕ್ತಿ ಜ್ಞಾನನಲ್ಲವೆ? ಬೇರೆ ಮಟ್ಟದ ಪ್ರಾಣಿ ಉಳಿದ ಎಲ್ಲದರ ಮೇಲೆಯೂ ಇವನ ಸ್ವಾಮ್ಯ, ಅಧಿಕಾರ, ಹತೋಟಿ ಇಟ್ಟುಕೊಳ್ಳತಕ್ಕವನು. ಪ್ರಕೃತಿಯಲ್ಲಿ ಅವನ ಮೇಲೆ ಇವನ ಈಶ್ವರತ್ವ ಎಂದುಕೊಳ್ಳುವಷ್ಟು, ಮನುಷ್ಯನನ್ನು ಬಿಟ್ಟು ಹೊರಗಿರುವುದೆಲ್ಲ ನಿಸರ್ಗ, ಪ್ರಕೃತಿ ಎಂದು ಇವನು ತಿಳಿದುಕೊಳ್ಳುವಷ್ಟು ಮಟ್ಟಿಗೆ ಈ ನಡುವೆ ವ್ಯತ್ಯಾಸ ರೂಪಗೊಳ್ಳುತ್ತದೆ. ಜೀವಶಾಸ್ತ್ರದಲ್ಲಿ, ಭೌತ ರಸಾಯನಶಾಸ್ತ್ರದಲ್ಲಿ ಇಲ್ಲದಿದ್ದ ಗುಣ ಬೇರೆಯಾಗಿ ಒಂದಿದ್ದರೆ ಇವನ ಗುಣ, ಕರ್ಮ, ವೃತ್ತಿ, ಜ್ಞಾನ, ಸಂತೋಷಗಳು, ವೈವಿಧ್ಯ ಇನ್ನೊಂದು ರೀತಿಯ ವೈವಿಧ್ಯದ್ದೂ ಧಾತುವಿನದೂ ಆಗುತ್ತದೆ.

ಸಸ್ಯ ಜಾತಿಯಲ್ಲಿ ಒಂದೇ ಕಡೆ ಎತ್ತರಕ್ಕೂ, ಅಗಲಕ್ಕೂ ಬೆಳೆವ ಜಾತಿಗಳುಂಟು. ಅವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚಾರ ಮಾಡಲಾರವು. ಇದ್ದ ಕಡೆ ತಮ್ಮ ಬಗೆಯ ಮೊಳಕೆಗಳನ್ನು ಹಾಕಿಕೊಳ್ಳಬಹುದು ಅಷ್ಟೇ. ಆಲದ ಮರ ಕೊಂಬೆಗಳಂಥ ಬೀಳಲುಗಳನ್ನು ಬೀಳಬಿಟ್ಟು, ಅವುಗಳಿಂದ ತನ್ನ ಎಲ್ಲ ವಿಸ್ತಾರವನ್ನೂ ಜೀವವಿಸ್ತರಣವನ್ನೂ ಮಾಡಿಕೊಳ್ಳಬಲ್ಲವು. ಇವು ಇತರ ಪ್ರಾಣಿವರ್ಗಕ್ಕೆ ಅಥವಾ ಇತರ ಸಸ್ಯವರ್ಗಕ್ಕೆ ಆಶ್ರಯಕೊಟ್ಟು ಬೆಳಸಬಲ್ಲವು ಅಥವಾ ಅವುಗಳಿಂದ ನಾಶವಾಗಬಲ್ಲವು. ಇವಕ್ಕೆ ಪೀಡೆ, ಚೀಡೆ, ತಗಲಬಲ್ಲವು. ಬೇರಿನಲ್ಲಿ ಯಾವುದೊ ಕ್ರಿಮಿಯೊ ಇನ್ನಾವ ಪ್ರಾಕೃತಿಕ ಅನಾನುಕೂಲವೊ ಹುಟ್ಟಿ ಗಿಡ ಅಭದ್ರವಾಗಬಹುದು. ಅದರ ನಾಶಕ್ಕೇ ಕಾರಣವಾಗಬಹುದು. ದೊಡ್ಡದಾಗಿ ಬೆಳೆದ ಒಂದು ತಳವನ್ನು ಯಾವುದೋ ಪ್ರಾಣಿ ಹೊರಗಿಂದಲೊ ಅಥವಾ ಒಳಗಿಂದಲೊ ತಿಂದು ಕೊರೆದು ಬೆಂಡುಮಾಡಿ ಉರುಳಿಸಬಹುದು; ಮುದಿ ಮಾಡಿ ಒಣಗಿಸಿ ಗಾಳಿಗೆ ಕೆಡವಬಹುದು. ಇಂಥಾದ್ದರಿಂದೆಲ್ಲಾ ಅದು ಪಾರಾಗುವ ಬಗೆ ಕಾಣದು. ತನ್ನ ಚಿಕಿತ್ಸಾಕ್ರಮ ಅದಕ್ಕೆ ಗೊತ್ತಿಲ್ಲ. ಆದರೆ ರೋಗವಿಲ್ಲದ ಸಸ್ಯಕ್ಕೆ ಎಲ್ಲಿಯಾದರೂ ಪೆಟ್ಟು ಬಿದ್ದರೆ ಅಲ್ಲಿಗೆ ಅದರ ರಸ ಹರಿಯುತ್ತದೆ. ಹರಿಯುವುದು ನಿಂತು ಸ್ವಲ್ಪ ಕಾಲದ ತರುವಾಯ ಹೊಸ ಚರ್ಮದಂತೆ ತೊಗಟೆ ಬೆಳೆದು ತನ್ನನ್ನು ಉಳಿಸಿಕೊಳ್ಳುತ್ತದೆ. ತನ್ನನ್ನು ತಾನೇ ಪುನರ್ನವೀಕರಣ ಮಾಡಿಕೊಳ್ಳುವ ಜಾತಿ ಜೀವಲೋಕಕ್ಕೆಲ್ಲಿ ಬಂದೀತು? ತನ್ನ ಪರಮಾಯು ಬರಿದಾಗಿ ಒಣಗಿ ದುರ್ಬಲವಾಗಿ ಕೆಳಗೆ ಬಿದ್ದು ಹೋಗಬಹುದೇ ಹೊರತು, ಅದಕ್ಕಾಗಲಿ ಸಾಮಾನ್ಯ ಪ್ರಾಣಿವರ್ಗಕ್ಕಾಗಲಿ ಸ್ವನಾಶ ಮಾಡಿಕೊಳ್ಳುವ ಶಕ್ತಿಯಿಲ್ಲ; ರೀತಿ ಗೊತ್ತಿಲ್ಲ. ಸ್ವನಾಶ– Suicide–ಮನುಷ್ಯನಿಗೆ ವಿಶೇಷವಾಗಿ ಪ್ರಕೃತಿ ಅನುಗ್ರಹಿಸಿರುವ ಶಕ್ತಿ. ಪ್ರಾಣಿವರ್ಗದಲ್ಲಿ ಗಾಳಿಯಲ್ಲಿ ಆಕಾಶದಲ್ಲಿ ಹಾರಾಡಬಲ್ಲವು ಇರುತ್ತವೆ. ಎಂದರೆ

ಇವಕ್ಕೆ ವಾಯು ಸಂಚಾರ ಶಕ್ತಿಯುಂಟು. ತಮ್ಮ ರಕ್ಷಣೋಪಾಯವನ್ನು ಅವು ಮಾಡಿಕೊಳ್ಳಬಲ್ಲವು. ಅವಕ್ಕೆ ಬೇಕಾದ ಅಂಗರಚನೆ ಸೌಲಭ್ಯ ಇರುತ್ತದೆ. ಕೆಲವಕ್ಕೆ ಮೇಲು ಚರ್ಮವೇ ಹೊದಿಕೆ. ಆಮೆ, ಘೇಂಡಾಮೃಗ, ಮೊಸಳೆಗಳಿಗಿರುವಂತೆ. ಕೆಲವಕ್ಕೆ ಉಗುರು, ಹಲ್ಲು ತೀಕ್ಷ್ಣ. ಕೆಲವಕ್ಕೆ ಓಡಲು ಅತಿಶಯ ವೇಗವಿರುತ್ತದೆ. ಕೆಲವಕ್ಕೆ ಕೋರೆದಂತ ಅಥವಾ ಒದೆಯುವ ಗೊರಸು ಇರುತ್ತದೆ. ಕೆಲವಕ್ಕೆ ಎತ್ತರಕ್ಕೆ ಎಗರುವ ಅಥವಾ ಮರ ಬೆಟ್ಟಗಳನ್ನು ಹತ್ತಬಲ್ಲ ಶಕ್ತಿಯಿರುತ್ತದೆ. ಎಲ್ಲವೂ ತಮಗೆ ಅನುಕೂಲ ಹೆಚ್ಚಿರುವ ಪ್ರದೇಶದಲ್ಲಿ, ರೀತಿಗಳಲ್ಲಿ ತಮ್ಮ ವಾಸಸ್ಥಾನಗಳನ್ನು ನಿರ್ಮಿಸಿಕೊಳ್ಳುತ್ತವೆ. ತಮಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಳ್ಳುತ್ತವೆ. ಎಷ್ಟೇ ದೂರ ಹೊರಗೆ ಹೋದರೂ ಇಂಥ ಕಡೆಯೇ ತನ್ನ ಮನೆ, ಮರಿ ಇರುವುದು–ತನ್ನ ಹೆಣ್ಣೋ ಗಂಡೊ ಇರುವುದು ಎಂಬ ನೆಪ್ಪಿರುತ್ತದೆ. ವಾಸನೆಯಿಂದ, ಕಣ್ಣಿಂದ, ಶಬ್ದದಿಂದ ಬೇರೆ ಬೇರೆ ಪ್ರಾಣಿಗಳು ಇವನ್ನು ಕಂಡುಕೊಳ್ಳುತ್ತವೆ. ಕೆಳೆಯ ವರ್ಗಗಳನ್ನು, ಅಹಿತವರ್ಗಗಳನ್ನು ತಿಳಿದುಕೊಳ್ಳುತ್ತವೆ. ತನ್ನ ಶತ್ರುಗಳಿಗೆ ಕಾಣದಂತೆ ಇರುತ್ತವೆ. ತಾನಿರುವುದು ಇನ್ನೊಬ್ಬರಿಗೆ ಕಾಣದಂತೆ ತಕ್ಕ ಬಣ್ಣ, ಆಕಾರ ಇರುವ ಪ್ರದೇಶಗಳನ್ನೇ ಆರಿಸಿಕೊಳ್ಳುತ್ತವೆ. ಕೆಲವು ತಮ್ಮ ಗರಿಗಳನ್ನು ಮುಳ್ಳಿನಂತೆ ದೂರ ಎಸೆದು ಶತ್ರುವಿಂದ ಪಾರಾಗುತ್ತವೆ. ತಮ್ಮ ಆಹಾರವನ್ನು ತಾವೇ ಒದಗಿಸಿಕೊಳ್ಳುವುದುಂಟು. ತಾನಿರುವ ಕಡೆಯೇ ಅವು ಬರುವಂತೆಯೂ ಮಾಡಿಕೊಳ್ಳಬಹುದು. ಅವಿರುವ ಕಡೆಗೆ ಹೋಗಬಲ್ಲವು. ಅವು ತಪ್ಪಿಸಿಕೊಂಡು ಹೋಗದಂತೆ ಮೋಹನಗಳನ್ನೊ ತಂತ್ರಗಳನ್ನೊ ಏರ್ಪಾಡುಗಳನ್ನೊ ಮಾಡಿಕೊಳ್ಳಬಲ್ಲವು. ಬಹು ಮಟ್ಟಿಗೆ ಎಲ್ಲ ಪ್ರಾಣಿಗಳಿಗೂ ಶತ್ರುವಿನಿಂದ ಉಳಿದುಕೊಳ್ಳಬೇಕು ಎಂಬ ಆಸೆ ಇರುವುದರಿಂದ ಅಪಾಯದಿಂದ ತಪ್ಪಿಸಿಕೊಳ್ಳಬೇಕೆಂಬುದೇ ಮೂಲಸ್ವಭಾವ, ಆಸೆ ಆಗುತ್ತದೆ. ಭಯವುಂಟಾದಾಗ ತಪ್ಪಿಸಿಕೊಳ್ಳಬಹುದು, ಮರೆಮಾಡಿಕೊಳ್ಳಬಹುದು, ಓಡಿಹೋಗಬಹುದು ಅಥವಾ ಶತ್ರು ಬೀಳುವುದಕ್ಕೆ ಮುಂಚೆ ತಾನೇ ಮೇಲೆ ಬೀಳಬಹುದು. ಒಂದು ಸ್ಥಿತಿಯಲ್ಲಿ ತಾನಿರುವಾಗ ಅದಕ್ಕೆ ಇತರರ ಕಣ್ಣಿಗೆ ಬೀಳಬಾರದೆಂದೊ ಇತರರಿಗೆ ಕೇಡಾಗಬಾರದೆಂದೊ ಕಲ್ಪನೆ ಬಂದಾಗ ಅದರ ಚುರುಕು ಹೆಚ್ಚುತ್ತದೆ. ಇನ್ನೊಂದು ತನ್ನ ಬಳಿಗೆ ಬಂದು ಕೆಡಿಸಲಾಗದಂತೆ ಉಗ್ರತೆ ವಹಿಸುತ್ತದೆ. ಕೂಟ ಸಮಯದಲ್ಲಿಯೂ ಹಾಗೆಯೇ. ಶತ್ರು, ಪ್ರತಿಸ್ಪರ್ಧಿ ಎಂದು ಗೊತ್ತಾದಾಗ, ಹಾಗೆ ತಪ್ಪಿಸಿಕೊಳ್ಳಲು ಅಶಕ್ಯವಾದ ಸಮಯದಲ್ಲಿ, ನಿರಾಶೆಯ ಧೈರ್ಯದಿಂದ ಹಿಂದಿರುಗಿ ಎದುರಿಸಿ ಜೀವ ಬಿಡಬಹುದು. ಕೆಲವಕ್ಕೆ ಅಭಿಮಾನ, ಹಟ ಉಂಟು: ತನ್ನ ತಾಯಿ, ಮಗು, ಮಾನ ಎಂಬುದನ್ನು ಕಾಪಾಡಿಕೊಳ್ಳುತ್ತದೆ. ಸೆರೆ ಬಿದ್ದಾಗ ಕೂಟವನ್ನೊಪ್ಪವು. ಆಹಾರ ನೀರು ಒಲ್ಲದೆ ಸಾಯುವುವು. ಇಲ್ಲಿ ಬಗೆಬಗೆಯ ಉಪಾಯಗಳನ್ನು ಮೃದುವಾಗಿಯೊ ಉಗ್ರವಾಗಿಯೊ ನೋಡಿಕೊಳ್ಳುವ ಮಾರ್ಗಗಳುಂಟು. ಎಷ್ಟು ಬಗೆಯ ಜೀವಿಗಳು, ಪಶುಪಕ್ಷಿ–ಪ್ರಾಣಿ ಇವೆಯೊ ಅಷ್ಟಕ್ಕೂ ಅವವುಗಳಿಗೇ ವಿಶೇಷವಾದ ಉಪಾಯಗಳುಂಟು. ಆಹಾರ, ಭಯ, ನಿದ್ರೆ, ಕೂಟ ಈ ಎಲ್ಲ ಸಂಸಾರ, ವ್ಯವಹಾರ, ಗುಂಪು



ಜೀವನ, ಏಕಾಂತವುಂಟು. ಒಂದನ್ನೊಂದು ಆಕರ್ಷಿಸುವ ಕೋಟಿ ಮಾರ್ಗಗಳುಂಟು. ಎಂದರೆ ಪ್ರಜ್ಞೆ, ಚಲನೆ, ವಸತಿ ನಿರ್ಮಾಣ, ಸಂತಾನ ಕ್ರಿಯೆ, ಪ್ರೀತಿ ವೈರಾದಿಗಳು, ಭಕ್ತಿ ವಿಶ್ವಾಸಗಳ ಪ್ರಪಂಚ ಹುಟ್ಟಿದಂತಾಯಿತು. ಅದೆಷ್ಟು ವಿಸ್ತಾರ, ವಿವಿಧ ಈ ಪ್ರಪಂಚ!

ಇದಕ್ಕೆ ತಕ್ಕಂತೆ ಇವುಗಳ ಇತರ ಅಂಗಾಂಗರಚನೆ (structure, function). ಕ್ರಿಯೆಗೆ ತಕ್ಕ ಅಂಗರಚನೆ. ಜೊತೆಗೆ ಮೂಳೆ, ಅಸ್ಥಿಪಂಜರ ರಚಿತವಾಗುತ್ತದೆ. ಅವುಗಳ ಬೆಳವಣಿಗೆಗೆ ಯಾವ ಯಾವ ಕಾರ್ಯಗಳು ಅಗತ್ಯವೊ ಅವನ್ನೆಲ್ಲ ರೂಢಿಸುವ ಅಂಗರಚನೆ, ಅವಯವ ಕ್ರಿಯೆ, ರಕ್ತಸಂಚಾರ, ಚೈತನ್ಯ ಸಂಚಾರ, ಶ್ವಾಸಕೋಶ, ಎದೆ, ಸಾಧನೆ, ಕಲೆ, ಮಜ್ಜೆ ಮಾಂಸ, ನರವೇದನಾ ಶಕ್ತಿ ಮುಂತಾದುವೆಲ್ಲ ಏರ್ಪಡುತ್ತದೆ. ಯಾವ ಬಗೆಯ ಪ್ರಾಣಿಗೂ ತನ್ನ ಹುಟ್ಟು ಬೆಳವಣಿಗೆ, ಆಹಾರ ಸಾಮಗ್ರಿ ಸಾಧನೆ, ಕೂಟ, ತಂತ್ರಜೀವನ ಹೇಗೊ ಅದಕ್ಕೆ ತಕ್ಕಂತೆ ಅಂಗಾಂಗಗಳು ರೂಪಗೊಳ್ಳುತ್ತವೆ, ಬಲಿಯುತ್ತವೆ. ಗಂಡು ಹೆಣ್ಣುಗಳ ವಿಶೇಷ ಅಂಗಲಕ್ಷಣಗಳು ರೂಪಗೊಳ್ಳುತ್ತವೆ. ಋತುಕಾಲ, ಕೂಟಕಾಲ, ಕೂಟ ವಿಧಾನಗಳು ಬಗೆಬಗೆಯಾದ ರೀತಿಯಲ್ಲಿ ನಡೆಯುವ ಪ್ರಕಾರಗಳು. ಆಕರ್ಷಣೆಗಳೊ ಮೋಹಗಳೊ ಆ ಸಮಯದಲ್ಲಿ ಉತ್ಪತ್ತಿಯಾಗುವ ಕ್ರೋಧಾವೇಶಗಳೊ ಅನೇಕ ಬಗೆಯ ಚರ್ಯೆಗಳಲ್ಲಿ, ಶಬ್ದತಂತ್ರದಲ್ಲಿ, ಧ್ವನಿವಿಶೇಷಗಳಲ್ಲಿ ವ್ಯಕ್ತಗೊಳ್ಳುತ್ತವೆ. ಈ ಎಲ್ಲ ಅನುಭವವೂ ಇವೆಲ್ಲವುಗಳ ಪರಿಣಾಮದಿಂದ ರೂಪಗೊಂಡು ವಿಕಸಿತವಾಗಿ ಪರಿಣಾಮಗೊಂಡಂತೆ ಮನುಷ್ಯಜೀವ ರೂಪಗೊಂಡಿವೆ ಎನ್ನುತ್ತಾರೆ. ಎಲ್ಲ ಜೀವಾನುಭವದ ಸಾರ ಮಾನವನಲ್ಲಿ ಅವ್ಯಕ್ತವಾಗಿರುತ್ತವಾಗಿ ವಾಸನೆಯಾಗಿ, ಸಂಸ್ಕಾರವಾಗಿ ಇರಬಲ್ಲದು ಎಂಬ ಮಟ್ಟಿಗೆ ಅಡಗಿರುತ್ತವೆಯಂತೆ.[3] ವಸ್ತು ಪ್ರಪಂಚದ ಎಲ್ಲ ವ್ಯಾಪಾರಗಳನ್ನೂ ದೃಷ್ಟಿ ಇಟ್ಟು ನೋಡಿದಾಗ, ಒಂದೊಂದನ್ನೇ ಪ್ರತ್ಯೇಕವಾಗಿಯೊ ಗುಂಪುಗಳನ್ನು ವಿಭಾಗವಾಗಿಯೊ ಸಮಷ್ಟಿಯಲ್ಲಿಯೊ ಸಮಗ್ರವಾಗಿ ಪರಿಶೀಲಿಸಿದಾಗ, ಜೀವನ ವಿಕಾಸದ ಕಲ್ಪನೆ ಉಂಟಾಗುವುದು. ಈ ಎಲ್ಲಕ್ಕೂ ಒಂದು ರಚನೆಯಿದೆ, ಕಾರ್ಯ ಅಥವಾ ಕ್ರಿಯೆ ಇದೆ, ಪ್ರಯೋಜನ ಇದೆ ಎಂದು ತಿಳಿಯುವುದು.

ಇದರಲ್ಲಿ ಸ್ವಭಾವ ಉಂಟು, ಆಕಾಂಕ್ಷೆ ಉಂಟು. ಇವು ಒಂದಕ್ಕಿಂತ ಇನ್ನೊಂದು ಹೆಚ್ಚು ಸಂಪನ್ನವಾದ್ದು. ಸಂಕುಚಿತಗೊಳ್ಳಬಲ್ಲ, ಹಿಗ್ಗಿ ಹಿರಿದಾಗಬಲ್ಲ, ಸೂಕ್ಷ್ಮವಾದ ಶಕ್ತಿ ಆಗಬಹುದು. ಈ ಕಾರಣದಿಂದ ಈ ಲಕ್ಷಣಗಳು, ಈ ಅಂಗರಚನೆ ಹೀಗಾಗಿದೆ; ಇಂಥ ರಚನೆಗೆ, ಅಂಗದ ರೂಪಣಕ್ಕೆ ತಿಂದ ಆಹಾರ, ಮಾಡಿದ ಕೆಲಸ ಹೀಗೆ

3. ಮತದರ್ಶನಗಳ ಪ್ರಕಾರವಾಗಿ ಸೃಷ್ಟಿಯ ಕ್ರಿಯೆ ಬೇರೊಂದು ರೀತಿ. ಸದ್ಯಕ್ಕೆ ಅದನ್ನು ಎಣಿಕೆಗೆ ತಂದುಕೊಳ್ಳುತ್ತಿಲ್ಲ. ಸೃಷ್ಟಿ ಎಂದರೆ ಏನು? ಇದು ಏಕೆ? ಯಾವ ಗುರಿಗಾಗಲಿ ನಡೆಯುತ್ತಿದೆಯೆ? ಎಂಬ ಪ್ರಶ್ನೆ ಬೇರೆ.

ದುಡಿದು ಈ ಶಕ್ತಿಯನ್ನೊ ಈ ಅವಯವ ಸೌಷ್ಠವವನ್ನೊ ನಯವನ್ನೊ ತಂದಿದೆ ಎಂದು ಗೊತ್ತಾಗುತ್ತದೆ. ತನ್ನದಾಗಿ ಹೊಸ ಪದಾರ್ಥವನ್ನು ಕಲ್ಪಿಸಿ ಪ್ರತಿಸೃಷ್ಟಿ ಮಾಡುವ ಮನಸ್ಸು, ಸಾಮರ್ಥ್ಯ ಇಲ್ಲ. ಮನುಷ್ಯನಲ್ಲಿಯಾದರೂ ಬುದ್ಧಿ, ಅಹಂಕಾರ, ಕ್ರಿಯಾತಂತ್ರಗಳು ಸೃಷ್ಟಿಯಲ್ಲಿ ಇವನನ್ನು ಮೇಲ್ಮಟ್ಟದ ಏಳಿಗೆಗೆ ತಂದ ಲಕ್ಷಣಗಳಾಯಿತು. ಭೌತ, ರಾಸಾಯನಿಕ, ಭೂಗತ ವಸ್ತುಗಳು ಸ್ಥಾವರ; ಸ್ವಂತವಾಗಿ ಬೆಳೆವವಲ್ಲ. ಎಂದಿಗೂ ಎಲ್ಲಿಯೂ ಒಂದೇ ಲಕ್ಷಣದವು.  ಸಸ್ಯ, ಪಕ್ಷಿ, ಪ್ರಾಣಿವರ್ಗಗಳಲ್ಲಿ ಜೀವದ ಬೆಳವಣಿಗೆ ಕ್ರಿಯಾ ಕಾಂಡ; ರಾಗ ದ್ವೇಷಗಳ ಕಾಂಡ. ಪ್ರಜ್ಞಾ ಪರಿಸರದ ಗುಣ ಅತಿಶಯವಾಯಿತು. ಮನುಷ್ಯ ಜೀವನಕ್ಕೆ ಭಾವದ ಪ್ರಕಾಶನ, ಪ್ರಚಾರಗಳು ಉಂಟು. ಮಾತಿಂದ, ಸಾಧನೆ ಶಿಕ್ಷಣಗಳಿಂದ, ಪ್ರಯೋಗದಿಂದ ಭಾವನೆ, ವೈವಿಧ್ಯಪೂರ್ಣತೆ ಪಡೆಯಿತು.

ಸಸ್ಯವರ್ಗದಲ್ಲಿ ಪ್ರಾಣವಿದೆಯೆ ಇಲ್ಲವೆ ಎಂಬ ಪ್ರಶ್ನೆ ಕೇಳಿ, ಒಂದು ಬಗೆಯ ಜೀವ  ಚೈತನ್ಯವಿದೆ,  ಆದರೆ ಆ ಜೀವಲಕ್ಷಣಕ್ಕೂ ಕ್ರಿಮಿಗಳ ಹುಳಗಳ, ಸಣ್ಣ ದೊಡ್ಡ ಪ್ರಾಣಿಗಳ, ಹಕ್ಕಿಗಳ ಸಂಬಂಧದಲ್ಲಿ ಜೀವ–ಪ್ರಾಣ ಎಂದು ಹೇಳುವುದಕ್ಕೂ ಇದಕ್ಕೂ ವ್ಯತ್ಯಾಸವುಂಟೆಂದು ನಿರ್ಣಯ ಮಾಡಿದ್ದಾರೆ. ಪ್ರಾಣಿಗಳಲ್ಲಿ ದೀರ್ಘಜೀವಿಗಳು ಕೆಲವು, ಅಲ್ಪ ಜೀವಿಗಳು ಕೆಲವು. ಸಸ್ಯಗಳಿಗೆ ಮೊಳಕೆ ಸಂತಾನವಾದರೆ ಪ್ರಾಣಿಗಳಿಗೆ ಮೊಟ್ಟೆ, ಮರಿಗಳು. ಮೊಟ್ಟೆ ಹಾಕುವುವು ಕೆಲವು. ಒಂದು ಸಲಕ್ಕೆ ಒಂದು ಅಥವಾ ಹೆಚ್ಚು ಮರಿ ಹಾಕುವುವು ಕೆಲವು. ಅವುಗಳಲ್ಲಿ ತಾಯಿ ತಂದೆ, ತನ್ನ ತಂಡ ವರ್ಗಗಳ ವಿವೇಚನೆ, ಬಾಂಧವ್ಯ, ಸಂಚಾರ, ವಲಸೆ ವಿವಕ್ಷಿತವಾಗುತ್ತದೆ. ಈ ಎಲ್ಲಕ್ಕೆ ಸಂಬಂಧಪಟ್ಟಂತೆ ನೆಪ್ಪು–ಅದರ ವಿಶೇಷವಾದ ಬೆಳವಣಿಗೆ ಎಂಬಂತೆ ಕಾಣುವ ಪ್ರಜ್ಞೆ–ಸಂಕುಚಿತ ಅರ್ಥದಲ್ಲಿ awareness – ಒಂದು ಬೆಳೆಯುತ್ತದೆ. ಇವುಗಳ ರಚನೆ, ಕ್ರಿಯೆ, ಸಂತಾನ, ವಿಲಾಸ, ರಕ್ಷಣೆ, ಚಿಕಿತ್ಸೆ, ತಮ್ಮನ್ನು ತಾವೇ ಕಾಪಾಡಿಕೊಳ್ಳುವ ಮಾರ್ಗಗಳು ನಯಗೊಳ್ಳುತ್ತ ಸೂಕ್ಷ್ಮಗೊಳ್ಳುತ್ತ ಬಂದಿರುತ್ತವೆಯಾಗಿ, ಇವನ್ನೆಲ್ಲ ಬಳಸಿಕೊಳ್ಳುವ ಮಾರ್ಗಗಳೂ ಆಚರಣೆಗೆ ಬಂದಿರುತ್ತದೆ. ಇದು ಅನುಭವದಿಂದ ಬಂದದ್ದು. ಕೆಲವು ಪ್ರಾಣಿಗಳು ಈ ಕೆಲವು ಚಿಕಿತ್ಸೆಗಳನ್ನು ಮಾಡಿಕೊಳ್ಳಬಲ್ಲವು. ಎಲ್ಲ ಪ್ರಕಾರದ ಅನುಭವವೂ ಮನುಷ್ಯ ಪ್ರಾಣಿಗಳಲ್ಲಿ ಪ್ರಕಟವಾಗಿಯೊ ಸುಪ್ತವಾಗಿಯೊ ಸೂಕ್ಷ್ಮರೂಪದಲ್ಲಿರುತ್ತದೆ. ಇವನ ಬೆಳವಣಿಗೆಗೆ ಇವುಗಳೆಲ್ಲದರ ಜೊತೆಗೆ ಅವೆಲ್ಲದರ ಸಾರಸಂಗ್ರಹದಂತೆ, ಒಂದು ಕೇಂದ್ರ ಯಂತ್ರ ಶಾಲೆಯಂತೆ ಬೆಳೆದಿರುತ್ತದೆ. ಮನುಷ್ಯನ ಅಂಗರಚನೆಯಲ್ಲಿ ಚರ್ಯೆಯಲ್ಲಿ ಸುಪ್ತಚೇತನಗಳು ವಾಸನೆಗಳು ಆದಂತೆ ಭಾವಮೂಲ ಕ್ರಿಯಾಮೂಲ ವಾಗಬಲ್ಲವು.  The Ascent of Man[4] ಎಂಬ ಮಾತಿನಲ್ಲಿ ಈ ಜೀವನ ವಿಕಾಸದ ಸಮಸ್ತ ಅಂಶಗಳೂ ರೂಢವಾಗಿ ಶಕ್ತಿಗಳಾಗಿ ಸಿದ್ಧವಾಗಿರುತ್ತವೆ. ಅಭ್ಯಾಸ, ರೀತಿ,

---

4. ಈಚೆಗೆ ಈ ಹೆಸರಲ್ಲಿ ಲಂಡನಿನ ಬಿ.ಬಿ.ಸಿ.ಯಲ್ಲಿ ಡಾ. ಬ್ರೋನೊವ್‌ಸ್ಕಿಯವರು ಹದಿಮೂರು ಪ್ರಚಾರ ಭಾಷಣಗಳನ್ನು ಮಾಡಿದ್ದಾರೆ.



ಭಕ್ತಿ, ವಿಶ್ವಾಸ ಕೇವಲ ಜೀವದ ಲಕ್ಷಣಗಳಿಂದ (existence) ಮುಂದುವರಿದು, ತಿಳಿವಳಿಕೆಯ ಕಡೆಗೆ ಅವನ್ನು ಬೆಳಸಬಲ್ಲವಾಗುತ್ತವೆ. ಇದಕ್ಕೆ ಮಿತಿಯೆಲ್ಲಿ?

## –7–

ಮನುಷ್ಯನ ಬದುಕು, ಕ್ರಿಯಾವ್ಯಾಪಾರ ಅತಿ ಪ್ರಾಥಮಿಕವಾಗಿ ವಿಕಾಸಗೊಂಡಂತೆ ಕಾಣುವ ಮುಂಚೆಯೂ ಕೆಲವು ಪಕ್ಷಿಪ್ರಾಣಿ ವರ್ಗಗಳಲ್ಲಿ  ಒಂದು ಸಂಸಾರ ಬಾಂಧವ್ಯ, ಒಂದು ವಸತಿ ಅಥವಾ ವಾಸಸ್ಥಳದ ರಚನೆ ಇರುತ್ತದೆ. ಮಂದೆಯಾಗಿ ಬದುಕುವುದು, ತಂದೆತಾಯಿ ಮಕ್ಕಳು, ಅಲ್ಲಿ ಗಂಡು ಹೆಣ್ಣು ಸಂಬಂಧ ಕಲ್ಪಿತವಾಗಿರುತ್ತದೆ. ಒಂದು ತಂಡಕ್ಕೂ ಇನ್ನೊಂದು ತಂಡಕ್ಕೂ ಮೈತ್ರಿಯೊ ಹಗೆಯೊ ಬೆಳೆಯುವುದುಂಟು. ಕೆಲವು ಪ್ರಾಣಿಗಳು ತಮ್ಮ ವಂಶದ ಪ್ರಾಣಿಗಳಲ್ಲಿ ತಮ್ಮನ್ನು ಹಡೆದ ತಂದೆ ತಾಯಿ ಎಂದು ಗೊತ್ತಾದವುಗಳೊಡನೆ ಲೈಂಗಿಕ ಸಂಪರ್ಕ ಬೆಳಸುವುದಿಲ್ಲ. ಗಂಡು ಹೆಣ್ಣನ್ನು ಪಡೆದುಕೊಳ್ಳ ಬೇಕಾದರೆ ಬಗೆಬಗೆಯ ಆಟಪಾಟ, ಶಬ್ದ, ಚಲನೆ, ಸ್ಪರ್ಧೆ ಸಾಹಸಗಳ ಪ್ರದರ್ಶನವೂ ಸುಸ್ವರವಾದ ಧ್ವನಿಗಳೂ ಹೊಮ್ಮುತ್ತವೆ. ಇನ್ನು ಕೆಲವಲ್ಲಿ ಒಂದು ಹೆಣ್ಣಿಗಾಗಿ ಅನೇಕ ಗಂಡುಗಳಿಗೆ ಮೇಲ್ಪೋಟಿ ನಡೆದು ಗೆದ್ದುದು ಸೋತುದನ್ನು ಓಡಿಸುತ್ತದೆ, ಇಲ್ಲವೆ ಕೊಲ್ಲುತ್ತದೆ. ವಾತ್ಸಲ್ಯ ಕೆಲವಲ್ಲಿ ತುಂಬಾ ಅತಿಶಯ. ಕೆಲವಕ್ಕೆ ಅಲ್ಪ ಕಾಲ ಮಾತ್ರ; ಇನ್ನು ಕೆಲವು ಆ ಲಕ್ಷ್ಯವಿಲ್ಲದವು. ಇನ್ನು ಕೆಲವು ಋತುಮಾನಕ್ಕೆ ತಕ್ಕಂತೆ ಖಂಡ ಖಂಡಾಂತರಗಳಿಗೆ ವಲಸೆ ಹೋಗುತ್ತವೆ. ಬಳಿಕ ಸ್ವಸ್ಥಾನಗಳಿಗೆ ಹಿಂತಿರುಗುತ್ತವೆ. ಕೆಲವಲ್ಲಿ ಇಂತಹ ಕ್ರಿಯಾವಿಲಾಸ, ಅಭ್ಯಾಸಗಳನ್ನು ಕಾಣಬಹುದು. ಅವಕ್ಕೆ ಸಂಬಂಧಿಸಿದ ಹಾಗೆ ಅಂಗವಿನ್ಯಾಸ, ಸೂಕ್ಷ್ಮೀಕರಣ ಕುಶಲತೆ, ಸಾಹಸ ನಡೆದೇ ಬರುತ್ತವೆ. ಅತಿ ಪ್ರಾಥಮಿಕವೆನ್ನುವ ಮನುಷ್ಯ ಪ್ರಾಣಿಗೆ ಸಂಬಂಧಿಸಿದಂತೆ ಚರ್ಯೆ ಉಳ್ಳದ್ದು ಒಂದು ಬಗೆಯ ಮಂಗ. ಅದು ಕ್ರಮವಾಗಿ ಮುಂಗಾಲನ್ನು ಎತ್ತಿ ಕೈಯಾಗಿ ಆಡಿಸಬಲ್ಲುದು. ಕೊಂಬೆಗಳನ್ನು ಹಿಡಿದು ಜೋತಾಡುವುದು ಸುಲಭವಾದರೂ ಅವನ್ನು ಕೈಗಳಂತೆ, ಕೈಯಿಂದ ಮಾಡುವ ಕೆಲಸವನ್ನು ಅವುಗಳಿಂದ ಮಾಡಿಸುವುದೂ ರೂಢಿಯಾಗಿರುತ್ತದೆ. ಬುದ್ಧಿ ಎನ್ನಬಹುದಾದ, ಅರ್ಥವಾಗಬಹುದು ಎನ್ನಬಹುದಾದ ಅರ್ಥಗಳೂ ನಡವಳಿಕೆಗಳೂ ಅಲ್ಲಿ ಬೆಳೆದಿರುತ್ತದೆ. ಯಾವಾಗ ಈ ತೆರದ ಕೆಲಸ ಹೆಚ್ಚಾಗುತ್ತದೆಯೊ ಆಗ ಬೆರಳು ಹೆಚ್ಚು ಸ್ಪಷ್ಟವಾಗಿ ಒಡೆಯುತ್ತದೆ. ಉದ್ದವಾಗಿ ಮೊನಚಾದ ಪಂಜದಂತಹ ನಖ ಮನುಷ್ಯನ ಉಗುರಿನಂತೆ ಮೊಟಕಾಗುತ್ತದೆ. ಹಲ್ಲು ಮುಸುಡಿ ಹೆಚ್ಚು ಚಪ್ಪಟೆ ಯಾಗುತ್ತದೆ. ಕಣ್ಣು ದೊಡ್ಡದಾಗಿ ದೂರವಾಗುತ್ತದೆ. ನಿಂತಾಗ ದಿಟ್ಟವಾಗಿ ನಿಲ್ಲುವ, ನೇರವಾಗಿ ತಲೆಯನ್ನು ಹಿಡಿವ ಅಭ್ಯಾಸ ಬರುತ್ತದೆ. ಮುಂಗಾಲು ಪೂರ್ತಿ ಕೈಗಳೇ ಆದಾಗ ಇಂಥ ಪ್ರಾಣಿಗಳ ಕ್ರಿಯಾವಿಚಾರ, ಅಂಗಚರ್ಯೆ, ಅವುಗಳ ವಿಶಿಷ್ಟೀಕರಣ, ನಾಜೂಕು ತುಂಬಾ ಸೂಕ್ಷ್ಮವಾಗಿ ವಿಧವಿಧವಾಗಿ ಬೆಳೆಯುತ್ತದೆ. ಮನುಷ್ಯನಂತೆಯೇ ಇರುವ ಆ ಪ್ರಾಣಿಯ ಅವಸ್ಥೆ ಸ್ಫುಟವಾಗಿ ಎಲ್ಲ ರೀತಿಯಲ್ಲಿಯೂ ಗಂಡು ಅಥವಾ ಹೆಣ್ಣು ಲಕ್ಷಣಗಳನ್ನು ಪಡೆದಾಗ ಅದಕ್ಕೆ ಆಲೋಚನೆ, ಅಗತ್ಯಕ್ಕೊ ಕಾರ್ಯಕ್ಕೊ ಇರುವ

ಸಂಬಂಧವನ್ನು ಅರ್ಥ ಮಾಡಿಕೊಳ್ಳುವುದು, ಮುಂಗಾಣ್ಕೆ, ಇತರ ಪದಾರ್ಥಗಳನ್ನು ತನ್ನ ಪ್ರಯೋಜನಕ್ಕಾಗಿ ಹೊಂದಿಸಿಕೊಳ್ಳುವುದು, ಮಾತು, ನಾನಾ ಬಗೆಯ ಕಲಾಪ ಹುಟ್ಟುತ್ತವೆ. ಇದು ಬೆಳೆದಾಗ ಯಾವುದನ್ನು ಜೀವವಿಜ್ಞಾನ ಎನ್ನುತಿದ್ದೆವೊ ಅದು ಸಂಸ್ಕಾರದ ಬೆಳವಣಿಗೆಯಾಗಿ–From biological to cultural evolution-ತಿರುಗುತ್ತದೆ. ಈ ಮಾನವನ ವರ್ಗ ಪ್ರಪಂಚದಲ್ಲೆಲ್ಲ ಹರಡಿಕೊಂಡು ಬಗೆಬಗೆಯ ಸನ್ನಿವೇಶಗಳಿಗೆ ತಕ್ಕಂತೆ ಊಟ, ಕೂಟ, ಪಾಟ, ವ್ಯವಹಾರ, ಚಿಂತನ, ಸಂಚಾರ, ಬಗಬಗೆಯ ವಿನ್ಯಾಸವುಳ್ಳ ಕ್ರಿಯಾರಚನೆಯ ಪದಾರ್ಥ ನಿರ್ಮಾಣ ಪ್ರಯೋಗ ಬೆಳೆಸಿಕೊಂಡು ಬರುತ್ತದೆ. ನಮಗೆ ಈಗ ಖಚಿತವಾಗಿ ದೊರೆತಿರುವ ಈ ಮನುಷ್ಯ ವರ್ಗದ ಸಂಸ್ಕೃತಿ ಹತ್ತಾರು ಸಹಸ್ರಮಾನಗಳದು ಮಾತ್ರ. ಅದರಲ್ಲಿ ನಮಗೆ ದಾಖಲೆಗಳು ದೊರೆತು ಉಳಿದಿರುವುದು ಇನ್ನಷ್ಟು ಈಚಿನದು. ಅವರ ಜೀವನ ರೀತಿ, ವ್ಯವಹಾರಗಳ ಲೇಖನ ಮತ್ತು ಕಲಾಕೃತಿಗಳು, ಸಂಸ್ಕೃತಿಯ ಉಳಿಕೆಗಳು, ಇನ್ನೂ ಈಚೆಗೆ ಆಹಾರಕ್ಕೆಂದು ಬೇಟೆಯಾಡುತ್ತ ಅಲೆಯುತ್ತಿದ್ದ ಮನುಷ್ಯ ಪ್ರಾಣಿ ಪಶುಪಾಲನೆಗೊ ಕೃಷಿವಲನಾಗಿಯೊ ವಸತಿಗಳನ್ನು ಕಲ್ಪಿಸಿಕೊಂಡು ಗ್ರಾಮ, ನಗರ, ಕೋಮು, ಬಣ, ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಸಂಬಂಧ, ಯುದ್ಧ ಶಾಂತಿಕ್ರಿಯೆ ಬೆಳೆಸಿಕೊಳ್ಳುವ ಕಾಲ ಮಾನವನ ನಾಗರಿಕತೆಯಾಯಿತು. ಆ ಬಗೆ, ನೆಲಸು ನಯವನ್ನೂ ಕರ್ಮಕಾಂಡವನ್ನೂ ಬೆಳೆಸುತ್ತಾ ಬಂತು.

ಬಹುಮುಖ್ಯವಾಗಿ ಮಾನವನಲ್ಲಿ ಬೆಳೆದದ್ದು ತನ್ನ ಸ್ವಾಸ್ಥ್ಯವನ್ನೂ ಪ್ರಾಧಾನ್ಯವನ್ನೂ ರಕ್ಷಣೆ ಪೋಷಣೆಯನ್ನೂ ಮಾಡಿಕೊಳ್ಳಲು ಕಲ್ಪಿಸಿಕೊಂಡ ಆವರಣ; ಸಾಧನ ಸಾಮಗ್ರಿಯ ಪ್ರಪಂಚ. ಹೊರಗಿನ ನಿಸರ್ಗ ಇದಕ್ಕೆ ಸಲಕರಣೆಯನ್ನೂ ಅವಕಾಶಗಳನ್ನೂ ಅಡಚಣೆಗಳನ್ನೂ ಒದಗಿಸುತ್ತದೆ. ಪ್ರಕೃತಿ ದಾತೃ. ಇವನು ಉಪಯೋಗಿಸಿಕೊಂಡಿದ್ದು ಒಂದು, ಅದಕ್ಕೆ ಸಂಬಂಧಪಟ್ಟ ಮಂತ್ರ, ಯಂತ್ರ, ತಂತ್ರ. ಅ ಎಲ್ಲಕ್ಕೂ ಸಹಾಯಕ ಮಂತ್ರಭಾಗ, ಸೂತ್ರ ತತ್ವ ಸಿದ್ಧಾಂತಗಳನ್ನು ಬುದ್ಧಿ ಬಲದಿಂದ ಒದಗಿಸಿಕೊಂಡನು. ಉತ್ಪತ್ತಿ ಮಾಡಿಕೊಳ್ಳಬೇಕಾದ ಪದಾರ್ಥಗಳಿಗೆ ಬಳಸಿದ ಸಾಧನ ಯಂತ್ರ. ಮಾಡುವ ಮಾರ್ಗಗಳನ್ನು ಆಲೋಚಿಸಿ ಪರೀಕ್ಷಿಸಿ, ತಪ್ಪುಮಾಡಿ ಸರಿಕಂಡಾಗ ತಿದ್ದಿಕೊಂಡು ಮೇಲ್ಪಡಿಸಿಕೊಂಡು ಬೆಳಸಿದುದು ತಂತ್ರ, ಅದರ ಆಗಮ. ಬೇಗ ಬೇಗ ಬಹುತರ ಒಡನೊಡನೆ ಬೆಳೆದವು ಇವೆಲ್ಲ, ಇಂಥ ಸ್ಥಿತಿಯಲ್ಲಿಯೇ ಸುತ್ತಲಿನದೆಲ್ಲವನ್ನೂ ಅವನು ಅಳೆದದ್ದು ಸುರಿದದ್ದು, ಅರ್ಥಮಾಡಿಕೊಂಡದ್ದು; ಮಾತನ್ನೂ ಬರವಣಿಗೆಯನ್ನೂ ನಿರ್ಮಾಣ ಮಾಡಿಕೊಂಡದ್ದು; ಆಕಾಂಕ್ಷೆಗಳನ್ನು ಸಂಸ್ಕರಿಸಿಕೊಂಡದ್ದು. ಮಾತು, ನಡೆ, ಸಾಧನ ಸಾಮಗ್ರಿಗಳನ್ನು ಒದಗಿಸಿಕೊಳ್ಳುವುದು ಮಾನವನ ಅತಿ ವಿಶೇಷ ಲಕ್ಷಣಗಳು. ತನ್ನ ಸುಖಕ್ಕೆ ಸಂತೋಷಕ್ಕೆ ಪ್ರಾಧಾನ್ಯಕ್ಕೆ ಸಾಹಸಕ್ಕೆ ಬೇಕಾದಂತಹ ಶಾಸ್ತ್ರ ವಿಜ್ಞಾನ ಕಲೆ ನಿರ್ಮಾಣ ಮಾಡಿಕೊಂಡ ನಯವಿಲಾಸಗಳು, ಅಡುಗೆ ಊಟ ತೊಡುಗೆ ಪ್ರದರ್ಶನ ವಿನೋದಾದಿಗಳನ್ನೂ ಬಗೆಬಗೆಯ ವಿಚಕ್ಷಣೆಗಳನ್ನೂ ಮಾಡಿಕೊಂಡ. ಹೊರಗಿದ್ದುದು



ಪ್ರಕೃತಿ. ಮನಷ್ಯನು ಮಾಡಿಕೊಂಡುದು ಸಂಸ್ಕೃತಿ. ಕಷ್ಟಗಳನ್ನು ಕಡಮೆ ಮಾಡಿಕೊಂಡು ಸುಖ ಸಂತೋಷಗಳನ್ನು ಹೆಚ್ಚಿಸಿಕೊಂಡು ಸಾಹಸಗಳನ್ನು ಮೆರೆದ; ಬುದ್ಧಿ ವೈಖರಿಗಳನ್ನು ಕುದುರಿಸಿಕೊಂಡು ವಿಶ್ಲೇಷಣೆಗಳನ್ನು ವಸ್ತುನಿಷ್ಠವಾಗಿಯೂ ತಾತ್ವಿಕವಾಗಿಯೂ ಬೆಳಸಿಕೊಂಡ. ಇವಲ್ಲಕ್ಕೆ ಸಂಬಂಧಿಸಿದಂತೆ ಸಾಧನ ವಸ್ತು ದೊರೆವಂತೆ ಮಾಡಿಕೊಂಡು ನಿಂತ.

ಇವನು ಮಾಡುವುದನ್ನು ನೋಡಿ ಮಕ್ಕಳೂ ಇತರರೂ ಕಲಿತರು. ಇವನೂ ಕಲಿಸಿದ. ಕೆಲವೇಳೆ ನೆನಪನ್ನು ತನಗಾಗಿಯೊ ಇತರರಿಗಾಗಿಯೊ ಬರೆದಿಟ್ಟ. ಕೆಲವೇಳೆ ಹತ್ತಿರದ ಜನರಿಗೆ ಹರಡಿದ. ಮನೆ ಕಟ್ಟಿಕೊಂಡ, ಸಸ್ಯಾದಿಗಳನ್ನು ನಟ್ಟು ಬೆಳಸಿದ. ಭೂಮಿಯ ಪರೀಕ್ಷೆ ಮಾಡಿದ, ಭೂವಿಜ್ಞಾನ ಹುಟ್ಟಿತು. ನೆಲದ ಮೇಲ್ಮೈ ಪ್ರಯೋಜನ ವನ್ನು ದುಡಿಸಿಕೊಂಡ. ಅದನ್ನು ಅಗೆದ. ಅಲ್ಲಿನ ಖನಿಜಗಳನ್ನು, ಶಿಲೆಗಳನ್ನು ಶೋಧಿಸಿದ. ತೈಲಗಳ ಉತ್ಪತ್ತಿ ಮಾಡಿಕೊಂಡ. ಕಾಡು ಹತ್ತಿ ಉರಿವಾಗ, ಚಕಮಕಿ ಬಡಿದಾಗ, ಮರ ಉಜ್ಜಿದಾಗ ಬೆಂಕಿ ಕಂಡ. ಪ್ರಾಣಿಗಳನ್ನು, ಬೆಂಕಿಯನ್ನು ಬಳಸಿಕೊಂಡ. ಹೀಗೆ ಮಾಡುವಾಗ ಅಲ್ಲಿ ಅನೇಕ ಸ್ತರಗಳು ಕಂಡವು. ಎಷ್ಟೋ ಸಾವಿರ ಲಕ್ಷ ಕೋಟಿ ಸ್ತರಗಳ ಉಳಿಕೆಗಳಿವೆ ಎಂದುಕೊಂಡ. ಒಳಗಿರುವ ಜಲಶಕ್ತಿ, ತೈಲಶಕ್ತಿ, ಶಾಖ ಬೆಂಕಿ ಇವುಗಳನ್ನು ಬಳಸುವುದನ್ನು ಕಲಿತ. ಇದ್ದುದನ್ನು ಬಳಸಿಕೊಂಡುದೇ ಅಲ್ಲದೆ ಹೊಸದಾಗಿ ಮಾಡಿಕೊಂಡ. ಕಾಡು ಪ್ರಾಣಿಗಳನ್ನು ಸಾಧುಮಾಡಿ ದುಡಿಸುವುದನ್ನು ಕಲಿತ. ಗಾಲಿ, ಹಗ್ಗ, ಸರಪಳಿ ಮಾಡಿಕೊಂಡ. ಕಡಲ ಮೇಲೆ, ನದಿಗಳ ಮೇಲೆ ಸಂಚಾರ ಮಾಡಿದ. ಇಂಥುವೇ ಪರೀಕ್ಷೆಗಳಿಂದ ನೆಲದ ಮೇಲೆ ಸಂಚರಿಸಲು ಯಾನವಾಹನ ಸಾಧನಗಳನ್ನು ಕಲ್ಪಿಸಿಕೊಂಡ. ಗಾಳಿಯಲ್ಲಿ ಬಾಹ್ಯಾಕಾಶಗಳಲ್ಲಿ ಇಂಥುವೇ ವಿಶೇಷಗಳನ್ನು ಅರಿತು ಉಪಯೋಗಿಸಿಕೊಂಡ. ಈ ಸಂದರ್ಭದಲ್ಲೆಲ್ಲ ಅವನ ಬುದ್ಧಿ ಕುಶಲತೆ, ಪದಾರ್ಥ ನಿರ್ಮಾಣ ಚಾಲಕ ಶಕ್ತಿ, ದರ್ಶನ ಮತ್ತು ಕ್ರಿಯಾಶಕ್ತಿಗಳು ಇನ್ನಷ್ಟು ಸೂಕ್ಷ್ಮವಾದವು. “ಅನ್ಯಮಿಂದ್ರಂ ಕರಿಷ್ಯಾಮಿ ಲೋಕಾವಾಸ್ಯಾತ್ ಅನಿಂದ್ರಕಂ” ಎಂದು ತಪಶ್ಶಕ್ತಿಯಿಂದ ವಿಶ್ವಾಮಿತ್ರನು ಎಂದಂತೆ, ಇವೊತ್ತು ಪ್ರತಿಸೃಷ್ಟಿಯನ್ನು ಮಾಡಿಕೊಳ್ಳುವೆನೆಂಬಂತೆ ಮಾಡಿಯಾನೋ ಎಂಬಂತೆ. ಇಂಥ ಶಕ್ತಿ ಗಳಿಸಿದವರು ಒಂದೋ: ದೂರ್ವಾಸ ರಾಗುತ್ತಾರೆ, ಸೊಕ್ಕುತ್ತಾರೆ. ಇವನೂ ಸೊಕ್ಕಿದ; ಅದು ಅವನ ತಾಮಸ ರಾಜಸ. ಇನ್ನೊಂದು: ಉಪಕಾರಿ, ಸಹಕಾರಿ ಆಗುತ್ತಾನೆ. ಕೆಲವು ಬಾರಿ ಸೋಲಬೇಕಾಯಿತು.

ವಿಜ್ಞಾನವನ್ನು ಮಾನವನು ಬೆಳಸಿಕೊಂಡಿದ್ದಾನೆ. ಒಂದು ಕಡೆ ಗಣಿತ; ಇನ್ನೊಂದು ಕಡೆ ದರ್ಶನಗಳು; ಮತ್ತೊಂದು ಕಡೆ ವ್ಯಾಕರಣ, ಛಂದಸ್ಸು, ಅಲಂಕಾರ; ಇನ್ನೊಂದು ಕಡೆ ತರ್ಕ ಇವನಿಗೆ ನೆರವಾಗಿವೆ. ಹೊರ ಪ್ರಪಂಚದ ಪರಿಶೀಲನೆ ನಡೆಯುವಲ್ಲಿ ಬಳಸಿದ್ದ ವಿಧಾನ ತಂತ್ರಗಳೇ ವ್ಯಕ್ತಿ ಜೀವಿಯ ಒಳ ಜೀವನವನ್ನು ತಿಳಿಸಿತೇನೊ ಎಂಬಂತೆ ಅಲ್ಲಿನ ಮಾರ್ಗಗಳನ್ನೆ ಬಳಸಲು ಪ್ರಯತ್ನಿಸುವಾಗ, ಮನುಷ್ಯನ ಮನಸ್ಸು

ಅಷ್ಟು ಸೂಕ್ಷ್ಮವಾಗಿ ಲೆಕ್ಕಕ್ಕೆ ಸಿಕ್ಕುವುದಿಲ್ಲ ಎಂಬುದು ತಿಳಿಯಿತು. ಇದನ್ನು ಅರ್ಥಮಾಡಿಕೊಳ್ಳಲು ಬೇರೆಮಾರ್ಗವನ್ನು ಹಿಡಿಯಬೇಕಾಯಿತು. ಅಲ್ಲಿ ಪದಾರ್ಥ ಎಂಥದು; ಅವು ಸಿಕ್ಕುವ ಸ್ಥಳ ಸನ್ನಿವೇಶ ಎಂಥದು; ಪ್ರಯೋಜನ ಕೇಡು ಎಂಥವು; ಹೇಗೆ ಸಂಗ್ರಹಿಸಬಹುದು, ಒಂದೊಂದರ ಲಕ್ಷಣ ಗುಣ ವ್ಯತ್ಯಾಸ  ಎಂಥದು ಎಂಬುದು ಸ್ಥೂಲವಾಗಿ ತಪ್ಪದೆ ನಿರ್ಣಯಿಸಿಕೊಳ್ಳಬಹುದಿತ್ತು. ಅಲ್ಲಿಯೂ ಭೌತ, ರಾಸಾಯನಿಕ, ಜೀವವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೂವಿಜ್ಞಾನ ಮುಂತಾದವನ್ನು ಅರಿತುಕೊಂಡು ನಿಷ್ಕೃಷ್ಟವಾಗಿ ಮಾನವ ಜೀವಿಯ ತಿಳಿವಳಿಕೆ ಹೆಚ್ಚಿತು, ನಿಜ. ಆದರೆ ಮನುಷ್ಯ ಸ್ವಭಾವವನ್ನು, ವ್ಯವಹಾರ ರೀತಿನೀತಿ ಕಲಾಪಗಳನ್ನು ತಿಳಿವುದು ಹೆಚ್ಚು ಕಷ್ಟವೆಂಬುದೂ ತಿಳಿದುಬಂತು.

**–8–**

ಪ್ರತಿ ವ್ಯಕ್ತಿಯೂ ಕಡೆಯ ಪಕ್ಷ ಇಮ್ಮುಖವಾಗಿರುತ್ತಾನೆ: 1) ಹೊರಗೆ ಒಂಟಿಯಾಗಿದ್ದಾಗಿನ ವ್ಯಕ್ತಿತ್ವ, ನಡತೆ; 2) ಇತರರೊಡನೆಯ ನಡತೆ. ಮನೆಯವರೊ ಹೊರಗಿನವರೊ ಕೆಳೆಯರೊ ಹಗೆಯರೊ ಬೇರೆ ದೇಶದವರೊ ಉದ್ದೇಶದವರೊ ಆದರೆ ಬೇರೆ ಬೇರೆ ರೀತಿ. ಇದು ಹೊಸಮುಖ. ಇದಕ್ಕೆ ಸಂಬಂಧಿಸಿದಂತೆ Sociology-ಸಮಾಜ ವಿಜ್ಞಾನ–ಬೆಳೆಯಿತು. ಮೊದಮೊದಲು ಸ್ಥೂಲವಾಗಿ, ಆಮೇಲೆ ವಿಚಕ್ಷಣೆ ಬೆಳೆಯಿತು. ಒಳಮುಖವಾಗಿ ಅವನ ಮನಸ್ಸು, ಅದರ ವ್ಯಾಪಾರ ಬೆಳೆಯುತ್ತಲೇ ಹೋಯಿತು. ಇದರ ಆಳ, ವಿಸ್ತಾರ, ಸೂಕ್ಷ್ಮ, ವ್ಯಾಪ್ತಿ, ಜಟಿಲತೆ ಗೂಢವಾಗಿ ಗಹನವಾಗಿ ಬೆಳೆಯಿತು. ಇಲ್ಲಿ ಮನೋವಿಜ್ಞಾನವು (Psychology) ಬೆಳೆಯುತ್ತದೆ. ಹಿಂದೆ ಮನಸ್ಸಿನ ಶಕ್ತಿಯನ್ನು – Intellect, will, feeling–ಬುದ್ಧಿಶಕ್ತಿ, ಇಚ್ಛೆ, ಕ್ರಿಯಾಶಕ್ತಿ ಎಂದು ಭಾಗಗಳಾಗಿ ವಿಂಗಡಿಸಿಕೊಂಡು ಪರಿಶೀಲಿಸಿದ್ದುಂಟು. ಒಂದು ಸುಖದುಃಖಗಳಿಗೆ ಸಂತೋಷಗಳಿಗೆ ಸಂಬಂಧಿಸಿದ್ದು. ಇನ್ನೊಂದು ಮಾಡುವ ಕೆಲಸಗಳ ಪ್ರಚೋದನೆಗೆ ಸಂಬಂಧಿಸಿದ್ದು. ಕಾರ್ಯಕ್ಕೆ ಪ್ರಚೋದನೆ ತರತಕ್ಕದ್ದು ಇನ್ನೊಂದು ಯುಕ್ತಿಯ (reason) ಸ್ಥಾನ. ಹಾಗೆ ಆಲೋಚನೆಯ ಕೇಂದ್ರ (thought). ಇಲ್ಲಿ ಕೇಂದ್ರ ಎಂಬ ಮಾತು ಕೂಡ ತಪ್ಪೇನೊ. ಈ ಯಾವುದೊಂದನ್ನೂ ಪ್ರತ್ಯೇಕಗೊಳಿಸಲಾಗುವುದಿಲ್ಲ. ಒಂದು ಇನ್ನೊಂದನ್ನು ಹೇಗೆ ಮಾರ್ಪಡಿಸುತ್ತದೆ, ದುಡಿಸಿಕೊಳ್ಳುತ್ತದೆ ಎಂಬುದನ್ನು ತಿಳಿವುದೂ ಕಷ್ಟವಾದ ಕೆಲಸವೇ. ಅಂತೂ ಈ ವ್ಯಾಪಾರಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅನ್ವೇಷಿಸಲು, ಕೂಡಿಸಲು ಇದೇ ಮನಸ್ಸಿನ ಶಕ್ತಿಗೆ ಅಳವಡುವ ವ್ಯಾಪಾರವಾಗುತ್ತದೆ. ಇದರಲ್ಲಿ ಎಷ್ಟೋ ಸ್ತರಗಳುಂಟು; ಮುಚ್ಚುಮರೆ ಉಂಟು; ಆಸಕ್ತಿ, ಬೆಡಗು, ತಂತ್ರ ಉಂಟು; ಅಭಿಲಾಷೆಗಳುಂಟು. ಮಾಡುತ್ತಿರುವ ಕೆಲಸ ಯಾವ ವೇಗದ್ದೊ ಹಾಗೆ ಆ ಕ್ರಿಯಾ ವ್ಯಾಪಾರದಲ್ಲಿ ಹೊಸ ಸ್ಫೂರ್ತಿಗಳೂ ರೂಪ ಆಕಾರಗಳೂ ಪ್ರಕಾರಗಳೂ ಕಂಡು ಅವಕ್ಕೆ ಮನಸ್ಸು ತೆತ್ತು ಮನುಷ್ಯನು ಹೊಸ ಪದಾರ್ಥಗಳನ್ನು ನಿರ್ಮಾಣ  ಮಾಡಿಕೊಂಡ.



ಮನೋವಿಜ್ಞಾನ ಎಷ್ಟು ವಿಚಿತ್ರವಾಗಿ ಬೆಳೆಯುತ್ತಿದೆ ಎಂಬುದನ್ನು ಈ ಶತಮಾನದಲ್ಲಿ ಅತಿ ವಿಶೇಷವಾಗಿ ಕಾಣುತ್ತಿದ್ದೇವೆ. ವಿಶೇಷಗಳಿದ್ದಂತೆ ವಿಕಾರಗಳೂ ಅಲ್ಲಿ ಉಂಟು. ಎಲ್ಲ ಕಾರ್ಯಗಳಿಗೂ ಮನುಷ್ಯನ ಮನಸ್ಸು ಮೂಲ. ಮನಸ್ಸಿಂದಲೇ ಪ್ರಪಂಚ ಅರಿವಿಗೆ ಬರುವುದು. ನಾವು ಇದ್ದೇವೆಂಬ ಅರಿವು ನಮಗಾಗುವುದು ಕೂಡ. ಅದು ಯಾವುದನ್ನಾದರೂ ಕಾಣಬೇಕೆಂದರೆ ಮಾತ್ರ ಕಂಡೀತು. ದೃಷ್ಟಿ, ಗಂಧ, ರಸ, ಸ್ಪರ್ಶ, ಶಬ್ದ ಇತ್ಯಾದಿಗಳಲ್ಲಿ ಯಾವುದು ತಿಳಿಯಬೇಕಾದರೂ ಅದರ ಅಡಿಯಲ್ಲಿ ಮನಸ್ಸಿನ ಕಾರ್ಯ ಇದ್ದೇ ಇರುತ್ತದೆ. ಅದು ಗಮನ ಕೊಡದಿದ್ದರೆ ಕಣ್ಣು ನೋಡುವುದಿಲ್ಲ.  ಇಂದ್ರಿಯಗಳು ತಮ್ಮ ಕೆಲಸ ಮಾಡುವುದಿಲ್ಲ. ಅಥವಾ ಮಾಡಿದುದು ಗಮನಕ್ಕೆ ಬರುವುದಿಲ್ಲ. ಯಾವುದಕ್ಕೂ ಇದರ ಅವಧಾನ ಸಂತತವಾಗಿರಬೇಕು. ಇದರಲ್ಲಿ ಪ್ರಜ್ಞೆಯ (consciousness) ನಾನಾ ಪದರಗಳೂ ಮಟ್ಟಗಳೂ ಮುಚ್ಚುಮರೆಗಳೂ ಉಂಟು. ಇದರ ವ್ಯಾಸಂಗ ಎಷ್ಟು ಸೂಕ್ಷ್ಮವಾಗಿ ನಡೆದರೂ ಸಾಲದು, ಮುಗಿಯದು. ಸಾಧಾರಣರ ಮನಸ್ಸು ಸಾಧಾರಣವಾಗಿಯೇ ಇರುತ್ತದೆ. ಬುದ್ಧಿ ಸಂಸ್ಕಾರಗಳು ಬೆಳೆದಂತೆಲ್ಲ, ಅನುಭವ ಹೆಚ್ಚಿದಂತೆಲ್ಲ, ಆಕಾಂಕ್ಷೆ ಸಾಹಸ ವೃದ್ಧಿಗೊಂಡಂತೆಲ್ಲ, ನಿರ್ಣಯಗಳನ್ನು ತೀರ್ಮಾನಗಳನ್ನು ಮಾಡಬೇಕಾದಂತೆಲ್ಲ ಯಾವುದನ್ನು ಹೇಗೆ ರಚಿಸಬೇಕೆಂದೂ ಸಾಧಿಸಬೇಕೆಂದೂ ನಿರ್ವಹಿಸುವ ಅಗತ್ಯಬಿದ್ದರೂ ಈ ಅಗತ್ಯವನ್ನು ತಿಳಿಸುವುದೂ ಮನಸ್ಸೇ. ಅದಕ್ಕೆ ತಕ್ಕ ಹಾಗೆ ಕ್ರಿಯಾ ಪ್ರವೃತ್ತಿಗಳನ್ನೂ ವಿಧಾನಗಳನ್ನೂ ಸೂಚಿಸುವುದೂ ತಿಳಿಸುವುದೂ ಅದೇ. ಈ ಒಂದು ವಿಶೇಷವೇ ಮನುಷ್ಯನನ್ನು ಮನುಷ್ಯನನ್ನಾಗಿ ಮಾಡಿರುವುದು. ಒಳ್ಳೆಯದಕ್ಕೆ ಕೆಟ್ಟದಕ್ಕೆ, ವ್ಯಕ್ತಿಜೀವನಕ್ಕೆ ಸಾಮೂಹಿಕ ಜೀವನಕ್ಕೆ ನೆನಪನ್ನು ಉಳಿಸುವುದೂ ಕಾಪಾಡುವುದೂ ಮರೆವು ತಣಿವುದೂ ಮನಸ್ಸೇ. ಇಂದಿನ ಪರಿಸ್ಥಿತಿಯನ್ನು ತಿಳಿಸುವುದೂ ನಾಳಿನದನ್ನು ಚಿಂತಿಸಿ ಅರ್ಥಮಾಡಿಕೊಳ್ಳಬಲ್ಲದ್ದೂ ಅದೇ. ರಾಗದ್ವೇಷಗಳಿಂದ ತುಂಬಿದ ಮನುಷ್ಯ ಜೀವನದಲ್ಲಿ ಅಜ್ಞಾನದಿಂದ, ಆಸಕ್ತಿ ಆಕಾಂಕ್ಷೆಗಳಿಂದ, ಶಕ್ತಿ ಪ್ರಾಧಾನ್ಯ ಗಳಿಕೆಯ ದೃಷ್ಟಿಯಿಂದ ಏನೇನು ಹುಟ್ಟಿಕೊಳ್ಳುತ್ತದೆಯೊ ಅದರ ಹಿಂದೆಲ್ಲ ಈ ನೆನಪು ತನ್ನದು, ಇತರರದು, ಲೋಕದ್ದು ಎಂಬ ಸಮಸ್ತವೂ ಒಂದು ಕರ್ಮದ ಅಂಶದಂತೆ ನೆಲಸಿರುತ್ತದೆ. ಅದು ಚರಿತ್ರೆ. ಅದು ರಚಿಸಿದ್ದು ಶೀಲ.

ಒಂದು ವರ್ಗದ ಅನೇಕರ ಜೀವನದಲ್ಲಿ ಸಾಮಾನ್ಯವಾಗಿ ನುಡಿದು ಬರುತ್ತಿರುವ ಪದ್ಯದ ಆರಂಭದ 'ಕಾಯೇನ, ವಾಚಾ, ಮನಸಾ, ಇಂದ್ರಿಯೈರ್ವಾ, ಬುದ್ಧ್ಯಾತ್ಮನಾವಾ ಪ್ರಕೃತಿ ಸ್ವಭಾವಾತ್' ಎಂಬ ಮಾತುಗಳು ದಿನಾ ಬಳಸುವಂಥವು. ಎಲ್ಲ ಪ್ರವೃತ್ತಿಗಳಿಗೂ ಇವು ಹಿಂದೆ ಶಕ್ತಿ ಅಥವಾ ಚೈತನ್ಯ ಸ್ಥಾನಗಳು. ಇವೆಲ್ಲಕ್ಕೂ ಎಂಜಿನ್ ಮನೆಯಂತೆ ಇದೆ ಮನಸ್ಸು.[5] ಎಷ್ಟೊ ಒಳ ಹೊರ ಶಕ್ತಿಗಳನ್ನು ಕಂಡುಹಿಡಿದುದು

5. ವಿದ್ಯುಚ್ಛಕ್ತಿಯನ್ನು ಮೊದಲು ಕಂಡು ಹಿಡಿದ ಫ್ಯಾರಡೇ ಆ ಹೊಸ ಸುದ್ದಿಯನ್ನು ಮಂತ್ರಿ ಗ್ಲ್ಯಾಡ್‌ಸ್ಟನ್‌ಗೆ ನಿವೇದಿಸಿದನಂತೆ. ಇದರಿಂದ ಪ್ರಯೋಜನವೇನು ಎಂದರಂತೆ ಅವರು. ಶುದ್ಧಶಾಸ್ತ್ರ ಜ್ಞಾನದ ಆತ ಆ ಶಕ್ತಿಯ ಸ್ವರೂಪವನ್ನು ತಿಳಿಸಿದ ಅಷ್ಟೇ. ಆತ

ಮನಸ್ಸು. ಮನಸ್ಸಿನ ಶಕ್ತಿ ಅಂಥ ಕೋಟಿ ಶಕ್ತಿಗಳನ್ನು ನಡಸಬಲ್ಲುದು, ಕಂಡು ಹಿಡಿಯ ಬಲ್ಲುದು. 'ಕಾಯೇನ ವಾಚಾ' ಎಂದು ನುಡಿಯುವ ಪದ್ಯದಲ್ಲಿಯೂ 'ಆತ್ಮನಾವಾ' ಎಂಬ ಮಾತಿದೆ. ಆ ಆತ್ಮವನ್ನು ಅರಿಯತಕ್ಕದ್ದು, ವಿವರಿಸತಕ್ಕದ್ದು ಮನಸ್ಸೇ. ಇಷ್ಟು ಹೇಳಿದ ಮೇಲೂ 'ಪ್ರಕೃತಿ ಸ್ವಭಾವಾತ್' ಎಂಬುದಿದೆ. ಅಲ್ಲಿಯೂ ಎರಡು ಮಾತಿದೆ. ಒಂದು ಪ್ರಕೃತಿ ಎಂಬುದು, ಇನ್ನೊಂದು ಸ್ವಭಾವಾತ್ ಎಂಬುದು. ಮೂಲಭೂತವಾದ ದೇಹ, ಅದರ ಆಧಾರಭೂತವಾದ ಮನಸ್ಸು, ಅವು ಏನೇನನ್ನು ಪ್ರಚೋದಿಸುತ್ತದೆಯೊ, ಅದಕ್ಕೆ ಅಗತ್ಯವಾದ ಕ್ರಿಯೆಗಳಿಗೆ ನಮ್ಮನ್ನು ನಡೆಸುತ್ತದೆಯೊ ಅದೇ ಬಹುಮಟ್ಟಿಗೆ ಮನಸ್ಸಿಗೆ ತಟ್ಟುವ ಲೋಕ. ಸಹಜವಾಗಿ ಹುಟ್ಟಿಬಂದರೂ ಇನ್ನೊಬ್ಬರಿಗೆ ನುಡಿವ, ಇನ್ನೊಬ್ಬರನ್ನು ತಿಳಿವ ಮಾತು ಸಾಧನಗಳು. ಈ ಕಾರ್ಯದ ಪ್ರಪಂಚ ಅದಕ್ಕೆ ಸಂಬಂಧಪಟ್ಟ ವಿದ್ಯೆಗಳನ್ನೆಲ್ಲ ಬೆಳಸಲು ಅವಕಾಶ ಕೊಡುತ್ತದೆ.

ಮಾತು ಸಮಸ್ತ ವ್ಯವಹಾರಕ್ಕೂ ಸಾಧನ. ಸಾಹಿತ್ಯ ಸಂಗೀತಾದಿ ವಿದ್ಯೆಗಳಿಗೆ ಮೂಲ ಮಾಧ್ಯಮ. ವ್ಯವಹಾರ ಪ್ರಪಂಚದಲ್ಲೆಲ್ಲ ಪ್ರಬಲವಾಗುವ ಮಾತು ಲೋಕದ ಜೀವನವನ್ನು ಹೆಚ್ಚು ಕಡಮೆ ಮಾಡಬಲ್ಲದು. ನುಡಿವುದರಿಂದ ನುಡಿಯದಿರುವುದರಿಂದ, ವಿವೇಕ ಅವಿವೇಕಗಳಿಂದ ಇದು ಸಾಧಿಸುವ ಕಾರ್ಯ, ಇದರ ಪ್ರಭಾವ ಭೂಮಿ ಆಕಾಶಗಳನ್ನು ತುಂಬಿದೆ. ಇಂದ್ರಿಯ ವ್ಯಾಪಾರ ಹೊರಗಿನ ಚೇಷ್ಟಾಪ್ರಪಂಚ. ಅದು ಸಾಧನಾಂಶ. ಮಾತಿನಲ್ಲಿ ನುಡಿಯದುದನ್ನು, ನುಡಿದದ್ದನ್ನು, ನುಡಿದಿರಬಹುದೇನು, ನಿಜವಾಗಿ ಏಕೆ ಎಂಬುದನ್ನು ಊಹಿಸುವ ಶಕ್ತಿ ಬೇರೆ. ಧ್ವನಿಯ ರಂಗು ಕೂಡ; ಕಾಕುವಿನ ಪ್ರಭಾವ ಕೂಡ. ಎರಡನ್ನೂ ಕಾರ್ಯರೂಪದಲ್ಲಿ ತೊಡಗಿಸುವ ಕೆಲಸ ಇಂದ್ರಿಯಗಳದು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳುಂಟು. ಬುದ್ಧಿ ಈಗಾಗಲೇ ತಿಳಿಸಿದ ಹಾಗೆ, ಆಲೋಚನೆಯ ಸ್ಥಾನ ಆತ್ಮವನ್ನು ಕುರಿತು ಮುಂದೆ ಮಾತಾಡಬಹುದು. ಇವೆಲ್ಲ ಸೇರಿ ಯಾವುದನ್ನು ನಾವು ಪ್ರಕೃತಿ ಎನ್ನುತ್ತೇವೊ ಅದನ್ನು ಮಾರ್ಪಡಿಸಿ ಮನುಷ್ಯನು ಕಲ್ಪಿಸಿಕೊಂಡಿರುವುದು ಬಾಳಿನ ಎರಡನೆಯ ಆವರಣ. ಪ್ರಕೃತಿಯ ಸಮಕ್ಕೆ, ಪ್ರಕೃತಿಗೆ ಹತ್ತು ಪಟ್ಟು ಮೀರಿ ಈ ಆವರಣ ಜೀವನದಲ್ಲಿ ಮನುಷ್ಯನ ಬದುಕನ್ನು ನಡಸುತ್ತಿರುತ್ತದೆ. ಇದರ ಸ್ವರೂಪವನ್ನಾಗಲಿ ಕಾರ್ಯವನ್ನಾಲಿ ಹೀಗೆ ಎಂದು ಹೇಳುವುದು ಕಷ್ಟ. ಆದರೆ ಎಲ್ಲಕ್ಕೂ ಆಧಾರವಿದೆ. ಪ್ರಪಂಚದಲ್ಲಿ ಒಬ್ಬ ವ್ಯಕ್ತಿಯನ್ನು ಇತರ ಎಲ್ಲರಿಂದಲೂ ಬೇರೆ ಮಾಡಿ ಇವನಿಗೆ ವ್ಯಕ್ತಿತ್ವವನ್ನೊ ಮೂರ್ತಿತ್ವವನ್ನೊ

---

ಆಗ ಕಂಡಿದ್ದುದು ಅಷ್ಟೇ. ಶಾಖ, ಬೆಳಕು, ಚಾಲಕ ಶಕ್ತಿ ಅದರ ಮುಖಗಳು ಎಂದು ಬಹುಶಃ ನಿವೇದಿಸಿರಬೇಕು. ಇನ್ನೇನು ಉತ್ತರ ಹೇಳಲು ಆಗದೆ, 'ನಾನು ಹೇಳಲಾರೆ ಸ್ವಾಮಿ. ಒಂದು ದಿನ ಇದರ ಮೇಲೆ ತೆರಿಗೆ ಹಾಕಬಹುದು' ಎಂದನಂತೆ. ತಿಳಿಯದಿದ್ದಾಗ ಪ್ರಯೋಜನಭಾಗ ಇಂತೆಂಬುದಾಗಲೀ ಸ್ವರೂಪ ಇಂತೆಂಬುದಾಗಲೀ ವಿವರಿಸಲಾಗದು. ಇವೊತ್ತು ಜೀವನದ ಎಲ್ಲ ರಂಗಗಳಲ್ಲಿಯೂ ವಿದ್ಯುಚ್ಛಕ್ತಿ ಏನು ಮಾಡಬಲ್ಲುದೆಂಬುದನ್ನು ಮತ್ತು ಮಾಡಲಾರದ್ದು ಏನು ಎಂಬುದನ್ನು ಕಂಡಿದೆ.



ಉಂಟು ಮಾಡಿಕೊಡತಕ್ಕದ್ದು ಮನಸ್ಸು. ಅದು ಯಾವುದನ್ನು ಹೇಗೆ ಬೇಕಾದರೂ ಕಾಣಬಲ್ಲುದು, ಕಾಣಿಸಬಲ್ಲುದು. ಅದೇ ಮನುಷ್ಯನನ್ನು ಇತರ ಎಲ್ಲ ಪ್ರಾಣಿವರ್ಗಗಳಿಗಿಂತಲೂ ಮೇಲ್ಪಟ್ಟವನೆಂದು ವಿಶೇಷಗೊಳಿಸಿರುವ ಶಕ್ತಿ ಸಂಗತಿ. ಸಮಸ್ತ ಜ್ಞಾನಕ್ಕೂ ಮೂಲಭೂತವಾದ ಜ್ಞಾತೃ, ನಾನು ಎಂಬ ಅಂಶಕ್ಕೆ ಮೂಲಾಧಾರ. ನಾನಲ್ಲದ್ದು ಅನ್ಯ. ನನ್ನದು ಸ್ವ. ಉಳಿದೆಲ್ಲ ಅನ್ಯ ಅಥವಾ ಪರ. ಇನ್ನೊಂದಿದೆ, ಅದರ ಪರವಾಗಿ ನಡತೆಯಿದೆ. ಆ ನಡತೆ ಒಳ್ಳೆಯದು ಕೆಟ್ಟದು, ಹಿತ ಅಹಿತ ಎಂಬ ವಿವೇಚನೆಯ ಜೊತೆಗೆ, ಅದರ ಪರವಾಗಿ ನಮ್ಮ ನಡತೆಯನ್ನು ಹೊಂದಿಸಿಕೊಳ್ಳುತ್ತಿರುತ್ತದೆ. ನಾನು ಅಥವಾ ಸ್ವ ಎಂಬುದರ ಜೊತೆಗೆ, ಅಥವಾ ಅದನ್ನು ಅನ್ಯಕ್ಕೂ ವಿಸ್ತರಿಸಿ ಬೆಳೆದರೆ ಸಮಾಜ ಸಂಸ್ಕೃತಿ ತೊಡಗುತ್ತದೆ. ನನ್ನ ಹೆಂಡತಿ ಮಕ್ಕಳು, ಮನೆ, ನನ್ನ ಕಾಲ, ನನ್ನ ಪ್ರಪಂಚ, ನನ್ನ ಹೊರಗಿನದು ಎಂಬ ಎಲ್ಲದರ ಕಡೆಗೂ ನಾನು ಹದವಾಗಿ ಹೊಂದಿಕೊಂಡು ಅರ್ಥಮಾಡಿಕೊಂಡು ಬೆಳೆದೆನೇ ಆಗ ನನ್ನ ಸಂಸ್ಕಾರ ದೊಡ್ಡದಾಗುತ್ತದೆ. ಇದು ಪರ ಎಂಬ ಮಾತಿನಲ್ಲಿ ವ್ಯಕ್ತವಾಗುವುದು. ಅಧ್ಯಾತ್ಮ ಕೂಡ; ಅದರ ಸಾಧನೆ ಕೂಡ ಆದೀತು. ವ್ಯಕ್ತಿ ಒಂದೇ ಆಗಿ ಏಕಾಂಗಿಯಾಗಿ ವಸ್ತುವಿನ ಜೀವ ಆ ಪದರದವರೆಗೂ ಹರಡಬಲ್ಲುದು. ಇದನ್ನು ಮನನ ಮಾಡಿಕೊಡುವುದೂ ಮನಸ್ಸು. ಬೇಕಾದ ಈ ಎಲ್ಲಕ್ಕೂ ಯುಕ್ತಿ ಔದಾರ್ಯಾದಿ ಒದಗಿಸಿಕೊಡುವುದು ಕೂಡ. ಆದುದರಿಂದ ಮನುಷ್ಯನ ಏಕಾಂತ ಜೀವನದ ಭಾಗವೊಂದು, ಸಾಮಾಜಿಕ ಜೀವನವೊಂದು – ಎರಡರ ವ್ಯಾಪ್ತಿಗಳೂ ಮರ್ಯಾದೆಗಳೂ ಅಗತ್ಯಗಳೂ ಸಾಧನ ಸೌಕರ್ಯಗಳೂ ಆರೋಗ್ಯ ಸಂಪತ್ತಿ ಮುಂತಾದ ಸಂಗತಿಗಳೆಲ್ಲ ಮನುಷ್ಯನ ಪರಿಶೀಲನೆಗೆ ಬರುತ್ತದೆ.

ಸಮಾಜ ವಿಜ್ಞಾನ -Sociology- ಎನ್ನುವಾಗ ಆರ್ಥಿಕ ವಿಜ್ಞಾನ ಬರುತ್ತದೆ, ರಾಜಕೀಯ ವಿಜ್ಞಾನ ಬರುತ್ತದೆ. ಇವೆರಡನ್ನೂ ಹೊಂದಿಸುವ, ನೇರ್ಪಡಿಸುವ, ನಿಯಂತ್ರಿಸುವ ವಿಧಿ ನಿಷೇಧರೂಪವಾದ Law ಬರುತ್ತದೆ. ಈ ಲಾ–ಕಾನೂನೊ ಧರ್ಮವೊ – ಹೀಗಿರಬೇಕು, ಹೀಗಾಗದು ಎಂದು ನಿರ್ಣಯಿಸುವ ಸರಕಾರವಿರುತ್ತದೆ. ಅದಕ್ಕೆ ಸಂಬಂಧಪಟ್ಟ ದಂಡನೀತಿ, ರಾಜಕೀಯ ಜೀವನ ಬರುತ್ತದೆ. ಇವೆಲ್ಲಕ್ಕೂ ಸಂಬಂಧಿಸಿದ ಕ್ರಿಯಾವಿಧಾನಗಳು, ಸಂಸ್ಥೆಗಳು, ವ್ಯವಹಾರ ವಿಧಾನಗಳು ಬರುತ್ತವೆ. ಇಂಥಲ್ಲಿ ಗುರಿ ಗಮ್ಯ ಯಾವುದಿರಬೇಕು; ಯಾವುದಕ್ಕೆ ನ್ಯಾಯ ನಡತೆ ನಡಸಬೇಕು ಎಂಬ ವಿಚಾರ ಬರುತ್ತವೆ. ಮೌಲ್ಯಗಳ ಮಟ್ಟಗಳು ಸೌಧ ಕಟ್ಟುತ್ತವೆ. ಹಿಂದೆ, ಇಂದು ನಮ್ಮಲ್ಲಿ, ಬೇರೆಯವರಲ್ಲಿ ಇವು ಹೇಗೆ? ವ್ಯತ್ಯಾಸಗಳಿದ್ದರೆ ಎಂಥವು? ನಮ್ಮದು ಸಹಜ ನ್ಯಾಯ ಧರ್ಮ ಆದರೆ ಇನ್ನೊಬ್ಬರದೂ ಹಾಗೆಯೇ ಎಂದು ನಾವು ಎಣಿಸಬೇಕಲ್ಲವೆ ಎಂಬ ವಿವೇಚನೆ, ಪರ್ಯಾಲೋಚನೆ ಬರುತ್ತದೆ. ಒಂದು ತಾರತಮ್ಯ ಜ್ಞಾನ, ಒಂದು ವಿಮರ್ಶಾ ತೂಕ, ಒಂದು ಸಮನ್ವಯ ದೃಷ್ಟಿ ಬರುತ್ತದೆ. ಇವನ್ನು ಕೂಲಂಕಷವಾಗಿ ಪರಿಶೀಲಿಸಿ ಇದು ಸರಿ, ಇದು ತಪ್ಪು ಎಂಬ ವಿಚಾರ; ಸರಿಯಾದುದು ಏಕೆ ಸರಿ, ತಪ್ಪಾದುದು ಏಕೆ ತಪ್ಪು ಎಂಬ ಯೋಚನೆ ಬರುತ್ತದೆ. ಅಲ್ಲಿ ನಡವಳಿಕೆಗೆ ನೀತಿಯ ವಿಚಾರ ನೆಲಗಟ್ಟು ಹುಟ್ಟಿತು. ಸಮಾಜ–ಸಮಾಜಗಳ ನಡುವೆ, ರಾಷ್ಟ್ರ–

ರಾಷ್ಟ್ರಗಳ ನಡುವೆ ಶಾಂತಿಯಲ್ಲಿ, ಯುದ್ಧಸಮಯಗಳಲ್ಲಿ ಯಾವುದು ಮರ್ಯಾದೆ, ಧರ್ಮ ಎಂಬುದು ಬರುತ್ತದೆ. ಇದು ವಿಜ್ಞಾನವಲ್ಲ; ವಿಚಾರ ಭಾಗ, ವಿಮರ್ಶಾ ಭಾಗ. ಇಲ್ಲಿನ ಬೆಲೆಗಳು ಅಳೆದು ತೀರ್ಮಾನಿಸುವವಲ್ಲ, ಆದರೆ ಇದರದೂ ಒಂದು ಸಂಸ್ಕಾರ ವಿಜ್ಞಾನ. ಇಲ್ಲಿನ ಪರ್ಯಾಲೋಚನೆ ಹಿತಾಹಿತಗಳನ್ನು ಕುರಿತದ್ದು; ಭೌತ ಸಂಬಂಧಗಳ ಬೆಲೆಯನ್ನು ನಿರ್ಧರಿಸತಕ್ಕದ್ದು. ಇಲ್ಲಿ ಇತಿಹಾಸ, ರೂಢಿ, ಸಂಪ್ರದಾಯ, ಧರ್ಮಬುದ್ಧಿ ಹೇಗೆ ನಡೆಸಿದೆ ಎಂಬುದು ನಡಸುವ ಅಂಗವಾಗುತ್ತದೆ. ಇಂಥದು ವಾಡಿಕೆ ಶಿಷ್ಟಸಂಪ್ರದಾಯ ಎಂಬುದಾಗುತ್ತದೆ. ಇಷ್ಟೆಲ್ಲ ಆದರೂ 'ದಯವಿಲ್ಲದ ಧರ್ಮವಾವುದಯ್ಯಾ?', 'ಮನುಷ್ಯಕುಲಮೆಲ್ಲ ತಾನೊಂದೆ ವಲಂ', the still, small voice–ಎಂಬ ಅಂತರ್‌ಬೋಧೆ, 'What does it profit you, if you gain the whole world and lose your soul' ಎಂಬ ಧಾರ್ಮಿಕ ವಿವೇಚನೆ ಇತ್ಯಾದಿಗಳಲ್ಲಿ ಇನ್ನಾವುದೊ ಒಂದು ಕೇವಲ ಪಾರ್ಥಿವ, ಪ್ರಾಕೃತಿಕ, ಜೀವಾದಿ ಶಾಸ್ತ್ರಗಳ ವಿವೇಚನೆ ತಲೆಯಿಕ್ಕಿ ಅಲ್ಲಿನ ಪ್ರಸಂಗಗಳನ್ನೂ ಸನ್ನಿವೇಶಗಳನ್ನೂ ಫಲಪ್ರದ ಮಾಡಬೇಕಾಗುತ್ತದೆ. ಈಗ ಬುದ್ಧಿಯ ವಿಲಾಸ, ಭಾವದ ವಿಲಾಸ, ಇಚ್ಛೆ ಕ್ರಿಯೆಗಳ ವಿಲಾಸ ಬೇರೆ ಆಕಾಂಕ್ಷೆ ವಿಧಾನ ಕ್ರಮಗಳನ್ನು ಹಿಡಿಯುತ್ತವೆ. ಪರಸ್ಪರ ವಿರುದ್ಧವಾದ ನಿಲವುಗಳನ್ನು ಸಹಿಸಿ ಬಾಳಬೇಕಾದ, ಸಮನ್ವಯಗಳು ಏರ್ಪಡಬೇಕಾದ ಅಗತ್ಯ, ಸಂಯಮ, ಅನಸೂಯತೆ, ತಾಳ್ಮೆ ಇವು ದೊಡ್ಡದಾಗುತ್ತವೆ. 'Judge not lest you be judged' ಎಂಬುದಕ್ಕೂ 'He that has no sin in you may cast the first stone at her' ಎನ್ನುವುದಕ್ಕೂ ಇರುವ ಅಂತರ ದೊಡ್ಡದು. ಅಲ್ಲದೆ ಪ್ರೇಮ, ಮಾನ, ಶಾಂತಿ ಮುಂತಾದವುಗಳ ಸ್ನೇಹ, ಔದಾರ್ಯಗಳ ನೆಲಸು ಬೇರೆ ಮಟ್ಟದ್ದು ಎಂಬ ತಿಳಿವು ಬೆಳೆಯುತ್ತದೆ.

ನೀತಿ ಎಂಬ ಮಾತಿನಲ್ಲಿ ನಮ್ಮನ್ನು ನಾವು ಹೇಗೆ ನಡಸಿಕೊಳ್ಳಬೇಕು, ನಮ್ಮ ನಡವಳಿಕೆಗೆ ಸಂಬಂಧಿಸಿದ ಅರ್ಥ ಮಾತ್ರ ದ್ಯೋತಿತವಾದರೂ ಅದನ್ನು ನೀತಿ, ಧರ್ಮಶಾಸ್ತ್ರ ಎಂಬಂತೆ Ethics ಹುಟ್ಟಿಕೊಳ್ಳುತ್ತದೆ. ಇದರ ಮಾನಗಳು ಒಂದೊಂದು ಕಾಲದಲ್ಲಿ, ಒಂದೊಂದು ಜನವರ್ಗದಲ್ಲಿ ಒಂದೊಂದು ಬಗೆ. ಯಾವುದೂ ಪರಮ ಪ್ರಮಾಣವಾಗದೇ ಎನ್ನಿಸುತ್ತದೆ. ಎಂದರೆ ಮನುಷ್ಯನು ವ್ಯವಹಾರ ಜೀವನದಲ್ಲಿ ಒಂದು ಸಮಾಜದ ಜೀವಿಯಾಗಿರುವುದರಿಂದ ಹುಟ್ಟಿಬರುವ ವಿಜ್ಞಾನ ಭಾಗ ಅಥವಾ ಶಾಸ್ತ್ರಭಾಗ ಸಮಾಜ ವಿಜ್ಞಾನದ ಅಂಗವಾಗಿ ಹುಟ್ಟುತ್ತದೆ. ಒಂದು ಕಡೆ ಮನೋವಿಜ್ಞಾನ, ಇನ್ನೊಂದು ಕಡೆ ನೀತಿ ಅಥವಾ ಧರ್ಮ ಮಾರ್ಗದ ವಿಜ್ಞಾನ, ಕಾರಣ ಚರಿತ್ರೆ, ಸನ್ನಿವೇಶಗಳ ಬೆಲೆ ಸೇರಿಕೊಳ್ಳುತ್ತವೆ. ಇಲ್ಲಿ ಖಂಡಿತ ನಿರ್ಧಾರ ಎಂಬುದು ಹಲವೇಳೆ ಶಕ್ಯವಲ್ಲ.

**–9–**

Mental and Moral Sciences – ಇವು ಕಾಲಕಾಲಕ್ಕೆ, ದೇಶದೇಶಕ್ಕೆ, ಪರಿಸ್ಥಿತಿ ಪರಿಸ್ಥಿತಿಗಳಿಗೆ ಬೇರೆಯಾಗಿ ಬೆಳೆಯುತ್ತ ಬಂದಿರುತ್ತವೆ. ಒಂದನ್ನು ಒಂದು ಅನುಸರಿಸಿರ



ಬಹುದು. ಒಂದಕ್ಕೊಂದು ವಿರುದ್ಧವಾಗಿ ಒಪ್ಪದೆ ಇರಬಹುದು. ಒಂದನ್ನೊಂದು ಮೂದಲಿಸುತ್ತಲೊ ಜೀರ್ಣಿಸಿಕೊಳ್ಳಲೊ ಇರಲು ಯತ್ನಿಸುತ್ತವೆ. ಈ ತುಮುಲ, ಈ ಕೋಟಲೆ ಗೋಜು ಎನಿಸುವಷ್ಟು ತೊಡಕಿನದು. ಇವು ಭೌತಶಾಸ್ತ್ರದಂತೆ ವಿಜ್ಞಾನವಲ್ಲ; ರಾಸಾಯನ ಶಾಸ್ತ್ರದಂತೆಯೂ ಅಲ್ಲ; ಸಸ್ಯ–ಪ್ರಾಣಿ–ಭೂ ವಿಜ್ಞಾನಗಳಂತಲ್ಲ. ಇವೆಲ್ಲದ ರಿಂದಲೂ ಮಾರ್ಪಡುವ, ಇವೆಲ್ಲವನ್ನೂ ದುಡಿಸಿಕೊಂಡು ಪ್ರಯೋಜನ ನಾಶಗಳನ್ನು ಸಾಧಿಸುವ ಪ್ರಪಂಚ ಇದು. ಇಲ್ಲಿ ವಿಧ ಒಂದಲ್ಲ, ಗುರಿ ಒಂದಲ್ಲ, ತಂತ್ರ ಒಂದಲ್ಲ, ಯಾವುದೂ ನಿಶ್ಚಯವಲ್ಲ. ಹೀಗೆಯೇ ಆಗುತ್ತದೆ ಎಂದು ಪ್ರಕೃತಿ ವಿಜ್ಞಾನದಲ್ಲಿ, ಗಣಿತದಲ್ಲಿ ಹೇಗೆ ನಿರ್ಣಯಿಸಬಹುದೊ ಹಾಗೆ ನಿರ್ಣಯಿಸುವುದು ಶಕ್ಯವಾಗದು. ಇಲ್ಲಿ ಪರಸ್ಪರ ವಿರುದ್ಧವಾದ ನಡೆಯೋ ವಿರೋಧ, ತಾಟಸ್ಥ್ಯ ಎಂಬ ಯಾವುದನ್ನೂ ನಿರ್ಣಯಿಸುವ ಗಟ್ಟಿ ನೆಲಸೋ ಇರದೆ ಹೋಗಬಲ್ಲುದು. ಆದರೆ ಈ ಎಲ್ಲವೂ ವಾಸ್ತವ.

ಈ ಎಲ್ಲಕ್ಕೆ ಸಂಬಂಧಿಸಿದಂತೆ ಒಂದು ಆರೋಗ್ಯ ಕಾಂಡ ಉಂಟು: ದೇಹಾ ರೋಗ್ಯ, ಮನಸ್ಸಿನ ಆರೋಗ್ಯ, ಸಮಾಜದ ಆರೋಗ್ಯ. ಆ ಮಾತನ್ನು ಈ ಮೂರೂ ಇಯತ್ತೆಗಳಲ್ಲಿ ಬಳಸುವಾಗಲೂ ಇವುಗಳ ಅರ್ಥದ ವ್ಯಾಪ್ತಿ ಬೇರೆ ಬೇರೆ. ಈ ಆರೋಗ್ಯ ಕಾರ್ಯಕ್ಕೆ ಕಾರಣಗಳನ್ನು ಪತ್ತೆ ಮಾಡುವುದು, ರೋಗರುಜಿನಕ್ಕೆ ಈಡಾಗದಂತೆ ಎಚ್ಚರಿಕೆ–ಪೂರ್ವಾಚರಣೆ, ರಕ್ಷಣೆ–ರೋಗ ಅಡಸಿದಾಗ ಈಡಾದಾಗ ಚಿಕಿತ್ಸೆಗಳು ಇವುಗಳ ಪ್ರಯೋಗಕಾರಿತೆ ಸೇರುತ್ತವೆ. ದೇಹಕ್ಕೆ ಸಂಬಂಧಿಸಿದಂತೆ ಔಷಧ ಪಥ್ಯಗಳ ಪ್ರಪಂಚ, ನಿದಾನ ಭಾಗ, ಶಸ್ತ್ರ ಭಾಗ ಇರುತ್ತವೆ. ಅವಕ್ಕೆ ಸಂಬಂಧಪಟ್ಟಂತೆ ವಿಜ್ಞಾನ ಪ್ರಪಂಚ ಬೆಳೆಯುತ್ತದೆ. ಮನಸ್ಸಿನ ಚಿಕಿತ್ಸೆ ಇನ್ನಷ್ಟು ಸೂಕ್ಷ್ಮ. ಸಮಾಜ ಜೀವನದ ಆರೋಗ್ಯಗಳನ್ನು ವಿಚಾರಿಸಲು ಎಷ್ಟು ಜನ ಸಮಾಜ ಜೀವನದಲ್ಲಿನ ಎಷ್ಟು ಪ್ರಯೋಜನ ಗಳನ್ನು ಎಷ್ಟು ಬಗೆಯಾಗಿ ಸಾಧಿಸಬೇಕೆನ್ನುವರೊ ಅಷ್ಟು ಬಗೆಯ ವಿಶ್ಲೇಷಣ ವಿಧಾನ, ಚಿಕಿತ್ಸಾ ಸೂಚನೆ, ಕಾರ್ಯ ವಿಧಾನಗಳನ್ನು ಸೂಚಿಸಬಹುದಾಗುತ್ತದೆ. ಈ ಎಲ್ಲ ಭಾಗಗಳಲ್ಲಿಯೂ ಪ್ರಪಂಚದಲ್ಲೆಲ್ಲ ವ್ಯಾಸಂಗ ನಡೆಯುತ್ತಿದೆ. ಪರೀಕ್ಷಾ ಪ್ರಯೋಗಗಳು ನಡೆಯುತ್ತಿವೆ. ಸಂಸ್ಥೆಗಳು ಹುಟ್ಟಿಕೊಳ್ಳುತ್ತಿವೆ. ನಾವು ನಮ್ಮದು ಮುಕ್ತ ಇನ್ನೊಬ್ಬರದಲ್ಲ ಎಂಬಲ್ಲಿ ಭಿನ್ನಾಭಿಪ್ರಾಯಗಳು, ನಡತೆಗಳು ವ್ಯಕ್ತಿಗಳಲ್ಲಿ, ಪಂಗಡಗಳಲ್ಲಿ ಪ್ರಬಲಿಸಿದಾಗ ಇದು ಒಂದು ಗೊಂಡಾರಣ್ಯವಾಗುತ್ತದೆ.

ಅರ್ಥವನ್ನು ಬೆಳಸುವುದು ಎಂದೆ: ಅರ್ಥ ಪದಕ್ಕೆ ಸಂಬಂಧಪಟ್ಟದ್ದು. ಆದರೆ ಯಾರು ಅದನ್ನು ಬಳಸುತ್ತಾರೆ, ಅವರ ಉದ್ದೇಶವೇನು? ಸಂಬಂಧಗಳು, ಪೂರ್ವಚರಿತ್ರೆ ಏನು? ಎಂಬುದರ ಜೊತೆಗೆ ಚಮತ್ಕಾರವಾಗಿ ಹೇಳುವಂತೆ, 'Language is the art of concealing thought'–ಎಂದರೆ ಮನಸ್ಸಿನಲ್ಲಿರುವುದನ್ನು ಮರೆ ಮಾಡುವ ಕಲೆಯೇ ಭಾಷೆ ಎಂಬುದೂ ಅರ್ಥಪ್ರಪಂಚಕ್ಕೆ ಸಂಬಂಧಪಟ್ಟದ್ದೇ. ಹಾಗೆಯೇ ಕಲ್ಪನೆ ಗಳನ್ನು ರೂಪಿಸುವುದಕ್ಕೂ ಸಂಕೇತಗಳನ್ನು ತಿಳಿಸುವುದಕ್ಕೂ ಅದನ್ನು ಉಪಯೋಗಿಸುತ್ತಾರೆ.

ಗೂಡಾರ್ಥವಾಹಕವಾಗಿ, ಆಲಂಕಾರಿಕವಾಗಿ, ವಿಶೇಷವಾಗಿ ವ್ಯಂಗ್ಯಾರ್ಥವನ್ನು ಸೂಚಿಸುವುದಾಗಿ, ನುಡಿಯಲ್ಲಿನ ಕಾಕುವಾಗಿ ಅರ್ಥ ಬೆಳೆಯುತ್ತದೆ. ಅಪಾರ್ಥ ಕಲ್ಪನೆ, ಪ್ರಚಾರ ಎಂಬುದೂ ಉಂಟು. ಇದು ಮಾತಿನ ಮೂಲಕ ಬೆಳೆಯುವ ಪ್ರಪಂಚ. ಇದಕ್ಕೆ ಸಂಬಂಧಿಸಿದಂತೆ ಸೂತ್ರ, ಶಾಸ್ತ್ರ, ವಿಧಾನ, ಶೈಲಿ; ಶಬ್ದ ರಚನೆಗೆ, ಅರ್ಥ ರಚನೆಗೆ, ವಾಕ್ಯ ರಚನೆಗೆ ಬಳಸುವ ಶಾಸ್ತ್ರಗಳುಂಟು. ಈ ಪ್ರಪಂಚ ಸಾಮಾನ್ಯ ಶಬ್ದಾರ್ಥ ಪ್ರಪಂಚವಲ್ಲ, ಇಲ್ಲಿ ಕಲ್ಪನೆಗೆ, ಹೊಸ ಅರ್ಥಸೃಷ್ಟಿಗೆ ಬೆಲೆ ಹೆಚ್ಚು, ಜನರ ಮನಸ್ಸನ್ನು ಒಲಿಸುವುದಕ್ಕೆ, ಅದನ್ನು ತಿರುಗಿಸುವುದಕ್ಕೆ, ಸಂತೋಷಗಳನ್ನು ವಿನೋದಗಳನ್ನು ಅಥವಾ ಆವೇಶಗಳನ್ನು ಉಂಟುಮಾಡುವುದಕ್ಕೆ, ಅಥವಾ ಮಾದಕವಾಗಬಲ್ಲ ಒಂದು ಭಾವ ಪ್ರಪಂಚವನ್ನು ನಿರ್ಮಾಣ ಮಾಡುವುದಕ್ಕೆ ಬಳಸಬಹುದು. ಮಾತುಗಳನ್ನು ಬಳಸಿ ಅವನ್ನು ಪಠ್ಯವಾಗಿಯೊ ದೃಶ್ಯವಾಗಿಯೊ ಕಾಣಿಸುವಾಗ, ಪ್ರಯೋಗಿಸುವಾಗ ಬೇರೆ ತಂತ್ರ, ವಿಧಾನ, ಕುಶಲತೆ ಹುಟ್ಟಿ, ಅರ್ಥ ವ್ಯಾಪಾರ ಬಹು ದೊಡ್ಡ ಸಾಮಾಜಿಕ ಪ್ರಭಾವವನ್ನು ಪಡೆಯುತ್ತದೆ. ಅಥವಾ ವಿನೋದಕ್ಕೊ ಮನಸ್ಸಿನ ಬೇಸರಗಳನ್ನು ಹರಿಸಲೊ ರಮಿಸಲೊ ನಡಸುವ ಮಾತಿನ ನಿರ್ಮಾಣವಿರುತ್ತದೆ. ಅಥವಾ 'ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ' ಎಂದಾಗ? ಹೀನಾರ್ಥವಲ್ಲ, ಮುಖ್ಯ ಉಕ್ತಿಗೆ ಮೌಲ್ಯ ಮೀರಿದ ಅರ್ಥ ಅಲ್ಲಿದೆ. ಜ್ಞಾನ ಯಾವುದು, ವಿಜ್ಞಾನ ಯಾವುದು? ತತ್ತ್ವ ಧರ್ಮಗಳು ಯಾವುವು? ಆದರೆ ಎಷ್ಟು ಮೋಹಕ ಮಾತು! ಮಾತಿನ ವಿಲಾಸ ಜಾಲವಂತೂ ಎಲ್ಲಿಗೆ ನಡಸಿದರೂ ನಡಸೀತು. ಪ್ರೇರೇಪಣೆಗಳು, ಹಾಗೆ ನೋಡಿದರೆ ಮಾತಿಲ್ಲದೆ ಕನಸು ಕೂಡ ಇಲ್ಲ, ಕಲ್ಪನೆ, ಭಾವನೆ, ಆಲೋಚನೆಗಳ ಅಡಿಯಲ್ಲಿ ನಮಗೇ ನಮ್ಮ ಭಾವ ಬೋಧೆಯಾಗುವುದು ಹಾಗೆ.

ಮಾತುಗಳಂತೆಯೇ ಬಣ್ಣಗಳನ್ನು ರೇಖೆಗಳನ್ನು ಆಕೃತಿಗಳನ್ನು ಬಳಸಿಕೊಂಡು ಚಿತ್ರಕಲೆ ಬೆಳೆಯುತ್ತದೆ. ಕಲ್ಲು ಮರ ಕಾಗದ ರಟ್ಟು ಬೆಂಡು ಮಣ್ಣು ಪ್ಲಾಸ್ಟರ್ ಸುಣ್ಣ ಚಿನ್ನ ಬೆಳ್ಳಿ ತಾಮ್ರ ಲೋಹಗಳು, ಚರ್ಮ ಮುಂತಾದ ಮಾಧ್ಯಮಗಳಿಂದ ಶಿಲ್ಪ ಕೃತಿಗಳನ್ನು ನಿರ್ಮಿಸುತ್ತಾರೆ. ವಾಸ್ತುಶಿಲ್ಪ, ಮೂರ್ತಿಶಿಲ್ಪ–ಅವಕ್ಕೆ ಸಂಬಂಧಿಸಿದ ಕಲಾ ಭಾಗ, ಅದಕ್ಕೆ ಸಂಬಂಧಿಸಿದ ಆಗಮ ಮತ್ತು ತಂತ್ರ ಭಾಗ ಒಂದು ಕಡೆ ಅಲ್ಲಿನ ಕಲಾ ವಂತಿಕೆಯನ್ನು ಹೊಮ್ಮಿಸಿದರೆ, ಮಂದಿರ ಶಿಲ್ಪ ವಿಭಾಗದಲ್ಲಿ ದೊಡ್ಡ ಕ್ರಿಯಾನಿರ್ವಹಣೆ ಆಗಬೇಕಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ ಗಣಿತ ಮತ್ತು ಇಂಜಿನಿಯರಿಂಗ್, ಪದಾರ್ಥ ಸಂಗ್ರಹಣ ಮತ್ತು ಸಂಯೋಜನ ವಿಧಾನ ಬೆಳೆಯುತ್ತದೆ. ರಸ್ತೆ, ಸೇತುವೆ, ಕಾಲುವೆ, ಕಟ್ಟೆ, ಯಂತ್ರಾಗಾರ, ಗಿರಣಿ, ಕೋಟೆ ಕೊತ್ತಲ, ಯಾನವಾಹನ ಪಾತ್ರಗಳು, ಶಾಲೆ, ಆಸ್ಪತ್ರೆ, ಪುಸ್ತಕ ಭಂಡಾರ, ಚಿತ್ರಶಾಲೆ ಮುಂತಾದವು; ಲೇಖನಿ ಮಸಿ ಅಳತೆ ತೂಕ ಒರೆಗಲ್ಲು (ನಿಕಷ), ಸಂಬಂಧಿಸಿದಂತೆ ಬಗೆ ಬಗೆಯ ವಾಸ್ತು ನಿರ್ಮಾಣ. ಅಲ್ಲಿ ಕುಶಲಕರ್ಮ, ವಾಸ್ತು ನಿರ್ಮಾಣ ಜೊತೆಜೊತೆಗೆ ಬೆಳೆಯುತ್ತದೆ. ಈ ವಾಸ್ತುವಿಗೆ ಉಪಾಂಗವಾಗಿ ಚಿತ್ರ ಶಿಲ್ಪ, ಪೀಠನಿರ್ಮಾಣ, ರಂಗಸ್ಥಳ ಮುಂತಾದವು, ಅವುಗಳಲ್ಲಿ



ಅನುಕೂಲಿಸುವಂತೆ ಧ್ವನಿವಾಹನ, ಈ ಬಗೆಗೆ ಅನೇಕ ಶಾಸ್ತ್ರಕಲಾಪವೂ ಅವುಗಳ ನೆರವಿಗೆ ಸುಖಸಾಧನಗಳ ನಿರ್ಮಾಣವೂ ವಿಶಿಷ್ಟ ರೀತಿಯಲ್ಲಿ ಬೆಳೆಯುತ್ತವೆ. ಈ ಕಲೆಗಳನ್ನು ಬಳಸಿಕೊಂಡು ಉಪಯುಕ್ತ ಕಲೆಗಳು, ಕುಶಲಕರ್ಮ ವೃತ್ತಿಗಳು ಅಪರಿಮಿತ. ಇವುಗಳ ಆಕೃತಿ ವೈವಿಧ್ಯಕ್ಕೆ ಮಿತಿಯುಂಟೆ? ಇವೆಲ್ಲ ವಿದ್ಯೆಗಳೂ ಕ್ರಿಯಾತಂತ್ರ; ಪ್ರಯೋಗ ವಿಶೇಷವುಳ್ಳವು. ಮನುಷ್ಯನ ಧ್ವನಿಯಲ್ಲಿ ಉತ್ಪತ್ತಿಯಾಗುವ ನಾದ ಮೇಳಗಳನ್ನು ಬಳಸಿ ಕೊಂಡು ಸಂಗೀತದ ವಾದ್ಯ ತಾಳ ಮೇಳದ, ಕಲಾ ಪ್ರಪಂಚ ಇನ್ನೊಂದು ಬಗೆಯ ಮನಸ್ಸಂತೋಷಕ್ಕೆ ನೆರವಾಗುತ್ತ, ಮನುಷ್ಯನ ಬಾಳಿಗೆ ಒಂದು ಬಗೆಯ ಸೌಂದರ್ಯ ಪ್ರಪಂಚವನ್ನು ನಿರ್ಮಾಣ ಮಾಡುತ್ತ, ಒಂದು ಹೊಸ ನೆಲಸನ್ನು ಭಾವಪ್ರಕಾಶನವನ್ನು ಉಂಟುಮಾಡಿಕೊಡುತ್ತದೆ. ಸಂಗೀತಕ್ಕೆ ಸಂಬಂಧಿಸಿದಂತೆ ತಜ್ಞತೆ ಸೂಕ್ಷ್ಮತೆ ಒಂದು ಕಡೆ ಬೆಳೆದರೆ, ಧ್ವನಿಶಾಸ್ತ್ರದ ಹೊಸ ದರ್ಶನ, ಸೂತ್ರದ ಬಗೆ ಹುಟ್ಟೀತು. ಇತರ ಕಲೆಗಳಿಗೆ ಇವೇ ಪುಷ್ಟಿ ಕೊಡಬಲ್ಲವು. ಬೆಳಕಿನ ಸ್ವರೂಪವನ್ನು ವಿಶ್ಲೇಷಣೆ ಮಾಡಿದ ಮೇಲೆ ಚಿತ್ರ ಕಲೆಯಲ್ಲಿಯೇ ಯಾವ ಮಾರ್ಪಾಡುಗಳಾದುವೆಂಬುದೂ, ಪ್ಲಾಸ್ಟಿಕ್ ಸಿಮೆಂಟ್ ಬಳಕೆಗೆ ಬಂದ ಮೇಲೆ ಶಿಲ್ಪಕ್ಕೆ ಎಷ್ಟು ಸಂಪನ್ನತೆ ಬಂದಿತು ಎಂಬುದೂ ಇದಕ್ಕೆ ನಿದರ್ಶನ. ಪರಮಾಣು ವಿಜ್ಞಾನ ಬೆಳೆದಂತೆಲ್ಲ ಯಾನ, ವಾರ್ತಾವಾಹನ, ಕಾಲವಿವೇಚನೆ, ಯಂತ್ರ ನಿರ್ಮಾಣ ಕುಶಲತೆ, ವೈದ್ಯಕೀಯ ಪ್ರಪಂಚದಲ್ಲಿನ ಪ್ರಯೋಗ ಆರೋಗ್ಯ ಸಾಧನೆಗೆ ನೆರವಾದವು ಎಂಬುದನ್ನು ನೋಡಬೇಕು. ನಕ್ಷತ್ರ ಚಲನೆಗಳನ್ನು ಗುರುತಿಸಲು ಒಂದೊಂದು ಕ್ಷೀರಪಥ ದೂರ 30 ಲಕ್ಷ ದೀಪವತ್ಸರಗಳಷ್ಟು ಎಂಬುದರ ನಿರ್ಣಯ ಗ್ರಾಹ್ಯವಾಯಿತು. ಒಂದು ಎಕ್ಸ್–ರೇ ಎಷ್ಟಕ್ಕೆ ಆಧಾರವಾಗಿದೆ! ಇವೆಲ್ಲ ಸಂಸ್ಕೃತಿ ಎಂಬ ಜೀವನ ಮುಖದ ರಮ್ಯತೆಗೂ ಪೋಷಕತೆಗೂ ಪುಷ್ಟಿಗೂ ನೆರವಾಗಿ ಬೆಳೆದಿರುವ ಭಾಗ್ಯಕಾಂಡ.

ಇತ್ತ ವ್ಯವಹಾರ ಜೀವನದಲ್ಲಿ ಯಾವುದನ್ನು ವಿಧಿ ನಿಷೇಧ ಎನ್ನುತ್ತೇವೊ, ನಿಯಂತ್ರಿಸಲು ಬಯಸಯತ್ತೇವೊ, ಅಧಿಕಾರ ಸ್ವಾತಂತ್ರ್ಯ ಎಂಬುದನ್ನು ವಿರಚಿಸಲು ವ್ಯವಸ್ಥೆಗಳನ್ನು ಉಂಟು ಮಾಡಿಕೊಳ್ಳುತ್ತೇವೊ ಅವುಗಳಿಗಿಂತ ಭಿನ್ನವಾದ ಒಂದು ಸ್ವತಂತ್ರ ವ್ಯಾಪಾರ ಹುಟ್ಟಿಕೊಳ್ಳುತ್ತದೆ. ಉಳಿದ ಯಾವುದನ್ನೂ ಗಮನಕ್ಕೆ ತಂದುಕೊಳ್ಳದೆ ಸ್ವಾತಂತ್ರ್ಯ ಕಲೆಗಾರನ ವ್ಯಕ್ತಿತ್ವವನ್ನು ನಡಸುತ್ತ ತನ್ನದೇ ರೀತಿಯಲ್ಲಿ ಕೃತಿಗಳನ್ನು ನಿರ್ಮಾಣ ಮಾಡುತ್ತಿರುತ್ತದೆ. ಗ್ರಾಮಾಫೋನ್, ಧ್ವನಿರೇಖನ, ರೇಡಿಯೊ ಎಷ್ಟು ಬಗೆಯ ಕಲಿಕೆಗೂ ವಿದ್ಯಾಪ್ರಚಾರಕ್ಕೂ ಬುನಾದಿಯಾಗಿದೆ ಎಂಬುದೂ ಈಚೆಗೆ ಕಂಡು ಬಂದಿದೆ.

ಮನುಷ್ಯನ ಬದುಕು ಎಂದಾಗ ಇಂಥವು ಲಕ್ಷಾಂತರ, ಕೋಟ್ಯಂತರ. ಇವನ್ನೆಲ್ಲ ಪರಿಶೀಲಿಸಿ ಮನುಷ್ಯನ ಜೀವನಕ್ಕೆ ಯಾವುದಾದರೂ ತತ್ತ್ವವಿದೆಯೆ, ದರ್ಶನವಿದೆಯೆ, ಗುರಿ ಇದೆಯೆ, ಇದರ ಅರ್ಥವೇನು, ಇದನ್ನೆಲ್ಲ ನಡಸುವುದಕ್ಕೆ ವಿಧಿನಿಷೇಧಗಳುಂಟೆ, ಇವನ್ನು ಮಾಡಿದವರು ಯಾರು?– ಎಂದು ಮಾಡಿಕೊಂಡಾಗ, ಅವನ್ನು ಸ್ಥಾಪಿಸುವ ಪ್ರಮಾಣೀಕರಿಸುವ ತತ್ತ್ವ ಯಾವುದಾದರೊಂದು ಇದೆಯೆ, ಈ ಒಟ್ಟು ಜೀವನದ

ರೀತಿಯಲ್ಲಿ ಕಾಣುವ ಅಖಿಲ ಮಾನವ ಅಥವಾ ಸಮಸ್ತ ಕಾಲಿಕ ಅಥವಾ ನಿತ್ಯ ಎಂಬ ಅಂಶವೇನಾದರೂ ಇದೆಯೆ – ಎಂದು ಮನುಷ್ಯ ಮೊದಲಿಂದಲೂ ಆಲೋಚನೆ ಮಾಡುತ್ತಲೇ ಬಂದಿದ್ದಾನೆ. ಪ್ರಕೃತಿಯನ್ನು ಕುರಿತು, ಅದರ ಅದ್ಭುತಗಳನ್ನು ವಿಶೇಷಗಳನ್ನು ಅರ್ಥ ಮಾಡಿಕೊಳ್ಳಲು ಬಳಸಿಕೊಳ್ಳಲು ಪ್ರಯತ್ನಪಟ್ಟು, ಅಲ್ಲಿನ ಜ್ಞಾನಭಾಗವನ್ನು ಕ್ರಿಯಾತಂತ್ರಗಳನ್ನು ವಿಧಾನಗಳನ್ನು ಅರ್ಥಮಾಡಿಕೊಂಡು, ವಿಜ್ಞಾನ ತಂತ್ರವನ್ನು ಸಂಗ್ರಹಮಾಡಿದ್ದಾನೆ. ಭೂಗೋಳ, ಖಗೋಳ, ಜಲಮಂಡಲದ ರಹಸ್ಯಗಳನ್ನು ತಿಳಿದುಕೊಂಡು, ಇಲ್ಲಿನ ಎಲ್ಲ ಹೇಗಾಗಿದೆ, ಈ ಎಲ್ಲದರ ಸ್ವರೂಪವೇನು ಎಂಬುದನ್ನು ಖಚಿತವಾಗಿ ಅರ್ಥ ಮಾಡಿಕೊಂಡಿದ್ದಾನೆ. ಮನುಷ್ಯ ಜೀವನಕ್ಕೆ ಸಂಬಂಧಿಸಿದಂತೆ ವ್ಯಕ್ತಿ ಜೀವನವನ್ನು, ಸಮಾಜ ಜೀವನವನ್ನು, ಇದಕ್ಕೆ ಉಪಾಂಗಗಳಾದ ಆರ್ಥಿಕ ರಾಜಕೀಯ ಜೀವನವನ್ನು, ಕಲಾಜೀವನವನ್ನು ನಿರ್ಮಾಣ ಮಾಡಿಕೊಂಡು, ಜೀವನದ ವಿಲಾಸವನ್ನು ಆಕಾಂಕ್ಷೆಯನ್ನು ವಿಸ್ತಾರಪಡಿಸಿಕೊಂಡಿದ್ದಾನೆ. ಸಮಗ್ರವಾಗಿ ನೋಡಿದಾಗ ಮಾನವ ಜೀವದ ಆಳದಲ್ಲಿ, ಪ್ರಕೃತಿ ಜೀವನದ ಆಳದಲ್ಲಿ ಹಿಂದೆ, ಮೇಲೆ ಇನ್ನಾವುದಾದರೂ ಸತ್ವ ಕುಳಿತು ಎಲ್ಲವನ್ನೂ ನಡಸುತ್ತಿದೆಯೆ? ತಾನುಳಿದು ಉಳಿದೆಲ್ಲ ನಾಶವಾಗದಂತೆ/ನಾಶವಾಗುವಂತೆ ಮಾಡಿ ಎಲ್ಲವನ್ನೂ ನಿಯಂತ್ರಿಸುತ್ತಿದೆಯೆ? ಇದೆಲ್ಲ ಏಕೆ ಹೀಗೆ? ಇದರ ಒಟ್ಟರ್ಥವೇನು? – ಎಂಬುದನ್ನು ಅರಿತುಕೊಳ್ಳಲು ದರ್ಶನ, ವೇದಾಂತ ಎಂದು ವಿಭಾಗ ಮಾಡುವ ಬುದ್ಧಿ ಪ್ರಪಂಚವನ್ನು ಕಾಣುತ್ತೇವೆ.

Mental and Moral Sciences ಎಂದು ಹೇಳಿದ ಭಾಗದಲ್ಲಿ ಮನಸ್ಸಿನ ಭಾಗವೆಂದು ಇನ್ನೊಂದಿದೆ ಎಂದಿತು. Moral ಎಂಬ ಒಂದಿದೆ. ಇದು ಸೈನ್ಸ್ ಹೌದೊ ಅಲ್ಲವೊ; ಸೈನ್ಸಿನ ಪ್ರಭಾವ ಇದ್ದರೆ, ಎಷ್ಟರ ಮಟ್ಟಿಗೆ ಸೈನ್ಸ್ ಅಥವಾ ವಿಜ್ಞಾನ ವಿಳಾಸದಲ್ಲಿ ಸೇರಿಸಬಹುದು ಎಂಬುದನ್ನು ಕುರಿತು ವಿಚಾರ ನಡೆದಿದೆ. Mentalಗೆ ಸಂಬಂಧಪಟ್ಟದ್ದು ತತ್ವ ಮತ್ತು ದರ್ಶನ ಭಾಗ. ಇದರಲ್ಲಿ ಸತ್ಯ ಎಂದರೇನು, ಮೌಲ್ಯ ಎಂದರೇನು ಎಂಬ ಸಂಗತಿಗಳು ಪರ್ಯಾಲೋಚನೆಗೆ ಬರುತ್ತವೆ, ಸಾಮಾನ್ಯಾರ್ಥದಲ್ಲಿ, ದ್ರವ ಸ್ವರೂಪ, ಆಕಾಶ ಗುಣ, ಸಂಬಂಧ, ಕಾಲ ಇವುಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗಲೂ ಹೊರಗಣ್ಣಿಗೆ ಮತ್ತು ಮನುಷ್ಯನು ನಿರ್ಮಾಣ ಮಾಡಿಕೊಂಡಿರುವ ಸಾಧನ ಸಾಮಗ್ರಿಗಳು, ಯಂತ್ರ ಗಣಿತಗಳ ಪ್ರಯೋಗದಿಂದ ಆಗುವ ಅರ್ಥ ಒಂದು; ಆ ಭಾಗದಲ್ಲಿ ಪರಿಶೀಲಿಸಿದ ಅಂಶ ಬೇರೆ ರೀತಿಯದು. ಇವೆಲ್ಲಕ್ಕೂ ಒಟ್ಟಿಗೆ ಸಂಬಂಧಿಸಿದಂತೆ ಪ್ರಪಂಚದ ಜೀವನದ ಅರ್ಥವನ್ನು ಹೇಗೆ ಬೆಲೆಕಟ್ಟಬಹುದು, ಅದರ ಸ್ವರೂಪ ಎಂಥದು ಎಂಬುದು ಆ ಭಾಗ. ಅದು ಬರಿಯ ವಾಸ್ತವವಲ್ಲ. ಇವೆಲ್ಲವನ್ನೂ ಸೇರಿಸಿಕೊಂಡು ಇದನ್ನು ವಸ್ತು ಪ್ರಪಂಚವೆಂದು – reality – ಸರಿಯಾಗಿ ತಿಳಿದು, ಈ ಪ್ರತಿಯೊಂದೂ ಜೀವದ ಒಂದು ಪ್ರತ್ಯೇಕ ಅಥವಾ ಪರಸ್ಪರ ಸಂಬಂಧವುಳ್ಳ ಅಂಗ ಎಂದುಕೊಂಡಾಗ–ಹೀಗೆಂದುಕೊಂಡಿದ್ದರೆ ಮೊದಲಿಂದ ಮನುಷ್ಯ ನಡೆಯುವುದರಲ್ಲಿ ಯಾವುದೊ ಒಂದು ಕ್ರಮ ಕಾಣುತ್ತದೆ, ಕಾರ್ಯಕಾರಣ ಸಂಬಂಧ



ಕಾಣುತ್ತದೆ. ಬುದ್ಧಿಗೆ ಇದು ಗೋಚರವೆಂಬ ಅರಿವಂತೂ ಬಂದಿದೆಯಾಗಿ–ಇವೆಲ್ಲವನ್ನೂ ಒಳಗೊಂಡ ಸತ್ವ ಯಾವುದು, ಇದನ್ನು ಹೇಗೆ ಹೊಂದಿಸುವುದು ಎಂಬುದು ಕಾಣುತ್ತದೆ. ಇಲ್ಲಿ ಅನೇಕ ದ್ವಂದ್ವಗಳಿವೆ. ಪರಸ್ಪರ ವಿರುದ್ಧವಾದ, ಅಸಂಗತವಾದ, ಅತ್ಯಂತ ಗೂಢವಾದ, ಗಹನವಾದ ಸಂಗತಿಗಳಿವೆ. ಕೆಲಭಾಗ ತಿಳಿದಿದೆ, ಕೆಲವು ಇನ್ನೂ ತಿಳಿಯಲಾಗದಿವೆ. ಕಾಲಕ್ರಮದಲ್ಲಿ ತಿಳಿಯಬಹುದೆಂಬ ಆಕಾಂಕ್ಷೆಗೆ ಅವಕಾಶಗಳಿವೆ. ಆಸೆ ನಿರಾಸೆಗಳಿವೆ. ಸ್ನೇಹ ಪ್ರೇಮಗಳ ಜೊತೆಗೆ ವೈರ, ಹಿಂಸೆ ಇವೆ. ಇವನ್ನೆಲ್ಲ ಸಮನ್ವಯ ಮಾಡುವುದು ಹೇಗೆ? ಭೂ–ಸಾಗರ–ಖ–ಮಂಡಲ ಹೇಗೆ ಹುಟ್ಟಿರಬಹುದು ಎಂಬುದನ್ನು ತಿಳಿಯಬಹುದೇನೊ. ಇವು ಏಕೆ ಉಂಟಾದವು? ಇವಿಷ್ಟೆಯೇ? ಈ ಎಲ್ಲವೂ ಇಲ್ಲದಿದ್ದ ಕಾಲವಿತ್ತೆ? ಇವನ್ನೆಲ್ಲ ಇನ್ನಾವುದಾದರೂ ಒಂದು ಶಕ್ತಿ ನಿರ್ಮಾಣ ಮಾಡಿತೆ? (ಅದರ) ಉದ್ದೇಶವೇನಿರಬಹುದು? ಅದರ ಸ್ವರೂಪವೇನು? ಎಂಬ ಪ್ರಶ್ನೆಗಳು ಕಾಲ ಹುಟ್ಟಿದಂದಿನಿಂದ–ಎಂದರೆ ಮನುಷ್ಯನಿಗೆ ತಿಳುವಳಿಕೆ ಬಂದು ಅವನ ಆಲೋಚನೆಗಳನ್ನು ಮಾತಿನ ಮೂಲಕವೊ ಬರಹದ ಮೂಲಕವೊ ಲೋಕಕ್ಕೆ ತಿಳಿಯಪಡಿಸಿದ ಕಾಲದಿಂದ–ಬಂದುದು. ಇದು ನರನು ಸಾಧಿಸಿದ ಜ್ಞಾನ. ಇವನು ನಿರ್ಮಾಣ ಮಾಡಿದ ವಿಜ್ಞಾನ. ಕಂಡದ್ದೊಂದಕ್ಕೆ; ಕಲ್ಪಿಸಿದ್ದೆನ್ನೋಣವೆ? ಇವುಗಳ ಕೊನೆ ಏನು? ಎಂಬುದು ಇನ್ನೊಂದು ಪ್ರಶ್ನೆ. ಮನುಷ್ಯನ ಜೀವಕ್ಕೂ ಹೊರ ಪ್ರಕೃತಿಯ ಜೀವಕ್ಕೂ ಹೇಗೆ ಒಂದು ಸಂಬಂಧವನ್ನು ಕಲ್ಪನೆ ಮಾಡಬಹುದೊ ಹಾಗೆ–ಈ ಎಲ್ಲ ಸೃಷ್ಟಿಗೆ ಕಾರಣವಾದ ಯಾವುದಾದರೂ ಸತ್ವವೊ ಶಕ್ತಿಯೊ ಚೈತನ್ಯವೊ ವ್ಯಕ್ತಿಯೊ ಇದ್ದರೆ ಅದಕ್ಕೂ ನಮಗೂ ಸಂಬಂಧವೇನು? ಅದಕ್ಕೆ ಸಂಕಲ್ಪ ಎಂಬುದೇನಾದರೂ ಉಂಟೊ? ಆ ಸಂಕಲ್ಪಕ್ಕೆ ಒಳಪಟ್ಟು ಇದೆಲ್ಲವೊ ನಡೆಯುತ್ತಿಯೊ–ಎಂದರೆ, ಇದೆಲ್ಲದರ ಗತಿಯೇನು? ಎಂದು ಖಚಿತವಾಗಿ ನಿಷ್ಕರ್ಷೆ ಮಾಡಬಲ್ಲ, ಇದರ ಸಾನ್ನಿಧ್ಯವನ್ನೊ ಪ್ರೀತಿಯನ್ನೊ ಇದರಲ್ಲಿ ಐಕ್ಯವನ್ನೊ ಸಾಧಿಸಬೇಕೆಂಬ ಗಮ್ಯ ಯಾವುದಾದರೂ ಉಂಟೊ? ಒಟ್ಟು ಯಾವುದಾದರೂ ನೀತಿಯ ನೆಲೆಗಟ್ಟು ಇವೆಲ್ಲಕ್ಕೂ ಕ್ರಮವನ್ನು ಒಳಿತನ್ನು ಉಂಟು ಮಾಡುತ್ತಿದೆಯೆ, ಇಲ್ಲವೆ? ಹುಟ್ಟಿದುದೆಲ್ಲ ನಾಶವಾಗುತ್ತದೆ, ಪುನಃ ಇದಕ್ಕೆ – ಇದರಲ್ಲಿ ಯಾವ ಅಂಶಕ್ಕಾಗಲಿ–ಆವೃತ್ತಿ ಇದೆಯೆ, ಇಲ್ಲವೆ? ಆ ಆವೃತ್ತಿ ಎಂಬುದು ಬಿತ್ತ, ಗಿಡ, ಕಾಡು ಹೇಗೆ ಒಂದಕ್ಕೊಂದು ಸಂಬಂಧ ಪಟ್ಟು, ಒಂದು ಇನ್ನೊಂದರ ಉತ್ಪತ್ತಿಗೆ ಕಾರಣವಾಗಿ, ವಿಶ್ವದಲ್ಲಿ ಯಾವುದು ನಾಶವಾಗದು, ಯಾವುದಾದರೊಂದು ರೀತಿಯಲ್ಲಿ ರೂಪದಲ್ಲಿ ಒಂದರಿಂದ ಇನ್ನೊಂದಕ್ಕೆ ಪರಿವರ್ತಿತವಾಗುತ್ತಲೇ ಇರುತ್ತದೆ, ಇದು ಅನಂತ ಜೀವನ, ಒಂದು ಕಡೆ ಏರು ಪೇರಾದರೆ ಇನ್ನೊಂದು ಕಡೆ ಅದನ್ನು ಸರಿಪಡಿಸಿಕೊಳ್ಳುತ್ತದೆ, ಅದು ತನ್ನನ್ನು ತಾನೇ ಸರಿಪಡಿಸಿಕೊಳ್ಳುವ ಸ್ವಭಾವದ್ದು ಎಂಬ ತತ್ವದಂತೆ ನಡೆಯುತ್ತಿದೆಯೆ? ಈ ನಾಶ ವಿಶ್ವಕ್ಕೆಲ್ಲ ವ್ಯಾಪಿಸಿ ಹೊಂದುವ ಸಂದರ್ಭವೆ? ಮನುಷ್ಯನಿಗೆ ಮೃತಿ ಉಂಟಾದರೆ ಇನ್ನು ಮುಂದೆ ಯಾವುದಾದರೂ ಅವನಿಗೆ ಗತಿ ಉಂಟೆ?–ಎಂಬ ಪ್ರಶ್ನೆಗಳು ಮನುಷ್ಯನ

ಚಿಂತನವನ್ನು ಪ್ರಚೋದಿಸಿವೆ. ವಿಜ್ಞಾನ ಇದರ ಗೊಡವೆಗೆ ಹೋಗುವುದಿಲ್ಲ. ಅಳತೆ ತೂಕ ಎಣಿಕೆ ಗಣತಿ ಯಂತ್ರ ಇವಕ್ಕೆ ಸಿಕ್ಕಿ ಅರ್ಥಮಾಡಿಕೊಳ್ಳಬಲ್ಲ ಸೂತ್ರಗಳನ್ನು ಸ್ಥಾಪಿಸಬಲ್ಲದ್ದು ಯಾವ ಯಾವುದಿದೆಯೊ ಅದನ್ನು ಮಾತ್ರ ಅದು ತಿಳಿಯಲು ಯತ್ನಿಸುತ್ತದೆ. ಇದಕ್ಕೆ ಮೇಲ್ಪಟ್ಟು ಇದರ ಹೊರಗಿನ ಯಾವ ಚೈತನ್ಯಾಂಶದ ಸಂಕಲ್ಪವನ್ನಾಗಲಿ ವಿಧಿ ವಿಧಾನಗಳನ್ನಾಗಲಿ ಮನಸ್ಸಿಗೆ ತಂದುಕೊಂಡು ಅದು ಹಾಯಿಸುವ ಬೆಳಕಿನಿಂದ ತನ್ನ ಈ ಸೂತ್ರೀಕರಣವನ್ನು ಜ್ಞಾನವನ್ನು ನಿಷ್ಕರ್ಷಿಸಲು ಇಷ್ಟಪಡುವುದಿಲ್ಲ. ಆ ಭಾಗ ಅತಿಭೌತ.

## –10–

ಮನುಷ್ಯನಲ್ಲಿ ದೇಹಜೀವನಕ್ಕೆ, ಸಮಾಜ ಜೀವನಕ್ಕೆ, ಬುದ್ಧಿ ಜೀವನಕ್ಕೆ ಮೇಲ್ಪಟ್ಟು ಅವನ ಜೀವವನ್ನು ಆಳವಾಗಿ ನಡಸುವ ಯಾವುದೊ ಒಂದು ಅಮೃತ ಚೈತನ್ಯವಿದೆ, ಅದು ದಿನ ಜೀವನಕ್ಕೆ ವ್ಯವಹಾರ ಜೀವನಕ್ಕೆ ಒಳಪಟ್ಟದ್ದಲ್ಲ; ದೇಹದಂತೆ ಅದು ನಶ್ವರವಲ್ಲ; ಈ ದೇಹದಿಂದ ಬೇರೆಯಾದ ಗತಿ ಅದಕ್ಕುಂಟು; ಅದು ನಿತ್ಯ; ಆ ಅಂಶ ವಿಶ್ವನಿಯಂತ್ರಕವಾದ, ವಿಶ್ವದ ಮೂಲವಾದ, ವಿಶ್ವಕ್ಕೆ ಗಮ್ಯವನ್ನೂ ಒಂದು ಪರಮಗತಿಯನ್ನೂ ಕೊಡುವ ಅಂಶಕ್ಕೆ ಸೇರಿದ್ದು; ಅದನ್ನು ಸಾಧಿಸಬೇಕು, ಅದನ್ನು ಒಲಿಸಿಕೊಳ್ಳಬೇಕು ಎಂಬ ಅಭಿನಿವೇಶ 'ರಿಲಿಜನ್' ಎಂಬ ಭಾಗಕ್ಕೆ ಸೇರಿದ್ದು. ಈ ಮಾತುಗಳೂ ಕಿವಿಗೆ ಕೇಳಲು ಹಿತವಾಗಿರುತ್ತವೆ ಕೂಡ. ಯಾವುದನ್ನು ತತ್ವದರ್ಶನ ಎನ್ನುತ್ತೇವೊ ಅದಿನ್ನೂ ಬುದ್ಧಿಗೆ ಸಿಕ್ಕುತ್ತದೆ, ತರ್ಕಕ್ಕೆ ಒಳಪಡುತ್ತದೆ. ತಿಳಿದಿರುವುದನ್ನೆಲ್ಲ ತೂಗಿ ಅಳೆದು ಬೇರೆಬೇರೆಯಾಗಿ ಕಾಣುವ ಸಂಗತಿಗಳನ್ನೂ ಸೂತ್ರಗಳನ್ನೂ ಹೊಂದಿಸಿ ಎಲ್ಲವನ್ನೂ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ಒಂದು ಜ್ಞಾನವಸ್ತುವನ್ನು ನಿರ್ಮಾಣ ಮಾಡಲು ಯತ್ನಿಸುತ್ತದೆ. ಅಲ್ಲಿ ತರ್ಕಶುದ್ಧಿ ಅಗತ್ಯ. ಪ್ರಮಾಣ ಎಷ್ಟಕ್ಕಿದೆ, ಯಾವುದು ಪುರಸ್ಕೃತ ಪ್ರಮಾಣ; ಯಾವುದು ಅನುಮಾನ (inference) ಎಂಬಂಶ ದೊಡ್ಡದು. ಹಾಗೆಯೇ ಯಾವುದನ್ನು ಒಪ್ಪಿದರೆ ಇನ್ನೇನೇನನ್ನು ಒಪ್ಪಬೇಕು, ಇನ್ನೇನೇನನ್ನು ಒಪ್ಪಲಾಗುವುದಿಲ್ಲ, ಯಾವುದನ್ನು ಒಪ್ಪಲಾರೆವಾದರೆ ಇನ್ನೇನೇನನ್ನು ಬಿಡಬೇಕಾಗುತ್ತದೆ ಎಂಬ ಆಲೋಚನೆಯೂ ಕಟ್ಟಿಕೊಳ್ಳುತ್ತದೆ. ಇದು ಬುದ್ಧಿಗೆ ಮಾತ್ರ ಸಲ್ಲುವ ಶುದ್ಧ ಸೂತ್ರವಲ್ಲ; ನಡವಳಿಕೆಗೆ ಇಳಿಯಬೇಕಾಗುತ್ತದೆ ಕೂಡ. ಪದಾರ್ಥಗಳ ಸ್ವರೂಪವನ್ನು ತಿಳಿಯಬೇಕು, ಅದನ್ನು ಉಪಯೋಗಿಸಿಕೊಳ್ಳಬೇಕು, ಅದರಿಂದ ಸುಖ ಸೌಕರ್ಯಗಳನ್ನು ಪಡೆದುಕೊಳ್ಳಬೇಕು, ಬಾಂಧವ್ಯಗಳನ್ನು ಏರ್ಪಡಿಸಿಕೊಳ್ಳಬೇಕು ಎಂಬವು ಹೇಗೆ ಮನುಷ್ಯನ ಸಹಜ ಪ್ರವೃತ್ತಿಯೊ – ಹಾಗೆಯೇ ಈ ಜ್ಞಾನದ ಸೌಧಗಳನ್ನು ನಿರ್ಮಾಣ ಮಾಡಿಕೊಂಡು ತಿಳಿವಳಿಕೆಯ ಚೌಕಟ್ಟನ್ನು ಭದ್ರ ಮಾಡಬೇಕು ಎಂಬುವುದೂ ಪ್ರವೃತ್ತಿಯೇ. ಇಲ್ಲಿಯೂ ಜನಗಳ ಚರಿತ್ರೆ, ಸ್ವಭಾವ, ಆಲೋಚನಾ ರೀತಿ, ಅನುಭವ, ಆಸೆ ಆಕಾಂಕ್ಷೆ ಹೇಗೆ ಹೇಗೆ ಬೆಳೆದು ಬಂದಿರುತ್ತದೆಯೊ ಆ ರೀತಿ ದರ್ಶನದ ಚೌಕಟ್ಟು ಕಟ್ಟುತ್ತದೆ. ಇದೂ



ಮನುಷ್ಯನು ಮಾಡಿಕೊಂಡದ್ದೇ. ಮನುಷ್ಯನ ನೆಮ್ಮದಿಗಾಗಿಯೇ. ಇದನ್ನು ಮಾಡಿಕೊಳ್ಳದಿದ್ದರೆ ಅವನಿಗೆ ಯಾವುದೂ ಸ್ಥಿಮಿತವಾಗುವುದಿಲ್ಲ.

ರಿಲಿಜನ್ ಎಂಬ ಭಾಗದಲ್ಲಿ ಇದಕ್ಕೆ ಮೇಲ್ಪಟ್ಟ ವ್ಯವಹಾರವಿದೆ. ಇಲ್ಲಿ ಮೇಲ್ಪಟ್ಟ ಎಂಬ ಮಾತು ಸಂಕೇತ. ಇವೆಲ್ಲಕ್ಕೂ ಮೂಲಭೂತವಾದ ಶಕ್ತಿಯೊ ಚೈತನ್ಯವೊ ಇದ್ದರೆ ಅದರ ಸ್ವರೂಪವೇನು? ಅದಕ್ಕೂ ನಮಗೂ ಹೇಗೆ ಸಂದರ್ಭ ಕಲ್ಪಿಸಿಕೊಳ್ಳಬೇಕು? ಇಲ್ಲಿ ಅನುಸರಿಸಬೇಕಾದ ಮಾರ್ಗಗಳಾವುವು? ಪ್ರವೃತ್ತಿ ಮಾರ್ಗವೇ, ನಿವೃತ್ತಿ ಮಾರ್ಗವೇ? ಭಕ್ತಿ ಜ್ಞಾನ ವೈರಾಗ್ಯಗಳ ಮಾರ್ಗವೆ?– ಇವನ್ನೆಲ್ಲ ಅರ್ಥ ಮಾಡಿಕೊಳ್ಳಲು ಬಯಸುವ ಪ್ರಪಂಚ ರಿಲಿಜನ್.[6] ಇಲ್ಲಿಯೂ ಹತ್ತಾರು ದಾರಿಗಳು, ಹತ್ತಾರು ಬಗೆಯ ತೀರ್ಮಾನ ಇವೆ. ಇದು ಪರಮಾರ್ಥ ತತ್ವ. ಯಾವುದೊ ನಿಯಮದಂತೆ ಎಲ್ಲವೂ ನಡೆಯುತ್ತಿರುವಂತಿದೆ. ಒಂದು ಸೂತ್ರಕ್ಕೆ ಒಳಪಟ್ಟೀತು. ವ್ಯಾವಹಾರಿಕ ದೃಷ್ಟಿಯಲ್ಲಿ ಇದ್ದ, ಇರುವ, ಇರಬಹುದಾದ ಅಥವಾ ಇರಬಲ್ಲುದಾದ, ಪ್ರಪಂಚದ ಸ್ವರೂಪವನ್ನು ಈ ಸೂತ್ರ ಕಾಣಿಸುತ್ತದೆ, ಸ್ಥಾಪಿಸುತ್ತದೆ ಎಂಬ ಭಾಗ. ವಿಜ್ಞಾನದಿಂದ ಈ ಜ್ಞಾನವನ್ನು ಅರಿಯಲು ಮನುಷ್ಯ ಪ್ರಯತ್ನ ಮಾಡುತ್ತಿದ್ದಾನೆ. ಪ್ರಕೃತಿಯನ್ನೂ ಮನುಷ್ಯ ಪ್ರಪಂಚವನ್ನೂ ಹೀಗೆ ರೂಪಿಸಿ ನಡಸುತ್ತಿರುವ ಶಕ್ತಿ ಒಂದು, ಎರಡು; ಇದರ ಅಧಿಕಾರ ಎಂಥದ್ದು ಎಂಬ ವಾದಗಳಿವೆ. ಇದಕ್ಕೆ ಸಹಾಯಕ ಅಥವಾ ಅಧೀನ ವರ್ಗ ಉಂಟೆ? ಅದರ ನೇಮಗಳು ಯಾವುವು? ಅಥವಾ, ಇಂಥ ಯಾವ ಸತ್ವಶಕ್ತಿಯೂ ಇಲ್ಲವೆ?–ಎಂಬ ಅಂಶ ರಿಲಿಜನ್‌ಗೆ ಸೇರುತ್ತದೆ. ಇಲ್ಲಿ ನಿರ್ಣಯವೂ ಪ್ರಚೋದನೆಯೂ ಎರಡೂ ಹುಟ್ಟುವುದು ಮನುಷ್ಯನ ಅಗತ್ಯದಿಂದಲೇ. ಮನುಷ್ಯನಿಂದ ವಿಜ್ಞಾನ; ಮನುಷ್ಯನಿಂದ ಸಮಾಜ; ಮನುಷ್ಯನದು ಇತಿಹಾಸ; ಮನುಷ್ಯನದು ಗುಣಕರ್ಮ, ನೀತಿ, ತತ್ವಜ್ಞಾನ; ಮನುಷ್ಯನು ಕಲ್ಪಿಸಿಕೊಂಡಿರತಕ್ಕದ್ದೇ ಈ ರಿಲಿಜನ್‌ಗೆ ಸಂಬಂಧಿಸಿದ ಪ್ರಪಂಚವೆಲ್ಲ.

ಇಲ್ಲಿ ಒಂದು ಪ್ರಶ್ನೆ ಕೊನೆಯದಾಗಿ ಏಳುತ್ತದೆ: ಈ ಪರಮ ಅಥವಾ ಅಧ್ಯಾತ್ಮ ಎನ್ನುವ ಶಕ್ತಿ ಮನುಷ್ಯನ ಬುದ್ಧಿಯ ಮತ್ತು ಜೀವನದ ಆಕಾಂಕ್ಷೆಯಿಂದ ಉಂಟಾದುದೆ? ಇವನ ಜ್ಞಾನದ ತಂತ್ರವಿಧಾನಗಳಿಗೆ ಅಂಥುದೊಂದು ಶಕ್ತಿಚೈತನ್ಯದ ಕಲ್ಪನೆ ಅಗತ್ಯವಾದುದರಿಂದ ಹಾಗೆ ಅದು ಇದೆ ಎಂದು ಇವನು ತೀರ್ಮಾನಿಸುತ್ತಾನೆಯೆ? ಅಥವಾ, ಅಂಥದೊಂದು ಮೊದಲಿನಿಂದಲೂ ಇರುತ್ತ ಈ ಎಲ್ಲವನ್ನೂ ಹೀಗೆ ನಡಸುತ್ತಿದೆಯೆ? (The necessity of thought or logic or self-existant, containing everything to be and do as it does on ontological or existential) ಎಂಬುದು ಒಂದು ದೊಡ್ಡ ಪ್ರಶ್ನೆ. ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅಗತ್ಯ ಮನುಷ್ಯನ ಎಲ್ಲ ಯೋಚನೆಗಳ ತತ್ವಗಳ ಪರಿಣಾಮವಾಗಿ ತೀರ್ಮಾನಕ್ಕೆ

6. ಧರ್ಮ, ಮತಧರ್ಮ ಪಂಥ, ಸಮಯ – ಈ ಯಾವುದೂ ಒಪ್ಪಿಗೆಯಾಗದೇ 'ರಿಲಿಜನ್' ಎಂಬ ಮಾತನ್ನೇ ಇಟ್ಟುಕೊಂಡಿದೆ.

ಬಂದ ತತ್ವಾಂಶ. ಅಂಥದೊಂದಿಲ್ಲವಾದರೆ ಇದಕ್ಕೆ ಅರ್ಥವಂತಿಕೆಯೇ ಮೌಲ್ಯವೇ ಶಕ್ಯವಾಗುವುದಿಲ್ಲ; ಆದುದರಿಂದ ಅಂಥುದೊಂದಿರಲೇಬೇಕು; ಅದು ಹಾಗಿಲ್ಲವಾದರೆ ಅಂಥುದೊಂದನ್ನು ಮನುಷ್ಯನು ನಿರ್ಮಾಣ ಮಾಡಿಕೊಂಡಿದ್ದಾನೆ ಎಂದು ಕೆಲವೇಳೆ ಕೆಲವರಲ್ಲಿ ಚಿಂತನೆ ಹುಟ್ಟಿದೆ. ಇನ್ನೊಂದು ಅಂಶ ಇದು: ಅಂಥುದೊಂದಿದ್ದರೆ ಅದರ ಭುಜದ ಮೇಲೆ ತಲೆ ಇರಿಸಿ, ತಲೆಯ ಮೇಲೆ ಎಲ್ಲ ಭಾರವನ್ನು ಹೊರಿಸಿ ಧರ್ಮ–ಕರ್ಮ ವಿವೇಚನೆ, ಗತಿ–ಮಿತಿ, ಸಾವು–ಬದುಕು ಎಲ್ಲವನ್ನೂ ಸುಸೂತ್ರವಾಗಿ ಅರ್ಥಮಾಡಬಹುದು ಎಂದು ಮನುಷ್ಯನ ಮನಸ್ಸು ಬಯಸಿದೆ, ಮನಸ್ಸಿನ ವ್ಯಾಪ್ತಿ ಹರಡಿದೆ. ಆ ಶಕ್ತಿ ಬರಿಯ ಶಕ್ತಿಯೆ? ಅದರಲ್ಲಿ ವ್ಯಕ್ತಿಕಲ್ಪನೆ, ಲಿಂಗ (ಗಂಡು ಹೆಣ್ಣು ಎಂಬ) ಗಣನೆ ಉಂಟೆ? ಅದು ಪುರುಷನಂತೆ ವ್ಯಕ್ತಿಯೆ? ಎಂಬುದು ನಾನಾ ಜನವರ್ಗಗಳ ಕಲ್ಪನೆಗೆ ಒಳಪಟ್ಟು ಅವರ ಭಕ್ತಿಗೆ ಮುಕ್ತಿಗೆ ಅವಕಾಶ ಕೊಡುತ್ತದೆ, ಕಾರ್ಯಸ್ಥಾನವಾಗುತ್ತದೆ. ಅದು ಕೇವಲ ನಂಬಿಕೆಯ ಪ್ರಪಂಚ. ನಂಬಿದರೆ ಸತ್ಯ, ಇಲ್ಲವಾದರೆ ಇಲ್ಲ. ವಿಶ್ವಾಸ (faith, belief) ಇಲ್ಲಿ ಪರಮ ಪ್ರಮಾಣ; ಯುಕ್ತಿ (reason)ಯಲ್ಲ. 'ನಾನು ನಂಬಿದೆ; ನನಗೆ ಮುಕ್ತಿ ದೊರೆಯುತ್ತದೆ; ಇದನ್ನು ಧರ್ಮವೆಂದು, ಪರಮವೆಂದು ಎಣಿಸಿದ್ದೇನೆ; ಇದಕ್ಕಾಗಿ ನನ್ನ ಜೀವ ತೆರುತ್ತೇನೆ; ಕೋಟಿ ಜೀವಗಳನ್ನು ನಾಶ ಮಾಡುತ್ತೇನೆ; ನಾನು ನಂಬಿದ ಪರಾತ್ಪರ ಶಕ್ತಿ ನನ್ನ ದೇವರು; ಅದು ಪರಮಾರಾಧ್ಯ; ಅದನ್ನು ಹಿಡಿದಲ್ಲಿ ನನಗಿನ್ನಾರ/ವ ಹಂಗೂ ಇಲ್ಲ; ಅದು ನನ್ನ ಪರಮ ಸ್ವಾತಂತ್ರ್ಯ; ಅದರಿಂದಲೇ ನನಗೆ ಮುಕ್ತಿ – ಎಂದು ಅದರ ಸಾಧನೆಗಾಗಿ ಬೇರೆ ಬೇರೆ ದೇಶದ ಕಾಲದ ಜನ ದುಡಿದಿದ್ದಾರೆ, ತೊಳಲಿದ್ದಾರೆ, ಕಾದಾಡಿದ್ದಾರೆ. ಇದು ಪೂರ್ತಿ ನಂಬಿಕೆಯ ಪ್ರಪಂಚವೆಂದೆ. ಮನುಷ್ಯನ ಜೀವನ ವಿಲ್ಲದಿದ್ದರೆ, ಇದರ ಅಗತ್ಯಗಳೂ ಆಕಾಂಕ್ಷೆಗಳೂ ಇಲ್ಲದಿದ್ದರೆ ವಿಜ್ಞಾನವಿಲ್ಲ, ಸಮಾಜವಿಲ್ಲ, ತತ್ವವಿಲ್ಲ, ಜ್ಞಾನವಿಲ್ಲ, ರಿಲಿಜನ್ ಇಲ್ಲ. ಒಂದು ರಿಲಿಜನ್ ಅವರ ನಿಷ್ಠೆಯಲ್ಲಿ ಕಟ್ಟಿ ಬಿಗಿಯುವುದು ಅದು; ಇನ್ನೊಬ್ಬರಿಂದ ಪೂರ್ತಿ ಬೇರೆ ಮಾಡಿಸುವುದು ಅದು. ಆ ಎರಡರ ನಡುವೆ ಹುಲ್ಲು ಬೇಯುವುದಿಲ್ಲ.

ಇಲ್ಲಿ ಮುಕ್ತಿ ಮತ್ತು ಮೋಕ್ಷ ಎಂಬ ಮಾತನ್ನು ಬಳಸುತ್ತಾರೆ. ಅವಕ್ಕೆ ಅರ್ಥ ಒಂದೇ: ಬಿಡುಗಡೆ ಎಂದು. ಬಿಡುಗಡೆ ವ್ಯಕ್ತಿಗೆ – ಪ್ರಪಂಚದಿಂದ; ಹುಟ್ಟು ಸಾವುಗಳ ಚಕ್ರ ಸ್ವರೂಪವಾಗಿರುವ ಸಂಸಾರದಿಂದ. ಹಿಂದೂಗಳಲ್ಲಿ ಎಲ್ಲರೂ–ಜೈನರು ವಿಶೇಷವಾಗಿ–ಬಳಸುವ ಕರ್ಮ, ಬಂಧ ಎಂಬವುಗಳಿಂದ. ಈ ಪ್ರಪಂಚ ಕ್ಷಣಿಕ ಅಥವಾ ನಶ್ವರ; ಇದರ ತೋರಿಕೆಗಳೆಲ್ಲ 'ಮೋಹ' ಅಥವಾ 'ಅಸತ್'; ಇವೆಲ್ಲಾ ಚಲ; ಇಲ್ಲದುದನ್ನು ಇರುವಂತೆ ಕಾಣಿಸುತ್ತವೆ. ದೇಹದಲ್ಲಿ ಹೇಗೆ ಎಲ್ಲ ಅಂಗಗಳೂ ಇದ್ದರೂ ಅದರಲ್ಲಿ ಪ್ರಾಣ ಎಂಬ ಶಕ್ತಿ (?)– ಲಕ್ಷಣ? – ಇರುವವರೆಗೂ ಅದಕ್ಕೆ ಬದುಕು, ಚಲನೆ, ಜ್ಞಾನ, ಕರ್ಮ, ಮಮತೆ ಇರುತ್ತವೆಯೋ – ಅದಿಲ್ಲವಾದರೆ ಉಳಿದುದು ಯಾವುದೂ ಹೇಗೆ ಇಲ್ಲವೊ – ಹಾಗೆಯೇ ಪ್ರತಿಯೊಬ್ಬರಲ್ಲಿಯೂ



ಜೀವಸ್ವರೂಪವಾದ–ಅದಕ್ಕೆ ಮೇಲ್ಪಟ್ಟ – ಒಂದು ಆತ್ಮವಿದೆ ಎಂದು ನಮ್ಮವರು ಮೊದಲಿನಿಂದ ಹೇಳುತ್ತಾ ಬಂದಿದ್ದಾರೆ. ಈ ಆತ್ಮ ವಸ್ತುಪ್ರಪಂಚಕ್ಕೂ ವ್ಯಕ್ತಿವ್ಯಾಪಾರ ಗಳಿಗೂ ಒಳಪಟ್ಟುದಲ್ಲ, ಇದು ಪ್ರತಿಯೊಂದು ವ್ಯಕ್ತಿಯ ಸಾರ. ಬುದ್ಧಿ ಮನಸ್ಸು ನಡಸದಿದ್ದರೆ ಹೇಗೆ ಯಾವ ಗ್ರಹಣೆಯೂ ಕ್ರಿಯೆಯೂ ನಮ್ಮಲ್ಲಿ ನಡೆಯುವುದಿಲ್ಲವೊ ಹಾಗೆಯೇ ಇದು ಎಲ್ಲಕ್ಕೂ ಮೂಲ ಆಧಾರ. ಇದೇ ನಿತ್ಯಾಂಶ. ಈ ನಿತ್ಯಾಂಶವನ್ನು ಅರಿತುಕೊಳ್ಳಬೇಕು ಎಂಬ ಭಾವನೆಯನ್ನು ರಿಲಿಜನ್ ತನ್ನದಾಗಿ ಮಾಡಿಕೊಳ್ಳುತ್ತದೆ. ಹಾಗೆಯೇ ಮೊದಲಿಂದಲೂ ಪ್ರಕೃತಿಯ ಮಹಾಶಕ್ತಿಗಳನ್ನು ನೋಡಿ ಒಂದು ಕಡೆ ಭಯ, ಇನ್ನೊಂದು ಕಡೆ ಆಶ್ಚರ್ಯ ಅಥವಾ ವಿಸ್ಮಯ, ಇನ್ನೊಂದು ಕಡೆ ಭಕ್ತಿ ಆಕರ್ಷಣೆ ರಕ್ತಿ ಉಂಟಾಗಿ, ಅವೆಲ್ಲ ತಮ್ಮಷ್ಟಕ್ಕೆ ತಾವೇ ನಡೆಯಲಾರವು, ಅವನ್ನು ನಡಸುವ ಅದ್ಭುತವಾದ ಶಕ್ತಿ ಯಾವುದೋ ಇದೆ; ಅದನ್ನು ಒಲಿಸಿಕೊಳ್ಳಬೇಕು; ಭೀತಿ ನೀತಿ ಪವಿತ್ರ ಎಂಬ ಭಾವ ಹುಟ್ಟಿಬಂದು ಆ ಅದ್ಭುತವನ್ನೂ ವಿಸ್ಮಯವನ್ನೂ ಭೀಕರತೆಯನ್ನೂ 'ದೇವ' ಅಥವಾ 'ಈಶ್ವರ' ಎಂದು ಭಾವಿಸಿದರು. ಅವಕ್ಕೆಲ್ಲ ಮೂಲಕಾರಣ ಇನ್ನಾವುದೊ ಇದೆ; ಈ ವಿವಿಧ ಶಕ್ತಿಗಳು ಅತಿಲೌಕಿಕ, ಅಮಾನುಷ, ಪ್ರಕೃತಿಗೆ ಮೀರಿದವು; ಇವೆಲ್ಲ ಒಂದೊಂದು ಶಕ್ತಿ ಮತ್ತು ಬೇರೆ ಬೇರೆ ಶಕ್ತಿಗಳು, ಇವನ್ನೆಲ್ಲಾ ಮಾಡಿದ, ಪ್ರಚೋದಿಸುವ, ನಿಯಂತ್ರಿಸುವ ಒಂದು ಅಧಿಶಕ್ತಿ ಇರಲೇಬೇಕು. ಅದು 'ಸರ್ವೇ ವಿಶ್ವೇದೇವಾಃ ಪ್ರಜಾಪತಿ ಈಶ್ವರ ತದೇಕಂ' ಎಂದು ಮುಂತಾಗಿ ಹೇಳುತ್ತ ಬಂದು, 'ಬ್ರಹ್ಮ' ಎಂಬ ಒಂದು ಶಕ್ತಿಯ ಕಲ್ಪನೆ ನಮ್ಮಲ್ಲಿ ಕಾಲಕ್ರಮದಲ್ಲಿ ಬಂದ ಹಾಗೆ ಕಾಣುತ್ತದೆ. ಸಿಡಿಲು ಗುಡುಗು ಮಳೆ ಇಂದ್ರನವು; ಬೆಂಕಿ ಅಗ್ನಿ; ಸಾವು ಮೃತ್ಯು ಅಥವಾ ಯಮ; ಬಯಕೆ ಕಾಮ ರತಿ (ಭೋಗ ಅದರ ಹೆಂಡತಿ; ಅಗ್ನಿ ಜ್ವಾಲೆ, ಸೂರ್ಯ ಛಾಯೆ) ಎಂಬ ಹಾಗೆ ಇದ್ದುದು. ಒಂದು ದಿವ್ಯಮೂರ್ತಿ ಆಕೃತಿ ಮೊದಲು ತಾಳಿ, ಜನ ಪೂಜಿಸಿದರು, ಆರಾಧಿಸಿದರು.[7] ಇವು ಒಂದು ಪರಮಶಕ್ತಿಯ ವಿವಿಧ ರೂಪಗಳು ಪ್ರಕಾರಗಳು ಎಂದುಕೊಂಡು ಎಲ್ಲ ಆಕೃತಿಗೂ ಮೀರಿ, ಎಲ್ಲ ಗುಣ ಕರ್ಮ ಹೆಸರುಗಳಿಗೂ ಮೀರಿ, ಸಮಸ್ತ ಗುಣ ಸಂಪನ್ನವಾದರೂ ಇವು ಮೂಲ ಸದ್ವಸ್ತು ಒಂದರ ವ್ಯಕ್ತರೂಪಗಳು ಮಾತ್ರ ಎಂದು, ಈ ಸಮಸ್ತ ವಿಶ್ವದ ಹುಟ್ಟಿಗೂ ಸ್ಥಿತಿಗೂ ಅರಿವಿಗೂ ಅದೇ ಕಾರಣವೆಂದು, ಅದರ ಅಂಶವೇ ವಸ್ತುಪ್ರಪಂಚ, ಅದರ ಅಂಶವೇ ಜೀವ, ಆತ್ಮ ಎಂಬ ಭಾವನೆಗೆ ಮೊದಲಾಯಿತು. ಇದು ಎಂದಾಯಿತು, ಹೇಗಾಯಿತು ಎಂಬುದರಲ್ಲಿ ಒಂದು ಕಡೆ ಶಾಸ್ತ್ರದ ಭಾಗ, ಜ್ಞಾನದ ಭಾಗ ಬೆಳೆಯಿತು. ಇದಕ್ಕೆ ಆದಿಯೇ ಇಲ್ಲ ಎಂಬ ಭಾವ ಬೆಳೆಯಿತು. ಏಕೆ? ಗೊತ್ತಿಲ್ಲ. ನಾವು

7. ದೇವತೆಗಳು ಎಂಬ ಭಾವನೆಯಲ್ಲಿ ಮನುಷ್ಯನು ಬಯಸುವುದೆಲ್ಲವೂ ಇದೆ; ಅವನಿಗೆ ಬೇಡದ್ದು ಇಲ್ಲ, ಇವನಿಗೆ ಕಾಂತಿ ಇಲ್ಲ, ಅದು ದಿವ್ಯ; ಇವನಿಗೆ ಹಸಿವಿದೆ, ಅವರಿಗಿಲ್ಲ; ಇವನಿಗೆ ನೋಡುವ ಕಣ್ಣು ಮುಚ್ಚುತ್ತದೆ, ಅವರು ಅನಿಮಿಷರು; ಇವನಿಗೆ ಮುದಿತನ ಉಂಟು, ಅವರು ನಿರ್ಜರರು; ಇವನಿಗೆ ಸಾವುಂಟು, ಅವರು ಅಮೃತರು– ಹೀಗೆ ಕಲ್ಪಿಸಿಕೊಂಡಂತೆ ಕಾಣುತ್ತದೆ ದೇವಲೋಕವನ್ನು.

ಅರಿಯಲಾಗಿಲ್ಲ. ಜ್ಞಾನವೆಂದರೆ ತತ್ವದ ಸ್ವರೂಪವನ್ನು ಎಲ್ಲ ರೀತಿಯಿಂದಲೂ ಅರಿಯುವುದು. ಅಲ್ಲಿನ ಅಂಶಗಳನ್ನೆಲ್ಲ ಸೇರಿಸಿ ಸಮನ್ವಯ ಮಾಡಿ ಒಂದು ಸಿದ್ಧಾಂತವಾಗಿ ಏರ್ಪಡಿಸುವುದು. ಪಾಶ್ಚಿಮಾತ್ಯರು ಯಾವುದನ್ನು ಫಿಲಾಸಫಿ ಎನ್ನುತ್ತಾರೆಯೊ ಆ ಭಾಗ.

ಈ ಸೃಷ್ಟಿಗೆ ಮುಂಚೆ ಅದರ ಸ್ವರೂಪವೆಂಥದಾಗಿರಬೇಕು? ಎಂದು ಅನೇಕ ಜಿಜ್ಞಾಸೆಗಳು ನಡೆದವು. ಮೊದಲು ಅವ್ಯಕ್ತ ಅದು; ಯಾವುದೊ ಸಮಯದಲ್ಲಿ ಏಕೊ ಅದು ವ್ಯಕ್ತವಾಗಬಯಸಿ ತನ್ನ ಸಂತೋಷಕ್ಕೊ ವಿನೋದಕ್ಕೊ ಅಥವಾ ಬೇಸರ ಕಳೆದುಕೊಳ್ಳಲೊ–ಇವೆಲ್ಲಾ ಮನುಷ್ಯನು ಯೋಚನೆ ಮಾಡುವ ರೀತಿಗಳು – ತನ್ನನ್ನು ಬಹುಧಾ ಕಲ್ಪನೆ ಮಾಡಿಕೊಂಡಿತು. ಅದೂ ಅದರ ಒಳಗೇ ಅಡಗಿದ್ದ ಶಕ್ತಿಯಿಂದ ಅದಕ್ಕೆ ಇಚ್ಛೆಯೊ ಕಾಮವೊ ಲೀಲೆಯೊ ಉಂಟಾಗಿ ಈ ರೀತಿ ತನ್ನನ್ನು ವಿವಿಧವಾಗಿ ಮಾಡಿಕೊಂಡಿತು. ಇದು ಪುರುಷವ್ಯಕ್ತಿ; ಯಹವ, ಜ್ಯೂಸ್, ಅಲ್ಲಾಹ್, ಅಹುರಮಜ್ದ ಆದವು. ನಮ್ಮಲ್ಲಿ ಬ್ರಹ್ಮ ಅಥವಾ ಪರಮೇಶ್ವರ ಆಯಿತು. ಲೀಲೆಗೆ ತನ್ನ ಜತೆಯಾಗಿರಲು ನಿರ್ಮಿಸಿಕೊಂಡದ್ದು ಶಕ್ತಿ ಎಂದೊ ಅದಿತಿ ಎಂದೊ ಆಯಿತು. ಕೆಲವೇಳೆ ತನ್ನ ಸಂತೋಷಕ್ಕೆ ಇನ್ನೊಂದು ಅಂಗವನ್ನು ನಿರ್ಮಾಣ ಮಾಡಿಕೊಳ್ಳಬೇಕು ಎಂದು ತನ್ನನ್ನೇ–ದ್ವೇಧಾ ವಿಭಜ್ಯ–ಒಂದು ಹೆಣ್ಣು, ಒಂದು ಗಂಡು ರೂಪವಾಗಿ ಸಕಲ ಸೃಷ್ಟಿಗೂ ಕಾರಣವಾಯಿತು ಎಂದು ಕಲ್ಪಿಸಿದರು. ಅದೇ ಜೀವದ ಜೀವಾಳವಾಗಿರುವುದು, ಮನುಷ್ಯನಲ್ಲಿ ಆತ್ಮ ಸ್ವರೂಪವಾಗಿರುವುದು. ಅದು ಕಣ್ಣು ತೆರೆದರೆ ಬೆಳಕು (ದಿನ); ಕಣ್ಣು ಮುಚ್ಚಿದರೆ ಕತ್ತಲೆ (ರಾತ್ರಿ). ಸೂರ್ಯ–ಚಂದ್ರರು ಕಣ್ಣು; ಪ್ರಪಂಚವೆಲ್ಲ ದೇಹ; ಗಾಳಿ ಉಸಿರು–ಎಂದರೆ ಬ್ರಹ್ಮಾಂಡ(ವಿಶ್ವ)ವೆಲ್ಲ ಅದರ ದೇಹ ಎಂದುಕೊಂಡಿತು. ಇಷ್ಟು ಅದರ ಲೀಲೆ. ಅದೂ ಇದೂ ಎರಡೂ ಒಂದೇ ಮೂಲತಃ. 'ಈಶಾವಾಸ್ಯ ಇದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್;' ಅದಕ್ಕೆ ಹೊರಗಿನದು ಯಾವುದೂ ಇಲ್ಲ; ಆ ಶಕ್ತಿ ಸರ್ವಾಂತರ್ಯಾಮಿ, ಸರ್ವನಿಯಾಮಕ ಎಂದು ಏನೇನನ್ನು ಸಾಕಲ್ಯದಿಂದ ಹೇಳಬಹುದೊ ಅದನ್ನೆಲ್ಲಾ ಅದಕ್ಕೆ ಅರೋಪಣೆ ಮಾಡಿದರು. ಇದು ಆತ್ಮಕ್ಕೆ ಅಧ್ಯಾತ್ಮಕ್ಕೆ ಸಂಬಂಧಪಟ್ಟದ್ದು ಎಂಬ ನಂಬಿಕೆ ಭರತ ಖಂಡದ ಪ್ರಾಚೀನ ಕಲ್ಪನೆ. ಹೊರಗಿನದೆಲ್ಲ ತೋರಿಕೆ, ಅನಿತ್ಯ; ನಿತ್ಯವಾದದ್ದು ಇದೊಂದೇ; ತತ್ವ; ವ್ಯಕ್ತಿಯ ಜೀವಾಂಶವೂ ಅದೇ; ವಿಶ್ವದ ಜೀವಾಂಶವೂ ಅದೇ ಎಂದು ಅದನ್ನು ಅರಿಯಬೇಕು, ಸಾಧಿಸಬೇಕು ಎಂದರು. ಮನುಷ್ಯವರ್ಗದಲ್ಲಿ ಇವೆಲ್ಲ ಜೀವಾತ್ಮಗಳ ಮೇಲ್ಪಟ್ಟ ಪರಮಾತ್ಮ ಎಂಬ ಗ್ರಹಿಕೆಗೆ ಮೇಧಾವಿಗಳು ತೊಡಗಿದರು. ಜ್ಞಾನವಾಗಿ ಯಾವುದನ್ನು ರೂಪಿಸಿಕೊಂಡರೆ ಇದನ್ನು ಸಾಧನೆಯ ರೂಪದಲ್ಲಿ ತಪಸ್ಸು ಬ್ರಹ್ಮಚರ್ಯಾದಿಗಳಿಂದ ತಮ್ಮದಾಗಿ ಮಾಡಿಕೊಳ್ಳಬೇಕು; ತಾವು ಅದರಂಶವಾಗಬೇಕು; ಅಲ್ಲಿಂದ ಮುಂದೆ ಇನ್ನಾವುದೂ ಇಲ್ಲ; ಅದಲ್ಲದ, ಅದಕ್ಕೆ ಹೊರಗಾದ ಇನ್ನಾವುದೂ ಗಮನಕ್ಕೆ ಯೋಗ್ಯವಲ್ಲ ಎಂದುಕೊಂಡು, ಆ ಪರಮಾರ್ಥ ಸಾಧನೆಗೆ ತಮ್ಮ ಎಲ್ಲಾ ಪ್ರಯತ್ನವನ್ನೂ ವಿನಿಯೋಗಿಸಿದರು.



ಇದು ವಸ್ತುಪ್ರಪಂಚದ ಜ್ಞಾನವನ್ನು ಲೋಕದ ಹೊರಲಕ್ಷಣದ ಪರಿಶೀಲನೆಯಾಗಿ ಎಣಿಸಿದೆ. ಈ ಜ್ಞಾನವೆಲ್ಲಾ ಎಷ್ಟೇ ನಿಜವಾಗಿ ಹೇಗೇ ನಿಜವಾಗಿ ಕಂಡರೂ ಅಮುಖ್ಯ; ಜೀವದ ಉತ್ಥಾನತೆಗೆ ಸಹಾಯವಾಗಬೇಕಿಲ್ಲ; ಮೋಹಗಳನ್ನು ಮುರಿಯಲಾರವು; ಬ್ರಹ್ಮ ಅಥವಾ ಪರಮಾರ್ಥ ಸಾಧನೆಗೆ ಅಡ್ಡಿಯಾದಾವು ಎಂಬ ಭಾವನೆ ಇಂಥ ರಿಲಿಜನ್ ಪ್ರಪಂಚದಲ್ಲಿ ನಿರಂತರವಾದ ಅಡ್ಡಿಯಾಗಬಲ್ಲುದು; ಮಾಯೆ, ಭ್ರಾಂತಿ ಕವಿಸಬಲ್ಲುದು; ಅಹಂಕಾರ, ಮದಕಲ್ಪನೆ ಮಾಡಬಲ್ಲದು. ಯಾವ ಒಂದು ವಸ್ತುವಿನ ಛಾಯೆ ಮೃತ್ಯುವೋ, ಯಾವುದರ ಛಾಯೆ ಅಮೃತವೋ ಅದರ ಅನುಸಂಧಾನ, ಸಾಧನೆಯ ಎದುರು ಇದೆಲ್ಲಾ ಕ್ಷುದ್ರ ಎನ್ನುವ ಮನಸ್ಸು ಈ ಮತ ಧರ್ಮ ಅಥವಾ ಸಮಯ ಎಂಬ ಎಲ್ಲದರ ಮುಖ್ಯಾಂಶವಾಯಿತು. ಲೋಕದ ಜೀವನಕ್ಕೂ ಅಧ್ಯಾತ್ಮ ಜೀವನಕ್ಕೂ ನಡುವೆ ವೈರಸ್ಯ ಉಂಟುಮಾಡಿತು. ವ್ಯವಹಾರ ಜೀವನದ ಮತ್ತು ಲೋಕವಿಜ್ಞಾನದ ನಿಷ್ಠೆಯೂ ದೃಷ್ಟಿಯೂ ಸತ್ಯಸಾಧನೆಯೇ; ಇದರದೂ ಸತ್ಯಸಾಧನೆಯೇ. ಆದರೆ ಆ ಸತ್ಯ ಪರಮಸತ್ಯ; ಸತ್ಯಸ್ಯ ಸತ್ಯಂ. ಇದರದು 'ಕೆಳಮಟ್ಟದ' ಸತ್ಯ, ಆ ಮಹಾಸತ್ಯದ ಒಂದು ಅಂಶವಾಗಿ ಮಾತ್ರ ನಿಲ್ಲಬಲ್ಲದ್ದು ಎಂಬ ಯೋಚನೆ ಯಾವಾಗ ಬಂತೊ ಆಗ ಯಾವುದನ್ನು ನಾವು ವಿಜ್ಞಾನವೆನ್ನುತ್ತೇವೊ ಅದಕ್ಕೂ ಮನಸ್ಸು ತನ್ನ ಅನ್ವೇಷಣೆಯಿಂದ ತರ್ಕದಿಂದ ಸುಸಂಬದ್ಧವಾದ ಒಂದು ಸಾಕಲ್ಯದೃಷ್ಟಿ, ಸಮನ್ವಯ ದೃಷ್ಟಿಯಿಂದ ವಸ್ತುಸತ್ಯ ಇದು, ವ್ಯವಹಾರ ಜೀವನದ ಸತ್ಯ ಇವು, ಮನಸ್ ತತ್ವ ಇದು, ಒಟ್ಟು ಲೋಕಜೀವನದ ಸತ್ಯ ಇದು ಎಂಬುದೂ ಅರ್ಥಮಾಡಿಕೊಳ್ಳುವುದೂ ಸ್ಥಾಪಿಸುವುದೂ ಭೌತ–ಸಸ್ಯ–ಜೀವ–ಸಮಾಜ ಶಾಸ್ತ್ರಗಳ ಕಾರ್ಯವಾಗುತ್ತದೆ. ಯಾವುದನ್ನು ಮತ ಆಧಾರ ತತ್ವ ಎಂದು ಹೇಳುತ್ತಾರೆಯೊ ಅದರ ಅಂಶವನ್ನು ಬಳಸಿಕೊಳ್ಳದೆ, ವಾದವಾಗಿ ತೆಗೆದುಕೊಳ್ಳದೆ ಎಲ್ಲ ವಿಶದೀಕರಣಕ್ಕೂ ಬುದ್ಧಿ ಒದಗಿಸುವ ಯೋಚನೆಗಳಿಂದ ಕ್ರಿಯಾತಂತ್ರಗಳಿಂದ ನೀತಿ ನಡವಳಿಕೆಗಳಿಂದ ಧರ್ಮಾಧರ್ಮವಿವೇಕ ಪರಿಶೀಲನೆಗಳಿಂದ ಅರ್ಥಕಲ್ಪನೆ ಮಾಡಿಕೊಂಡು, ಇವೆಲ್ಲವೂ ರಿಲಿಜನ್ ಕಲ್ಪಿಸಿಕೊಂಡಿರುವ ಪರಮಾರ್ಥಕ್ಕೆ ನಡಸಿದರೆ ಅದರ ದಾರಿ, ವಿಧಾನ ಈ ಮತಪ್ರಪಂಚದ ವಿಶ್ವಾಸಕ್ಕೆ ನಡಸಬಹುದು. ವಿಧಾನ ಮಾತ್ರ ಬೇರೆ; ಸಮಯಗಳು ಬೇರೆ; ನಡವಳಿಕೆಗಳು ಬೇರೆ. ಪ್ರಪಂಚದ ಎಲ್ಲವನ್ನೂ ಅಳೆದು ಸುರಿದು ಪರೀಕ್ಷಿಸಿ ಖಚಿತವಾದ ಪ್ರಮಾಣಗಳಿಂದ ಸ್ಥಾಪಿಸಿದ ಸತ್ಯವನ್ನೂ ಸೂತ್ರಗಳನ್ನೂ ವಿಧಾನಗಳನ್ನೂ ಮಾರ್ಗತಂತ್ರಗಳನ್ನೂ ವ್ಯವಸ್ಥೆಗಳನ್ನೂ–ಎಂದರೆ ಜೀವನದ ಸಮಸ್ತ ಹೊರ ವ್ಯಾಪಾರಗಳನ್ನೂ ತಿಳಿಸಿ ತಿಳಿದು ನಡಸುವ ಮಾರ್ಗ ಇಲ್ಲಿನದು. ಇದನ್ನು ನಿರಾಕರಿಸಿ, ಇದರಿಂದ ವಿರಕ್ತಿ ಹೊಂದಿ, ಯಾವುದೊಂದು ಮಾತ್ರ ನಿಜ, ಅದಕ್ಕೆ ಮಾತ್ರ ಒಲವುಳ್ಳವರು ನಾವು – ಈ ಪ್ರಪಂಚವನ್ನು ಕಟ್ಟಿಕೊಂಡು, ಸಮಾಜ ವ್ಯವಸ್ಥೆ ರೀತಿನೀತಿ, ವಿಜ್ಞಾನ ಪ್ರಪಂಚಗಳ ಅಬ್ಬರಗಳನ್ನು ಕಟ್ಟಿಕೊಂಡು ನಮಗೇನು ಎಂಬ ಮಾರ್ಗ ಅಲ್ಲಿನದು. ಅದಕ್ಕೆ ಸಂಬಂಧ

ಪಟ್ಟವು Spiritual Values. ಇವಕ್ಕೆ ಸಂಬಂಧಪಟ್ಟವು Secular – ಲೌಕಿಕ–Values. ವೈಜ್ಞಾನಿಕ (Scientific) ಅಲ್ಲಿಯೂ ಸತ್ಯಕ್ಕೆ ಬೆಲೆ; ಶ್ರದ್ಧೆಗೆ ಬೆಲೆ; ಪ್ರಾಮಾಣಿಕತೆಗೆ ಬೆಲೆ; ನಿಷ್ಪಕ್ಷಪಾತಕ್ಕೆ ಗೌರವ, ಭಕ್ತಿ. ಇಲ್ಲಿಯೂ ಅದೇ; ಆ ಒಂದಕ್ಕೆ ಮಾತ್ರ; ಅದೊಂದೇ ನಿತ್ಯ–ಸತ್ಯ; ಉಳಿದುದೆಲ್ಲ ಕಳೆ, ಬಿಡು, ತೆಗೆ ಎಂಬಂತೆ. ಕೇನೋಪನಿಷತ್ತಿನ ಆರಂಭದಲ್ಲಿ–

ಕೇನೇಷತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ
ಪ್ರಥಮ ಪ್ರೈತಿಯುಕ್ತಃ
ಕೇನೇಷಿತಾಂ ವಾಚಂ ಇಮಾಂವದಂತಿ ಚಕ್ಷುಃ
ಶ್ರೋತ್ರಂ ಖಲು ದೇವ್ರೋಯುನಕ್ತಿಃ

ಎಂದೂ,

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ
ಯದ್ವಾಚೋಹವಾಚಂ ಸಲು ಪ್ರಾಣಸ್ಯ ಪ್ರಾಣಃ
ಚಕ್ಷುಶ್ಚ ಚಕ್ಷುಃ ಅತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾತ್ ಲೋಕಾದಮೃತಾ ಭವಂತಿ

ಎಂದು ಮುಂತಾಗಿ ಪ್ರಶ್ನೆ ಆರಂಭವಾಗುತ್ತದೆ.

ಇದನ್ನು ಸಾಧಿಸುವುದರಲ್ಲಿ ಇದರ ಪರಮಾನುಭವದ ಸ್ವರೂಪವನ್ನು ಬುದ್ಧಿಯಿಂದ ಅರಿಯಲಾಗದು. ಯಾವುದರಿಂದ ಬುದ್ಧಿಗೆ ಮನಸ್ಸಿಗೆ ಅವುಗಳ ಶಕ್ತಿ ಬರುತ್ತದೆಯೊ ಅದನ್ನು ಅರಿಯುವುದು ಹೇಗೆ? ಅದು ತೇಜೋಸ್ವರೂಪವಾದುದು; ಅದನ್ನು ಅನುಭವಿಸುವುದೇ ಹೊರತು ಮಾತಿನಲ್ಲಿ ನುಡಿಯುವುದು, ಇತರರಿಗೆ ವರ್ಣಿಸುವುದು ಶಕ್ಯವಿಲ್ಲ. ಹೀಗೆ ಎಂದು ಹೇಳಲಾಗದು; ಹೇಳಿ ಮುಗಿಸುವುದಂತೂ ಅಶಕ್ಯ. "ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ" ಎಂದು ನುಡಿದುದುಂಟು. ಅದರ ಅವ್ಯಕ್ತ ಸ್ವರೂಪವನ್ನು ಅರಿಯಲು ಯತ್ನಿಸಿ ವೇದದ ಕೆಲವು ಸೂಕ್ತಗಳು – ನಾಸದೀಯ ಮುಂತಾದವು – ಉಪನಿಷತ್ತಿನ ಕೆಲವು ಭಾಗಗಳು – ಕೆಲವು ವರ್ಣನೆಗಳನ್ನು ಕೊಡುತ್ತವೆ. ಸಿಖ್ ಪಂಥದ 'ಗ್ರಂಥಸಾಹೆಬ್'ದಲ್ಲಿಯೂ ಇಂಥದೇ ವಾಕ್ಯಗಳನ್ನು ಕಾಣಬಹುದು. ಈ ದಾರಿಯನ್ನು ಬಿಟ್ಟು ಯಾರನ್ನು ಪ್ರಪಂಚ mystics ಎನ್ನುತ್ತಾರೆಯೊ ಆ ಅನುಭಾವ ವರ್ಗದವರು ಇವರು ವರ್ಣಿಸುವ ಶಾಂತಿ ಆನಂದಗಳನ್ನು ನೇರವಾಗಿ ಅನುಭವಿಸಬಹುದು ಎಂದು ತಮ್ಮ ಅನುಭವ ಪ್ರಮಾಣವನ್ನು ಗೀತೆಗಳಲ್ಲಿ ವಾಕ್ಯಗಳಲ್ಲಿ ಪ್ರಕಟಿಸುತ್ತಾರೆ.

## –11–

ಆದರೆ ವಿಜ್ಞಾನಿಗಳಿಗೂ, ತತ್ವಜ್ಞಾನಿಗಳಿಗೂ, ರಿಲಿಜನ್, ಮತಧರ್ಮಗಳಿಗೆ ಸಂಬಂಧಿಸಿದವರಿಗೂ, ಈ ಅನುಭಾವಿಗಳಿಗೂ ಸಾಮಂಜಸ್ಯವಿಲ್ಲ. ಏಕೆಂದರೆ ವಿಜ್ಞಾನ



ಪ್ರಪಂಚದ ಈ ಗಣಿತ, ಪ್ರಮಾಣಸ್ಥಾಪನೆ ಇವನ್ನು ಎಲ್ಲರೂ ಒಪ್ಪಲೇಬೇಕು. ಕಾಲಕ್ರಮದಲ್ಲಿ ಮನಸ್‌ತತ್ವವನ್ನೂ ಸಾಮಾಜಿಕ ತತ್ವವನ್ನೂ ಎಲ್ಲವನ್ನೂ ಈ ಮಾರ್ಗದಲ್ಲಿ ಪರಿಶೀಲಿಸಿ ಎಲ್ಲರೂ ಒಪ್ಪತಕ್ಕಂಥ ತೀರ್ಮಾನಗಳಿಗೆ ಬರಬಹುದಾಗುತ್ತದೆಯೇನೊ. ವಿಶ್ವದ ಹುಟ್ಟು, ಬೆಳವಣಿಗೆ, ನಾಶ, ಜೀವನದ ಆರಂಭ, ಬೆಳವಣಿಗೆ, ನಾಶ, ಸಮಾಜ ವ್ಯವಹಾರಗಳ, ಮನುಷ್ಯ ವರ್ಗಗಳ ವ್ಯವಹಾರ–ಈ ಎಲ್ಲವನ್ನೂ 'ಛಿದ್ಯಂತೇ ಸರ್ವಸಂಶಯಾಃ' ಎಂಬಂತೆ ಸ್ಥಾಪಿಸಬಹುದಾದೀತೇನೊ. ಮನಸ್ಸೂ ಆ ಮೂಲ ಶಕ್ತಿಯ ಅಂಶವೇ ಅಲ್ಲವೇ? ಲೋಕದ ಇತರ ಎಲ್ಲವೂ ಅದರದೇ ಅಂಶ, ಸಾರತಃ ಒಂದಕ್ಕೊಂದು ವ್ಯತ್ಯಾಸವಿಲ್ಲ, ಅತ್ಯುನ್ನತಿಗೆ ವಿಜ್ಞಾನದ ವಿಧಾನಗಳಿಂದ ತಲಪಬಹುದು ಎಂಬುದು ಶಕ್ಯವಾಗುವುದಾದರೆ ಮನುಷ್ಯನ ಬುದ್ಧಿ ಸಾಹಸದ ಚರಮ ಸಾಧನೆಗೆ ನೆರವಾಗಿ ಕೃತಾರ್ಥವಾಗಬಹುದು. ಅಲ್ಲಿ ಸತ್ಯ ಅಸತ್ಯವಿದೆ; ಇಲ್ಲಿ ಸತ್ಯ ತೋರಿಕೆ ಇದೆ; ಸರಿತಪ್ಪು ಇದೆ. ಇಲ್ಲಿ ಒಳ್ಳೆಯದು ಕೆಟ್ಟದ್ದು, ಧರ್ಮ ಅಧರ್ಮ ಎಂಬವಿವೆ. ಮತಧರ್ಮ ಪ್ರಪಂಚದಲ್ಲಿ ಪುಣ್ಯ ಪಾಪ ಎಂಬುದಿದೆ. ಇವು ಬೇರೆ ಬೇರೆ ನೆಲಸುಗಳಲ್ಲಿ ಮಟ್ಟಗಳಲ್ಲಿ ಮಾನವನ ಜೀವನವನ್ನು ನಡಸುತ್ತಿವೆ; ವಿವೇಚನೆಗಳಿಗೆ ಆಧಾರವಾಗುತ್ತಿವೆ. ಈ ಎಲ್ಲ ಅಂಶಗಳಲ್ಲಿಯೂ, ಎಂದರೆ ಮೊದಲಿಂದ ಈವರೆಗೂ ನಡೆದುಬಂದಿರುವುದು, ಬೆಳವಣಿಗೆ ಈ ವಿಕಸನಕ್ಕೆ ಬಂದಿದೆ. ಉಳಿದುವೆಲ್ಲ ಇದ್ದಂತೆ ತಮ್ಮೆಡೆಗಳಲ್ಲಿ ಇರುತ್ತವೆ. ಅನ್ವೇಷಣೆಗಳಿಗೆ ಪರೀಕ್ಷೆಗಳಿಗೆ ಒಳಪಡುತ್ತದೆ. ಮನುಷ್ಯನಿಗೆ ಎಲ್ಲವನ್ನೂ ಅರಿಯುವ, ಬಳಸಿಕೊಳ್ಳುವ, ಹೊಸ ಸೂರನ್ನು ನಿರ್ಮಾಣಮಾಡಿಕೊಳ್ಳುವ, ಅವನ್ನು ಹೊಸ ಸೃಷ್ಟಿಯಂತೆ ಉಳಿಸಿ ಲೋಕಾನುಭವವನ್ನು ಹೆಚ್ಚಿಸುವ ಸಂಪತ್ತನ್ನಾಗಿ ನಿರ್ಮಾಣ ಮಾಡುವ, ಈ ಎಲ್ಲವನ್ನೂ ಉನ್ನತಿಗೆ, ಪರಮಾರ್ಥ ಸಾಧನೆಗೆ ಉಪಯೋಗಿಸಿ ಕೊಳ್ಳುವ ಒಂದು ಶಕ್ತಿ ಇರುವುದರಿಂದ, ಈ ಎಲ್ಲ ಬಗೆಯ ಸಾಧನೆ ಮಾನವನ ಸಾಧನೆಯೇ ಆಗುತ್ತದೆ. ಇವನಿಂದ, ಇವನಿಗೋಸ್ಕರ. ಇವೆಲ್ಲ ಮಾನವನ ಶಕ್ತಿಯನ್ನೇ ಆಕೃತಿಯನ್ನೇ ಪರಿವರ್ತಿಸಿ ಇದಕ್ಕಿಂತ ಉತ್ತಮವಾದ ಸ್ಥಿತಿಗತಿ ಇದ್ದರೆ ಅದನ್ನು ಸಾಧಿಸಲು ಇದನ್ನೇ ಸಾಧಿಸುವ ಯೋಗ್ಯತೆ ಬರಬಹುದಾಗಲಾರದೆ? ಮಾನವ ಜೀವನದ ಸಿದ್ಧಿಯಲ್ಲಿ ಯಾವುದು ಎಲ್ಲಿಗೊಯ್ಯುವುದೊ ಹೇಳುವುದು ಕಷ್ಟ.

ಈ ನಡುವೆ, ಇದಕ್ಕೆ ಮೇಲ್ಪಟ್ಟು ಯಾವುದೂ ಇಲ್ಲ ಎಂಬವರಿದ್ದಾರೆ. ಇದೆ, ಇಲ್ಲ. 'ಯಾ ನಾ ಸಾ ಮಾಯಾ' ಎಂದವರನ್ನು ಕೇಳಿದ್ದೇನೆ. ಇದು ಒಂದೇ ತತ್ವ, ಎರಡಲ್ಲದ್ದು ಅಥವಾ ಎರಡು ಬೇರೆ ಬೇರೆ ತತ್ವಗಳು ಅಥವಾ ಅನೇಕಾಂತ – ಎಂಬವರಿದ್ದಾರೆ. ಈ ಶಕ್ತಿ ಹೆಣ್ಣು ಗಂಡು ಎನ್ನುವವರಿದ್ದಾರೆ. ಈ ಶಕ್ತಿಗೆ ಎದುರು ಶಕ್ತಿ ಕಾರ್ಯ ನಿರಂತರವಾಗಿ ಮಾಡುತ್ತದೆ. ಅಹುರ ಮಜ್ದ, ಅಹ್ರಿಮಾನ್, ದೇವರು, ಸೈತಾನ್ ಎಂಬ ಪ್ರತಿದ್ವಂದ್ವಿಗಳ ರಂಗವಾಗಿದೆ ಲೋಕಜೀವನ ಎನ್ನುವವರಿದ್ದಾರೆ. ನೀತಿ ಅನೀತಿ ಕೂಡ ಸಾಮಾನ್ಯ ಜನ ತಂಡಗಳಲ್ಲಿ, ಸಮುದಾಯಗಳಲ್ಲಿ ಮಾಡಿಕೊಂಡವು. ಸಮಾಜಕ್ಕೆ ಕಾಲಕ್ಕೆ ಜನರ ಇತಿಹಾಸಕ್ಕೆ ಸಾಪೇಕ್ಷವಾದುವು. ಇವಕ್ಕೆ

ಪರಮಾರ್ಥ ಮೌಲ್ಯವಿಲ್ಲ; ಯಾವುದು ಈಶ್ವರ, ಬ್ರಹ್ಮ ಅಥವಾ ಪರಮತತ್ವ ಎನ್ನುತ್ತೇವೆಯೊ ಅದು ಗುಣ ಅಗುಣ ಅತೀತ, ಕರ್ಮಾಕರ್ಮ ಅತೀತ; ಒಳ್ಳೆಯದು ಕೆಟ್ಟದ್ದು ಎಂಬುದನ್ನು ಮೀರಿದ್ದು, ಅದೊಂದೇ ಪರಮಪ್ರಾಧಾನ್ಯ ಉಳ್ಳ ಸತ್ಯ ಎನ್ನುವವರಿದ್ದಾರೆ. ಈ ನಡುವೆ ಶಾಂತಿ ಆನಂದ ಸ್ವಾತಂತ್ರ್ಯ ನೆಮ್ಮದಿ ಮುಂತಾದ ಮಾತುಗಳು ಗಮ್ಯಗಳಾಗಿ ಜಗದ ಜೀವವನ್ನು ನಡಸುತ್ತಿವೆ. ಈ ನೆಲಸಿನಲ್ಲಿ ಶಕ್ತಿ ಭಕ್ತಿ ಮುಕ್ತಿ ಈ ಮಾತುಗಳ ಪ್ರಪಂಚ ನೆಲಸಿದೆ.

ಭಾರತ ಜೀವನ ವ್ಯವಸ್ಥೆಯಲ್ಲಿ ಪುರುಷಾರ್ಥಗಳೆಂಬ ಒಂದು ಮಾತು ಬರುತ್ತದೆ. ಅವನ್ನು ತ್ರಿವರ್ಗ, ಚತುರ್ವರ್ಗ ಎನ್ನುತ್ತಾರೆ. ಮೊದಲು ಇದ್ದುದು ಅಥವಾ ಪ್ರಧಾನವೆಂದು ವ್ಯವಹಾರ ಜೀವನಕ್ಕೆ ಸಂಬಂಧಿಸಿದ್ದು. ಎಲ್ಲ ಪ್ರಾಣಿಗಳಿಗೂ ದೇಹದ ಸಂತೋಷ ಬೇಕು, ಸುಖ ಬೇಕು, ಅದು ಸಹಜ. ಈಶ್ವರ ಅಥವಾ ಬ್ರಹ್ಮನಿಗೆ 'ಸಕಾಮಯತಾ' ಎಂದಾಗ ಜೀವಿಗೆ, ಮನುಷ್ಯನಿಗೆ ಅದೇ ಕಾಮವೇ ಆಕರ್ಷಣೆಯಾಗಿ ಸಂಗವನ್ನು ಬಯಸುವಂತೆ ಮಾಡುತ್ತದೆ. ಹಾಗೆಯೇ ಅದಕ್ಕೆ ಸಾಧನವಾಗಿ ಸಹಾಯಕವಾಗಿ ಉಪಪತ್ತಿಗಳನ್ನೂ ಸಾಧನಸಮೃದ್ಧಿಗಳನ್ನೂ ಪಡೆಯುವ ಆಸಕ್ತಿ ಇರುತ್ತದೆ. ಒಂದು ಕಾಮ, ಇನ್ನೊಂದು ಅರ್ಥ. ಇವು ಸಹಜ, ಬಹುಮಟ್ಟಿಗೆ ಅಗತ್ಯ, ಅನಿವಾರ್ಯ. ಜೀವಿಗಳ ಸ್ವರೂಪಲಕ್ಷಣದಲ್ಲಿ, ಸ್ವಭಾವದಲ್ಲಿ, ಪ್ರಕೃತಿ ಆಕಾಂಕ್ಷೆಗಳಲ್ಲಿ ಮೂಲಾಂಶವಾಗಿರುತ್ತದೆ. ಇವುಗಳಲ್ಲಿ ಹಿತವಾವುದು, ಮಿತವಾವುದು, ಆರೋಗ್ಯವಾವುದು ಎಂಬುದು ಲೋಕದಲ್ಲಿ ಜನರನ್ನು ಚಿಂತನಕ್ಕೆ ಈಡು ಮಾಡಿದೆ. ನೀರೋಗವಾದ ಬದುಕಿಗೆ ಮಿತಿ ಮರ್ಯಾದೆಗಳು ಬೇಕಲ್ಲವ್ವೆ? ಇವುಗಳನ್ನು ಮೀರಿದರೆ ಎಲ್ಲ ಹದ ಕೆಡುವುದು, ಅವ್ಯವಸ್ಥವಾಗುವುದು. ಆದುದರಿಂದ ಇದಕ್ಕೆ ಸಂಸ್ಕಾರ, ಸುಧಾರಣೆ ಬೇಕು. ಎಲ್ಲವನ್ನೂ ಒಂದು ಕಟ್ಟಿನಲ್ಲಿ ನಿಟ್ಟಿನಲ್ಲಿ ಹಿಡಿದು ನಿಲ್ಲಿಸಿದ್ದಾದರೆ ಜೀವನದ ಧಾತು ಕೆಡುತ್ತದೆಂದು, ಅದನ್ನು ಆರೋಗ್ಯದಲ್ಲಿ ಯಾವುದು ಹಿಡಿದು ನಿಲ್ಲಿಸುತ್ತದೆಯೊ ಉಳಿಸುತ್ತದೆಯೊ ಅದನ್ನು ಧರ್ಮವೆಂದರು. ಕೆಲವು ಮತಗಳಲ್ಲಿ ಕಾಮಕ್ಕೆ ಅರ್ಥಕ್ಕೆ ಪ್ರಾಧಾನ್ಯವಿಲ್ಲ; ಕೆಲವಲ್ಲಿ ಉಂಟು. ಧರ್ಮಕ್ಕೆ ಅಧೀನವಾಗಿ ಅಥವಾ ಒಳಪಟ್ಟು ಕಾಮವನ್ನೂ ಅರ್ಥವನ್ನೂ ಸಂಪಾದಿಸಬಹುದು. ಪ್ರೇಯಸ್ಸಿಗೆ, ಈ ಧರ್ಮಕ್ಕೆ ಗುರಿ ಜೀವದ ರಕ್ಷಣೆ, ಪೋಷಣೆ; ಇನ್ನಾವುದೊ ಒಂದು ಮೇಲ್ಪಟ್ಟ ಗತಿ ಸಾಧನೆ. ಇದು ಸಾಮಾಜಿಕವಾಗಬಹುದು; ಇದು ಸಮಾಜವನ್ನು ಮೀರಿದ ಆದರ್ಶಗಳನ್ನು ಸಾಧಿಸುವ ಉದ್ದೇಶದಿಂದಾಗಬಹುದು.

ಇವನ್ನು ಅನುಭವಿಸಿದವರು ಸಾಧಿಸಿದವರು ಧರ್ಮಕರ್ಮಗಳನ್ನು ಅರಿತುಕೊಂಡವರು. ವಿಶ್ವ ವಿಶಾಲವಾದ ಜೀವನದ ಎಲ್ಲದರೊಂದಿಗೆ ತಾನು ಒಂದಾಗುವವರೆಗೆ ತನಗೆ ಶಾಂತಿ ಮತ್ತು ನಿಲುಗಡೆ ಇಲ್ಲ ಎಂದು ಎಲ್ಲಕ್ಕೂ ದುಡಿದು ಸೇರುವುದು ಒಂದು ದಾರಿ; ಇನ್ನೊಂದು ದಾರಿ, ಲೋಕಸ್ವರೂಪವನ್ನು ಅರ್ಥಮಾಡಿಕೊಂಡವರು. ಸ್ವತಃ ಅವರಿಗೇ ಅರ್ಥವಾಗುತ್ತದೆ ಇದು ಸಾಲದು ಎಂದು, ಇದು ಅಸತ್ ಎಂದು.



ಬದುಕಿನ ಆಸೆಗಳು ಉಡುಗುತ್ತವೆ. ಆಕಾಂಕ್ಷೆಗಳು ಮಿತವಾಗುತ್ತವೆ. ಇದಕ್ಕಿಂತ ದೊಡ್ಡದಾದುದಕ್ಕೆ ಬದುಕಬೇಕೆಂಬ ಆಸಕ್ತಿ ಉಂಟಾಗುತ್ತದೆ. ಈವರೆಗೆ ಕಳೆದ ಕಾಲ ವ್ಯರ್ಥವಾಯಿತು ಎನಿಸುತ್ತದೆ. ಇದು ಕ್ಷಣಿಕ, ಪಥ್ಯವಲ್ಲ, ನಿತ್ಯವಲ್ಲ. ಇದಕ್ಕಿಂತ ದೊಡ್ಡದನ್ನು ಅರಿಯಬೇಕು; ಮನಃಸ್ಥಿತಿಯನ್ನೊ ಧರ್ಮವನ್ನೊ ಕರ್ಮವನ್ನೊ ಕೇವಲವಾಗಿ ಸಾಧಿಸಬೇಕು. ಅದು ಯಾವುದು ಎಂಬ ಚಿಂತನೆ ಆರಂಭವಾಗುತ್ತದೆ. ಇವು ಲೌಕಿಕವಲ್ಲ; ಬೇರೆ ಸತ್ವದ್ದು. ಆಗ ಲೌಕಿಕವಾಗಿದ್ದ ಜೀವನದ ಮತಿ ಮತದಿಂದ ಹೊರಬಿದ್ದು ಮೇಲ್ಪಟ್ಟ ಧಾರ್ಮಿಕ ಜೀವನಕ್ಕೆ ತೊಡಗಿ, ಈ ಧರ್ಮಕ್ಕೆ ಮೂಲ ಯಾವುದು, ಲೋಕ ನಿಯಂತ್ರಣವನ್ನು ಮಾಡುವ ಋತ ಸತ್ಯ ಯಾವುದು?– ಎನ್ನುವುದರ ಕಡೆ ಗಮನ ಚರ್ಯೆ ನಡೆಯಬಯಸಿ, ಸ್ವಂತಸುಖಸಾಧನೆಗೆ ಮಿತಗೊಂಡಿದ್ದ ಜೀವ ಅನ್ಯರ ಹಿತಕ್ಕೂ ಲೋಕಹಿತಕ್ಕೂ ತೊಡಗಿ, ತನ್ನನ್ನು ಅಲ್ಲಿಗೆ ಮುಡಿಪು ಮಾಡಿಕೊಳ್ಳುತ್ತದೆ. ಆಗ ವ್ಯಕ್ತಿಧರ್ಮ ಲೋಕಧರ್ಮವಾಗಿ ಇವನನ್ನು ಕ್ಷುದ್ರ ಕರ್ಮಗಳಿಂದ, ಕಾರ್ಪಣ್ಯದಿಂದ, ಸಂಸಾರದ ಕ್ಲೇಶ ಅಶಾಂತಿಗಳಿಂದ ಬಿಡುಗಡೆಗೊಳ್ಳಲು ಪ್ರಚೋದಿಸುತ್ತದೆ. ಸಣ್ಣ ತೊಡಕುಗಳಿಂದ, ನಿರ್ಬಂಧಗಳಿಂದ, ಈವರೆಗೂ ಸಂಚಯಿಸಿದ್ದ ಕರ್ಮದ ಬಂಧನದಿಂದ, ಸಣ್ಣ ಸಂಸಾರದ ಅಗತ್ಯಗಳಿಂದ ಮುಕ್ತನಾಗಲು ಬಯಸುವನು. ಇದು ಅವನನ್ನು ತಾನು ಯಾವುದನ್ನು ಪರಮಧರ್ಮ ಅಥವಾ ಪರಮಾರ್ಥಸಾಧನೆ ಎಂದು ಕೊಳ್ಳುತ್ತಾನೊ ಆ ಕಡೆಗೆ ನಡಸುವುದು.

ಮುಕ್ತಿ ಎಂಬ ಮಾತು ಬಿಡುಗಡೆ ಎಂಬ ಅರ್ಥದ್ದು; ನಿಷೇಧ ನಿರ್ಬಂಧಗಳಿಂದ ತೊಡಗಿ ಅದೇ ಮಾತಿನ ಇನ್ನೊಂದು ಅರ್ಥ ಕೊಡುವ ಮೋಕ್ಷ ಎಂಬುದಕ್ಕೆ ನಮ್ಮನ್ನು ನಡಸುವುದು. ಅದು ಪುರುಷಾರ್ಥಗಳಲ್ಲಿ ನಾಲ್ಕನೆಯ ವರ್ಗ. ಮೋಕ್ಷವನ್ನು ಬೇರೆ ಬೇರೆ ವರ್ಗಗಳವರು ಬೇರೆ ಬೇರೆ ರೀತಿ ಕಲ್ಪಿಸಿಕೊಳ್ಳುತ್ತಾರೆ. ಜ್ಞಾನ ದರ್ಶನಗಳ ಮಾರ್ಗವನ್ನು ಹಿಡಿದವರು ತಾವು ಪರಮವೆಂದುಕೊಂಡ ಬ್ರಹ್ಮಸಾಧನೆಯ ಮಾರ್ಗವನ್ನು ಹಿಡಿಯುತ್ತಾರೆ. ಅವರಿಗೆ ಸತ್ಸಂಗ ನಿಸ್ಸಂಗ ನಿರ್ಮೋಹ ನಿಶ್ಚಲತೆ ಜೀವನ್ಮುಕ್ತಿ ಒಂದು ಮಾರ್ಗವಾಗುತ್ತದೆ. ಬ್ರಹ್ಮಚರ್ಯೆ, ಬ್ರಹ್ಮಸಾಧನೆ, ತಪಸ್ಸು ಅಲ್ಲಿ ಮಾರ್ಗವಾಗುತ್ತದೆ. ತತ್ಸಮವಾದ ಮಾರ್ಗಗಳು ಇನ್ನು ಬೇರೆ ಹೆಸರಿನ ಪರಮಾರ್ಥ ಕಲ್ಪನೆಯ ಸಾಧನೆಯ ರೀತಿಗಳಾಗುತ್ತವೆ. ಅದನ್ನು ವ್ಯಕ್ತಿಯಾಗಿ ಕಲ್ಪಿಸಿಕೊಳ್ಳುವ ಮತಪಂಥಗಳವರು ವಿಷ್ಣು ಶಿವ ಅಲ್ಲಾ ಮುಂತಾದ ಮೂರ್ತಿಗಳನ್ನೊ ಗುಣ ಕಲ್ಪನೆಗಳನ್ನೊ ನಾಮ ಕಲ್ಪನೆಗಳನ್ನೊ ಕ್ರಿಯಾಕಲಾಪಗಳನ್ನೊ ಉಂಟುಮಾಡಿಕೊಳ್ಳುತ್ತಾರೆ. ಆತನಿಗೆ ಪರಮ ಪ್ರಾಧಾನ್ಯ ಕೊಟ್ಟು ಆತನ ಕೃಪೆಯಿಂದ ಮಾತ್ರ ಮೋಕ್ಷಸಾಧನೆ ಸಾಧ್ಯ ಎಂದು ಅದರ ಆರಾಧನೆಗೆ ಸಾಧನೆಗೆ ತೊಡಗುತ್ತಾರೆ. ಅಥವಾ ಜೈನ ಧರ್ಮದಂತೆ, ಜಿನರಂತೆ ಆದರ್ಶವಾಗುತ್ತದೆ. ಆ ಕೃಪೆಯಿಂದ ಸ್ವರ್ಗ; ಕೋಪ ಹಿಂಸೆ ಅಸಮಾಧಾನಗಳಿಂದ ನರಕ ಎಂದು ಅವರವರ ನಂಬಿಕೆ ಆಚಾರಗಳಿಗೆ ತಕ್ಕಂತೆ ಸಂಸ್ಥೆ, ಸಂಪ್ರದಾಯ, ನಡೆ, ನುಡಿ, ದಂಡ, ನೀತಿ, ಪುಣ್ಯಪಾಪ ಕಲ್ಪನೆ ಮಾಡಿಕೊಳ್ಳುತ್ತಾರೆ. ಆ ವರ್ಗಗಳಲ್ಲಿ ಏಕದೇವೋಪಾಸನೆ ಸರ್ವಥಾ ಮಾರ್ಗ. ಒಂದು ಮತಧರ್ಮದವರ ರೀತಿ ಪಂಥ ಇನ್ನೊಬ್ಬರಿಗೆ ಹೊಂದದು. ಆ

ಮಾರ್ಗವನ್ನು ಒಪ್ಪಿದರೆ ಮಾತ್ರ ಮುಕ್ತಿ; ಇಲ್ಲವಾದರೆ ಮುಕ್ತಿ ಇಲ್ಲ ಎನ್ನುತ್ತ ಇತಿಹಾಸದಲ್ಲಿ ಸುಖಕ್ಕೆ, ನಾಶಕ್ಕೆ, ಐಕ್ಯಕ್ಕೆ, ವಿರೋಧಕ್ಕೆ ಲೋಕ ಜೀವನವನ್ನು ನಡಸಿವೆ. ಇಲ್ಲಿ ಅವರವರ ಪ್ರೀತಿ, ಅಪ್ರೀತಿ, ನಂಬಿಕೆ, ವಿರೋಧ, ನಿರಾಕರಣೆ ಅವರವರ ನಡವಳಿಕೆಯನ್ನು ನಡಸುತ್ತವೆ.

**– 12 –**

ಅನುಬಂಧವಾಗಿ ಕೊಟ್ಟಿರುವ 'ಸಂದರ್ಶನ'ದಿಂದ ಒಬ್ಬ ವಿಜ್ಞಾನಿಯ ದೃಷ್ಟಿ ಹೇಗಿರುತ್ತದೆಂಬುದು ಸ್ಥೂಲವಾಗಿ ಕಾಣುತ್ತದೆ. ಜೆ.ಬಿ.ಎಸ್. ಹಾಲ್ಡೇನ್ 'ಸಂತತಿ ವಿಜ್ಞಾನ' (genetic) ದಲ್ಲಿ ಪ್ರಖ್ಯಾತರಾದ ಅನ್ವೇಷಣಕಾರರು. ಅವರ ತಂದೆ ಜೆ.ಎಸ್.ಹಾಲ್ಡೇನರೂ ವಿಜ್ಞಾನಿಗಳು. ಮಾನವರ ಶ್ವಾಸಕ್ಕೆ ಸಂಬಂಧಿಸಿದ ಅನೇಕ ಅಭ್ಯಾಸಗಳನ್ನೂ ಪರೀಕ್ಷಾ ಪ್ರಯೋಗಗಳನ್ನೂ ತಂದೆ ಮಕ್ಕಳಿಬ್ಬರೂ ಸೇರಿ ಮಾಡಿದ್ದರು. ಜೆ. ಬಿ. ತಾವು ಅನ್ವೇಷಣ ನಡಸುತ್ತಿದ್ದ ವಿಶ್ವವಿದ್ಯಾನಿಲಯದಲ್ಲಿ ಬಹುಕಾಲ ದುಡಿದರು. ಗಣಿತದಲ್ಲಿ ದೊಡ್ಡ ಪ್ರಜ್ಞೆಯುಳ್ಳ ಅವರಿಗೆ ಈ ವಿಶ್ಲೇಷಣೆಯಲ್ಲಿ ಬಹಳ ನೆರವು ದೊರಕಿತು. ಸ್ವಂತವಾಗಿ ಈತನೂ ಈತನ ಸಹೋದರಿಯೂ ಪ್ರಾಣಕ್ಕೇ ಅಪಾಯಕರ ವಾದ ಪರೀಕ್ಷಣಾ ಪ್ರಯೋಗಗಳನ್ನು ಮಾಡಿದ್ದರು. ಮನುಷ್ಯನ ದೇಹ ಎಷ್ಟು ಶಾಖವನ್ನು ತಡೆದುಕೊಳ್ಳಬಲ್ಲದು ಎಂಬುದಕ್ಕೆ ಬೆಂಕಿಯಲ್ಲಿ ಕೈಯಿಟ್ಟು ಏನೋ ಪ್ರಯೋಗ ಮಾಡಿದರಂತೆ. ನೇಣು ಹಾಕಿಕೊಳ್ಳುವವರಿಗೆ ರಕ್ತಚಲನೆ ಉಸಿರು ಮನೋಭಾವ ಹೇಗಿರುತ್ತದೆಂದು ಪರೀಕ್ಷೆ ಮಾಡಿಕೊಳ್ಳಲು ನೇಣು ಹಾಕಿಕೊಂಡು ಮರಕ್ಕೆ ತೂಗಿದ ರಂತೆ. ಆತನ ಬುದ್ಧಿವಂತಿಕೆ ಅಸಾಧಾರಣವಾದುದು. ಚುರುಕು ಚಟುವಟಿಕೆಯೂ ಹಾಗೇ. ಆದರೆ ಸ್ವಭಾವ ಮಗುವಿನಷ್ಟು ಸರಳ. ಒಂದು ಹಕ್ಕಿಯ ಹಾಗೆ ಸ್ವತಂತ್ರ. ಸ್ವಭಾವತಃ ಹಾಸ್ಯಶೀಲರು, ವಿನೋದಪ್ರಿಯರು. ಆತನ ಮನಸ್ಸು ಸ್ನೇಹಪೂರ್ಣ, ಮಾನವೀಯ ಆದುದು. ಆ ಸಂದರ್ಶನದಲ್ಲಿ ಭಾಷೆ, ನೀತಿ, ಜೀವನ, ಆತ್ಮ, ಗಮ್ಯ, ಸಂಕಲ್ಪ ಎಂಬ ಯಾವ ಯಾವುದನ್ನು ಕುರಿತು ಎಷ್ಟೋ ಕಾಲದಿಂದ ಮಾತನಾಡುತ್ತ ಬಂದಿದೆಯೊ ಅವನ್ನು ಕುರಿತು ವಿಜ್ಞಾನಿಯಾದವನು ಹೇಗೆ ಮಾತನಾಡುತ್ತಾನೆ, ಯಾವ ಮರ್ಯಾದೆಯನ್ನು ಇಟ್ಟುಕೊಂಡು ಪರ್ಯಾಲೋಚನೆಗೆ ತೊಡಗುತ್ತಾನೆ, ಎಷ್ಟು ಮಾತ್ರ ಅವು ನಿಜ, ತಥ್ಯ, ಯಾವರ್ಥದಲ್ಲಿ? ಇನ್ನಾವುದನ್ನು ಹೇಳಲು ಸದ್ಯಃ ತನಗಧಿಕಾರವಿಲ್ಲ, ಹೇಳಿದರೆ ತಪ್ಪಾಗಬಹುದು, ಇವೊತ್ತಿನ ತಿಳಿವಳಿಕೆಯ ಆಧಾರದ ಮೇಲೆ, ನಾಳೆ ಸುಮಾರು ಹೇಗಾಗಬಹುದು, ಏನಾಗದಿದ್ದರೆ ಆಶ್ಚರ್ಯವಿಲ್ಲ ಎಂದು ಹೇಳುತ್ತಾನೆ – ಎಂಬುದು ಮನುಷ್ಯನಿಗೆ ವಿದ್ಯೆಯನ್ನು ಕಲಿಸುತ್ತದೆ. ಇತರ ಅನೇಕ ಸಂದರ್ಭದಲ್ಲಿ ನಾವು ಅನೇಕರು ಪ್ರತ್ಯಂಶವನ್ನು ಕುರಿತೂ ಸರ್ವಜ್ಞರಂತೆ ಹಟತೊಟ್ಟು ತೀರ್ಮಾನಗಳಿಗೆ ಬರುತ್ತೇವೆ; ಅನೇಕ ಕುರುಡು ನಂಬಿಕೆಗಳು ಅಥವಾ ಗಿಳಿ ಮಾತುಗಳೆಂಬಂತೆ ಇರುವುದನ್ನು ನಿತ್ಯಸತ್ಯಗಳೆಂಬಂತೆ, ಅವನ್ನು ಎಲ್ಲರೂ ಒಪ್ಪಲೇಬೇಕು ಎಂಬಂತೆ ಹಟಮಾಡಿ ನುಡಿಯುತ್ತೇವೆ. ನಮ್ಮ ಜ್ಞಾನಕ್ಕೆ ವಿಜ್ಞಾನಗಳಿಗೆ ಮಿತಿಗಳಿವೆ.



ಕಾಲದ ಮಿತಿ, ದೇಶದ ಮಿತಿ, ತಿಳಿವಳಿಕೆಯ ಮಿತಿ, ಮಾನವ ಬುದ್ಧಿಶಕ್ತಿಯ ಮಿತಿ– ಎಲ್ಲವೂ ಮಿತಿಗಳೇ. ಉಪನಿಷತ್ತಿನಲ್ಲಿ ಯಾವುದೊ ಸಂದರ್ಭದಲ್ಲಿ ಯಾಜ್ಞ್ಯವಲ್ಕರು ಇಂಥ ಪ್ರಶ್ನೆಯನ್ನು ಕೇಳಬೇಡಿ – 'ಮಾಽತಿಪ್ರಾಕ್ಷೀ' ಎಂದರು. ಅಂಥದನ್ನು ಕೇಳಲು ಹೋಗಬಾರದು ಎಂದರೆ ಅದು ಅಧರ್ಮ, ಅನೀತಿ ಎಂದಲ್ಲ; ಇದಕ್ಕೆ ಉತ್ತರ ಹೇಳಬಾರದು ಎಂದೊ, ಹೇಳಲಾರೆ ಎಂದೊ ಅಲ್ಲ. ಅದಕ್ಕಿನ್ನೂ ಉತ್ತರ ದೊರೆತಿಲ್ಲ ನಿಶ್ಚಯವಿಲ್ಲ ಎಂದೊ, ಅದಕ್ಕಾಗಿ ತಲೆಕೆಡಿಸಿಕೊಳ್ಳುವುದು ಪ್ರಯೋಜನವಿಲ್ಲ ಎಂದೊ, ಅಥವಾ ಅಧಿಕಪ್ರಸಂಗವಾಗುತ್ತದೆ ಎಂದೊ, ಅಥವಾ ಇಲ್ಲಿಗೆ ಸಾಕು ಮುಂದಿನ ಯತ್ನ ಬೇಡ ಎಂದೊ ಅಲ್ಲ. ಇತಿ ಮಿತಿಗಳನ್ನು ಅರಿಯತಕ್ಕದ್ದು ಪರಮಧರ್ಮ ಎಂಬುದು ಇಲ್ಲಿ ವಿವಕ್ಷಿತವಾಗುವ ಸಂಗತಿ. ಇದು ಅತಿಪ್ರಶ್ನೆಯಾಗುತ್ತದೆ ಎಂಬುದು ಅವರ ಮನಸ್ಸಿನಲ್ಲಿತ್ತು, ಅಷ್ಟೇ.

ವಿಜ್ಞಾನಿಗಳದು ತತ್ತ್ವಜ್ಞಾನಿಗಳದು ಮತದೃಷ್ಟಿಯುಳ್ಳವರದು ಮೂರು ಬೇರೆಬೇರೆ ದಾರಿಗಳು. ಮೊದಲ ಎರಡು ವರ್ಗಗಳವರಿಗೂ ಬುದ್ಧಿಯ ಪ್ರಭಾವವನ್ನು ಕುರಿತು ಒಪ್ಪಿಗೆ ಇದೆ; ಮತಕ್ಕೆ ಸಂಬಂಧಿಸಿದವರಲ್ಲಿ ಅದಕ್ಕೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಆದರೆ ವಿಜ್ಞಾನಿಗಳು ಬುದ್ಧಿಯನ್ನು ಬಳಸುವ ರೀತಿಗೂ ತತ್ತ್ವಜ್ಞಾನಿಗಳ ರೀತಿಗೂ ವ್ಯತ್ಯಾಸ ವುಂಟು. ಬುದ್ಧಿಯನ್ನೂ (Intellect) ಮತ್ತು ಯುಕ್ತಿಯನ್ನೂ (Reason) ಒಪ್ಪುವ ಸಮಯದಲ್ಲಿ ಯಂತ್ರ ತಂತ್ರವನ್ನೂ ಪರೀಕ್ಷಾರ್ಥ ಪ್ರಯೋಗಗಳನ್ನೂ ಗಣಿತವನ್ನೂ ವಿಜ್ಞಾನಿಗಳು ಬಳಸುತ್ತಾರೆ. ಮನುಷ್ಯನ ಹೊರಗಿರುವ ಜಗತ್ತಿನಲ್ಲಿ ಇರುವ ಸಮಸ್ತವನ್ನೂ ಅವರು ಒಪ್ಪಿಕೊಳ್ಳುತ್ತಾರೆ. ಅವುಗಳ ಸ್ವರೂಪ, ರಚನೆ, ಕ್ರಿಯಾ ಮಾರ್ಗ, ಗುಣ, ಸತ್ಫಲ ದುಷ್ಫಲಗಳು–ಇವನ್ನು ನಿಷ್ಪಕ್ಷಪಾತದಿಂದ–ಎಂದರೆ ವಾಸ್ತವ ದೃಷ್ಟಿಯಿಂದ, ಸ್ವಂತ ಪಕ್ಷಪಾತಗಳನ್ನು ಬೆರಸದೆ–objectively with disinterest–ಫಲಾಫಲಗಳ ಪರಿಣಾಮಗಳನ್ನು ಖಚಿತವಾಗಿ ಅರಿತುಕೊಳ್ಳಲು, ತಿಳಿಯಲು ಮಾತ್ರ ಯತ್ನಿಸುತ್ತಾರೆ. ವಸ್ತುಸತ್ಯ ಮೌಲ್ಯ ಒಂದೇ ಅವರಿಗೆ ಮುಖ್ಯ; ಅದರ ಸ್ವರೂಪವನ್ನು ತಿಳಿಯಬೇಕು. ಪ್ರತ್ಯಕ್ಷ–ಅನುಮಾನ–ಉಪಮಾನ ಮೂರೂ ಅಂಶಗಳೂ ಇದು ಹೀಗಿರಬಹುದೇ, ಹೀಗಿರಬಾರದೇ ಎಂಬ ವಿವೇಚನೆಯೂ ಕಲ್ಪನೆಯೂ ಅವರ ತೀರ್ಮಾನಗಳಿಗೆ ಬೆಂಬಲವಾದರೂ ಪರೀಕ್ಷಾಪ್ರಯೋಗ ನಿರ್ಣಾಯಕ ಪ್ರಮಾಣ. ತಾವು ಬಂದ ತೀರ್ಮಾನಕ್ಕೆ ಸ್ಥಾಪಕಗಳು ಖಚಿತವಾಗಿ ಇವೆ, ಸರಿ ಎಂಬುದಕ್ಕೂ ಅವರಿಗೆ ಪ್ರಯೋಗ ಗಳುಂಟು. ಇದೇ ರೀತಿ ಅನ್ವೇಷಣ ನಡಸಿ ಪರೀಕ್ಷಣಗಳನ್ನು ನಡಸಿದ ಎಲ್ಲರಿಗೂ ಇದು ಒಪ್ಪಿತವಾಗುವವರೆಗೂ ಅದು ತತ್ತ್ವವೆಂದು ಸತ್ಯವೆಂದು ಸಮ್ಮತವೆಂದು ದೇಶವಿದೇಶಗಳ ವಿಜ್ಞಾನಿವರ್ಗ ಒಪ್ಪುವುದಿಲ್ಲ. ಎಲ್ಲೆಲ್ಲಿಯೂ ಪುನಃ ಅವೇ ಪ್ರಯೋಗಗಳನ್ನು ಮಾಡಿ ಸರಿಯೇ ತಪ್ಪೇ ಎಂದು ಜಡಿತಿ ಮಾಡಿಕೊಳ್ಳುತ್ತಾರೆ. ಯಾವುದಾದರೂ ಈ ಎಂಟನೆಯದು ಮಾತ್ರ ಇದಕ್ಕೆ ಕಾರಣ ಎಂದು ಎಲ್ಲವನ್ನೂ ಪರಿಶೀಲಿಸಿ, ಇನ್ನಾವುದೂ ಹಾಗಿರಲಾರದು ಎಂದು ನಿಶ್ಚಯಮಾಡಿಕೊಂಡು ಹೇಳುವ

ಮಾತು ಅದು. ಪರಿಸ್ಥಿತಿ ಹಾಗಿರುವುದರಿಂದ ಇವೆಲ್ಲ ಕಾರಣ; ಎರಡನೆಯದಲ್ಲ, 3, 4, 5, 6, 7 ಅಲ್ಲ; ಈ ಎಂಟನೆಯದು ಮಾತ್ರ ಆಗಿರಬೇಕು ಎಂದು, ಇದೇ ಹೌದೇನು ಎಂಬುದಕ್ಕೆ ಅಧಿಕ ನಿರ್ಣಾಯಕ ಪ್ರಮಾಣ ತೋರಿಸಿ, ಎಂಟನೆಯದೇ ಕಾರಣ ಎಂದು ಸಿದ್ಧಾಂತಕ್ಕೆ ಬರುತ್ತಾರೆ. ಈ ವಿಧಾನ ಕ್ರಮದಲ್ಲಿ ಅತಿಮಾನುಷ ಅಥವಾ ಅತಿಪ್ರಾಕೃತಿಕ ಎಂಬ ಯಾವ ಪ್ರಭಾವಗಳನ್ನೂ ಗಣನೆಗೆ ತಂದುಕೊಳ್ಳುವುದಿಲ್ಲ. ಎಲ್ಲವನ್ನೂ ಅಳೆಯುತ್ತಾರೆ–ತಮ್ಮ ತೀರ್ಮಾನಕ್ಕೆ ಬರುವ ಮುಂಚೆ. ಭೌತಿಕ ಪ್ರಪಂಚದಲ್ಲಿ ಇರುವ ವಸ್ತು ಸಾಮಗ್ರಿ ಎಲ್ಲವೂ–ನೆಲ, ನೀರು, ಬೆಂಕಿ, ಮಳೆ, ಗಾಳಿ, ಸೂರ್ಯ, ಚಂದ್ರ, ಖನಿ, ಭೂಕಂಪ ಈ ಎಲ್ಲ–ಇವರ ಪರೀಕ್ಷಣಕ್ಕೆ ಸ್ವಸ್ವರೂಪವನ್ನು ಬದಲಾಯಿಸದೆ, ಬೇರೆ ಬೇರೆ ಗುಣದ ಅಂತರಕ್ಕೆ ಹೋಗದೆ ಒಳಪಡುತ್ತವೆ. ತಡೆ, ವೇಗ, ಒತ್ತಡ, ಏರು, ಬೀಳು, ಬಣ್ಣ, ವಾಸನೆ, ರುಚಿ ಇವನ್ನೆಲ್ಲ ಇವನು ಮಾರ್ಪಡಿಸಬಲ್ಲ. ಆದರೂ ಆಯಸ್ಕಾಂತ ಕಬ್ಬಿಣ ಕಬ್ಬಿಣವೇ; ಗಿಡ ಗಿಡವೇ; ಗಾಳಿ ಬೆಂಕಿ ಇವುಗಳೆಲ್ಲ ಎಲ್ಲೆಲ್ಲೂ ಒಂದೇ ರೀತಿ. ಉಳಿದವು ಈ ಪರೀಕ್ಷೆಗೆ ಒಳಪಡುವವು. ಭೌತಿಕ ವಿಷಯಗಳಲ್ಲಿ  ಹೇಗೊ ವಸ್ತುಗಳ ರಾಸಾಯನಿಕ ಸ್ಥಿತಿಯಲ್ಲಿಯೂ ಹಾಗೇ. ಇಂಗಾಲ ಇಂಗಾಲವೇ; ಜಲಜನಕ ಜಲ ಜನಕವೇ; ಗಂಧಕ ಗಂಧಕವೇ; ಸಾವಯವ ನಿರವಯ ಪದಾರ್ಥಗಳು ಅಂಥವೇ; ಒಂದಕ್ಕೊಂದು ಸೇರಿಸಿದಾಗ ಎಲ್ಲೆಲ್ಲಿಯೂ ಗೊತ್ತಾದ ಒಂದೇ ತೆರದ ಪರಿಣಾಮಗಳುಂಟಾಗುತ್ತವೆ. ಈ ಎರಡೂ ಭೌತ ರಾಸಾಯನಿಕ ಲಕ್ಷಣಗಳು, ಪ್ರಕೃತಿಸತ್ವದ ಎರಡು ಬೇರೆ ಬೇರೆ ರೂಪಗಳು, ಶಕ್ತಿಗಳು, ಧಾತುಗಳು, ಪರಿಣಾಮಗಳು.

ಈ  ಮಾರ್ಗವನ್ನೆ ವಿಧಾನವನ್ನೇ ಬಳಸಿಕೊಂಡು ಸಸ್ಯವರ್ಗಕ್ಕೆ, ಪ್ರಾಣಿವರ್ಗಕ್ಕೆ ವಿಜ್ಞಾನವನ್ನು ತಂದಾಗ, ಅಲ್ಲಿ ನಮಗೆ ಬೆಳವಣಿಗೆ ರೂಪದ ಮಾರ್ಪಾಡು ಕಾಣುತ್ತದೆ. ಹುಟ್ಟಿನಿಂದ ಹಿಡಿದು ಬೆಳೆ, ಕ್ಷೀಣತೆ, ಸಾವು ಕ್ರಮದಲ್ಲಿ ಬಗೆಬಗೆಯಾದವು ಮಾರ್ಪಾಡು. ಆದರೆ ಇಲ್ಲಿನ ವರ್ಗೀಕರಣ ಬೇರೆ. ಮೂಲವಂಶ, ಉಪಶಾಖೆ ಮುಂತಾದವುಗಳ ಪ್ರಭಾವ ಇರುತ್ತದೆ. ಇವಕ್ಕೆ ಪೀಡೆ ಚೇಡೆ ರೋಗ ತಗಲುತ್ತದೆ. ಇವುಗಳನ್ನು ಕಸಿ ಮಾಡಬಹುದು ರೂಪಾಂತರ ಮಾಡಬಹುದು; ವರ್ಗಾಂತರವನ್ನು ಮಿತಿಯಲ್ಲಿ ಮಾಡಬಹುದು; ಒಂದು ತಳಿಯಿಂದ ಮತ್ತೊಂದನ್ನು ಉತ್ಪತ್ತಿ ಮಾಡಬಹುದು. ಒಂದರಲ್ಲಿ ರಸ, ಇನ್ನೊಂದರಲ್ಲಿ ರಕ್ತ. ಅಂಗರಚನೆ ಬೇರೆ ಬೇರೆಯಾಗುತ್ತವೆ. ಕೆಲವು ನೇರ ಬೆಳೆಯುವುವು, ಕೆಲವು ಹರಡುವುವು. ಗೆಡ್ಡೆ ಹಣ್ಣು ಹೂ ಬಿತ್ತ ಮರ. ಪೋಷಣೆ ಫಲಸಾರ ದ್ರವ್ಯಗಳ ಬಳಕೆ ಎರಡರಲ್ಲಿಯೂ ಅನೇಕ ಬಗೆಯ ಫಲಗಳನ್ನು ತಂದು ಕೊಡಬಲ್ಲುದು. ಸಾವಿರಾರು ರೀತಿಯ ಮನುಷ್ಯನ ಬಳಕೆಗೆ ಇವೂ ಒದಗುತ್ತವೆ. ಸಸ್ಯಗಳಿಗೆ ಜೀವವಿದೆಯೆ ಇಲ್ಲವೆ, ಪ್ರಜ್ಞೆ ಉಂಟೆ?–ಎಂಬ ಅಂಶದಲ್ಲಿ ಬೇಕಾದಷ್ಟು ಪರೀಕ್ಷಣಗಳು ನಡೆದು ಅವನ್ನು ಅಳೆದಿದ್ದಾರೆ. ಪ್ರಾಣಿಗಳಲ್ಲಿ ಅತಿಸೂಕ್ಷ್ಮವಾದ ಇದು ಜೀವ ಹೌದೊ ಅಲ್ಲವೊ ಎಂದು ಅನಿಶ್ಚಯ ಪಡುವ ಜಾತಿವರ್ಗಗಳಿಂದ ಹಿಡಿದು,



ಸ್ವಂತವಾಗಿ ಕೈಕಾಲು ರೆಕ್ಕೆ ಕಣ್ಣು ಚಲನೆ ಉಂಟುಮಾಡಿಕೊಂಡು ಮಾಂಸಖಂಡಗಳನ್ನೊ ನರಮಂಡಲಗಳನ್ನೊ ಬಳಸಿಕೊಂಡು ಕ್ರೂರವಾಗಿಯೋ ಸಾಧುವಾಗಿಯೊ ನಡೆವ ಸರ್ವ ಪಕ್ಷಿ ಪ್ರಾಣಿವರ್ಗಗಳುಂಟು. ಇವುಗಳಲ್ಲಿ ಗಂಡು ಹೆಣ್ಣಿನ ಕೂಟ ಸೃಷ್ಟ. ಅಲ್ಲಿ ಆಯ್ಕೆ ಉಂಟು;  ಭಕ್ತಿ, ಸ್ಪರ್ಧೆ ಉಂಟು. ತಂಡ ಜೀವನವುಂಟು; ವಾತ್ಸಲ್ಯ ಉಂಟು, ವಿರೋಧಗಳುಂಟು. ಕೆಲವಕ್ಕೆ ಭಾಷೆಗಳಿರುವಂತೆ ಕಾಣುತ್ತವೆ; ಕೂಗುಗಳು–ಭಯವನ್ನು ಕಾಣಿಸುವ, ಪ್ರೀತಿಯನ್ನು ತೋರಿಸುವ, ಓಡುವ, ಎದುರಿಸಿ ನಿಲ್ಲುವ, ಗರ್ಜನೆ ನೋವಿನ ಕೂಗು ಉಂಟು. ಗೂಡು ವಸತಿಗಳನ್ನು ಕಟ್ಟಿಕೊಂಡು ದಾಂಪತ್ಯವನ್ನೊ ಮಕ್ಕಳು ಮರಿ ರಕ್ಷಣೆ ಮಾಡುವುದೊ ಕ್ರಮಗಳುಂಟು. ಬೇಟೆ–ಬೇಟ ಎರಡೂ ಉಂಟು. ಗಂಡು ಹೆಣ್ಣು ಕೂಡಿ ಮರಿ, ಮಗು ಪಾಲಿಸುವ ವಿಧಾನವುಂಟು. ಪಕ್ಷಿಗಳಲ್ಲಿ ಪ್ರಾಣಿಗಳಲ್ಲಿ ಅಭ್ಯಾಸಗಳನ್ನು ಬೆಳಸಬಹುದು. ಮಾತನಾಡಲು, ಕಾಳಗ ಮಾಡಲು ಕಲಿಸಬಹುದು. ಗಿಳಿ ಕಲಿಯುತ್ತದೆ. ಸುದ್ದಿಗಳನ್ನು ಪಾರಿವಾಳವೊ ಡೇಗೆಯೊ ನಾಯಿಯೊ ಕೊಂಡು ಹೋಗುತ್ತವೆ. ಸಾಕುವವರನ್ನು ಕುರಿತು ಪ್ರೀತಿ ಭಕ್ತಿ ನಿಷ್ಠೆ ಉಂಟು. ಇನ್ನು ಕೆಲವು ಪ್ರಾಣಿಗಳಲ್ಲಿ ಈ ಪ್ರಜ್ಞಾಕಾಂಡದ ಜೊತೆಗೆ ಆಲೋಚನಾಶಕ್ತಿ ಇದೆಯೊ ಎಂಬಷ್ಟು ಮಟ್ಟಿಗೆ ನಡವಳಿಕೆಗಳುಂಟು. ಸಸ್ಯಾಹಾರಿ ಮಾಂಸಾಹಾರಿ ಜೀವಗಳುಂಟು; ತಮ್ಮ ಕಾಲದವರನ್ನು ತಿನ್ನುವ ಮೀನಿನ ಜಾತಿ ಉಂಟು. ಇಂಥಲ್ಲೆಲ್ಲ ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ ಎಂಬ ಜೀವ ವಿಜ್ಞಾನಕ್ಕೆ ಸಂಬಂಧಿಸಿದ ಪರೀಕ್ಷಣ, ಪ್ರಯೋಗ ಬೇರೆ ರೀತಿಯಲ್ಲಿ ನಡೆಯುತ್ತದೆ. ಇಲ್ಲಿಯೂ ಅಷ್ಟೇ: ಮೂಲಸ್ಥಿತಿಯಲ್ಲಿ ಹೇಗೆ? ಸಾಕಿದಾಗ ಹೇಗೆ? ಶಾಂತಿ ಅಥವಾ ನಿದ್ರೆಯಲ್ಲಿ ಹೇಗೆ? ಹುಟ್ಟು ಬೆಳವಣಿಗೆಯಲ್ಲಿ ಹೇಗೆ? ನಡವಳಿಕೆಯಲ್ಲಿ ಹೇಗೆ? ಉದ್ರೇಕದಲ್ಲಿ ಹೇಗೆ?–ಎಂಬುದನ್ನೆಲ್ಲ ಪರೀಕ್ಷೆ ಮಾಡಿದ್ದಾರೆ. ಪ್ರಾಕೃತಿಕ ಸ್ವಭಾವ ತಮ್ಮ ತಮ್ಮ ತವರಿನಲ್ಲಿ ಹೇಗಿರುತ್ತವೆ; ಮನುಷ್ಯ ಸಂಪರ್ಕವೋ, ಅನ್ಯಸಂಪರ್ಕವೋ ಬಂದಾಗ ಹೇಗೆ ನಡೆದುಕೊಳ್ಳುತ್ತವೆ? ಪ್ರಕೃತಿಯ ಯಾವ ಯಾವ ಧಾತುವಿಗೆ ಹೇಗೆ ಹೇಗೆ ಕ್ರಿಯೆ ಪ್ರತಿಕ್ರಿಯೆಗಳಿಗೆ ಮಿಡಿಯುತ್ತವೆ? ಶತ್ರುಗಳಿಂದ ರಕ್ಷಿಸಿಕೊಳ್ಳಲು (protective efforts) ಹೇಗೆ ಬಣ್ಣ, ರೀತಿ, ಆಕೃತಿ, ನಿಲವು, ವೇಗ, ಕಲ್ಪಿಸಿಕೊಳ್ಳುತ್ತವೆ? ದೇಹದ ಸಂಕೋಚ ವಿಕೋಚಗಳನ್ನು ಓಟ, ನೆಗೆತ, ವೇಗ, ಕಣ್ಣಿನ ಶಕ್ತಿ, ಯಾವುದೊ ದ್ರಾವಣಗಳಂಥವನ್ನು ಬಳಸಿ ತಮ್ಮ ಆಹಾರವನ್ನು ಆಕರ್ಷಿಸಿಕೊಳ್ಳುವ ಶಕ್ತಿ ಪಡೆದು ಅವನ್ನು ಬಳಸುತ್ತವೆ. ಜಲಚರ ಭೂಚರ ಪ್ರಾಣಿಗಳುಂಟು. ಕೆಲವು ನೆಲ ಮುಟ್ಟಿದ ಕೂಡಲೇ ಬದುಕುವ ಶಕ್ತಿ ಕಳೆದುಕೊಳ್ಳುತ್ತವೆ.

**–13–**

ಮನುಷ್ಯನು ಹುಟ್ಟಿದಂದಿನಿಂದ ಜೀವವಿಕಸನದಲ್ಲಿ ಗಳಿಸಿಕೊಂಡ ಎಲ್ಲ ಶಕ್ತಿಗಳನ್ನೂ ಪಡೆದು ಈ ಎಲ್ಲದರ ಮೇಲೂ ತನ್ನ ಆಧಿಪತ್ಯವನ್ನು ಸ್ಥಾಪಿಸಿಕೊಳ್ಳಬಯಸುತ್ತಾನೆ. ಸುತ್ತಲ ಪ್ರಪಂಚದ ಅರಿವನ್ನು ಸಂಗ್ರಹಿಸಿ ಪದಾರ್ಥದ ಗುಣಕರ್ಮಗಳನ್ನು ತನ್ನ ಪ್ರಯೋಜನಕ್ಕೂ ಸುಖಕ್ಕೂ  ರಕ್ಷಣೆಗೂ ಅನುಕೂಲವಾಗುವಂತೆ ದುಡಿಸಿಕೊಳ್ಳುತ್ತಾ

ತನ್ನನ್ನು ಉಳಿಸಿಕೊಳ್ಳುತ್ತಾನೆ, ತನಗೆ ಬೇಕಾದ್ದನ್ನು ಕೂಡಿಸಿಕೊಳ್ಳುತ್ತಾನೆ, ಬೆಳಸಿಕೊಳ್ಳುತ್ತಾನೆ, ಮಾಡಿಕೊಳ್ಳುತ್ತಾನೆ. ತನ್ನಂತಿರುವವರ, ತನಗೆ ಬೇಕಾದವರ, ತನ್ನ ಹತ್ತಿರದ ಸಂಬಂಧದವರ ಪಂಗಡಗಳನ್ನು ನಿರ್ಮಿಸಿಕೊಂಡು ಸ್ವಾಸ್ಥ್ಯ ಶಕ್ತಿಗಳಿಗಾಗಿ ಸಮಾಜ ಕಟ್ಟಿಕೊಳ್ಳುತ್ತಾನೆ. ಅದರ ಏಳಿಗೆಗಾಗಿ ಬೇಕಾದ ನೇಮಗಳನ್ನೂ ವಿಧಿ ನಿಷೇಧಗಳನ್ನೂ ರಚಿಸಿಕೊಳ್ಳುತ್ತಾನೆ. ಒಟ್ಟು ಹಿತಕ್ಕಾಗಿ ಸ್ವಂತ ಪ್ರಯೋಜನಗಳಿಗೆ ಮಿತಿ ಹಾಕಿಕೊಳ್ಳುತ್ತಾನೆ. ಅದರ ಬುದ್ಧಿಶಕ್ತಿ ಕಾರ್ಯಶಕ್ತಿ ಬೆಳೆವಂತೆ ಶಿಕ್ಷಣ ಸಂಸ್ಕರಣ ವಿಧಾನಗಳನ್ನು ಕಂಡುಕೊಳ್ಳುತ್ತಾನೆ. ಇಲ್ಲಿಯವರೆಗೂ ತಿಳಿದುದನ್ನು ಸಂಗ್ರಹಿಸಿ ಸಂಯೋಜಿಸಿ ಒಂದು ಕ್ರಮದಲ್ಲಿ ಬರೆದಿಟ್ಟುಕೊಳ್ಳುತ್ತಾನೆ, ಪ್ರಚಾರ ಮಾಡುತ್ತಾನೆ. ಮೌಲ್ಯಗಳಲ್ಲಿ ಯಾವುದು ಸಹಾಯಕ, ಯಾವುದು ವಿರುದ್ಧ, ಗುರಿಗಳೇನು ಮತ್ತು ಇವನು ಒಪ್ಪುವ ವಿಧಾನಗಳು ಯಾವುವು, ಹೆಚ್ಚು ಪ್ರಯೋಜನ ಯಾವುದು, ಕಡಮೆ ನಷ್ಟ ಯಾವುದು ಎಂಬುದನ್ನು ನಿರ್ಣಯಿಸಿಕೊಂಡು ಆ ರೀತಿಯ ಶಾಸ್ತ್ರಗಳನ್ನು, ವ್ಯವಸ್ಥೆಗಳನ್ನು, ಶಕ್ತಿ ಮಂಡಲಗಳನ್ನು ವಿರಚಿಸಿಕೊಳ್ಳುತ್ತಾನೆ. ಇಲ್ಲಿ ಅನೇಕ ವೇಳೆ ಮನುಷ್ಯನ ಬುದ್ಧಿಯ ಜೊತೆಗೆ ವ್ಯವಸ್ಥಾಪನ ಶಕ್ತಿ ಸೇರುತ್ತದೆ. ಇವನ ವಿನೋದ, ಸಂತೋಷ ಬೆಳೆಯುವಂತೆ ಕಲೆ ಕುಶಲಕರ್ಮ ಜೀವನದ ಸಂತೋಷಕ್ಕೂ ಉತ್ಸಾಹಕ್ಕೂ ಹರ್ಷ ಉಂಟಾಗುವಂತೆ ಏರ್ಪಡಿಸುತ್ತಾನೆ. ಈ ಪ್ರಪಂಚದಲ್ಲಿಯೂ ಬುದ್ಧಿ ಕಲ್ಪನೆ, ವ್ಯವಸ್ಥಾಶಕ್ತಿ, ಕ್ರಿಯಾಕೌಶಲ, ವಸ್ತುರೂಪದ ಮತ್ತು ಮಾನವ ಸ್ವಭಾವದ ಅನುಭವ ಇವನಿಗೆ ನೆರವಾಗುತ್ತದೆ. ಲೋಕವೆಲ್ಲ ತನಗಾಗಿದೆ; ತಾನು ಎಲ್ಲವನ್ನೂ ತನ್ನ ಏಳ್ಗೆ ಪ್ರಯೋಜನಗಳಿಗಾಗಿ ದುಡಿಸಿಕೊಳ್ಳಬಲ್ಲವ, ಅದೇ ಭಗವಂತನ ಏರ್ಪಾಡು ಎಂದು ಕಲ್ಪಿಸಿಕೊಳ್ಳುತ್ತಾನೆ.

ಒಬ್ಬನೇ ಎಲ್ಲಿಯೋ ವಾಸಮಾಡಬೇಕಾಗಿದ್ದರೆ ಬೇಕಾದ ಧಾರಾಳ, ಸ್ವಾತಂತ್ರ್ಯ ಇರುತ್ತಿತ್ತು, ಇನ್ನೊಬ್ಬನೊಡನೆ ನಡೆಯಬೇಕಾಗಿರುವಾಗ ಕ್ರಮ ವ್ಯವಸ್ಥೆ ಒಡಂಬಡಿಕೆ ಬೇಕಾಗುತ್ತವೆ; ಸರಿತಪ್ಪು, ಮೇಲು ಬೀಳುಗಳ ವಿಚಕ್ಷಣೆಯನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಇತರರ ಪರವಾಗಿ ತಾನೊಂದು ರೀತಿ ನಡೆದು, ಬೇರೆಯವರು ತನ್ನ ಪರವಾಗಿ ನಡೆದು, ಈ ಎಲ್ಲರೂ ಪರಸ್ಪರವಾಗಿ ಸರಿಯಾಗಿ ನಡೆದು, ಸಮಾಜದ ಮತ್ತು ವ್ಯವಹಾರದ ಶಾಂತಿ, ಸುರಕ್ಷಣೆ, ಶಕ್ತಿ, ಉತ್ಸಾಹ ಬೆಳೆಯುವ ಮಾರ್ಗಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಇಲ್ಲಿ ಒಂದು ನೆಲೆಯಲ್ಲಿ ನಡೆ–ನಡವಳಿಕೆ–ನೀತಿ ಹುಟ್ಟಿಕೊಳ್ಳುತ್ತದೆ. ಸಮಾಜಸಂಪರ್ಕ ಇಲ್ಲದಿದ್ದರೆ ಈ ನೀತಿಗೆ ನೆಲಗಟ್ಟೇ ಅಗತ್ಯವೇ ಇರುತ್ತಿರಲಿಲ್ಲ. ನೀತಿಯ ಆಳದಲ್ಲಿ ಸಮಷ್ಟಿಯ ಯೋಗಕ್ಷೇಮ ಇರುತ್ತದೆ. ಹೊಣೆಗಾರಿಕೆಗಳು ಹುಟ್ಟಿಕೊಳ್ಳುತ್ತವೆ. ಹಕ್ಕು ಅಧಿಕಾರ ಮಿತಿ ಮರ್ಯಾದೆ ಹುಟ್ಟಿಕೊಳ್ಳುತ್ತವೆ. ಸ್ವಾರ್ಥ, ಪರಾರ್ಥಗಳ ತಿಳಿವು, ಸ್ವಾರ್ಥವನ್ನು ಹತ್ತು ಜನರ ಹಿತಕ್ಕೆ ಹೊಂದಿಸಿ ನಡೆಯಬೇಕು ಎಂಬ ಆಲೋಚನೆ ಬಂದು ನೀತಿ ತತ್ವಗಳು ಬಲಿಯುತ್ತವೆ. ಒಂದೊಂದು ದೇಶದಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ಬಗೆಯ ನೀತಿ ಅನುಷ್ಠಾನ ಬೆಳೆಯುತ್ತದೆ.



ಅದರ ವ್ಯವಹಾರಕ್ಕಾಗಿ ಸೂತ್ರಗಳು; ಅವನ್ನು ವ್ಯವಸ್ಥೆಗೊಳಿಸುವ ಅಧಿಕಾರ ಮಂಡಲ, ನಿರ್ಣಯ ವಿಧಾನ ಏರ್ಪಡುತ್ತದೆ. ಇನ್ನೊಂದರ ಸಂಪರ್ಕ ಅಥವಾ ಪರಿಚಯ ಇಲ್ಲದವರೆಗೂ ತನ್ನದೊಂದೇ ಸರಿ, ತನ್ನದೊಂದೇ ರೀತಿ ಎಂಬ ಕಲ್ಪನೆ ಇದ್ದದ್ದು ಹತ್ತು ಬೇರೆ ಬೇರೆ ಜನವರ್ಗಗಳ ರೀತಿ ನೀತಿಗಳ ಸಂಪರ್ಕ ಬೆಳೆದ ಹಾಗೆಲ್ಲಾ ಇದರ ಪ್ರಪಂಚವೇ ವಿಸ್ತಾರವಾಗುತ್ತದೆ. ಅದನ್ನು ಸಹಿಸಿಕೊಳ್ಳದಿದ್ದರೆ ಕೋಟಲೆ. ಅಲ್ಲದೆಯೊ ತನ್ನದೊಂದೇ ಸರಿ, ಇನ್ನೊಬ್ಬರದು ಅಲ್ಲ; ಏಕೆ, ಹೇಗೆ ಎಂಬ ಚಿಂತನ ಆರಂಭವಾಗುತ್ತದೆ. ಒಂದು ನೆಲೆಯಲ್ಲಿ ಮುಂದಕ್ಕೆ ಹೋಗಿ ಆಲೋಚಿಸುವವನ ಮನಸ್ಸಿನಲ್ಲಿ 'ಮಾನವ ಕುಲಮೆಲ್ಲಂ ಒಂದೆ ವಲಂ' ಎಂಬ ಭಾವನೆ ಬಂದು, ಇದನ್ನು ಏಕೆ ಮಾನ್ಯ ಮಾಡಬೇಕು ಎಂಬ ಯೋಚನೆ ಬರುತ್ತದೆ. ಎಲ್ಲರೂ ಮಾನವರು ಎಂಬ ಕಾರಣದಿಂದಲೆ? ಅಥವಾ, ಇನ್ನಾವುದಾದರೂ ಕಾರಣದಿಂದಲೆ?– ಎಂಬ ಯೋಚನೆ ಹುಟ್ಟುತ್ತದೆ. ಸೋದರಿಕೆ, ಸೌಹಾರ್ದ, ಸಮಾನತೆ, ನ್ಯಾಯ, ಧರ್ಮ ಎಂಬ ಮಾತುಗಳಿಗೆ ಈ ನೆಲಸಿನಲ್ಲಿ ಬೆಲೆ ಬರುತ್ತದೆ. ಇಂಥ ಸಂದರ್ಭದಲ್ಲಿಯೂ ವ್ಯಕ್ತಿಯ ಅಥವಾ ಜನವರ್ಗಗಳ ಸ್ವಾರ್ಥ ಅಥವಾ ಅಹಂಕಾರ, ಪ್ರಭಾವಾಕಾಂಕ್ಷೆ ಹಲವು ಕಾಲ ಜನಗಳಲ್ಲಿ ಕೋಟಲೆಗಳನ್ನು ಉಂಟುಮಾಡೀತಾದರೂ ಭಾವದಲ್ಲಿ, ಉಚ್ಚತರ ಮೌಲ್ಯಗಳ ನಿರ್ಣಯದಲ್ಲಿ ಸರ್ವಸಮದೃಷ್ಟಿ, ನ್ಯಾಯ ದೊಡ್ಡದಾಗಬೇಕೆಂದು ಆಲೋಚನೆ ಬೆಳೆಯುವುದು ಮಾರ್ಗವಾಗುತ್ತದೆ. ನೀತಿಗೆ ಮೂಲ ಧರ್ಮ. ನೀತಿ ನೀತಿಯಾಗುವುದು ಈ ಗುಣದಿಂದ, ಧರ್ಮ ಧರ್ಮವಾಗುವುದು ಈ ಕಾರಣದಿಂದ ಎಂಬ ಎಣಿಕೆಗೆ ಆಶ್ರಯ ದೊರೆಯುತ್ತದೆ.

ಇಂಥಲ್ಲಿ ಈ ಎಲ್ಲಕ್ಕೂ ಮೇಲ್ಪಟ್ಟ ಒಂದು ಶಕ್ತಿಮೂಲ ಯಾವುದೊ ಇರುವುದರಿಂದಲೇ ಈ ಲೋಕ ಹೀಗಿರುವುದು, ಆಗಿರುವುದು; ಅದು ತಾಯಿ–ತಂದೆಯ ಹಾಗೆ, ರಾಜನ ಹಾಗೆ, ಅಧಿಕಾರಿಯ ಹಾಗೆ, ರಕ್ಷಕ–ಪೋಷಕನ ಹಾಗೆ ಎಂಬ ಭಾವ ಬಂದು, ಮನುಷ್ಯನ ರೂಪದಲ್ಲಿಯೇ ಆ ಶಕ್ತಿಯನ್ನು ಭಾವಿಸಿ, ಮನುಷ್ಯರಿಗೆ ಇರುವ ಎಲ್ಲವೂ ಅಲ್ಲಿಂದ ಬಂದುದು; ಅದರಲ್ಲಿ ಅವಗುಣಗಳಿರಲಾರವು; ಅವು ಗುಣಪೂರ್ಣವಾದ ಶಕ್ತಿ; ಸಮಸ್ತ ಬಲವುಳ್ಳದ್ದು, ಸಮಸ್ತ ಜ್ಞಾನವುಳ್ಳದ್ದು; ಎಲ್ಲವನ್ನೂ ನಿಯಾಮಿಸುವ, ಬೇಕೆಂದರೆ ನಾಶ ಮಾಡುವ ಅಥವಾ ಉದ್ಧಾರ ಮಾಡುವ ಶಕ್ತಿ; ಉಳಿದುದೆಲ್ಲ ಕ್ಷಣಿಕ, ನಶ್ವರ; ಅದು ಶಾಶ್ವತ, ನಿತ್ಯ; ಎಲ್ಲಕ್ಕೆ ಮುಂಚೆ ಅದಿತ್ತು, ಎಲ್ಲವೂ ನಡೆವಾಗ ಅದರೊಳಗೆ ನೆಲಸಿರುವ ಸಂಚಾರೀ ಅಥವಾ ಚಾಲಕಶಕ್ತಿ; ಎಲ್ಲವೂ ಮುಗಿದ ಮೇಲೆ ಉಳಿವ ಶಕ್ತಿ–ಎಂಬ ಭಾವನೆ ಪ್ರಪಂಚ ಹುಟ್ಟಿದ ಕಾಲದಿಂದ ಬೇರೆ ಬೇರೆ ರೀತಿಯಲ್ಲಿ ಪ್ರಬಲಿಸಿದೆ. ಅಲ್ಲದೆ ಎಷ್ಟು ದೊಡ್ಡದು, ಗಹನ ಈ ಪ್ರಪಂಚ, ಇಲ್ಲಿ ನಡೆವ ಪ್ರಾಕೃತಿಕ ಕ್ರಿಯೆಗಳು, ಸೂಕ್ಷ್ಮಗಳು ಎಂದು ವಿಸ್ಮಯ ಹುಟ್ಟುತ್ತದೆ. ಇದರ ರಹಸ್ಯವೇನು ಎಂಬ ಚಿಂತನೆ ಕುತೂಹಲ ಹುಟ್ಟಿಕೊಂಡೇ ಬರುತ್ತದೆ.

ಯಾವಾಗ ಇಂಥ ಒಂದು ಭಾವನೆ ಬಂದಿತೊ ಆಗಿಂದ ಅದನ್ನು ಒಲಿಸಿಕೊಳ್ಳಬೇಕು, ಆರಾಧಿಸಬೇಕು ಅಥವಾ ಪೂಜಿಸಬೇಕು; ಅದು ಪರಮೋಚ್ಚ, ಪರಮ ಶುಚಿ ಕಾರ್ಯ, ಅದಕ್ಕಾಗಿ ಮೀಸಲು ಮಾಡಿಕೊಳ್ಳಬೇಕು; ಅದಕ್ಕೆ ತಕ್ಕ ಆಕೃತಿ, ವೇಷ, ಮಾತು ಆಚಾರ, ಪ್ರಾರ್ಥನೆ, ನಡತೆ ಸ್ಥಾಪಿಸಿಕೊಳ್ಳಬೇಕು; ಅದು ಪುಣ್ಯ, ಇತರ ಎಲ್ಲ ಕಾಯಕಗಳಿಗಿಂತ ಅದು ಮೇಲ್ಮಟ್ಟದ್ದು, ಅಷ್ಟೇ ಏಕೆ, ಉಳಿದೆಲ್ಲವೂ ಅದಕ್ಕೆ ತಗ್ಗಿ ಬಗ್ಗಿ ಒಪ್ಪಿಕೊಂಡು ನಡೆಯಬೇಕು ಎಂಬ ಭಾವನೆ ಬಂದು, ಪುಣ್ಯ–ಪಾಪ ಭಾವನೆಗಳೂ ಕಲ್ಪನೆಗಳೂ ಹುಟ್ಟಿಕೊಂಡು ಬಂದಿವೆ. ಅನೇಕ ವೇಳೆ ಇದು ಭಕ್ತಿಯ ಪ್ರಪಂಚ: ವಿಧೇಯತೆಯ ಪ್ರಪಂಚ. ಒಲಿಸಿಕೊಳ್ಳಬೇಕು ಎಂದಾಗ ತಗ್ಗಿ ಪ್ರೀತಿಯಿಂದ ನಡೆಯಬೇಕು. ದುರ್ನಯವೆಂದುಕೊಂಡಾಗ ಅದರ ಭಯವಿಟ್ಟು ಕೊಳ್ಳಬೇಕು. ಅದಕ್ಕೆ ದುಷ್ಟಶಿಕ್ಷಣ, ಶಿಷ್ಟಪರಿಪಾಲನ ಶಕ್ತಿ ಇರುವುದರಿಂದ ಅದಕ್ಕೆ ಹೆದರಿ ನಡೆಯಬೇಕು. ಶಿಷ್ಟರಿಗೆ ಸ್ವರ್ಗ, ದುಷ್ಟರಿಗೆ ನರಕ. ಆ ಶಕ್ತಿಗೆ ನೆರವಾಗಿ ನಡೆಯುವ, ಅದು ನೇಮಿಸುವ ಒಂದು ಬಗೆಯ ಅಧಿಕಾರವರ್ಗ ಮುಂತಾದ ಭಾವನೆಗಳು ಹುಟ್ಟಿಕೊಂಡು ಪ್ರಪಂಚದ ಮತ್ತು ಲೋಕಜೀವನದ ಉಳಿದೆಲ್ಲವೂ ಅದಕ್ಕೆ ಗೌರವ, ಪರಮ ಪ್ರಾಶಸ್ತ್ಯ ಕೊಡಬೇಕು ಎಂಬ ಅಭಿಪ್ರಾಯ, ನಡವಳಿಕೆ ಪ್ರಪಂಚದಲ್ಲಿ ಹುಟ್ಟಿವೆ.

ಭೌತಿಕ ಪ್ರಪಂಚದಲ್ಲಿ ಒಂದು ತೀರ್ಮಾನ–ಸರಿ, ಅಲ್ಲ–ಎಂಬುದು ಮಾತ್ರವಿತ್ತು. ಸಸ್ಯ ಜೀವನ, ಪ್ರಾಣಿ ಜೀವನದಲ್ಲಿ ಸಾಧು–ಕ್ರೂರ ಎಂಬುದನ್ನು ಆ ಗುಣ, ಬೆಲೆ, ವಿವೇಚನೆ ಮಾಡುವ ಮನುಷ್ಯನು ಹೇಳಬೇಕೇ ಹೊರತು, ಅಲ್ಲಿನ ಜೀವನದಲ್ಲಿ ಇಂಥ ಬೆಲೆಗಳ ಪ್ರಭಾವ ಇರುವ ಹಾಗೆ ಅದಕ್ಕೆ ತಿಳಿದಂತೆ ಕಾಣದು. ಪ್ರೀತಿ ಇದೆ, ಸ್ನೇಹ ಇದೆ; ಸಾಕಿದವನು ನಾಯಕ, ಒಡೆಯ ಎಂಬ ವಿವಕ್ಷೆ ಇದೆ; ತನ್ನ ಗುಂಪು, ಅನ್ಯ ಎಂಬ ಕಲ್ಪನೆ ಇದೆ; ತನ್ನ ಕಾಡು, ನೆಲಸು–ಇನ್ನೊಬ್ಬರದ್ದು, ತನ್ನದಕ್ಕೆ ಇತರರ ಪ್ರವೇಶ ಸಲ್ಲದು ಎಂಬ ಭಾವನೆ ಇದೆ. ಇವೆಲ್ಲ ಪ್ರಕೃತಿಯ ಲಕ್ಷಣ; instinct. ಇಷ್ಟೇ ಹೊರತು ಇದಕ್ಕೆ ಹೆಚ್ಚಿನ ಒಂದು ಪ್ರಾಕೃತಿಕ ನೀತಿ ಅಲ್ಲಿ ಆಳುತ್ತದೆಯೊ ಇಲ್ಲವೊ. ಮನುಷ್ಯನಲ್ಲಿ ಇವೆಲ್ಲ ಇವೆ. ಸರಿ–ತಪ್ಪು ಎಂಬ ವಿವೇಚನೆ ಇದೆ; ಜೊತೆಗೆ ನಿಜ–ಸುಳ್ಳು ಎಂಬ ವಿವೇಚನೆ ಮಾಡುವ ಶಕ್ತಿ ಇರುತ್ತದೆ; ನ್ಯಾಯ–ಅನ್ಯಾಯ ಎಂಬ ಕಲ್ಪನೆ ಇದೆ; ಮಾತು, ಮನಸ್ಸು, ಕ್ರಿಯೆ ಇವೆ. ಧರ್ಮ, ನೀತಿ, ಆಚಾರ, ಪ್ರಯೋಜನ ಎಂಬ ಮಟ್ಟಗಳಿವೆ. ಇವೆಲ್ಲ ಎಲ್ಲಕ್ಕಿಂತ ಮೇಲ್ಪಟ್ಟದ್ದು; ಮರ್ಯಾದೆ ಕೊಟ್ಟು ಪಡೆಯಬೇಕು ಎಂಬ ಸಂಯಮ, ಸ್ವನಿಯಮನ ಮಿತಿಗಳ ಅರಿವು–ಇವನ್ನೆಲ್ಲಾ ವಿವೇಚಿಸಿ ತಿಳಿಯುವ, ತಿಳಿಸುವ ಬುದ್ಧಿ ಇರುತ್ತವೆ. ಇದಕ್ಕಿಂತ ಮೇಲಿನದೆನ್ನುವ – ಮೇಲು, ತಳ ಎಂಬುದು ಸಂಕೇತ ಮಾತ್ರ – ವಿವೇಚನೆಯಲ್ಲಿ ಈ ಪುಣ್ಯ–ಪಾಪಗಳ, ಶುದ್ಧಿ–ಪವಿತ್ರತೆ–ಅಪವಿತ್ರತೆಗಳ ಭಾವನೆ ಬರುತ್ತದೆ. ಮಾನವ ವಿಷಯದಲ್ಲಿ ಸಮಾಜಕ್ಕೆ ದ್ರೋಹ ಮಾಡಿದವನಿಗೆ ಸಮಾಜದ್ರೋಹಿ ಎಂಬ ಆಕ್ಷೇಪಣೆ ಎಲ್ಲಕ್ಕಿಂತ ದೊಡ್ಡದು. ರಾಜ್ಯಾಧಿಕಾರದ ಅಧಿಕಾರ ಪಡೆದೊ ಇಲ್ಲದೆಯೊ ಸಮಾಜದಲ್ಲಿ ನೆಲೆಯಿಲ್ಲದೆ



ಹೋಗಬೇಕಾಗುತ್ತದೆ. ಪ್ರಾಣ ತೆರಬೇಕಾದೀತು ಕೂಡ. ದೈವದ್ರೋಹವೆಂಬ ಮಾತು ಇನ್ನೊಂದು ಪ್ರಪಂಚ. ಪಾಪಕ್ಕೆ ಇಲ್ಲೇ ಶಿಕ್ಷೆಯಾಗಬಹುದು. 'ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೆ' ಎಂಬ ಮಾತುಂಟು. ಇಲ್ಲಿ ತಪ್ಪಿಸಿಕೊಂಡರೆ ಅಲ್ಲಿ ತಪ್ಪಿಸಿಕೊಂಡಾರೆ? ಪ್ರಭು ಒಳಗನ್ನು ನೋಡುತ್ತಿರುತ್ತಾನೆ; ಅಂತಃಕರಣಗಳನ್ನು ಪರೀಕ್ಷಿಸುತ್ತಾನೆ; ಕ್ರಿಯಾಪ್ರವೃತ್ತಿಗಳನ್ನು ಪರೀಕ್ಷಿಸುತ್ತಾನೆ. ಕಾರ್ಯದ ಹಿಂದೆ ಯೋಚನೆ, ಅದರ ಹಿಂದೆ ಇದನ್ನು ನಡಸಿದ ಪ್ರವೃತ್ತಿ ಇರುವಾಗ ಯಾರು ತಾನೆ ಆ ಪ್ರಭುವಿನ ಕಣ್ಣಿಂದ ತಪ್ಪಿಸಿಕೊಳ್ಳಲಾದೀತು? ಅವನ ಕಣ್ಣು ಎಂದಿಗೂ ತೆರೆದದ್ದೇ. ಅವನಿಗೆ ಎಲ್ಲ ಕೇಳುತ್ತದೆಂದು ನಂಬಿಕೆ. ಇದು ನೀತಿ, ಧರ್ಮ ಎಂಬ ಕಲ್ಪನೆಗಳು ಇನ್ನೊಂದು ಮಟ್ಟಕ್ಕೆ ಏರಿ ರೂಪಗೊಂಡ ವಿಧಾನ. ಅದು ಇದೆಯೊ ಇಲ್ಲವೊ, ಅಂಥ ಶಕ್ತಿಗುಣಗಳ ಪ್ರಕಾಶ ನಡೆಯುತ್ತದೆಯೊ ಇಲ್ಲವೊ. ಅದಕ್ಕೆ ದಯೆ ಕಾರುಣ್ಯ ಪ್ರೇಮ ಇವೆಯೊ ಇಲ್ಲವೊ, ಅದು ಸರ್ವಶಕ್ತವೊ ಅಲ್ಲವೊ. ಇದ್ದಿದ್ದರೆ, ಇಷ್ಟು ಅನ್ಯಾಯ ಏಕೆ? ಇಷ್ಟು ತಪ್ಪು ನಡತೆ, ದೌಷ್ಟ್ಯಗಳಿಗೆ, ದುರ್ಮಾರ್ಗಗಳಿಗೆ ಅವಕಾಶವೇಕೆ?– ಎಂಬ ಯೋಚನೆ, ಪ್ರಶ್ನೆ, ಸಂದೇಹ ಬರುವುದುಂಟು. ಒಂದು ಮತದಲ್ಲಿ ಸೃಷ್ಟಿ ಸಮಯದಲ್ಲಿಯೇ ಒಂದೊಂದರ ವಿಧಿ ಹೀಗೆ, ಇದು ಹಾಗೆ ಬರೆದಿತ್ತು; ಅದನ್ನು ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ, ಇನ್ನಷ್ಟು ಅದರದರ ಕರ್ಮ ಎಂಬ ಭಾವನೆ ಬೆಳೆಯಿತು. ಒಳ್ಳೆಯದಕ್ಕೆ ಕೆಟ್ಟುದಕ್ಕೆ, ಸುಗತಿಗೆ ದುರ್ಗತಿಗೆ, ಅರ್ಥ ಕಲ್ಪನೆಗೆ ಎಲ್ಲ ಮತಗಳಲ್ಲಿಯೂ ಈ ಭಾವನೆಗೆ ಅವಕಾಶವುಂಟು. ಕರ್ಮದಂತಹ ಫಲ ಅನುಭವಿಸಿಯೇ ತೀರಬೇಕಾದ್ದು; ಜನ್ಮ ಜನ್ಮಾಂತರಗಳುಂಟು; ಇದು ಶುದ್ಧಿಯಾಗುವವರೆಗೂ ವ್ಯಕ್ತಿಗೆ ಮುಕ್ತಿಯಿಲ್ಲ; ಒಂದು ಜನ್ಮದಲ್ಲಿ ಅಲ್ಲದಿದ್ದರೆ ಹೆಚ್ಚು ಜನ್ಮಗಳಲ್ಲಿ ತೀರಿಯೇ ತೀರುತ್ತದೆ–ಎಂಬ ಒಂದು ಭಾಗವಿದ್ದರೆ, ಇಂಥವರಿಗೆ ಗತಿಯೇ ಇಲ್ಲ, ಮುಕ್ತಿಯೇ ಇಲ್ಲ, ನಿತ್ಯ ನಾರಕಿಗಳು ಎಂಬ ಇನ್ನೊಂದು ಕಲ್ಪನೆಯಿರುತ್ತದೆ. ಈ ನಡುವೆ ಇನ್ನೆಷ್ಟೋ ವಿಧಾನಗಳಿವೆ.

ಇನ್ನೊಂದು ದೃಷ್ಟಿಯಲ್ಲಿ ಈ ದೇವರು ತಂದೆ, ತಾಯಿ; ಆದುದರಿಂದ ಪ್ರಪಂಚದ ಜನವರ್ಗವೆಲ್ಲ ಮಕ್ಕಳು; ಆದುದರಿಂದ ಸಮಾನರು.

ಮಾತಾ ಚ ಪಾರ್ವತೀ ದೇವಿ ಪಿತಾ ದೇವೋ ಮಹೇಶ್ವರಃ
ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಂ

ಆದುದರಿಂದ ನ್ಯಾಯ ಧರ್ಮಗಳು ಸರಿಯಾಗಿ ನಡೆಯಬೇಕು ಎಂಬ ಕಲ್ಪನೆ ಕೆಲವಲ್ಲಿ ಬೆಳೆಯುತ್ತದೆ. ಕೆಲವೇಳೆ ದೇವರ ಶಕ್ತಿ, ಮಾತು ಪ್ರವಾದಿಗಳ ಮೂಲಕವೊ ಅವತಾರಗಳ ಮೂಲಕವೊ ನಡೆಯುತ್ತದೆಂಬ ನಂಬಿಕೆ ಉಂಟು. ದೇವದೂತರು, ಚಾರಣವರ್ಗ, ಸಿದ್ಧರು, ತ್ರಿಕಾಲಜ್ಞಾನಿಗಳು ಲೋಕ ಕಲ್ಯಾಣಕ್ಕಾಗಿ ನಾನಾ ರೀತಿ ದೃಶ್ಯವಾಗಿ, ಅದೃಶ್ಯವಾಗಿ ಅನಂತಕಾಲವೂ ದುಡಿಯುವ ದೇವವರ್ಗ ಇದೆ. ಮನುಷ್ಯ ಜೀವನಕ್ಕೆ ಇವು ನೆರವಾಗುತ್ತವೆ ಎಂಬ ಭಾವನೆ ಬೆಳೆಯುವುದುಂಟು. ಕೆಲವಲ್ಲಿ

ದೈವೇಚ್ಛೆಗೆ ವಿರುದ್ಧವಾಗುವ ಶಕ್ತಿಗಳುಂಟು ಎಂಬ ಭಾವನೆ ಇರುತ್ತದೆ. ದುಷ್ಟವರ್ಗ ಪ್ರಬಲವಾಗುವ ಸಂಬಂಧದಲ್ಲಿ ಅದನ್ನು ದಮನ ಮಾಡಿ ನಾಶಮಾಡುವ ಆತ್ಮಬಂಧು, ಕಲ್ಯಾಣ ಮಿತ್ರ ಎಂಬ ಹೆಸರಿನ ವರ್ಗಗಳೂ, ಶಕ್ತಿಗಳೂ ಆಯುಧಗಳೂ ದೇವರ ಅಥವಾ ಪರಮ ಪ್ರಭುವಿನ ಕೈಯಲ್ಲಿ ವಜ್ರವೊ, ಚಕ್ರವೊ, ತ್ರಿಶೂಲವೊ ಆಗಿ ಕಲ್ಪಿತವಾಗುತ್ತವೆ. ಎಂದರೆ, ಯಾವುದಾದರೊಂದು ದೇವರ ಕಲ್ಪನೆಯ ಮೊದಲು ಅದರ ಅನಂತ ಶಕ್ತಿ, ಚಿದ್ವಿಲಾಸ, ಅದರ ಇಚ್ಛೆಯಿಂದ ಪ್ರಪಂಚ ನಿರ್ಮಾಣವಾಯಿತು; ಹೊರಗಿನಿಂದ ಆ ನಿರ್ಮ್ಮಾಣವಾದ ಪ್ರಪಂಚವನ್ನು ನೋಡುತ್ತಿದೆ/ನೋಡಿಕೊಳ್ಳುತ್ತಿದ್ದಾನೆ; ಅಥವಾ ತಾನೂ ಅದರೊಂದಿಗೆ ಸೇರಿ ಆ ಆಟದಲ್ಲಿ ಭಾಗವಹಿಸುತ್ತಿದ್ದಾನೆ ಎಂಬ ಕಲ್ಪನೆ; ಈ ಎಲ್ಲ ಆತನ ವಿಲಾಸವಾದ್ದರಿಂದ ಎಂದಿಗೆ ಆ ಖುಷಿ ಮುಗಿಯುತ್ತದೆಯೊ ಅಂದು ಈ ಆಟ ಮುಗಿಯುತ್ತದೆ; ಇದಕ್ಕೆ ಸಂಬಂಧಪಟ್ಟಂತೆ ಪುಣ್ಯ–ಪಾಪ, ಸರಿ–ತಪ್ಪು, ವಿಧೇಯತೆ, ಅಧಿಕಾರ, ವಾತ್ಸಲ್ಯ, ಸೇವೆ ಸಂಬಂಧಗಳು ಬೆಳೆವಂತೆ ನೋಡಿಕೊಳ್ಳುತ್ತಾನೆ; ಏನೋ ಹೇಗೋ ಇಲ್ಲಿನ ಧರ್ಮವನ್ನು ಕಾಪಾಡುವುದಕ್ಕೆ ಏರ್ಪಾಡು ಮಾಡುತ್ತಾನೆ – ಇತ್ಯಾದಿ ಭಾವನೆಗಳು ಮತದ ದೃಷ್ಟಿಯಲ್ಲಿ ಮೊದಲಾಗುತ್ತವೆ. ಇರುವ ಪ್ರಪಂಚ ಎಂದಾಗ ಪ್ರಕೃತಿ, ಮಾನವ ಪ್ರಪಂಚ ಎರಡೂ ಸೇರುತ್ತವೆ. ಪ್ರಕೃತಿಯಲ್ಲಿ ನಕ್ಷತ್ರ ವರ್ಗವೂ ಸೇರುತ್ತದೆ. ಎಂದರೆ ಈ ವಿಶ್ವವೆಲ್ಲ ನಮ್ಮವರು ಹೇಳುವ ಹಾಗೆ 'ಬ್ರಹ್ಮಾಂಡ'. ಇದಕ್ಕೆ ಹುಟ್ಟು, ಉಳಿವು, ಅಳಿವು ಉಂಟು. ಈ ಪ್ರಭು ಚೇತನದ ಸ್ವರೂಪದಲ್ಲಿ ಒಂದೊಂದು ಪ್ರದೇಶದಲ್ಲಿ, ಮತದಲ್ಲಿ ಒಂದೊಂದು ಗುಣಕ್ಕೆ ಹೆಚ್ಚು ಬೆಲೆ ಕಲ್ಪಿತವಾಗಿರುತ್ತದೆ. ಕೆಲವಲ್ಲಿ ನ್ಯಾಯ ನಿಷ್ಠೆ ಅಥವಾ ಧರ್ಮ; ಅಥವಾ 'My God is jealous God' –ಸತ್ಯ ನ್ಯಾಯಗಳಿಗೆ ಹೆಚ್ಚು ಬೆಲೆಕೊಡುವವ; ನಿಷ್ಠುರ; ಕೆಲವಲ್ಲಿ ಶುಚಿಗೆ ಭಕ್ತಿಗೆ ಒಲಿಯುವವನು; ಇನ್ನು ಕೆಲವಲ್ಲಿ ಕರುಣೆಯೊ ಪ್ರೀತಿಯೊ ಪರಮಲಕ್ಷಣ. ಹೀಗೆ ಅವನ ಸ್ವರೂಪವನ್ನು ಅರಿತುಕೊಂಡು ಪಡೆಯುವುದಕ್ಕೆ ಮಾರ್ಗಗಳು ಇಂಥವು; ಅವನಿಗೂ ಮನುಷ್ಯ ಜೀವಕ್ಕೂ ಅವನಿಗೂ ಪ್ರಕೃತಿಗೂ, ಪ್ರಕೃತಿಗೂ ಮಾನವ ಪ್ರಪಂಚಕ್ಕೂ ಇಂಥಿಂಥುದೇ ಸಂಬಂಧ; ಜೀವರ ನಡೆ, ಗುರಿ ತನ್ನತ್ತಲಿರಬೇಕು: ಇದಕ್ಕೆ ಯಾರು ಒಪ್ಪಿ ಈ ಪಂಥವನ್ನು ನಡಸುತ್ತಾರೆಯೊ – ಇವರು ಅವನ ಪ್ರೀತಿಯ ವರ್ಗ; ಎಲ್ಲರಿಗಿಂತ ಮೊದಲು, ಹೆಚ್ಚಾಗಿ ಇವರು ಅವನ ಆಯ್ದ ವರ್ಗ (chosen people); ಪ್ರೀತಿಗೆ ಉದ್ಧಾರಕ್ಕೆ ಮೊದಲು ಸಲ್ಲುವವರು; ಉಳಿದವರಿಗಿಂತ ಈ ಪಂಥದವರು ಮೇಲು ಎಂಬ ಭಾವನೆ ಇರುತ್ತದೆ.

ಇದು ಲೋಕದಲ್ಲಿ ಪ್ರತ್ಯೇಕತೆಗಳಿಗೆ ಕಾರಣ. ಇಂಥ ನಾಲ್ಕಾರು ವರ್ಗಗಳು ಹೀಗೆಯೇ ತಮ್ಮ ತಮ್ಮ ಪಂಥ ಮೇಲು ಎಂದು ತಿಳಿದುಕೊಂಡಾಗ, ವರ್ಗಗಳಿಗೆ ನಡುನಡುವೆ ಗೋಡೆ ಕಟ್ಟಿದಂತಾಗಿ ಸಂಪರ್ಕ ಕಡಮೆಯಾಗುತ್ತದೆ. ಕೆಲವೇಳೆ ವಿರಸ,



ವಿರೋಧ ಹುಟ್ಟಿಕೊಳ್ಳುತ್ತದೆ. ಇನ್ನು ಕೆಲವೆಡೆ ಇದನ್ನು ಪ್ರಚಾರ/ಪ್ರಸಾರ ಮಾಡಬೇಕೆಂಬ ಆಲೋಚನೆ, ಉತ್ಸಾಹ ಬರುತ್ತದೆ. ಇದನ್ನು ಮೃದುವಾಗಿ ಮಾಡುವ ಮಾರ್ಗವುಂಟು, ಬಲಾತ್ಕಾರದಿಂದ ಬೇಕಾದರೂ ಮಾಡಬಹುದು. ಇದು ದೇವರ ಕೆಲಸ; ಧರ್ಮದ ಕೆಲಸ; ಈ ಕೆಲಸಕ್ಕೆ ಇನ್ನಾವುದೂ ಅಡ್ಡಿ ಬರತಕ್ಕದಲ್ಲ; ಅಡ್ಡಿ ನಿಂತರೆ ಅದನ್ನು ನಿಗ್ರಹ ಮಾಡಬೇಕು; ದೇವರ ಹೆಸರಿನಲ್ಲಿ ಮಾಡಿದ ಹತ್ಯೆ ಕೂಡಾ ತಪ್ಪಲ್ಲ – ಎಂದು ಕಾರ್ಯ ಪ್ರಚೋದನೆಯ ಜೊತೆಗೆ ಪ್ರಚಾರದ ತೀವ್ರತೆಯೂ ಸೇರುತ್ತದೆ. ಇಂಥಲ್ಲಿ ಜನವರ್ಗಗಳ ಸಮಾಜತಂತ್ರವೂ ರಾಜಕೀಯ ಅಥವಾ ಅಂತಾರಾಷ್ಟ್ರೀಯ ಸಂಬಂಧಗಳ ಅವಕಾಶ ಆಶ್ರಯ ಕೊಟ್ಟು ಸಮಾಜದ ಶಾಸನಗಳೂ ಅಂತಾರಾಷ್ಟ್ರೀಯ ವ್ಯವಹಾರ ವಿಧಾನಗಳೂ ಸಹನೆ ಒಡಂಬಡಿಕೆಗಳ ಪ್ರಪಂಚವೂ ಕಟ್ಟಿಕೊಳ್ಳುತ್ತವೆ. ಉಳಿದ ಅಂಶಗಳಲ್ಲಿ ಎಷ್ಟು ಸ್ನೇಹ, ಬಂಧು ಭಾವ, ವಿಧೇಯತೆ ಇದ್ದರೂ ತಮ್ಮ ದೇವರು ಎಂಬ ಒಂದು ಹೆಸರಿನಿಂದ ಕೂಗಿದರೆ ಉಳಿದ ಯಾವ ಮಾನವೀಯ ನಡತೆಗೂ ಎರಡನೆಯ ಎಣಿಕೆ; ಯಾವ ಇತರಕ್ಕೂ ದ್ರೋಹ ಮಾಡಬಹುದು ಎಂಬ ಭಾವ ಕೂಡಾ ಬೆಳೆಯುತ್ತದೆ ರಾಜಶಕ್ತಿಗೂ ಮತಧರ್ಮಕ್ಕೂ ನಡುವೆ. ತಮ್ಮ ಮತಕ್ಕೆ ಸೇರಿದರೆ ಮಾತ್ರ ಅವರಿಗೆ ಉದ್ಧಾರ, ಅದ್ದರಿಂದ ಅವರ ಉದ್ಧಾರಕ್ಕಾಗಿಯೇ ಅವರನ್ನು ಮತಾಂತರಗೊಳಿಸುತ್ತಿರುವುದು ಎಂಬವರೆಗೂ ವಾದ ಹೋಗುತ್ತದೆ. ಒಂದೆರಡು ಕಡೆ ಘರ್ಷಣೆ ಬಂದು 'Render unto God what belongs to God and unto Ceaser what belongs to him' ಎಂಬ ನಯದ ನಡತೆ ಉಪದೇಶವಾಗುತ್ತದೆ. 'My kingdom is of the Heaven' ಎನ್ನಬಹುದು ಯೇಸು. ತಾಯಿ–ತಂದೆ, ಹೆಂಡತಿ ಮಕ್ಕಳು, ಜನವರ್ಗದ ಅಪ್ರೀತಿ ಎಲ್ಲವನ್ನೂ ಬಿಟ್ಟುಕೊಟ್ಟು ತದೈಕನಿಷ್ಠೆಯಿಂದ ತಾನು ನೆಚ್ಚಿದ ದೈವಸಾಧನೆ ಮಾಡಲು ಬಯಸಬಹುದು; ಸಮಾಜದಲ್ಲಿದ್ದು ಮಾಡ ಬಹುದು; ಹೊರಗೆ ನಿರ್ಜನ ಏಕಾಂತಗಳಲ್ಲಿ ಉಳಿದೆಲ್ಲವನ್ನೂ ತ್ಯಾಗಮಾಡಿ ತನ್ನ ಮುಕ್ತಿಯನ್ನೂ ಧ್ಯೇಯವನ್ನೂ ಸಾಧಿಸಿಕೊಳ್ಳಬಹುದು. ಇಂಥಲ್ಲೆಲ್ಲ ನೇಮಗಳು, ಜೀವನ ಲಕ್ಷಣಗಳು, ಸಂಕೇತ, ಸಂಪ್ರದಾಯ ಹುಟ್ಟಿಕೊಳ್ಳುತ್ತವೆ. ಆಯಾ ಪಂಥದವರಿಗೆ ಇನ್ನೊಂದು ತಲೆಗೆ ಹತ್ತುವುದೇ ಇಲ್ಲ. ಇಂಥವರನ್ನು ಕುರಿತು ವ್ಯವಹಾರ ಪ್ರಪಂಚದ ನಡವಳಿಕೆ ಶಾಸನಗಳು ವಿಶೇಷವಾಗಿ ಏರ್ಪಡುತ್ತವೆ. ಲೌಕಿಕದಲ್ಲಿದ್ದುಕೊಂಡು ನಡೆಯುವ ನಡವಳಿಕೆಗಳು ಒಂದು ಭಾಗವಾದರೆ ಪೂರ್ತಿ ಮತದ ಜೀವನಕ್ಕೆ ಮುಡಿಪು ಮಾಡಿ ಕೊಂಡು ಯೋಗಿ, ವ್ರತಿ, ಸಂನ್ಯಾಸಿ, ವೇದಾಂತಿ, ಕೇವಲಿ, ಸಿದ್ಧ, ಸಂತ ವರ್ಗಗಳ ನಡವಳಿಕೆಯ ಪ್ರಪಂಚ ಇನ್ನೊಂದು. ಅದರ ಕಲ್ಪ, ಆಗಮಗಳು ಅದಕ್ಕೇ ವಿಶಿಷ್ಟ. ವ್ಯವಹಾರ ಜೀವನಕ್ಕಿಂತ ಈ ಜೀವನ ಮೇಲ್ಪಟ್ಟುದು ಎಂಬ ಭಾವನೆ, ಅದಕ್ಕೆ ಪೂಜ್ಯತೆ ಬಂದಾಗ ಅಲ್ಲಿ ಧರ್ಮಸಮಯಗಳು ಬೇರೆ ಬೇರೆಯಾಗುತ್ತವೆ, ಆ ಮೌಲ್ಯ ಆಧ್ಯಾತ್ಮಿಕ – ಎಂಬ ಭಾವನೆ ರೂಢವಾಗುತ್ತದೆ. ಆ ಮೌಲ್ಯಗಳು ವಿಜ್ಞಾನಕ್ಕೂ ತತ್ವಜ್ಞಾನ ಪ್ರಪಂಚಕ್ಕೂ ಸಾಮಾಜಿಕ ನೀತಿನಯಗಳ ಭಾಗಕ್ಕೂ ಬೇರೆ. ವಿಜ್ಞಾನದಲ್ಲಿ ಎಲ್ಲ ವಸ್ತುನಿಷ್ಠ; ಅದರಿಂದ

ನೀತ; ಪ್ರಮಾಣ ಹೊರಗಿಂದ ಸ್ಥಾಪಿತ, ಖಚಿತ. ಅಲ್ಲಿ ಸರಿಯಾದುದನ್ನು ಎಲ್ಲರೂ ಒಪ್ಪಲೇಬೇಕು. ಪ್ರಪಂಚ ಹೀಗೆಯೇ ಇರುವವರೆಗೂ ಅದರ ಸ್ವಭಾವ ಲಕ್ಷಣ, ಕ್ರಿಯೆ ಪ್ರಯೋಜನ ಎಲ್ಲ ಹೀಗೆಯೇ; ಇದು ಹೀಗೇ ಆಗುತ್ತದೆ ಎಂಬುದನ್ನು ಸ್ಥಾಪಿಸ ಬಹುದು. ಸಮಾಜ ವಿಜ್ಞಾನದಲ್ಲಿ ಸುಮಾರು ಇಂಥಿಂಥದು ಹೀಗೆ ಹೀಗೆ ಇರತಕ್ಕದ್ದು ಎಂಬ ನಿಯಮ, ವಿಧಿವಿಧಾನಗಳು, ಜನರ ಒಪ್ಪಿಕೆ ಒಡಂಬಡಿಕೆಯಿಂದ ಶಾಶ್ವತ ವಾಗಿಯೊ ಸಾಮಾನ್ಯವಾಗಿಯೊ ಸಮಯವಾಗಿಯೊ ನಡೆಯುತ್ತವೆ. ಇಲ್ಲಿನ ಸತ್ಯಗಳು ಹೆಚ್ಚಾಗಿ ಮನುಷ್ಯರ ಸಾಮಾನ್ಯ ಇಚ್ಛಾ ಕ್ರಿಯಾ ಪ್ರವೃತ್ತಿಗಳಿಗೆ, ಆಸಕ್ತಿ ಪ್ರಯೋಜನ ಗಳಿಗೆ ಹೊಂದಿ ನಡೆಯುತ್ತವೆಯಾದ್ದರಿಂದ, ವಿಜ್ಞಾನದ ವಿಧಾನವನ್ನು ಅನುಸರಿಸಿ ಮನುಷ್ಯ ಸ್ವಭಾವವನ್ನು ಕುರಿತು ಇದರ ಲಕ್ಷಣಗಳು ಹೀಗೆ ಹೀಗೆ ಎಂದು ತಿಳಿಯ ಬಹುದಷ್ಟೇ. ಇಲ್ಲಿ ಮೌಲ್ಯಗಳಲ್ಲಿ ಗುಣಭಾಗವಿದೆ. ವ್ಯಕ್ತಿಯಾಗಿ ಈ ಈ ಬಗೆಯ ಮನುಷ್ಯ ಹೀಗೆ ಹೀಗೆ ನಡೆಯುತ್ತಾನೆ; ತನ್ನ ವರ್ಗದಲ್ಲಿ ಹೀಗೆ ನಡೆಯುತ್ತಾನೆ; ಸಮುದಾಯದ ಒಬ್ಬನಾಗಿ ಪ್ರತಿನಿಧಿಯಾಗಿ ಒಂದು ರೀತಿ; ಕೇವಲ ತಾನೊಬ್ಬನೇ ಪ್ರತ್ಯೇಕವಾಗಿರುವಾಗ ಆ ಸ್ವಭಾವ ಹೀಗೆ ವ್ಯಕ್ತವಾಗುತ್ತದೆ; ಗುಣ, ಶೀಲ, ಯೋಗ್ಯತೆ ಹೀಗೆ ಬೆಳೆಯುತ್ತದೆ. ಹುಟ್ಟು ಗುಣ ಒಂದು ರೀತಿ ಇದ್ದರೆ, ಇದನ್ನು ಶಿಕ್ಷಣದಿಂದ, ಸಂಸ್ಕಾರದಿಂದ, ಉತ್ತಮ ಆವರಣ ಕಲ್ಪನೆಯಿಂದ ಮೇಲಾಗಿಸಬಹುದು. ಅದಕ್ಕಾಗಿ ಶಿಸ್ತು, ಶಿಕ್ಷಣ, ವಿದ್ಯೆ, ಸಂಸ್ಕಾರಗಳು. ಇದು ದೇಹದ, ಆವರಣದ, ಸಮಾಜ ಜೀವನದ ಪ್ರಭಾವ; ಇದು ರೋಗ ರುಜಿನ; ಶಕ್ತಿ ಸಂಪತ್ತು; ಹೀಗಾದರೆ ಏಳಿಗೆ, ಹೀಗಾದರೆ ಅಧಃಪತನ–ಮುಂತಾದುವನ್ನು ವ್ಯಾಸಂಗ ಮಾಡಿ, ಒಟ್ಟಿನಲ್ಲಿ ಇದರ ಸ್ವರೂಪ ಹೀಗೆ ಎಂದು ತಿಳಿಸಲು ವಿಜ್ಞಾನದ ವಿಧಾನ ಸಹಾಯ ಮಾಡುತ್ತದೆ: ಅಲ್ಲಿಯೂ ಪಕ್ಷಪಾತವಿಲ್ಲದೆ ಕೇವಲ ಸತ್ಯಸ್ವರೂಪ ಒಂದನ್ನೇ ವ್ಯಾಸಂಗಮಾಡಿದಾಗ, ಪೂರ್ವ ಪಕ್ಷಪಾತ ಪೂರ್ವಗ್ರಹ ಗಳು ಮನಸ್ಸನ್ನು ಕದಡದಿದ್ದಾಗ, ವ್ಯಾಸಂಗವನ್ನೇ ಕಲಕದಾಗ. ಇಲ್ಲಿ ಸಂಖ್ಯಾಶಾಸ್ತ್ರ ಅಥವಾ ಸಂಖ್ಯಾಮಾನ (Statistics) ಹೆಚ್ಚು ಸಹಾಯಕವಾಗುತ್ತದೆ. ಅಳೆಯುವ ಮಾನ, ನೋಡುವ ಸೂಕ್ಷ್ಮ ದೂರದರ್ಶನಿಗಳೇ ವಸ್ತುಗಳನ್ನು ಬೇರೆ ರೀತಿ ಕಾಣಿಸಿದರೆ ಹೊಣೆ, ವಸ್ತುಲಕ್ಷಣ ವಿಕೃತವಾಗುತ್ತದೆಯೆ? ನೋಡುವ ಕಣ್ಣು, ಅದರ ದೃಷ್ಟಿ ಬೇರೆ ಯಾದರೆ ಸ್ಥಿತಿ ಸ್ವರೂಪ ಬೇರೆಯಾಗಿಯೇ ಕಾಣುತ್ತದೆ. ಇದರ ಜೊತೆಗೆ ಪ್ರತಿಯೊಂದರ ಆರಂಭ, ಬೆಳವಣಿಗೆ, ಉಂಟಾದ ಸಂಪರ್ಕಗಳು, ಯಾವುದನ್ನಾದರೂ ಅನುಸರಿಸಲೊ ಅನುಕರಿಸಲೊ ಸಾಧಿಸಲೊ ಕೈಕೊಂಡ ಮಾರ್ಗಗಳು ಇಂಥವು ಎಂಬವೂ ಚಾರಿತ್ರಿಕ ದೃಷ್ಟಿಯೂ ಸೇರಿಕೊಳ್ಳುತ್ತದೆ. ಜೊತೆಗೆ ಒಂದು ವಿಮರ್ಶಾದೃಷ್ಟಿ, ತಾರತಮ್ಯ ವಿವೇಚನೆ, ಇಂಥುವೇ ಹಲವು ಪ್ರಸಂಗಗಳು ಬೇರೆ ಬೇರೆ ಬಂದಾಗ ಮೌಲ್ಯಕಲ್ಪನೆಯ ನಿರ್ಣಯ ವಿಲಾಸ ಸೇರುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಮನುಷ್ಯನ ಮನಸ್ಸು ಎಷ್ಟು ಬಗೆಯಲ್ಲಿ ಎಷ್ಟು ಮಟ್ಟಗಳಲ್ಲಿ ಕೆಲವೇಳೆ ಒಂದೇ ಸಮನೆ ಒಂದೇ ಸಂದರ್ಭದಲ್ಲಿ ಕಾರ್ಯ ಮಾಡಬಲ್ಲುದು ಎಂಬುದನ್ನು ಅರಿಯಲು ಮನಃಶಾಸ್ತ್ರ ಯತ್ನಿಸುತ್ತದೆ. ಬಹುತರ



ಇದರ ಆಳ ವಿಸ್ತಾರ ವಿವಿಧತೆ ಜಟಿಲತೆಗಳು ಉಳಿದ ಎಲ್ಲಕ್ಕಿಂತಲೂ ಕ್ಲಿಷ್ಟ. ವ್ಯಕ್ತಿ ಯಲ್ಲಾಗಲಿ ಹೊರಗಿನ ಜೀವನದಲ್ಲಿಯಾಗಲಿ ಕಾರ್ಯ ಮಾಡುವ ಅಂತಃಪ್ರವೃತ್ತಿಗಳು ಮನುಷ್ಯನನ್ನು ಹೇಗೆ ರೂಪಗೊಳಿಸುತ್ತವೆ, ನಡಸುತ್ತವೆ ಎಂಬುದು ಭಗವದ್‌ಸಂಕಲ್ಪ ಹೇಗಿದೆಯೋ ಅದನ್ನರಿಯುವುದಕ್ಕಿಂತ ಹೆಚ್ಚು ಕಷ್ಟ ಎನ್ನಿಸುತ್ತದೆ. ಆದರೂ ಏದುತ್ತೇದುತ್ತ ಲೋಕ ಸ್ವರೂಪವನ್ನು ಅರಿಯಬೇಕು, ಅಳೆಯಬೇಕು, ಇದರ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು ಎಂಬ ಅನ್ವೇಷಣೆಯ ಭಾಗ ನಡೆಯುತ್ತಿದೆ. ತತ್ವದರ್ಶನ ಅಥವಾ ತತ್ವಜ್ಞಾನ ಎಂಬ ಭಾಗದಲ್ಲಿ ಈ ಎಲ್ಲ ಸಂಬಂಧಗಳಲ್ಲಿಯೂ ಯಾವುದು ಸ್ವರೂಪ, ಯಾವುದು ಅರ್ಥ, ಯಾವುದು ಮೌಲ್ಯ, ಯಾವುದು ಸತ್, ಯಾವುದು ಅಸತ್ ಎಂಬುದನ್ನು ಕಂಡಿದೆಯೋ ಇದು ಒಟ್ಟಿನಲ್ಲಿ ವಿಚಾರಗೊಂಡು ಜ್ಞಾನದ ಯಾವ ಹಂದರ ಕಟ್ಟುತ್ತದೆ; ಇದರ ಸಹಾಯದಿಂದ ಜೀವದ ಯಾವ ದರ್ಶನವನ್ನು ಸಂಗತವಾಗಿ ಕಲ್ಪಿಸಿಕೊಳ್ಳಬಹುದು ಎಂದು ಅರಿಯಲು, ರೂಪಿಸಲು ಪ್ರಯತ್ನಿಸುತ್ತದೆ. ಸಾಮಾನ್ಯ–ವಿಶೇಷ, ಅಮೂರ್ತ–ಮೂರ್ತ, ಪ್ರಧಾನ–ಗೌಣ ಎಂಬ ಅಳತೆಗಳಲ್ಲಿ ಹೋಲಿಕೆ ವ್ಯತ್ಯಾಸಗಳನ್ನು ಮಾಡಿಕೊಂಡು, ಒಟ್ಟಿಗೆ ರಚಿಸಿಕೊಂಡು ಆಗುವುದು ಇಲ್ಲಿ ತತ್ವ ವಿವೇಚನೆ. ಜ್ಞಾನವೆಂಬುದೂ ದೃಷ್ಟಿಭಿನ್ನತೆ, ಮೌಲ್ಯಭಿನ್ನತೆಗಳೂ ಇಲ್ಲಿ ದರ್ಶನವನ್ನು ಹೆಚ್ಚು ಕಡಮೆ ಮಾಡಬಲ್ಲುದು. ಇದು ಪೂರ್ತಿ ಬೌದ್ಧಿಕ; ಪೂರ್ತಿ ಮಾನಸಿಕ; ಅರಿವಿನ ಶಿಲ್ಪಸೌಧ; ಇದು ಪೂರ್ತಿ ಧಾರ್ಮಿಕ ಅಥವಾ ನೈತಿಕವಾದ್ದು; ಇದು ಕಲಾವಿಚಕ್ಷಣೆ; ಇದು ಆಧ್ಯಾತ್ಮಿಕ; ಇದು ಇನ್ನೂ ಪೂರ್ತಿ ಅರ್ಥವಾಗದ್ದು; ಇದು ವ್ಯಕ್ತಿಗತ; ಇದು ಸಮಷ್ಟಿ ಎಂಬುದನ್ನೆಲ್ಲ ಕೂಡಿಸಿ ಒಟ್ಟು ರಚನೆಯನ್ನು ಮಾಡಿಕೊಂಡು ಯಾವುದನ್ನು 'ಫಿಲಾಸಫಿ' ಎನ್ನುತ್ತೇವೊ ಅದು ವಿವರಿಸಲು ಪ್ರಯತ್ನಿಸುತ್ತದೆ.

**–14–**

ಈ ವರೆಗೆ ಹೇಳಿದುದರಲ್ಲಿ ಅನ್ವೇಷಣೆ ಅಥವಾ ದೃಷ್ಟಿ ಸುತ್ತಲ ಪ್ರಪಂಚದ ಒಳ ಹೊರ ಪ್ರಪಂಚಗಳಿಗೆ ಸಂಬಂಧಿಸಿದ ಸತ್ಯಗಳನ್ನು ಸೂತ್ರಗಳನ್ನು ತತ್ವಗಳನ್ನು ರೂಪಿಸಲು ಬುದ್ಧಿ ಹೇಗೆ ಪ್ರವೃತ್ತವಾಗಿದೆ ಎಂಬುದನ್ನು ಸ್ಥೂಲವಾಗಿ ಪರಿಶೀಲಿಸಿತು. ಎಂದರೆ, ಈ ಎಲ್ಲ ಸಂಬಂಧದಲ್ಲಿಯೂ ಅನ್ವೇಷಣೆಯ ಶ್ರದ್ಧೆ, ವಿಷಯನಿಷ್ಠೆ, ಇತರ ಅವಾಂತರ ಸಂಪರ್ಕಗಳಿಗೆ ಎಡೆಗೊಡದೆ, ವಸ್ತುಪ್ರಪಂಚವನ್ನಾಗಲಿ ಮಾನವ ಲೋಕ ವನ್ನಾಗಲೀ ಮನುಷ್ಯನ ಮನಸ್ಸು ಹೇಗೆ ಹೇಗೆ ತೊಡಗಿ ಸದ್ಯಃ ತೀರ್ಮಾನಕ್ಕೆ ಬಂದು–ಇದು ಸತ್ಯ, ಇದು ನ್ಯಾಯ, ಇದು ಸ್ವರೂಪ, ಇದು ಮೊದಲು, ಇದು ಬೆಳವಣಿಗೆ, ಇದು ಫಲ, ಈ ರೀತಿ ನಡೆದರೆ ಬದುಕೂ ಪರಿವೀಕ್ಷಣವೂ ಸುಸಂಗತವಾಗಿ ಸುವ್ಯವಸ್ಥ ವಾಗಿ ಆಗುತ್ತವೆ ಎಂಬುದನ್ನು ನೋಡಿತು. ಆಯಾ ಮಟ್ಟದಲ್ಲಿ ಮತ್ತು ಪ್ರಕರಣದಲ್ಲಿ ಮನಸ್ಸು ಹೆಚ್ಚು ಬೆಲೆ ಕೊಡದೆ ಅದರ ಅನುಸಂಧಾನವನ್ನೇ ಮಾಡುತ್ತಿರುತ್ತದೆ. ಇಲ್ಲಿ ತಾತ್ಕಾಲಿಕವಾವುದು, ನಿತ್ಯಲಕ್ಷಣವಾವುದು, ಬೆಲೆಗಳ ಮಟ್ಟಗಳಾವುವು, ಯಾವುದಕ್ಕೆ

ಸರ್ವಪ್ರಾಶಸ್ತ್ಯ, ಯಾವುದನ್ನು ಒಟ್ಟು ಸೂತ್ರವಾಗಿ–General Law –ಮಾಡಿಕೊಂಡರೆ ಉಳಿದುವೆಲ್ಲ ಅದರ ಅಂಶ, ಅಂಗಗಳಾಗಿ, ವಿಶೇಷಗಳಾಗಿ, ಕೊಂಡಿಗಳಾಗಿ, ಮಿತಿ–ಧಾರಾಳಗಳಾಗಿ ಒಂದು ಅಖಂಡ ರೂಪವನ್ನು ತಳೆಯುತ್ತವೆ; ಇದು ಜ್ಞಾನ, ಇದು ವಿಜ್ಞಾನ, ಇದು ಶಾಸ್ತ್ರ, ಇದು ಆಕಸ್ಮಿಕ, ಇದು ಮೂಲಕಾರಣ, ಇದು ಚರಿತ್ರೆ, ಇದು ಪರಿಣಾಮ ಎಂಬೆಲ್ಲ ಸಂಗತಿಗಳಿಗೂ ಒಂದು ಆಕೃತಿ ಕೊಡುವ ರಚನೆಯಾಗುತ್ತದೆ.

ರಿಲಿಜನ್ ಎನ್ನುವಾಗ ಯಾವುದೊ ಒಂದು ಅತಿಮಾನುಷ ಶಕ್ತಿ ಈ ರೂಪದಲ್ಲಿಯೊ ಆ ರೂಪದಲ್ಲಿಯೊ ಈ ವಿಶ್ವವನ್ನು ನಿರ್ಮಾಣ ಮಾಡಿತು. ಅದರ ಶಕ್ತಿಗೆ ದೃಷ್ಟಿಗೆ ಮಿತಿಯಿಲ್ಲವಾದುದರಿಂದ ಬೆಳಕಾಗಲಿ ಎಂದರೆ ಬೆಳಕು ಬಂತು; ಬೆಟ್ಟ ಗಿಡ ಪಕ್ಷಿ ಬೇಕು ಎಂದುಕೊಂಡಾಗ ಅದು ಹಾಗೆಯೇ ನಿರ್ಮಾಣ ಆಯಿತು; ಆಡಂ ಕನಸು ಕಂಡ; ಎಚ್ಚತ್ತು ಕಣ್ಣು ತೆರೆದಾಗ ತಾನು ಕನಸಿನಲ್ಲಿ ಕಂಡದ್ದು ನಿಜವಾಗಿ ಈವ್ ಎದುರಿಗೆ ಹೆಣ್ಣಾಗಿ ನಿಂತಿತ್ತು ಎಂಬಂತೆ ನಡಸಬಲ್ಲದ್ದು. ಸತ್ಯಸಂಕಲ್ಪ ಎಂಬ ಮಾತಿನಲ್ಲಿ ಈ ಧಾತುವಿದೆ. ಇವೆಲ್ಲಾ ಅದರಿಂದ ಆದದ್ದು, ಅದಕ್ಕೆ ಅಧೀನವಾದದ್ದು. ಸಮುದ್ರಗಳು ಅದರಿಂದ ಹುಟ್ಟುತ್ತವೆ, ಚಲಿಸುತ್ತವೆ. ಮನುಷ್ಯರು ತಿರುಗಾಡುತ್ತಾರೆ, ಅತಂತ್ರರಾಗುತ್ತಾರೆ. ಇಷ್ಟರ ಮೇಲೆ ಯಾವುದೂ ಆಗತಕ್ಕದಲ್ಲ ಎಂಬಂತೆ ತನ್ನ ಅಧಿಕಾರ ನಡಸುತ್ತದೆ. ಆದುದರಿಂದ ಉಳಿದುದರ ನಡವಳಿಕೆಯೆಲ್ಲ ಈ ಮಿತಿಗಳಲ್ಲಿ ಕಾರ್ಯ ಮಾಡಬಹುದೇ ಹೊರತು, ತನಗೆ ಕೊಟ್ಟಿರುವ ಶಕ್ತಿಯಿಂದ ಇದನ್ನೆಲ್ಲ ಅರಿತುಕೊಳ್ಳಲು ಪ್ರಯತ್ನ ಪಡಬಹುದೇ ಹೊರತು, ಇದಕ್ಕೆ ಮೀರಿದುದಕ್ಕೆ ಕೈ ಹಾಕಲು ಶಕ್ತಿಯಿಲ್ಲ; ಕೈ ಹಾಕಲುಬಾರದು ಕೂಡ. ಯಾವ ನಿಯಮ ಈ ಸೃಷ್ಟಿಯಲ್ಲಿ ನಡೆಯುತ್ತಿದೆಯೊ ಅದನ್ನು ಬಹಶಃ ಗ್ರಹಿಸಬಲ್ಲದಾದೀತು. ನಡೆಯುವ ಸಂಗತಿಗಳಿಂದ ಇನ್ನೊಂದು ನೂರು–ಸಾವಿರ ವರ್ಷದಲ್ಲಿ ಸುಮಾರು ಹೇಗೆ ಇಂದಿನ ಸನ್ನಿವೇಶಗಳು ರೂಪಾಂತರಗೊಳ್ಳಬಹುದು, ಅವನ್ನು ಹೇಗೆ ಬೆಳಸಿ ತಿದ್ದಿ ರೂಪಿಸಿಕೊಳ್ಳಲು ಪ್ರಯತ್ನಪಡಬಹುದು ಎಂಬುದನ್ನು ಮನುಷ್ಯನಂಥ ಶಕ್ತಿ ಸಾಹಸಗಳುಳ್ಳ ಜೀವಿ ತಿಳಿಯಲು ಯತ್ನಿಸಿದರೆ ಕೃತಾರ್ಥನೂ ಆಗಬಹುದು. ಇರುವ ಎಲ್ಲದರ ಎಲ್ಲ ಲಕ್ಷಣಗಳನ್ನೂ ಮನುಷ್ಯನ ಬುದ್ಧಿ ಪೂರ್ತಿಯಾಗಿ ಗ್ರಹಿಸಿ, ಇವನ ಸಕಲಗ್ರಾಹಿ ಜ್ಞಾನ ಇರುವ ಎಲ್ಲದರ ಲಕ್ಷಣಗಳನ್ನೂ ಅರಿತು, ಆ ಇರವಿಗೆ ಈ ಅರಿವು ಸಮ, ಇನ್ನರಿವುದೇನೂ ಉಳಿದಿಲ್ಲ ಎಂದು ಕಂಡುಬಂದಾಗ ಒಂದು ಕ್ರಿಯೆ ಹುಟ್ಟಿ ಒಂದು ಸಮಾಪ್ತ ಸ್ಥಿತಿಗೆ ಬಂದ ಹಾಗಾಗುತ್ತದೆ. ಅರಿವಿಲ್ಲದೆ ಇರವನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಮನುಷ್ಯನಿಲ್ಲದೆ ಅರಿವಿಲ್ಲ. ಇವನು ಅರಿತದ್ದು ಮಾತ್ರ ಮನುಷ್ಯನಿಗೆ ದೊರೆಯಬಲ್ಲ ಸತ್ಯದ ಅರಿವು ಜ್ಞಾನ. ಈ ಸಂಬಂಧದಲ್ಲಿ ಗತಿ ಗುರಿ ಗಮ್ಯಸಿದ್ಧಿ ಮುಂತಾದವುಗಳ ಕಲ್ಪನೆಗಳೆಲ್ಲ ಹುಟ್ಟಿ ಕಾರ್ಯಮಾಡುತ್ತವೆ.

ಇಲ್ಲಿ ಒಂದು ಸಂಗತಿಯನ್ನು ಹೇಳಬಹುದು: ಬುದ್ಧಿಗೋಚರವಾದುದನ್ನು, ತಿಳಿದುದನ್ನು ಒಂದು ಚಿತ್ರವಾಗಿ ಮಾಡಿಕೊಂಡು ಅದನ್ನು ಕಣ್ಣಿಗೆ ಕಾಣುವಂತೆ ಅನುಭವಿಸಬಹುದು. ನಾಳೆ ಊಟಕ್ಕೆ ನೂರು ಜನರನ್ನು ಕರೆದಿದ್ದೇವೆ, ಇದಕ್ಕೆ ಈ ಈ



ಪೀಠೋಪಕರಣಗಳು ಬೇಕು; ಅಡಿಗೆ ಪದಾರ್ಥ, ಸಂಭಾರ ತರತೀಪು, ನೋಡಿಕೊಳ್ಳತಕ್ಕವರು ಹೀಗೆ ಇರತಕ್ಕದ್ದು; ಜನ ಹೀಗೆ ಬರಬೇಕು; ಯಾವುದೂ ಅರೆ ಕೊರೆಯಾಗದಂತೆ ಎಲ್ಲರೂ ತೃಪ್ತರಾಗುವಂತೆ ಏರ್ಪಡಬೇಕು ಎಂಬುದನ್ನು ಪೂರ್ವಭಾವಿಯಾಗಿ ಕಣ್ಣಿನ ಚಿತ್ರದಂತೆ ಮಾಡಿಕೊಳ್ಳಬಹುದು: ಅಲ್ಲಿಂದ ಅದರ ಒಂದು ನಕ್ಷೆಯನ್ನು ಹಾಕಿಕೊಳ್ಳಬಹುದು. ಇಂಥಿಂಥವರು ಇಲ್ಲಿಯೇ ಕುಳಿತುಕೊಳ್ಳತಕ್ಕದ್ದು; ಅಡಿಗೆಯವರು ಹೀಗೆ, ಬಡಿಸುವವರು ಹೀಗೆ, ಮೇಲ್ವಿಚಾರಣೆ ಹೀಗೆ, ಊಟದ ತರುವಾಯ ಹೀಗೆ ಹೀಗೆ–ಎಂದು ಸಮಸ್ತ ಸಂಗತಿಗಳನ್ನೂ ಏರ್ಪಡಿಸಿಕೊಳ್ಳಬಹುದು. ಆ ಸಮಯವನ್ನೂ ಹಾಗೆ ಸಾಧಿಸಬಹುದು. ಹತ್ತು ವರ್ಷದ ತರುವಾಯ ಆ ಚಿತ್ರಣವನ್ನೂ ಅನುಭವವನ್ನೂ ಪುನಃ ಕಣ್ಣೆದುರಿಗೆ ನಡೆದಹಾಗೆ, ನಡೆಯುತ್ತಿರುವ ಹಾಗೆ ಪೂರ್ಣ ನೆನಪಿನಿಂದ ನಿರ್ಮಿಸಿಕೊಳ್ಳಬಹುದು; ಧ್ಯಾನವಾಗಿ ನಿಲ್ಲಿಸಿಕೊಳ್ಳಬಹುದು. ಹೀಗೆಯೇ ಲೋಕದ ಸಮಸ್ತ ವ್ಯಾಪಾರವನ್ನೂ. ಇರವು ಹೀಗಾದ ರೀತಿ, ಅರಿವು ಹೀಗೆ ಬೆಳೆದ ರೀತಿ, ಆಯಾ ಶತಮಾನದಲ್ಲಿ ಸಹಸ್ರಮಾನದಲ್ಲಿ ಮನುಷ್ಯನ ಕಲ್ಪನೆಯಲ್ಲಿ ಉಂಟಾದ ಒಟ್ಟು ಜ್ಞಾನದ ಪರಿಮಂಡಲ ಹೀಗೆ, ಇಷ್ಟು ಎಂಬುದನ್ನು ಕೂಡ ಒಂದು ಚಿತ್ರವಾಗಿ ಕಲ್ಪವಾಗಿ ಮೂರ್ತರೂಪದಲ್ಲಿ ಅನುಭವಿಸಬಹುದು. ಆಗ ಅದು ಒಂದು ಧ್ಯಾನಚಿತ್ರ. ಸಾಕಷ್ಟು ಕಾಲ ಮನಸ್ಸಿನ ಏಕಾಗ್ರತೆಯಿಂದ ಅಂಥ ಚಿತ್ರಗಳನ್ನು ಮನಸ್ಸಿನಲ್ಲಿ ನಿಲ್ಲಿಸಿಕೊಳ್ಳಬಲ್ಲಂತೆ 'ಯೋಗ'–ಏಕಾಗ್ರತೆ–ಸಾಧಿಸಬಹುದು. ಹಾಗೆಯೇ ಆ ಕಾಲದಲ್ಲಿ ಅತ್ಯುತ್ತಮರಾದವರೆಂಬವರು ದೇವರ ಕಲ್ಪನೆ, ಸೃಷ್ಟಿಸ್ಥಿತಿಯ ಕಲ್ಪನೆ ಇವನ್ನು ಹೇಗೆ ಮಾಡಿಕೊಂಡಿದ್ದಾರೊ ಅಂಥ ಅನುಭವ ಮಂಡಲಗಳನ್ನು ಕುಳಿತಲ್ಲಿ ಕಲ್ಪಿಸಿಕೊಳ್ಳಬಲ್ಲರು. ಇದೂ ಮನಸ್ಸಿನ ಒಂದು ಶಕ್ತಿಯೇ. ಹನುಮಂತನೊ ಮಾರಿಯೊ ಕಾಳಿಯೊ ರಾಮನೊ ಕೃಷ್ಣನೊ ಥೆರಿಸಾಳೊ ಎದೆಯ ರಕ್ತ ಸುರಿಸುತ್ತಿರುವ ಏಸುವೊ ಬುದ್ಧನೊ–ಯಾರು ಹೇಗೆ ಬೇಕೆಂದರೆ ಹಾಗೆ ಧ್ಯಾನಚಿತ್ರವನ್ನು ಕಲ್ಪಿಸಿಕೊಳ್ಳಬಹುದು. ಅರ್ಜುನನಿಗೆ ಕೃಷ್ಣನ ವಿಶ್ವರೂಪ ಕಂಡಂತೆ, ಫೌಸ್ಟ್‌ಗೆ 'ಸ್ಪಿರಿಟ್ ಆಫ್ ದಿ ಮ್ಯಾಕ್ರೋಕಾಸಂ' ಕಾಣುತ್ತದೆ. ಅಷ್ಟನ್ನೂ ಒಂದು ಮಾತಿನಲ್ಲಿ ಹೇಳಲಾಗಲಿ, ವಿವರಿಸಲಾಗಲಿ ಶಕ್ಯವಾಗದಿರಬಹುದು. ಆದರೆ ಮನಸ್ಸಿನ ಈ ಶಕ್ತಿ, ಸಮವಾಯಗ್ರಹಣ ಆಯಾ ಕಾಲದ, ಆಯಾ ಜನವರ್ಗದ ಚರಿತ್ರೆಗೆ ದರ್ಶನಕ್ಕೆ ತಕ್ಕಂತೆ ಮಾತ್ರ ಮಿತವಾಗಿರುತ್ತದೆ. ಮೋಸಸಿಗೆ ಪೀಸ್‌ಗಾ ಸೈಟ್(Pisgah sight) ಯಾವ ರೀತಿ ದೊರೆಯಿತು, ಕ್ರಿಸ್ತ ಕಲ್ಪನೆ ಮಾಡಿದ ತನ್ನ ತಂದೆ ದೇವರ ಸ್ವರ್ಗವನ್ನು ಯಾವ ರೀತಿ ಕಂಡನೊ ಚಿತ್ರಿಸಿದನೊ, ಲೋಕದ ಕಾರ್ಯವೆಲ್ಲ ಮುಗಿದು ಮೈಕಲ್ ಗೇಬ್ರಿಯಲ್ ಮುಂತಾದವರ ನಿರ್ದೇಶನದಲ್ಲಿ ಹೇಗೆ ವಾದ್ಯಗಳು ಮೊಳಗಿ ಗೋರಿಗಳಿಂದ ಎಲ್ಲರ ಆತ್ಮಗಳೂ ಹೊರಗೆ ಬಂದು ಆ ಸಭೆ ಹೇಗೆ ಒಡ್ಡುತ್ತದೆ ಎಂಬ ಚಿತ್ರವನ್ನು ಮಾಡಿಕೊಂಡಿದ್ದಾರೆ. ನಮ್ಮಲ್ಲಿ ಕೈಲಾಸದ, ವೈಕುಂಠದ ಕಲ್ಪನೆಗಳಿವೆ. ಇಂದ್ರ ಸಭೆಯ ಚಿತ್ರಗಳಿವೆ. ಕೃಷ್ಣನು ಮಹಾಭಾರತದಲ್ಲಿ ಎರಡು ಸಲವಾದರೂ ದಿವ್ಯದರ್ಶನವನ್ನು ಅನುಗ್ರಹಿಸಿದನೆನ್ನುತ್ತಾರೆ. ದುರ್ಯೋಧನನ

ಸಭೆಯಲ್ಲಿ ಒಮ್ಮೆ; ಗೀತೆಯಲ್ಲಿ ವರ್ಣಿತವಾದ ವಿಶ್ವರೂಪ ದರ್ಶನದಲ್ಲಿ ವಿಶೇಷವಾಗಿ. ಆ ಕಾಲದ ಜನವರ್ಗದ ಇತಿಮಿತಿಗಳಿಗೆ ಮಾತ್ರ ಹೊಂದುವಂತಿದೆ ಅದು. ಅಲ್ಲಿ ಚೀನಾ, ಈಜಿಪ್ಟ್, ಭಾರತದ ಹೊರಮಂಡಲ, ಸಮಸ್ತ ಜೀವಪ್ರಪಂಚದ ಆಗುಹೋಗುಗಳ ಚಿತ್ರಣ ಕಾಣದೆ ಇರಬಹುದು. ಬುದ್ಧಿವಂತರಾದವರು ಅಲ್ಲಿದ್ದುದಕ್ಕೇ ಈ ಎಲ್ಲವನ್ನೂ ತಿರುಚಿ ಗಿಡಿಯುವಂತೆ ಮಾಡಿ ಅರ್ಥಕಲ್ಪನೆ ಮಾಡಬಹುದು. ಆದರೆ ಐದು ಸಾವಿರ ವರ್ಷದ ಹಿಂದಿನ ಅನುಭವಸಮಸ್ತ ಯಾವ ದರ್ಶನವನ್ನು ವಿಶ್ವದ್ದೆಂದು ಕೊಟ್ಟಿತೊ – ಅದು ಆ ಕಾಲಕ್ಕೆ, ಸನ್ನಿವೇಶಕ್ಕೆ, ಆ ಜನವರ್ಗಕ್ಕೆ ಮಾತ್ರ ಸಲ್ಲುತ್ತದೆ.

ಇಂಥ ಧ್ಯಾನ ಶಕ್ಯ. ಅದರಲ್ಲಿ ಬರುವ ಮನಸ್ಸಿನ ಒಂದು ಉತ್ಕರ್ಷೆ, ರೋಮಾಂಚನ, ಸಂತೋಷ ಅದನ್ನು ದಿವ್ಯವಾಗಿ ಮಾಡಬಲ್ಲದು. ಅದನ್ನು ಕುರಿತು ಹಾಡಬಹುದು. ಆ ಆವೇಶ ನಿರ್ಮಾಣಕೃತ್. ಅಥವಾ ಬೇರೇನೂ ಇಲ್ಲದೆ 'ಹಾಲು ಹಾಲೂ ಹಾಹೂ' ಎಂದು ತೈತ್ತಿರೀಯದಲ್ಲಿ ಆಗುವಂತೆ ಆಗಬಹುದು. ಮೊದಲ ಉಕ್ತಿ ಕೇವಲ ಆಶ್ಚರ್ಯಸೂಚಕವಾದ ಸ್ವರಗಾನ. ಆಮೇಲೆ ಮಾತು. ಅದರ ವಿಸ್ತರಣ. ಅದನ್ನು ಪೂರ್ತಿಯಾಗಿ ಬಾಯಿ ಮಾತಿನಲ್ಲಿ ವರ್ಣಿಸಲಾಗುವುದಿಲ್ಲ. ಅದು ಅದೇ. ಅದನ್ನು ಅರಿಯುವುದೆಂದರೆ ಅದೇ ಆಗುವುದು. 'ಯಥೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಃ' ಎನ್ನುವುದಾಗಲಿ, 'ಬ್ರಹ್ಮವಿದ್ ಬ್ರಹ್ಮೈವ ಭವತಿ' ಎಂಬುದಾಗಲಿ ಬಹುಶಃ ಈ ತೆರನಾದ ಅನುಭವಕ್ಕೆ ಶಕ್ಯವಾದ್ದು. ಇಂಥದರ ಸಾಧನೆ ಎಲ್ಲರಿಗೂ ಶಕ್ಯವಲ್ಲ. ಹೇಗೆ ಜಗತ್ತಿನ ವಿಕಸನ ವಿಧಾನ ಭೂವಿಜ್ಞಾನಿಗೆ, ರಾಸಾಯನ ಅಥವಾ ಭೌತವಿಜ್ಞಾನ ಸಮಸ್ತವೂ ಒಂದು ತತ್ವವನ್ನು ಅನುಸರಿಸಿ ನಡೆಯುವಂತೆ ದೊಡ್ಡ ವಿಜ್ಞಾನಿಗಳಿಗೆ ಶಕ್ಯವೊ, ಹೇಗೆ ಸಸ್ಯ ಮತ್ತು ಪ್ರಾಣಿಜೀವನಗಳ ವಿಕಸನ ಆಗಿರಬೇಕೆಂದು ಆ ವಿಜ್ಞಾನಿಗಳಿಗೆ ವೇದ್ಯವೊ, ಹೇಗೆ ಲೋಕವ್ಯವಸ್ಥೆ ಧರ್ಮಕರ್ಮಗಳ ಮಂಡಲ ಮಾನವ ಸಮಾಜಜ್ಞನಿಗೆ ದೊರಕಬಲ್ಲುದೋ–ಹಾಗೆಯೇ ಇದೆಲ್ಲವೂ ಆ ದಿವ್ಯಜ್ಞಾನ ಕಲ್ಪನೆಯಲ್ಲಿ ಸೇರಿ 'Integral Experience' ಎಂದು ಧ್ಯಾನಗಮ್ಯ ಮಾಡಿಕೊಳ್ಳಬಹುದು. ನಾಳೆಗೆ ಹೇಗೆ ಎಂದು ಅಲ್ಲಿಲ್ಲ. ಇದು ಹುಟ್ಟುವ ಮುಂಚೆ ಏನಿತ್ತು ಎಂಬುದು ಅಲ್ಲಿಲ್ಲ. ಇವೆರಡೂ ಅನಿಶ್ಚಯ. ಇಂಥುದಕ್ಕೆ ಒಳಪಡದ ವಿಷಯವನ್ನು ಕೇಳಬೇಡಿ, ಕೇಳಬಾರದು; ಒಂದು ಅನಾದಿ, ಇನ್ನೊಂದು ಅನಂತ; ಆದ್ದರಿಂದ ನಮ್ಮ ಮಾತಿಗೆ ಮೀರಿದ್ದು. 'ಮಾತಿಪ್ರಾಕ್ಷೀ' ಎಂದು ಹೇಳಿ ನಿಲ್ಲಿಸಬಹುದು. ಈ ಸ್ಥಿತಿಯಲ್ಲಿ ಜ್ಞಾನವೆನ್ನುವುದೆ, ಬೇರೆಯೆನ್ನುವುದೇ ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಯಾರು ಏನನ್ನು ಬೇಕಾದರೂ ಹೇಳಬಹುದು. ಅದಕ್ಕೆ ಪ್ರಮಾಣವಿಲ್ಲ, ಪುರಾವೆಯಿಲ್ಲ. Neither verification nor proof. ಅದನ್ನು ಕುರಿತು ಆಡುವ ಮಾತು ಪೂಜ್ಯ, ಪವಿತ್ರ ಎಂಬ ಆಪ್ತವಿಶ್ವಾಸದಿಂದ ಬರುವುವಾದ್ದು. ಅದನ್ನು ನಂಬಿದವರಿಗೆ ಅದಕ್ಕೆ ವಿರುದ್ಧವಾದ ಒಂದು ಮಾತನ್ನು ಕೇಳಲೂ ತಾಳ್ಮೆ ಇರುವುದಿಲ್ಲ. ಇಲ್ಲಿ ನಿಜವಾದ



ಇಂಥ ಅನುಭವ ಪಡೆಯಬಲ್ಲ ಒಬ್ಬನಿದ್ದರೆ ನೂರು ಕೋಟಿ ಜನ ಅರೆಕೊರೆ, ಅಪಕ್ವ ಮಂದಿ ಇರಬಹುದು. ಆ ಆಟಗಳೊ ವೇಷಗಳೊ ಇರಬಹುದು. ಆ ಮಾತನ್ನಾಡಿ ಸ್ವಾರ್ಥಸಾಧನೆ ಮಾಡಿಕೊಳ್ಳಬಲ್ಲ, ಪ್ರತಿಷ್ಠೆ ನಿರ್ಮಾಣ ಮಾಡಿಕೊಳ್ಳಬಲ್ಲ ಜನರಿರಬಹುದು. ಅವರು ದುಷ್ಟರಾದರೆ ಲೋಕಕಂಟಕರಾಗುತ್ತಾರೆ; ಸಜ್ಜನರಾದರೆ ಭ್ರಾಂತಿಯ ಮಂಡಲಗಳನ್ನು ಕಲ್ಪಿಸುತ್ತಾರೆ. ಲೋಕದ ಜೀವನ ಹೀಗೆ ನಡೆದಿದೆ. ಒಂದು ಕಡೆ ಕಂಡ, ಪರೀಕ್ಷಿಸಬಹುದಾದ, ನಿರ್ಭಯವಾಗಿ ಸ್ವತಂತ್ರವಾಗಿ ಧಾರಾಳವಾಗಿ ತೀರ್ಮಾನಗಳಿಗೆ ಬಂದು ಸುಮಾರು ಒಂದೇ ತೆರನಾದ ಬುದ್ಧಿ ಉಳ್ಳ ಜನ ಚರ್ಚೆಗಿಟ್ಟು ತೀರ್ಮಾನ ಮಾಡಬಹುದಾದ ಪ್ರಪಂಚ ಪ್ರಕೃತಿಯದು, ಸಮಾಜದ್ದು. ಇದರಲ್ಲಿರುವ ವೈವಿಧ್ಯವನ್ನು ಕಂಡು ಬೆರಗಾಗಬಹುದು, ಉತ್ಸಾಹ ಪಡಬಹುದು, ನಿರುತ್ತೇಜಿತರಾಗಬಹುದು. ಇಲ್ಲಿನ ಸಮಸ್ಯೆಗಳೇ ಜನರ ಬುದ್ಧಿಯನ್ನು ಮೂದಲಿಸುವಷ್ಟು ನಮ್ಮನ್ನು ಇದಿರಿಸಿ ನಿಂತಿರುವಾಗ, ನೂರು ಅಭಿಪ್ರಾಯಗಳಿಗೆ ಎಡೆಕೊಟ್ಟು ಎಲ್ಲಿನವರೆಗೆಂದರೆ ಅಲ್ಲಿಯವರೆಗೆ ಸೂಕ್ತವಾಗಿ, ನ್ಯಾಯವಾಗಿ ವಿಷಯಗಳನ್ನು ಪರಿಶೀಲಿಸಬಹುದು. ಆಲೋಚನೆಯ ಸ್ವಾತಂತ್ರ್ಯ ಬಹುದೊಡ್ಡ ಅವಕಾಶ. ಯಾರಿಗೆ ಯಾರೂ ಹೆದರಿ ಮನಸ್ಸನ್ನು ಕುಂಠಿತಮಾಡಿಕೊಳ್ಳಬೇಕಾಗಿಲ್ಲ. ಹೇಳಿದುದು ಪ್ರಬಲರಾಗಿರುವವರಿಗೆ ವಿರುದ್ಧವಾದಾಗ, ಧೀರರಾಗಿ ಒಬ್ಬೊಬ್ಬರೇ ನಿಂತು ಸಾವನ್ನೊ ನೋವನ್ನೊ ಶಿಕ್ಷೆಯನ್ನೊ ತಿರಸ್ಕಾರವನ್ನೊ ಎದುರಿಸಬಹುದು. ಬಡತನ ಕಾಯಿಲೆಗಳಲ್ಲಿ ಕಂಗಾಲಾಗಬಹುದು. 'ಯಾರೊಪ್ಪಿದರೆಷ್ಟು, ಬಿಟ್ಟರೆಷ್ಟು? ಪ್ರಾಮಾಣಿಕವಾಗಿ ನನಗೆ ತೋರುತ್ತಿರುವುದು ಹೀಗೆ; ನನ್ನ ಅಲೋಚನಾ ವಿಧಾನ ಇದು; ನಾನು ಬಳಸುವ ಮಾತುಗಳು ಇವು; ಇವಕ್ಕೆ ನನ್ನ ಅರ್ಥ ಇದು; ವಿಷಯದ ಹಸರ, ನನ್ನ ಮೌಲ್ಯಗಳು ಇಂಥವು; ಇವುಗಳಲ್ಲಿ ಮೇಲು ಬೀಳು, ನಿಮ್ನ ಉನ್ನತ ಇಂಥವು ಎಂದುಕೊಂಡಿದ್ದೇನೆ; ಇದಕ್ಕೆ ನನ್ನ ಕಾರಣಗಳಿವು; ಇವುಗಳ ಮೇಲೆ ಆಧಾರಗೊಂಡ ನನ್ನ ನಿರ್ಣಯಗಳು ಇಂಥವು' ಎಂದು ಹೇಳುವ ಅವಕಾಶ ಇದು. ಇದಕ್ಕಿಂತ ದೊಡ್ಡ ಅಥವಾ ಅನುಕೂಲವಾದ ಸನ್ನಿವೇಶ ಇನ್ನಾವುದಿದೆ? ಇಲ್ಲಿ ಮನುಷ್ಯನ ವ್ಯಕ್ತಿತ್ವಕ್ಕೂ ಸ್ವಾತಂತ್ರ್ಯಕ್ಕೂ ತನ್ನ ಗಮ್ಯವನ್ನೂ ಗತಿಯನ್ನೂ ರೀತಿಯನ್ನೂ ನಿರ್ಧರಿಸಿ ರೂಪಿಸಿಕೊಳ್ಳುವುದಕ್ಕೂ ನೆಲಸಿದೆ. ಬಹುಶಃ ಮನುಷ್ಯ ವ್ಯಕ್ತಿತ್ವದ ಪರಮ ವಿಲಾಸದ್ದು ಈ ಆವರಣ. ಅದು ಹರಡಲು ಇಲ್ಲಿನಷ್ಟು ಹೆಚ್ಚಿನ ಅವಕಾಶ ಬೇರೆಲ್ಲಿಯೂ ಇಲ್ಲ. 'ಯೋ ಧೀರಾಃ' ಎಂಬ ಮಾತು ಭರತಖಂಡದಲ್ಲಿ ಅನಾದಿ ಕಾಲದಿಂದ ಬಂದದ್ದು. 'ಧೀರಾಃ' ಎಂಬ ಮಾತಿಗೆ ತಿಳಿದವರು, ದೃಷ್ಟಾರರು, ಏನನ್ನೂ ತಾಳಿಕೊಳ್ಳಲು ಶಕ್ತಿ ಉಳ್ಳವರು ಎಂದು ಅರ್ಥ. "ಇಂಥ ಪ್ರಶ್ನೆ ಕೇಳಬೇಡ, ದುಸ್ಸಾಧ್ಯ; ನಿನಗೆ ಬೇಕಾದ ಏನನ್ನಾದರೂ ಕೊಡುತ್ತೇನೆ: ಶತಾಯುಷಃ ಪುತ್ರಪೌತ್ರಾನ್ವೃಣೀಶ್ವ.... ಬಹೂನ್ ಪಶೂನ್ ಹಸ್ತಿ ಹಿರಣ್ಯಂ ಅಶ್ವಾನ್/ ಭೂಮೇರ್ ಮಹದಾಯತನಂ ವೃಣೀಶ್ವ ಸ್ವಯಂ ಚ ಜೀವಶರದೋಯಾವದಿಚ್ಛಸಿ/ ಏತತ್ತುಲ್ಯಂ ಯದಿಮನ್ಯಸೇವರಂ ವೃಣೀಶ್ವ ವಿತ್ತಂಚಿತ ಜೀವಿಕಾಂ ಚ / ಮಹಾಭೌಮೌ ನಚಿಕೇತಃ ತ್ವಮೇಧಿ ಕಾಮಾನಾಂತ್ವ ಕಾಮಭಾಜಂ ಕರೋಮಿ / ಯೇ ಯೇ ಕಾಮಾ

ದುರ್ಲಭಾ ಮರ್ತ್ಯಲೋಕೇ ಸರ್ವಾನ್ ಕಾಮಾಂಶ್ಛಂದತಃ ಪ್ರಾರ್ಥಯಸ್ವ / ಇಮಾ ರಾಮಾಃ ಸರಥಾಃ ಸತೂರ್ಯಾ ನಹೀದೃಶ ಲಂಭನೀಯಾ ಮನುಷ್ಯೈಃ / ಆಭಿಃರ್ಮತ್ತಪ್ರತ್ತಾಭಿಃ ಪರಿಚಾರಯಸ್ವ ನಚಿಕೇತೋ ಮರಣಂ ಮಾನುಪ್ರಾಕ್ಷೀಃ" ಎಂದು ಯಮನು ಹೇಳಿದರೆ ಉತ್ತರವಾಗಿ ನಚಿಕೇತನ ಉತ್ತರವೇನು? ಇಲ್ಲಿ ಛಂದಸ್ಸಿನ ವಾಣಿಯೇ ಉದಾತ್ತವಾದ ತಿರುವು ಕೊಡುತ್ತದೆ – ಶ್ರೇಯಸ್ಸು ಪ್ರೇಯಸ್ಸುಗಳ ರೂಪಣಕ್ಕೆ, ವಿವೇಚನೆಗೆ. 'ಶ್ವೋಭಾವಾ' ಎಂದವನೇ ನಚಿಕೇತ 'ನ ವಿತ್ತೇನ ತರ್ಪಣೀಯೋ ಮನುಷ್ಯೋಃ' ಇತ್ಯಾದಿ ನುಡಿಯುತ್ತಾನೆ. ಈ ನಚಿಕೇತಾಗ್ನಿ ಮಾನವನ ಬುದ್ಧಿಶಕ್ತಿಯ, ಆತ್ಮಶಕ್ತಿಯ ಪರಮ ಪ್ರಭಾವಶಾಲೀ ಶಕ್ತಿ. ಇದನ್ನು ಬಳಸಿಕೊಂಡು ಲೋಕಸತ್ಯವನ್ನು, ಕಾಲಸತ್ಯವನ್ನು, ಕಲಾಸತ್ಯವನ್ನು, ಜೀವನದ ಹೃದಯಾಂತರಾಳದ ಸತ್ಯವನ್ನು, ದೈವೀಸತ್ಯವನ್ನು ಅರ್ಥಮಾಡಿಕೊಳ್ಳುವ ಆಸೆ ಎಲ್ಲಿಯವರೆಗೂ ಹೃದಯದಲ್ಲಿ ಉರಿಯುತ್ತಿರುವುದೊ ಅಲ್ಲಿಯವರೆಗೆ ಮಾನವನ ಕೀರ್ತಿಯೂ ಚೈತನ್ಯವೂ ಪ್ರಜ್ವಲವಾಗಿರುತ್ತದೆ.

**–15–**

ನಾನು ವಿದ್ಯಾರ್ಥಿಯಾಗಿದ್ದಾಗ ನನ್ನನ್ನು ಆಕರ್ಷಿಸಿದ ಪುಸ್ತಕಗಳಲ್ಲಿ ತತ್ವಜ್ಞಾನಿಯಾದ ಬರ್ನಾರ್ಡ್ ಬೊಸಾಂಕೆ ಅವರು 'ಗಿಫ್ಫೋರ್ಡ್ ಭಾಷಣಗಳು' ಮಾಲೆಯಲ್ಲಿ ಬರೆದಿರುವ 2–3 ಈ ವಿಳಾಸಗಳುಳ್ಳವು. ಒಂದು,The Principle of Individuality and Value. ಇನ್ನೊಂದು, The Value and Destiny of the Individual. ಅಲ್ಲಿ ಏನಿದೆಯೋ ಈಗ ನಾನು ಹೇಳಲಾರೆ. ಅವನ್ನು ಓದುತ್ತಿರುವಾಗ ನನಗೆ ಬಂದ ತುಂಬಿನ ಕಲ್ಪನೆ ದೊಡ್ಡದು. ಆತನ ಬಗೆಯ Absolute Idealism ಇಂದು ನನ್ನದಲ್ಲ. ಆದರೆ ಆತನು ಅಲ್ಲಿ ಕೇಳಿಕೊಳ್ಳುವ 'ವ್ಯಕ್ತಿ, ವ್ಯಕ್ತಿತ್ವ ಎಂದರೇನು? ಮೌಲ್ಯ ಎಂದರೇನು? ಈ ವ್ಯಕ್ತಿತ್ವದ ಬೆಲೆಯೇನು? ವ್ಯಕ್ತಿತ್ವವನ್ನು ಒಪ್ಪಿಕೊಂಡರೆ ಇವನ ಪರಮಗತಿ, ಇವನ ಮತ್ತು ಇವನ ಪ್ರಪಂಚದ ಮೇಲೆ ಆಡುವ ವಿಧಿವಿಲಾಸ ಎಂಥುದಾಗಿರಬೇಕು' ಎಂಬ ಪ್ರಶ್ನೆ ಬಹುತರ ಮೂಲಭೂತ. ಇದನ್ನು ಸತತವಾಗಿ ನಿರಂತರವಾಗಿ ಜೀವ ಕೇಳಿಕೊಳ್ಳುತ್ತಿರಬೇಕು. ಮೂರನೆಯದು, ಮೇತರ್‌ಲಿಂಕನ 'Wisdom and Destiny.' Destiny[8] – 'ವಿಧಿ' ಎನ್ನೋಣವೆ? – ಹೇಗೇ ಇರಲಿ, ಅದು ನಿಜ ಇರಲಿ ಬಿಡಲಿ, ಮನುಷ್ಯನ ವಿವೇಕ, ಪ್ರಾಜ್ಞತೆ ಅದನ್ನು ಗೆಲ್ಲಬಲ್ಲದು ಎಂಬುದು ಅಲ್ಲಿನ ಮಾತಿನ ಶೈಲಿ. ಇವು ಧೀರನಾದ ಮನುಷ್ಯನ ಮನಸ್ಸಿಗೆ ಧೈರ್ಯವನ್ನು ಕೊಡುತ್ತದೆ.

ಪ್ರಪಂಚ ಈಗಿರುವ ಹಾಗೆ, ಈಗ ಬೆಳೆದಿರುವ ಹಾಗೆ ಬೆಳೆದಿರುವುದೂ, ಹೇಗೆ ಬೆಳೆಯಲಿದೆಯೊ ಹಾಗೆ ವಿಕಸನಗೊಳ್ಳುವುದೂ, ಹೇಗೆ ನಮಗೆ ತಿಳಿಯದ ಹಾಗೆ ಆರಂಭವಾಯಿತೊ ಹಾಗೆಯೇ ಮುಗಿಯುತ್ತದೆ. ಯಾವ ಶಕ್ತಿ ಇದನ್ನು ನಡಸುವುದೊ ಅದರ ಇಷ್ಟದಂತೆ ನಡೆಯುವುದು. ಅದರ ಇಚ್ಛೆ–ಸಂತೋಷ–

8. 'Destiny' ಕಲ್ಪನೆಗೂ 'Fate' ಕಲ್ಪನೆಗೂ ಸ್ವಲ್ಪ ವ್ಯತ್ಯಾಸವಿದೆ.



ಲೀಲೆಯೆನ್ನೋಣವೆ? ಮನುಷ್ಯನ ಬುದ್ಧಿ ನಿರ್ಮಾಣವಾದ ಮೇಲೆ ಅವನ ಶಕ್ತಿಯುಕ್ತಿಗಳಿಗೆ ಒಳಪಟ್ಟು ಅದು ಆಡುವುದು, ಮಾಡುವುದು. ಅದರ ಸಂತೋಷ ಅದರ ವೈಭವದ ಪ್ರಕಾಶ. ಪ್ರಪಂಚವನ್ನು ನಿರ್ಮಾಣ ಮಾಡಿತೆಂಬ ಪ್ರಭುಶಕ್ತಿ ಇದೆಲ್ಲಾ ಹೀಗೆ ಆಗಬೇಕು ಎಂದು ಮಾಡಿದ್ದಾದರೆ ಈ ಶಕ್ತಿಯ ಪ್ರಕಾಶಕ್ಕೂ ಎಡೆಮಾಡಿಕೊಟ್ಟಂತಾಯಿತಲ್ಲವೆ? ಇದೂ ಆ ಇಚ್ಛೆಯಲ್ಲಿ ಸಂಕಲ್ಪದಲ್ಲಿ ಇರಬಾರದೆ ಎನ್ನಿಸುತ್ತದೆ. ಆ ಮೂಲೋದ್ದೇಶದಲ್ಲಿ ಇದ್ದುದನ್ನೆಲ್ಲಾ ಮನುಷ್ಯನು ಈಗ ಅರಿತಿದ್ದಾನೆ, ತಾನೇ ಇತ್ತ ಶಕ್ತಿಯ ಪ್ರಯೋಗದಿಂದ. ಇನ್ನು ಮನುಷ್ಯನಿಗೆ ತಿಳಿಯದುದು ಒಂದೂ ಇಲ್ಲ ಎಂದು ಅರಿತಾಗ, ಈ ಸೃಷ್ಟಿಕಲ್ಪದ ಕೆಲಸ ಮುಗಿಯಿತು. ಇನ್ನೊಂದು ಇಚ್ಛೆಗೊ ಸೃಷ್ಟಿಗೊ ಲೀಲೆಗೊ ಅದು ತೊಡಗಿತು. ಇದು ಸಾರ್ಥಕವಾಯಿತು ಎಂಬ ಇಂಥ ಭಾವ ಅಯುಕ್ತವಾಗಬಾರದು.

ಆದರೆ ರಿಲಿಜನ್ ಎಂಬುದರಲ್ಲಿ ಆ ಶಕ್ತಿಗೆ ನಡುಗಿ ಕರಗಿ ತಗ್ಗಿ ಕುಗ್ಗಿ ಬಗ್ಗಿ ಸೋತು ಬೇಡುತ್ತ ಆತ್ಮಸಮರ್ಪಣೆ ಎಂಬ ಅರ್ಥದಲ್ಲಿ ಕೂಡ ವ್ಯಕ್ತಿತ್ವವನ್ನು ಮಣಿಸಿ ಹೊರಳಾಡುವಂತೆ ಕೇಳುವುದು ನಿತ್ಯಲಕ್ಷಣವಾಗಿಬಿಟ್ಟಿದೆ. ಇದು ಅರಿತ, ಸಮಾನತೆಯ, ಉತ್ತಾನತೆಯ ಸಂತೋಷವೂ ದೈವ ಎಂಬ ಭಾವವಿಸ್ಮಯದಿಂದ, ಸಂದೇಹದಿಂದ, ಭಯದಿಂದ, ಪೂಜ್ಯಭಾವದಿಂದ ಹುಟ್ಟಿದ್ದು.

ದೈವ ಎಂಬುದನ್ನು ಒಪ್ಪಿಕೊಂಡ ಮೇಲೆ, ಅದಕ್ಕೆ ವಿಧೇಯವಾಗಿ ತಗ್ಗಿ ಬಗ್ಗಿ ನಡೆಯುವುದು ತಪ್ಪೆ? ಆ ಬಗೆಗೆ ವಿನಯ ತೋರಿಸದವರು ಇನ್ನೇತರ ಶಕ್ತಿ ಅಥವಾ ಪ್ರಭಾವಗಳಿಗೆ ಬೆಲೆ ಕೊಟ್ಟಾರು? – ಎಂಬ ಮಾತು ಸಹಜವಾಗಿ ಬರಬಲ್ಲುದು. ಈ ವಾದ ಸರಿಯೇ; ಆದರೆ ಇಲ್ಲಿ ಎರಡು ಕವಲುಗಳುಂಟು. ಒಂದು: ದೇವರೆಂಬ ಹೆಸರಿನಲ್ಲಿ ಯಾರು ಏನು ಹೇಳಿದರೂ–ಸಮಾಜವೊ, ಸಂಪ್ರದಾಯವೊ, ಉಕ್ತಿಗಳೊ, ಗ್ರಂಥಗಳೊ ಏನೇನು ಹೇಳಿಕೊಂಡು ಬಂದಿವೆಯೊ–ಅದಕ್ಕೆ ತಗ್ಗಿ ಬಗ್ಗಿ ನಡೆಯುವುದು ಸರಿಯಾದೀತೊ? ಇದರ ಜೊತೆಗೆ ಆಚಾರದ ಮಠ ಸಂಸ್ಥೆಗಳ ಚರಿತ್ರೆ ಇರುತ್ತದೆ. ದೇವರು ಎನ್ನುವ ಭಾವದಲ್ಲಿ ಅಭಿಪ್ರಾಯಗಳು ಬೆಳೆದಿರುತ್ತವೆ. ಕಾಲ ದೇಶ ಶಿಕ್ಷಣ ಸಂಸ್ಕಾರಗಳ ಪರಿಣಾಮವಾಗಿ ಉದಾರ ಕೃಪಣ ಎಂಬ ಅಭಿಪ್ರಾಯಗಳೂ ಶುಚಿ ದಯೆ ಸಹನೆ ಎಂಬ ಭಾವಗಳೂ ಸಾಮಾಜಿಕ ಅಗತ್ಯ ಮುಂತಾದವೂ ಬೆಳೆದಿರುತ್ತವೆ. ಮನಸ್ಸುಗಳು ಆ ಅವಶ್ಯಕತೆಗಳಿಗೆ ಹಿಗ್ಗಬೇಕಾಗುತ್ತದೆ, ಹೊಂದಬೇಕಾಗುತ್ತದೆ. ಯಾವ ಕಾಲದ ಎಂಥವರ ಮನಸ್ಸನ್ನು ನಾವು ಒಲಿಸಿಕೊಳ್ಳಬಯಸುತ್ತಿದ್ದೇವೆ ಎಂಬುದರ ಅರಿವಿಲ್ಲವಾದರೆ ಪ್ರಯತ್ನ ವಿಫಲ, ವ್ಯರ್ಥ ಆಗುತ್ತದೆ. ಅಲ್ಲದೆ ಮಠ ಮಂದಿರಾದಿಗಳು ಈ ಸಂಬಂಧದಲ್ಲಿ ಬೆಳೆದು, ಅಲ್ಲಿಯ ವ್ಯವಸ್ಥೆ ಆರಾಧನೆಗಳು ಬಗೆಬಗೆಯಾಗಿ ಕಟ್ಟಿ ಅನೇಕ ನಿರ್ಬಂಧಗಳೂ ಸಣ್ಣತನಗಳೂ ಸ್ವಾರ್ಥ ಮತ್ತು ಆಸಕ್ತಿ ಪ್ರಭಾವಗಳೂ ಬೆಳೆದು, ಮನಸ್ಸನ್ನೂ ರೀತಿಗಳನ್ನೂ ಮಾರ್ಪಡಿಸುತ್ತವೆ. ದೇವರೂ ದೇವರ ಭಕ್ತರೆಂಬ ಸಂತರೂ ದೇವರ ಅವತಾರಗಳೆಂಬ ಕತೆಗಳೂ ಬಹುವಾಗಿ ಬೆಳೆದು ಪುರಾಣಾದಿಗಳಾಗಿ (Myths

& Mythology; Theology; Church, Mutts) ಇವೆಲ್ಲ ಒಂದು ಪಂಥ, ಅವಿಭಾಜ್ಯ ಅರ್ಥಮಂಡಲ, ಕ್ರಿಯಾಮಂಡಲ ಎಂದು ಇವಕ್ಕೆಲ್ಲ ಒಪ್ಪಿಗೆ ಕೊಟ್ಟು ನಡೆವುದು ದುಸ್ಸಹವಾಗಬಲ್ಲದು. ಇಲ್ಲಿ ತತ್ವ ಭಾಗ ಕಡಮೆ. ನಡವಳಿಕೆಯ ಸಂಗತಿಗಳು ಇವು. ಮೂಲವಾಗಿ ಆರಂಭವಾದ ದೇವರು ಎಂಬ ಭಾವನೆಗೆ ಸೀಗೆ ಮೆಳೆಯಂತೆ ಇವು ಸುತ್ತಿಕೊಂಡು ಬೆಳೆಯುತ್ತವೆ. ಒಂದೊಂದು ಮತದ ಚರಿತ್ರೆಯಲ್ಲಿಯೂ ಒಬ್ಬೊಬ್ಬರ ವಾಣಿಯಿಂದಲೊ ನಡತೆ ಚರಿತ್ರೆಯಿಂದಲೊ ಆರಂಭವಾದ ಅವು, ಹಿಗ್ಗಿ ಬೆಳೆದು ಭಕ್ತವರ್ಗ, ನಿಷ್ಠೆ ಆಚಾರ, ಸಂಸ್ಥೆ ಮಂದಿರಗಳಾಗಿ ಬೆಳೆದು ಇವೇ ಒಂದು ಪಂಥವಾಗಿ, ಇತರ ಮತ ಪಂಥಗಳಿಂದ ತನ್ನನ್ನು ಪೂರ್ತಿ ಬೇರೆ ಮತ್ತು ತಾನು ಹೆಚ್ಚು ಪೂಜ್ಯ ಎಂದುಕೊಳ್ಳುತ್ತ, ಮೂಲ ವ್ಯಕ್ತಿ ಉಕ್ತಿಗಳಿಗಿಂತ ಹೆಚ್ಚಾಗಿ ಇದರ ನಿಷ್ಠೆ ಭಕ್ತಿಗಳಿಗೆ ಹೆಚ್ಚು ಪ್ರಾಶಸ್ತ್ಯ ಬಂದು, ಆರಂಭದ ದರ್ಶನಕ್ಕೇ ಚ್ಯುತಿ ಬಂದು, ಇದರ ಪ್ರಾಬಲ್ಯ ದಬ್ಬಾಳಿಕೆ ಹೆಚ್ಚಿ, ಸತ್ವಗುಂದಿ ಅರ್ಥಹೀನವಾಗಿರುವ ಪ್ರಸಂಗಗಳು ಲೋಕದ ಮೇಲೆಲ್ಲಾ ಎರಚಿ ಚೆಲ್ಲಿವೆ. ಇವು ಕಾಲ ಕಾಲಕ್ಕೂ ಹೊಸ ಮೆರುಗಿನಿಂದ ಜೀವವನ್ನು ಹೊಸತುಗೊಳಿಸದಿದ್ದರೆ ಇವುಗಳ ಪ್ರಯೋಜಕತೆಯೇ ಇಲ್ಲವಾಗುತ್ತದೆ. ಇದಕ್ಕೆಲ್ಲ ಸಂಬಂಧಿಸಿದ ತಿಳಿವಳಿಕೆ ಬೇರೆ ಬೇರೆ ಮಟ್ಟದಲ್ಲಿ ಆಯಾ ಮತ ಪಂಥಗಳಿಗೆ ಸಂಬಂಧಪಟ್ಟು ಒಳಗಿನವರು, ಅದನ್ನು ಟೀಕೆ ಮಾಡುತ್ತಿರುವ ಹೊರಗಿನವರು, ಇದನ್ನು ಉಳಿಸಬೇಕೆನ್ನುವವರು, ಮುರಿದು ನಾಶ ಮಾಡಬೇಕೆನ್ನುವವರು ಎಲ್ಲರ ಅಭಿಪ್ರಾಯಕ್ಕೆ ಆ ಬಗೆಗೆ ಒಂದು ವಿವೇಚನಾ ಮಂಡಲಿಯಾಗುತ್ತದೆ. ಇಂಥದನ್ನು ಪರಿಶೀಲಿಸಬೇಕು.

ಕವಲಿನ ಇನ್ನೊಂದು ಭಾಗ ಇದು: ಯಾವ ದೇವರು ಇದನ್ನೆಲ್ಲಾ ನಿರ್ಮಾಣಮಾಡಿ ಇದರ ಅಂಶವಾಗಿ ಅಂತರ್ಯಾಮಿಯಾಗಿ ನಡೆಯುತ್ತ ಎಲ್ಲವನ್ನೂ ಸವರಿಸಿಕೊಂಡು ಹೊಗಬೇಕಾಗಿದೆಯೊ, ಅದರ ಉತ್ತಮೋತ್ತಮ ವ್ಯಾಪಾರವೆಂಬುದೇ ಯಾವುದಾದರೂ ಸಮಯದಲ್ಲಿ ಕಾಣದಾದರೆ, ಆ ದೈವವೆಂಬ ಭಾವಕ್ಕೇ ಚ್ಯುತಿ ಬಂದೀತು. ಆ ಅರಿವು ಅಗತ್ಯ. ಅದು ಸಹಜವೆಂದು ತಿಳಿದಿರಬೇಕು. ಸ್ವತಂತ್ರವಾದ ಬುದ್ಧಿಶಕ್ತಿ ಕೊಟ್ಟು ಅದಕ್ಕೆ ಬೆಲೆ ಇದೆ ಎಂದಾಗ, ಅದರ ಪ್ರಯೋಗಕ್ಕೂ ಪ್ರಕಾಶಕ್ಕೂ ಪ್ರಭಾವಕ್ಕೂ ಅದೇ ಬೆಲೆ ಕೊಡದಿದ್ದರೆ ಏನು ಮಾಡಿದ ಹಾಗಾಯಿತು? ಲೋಕದಲ್ಲಿ ಎಷ್ಟು ಮನುಷ್ಯರಿದ್ದಾರೊ ಅಷ್ಟು ಜನರ ಬುದ್ಧಿಶಕ್ತಿಯೂ ಸಾತ್ವಿಕವಾಗಿ ಸ್ವತಂತ್ರ ಬುದ್ಧಿಯಿಂದ ಬೆಳೆಯುವುದು ಸಂಸ್ಕಾರದ ಪರಮಗುರಿ ಎನ್ನಬಹುದಾದರೆ, ಒಂದೊಂದರ ಜೀವಗುಣವೂ ಒಂದೊಂದು ವಿಶಿಷ್ಟ ರೀತಿಯಲ್ಲಿ ಬೆಳೆದು ತನ್ನ ಪರಮ ವಿಶ್ವಾಸವನ್ನು ಮೆರೆಯ ಬಲ್ಲದಾದರೆ, ಅದು ಹಾಗೆ ಪ್ರತ್ಯೇಕವಾಗಿ ಉಳಿದು ಬೆಳೆವುದೆ? ಇದನ್ನು ನಿರ್ಮಾಣ ಮಾಡಿದ ಶಕ್ತಿಗೆ ತೃಪ್ತಿ ತರಲಾರದೆ? ಇದು ಶಕ್ಯವೆ?–ಎಂಬವೆಲ್ಲ ಪ್ರಶ್ನೆಗಳನ್ನು ವಾದ ವಾಗಿಯಾದರೂ ಎಣಿಸುವುದು ಅಗತ್ಯ. ಯಾವುದೊ ಒಂದು ಉದ್ದೇಶಕ್ಕೆ ಈ ಎಲ್ಲ ಒಳಗಾಗಬೇಕು. ಅದೊಂದು ಮಾತ್ರ ಸರಿ ಎಂದು ಮತವಳರು ಸಾಧಿಸುವ ರೀತಿಗೆ



ಅದನ್ನು ಹಿಸುಕಿ ಹಿಂಡಿ ಅಡಗಿಸುವುದು ಧರ್ಮವಾದೀತೆ? ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಬೆಲೆ ಯಾವುದು, ಗುರಿ ಯಾವುದು ಮತಧರ್ಮದಲ್ಲಿ (Religion)? – ಎಂಬಂಥ ಪ್ರಶ್ನೆ ಉಳಿಯುತ್ತದೆ. ಅಥವಾ, ಈ ಸ್ವಾತಂತ್ರ್ಯ ಎಂಬುದೇ ಭ್ರಾಂತಿಯೋ? ಯಾವುದೊ ವಿಧಿ – ಮತ್ತು ಕರ್ಮಕಾಂಡ – ಪ್ರತಿಯೊಂದು ಜೀವವನ್ನು ಅದರದರ ರೀತಿಯಲ್ಲಿ ಫಲಪರಿಣಾಮವನ್ನು ತಂದುಕೊಟ್ಟು ಅದನ್ನು ನಿರ್ಘೃಣವಾಗಿ ಸಾಧಿಸುವುದು ಯುಕ್ತವಾದೀತೆ? ಈ ಎಲ್ಲ ಪ್ರತ್ಯೇಕತೆಗಳನ್ನೂ ಪ್ರತ್ಯೇಕ ಸಾಧನೆಗಳಾಗಿ ಸಿದ್ಧಿಗಳಾಗಿ ಉಳಿಸುವುದು ಆ ಪರಮವಸ್ತುವಿಗೆ ಹರ್ಷವಾಗಲಾರದೆ/ವಾಗಬೇಡವೆ[9]. ಎಂದಾಗ, ಜೀವಾತ್ಮ ಪರಮಾತ್ಮ ಭಾವಕ್ಕೂ ಆ ಸಂಬಂಧದ ತತ್ವಗಳಿಗೂ ಯಾವ ಮೌಲ್ಯವನ್ನು ನಾವು ಕೊಡಬೇಕು? ಮತಪಂಥಗಳವರ ವಿಚಾರ ಈ ದಿಕ್ಕಿನಲ್ಲಿಯೂ ನಡೆಯುತ್ತದೆ. ಇದನ್ನು 'ಜ್ಞಾನಲವದುರ್ವಿದಗ್ಧ' ಎಂಬ ಖಂಡನೀಯ ಮತ್ತು ಅಣಕದ ಮಾತುಗಳಿಂದ ಕರೆದು ಇಂಥ ನಿಲವುಗಳನ್ನು ತಿರಸ್ಕರಿಸುವ ಮಾತಾಡಬಹುದೆ?

ದೇವರು ಎನ್ನುವ ಕಲ್ಪನೆಯಲ್ಲಿ ಇನ್ನೊಂದು ಅಂಶವಿದೆ. ಅವನಿಗೆ ವಿಧೇಯತೆ, ಶರಣಾರ್ಥಿ, ಪರಮಾರಾಧನೆ ಎನ್ನುವಾಗ, ಆ ಪಂಥದ ವರ್ಗದಲ್ಲೆಲ್ಲ ಒಂದು ಶಿಸ್ತು, ವಿಧೇಯತೆ ಹುಟ್ಟಿಕೊಳ್ಳುತ್ತದೆ. ಮತದ ನಾಯಕರು ಹೀಗೆ ನಡೆಯತಕ್ಕದ್ದೆಂದು ಮಡಿ ಆಚಾರ ಎಂಬ ಹೆಸರಿನಲ್ಲಿ ನಟ್ಟರೆ, ಯಾವ ರಾಜಕೀಯ ಆರ್ಥಿಕ ವ್ಯವಸ್ಥೆಗೂ ದೊರಕಲಾರದ ಶಿಸ್ತು ಪಾಲನೆ ಸ್ಥಾಪಿತವಾಗುತ್ತದೆ. ಒಂದು ಸಂದರ್ಭದಲ್ಲಿ ರೋಮಿನ ಪೋಪ್‌ನೊಡನೆ ಮಾತನಾಡುತ್ತ ನಪೋಲಿಯನ್ ಎಂದನಂತೆ: 'ನಿಮ್ಮಂಥ ಸಂಸ್ಥೆ, ನೀವು ಮತದಲ್ಲಿ ಸ್ಥಾಪಿಸಿರುವ ವಿಧೇಯತೆ, ಶಿಸ್ತು ಇಲ್ಲದಿದ್ದರೆ ಅಂಥುದೊಂದನ್ನು ನಾನು ನಿರ್ಮಾಣ ಮಾಡಬೇಕಾಗಿತ್ತು. ರಾಜಕೀಯ ನಡಸುತ್ತಿರುವ ನಾನು, ಮತ ವಂತಿಕೆಯ ಪರಮಾಧಿಕಾರ ಉಳ್ಳವರಾಗಿರುವ ನೀವು ಸೇರಿರುವಾಗ ಈ ಪ್ರಭಾವಗಳಿಗೆ ಚ್ಯುತಿಯಿಲ್ಲ' ಎಂದೊ ಏನೊ ಅಂದನಂತೆ. ರಾಜ್ಯದ ಮೇಲಧಿಕಾರಿಗಳು, ಮತಪಂಥದ ನಾಯಕರು, ಇವರಿಗೆ ನೆರವಾಗುವ ಹಣವಂತ ಮತ್ತು ಶ್ರೀಮಂತವರ್ಗಗಳು ಲೋಕವನ್ನು ತಮ್ಮ ಕೈಯಲ್ಲಿ ಹಿಡಿದುಕೊಡು ಸಾಮಾನ್ಯರ ಜೀವವನ್ನು ಹಿಂಡಿವೆ. ಈ ಇಬ್ಬರಿಗೂ ಲೋಕಶಾಂತಿ ಬೇಕು; ತಮ್ಮ ಅಧಿಪತ್ಯಕ್ಕಾಗಿ ದಂಗೆ ಬಂಡಾಯ ಇಷ್ಟ. ಇದಕ್ಕೆ ವಿರೋಧವಾದರೆ ರಾಜದ್ರೋಹ, ದೈವದ್ರೋಹ ಆಗುತ್ತದೆ. ದೇಶದ್ರೋಹ ಎಂದು ಹೇಳಿಬಿಟ್ಟರೆ ಎಂಥ ವ್ಯಕ್ತಿಗೂ ಉಳಿವಿಲ್ಲ, ಬಾಳಿಲ್ಲ. ಇಂಥ ಪರಮಾಧಿಕಾರವನ್ನು ಲೋಕಸಮಸ್ತದ ಹಿತಸಾಧನೆಯ ಮಾರ್ಗವೆಂದೂ ದೇವನೆಂಬ ಧರ್ಮಾಧಿಕಾರಿಯ ಲೋಕದ ಸಂತೋಷಕ್ಕೆ ಕಾರುಣ್ಯಕ್ಕೆ ನೆರವಿಗೆ ಸಾಧಕವಾಗಿಯೂ ತಂದೆ ಮಕ್ಕಳಂತೆ

---

9. ಆಟಗಾರನ ಸುಮನಸ – sportsmanship – ಎಂಬುದಿದೆ. ಅಂಥ ಸೌಮನಸ್ಯವನ್ನು ಸೃಷ್ಟಿಕರ್ತನಲ್ಲಿ ನಿರೀಕ್ಷಿಸಿದರೆ ತಪ್ಪೆ?

ಎಲ್ಲರನ್ನೂ ನಡಸಿಕೊಳ್ಳುವ ದೇವಭಾವನೆ ಲೋಕದಲ್ಲಿ ನಡೆಯದಾದರೆ ಇಂಥ ಸ್ಥಿತಿಯನ್ನು ನಡಸಬೇಕೆನ್ನುವ ಆಚರಣೆಗೆ ಮತ ಧರ್ಮ ಅವಕಾಶ ಕೊಟ್ಟ ಹಾಗಾಗುತ್ತದೆ.

ಎಲ್ಲಕ್ಕಿಂತ ದೊಡ್ಡದು ದೇವರ ಕರುಣೆ, ಪ್ರೀತಿ. ಇದು ಎಲ್ಲರಿಗೂ ಆಶ್ರಯ ಸ್ಥಾನ: ನೊಂದವರಿಗೆ, ಕಷ್ಟದಲ್ಲಿರುವವರಿಗೆ, ಅಶಕ್ತರಿಗೆ, ದಿಕ್ಕಿಲ್ಲದೆ ತಬ್ಬಲಿಗಳಾಗಿರುವವರಿಗೆ, ಲೋಕ ಕೈಬಿಟ್ಟ ಜನಕ್ಕೆ, ಕಡೆಗೆ ಪಾಪಿಗಳಿಗೆ. ಅದರ ಮೂಲಾರ್ಥ ದುಃಖಿಗಳು. ಏಕಾಂತದಲ್ಲಿ ದುಃಖ ಅನುಭವಿಸುವವರನ್ನು ಕಂಡು 'ಅಯ್ಯೋ ಪಾಪ' ಎನ್ನುವ ವಿಶಾಲಮತಿಗಳಿಗೆ ದೇವರು ಆಶ್ರಯಸ್ಥಾನ, ಕಡೆಯ ನೆಲಸು ಎಂಬ ಭಾವನೆ. ಅವನನ್ನು ನಂಬಿ ಕಷ್ಟವನ್ನೊ ನಿಷ್ಠುರವನ್ನೊ ಹೇಳಿಕೊಂಡು ಅವನ ಪ್ರೀತಿಗೆ ತಮ್ಮನ್ನು ಒಪ್ಪಿಸಿಕೊಳ್ಳುವ ಒಂದು ಅವಕಾಶ ದೇವರೆಂಬ ಭಾವನೆಯಲ್ಲಿ ಇರುವುದು ಇತರ ಎಲ್ಲ ಕಲ್ಪನೆ, ಕಾರಣ ಅಥವಾ ವಾದಗಳಿಗಿಂತ ಈ ಒಂದು ಆಶ್ರಯಸ್ಥಾನ, ದಿಕ್ಕು, ನೆಲೆ ಎಂಬ ಮೃದುಭಾವನೆ ದೇವರೆಂಬ ಕಲ್ಪನೆಯಲ್ಲಿ ದೊಡ್ಡದು. ಯಾರೆಷ್ಟೇ ಅನ್ಯಾಯ ಮಾಡಲಿ, ಕ್ರೌರ್ಯ ಅನಾದರಗಳನ್ನು ತೋರಿಸಲಿ, ದೇವರು ಹೃದ್ಭೂಮಿಯಾಗಿ ನುಡಿಯುವ ಅಂತರ್ವಾಣಿಯಾಗಿ ಆತನ ದನಿ ಕೇಳುತ್ತಿರುತ್ತದೆ. ಇದು ಸರಿ, ಇದಲ್ಲ, ಇದು ಪಾಪ, ಇದು ಪುಣ್ಯ ಎಂದು ಎಲ್ಲರ ಅಂತಸ್ತರದಲ್ಲಿಯೂ ಇದ್ದು ನುಡಿಯುವ ಶಕ್ತಿ ಇದರದು ಎಂಬ ಭಾವ ಇದಕ್ಕೆ ಪೂಜ್ಯತೆಯನ್ನು, ಬೆಲೆಯನ್ನು ಕೊಡುತ್ತದೆ. ಬಹುಶಃ ಭಕ್ತಿ ಪಂಥದಲ್ಲಿ – ಅದು ವೈಷ್ಣವವಾಗಲಿ, ಶೈವವಾಗಲಿ – ಕೆಲವು ಶಾಖೆಗಳಲ್ಲಿ ದೇವರೊಬ್ಬರೇ ಗಂಡು; ಉಳಿದ ಸೃಷ್ಟಿವರ್ಗವೆಲ್ಲಾ ಹೆಣ್ಣು. ಅವನಿಗೆ ಸಲ್ಲಿಸುವ ಭಕ್ತಿ ಸತಿ ಪತಿಗೆ ತೋರಿಸುವ, ಪ್ರಿಯೆ ಪ್ರಿಯಕರನಿಗೆ ತೋರಿಸುವ ಪ್ರಣಯದ ಮಧುರ ಭಾವ ಎಂದು ಸ್ತೋತ್ರ ಗೀತೆ ವೇಷ ಭಾಷೆ ನಡತೆ ನಡಸಿಕೊಂಡಿದೆ. ಇದು ಒಂದು ಬಗೆಯ ಹೆಣ್ತನದ – ಗುಣದಲ್ಲಿ, ಲಿಂಗದಲ್ಲಿ ಅಲ್ಲ – ಪ್ರೀತಿಭಾವನೆಯ ಹೊಮ್ಮಿಗೆ. ಆ ಒಂದು ಸಂಬಂಧದಲ್ಲಿ ಬಿಟ್ಟು ಉಳಿದ ಎಲ್ಲ ಅಂಶಗಳಲ್ಲಿಯೂ ಗಂಡುಸಾಗಲಿ, ಹೆಂಗುಸಾಗಲಿ ಎಷ್ಟೇ ಧೀರವಾಗಿ ಮನಸ್ವಿಯಾಗಿ ಧಾರ್ಷ್ಟ್ಯದಿಂದ ನಡೆದುಕೊಳ್ಳಲಿ, ಈ ಭಾವ ಬೆಳೆದಾಗ/ಬಲಿತಾಗ ಅದು ಮೃದುವಾಗುತ್ತದೆ, ಸುಂದರವಾಗುತ್ತದೆ, ಆರ್ದ್ರವಾಗುತ್ತದೆ, ಭವ್ಯವಾಗುತ್ತದೆ, ಅದರ ಮುಡಿಯಾಗಿ ದಿವ್ಯವಾಗುತ್ತದೆ. ಆದರೆ ಗಂಡು ಲಕ್ಷಣ ಸ್ವಾತಂತ್ರ್ಯ. ಅಧರ್ಮವೆಂದು, ಅನ್ಯಾಯವೆಂದು, ಸಂಕುಚಿತ ಅಥವಾ ಕೃಪಣವೆಂದು ತನ್ನ ಮನಸ್ಸಿನಲ್ಲಿ ಅರಿತ ಮಾನವ ಅದು ದೇವರ ಕಾರ್ಯ, ಅದಕ್ಕೆ ದೇವರ ಒಪ್ಪಿಗೆ ಇದೆ ಎಂಬಂತೆ ನುಡಿ ನಡೆ ಬಲಿಸಿ ಪ್ರತಿಭಟಿಸಿ ನಿಲ್ಲುತ್ತಾನೆ. ಅದು ಅಮಾನ್ಯವಾಗಬೇಕಿಲ್ಲ. ದೇವರ ಕೈಯಲ್ಲಿ ಚಕ್ರವಿದೆ, ವಜ್ರಾಯುಧವಿದೆ, ಹನಿಷ್ಯಾಮಿ ಎಂದು ಅವನು ನಿಂತುಬಿಟ್ಟರೆ ಅದು ಧರ್ಮ ಶಾಸನವಾಗುವುದಿಲ್ಲ. ಎದುರು ನಿಂತವನು ಸಾತ್ವಿಕನಾದರೆ ಇವನ ಸೋಲು–ಸಾವು ಮಾನವತೆಗೆ ಗೌರವ ತಂದೀತು. ಹೀಗೆ ನಿಲ್ಲುವುದು ಅಹಂಕಾರವೆನ್ನಬಹುದು. ದೇವರೆದುರಿಗೆ ಈ ಹಮ್ಮು–ಬಿಮ್ಮು ಏಕೆ ಎನ್ನಬಹುದು. ದೇವರಂಶವೇ ತಾನಾಗಿ ಆತನ ಧರ್ಮದ ಪರಮ ಲಕ್ಷಣವಾದ



'God is atleast as high as the highest thoughts he has implanted in the best of men' ಎಂಬ ವಾಕ್ಯ ನೆಲಸಿ ನಿಂತಂತೆ ಇರುವಾಗ – ಇದರ ಒಂದೊಂದು ಮಾತೂ ಚರ್ಚೆಗೆ ಈಡಾಗಬಲ್ಲದ್ದು! ಆದರೆ ಒಟ್ಟಿನಲ್ಲಿ – ಅಂಥ ಶ್ರದ್ಧೆ, ನಿಲವು ದೇವರ ಗೌರವಕ್ಕೂ ಪಾತ್ರವಾಗಬೇಕು ಎನ್ನಿಸುತ್ತದೆ. ಹೀಗಿರುವಾಗ ಮನುಷ್ಯ ಭಾವನೆ, ದೇವ ಭಾವನೆ ಜನದ ತಿಳಿವಳಿಕೆಯಲ್ಲಿ ಬಗೆಬಗೆಯ ಕಲ್ಪನೆಗಳನ್ನೂ ವ್ಯಾಪಾರಗಳನ್ನೂ ನಡೆಸುವಾಗ, ಯಾವುದನ್ನು Spiritual Values – ಆಧ್ಯಾತ್ಮಿಕ ಮೌಲ್ಯಗಳು – ಎಂದು ಕರೆಯಬಹುದು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಆದರೆ ಮನುಷ್ಯನ ಅನುಭವದಲ್ಲಿ ಈ ಎಲ್ಲಾ ಭಾವಗಳು, ಆಲೋಚನೆಗಳು ಬಂದಿವೆ. ಇವುಗಳ ಸಾಮರಸ್ಯ ಹಲವು ವೇಳೆ ಶಕ್ಯವಾಗದೆ ಇದೆ. ಸಾಮರಸ್ಯದ ಅಗತ್ಯ ಕಂಡಿದೆ. ಕೇವಲ ವಿಜ್ಞಾನದಲ್ಲಿ ಒಂದು ದೃಷ್ಟಿ, ಶಿಸ್ತು, ಮನೋಧರ್ಮ, ನಿಷ್ಪಾಕ್ಷಿಕತೆ, ಸತ್ಯಾನ್ವೇಷಣೆಯ ಮಾರ್ಗ, ಬಹುಮಟ್ಟಿಗೆ ಒಂದು ವಿನೀತ ಭಾವವಿದೆ. ಅದು ಅದರ ಧರ್ಮ. ಅದಕ್ಕೂ ಸಮಾಜ ಧರ್ಮಕ್ಕೂ ಸಂಬಂಧಿಸಿದ ಮತ್ತು ಮನಃಶಾಸ್ತ್ರ, ನೀತಿಶಾಸ್ತ್ರ ಮತ್ತು ಸಮಾಜ ವಿಜ್ಞಾನದ ಧರ್ಮಗಳಿಗೂ ಇದೇ ವಿಜ್ಞಾನದೃಷ್ಟಿ ದುಡಿಯಬಹುದು. ಆದರೆ ಇಲ್ಲಿ ವಿವೇಚನೆಯಿದೆ, ಮೌಲ್ಯಗಳಿವೆ. ಕೇವಲ ಪ್ರಕೃತಿಗೆ ಸಂಬಂಧಿಸಿದ ಸ್ವರೂಪವಲ್ಲ ಇಲ್ಲಿ ಮಾನ್ಯ. ಮಾನವತೆ ಅದರ ಮಂಗಳ; ಸಕಲ ಜನಹಿತಾಯ, ಸಕಲ ಜನಸುಖಾಯ. ಅನ್ವೇಷಣೆಯ ಸ್ವಾತಂತ್ರ್ಯ ಜೀವಿಗೆ ಸಾಧನೆಗಳ ಮತ್ತು ಗಮ್ಯಗಳ ಶುಚಿ, ಬಹುಜನದ ಮಂಗಳದ ಸಾಮರಸ್ಯ ಸಾಧನೆ ದೊಡ್ಡದಾಗುತ್ತವೆ. ನೀತಿ ಮತ್ತು ಧರ್ಮಶಾಸ್ತ್ರದಲ್ಲಿ ಧರ್ಮಮಾನವತೆಗೂ ವಿಜ್ಞಾನಸತ್ಯಕ್ಕೂ ಬಾಂಧವ್ಯ ಇಲ್ಲದಿರಬಹುದು. ಅದು ವಸ್ತು ಪರಿಜ್ಞಾನ. ಇದು ಇಲ್ಲಿದ್ದು ದುಡಿಯಬೇಕಾದ, ಆಯತ್ತವಾಗಬೇಕಾದ ಭಾಗ. ರೂಢವಾಗಿ ತೀರ್ಮಾನಕ್ಕೆ ಬಂದದ್ದೂ ಸೇರಿ ಜ್ಞಾನವೆಂಬುದರ ವಾಸ್ತುಮಂದಿರವನ್ನು ನಿರ್ಮಾಣ ಮಾಡಿಕೊಂಡಾಗ ಅದು ತತ್ವಜ್ಞಾನ ದರ್ಶನ ಅಥವಾ ವೇದಾಂತವಾಗುತ್ತದೆ. ಇಲ್ಲಿಯೂ ಸತ್ಯೈಕ ದೃಷ್ಟಿಯೇ ಪ್ರಧಾನವಾಗುವುದು. ಆದರೂ ತತ್ವಜ್ಞಾನದ ಮೌಲ್ಯಗಳು ಎಷ್ಟು ಅಂಶಗಳನ್ನು ಹೇಗೆ ಹೊಂದಿಸಿಕೊಳ್ಳುತ್ತವೆ? ಅದರ ಒಟ್ಟು ಚಿತ್ರವನ್ನು ಕಟ್ಟಿಸುವುದರಲ್ಲಿ ಯಾವುದಕ್ಕೆ ಪರಮಗಣ್ಯತೆಯನ್ನು ಕೊಡುತ್ತದೆ?– ಎಂಬ ಅಂಶಗಳನ್ನು ಒಪ್ಪುವವರು ಒಪ್ಪಬಹುದು, ಬೇಡದವರು ಬಿಡಬಹುದು. ದೇವರ ಕಲ್ಪನೆ ಮಾಡದೆ, ಇಲ್ಲದೆ ಜನ ವಿಜ್ಞಾನಿಗಳಾಗಿರಬಹುದು, ಸಮಾಜ ಸುಧಾರಕರಾಗಿರಬಹುದು, ತತ್ವಜ್ಞಾನಿಗಳಾಗಿರಬಹುದು – ಎಂದರೆ ನಾಸ್ತಿಕರಾಗಿರಬಹುದು – ಅಥವಾ ಸಂದೇಹವಾದಿಗಳೊ ಅಥವಾ ನಮಗೆ ತಿಳಿಯದ ವಿಚಾರ ಎಂದು ತಟಸ್ಥ ಮಾರ್ಗವನ್ನು ಅನುಸರಿಸುವವರಿರಬಹುದು. ಮತಧರ್ಮ ಅಥವಾ ರಿಲಿಜನ್ ಒಪ್ಪುವವರು ಇದನ್ನೆಲ್ಲ ಒಪ್ಪಬಹುದು, ಬಿಡಬಹುದು. ಇದೆಲ್ಲ ದೈವವ್ಯಾಪಾರ, ಲೀಲೆ ಎನ್ನಬಹುದು. ಇದನ್ನು ಹೀಗೆ ನಡಸುತ್ತಿರುವವನು ತಮ್ಮ ದೇವರೇ ಎನ್ನಬಹುದು. ಅವನ ಲೀಲೆ, ಸಂಕಲ್ಪ ನಮಗೆ ಹೇಗೆ ಗೊತ್ತಾಗುತ್ತದೆ ಎನ್ನುತ್ತ, ಅವರ ಎಲ್ಲ ಎಣಿಕೆ ಗಣಿಕೆಗಳೂ ತಾವೇ ಕಲ್ಪಿಸಿಕೊಂಡ ದೈವಸೃಷ್ಟಿಯಿಂದ

ದೈವಶಕ್ತಿಯಿಂದ ಮಾತ್ರ ಹುಟ್ಟುತ್ತವೆ, ಇರುತ್ತವೆ, ಬೆಳೆಯುತ್ತವೆ, ನಾಶವಾಗುತ್ತವೆ; ಅದನ್ನು ಒಪ್ಪಿಕೊಂಡು ನಡೆಯುವುದೇ ಧರ್ಮ, ಕರ್ಮ, ನೀತಿ, ಸಾಧನೆ ಎನ್ನಬಹುದು. Be humble, subject yourself, shut up and follow ಎಂಬುದು ಇಲ್ಲಿ ಮಾತ್ರ. ಈ ನಿಲವು ಉಳಿದ ಬಗೆಯ ಜ್ಞಾನವಿಜ್ಞಾನಗಳಿಗೆ ಸಮ್ಮತವಾಗುತ್ತದೆಯೊ ಇಲ್ಲವೊ... ಇದನ್ನು ವಿಜ್ಞಾನಿಗಳು ಹೋಗಲಿ, ತತ್ವದರ್ಶಿಗಳೂ ಒಪ್ಪದಿರಬಹುದು. ತತ್ವದರ್ಶಿಗಳ ನಿಲುವನ್ನು ಮತವಾದಿಗಳು ನೆಚ್ಚುವುದಿಲ್ಲ, ನಂಬುವುದಿಲ್ಲ. ತಮ್ಮ ದೈವವಾದಕ್ಕೆ ಅನುಕೂಲವಾದ ಒಂದು ದೈವವಿಜ್ಞಾನವನ್ನು (Theology) ಬೆಳಸಿಕೊಳ್ಳುವುದು ರೂಢಿ. ಅಲ್ಲಿ ಈ ದೈವವಾದ ಒಪ್ಪುವ ತತ್ವವಿವೇಚನೆಗೆ ಮಾತ್ರ ಬೆಲೆ, ಗೌರವ. ರಾಮನೊ, ಭೀಮನೊ, ನಂದಿಯೊ, ಶಿವನೊ, ಬುದ್ಧನೊ, ಜಿನನೊ, ಜರತುಷ್ಟ್ರನೂ, ಮೈಕಲನೊ, ಪ್ರವಾದಿಯೊ, ಗ್ರಂಥಸಾಹೇಬೊ, ಪರಿಯತ್ತೊ ಮಾತ್ರ ಸರ್ವೋಚ್ಚ ಪ್ರಭಾವ. ಅವುಗಳ ಒಪ್ಪಿಕೆಯಿಲ್ಲದಿದ್ದರೆ ಉಳಿದ ಯಾವುದಕ್ಕೂ ಬೆಲೆಯಿಲ್ಲ.

ಈ ಎಲ್ಲ ಜೀವನ ವಿಭಾಗಗಳಲ್ಲಿಯೂ ಕರ್ಮ–ನೀತಿ ಭಾಗಗಳಲ್ಲಿಯೂ ಕ್ರಿಯಾವಿಧಾನ ಒಪ್ಪುವ ಧರ್ಮ, ದೃಷ್ಟಿ ರೀತಿ ಆಗಮ ವಿಧಾನಗಳು, ಇವುಗಳ ಒಂದೊಂದು ಕಾರ್ಯತಂತ್ರ ಮತ್ತು ಅದಕ್ಕೆ ಸಂಬಂಧಿಸಿದ ಉಪತಂತ್ರಗಳ ವಿಭಾಗ ಬೆಳೆದುಕೊಳ್ಳುತ್ತದೆ (Technology). ಅವುಗಳ ವಿಸ್ತಾರವೂ ವೈವಿಧ್ಯವೂ ಇವೊತ್ತು ಅದ್ಭುತವಾಗಿ ಬೆಳೆದಿದೆ. ಅವು ನಿರ್ಮಾಣ ಮಾಡಿರುವ ಯಂತ್ರ ತಂತ್ರ, ಸಂಧಾನ ಸಂಪ್ರದಾಯ, ವಿಧಾನ ವಿವಕ್ಷೆ ಅವನ್ನು ನಿರ್ಮಾಣ ಮಾಡಿದ ಮಂತ್ರವನ್ನೇ ಬೆದರಿಸುವಷ್ಟು, ಮುಳುಗಿಸುವಷ್ಟು, ಅಡಗಿಸುವಷ್ಟು ಶಕ್ತವಾಗಿದೆ. ಆದರೆ ಇವೆಲ್ಲ ವಿದ್ಯೆಗಳು ತಿಳಿವಳಿಕೆಯ ಅಂಗಗಳು. ಇವುಗಳ ಸ್ಥಾನಮಾನವನ್ನು ನಾವು ಅರಿಯುವುದು ಒಳ್ಳೆಯದು.

## –16–

ಇನ್ನೊಂದು ಸಂಗತಿಯನ್ನು ಹೇಳಿ ಈ ಸಮೀಕ್ಷೆಯನ್ನು ಮುಗಿಸಬಹುದು. ಅದು ಕಲೆಯ ಪ್ರಪಂಚ. ಇಲ್ಲಿ ವ್ಯಕ್ತಿತ್ವದ ಕಲ್ಪನೆ, ಸ್ವಾತಂತ್ರ್ಯ ಪರಮಗುರಿ. ಇಲ್ಲಿ ಪರಮ ಎಂಬ ಮಾತು ಕೂಡ ಬೆಲೆಯಿಲ್ಲದ್ದು. ಈ ಪ್ರಪಂಚದಲ್ಲಿ ಯಾವುದಕ್ಕೆ ಯಾವುದೂ ಅಧೀನವಲ್ಲ; ಯಾವುದಕ್ಕೂ ಆಧಿಪತ್ಯವಿಲ್ಲ. ಇದೊಂದು ಗಣರಾಜ್ಯ. ಯಾವ ಅಧಿಪತಿಯನ್ನೂ ಆಯದ, ಒಪ್ಪದ ಮಂಡಲ. ಸ್ವತಂತ್ರ ಎಂಬ ಮಾತು ವ್ಯಕ್ತಿಗೆ ಸಲ್ಲುವಾಗ ಇನ್ನೊಂದರ ನಿರ್ಬಂಧವಿಲ್ಲ ಎಂಬ ಅರ್ಥ ಒಂದು. ಆ ಇನ್ನೊಂದು ಹೊರಗಿನ ಪ್ರಕೃತಿಯಾಗಬಹುದು; ಸಮಾಜ ರಾಜಕೀಯ ಜೀವನ ಆಗಬಹುದು; ನೀತಿ ಆಚಾರ ಆಗಬಹುದು; ತತ್ವದರ್ಶನ ಆಗಬಹುದು; ಬಳಕೆಯಲ್ಲಿರುವ ಮತ ಧರ್ಮದ ಆವರಣ ಆಗಬಹುದು; ಅದರಿಂದ ಮುಕ್ತ ಮನುಷ್ಯ. ಎಂದರೆ ಅವನ್ನು ಅವನು ಲಕ್ಷಿಸುವುದಿಲ್ಲ ಎಂದರ್ಥ. ಶಿಕ್ಷೆ ಬರಲಿ, ಪುರಸ್ಕಾರ ಬರಲಿ, ಇಂಥವನಿಗೆ



ಏನು ಬೇಕಾದರೂ ಮಾಡುವ ಅವಕಾಶ, ಧಾರಾಳ ಇದೆ ಎನ್ನುವುದು. ಇಂಗ್ಲಿಷಲ್ಲಿ ಒಂದಕ್ಕೆ Freedom ಎಂದು, ಇನ್ನೊಂದಕ್ಕೆ Liberty ಎಂದು ಹೇಳುತ್ತಾರೆ. ಇವೆರಡೂ ಸೇರಿ The Liberated man, the emancipated man ಎಂಬ ಮಾತು ಅನ್ವಯ ವಾಗಬಲ್ಲದು. ಎಲ್ಲ ಶಿಕ್ಷಣದ ಉದ್ದೇಶವೂ ಇಂಥ ಮಾನವ ವ್ಯಕ್ತಿಯ ತಯಾರಿಕೆ. ಎಷ್ಟಾಗಿದೆಯೊ ಆಗುತ್ತದೆಯೊ ದೇವರೇ ಬಲ್ಲ! 'ಸಾ ವಿದ್ಯಾ ಯಾ ವಿಮುಕ್ತಯೆ' ಎಂಬ ಮಾತಿದೆ. ವಿದ್ಯೆಗೆ ಇದಕ್ಕಿಂತ ಯಾವ ಸೂತ್ರಲಕ್ಷಣವೂ ಈವರೆಗೆ ಬಂದಿಲ್ಲ. ಯಾವುದು ನಮ್ಮನ್ನು ಬಿಡುಗಡೆ ಮಾಡಿಸುತ್ತದೆಯೋ ಅದು ವಿದ್ಯೆ. ಈ ವಿದ್ಯೆಯನ್ನು ಒಂದು ದೇವತೆ ಮಾಡಿ ಎಲ್ಲ ಮತಗಳವರೂ ಅದಕ್ಕೆ ಆರಾಧನೆ ನಡಸಿರುತ್ತಾರೆ. ನಾವು ಇದುವರೆಗೆ ಯಾವುದನ್ನು ತಿಳಿವಳಿಕೆ ಎಂದು, ಅದರ ಸ್ವರೂಪ ವಿಧಾನ, ಲಕ್ಷಣ ಎಂದು ಶಾಸ್ತ್ರ ವಿಜ್ಞಾನಗಳನ್ನು ನಿರ್ದೇಶಿಸಿದೆವೊ ಅದಕ್ಕೆಲ್ಲ ಈ ದೇವತೆ ಮೂಲಸ್ಥಾನ ಅಥವಾ ಅಧಿಷ್ಠಾತ್ರಿಯನ್ನಾಗಿ ಮಾಡುತ್ತದೆ. ಇದು ಬರೀ ಒಂದು ಮಾನವನ ಮನಸ್ಸಿನ ಕಲ್ಪ. ನಿರ್ಮಾಣ ಮಾಡುವ ಅಧಿಕಾರ ಪಡೆದ ಬ್ರಹ್ಮಶಕ್ತಿ ಮೊದಲು ಬಾಯಿಂದ ಮಾತಾಡಿದನಂತೆ. ಆ ಮಾತು 'ವಾಕ್' ಆಯಿತು. ಅದನ್ನು ಅವನು ಮದುವೆಯಾಗಿ ವಾಗ್ದೇವತೆ, ಸರಸ್ವತಿ ಎಂದು ಮಾಡಿಕೊಂಡ ಎಂಬ ಒಂದು ಕಲ್ಪನೆ ಇದೆ. ಇದು ಆಲಂಕಾರಿಕವಾಗಿ ಆಡಿದ ಮಾತು. ಏಕೆಂದರೆ ಮಾತಿಲ್ಲದೆ ಯಾವ ಕರ್ಮವೂ ಯಾವ ನಿರ್ದೇಶನವೂ ಯಾವ ನಿಯಂತ್ರಣದ ಮಾರ್ಗವೂ ರೂಪಗೊಳ್ಳು ವುದಿಲ್ಲ. ಈ ಮಾತಿನ–ಅಥವಾ ತತ್ಸಮ–ಪ್ರಪಂಚ ಸರ್ವವ್ಯಾಪಕವಾದದ್ದು. 'In the beginning was the word' ಎಂಬ ಮಾತು ಇಲ್ಲಿಯೇ ಸಾರ್ಥಕವಾಗುವುದು. ಯಾವುದನ್ನು ಅರಿಯುವುದೂ ಮೂರ್ತವಾಗಬೇಕಾದರೆ ಮಾತು ಬೇಕು. ಉದಾ: ಮೂಕರ ಸಂಜ್ಞೆ, ಸಾಕು ಪ್ರಾಣಿಗಳಿಗೆ ಸರ್ಕಸಿನ ಕೌಶಲ. ಜೀವಿಗಳಿಗೆ: ತಂತಿ ಸಿಗ್ನಲ್ ಕೋಡ್, ಮಾತುಗಳೇ. ಆಡುವ ಬಾಯಲ್ಲಿ ನುಡಿದು, ಕೇಳುವವನ ಕಿವಿಯಲ್ಲಿ ಕೇಳಿಸಿ, ಅರ್ಥವಾಗಿ. ನಮ್ಮ ಅಂಕೆಗೆ ಮೀರಿದ, ಕಡೆಗೆ ನಮ್ಮ ಜಾಗ್ರತ ಸ್ಥಿತಿಯಲ್ಲಿನ ಯಾವ ಅಂಕೆಗೂ ಮೀರಿ, ಕನಸಿನಲ್ಲಿ ನಡೆವ ಎಲ್ಲಾ ಸಂಗತಿಗಳಿಗೂ ಮಾತು ವಾಹಕವಾಗುತ್ತದೆ. ಯಾವುದನ್ನೂ ಅರಿಯುವುದಕ್ಕೆ ಮಾತಿನ ಮಿತಿ, ಅರ್ಥದ್ಯೋತನೆ ಪ್ರಧಾನ. 'ನನಗೆ ಹೊಳೆದಿದ್ದು ಇದಲ್ಲ, ಮತ್ತೊಂದು' ಎಂದು ಮಾತಿನಲ್ಲಿಯೇ ವಿವೇಚಿತವಾಗಿ 'ಯಾವುದು, ಯಾವುದು?' ಎಂಬುದು ಇತ್ಯರ್ಥವಾಗಬೇಕಾಗುತ್ತದೆ. ಎಂದರೆ ಪ್ರಜ್ಞೆಯ ಸಮಸ್ತ ಪ್ರಪಂಚವೂ ಅಥವಾ ಮನುಷ್ಯ ಜೀವನದ ಸಮಸ್ತ ವ್ಯಾಪಾರವೂ ಈ ಮಾತಿನ ಮೂಲಕವೇ ಮೂರ್ತಗೊಳ್ಳಬೇಕು. ತನ್ನ ನೆನಪಿನಲ್ಲಿ ಉಳಿಯಬೇಕು; ಮತ್ತೊಬ್ಬರಿಗೆ ಪ್ರತಿಪಾದಿತವಾಗಬೇಕು. ಆದುದರಿಂದ ಎಲ್ಲ ಕಲೆ ಗಳಿಗೂ ಈ ವಾಗ್ದೇವಿಯೇ ಅಧಿಷ್ಠಾತ್ರಿಯಾಗುತ್ತಾಳೆ. ಈ ಪ್ರಜ್ಞೆಯಲ್ಲಿ ಅನೇಕ ಸ್ತರಗಳುಂಟು. ಕೆಲವು ವ್ಯಕ್ತ; ಕೆಲವು ಅವ್ಯಕ್ತ. ಯಾವ ಸಮಯದಲ್ಲಿ ಯಾವುದು ಕಾರ್ಯ ಮಾಡುತ್ತವೆಯೋ ಅಥವಾ ಯಾವ ಯಾವ ಪದಗಳು ಒಂದು ಮಾತಿನ, ಆಲೋಚನೆಯ, ಪ್ರವೃತ್ತಿ ನಿರ್ಣಯದ ಅಥವಾ ಕ್ರಿಯಾವ್ಯಾಪಾರ ಸಂಬಂಧದ ಕಾರ್ಯ

ವನ್ನು ಮಾಡುತ್ತದೆಯೊ ಅದು ಬಗೆಬಗೆಯಾಗಿ ಬದುಕಿನ ದಿನಚರಿಯಲ್ಲಿ ಹೊರಗೆ ಬರುತ್ತದೆ. ಕಲಾಪ್ರಪಂಚದಲ್ಲಿ ಕೇವಲ ತಿಳಿವಳಿಕೆಗೆ ಅಥವಾ ಈವರೆಗೆ ನಾವು ವಿವೇಚಿಸಿರುವ ಪ್ರಪಂಚಕ್ಕೆ ಸಂಬಂಧಿಸದ ಕಲ್ಪನಾವಿಶೇಷ, ಅಭಿವ್ಯಂಜನಾವಿಶೇಷ, ಮೂರ್ತಿತ್ವ ಇರುತ್ತದೆ. ಇದಕ್ಕೆ ವ್ಯವಹಾರ ಜೀವನದ ಸಂದು–ಸಂಬಂಧವಿಲ್ಲದ ವ್ಯಾಪನೆ ಇರುತ್ತದೆ. ಮನಸ್ಸಿಗೆ ತೋರಿದ ಹಾಗೆ ಸುಸೂತ್ರವೊ ಅಸೂತ್ರವೊ ಶಕ್ಯವೊ ಅಶಕ್ಯವೊ ಅರ್ಥವತ್ತಾಗಿಯೊ ವಿನೋದವಾಗಿಯೊ ಲೋಕಜೀವನವನ್ನೆ ಕುರಿತೊ ಅಲ್ಲವೊ ಕಾಲ ದೇಶ ವರ್ತಮಾನಗಳನ್ನೂ ಮೀರಿದ ಅಥವಾ ಪರಮಾರ್ಥ ಪ್ರಕಾಶಕವಾದ ಯಾವುದೊ ಎತ್ತಿಗೆ ಏರುತ್ತದೆ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಹಾರಾಡುತ್ತದೆ, ಚೀರಾಡುತ್ತದೆ, ಶಾಂತವಾಗುತ್ತದೆ, ಉದ್ರಿಕ್ತವಾಗುತ್ತದೆ. ಅದನ್ನು ಮಾತುಗಳಲ್ಲಿ, ಉಸಿರ ತಾಂಡವವನ್ನು ತೋರಿಸುವ ಲಯಚರ್ಯೆಯಲ್ಲಿ, ರೂಪಕಾದಿ ನಿರ್ಮಾಣದಲ್ಲಿ, ಕಥನ ವರ್ಣನ ಭಾವ ಪ್ರಕಾಶನ–ಎಲ್ಲ ಬಗೆಯ ರೀತಿಯಲ್ಲಿ ನುಡಿದು ತೋರಿಸುವುದು ಸಾಹಿತ್ಯಕಲೆಯ ಅಂಶಗಳಾಗುತ್ತದೆ. ತಕ್ಷಣದ ಕ್ಷುದ್ರವೇದನೆಯನ್ನೊ ಆಸೆಯನ್ನೊ ಪ್ರವೃತ್ತಿಯ ಕರಾಳವನ್ನೊ ಅಸ್ಫುಟವಾಗಿ ಮಿಂಚಿ ಮಾಯವಾದ ಮಂದಹಾಸವನ್ನೊ ಸಾಧನೆಯ ದೃಢವನ್ನೊ ಕಾಣಬಹುದು. ನುಡಿಯುವ ಮನಸ್ಸು ಎಷ್ಟು ಸೂಕ್ಷ್ಮವಾಗಿ ಜಟಿಲವಾಗಿ ಸಂಯುಕ್ತವಾಗಿ ಇರಬಲ್ಲುದೊ ಅಷ್ಟೂ ಎಳೆಗಳು ಒಂದೊಂದಾಗಿ ಸೇರಿಕೊಂಡೊ ಒಟ್ಟಾಗಿಯೊ ಒಂದು ಸಾಹಿತ್ಯ ಕವಿತೆಯಲ್ಲಿ ಉಕ್ತಿಯನ್ನೊ ರೂಪಣವನ್ನೊ ಕಂಡಾಗ ಅದನ್ನು ಗುರುತಿಸುವುದು, ಮಿಡಿಯುವುದು, ಪ್ರತಿಕ್ರಿಯೆ ತೋರಿಸುವುದು ಶಕ್ಯವಾದರೂ ಇದಕ್ಕೆ ಮಾತಿನ ಮೂಲಕ ರೂಪ ಕೊಡತಕ್ಕ ಶಕ್ತಿ ಸಾಹಿತಿ ಅಥವಾ ಕವಿಗೆ ಮಾತ್ರ ಶಕ್ಯ. ತನ್ನ ಮನಸ್ಸು ಅನುರಕ್ತವಾದ ಪಾತ್ರದೊಡನೆ ಸಂತತವಾಗಿದ್ದು ವಿಷಯದಲ್ಲಿ ತೇಲಿ ಮುಳುಗಿ ಸಾಯುತ್ತೇನೆ, ಈ ಸಿಹಿ ನನಗೆ ಬೇಕು, ಈ ಸಂಪರ್ಕ ನೋಟ ನನ್ನೆದುರಿಗೆ ಸರ್ವದಾ ಇದ್ದರಾಯಿತು, 'ಇದಿಗೊ ನೀ ಮೋಮು ಸೋಮು ಕನರಾಕಪೋವುನನಿ ತೆಲಪಿ, ಪ್ರದ್ದೂಂಡಗನೇ ದೀಪಮುಸತ್ತಮ್ಮನೆ ನಾಸಾಮಿಕೆ ಅಯ್ಯಯ್ಯೊ ವೆಗಟಾಯನೆ'– ಎಂಥ ಸ್ವಾಮಿ ಅವನು? 'ಪಯ್ಯಿದ ಮೀನ ಚೇರಿ ಪವ್ವಳಿಂಚಿ ಉಂಡೇ ಸಾಮಿ' ಅಥವಾ ಕಾಳಿದಾಸನ 'ವಿಕ್ರಮೋರ್ವಶೀಯ'ದಲ್ಲಿ ಸ್ವಲ್ಪ ಕಾಲ ಯಾವುದೊ ಕಾರಣದಿಂದ ಜೊತೆ ತಪ್ಪಿದ್ದು ಪುನಃ ಸೇರಿದಾಗಿನ ಊರ್ವಶಿ – ಪುರೂರವರ ಸಂಗತಿ. 'ರತಿಖೇತ ಸುಪ್ತಮಾ ಶಯನೇ ಯಾ ಮನ್ಯಸೇ ಪ್ರವಾಸ ಗತಂ ಸಾತ್ವಂ ನಹ್ಯೇತದವಸ್ಥಂ ಕಥಂ ಸಹೇಥಾ ಚಿರವಿಯೋಗಂ' ಎಂದು ಧಾರಾಳವಾಗಿ ಪುರೂರವಸ್ ಊರ್ವಶಿಯನ್ನು ಕೇಳಬಲ್ಲನು. ಇವನ ಸ್ವರೂಪವೆಂಥದು? ಇವನೇ ಹಿಂದಿನ ಅಂಕದಲ್ಲಿ

ಸಾಮಂತಮೌಳಿಮಣಿರಂಜಿತ ಶಾಸನಾಂಕಂ
ಏಕಾತಪತ್ರಮವನೇ ನ ತಥಾ ಪ್ರಭುತ್ವಂ
ಅಸ್ಯಾಃ ಸಖೇ ಚರಣಯೋರಹಮದ್ಯ ಕಾಂತಂ
ಆಜ್ಞಾಕರತ್ವಂ ಅಧಿಗಮ್ಯ ಯಥಾ ಕೃತಾರ್ಥಃ ।



ಎಂದು ಎಲ್ಲವನ್ನೂ ಬಿಟ್ಟವನು. ಅವಳೇ ಅವನಿಗೆ ಎಚ್ಚರ ಕೊಡಬೇಕು: 'ನೀನು ರಾಜ, ಊರವರು ಏನೆಂದುಕೊಂಡಾರು? ನಮ್ಮ ಮೇಲೆ ಅವರಿಗೆ ಅಸೂಯೆ ಬರುತ್ತದೆ. ಊರಿಗೆ ಹೋಗೋಣ' ಎಂದು. ಅವರ ಸಂಚಾರ ವರ್ಣನೆ ಮಾಡಬೇಕಾದರೆ ಆ ಮೋಹಕತೆ ಎಂಥದಾಗಿರಬೇಕು! ಅವರನ್ನೊಯ್ಯುವ ವಿಮಾನ ಹೀಗಿರಬೇಕಂತೆ:

ಅಚಿರ ಪ್ರಭಾವಿಲಸಿತೈಃ ಪತಾಕಿನಾ
ಸುರಕಾರ್ಮುಕಾಭಿನವ ಚಿತ್ರಶೋಭಿನಾ
ಗಮಿತೇನ ಖೇಲಗಮನೇ ವಿಮಾನತಾಂ
ನಯ ಮಾಂ ನವೇನ ವಸತಿಂ ಪಯೋಮುಚಾ ।

ಇದೇ ಇಬ್ಬರು ಎರಡನೆಯ ಸಲ ವಿಯುಕ್ತರಾಗಬೇಕಾಗಿ ಬಂದಾಗ, ಊರ್ವಶಿ ತನ್ನ ಸ್ವಸ್ಥಾನವಾದ ದೇವಲೋಕಕ್ಕೆ ಹೋಗಲು ಇಷ್ಟವಿಲ್ಲದೆ ಅಳುತ್ತಾಳೆ. ಇವನು ಸಣ್ಣ ವಯಸ್ಸಿನ ಆಯುಃಕುಮಾರನಿಗೆ ರಾಜ್ಯವಹಿಸಿ ವಾನಪ್ರಸ್ಥನಾಗಿ ಹೊರಟು ಹೋಗಲು ಬಯಸುತ್ತಾನೆ. ಇಂಥ ಪರಿಣಾಮಗಳನ್ನು ವರ್ಣಿಸುವುದು ಕವಿಗಳ ಚರಿತ್ರೆ ಯಲ್ಲಿ ಬಂದಿದೆ. ಈ ಮೋಹಕತೆ ವಿದ್ವಾಂಸನೂ ಪ್ರಭಾವಶಾಲಿಯೂ ರಾಜಾಧಿರಾಜರಲ್ಲಿ ಹೆಸರಾದವನೂ ಆದ ಪುರೂರವನಲ್ಲಿ ಬಂದರೆ, ಇದೇ ಬಗೆಯ ಮೋಹಕತೆಗೆ ಈಡಾಗಿ ಬದುಕಿನಲ್ಲಿ ತೊಳಲುವ ಸಮಸ್ತ ಮಟ್ಟಗಳ ಜನರ ಪರಿಸ್ಥಿತಿಯೂ ವರ್ಣಿತವಾಗುತ್ತದೆ. ನ್ಯಾಯ ಬದುಕನ್ನು ಬದುಕಿ ಅದರಲ್ಲೇ ಎಲ್ಲವನ್ನೂ ಮರೆವ ಸನ್ನಿವೇಶವನ್ನು ಕವಿ ಚಿತ್ರಿಸಬಹುದು – ಒರಟಾಗಿ ನಯವಾಗಿ, ಶ್ಲೀಲವಾಗಿ ಅಶ್ಲೀಲವಾಗಿ. ಅಥವಾ, ಬಡತನ ನಿರುದ್ಯೋಗಗಳ ಬೇಗೆಯಲ್ಲಿ ಗಂಡಸುತನದ ಹೆಕ್ಕಳ ಮುರಿವಂತಹ ಪ್ರಭವದ ದ್ಯೋತನವನ್ನು ಭರ್ತೃಹರಿಯ ಈ ಪದ್ಯ ರೂಪಿಸುವಂತೆ ಇನ್ನಾವುದು ರೂಪಿಸೀತು?–

ದೀನಾದೀನಮುಖೈಸ್ಸದೈವ ಶಿಶುಕೈರಾಕೃಷ್ಟ ಜೀರ್ಣಾಂಬರಾ
ಕ್ರೋಶದ್ಭಿಃ ಕ್ಷುಧಿತೈಃ ನಿರನ್ನವಿಧುರಾ ದೃಶ್ಯಾನಚೇತ್ ಗೇಹಿನೀ
ಯಾಚ್ಞಾಭಂಗಭಯೇನ ಗದ್ಗದ ಗಳತ್ರುಟ್ಯದ್ವಿಲೀನಾಕ್ಷರಂ
ಕೋ ದೇಹೀತಿ ವದೇತ್ ಸ್ವದಗ್ಧ ಜಠರಸ್ಯಾರ್ಥೇ ಮನಸ್ವೀ ಪುಮಾನ್

ಒಂದೊಂದು ಮಾತೂ ಚಿತ್ರವನ್ನು ಕಳೆಕೊಟ್ಟು ರಂಜಿಸಿ ವಾಸ್ತವತೆಯನ್ನು ಹೆಚ್ಚು ದಾರುಣವಾಗಿ ಮಾಡುತ್ತದೆ. ಯಾವ ಶಾಸ್ತ್ರ, ವಿಜ್ಞಾನ ಈ ಅನುಭವವನ್ನು ತಂದು ಕೊಟ್ಟೀತು? 'You taught me language and my profit on is that I have learnt how to curse' ಎಂದು ಕ್ಯಾಲಿಬನ್ ಹೇಳುವುದೊ, 'My father emptied ten bottles, my ambition is to achieve a cask' ಎನ್ನುವುದೊ, ಬೇರೆ ಅರ್ಥದಲ್ಲಿ ಹೇಳಿದ್ದರೂ 'Let me be drunken and go to the dogs' ಎಂಬ ಮನೋವೃತ್ತಿಯೊ! ಮನುಷ್ಯನ ಮನಸ್ಸಿನ ವಿಲಾಸವೊ ಇಚ್ಛೆಯೊ ಆಗುವುದನ್ನು ವರ್ಣಿಸಿದ ಹಾಗೆ 'Oh what a piece of work is man' ಇತ್ಯಾದಿಯಾಗಿ ರಿನೈಸಾನ್ಸ್

ಕಾಲದ್ದೆಂಬ ಮಾನವನ ಸ್ವರೂಪಲಕ್ಷಣದ ಚೆಲುವನ್ನೊ ಮೋಹಕತೆಯನ್ನೊ ವರ್ಣಿಸುವ ಹ್ಯಾಮ್ಲೆಟ್ ಮಾತಿದೆ. 'Alive enough to have the strength' ಎಂದು ಬರೆದ ಕವಿಯೇ 'Not Russia but God's sky has overwhelmed me. I am subdued but by the elements' ಎಂದ ನಪೋಲಿಯನನ್ನು ಕಲ್ಪಿಸಿದ. 'I was ever a fighter so one more fight' ಅಥವಾ

All things have rest; why should we toil alone,
What pleasure can we have
To war with evil? Is there any peace
In ever climbing up the climbing wave?
All things have rest, and ripen toward the grave
In silence - ripe, fall and cease;
Give us long rest or death, dark death, or dreamful ease-

ಎಂಬ ಭಾವಕ್ಕೆ 'ಲೋಟಸ್' ಎಂಬ ಹೂವಿನ ಬಳ್ಳಿಯನ್ನು ತಿಂದು ಅರೆಮಂಪರದಲ್ಲಿ ಬದುಕಿರಬೇಕೆಂಬ ಪ್ರಚೋದನೆ ಇರಬಹುದು. ಅದೇ ಕವಿಯ ಯೂಲಿಸಿಸ್ಸನ–

Though much is taken much, abides;
And though we are not now that strength,
Which in old days moved earth and heaven;
That which we are we are;
One equal temper of heroic hearts.
Made weak by time and fate, but strong in will
To strive, to seek, to find and not to yield –

ಎಂಬ ಮಾತೊ

ದಿವಸಮನೊಂದು ಮೇಣೆರಡುಮೂಱಿನೆ ನಿಲ್ವುದು ಮೂಱುತಿಂಗಳಾ
ಯ್ತವಚಱನಿಂತು ನಿಂದನೊಳನೇ ಶನಿ ನಿಲ್ವವೊಲಿಲ್ಲಿ ಪಾಟಿಗಿ
ನ್ನೆವರೆಗಮಿರ್ದೆನ್ನೆಮಗೆ ನಿತ್ತರಿಸಲ್ ನೆಱವಿಲ್ಲ ತಾಱಲಾ
ದುವು ತನು ಕೂಟಿ ನೀರ ದೆಸೆಯಿಲ್ಲದೊಡಲ್ಗಳನೆಂತು ತಾಳ್ದುವಂ ।

ಮಿಂದುಂಡು ಕುಡಿದು ಮುಗುಟ್ದುಂ
ಬಂದಿರ್ಪೊಡಮಿರ್ಪಮಿನಿತುಮಿಲ್ಲದೆ ಗುಱುಗು
ಮ್ಮೆಂದು ಪಸಿದಿರ್ದು ಬೆದಬೆದ
ಬೆಂದಿನಿಬರ್ ಕಟ್ಟಿಕೊಳ್ವ ಕಣಿಯೇಂ ಪೇಟಿಂ । (ಆ. ಪು.IX **–89,90)**

ಎಂಬಲ್ಲಿಯ ವ್ಯಂಗ್ಯ ವಿಚಕ್ಷಣೆಯೋ–

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದ ಮಾದೊಡೆಱಕಂ ಚಿಃ ಕಷ್ಟಮಲ್ತೇ ವಸುಂ



ಧರೆಗಯ್ಯಂ ದಯೆಗೆಯ್ಯೆ ಮುಂ ಪಡೆದುದರ್ಕಿಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೊಟಿಣ್ಬಂದಮಂ ಪೋಲದೇ ।

ಎನ್ನುವಾಗಲೊ, ದ್ವಂದ್ವಯುದ್ಧದಲ್ಲಿ ಮೂರು ಸಲವೂ ಸೋತ ಅಣ್ಣ ಭರತ ಚಕ್ರವರ್ತಿಗೆ ಪ್ರಪಂಚದ ಅಧಿಕಾರವನ್ನೆಲ್ಲ ಕೊಟ್ಟು ತಾನು ತಪಸ್ಸಿಗೆ ಹೋಗುವೆನೆಂದ ಬಾಹುಬಲಿ–

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀಭಟಖಡ್ಗಮಂಡಲೋ
ತ್ಪಲ ವನವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗೆಮಾಟಿಸಿದಂದು ನೆಗಪ್ತೆ ಮಾಸದೇ ।

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ದಿ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱವುದೆನ್ನ ದುರ್ವಿಳಸನಮಂ ।

ಎಂದು ಬಾಹುಬಲಿಕುಮಾರಂ ತಪಶ್ಚರಣನಿಶ್ಚಳನಿಶ್ಚಯಮನನಾದಾಗಳ್

ಮನದೊಳ್ ಮುಂ ಪುದಿದಿರ್ದ ಕೋಪಮನಿತಂ ತೂಳ್ದಾಗಳೆತ್ತೆತ್ತಗೆ
ಯ್ದೆನಿದಂ ತಮ್ಮನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನ್ನೆ
ಮನುವಂಶಕ್ಕೆ ಲಲಾಮನಪ್ಪನುಜನ್ನೆ ಬೇಡಮ್ಮ ನೀನುಂ ತಪೋ
ವನಮಂ ಸಾರ್ವುದುಮಾನದಾರ್ಗೆ ಮೆಱವಂ ಮತ್ರಾಜ್ಯಸಾಮ್ರಾಜ್ಯಮಂ।

ಎಂದು

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ
ಷ್ಪ ಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ ।
(ಆ. ಪು.XIV **–130–133)**

ಎನ್ನುವಲ್ಲಿಯೊ–ಎಷ್ಟು ಬಗೆಯ ದೃಶ್ಯಗಳು ಬಂದಾವು! ಇದು ಕಾಲದಷ್ಟು ಆಳ, ವಿಶ್ವದಷ್ಟು ವಿಸ್ತಾರ, ಆಶಯದಷ್ಟು ಆಕಾಂಕ್ಷೆ, ವೈವಿಧ್ಯ ಉಳ್ಳದ್ದು. ಅಲ್ಲಿ ಏನೇನು ಮಾನವ ಸಹಜವೊ–ವ್ಯಕ್ತವಾಗಿ ಅವ್ಯಕ್ತವಾಗಿ, ಆಗಬಯಸಿ ಭಂಗಪಟ್ಟು, ಆಗದುದನ್ನು ಬಯಸಿ ತುಳಿಯಲು–ಎಲ್ಲಕ್ಕೂ ಅವಕಾಶವಿದೆ. ಅದರಲ್ಲಿ ಯಾವುದು ನ್ಯಾಯ–ಯಾವುದು ಅನ್ಯಾಯ, ಸುಂದರವಾವುದು–ವಿಕಾರವಾವುದು, ಹಲ್ಕ–ಘನ ಯಾವುದು, ಕ್ಷಣಿಕ–ನಿತ್ಯ ಯಾವುದು ಎಂದುಕೊಳ್ಳುವುದೊ ಅದೆಲ್ಲ ಇದೆ. ಅದು ತಿಳಿ ತೋರಿಸಿ

ಹರಿದೀತು. ಇದರ ಆಳ–ಅಂತರಾಳಗಳ ದೃಶ್ಯ ಭಗವಂತನೊಬ್ಬನಿಗೆ ಗೊತ್ತು. ಅನುಭವಿಸುವ ಮುಂಚೆ ಕೃತಿ ಕಾಣಿಸಿತೊ ತಿಳಿಯದ್ದು. ಇದು ಜ್ಞಾನವೂ ಅಲ್ಲ, ವಿಜ್ಞಾನವೂ ಅಲ್ಲ; ನೀತಿಯೂ ಅಲ್ಲ, ಧರ್ಮವೂ ಅಲ್ಲ; ವಿದ್ಯಾಜ್ಞಾನವೂ ಅಲ್ಲ; ಅನುಭವ ಅಥವಾ,

Donne, I suppose, was such an other
Who found no substitute for sense,
To cease and clutch and penetrate;
Expert beyond experience;
He knew the anguish of the marrow –
The agne the skeleton,
No contact possible to flesh
allayed, the fever of the bone

ಎಂಬಷ್ಟು ಒಂದು ಬಗೆಯ ಮನಸ್ಸಿನ ವಾಂಛೆಗಳನ್ನೂ ಆಕಾಂಕ್ಷೆಗಳನ್ನೂ ತೋರಿಸ ಬಲ್ಲನು. ತುಂಬ ಗಂಭೀರನೆಂದುಕೊಂಡಿದ್ದ ಎಲಿಯಟ್ ಕವಿ 'Whisphers of Immortality' ಎಂಬ ವಿಳಾಸದ ಮೋಜಿನ ಕವನದಲ್ಲಿ ಹೀಗೆ ಹೇಳಬಲ್ಲನು:

Griskin is nice: Her Russian eye
Is underlined for emphasis;
uncorseted, her friendly bust
gives promise of pneumatic bliss

ಈ ಕಾರ್ಸೆಟ್ ಸಡಿಲಿಸಿ ತೆಗೆದವರು ಅವಳೆಯೊ ಇನ್ನಾರಾದರೂವ್ರೊ – ಎರಡೂ ಆಗಬಹುದು. 'Gives promise' ಅಂತೆ! ಇದು ಕನ್ನಡದ ನುಡಿಗಟ್ಟನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿದಂತಿದೆ. 'ಡೊಂಕು ಬಾಲದ ನಾಯಕರೆ, ನೀವೇನೂಟವ ಮಾಡಿದಿರಿ' ಎಂದು ನಾಯನ್ನು ಕೇಳಿದ ದಾಸರೇ 'ಹಾಂಗೆ ಇರಬೇಕು ಸಂಸಾರದಲ್ಲಿ ಹ್ಯಾಂಗೆ ತೆರೆದಿತ್ತೊ ಪ್ರಾಚೀನದಲ್ಲಿ' ಎಂದು ಬರೆದರೆಂದರೆ, ಎಲ್ಲಿಂದೆಲ್ಲಿಗೆ ಆ ಮನಸ್ಸಿನ ಓಟ! ಸಂಸ್ಕಾರದ ದಾಂಗುಡಿ! ಶಾಕುಂತಲದ ಏಳನೆಯ ಅಂಕದಲ್ಲಿ ಬರುವ ಮರ್ತ್ಯ ಪ್ರಪಂಚದ, ಇಂದ್ರಲೋಕದ, ಮಾತಲಿಯ ತಿಳಿವಳಿಕೆಯ, ಧ್ಯಾನಾಸಕ್ತರಾಗಿರುವ ಋಷಿ ವೃತಿಗಳ,'ವಲ್ಮೀಕಾರ್ಧನಿಮಗ್ನಮೂರ್ತಿರುರಸಾ' ಇತ್ಯಾದಿ ಅಥವಾ 'ಪ್ರಾಣಾನಾಮನಿಲೇನ ವೃತ್ತಿರುಚಿತಾಂ...' ಎಂಬ ಚಿತ್ರವೊ, ಮಾರೀಚರ ದೃಶ್ಯವೊ ಅಥವಾ 'ಕಿಮೀಶ್ವರಾಣಾಂ ಪರೋಕ್ಷಂ' ಎಂಬ ನುಡಿಯ ನೆಲೆಯೋ – ಎಲ್ಲಿಗೆಂದರಲ್ಲಿಗೆ ಕೊಂಡುಹೋಗಬಲ್ಲವು. ಪ್ರಪಂಚದಲ್ಲಿ ಎಷ್ಟು ಜನ ದೊಡ್ಡ ಕವಿಗಳಾಗಿ ಹೋಗಿದ್ದಾರೊ ಅಷ್ಟು ನೂರು ಸಾವಿರ ಬಗೆಯ ಕಲ್ಪನೆಗಳು, ಸಾಹಿತ್ಯದ ಧಾರಾಳಗಳು ಕಲ್ಪಿಸಿವೆ. ಇವರಿಗೆ ಇನ್ನೊಬ್ಬರಿಗೆ ಕೋಪ ಬರುತ್ತದೆ, ಪ್ರೀತಿ ಉಂಟಾಗುತ್ತದೆ ಎಂಬ ಲಕ್ಷ್ಯವಿಲ್ಲ, ಹೀಗೆ ಹೇಳಬಾರದು, ಬಹುದು ಎಂಬುದಿಲ್ಲ; ಇದರಿಂದ ಲೋಕಹಿತ, ಹಿತವಲ್ಲ



ಎಂಬ ಆಲೋಚನೆ ಯಿಲ್ಲ; ಇದು ಕೊಳೆ, ಇದು ಭವ್ಯ ಎಂಬ ಯೋಚನೆ ಇಲ್ಲ. ಸಮಯ, ಚಿತ್ತ ನಡಸಿದ ಹಾಗೆ ನಡೆಯುವವರು, ನುಡಿಯುವವರು ಅವರು. ಮುಂದಿನ ದಿನ ನೇಣು ಹಾಕುತ್ತಾರೆ ಎಂದು ತಿಳಿದಿದ್ದರೂ ಕವಿ ವಿಲಾನ್ ತನ್ನ ಹೃದಯದ ಒಂದು ಹರ್ಷದ ಅನುಭವವನ್ನು ಹೇಳಬಹುದು. ಟೆಸ್ ಕಾದಂಬರಿಯನ್ನು ಹಾರ್ಡಿ ಬರೆದು ಮುಗಿಸಿ ಅಚ್ಚಾಗುವ ಮುಂಚೆ ಒಂದು ಕಡೆಯ ವಾಕ್ಯವೃಂದವನ್ನು ಆರಂಭಿಸಿ 'The President of the immortals ended his sport with Tess' ಎಂದು ಭರತ ವಾಕ್ಯವನ್ನು ನುಡಿಯಬಹುದು.

ಅರಿಯದವರಾವು ಎಮ್ಮಯ ಮನದ ನೂರು
ವಿರಸತೆಯ ತೊಟ್ಟುಗಳ ಕಳಚಿ ಅವ ತೂರು
ಮರಣದಲಿ ಜೀವನದ ಮೊಳೆಯಿಹುದ ತೋರು
ಪರಮಾತ್ಮನುಂಟು ಸುಖದೊಳಮೆಂದು ಸಾರು

ಎಂದು 'ತಂಗಾಳಿ'ಗೆ ಮನವಿಯಿಟ್ಟರೆ, 'ಭಾವಗೀತೆ'ಯ ಶುದ್ಧ ಕಲ್ಪನೆಯ ವಿಲಾಸ ಭೃಂಗದ ಬೆನ್ನೇರಿ ಬಂದು,

ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ

ಎಂದು ಮನಸ್ಸನ್ನು ಮೋಹಿಸಬಹುದು.

'ಅನಂತಾವೈ ವೇದಾಃ' ಎನ್ನುತ್ತಾರೆ; ಸಾಹಿತ್ಯವೂ ಅಷ್ಟೇ ಎಂದರೆ ಅಪಚಾರ ವಾದೀತೆ? ಈ ಅರ್ಥದಲ್ಲಿಯೂ ನಿಜ. ಈ ಸಾಹಿತ್ಯ ಸಾರ ಗುಪ್ತಭಕ್ತಿಯ ರೀತಿಯನ್ನು ವರ್ಣಿಸಿರುವಂತೆಯೇ ಮಹಾಕ್ರಾಂತಿಗಳನ್ನು ಘೋರಗಳನ್ನು ತುಮುಲಗಳನ್ನು ವರ್ಣಿಸುವವರೆಗೂ ವ್ಯಾಪಿಸುತ್ತದೆ. ಯಾವ ಒಂದು ರೀತಿಯೂ ಆಕೃತಿಯೂ ಲಯ ಬಂಧವೂ ಕಾವ್ಯಾಲಂಕಾರ ನೇಮವೂ ಅವರನ್ನು ನಿರ್ಬಂಧಿಸದು. ನಡೆದುದೇ ಮಾರ್ಗ, ನುಡಿದುದೇ ರೀತಿ.

ಸಾಹಿತ್ಯದಲ್ಲಿ ಮಾತೇ ಮೂಲದ್ರವ್ಯ. ಅದು, ಅದರರ್ಥ, ಅದು ಸೂಚಿಸುವ ಭಾವ, ಒಳ – ಅಂತರಾರ್ಥ – ಅನುಭವವನ್ನು ತಂದುಕೊಡಲು ನೆರವಾಗುತ್ತವೆ. ಎಲ್ಲ ಕಲೆಯ ಹಿಂದೆ ಇರುವುದೂ ಕಲೆಗಾರನ ಮನಸ್ಸು, ಆತನ ಅನುಭವ ಪ್ರಕಾಶನದ ಒಂದು ರೂಪ. ಲೋಕದ ಬದುಕು ಹೊರಗಣ್ಣಿಗೆ ಯಾವ ರೀತಿ ಕಾಣುವುದೊ ಅದೆಲ್ಲ ಅದಕ್ಕೆ ಆಧಾರ, ಆಶ್ರಯ. ಅದು ಹೇಗೆ ಕಾಣಿಸುತ್ತದೆ, ಏಕೆ, ಅವನಿಗೆ; ಎಲ್ಲಾ ಸಮಯದಲ್ಲಿಯೂ ಒಂದೇ ಬಗೆಯಲ್ಲಿ ಕಾಣುತ್ತದೆಯೇ ಎಂಬ ನಚ್ಚೂ ಇಲ್ಲ; ಇಂಥದು

ಹೀಗೇ ಕಾಣಿಸಬೇಕು ಎಂಬ ನಿಯಮವಿಲ್ಲ. ಸಾರ್ಥಕವಾದ ಎಲ್ಲ ಕೃತಿಯಲ್ಲಿಯೂ ಏನು, ಹೇಗೆ ಪ್ರಕಾಶಕ್ಕೆ ಬಂದಿದೆ ಎಂಬುದು ಎಲ್ಲರ ಅರಿವಾಗಿ ಓದುವವರಿಗೆ ಕೇಳುವವರಿಗೆ ನೋಡುವವರಿಗೆ ಅದರಿಂದ ಪ್ರತಿಕ್ರಿಯೆ ಉಂಟಾಗುತ್ತದೆ. ಅದರಲ್ಲಿ ಜೀವರಸ ಇದ್ದರೆ ಅದು ಇನ್ನೊಬ್ಬರಿಗೆ ತಟ್ಟುವುದು. ಸೆಯಿಂಟ್ಸ್‌ಬರಿ ಒಮ್ಮೆ ಹೇಳಿದರು: 'Confession to a contempt for any one who cannot get excited over ink and paper' ಎಂದು. Cannot ಆಗಬಹುದು, Does not ಆಗಬಹುದು. ಮಾತು ಹಾಗೆ ಮಾಡುತ್ತದೆ. ತನ್ನ ಮನಸ್ಸಿನ ಒಳಗೆ ಏನು ನಡೆಯುತ್ತದೆಯೊ ಲೋಕವನ್ನೂ ಬದುಕನ್ನೂ ಕಾಣುವಾಗ ಏನೇನು ಭಾವವುಂಟಾಗುತ್ತದೆಯೊ ಅದೆಲ್ಲ ಅಲ್ಲಿರುವಾಗ, ಲೋಕದ ಎಲ್ಲ ಬಗೆಯ ಸಂಗತಿಗಳೂ ಅಲ್ಲಿ ಪ್ರತಿಫಲಿಸುತ್ತವೆ. ಬೇಕು ಬೇಡ ಎನ್ನುವ ಹಾಗಿಲ್ಲ; ಅಂದುದು ಬಂದುದು ಕೃತಿ. ನೀತಿ ಧರ್ಮ ಚೆಲುವು ನಿಜ ಎಂಬ ಯಾವುದೆಲ್ಲ ಲೋಕದಲ್ಲಿರುವುದರಿಂದ, ಅದೆಲ್ಲ ಕಲಾಕೃತಿಯಲ್ಲಿ ರೂಪಗೊಳ್ಳ ಬಲ್ಲದ್ದಾದ್ದರಿಂದ, ಅದರಂತೆಯೇ ಇದು. Amoral ಅಥವಾ Unmoral – ನೀತಿಯ ಕಟ್ಟೆಗೆ ಹೊರಗು. ಸ್ವೀಕರಿಸಿದರೆ ಸ್ವೀಕರಿಸಿ, ಬಿಟ್ಟರೆ ಬಿಡಿ – ಈ ಉಕ್ತಿ ನಿಜ. ಸಂತೋಷವನ್ನೊ ದುಃಖವನ್ನೊ ಉದ್ರೇಕವನ್ನೊ ರೋಮಾಂಚನವನ್ನೊ ತರುವುದು ನಿಜ. ಇದು ವಿಜ್ಞಾನಕ್ಕೆ ಜ್ಞಾನಕ್ಕೆ ಒಗ್ಗುವ ಸಂದರ್ಭವಲ್ಲ. ಆದರೆ ಪ್ರಪಂಚ ಹುಟ್ಟಿ ದಂದಿನಿಂದ ಲಕ್ಷಲಕ್ಷ ಜನದ ಅನುಭವಕ್ಕೆ ಬಂದ ವಿಷಯ. ಮಾತು ಅರ್ಥಕ್ಕೊ ಭಾವಕ್ಕೊ ನೇರವಾಗಿ ಅದನ್ನು ಸ್ಪಷ್ಟಪಡಿಸಿದರೆ ಅದರ ಶಕ್ತಿಯ ಮಿತಿಗೆ ಮಾತ್ರ ಒಳಪಡುವಂಥದು. ಪ್ರಭೆ, ವರ್ಚಸ್ಸು ಎಂಬ ಮಾತುಗಳನ್ನಾಡುವಾಗ ಅದನ್ನು ಚಿತ್ರಿಸುವವರು ಮುಖದ ಅಥವಾ ಆಕೃತಿಯ ಸುತ್ತ ಒಂದು ಬೆಳಕಿನ ವಲಯವನ್ನು ಚಿತ್ರಿಸುವುದುಂಟು. ಹೀಗೆ ಮಾತಿನ ಪ್ರಯೋಗದ ಸುತ್ತಲೂ ಅದರ ಪ್ರಭಾವಲಯ ವುಂಟಾಗುತ್ತದೆ.

### –17–

ಸಂಗೀತದ್ದೂ ಅದೇ ಪಾಡು. ಅಲ್ಲಿ ಅಪ್ಪಟ ರಾಗಾಲಾಪನೆ ಶುದ್ಧಸಂಗೀತ. ಸುಸ್ವರವೊ ಗಂಭೀರ ನಾದವೊ ಬಾಯಿತೆರೆದು ಆ .. ಆ... ಎಂದರಾಯಿತು, ಲೋಕ ಬೇರೆಡೆಗೆ ತಿರುಗುತ್ತದೆ, ತನ್ನನ್ನೇ ಮರೆಯುತ್ತದೆ. ಅರ್ಥವೇನು? ಯಾರಿಗೆ ಗೊತ್ತು? ಹಾಡುವವನಿಗೆ, ಕೇಳುವವನಿಗೆ? ವರ್ಣದ್ದೊ, ದರು ತಿಲ್ಲಾನಗಳ, ಪಲ್ಲವಿಯ ಲಯ ವಿಲಾಸದ್ದೊ? ಕೃತಿಗಳಲ್ಲಿ ಸಂಗೀತಕ್ಕೆ ವಿಶೇಷ ಅರ್ಥ, ರಾಗ ತಾಳಗಳ ರೇಖನ, ಮೂರ್ತಿವಿಶೇಷ, ಭಾವರಸ ವಿಶೇಷಗಳನ್ನು ಹೊಮ್ಮಿಸಬೇಕಾದ ಅಗತ್ಯವುಂಟು. ಪುನಃ ಇಲ್ಲಿ ಹಾಗೇ.

Highbrow politics
Aint going to get me now ಎಂದೊ,



O ma Balwin/Dat ole ma Balwin,
He just keeps dozing,
He says nothing,
he does nothing,
He just keeps dozing along

ಎಂದೊ, ಸಾವಿರ ಸಾವಿರ ಮಂದಿ ಹಾಡಿ ರಾಜಕೀಯವನ್ನು ಬದಲಾಯಿಸಲು ನೆರವಾಗಿದ್ದಾರೆ.

In the tick tick tick of the clock,
In the drip drip drip of the rain,
night and day,
Day and night,
my heart is calling out
you, you, you - ಎಂಬಾಗಲೊ,

Tea for two
Two for tea

You for me
Me for you
Both together

ಎಂಬಂಥ ಗೆಜ್ಜೆ ಕುಣಿತವನ್ನೊ ನಮ್ಮವರು ಸಂಗೀತವೆನ್ನುತ್ತಾರೊ ಇಲ್ಲವೊ. ಇವು ನಾಟ್ಯಮಂದಿರಗಳ ಗೀತೆಗಳಾದರೇನು, ಮನಸ್ಸನ್ನು ಸೂರೆಗೊಳ್ಳಬಲ್ಲ ಮೋಹಕತೆ ಉಳ್ಳವು.

ಸಂಗೀತದಲ್ಲಿನ ಶುದ್ಧ ನಾದಮೇಳವೂ ನಾದದ ಒಂದು ಬಗೆಯ ತನಿ ನಡೆಯೂ ಕೇಳುವವರ ಮನಸ್ಸಿನಲ್ಲಿ ಭಾವ ತರಂಗಗಳನ್ನು, ಆಕರ್ಷಣೆ ಮನ್ನಣೆಗಳನ್ನು ಉಂಟುಮಾಡ ಬಲ್ಲುದು. ಮಾತಿನ ಅರ್ಥಸ್ಪಷ್ಟತೆ ನಾದಕ್ಕೆ ಸ್ವರಕ್ಕೆ ಇಲ್ಲ. ಸಪ್ತಸ್ವರಗಳ ಏರುತಗ್ಗಿನಲ್ಲಿ ಒಂದೊಂದಕ್ಕೆ ಒಂದೊಂದು ನೆಲೆಯಿದೆಯಾದರೂ ಒಂದೊಂದೂ ಬೇರೆಯಾಗಿದ್ದಾಗ ಯಾವ ಭಾವಪ್ರಕಾಶನ ಮಾಡಬಲ್ಲದು ಎಂದು ಹೇಳುವುದು ಕಷ್ಟ. ಸಂಗೀತವೆಲ್ಲ ಈ ಸ್ವರಗಳ ಏರುತಗ್ಗುಗಳ ಆಟ–ಓಟದ ನೆಲಸಿನಿಂದ ಆದದ್ದು. ಸ್ಪಷ್ಟಾರ್ಥವಿಲ್ಲದಿದ್ದರೂ ಇದು ನೇರ ಆಳವಾದ, ಆಪ್ತವಾದ ನರಕಂಪನ ಉಂಟುಮಾಡತಕ್ಕದ್ದು; ರಕ್ತದ ಚಲನೆಯನ್ನು ವ್ಯತ್ಯಾಸಗೊಳಿಸಬಲ್ಲದ್ದು. ಯಾವ ಮೂಲದಿಂದ ಈ ನಾದ ಬರುತ್ತದೆಯೊ, ಯಾವ ಲಯ ರಕ್ತವನ್ನು ಕುದಿಸುವುದೊ, ಒಲಿಸುವುದೊ ಯಾರು ಬಲ್ಲರು? ಅದರ ಅರ್ಥ, ಭಾವ ಏನೊ? ಅದು ಯಾರಿಗೆ ಕೇಳುತ್ತದೆಯೊ? ಅವರು ಯಾವ ಬಗೆಯ ಮನಸ್ಸಿನವರೊ, ಸ್ಥಿತಿಯವರೊ, ಸಂಸ್ಕಾರ ಮಟ್ಟದವರೊ? ತಕ್ಷಣದ ಮನಃಸ್ಥಿತಿ ಯೇನೊ?– ಅಂತೂ ತಟ್ಟುತ್ತದೆ. ಹೀಗೆ ಖಚಿತವಾದ ಮೂರ್ತತ್ವವಿಲ್ಲವಾದರೂ

ಇದರ ಫಲ ತುಂಬ ನೇರ, ಪರಿಣಾಮಕಾರಕ. 'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ' ಎಂಬುದೇ ಏನು, ಸಚೇತನವಾದ ಎಲ್ಲ ವಸ್ತುಗಳಿಗೂ ಪ್ರಪಂಚಕ್ಕೂ ಇದು ಹೊಂದುತ್ತದೆನ್ನುತ್ತಾರೆ. ಒಂದು ಮಾತುಂಟು, ಸಂಗೀತ ಸರ್ವ ವ್ಯಾಪಕವಾದ್ದು ಎಂದು. ಆದರೆ ಆಯಾ ದೇಶದ, ಅದರ ಚಿತ್ತ ಸಂಸ್ಕಾರ ಅದಕ್ಕೊಂದು ಮಿತಿಯಾಗ ಬಲ್ಲುದು. ನಮ್ಮಲ್ಲಿಯೇ ನೋಡಬಹುದು: ದಕ್ಷಿಣಾದಿ ಸಂಗೀತಕ್ಕೆ ಉತ್ತರಾದಿಯವರು ಒಲಿಯರು. ಅದಕ್ಕೆ ನಮ್ಮವರು ಕಿವುಡರಾಗಬಲ್ಲರು. ನಮ್ಮಿಬ್ಬರಿಗೂ ಪಾಶ್ಚಾತ್ಯ ಸಂಗೀತವೊ, ಚೀನಾ ಸಂಗೀತವೊ, ಈಜಿಪ್ಟಿನ ಗಾನವೊ ಸಹ್ಯವಾಗದಿರಬಹುದು. ಅವನ್ನು ಬಲ್ಲ ಎಲ್ಲ ಜನಕ್ಕೂ ಅವು ಭಾವೋದ್ರೇಕ, ಭಾವಶಾಂತಿ ಮಾಡಬಲ್ಲ ಶಕ್ತಿ ಇರುತ್ತದೆ. ನಮ್ಮಲ್ಲಿ ಇನ್ನೆರಡು ಮಾತು ಬಳಕೆಯಲ್ಲಿದೆ. ಒಂದು: ನಮ್ಮ ಸಂಗೀತ ಆಧ್ಯಾತ್ಮಿಕ ಹೃದಯದ್ದು ಎಂದು. ಆ ಹೃದಯವಿಲ್ಲದ್ದು ಸಂಗೀತವೇ ಅಲ್ಲ, ಅಥವಾ ಕೀಳು ಎಂದು. ಆಧ್ಯಾತ್ಮಿಕ ಹೃದಯವಿಲ್ಲದ ಮನುಷ್ಯರನ್ನು ಮನುಷ್ಯರು ಎಂದು ಕರೆಯಲಾರೆವು ಎಂದು ವರ್ಜ್ಯ ಮಾಡಿದರೆ 10ಕ್ಕೆ 9 ಜನ ಕೂಡಾ ಮನುಷ್ಯ ರಾಗುವುದಿಲ್ಲ. ಸಂಗೀತ ಒಂದೇ ಏಕೆ? ಎಲ್ಲ ಕಲೆ, ಸಂಸ್ಕಾರ ಕ್ರಿಯೆಗಳಿಗೂ ಈ ಮಾತು ಒಪ್ಪುತ್ತದೆ. ಹೀಗೆ ವಾದ ಮಾಡುವವರಲ್ಲಿ ಎಲ್ಲರಿಗೂ ಅಧ್ಯಾತ್ಮವೆಂದರೇನು ಎಂಬ ಅರಿವೇ ಇರುವುದಿಲ್ಲ. ಹಾಗೆನ್ನುವವರನ್ನು ಕೇಳಿದ್ದಾರೆ; ತಾವು ಹಾಗೆಂದು ನಂಬುತ್ತಾರೆ, ಅಷ್ಟೇ. ಕೆಲವು ರಕ್ತಿರಾಗಗಳು, ಕೆಲವು ವಿರಕ್ತಿ ರಾಗಗಳು; ಕೆಲವು ಉದ್ರೇಕಗೊಳಿಸತಕ್ಕವು; ಕೆಲವು ಉಪಶಾಂತಿಗೊಳಿಸತಕ್ಕವು. ಇವೆಲ್ಲ ಆಧ್ಯಾತ್ಮಿಕ ಅಥವಾ ಅಲ್ಲ ಎಂಬ ಲಕ್ಷಣಕ್ಕೆ ಹೊಂದಬೇಕು ಎನ್ನುವುದು ನ್ಯಾಯವಾಗುವುದಿಲ್ಲ. ಸಾಮಾನ್ಯ ಲೌಕಿಕ ಪ್ರಣಯದ ಗೀತಗಳನ್ನು ಹೊಗಳಬೇಕೆನ್ನಿಸಿದಾಗ ಅದು ರಾಧಾ ಕೃಷ್ಣರದ್ದು ಎಂದು ಅರ್ಥ ಮಾಡುವವರೆಗೂ ಈ ಮಾತು ಒಯ್ಯುತ್ತದೆ. ಅಲ್ಲಿಗೂ ಇಂಥಿಂಥ ರಾಗಗಳು ಇಂಥಿಂಥ ಗುಣವುಳ್ಳವು ಎಂಬುದೂ ಸೂತ್ರದ ಲಕ್ಷಣವಲ್ಲ. ಬಹುತರ ಪ್ರಚಾರದಲ್ಲಿ ಕೆಲವು ಸಂಗೀತ ಕೃತಿಗಳು ಆಯಾ ಭಾವಗಳಿಗೆ ಹೆಚ್ಚು ಹೆಚ್ಚಾಗಿ ಬಳಕೆಯಾಗಿರಬಲ್ಲುದು. ಆನಂದ ಭೈರವಿಯಲ್ಲಿ ಹೆಚ್ಚು ಆನಂದ, ಸಂತೋಷ ಕಾಣಿಸದೆಯೇ ಇರುತ್ತದೆ. 'ನೀಲಾಂಬರಿ ಎಳೆದ' ಎಂದು ಗೋಳುಕರೆಯ ಪ್ರತಿನಾಮ ವಾಗಿ ನುಡಿಯಬಹುದು. ಅಠಾಣಾವನ್ನು ಮೂದಲೆಯ ರಾಗ ಎಂದಿದ್ದಾರೆ,  ಸ ನಿ ದಾ ಸ ನಿ ದಾ ಇತ್ಯಾದಿ ನಾದ ಖಂಡಗಳನ್ನು ಕೇಳಿ. ಮುಖಾರಿ ಪುನಃ ವ್ಯಥೆಗೆ. ಜಂಜೂಟಿ, ಬೇಹಾಗ್, ನಾಟಕುರಂಜಿ, ಕಮಾಚ್ ಇವನ್ನು ಶೃಂಗಾರಕ್ಕೆ, ಬಹಾರ್, ವಸಂತ್ ಮುಂತಾದವನ್ನು ಯಾವುದೋ ಒಂದು ಉತ್ಸಾಹದ ಹರ್ಷದ ಪ್ರಕಾಶನಕ್ಕೆ ಹೆಚ್ಚಾಗಿ ಬಳಸಿರಬಹುದು.  ಆದರೆ ಅವುಗಳಲ್ಲಿ ಅದಕ್ಕೆ ವಿರುದ್ಧವಾದ ಅನುಭವವನ್ನೂ ಕೀರ್ತನೆಗಳನ್ನೂ ಸಾಧಿಸಬಹುದು. ನಮ್ಮಲ್ಲಿ – ಪ್ರಿಯ, – ಕ್ರಿಯ ಎಂಬ ಹೆಸರಿನ ರಾಗಗಳು ಅನೇಕವು ಸಾಮಾನ್ಯವಾಗಿ ಸೊರಗಿದ ಅಥವಾ ದುಃಖದ ಅಥವಾ ಬೇರೊಂದು ಭಾವದ ಮುಡಿಪುಗಳಾಗಿ ಇವೆಯೆನ್ನುತ್ತಾರೆ. ಇನ್ನಾವುದೋ ಅವುಗಳ ನಿತ್ಯಲಕ್ಷಣಗಳಾಲಿ



ಕರ್ಮಗಳಾಗಲಿ ಅಲ್ಲ. ಛಾತಿವಂತನಾದ ಕೃತಿಕಾರ ಅಥವಾ ಗಾಯಕ ಅನೇಕ ಭಾವಗಳನ್ನು ರಸಕಲ್ಪಗಳನ್ನು ಇದು ಅಶಕ್ಯ ಎಂಬ ರಾಗದಿಂದ ಮಾಡಬಲ್ಲ. ಅಥವಾ ತೀವ್ರವಾಗಿ ಅಂಥ ಭಾವ ಉಂಟಾದಾಗ, ಅದನ್ನು ಹಾಗೆ ಹೊಮ್ಮಿಸಬಲ್ಲ ಕೃತಿಗಳಲ್ಲಿ ಇಂಥದು ಅನೇಕವಾಗಿ ಕಂಡಿದೆ. ಕಲ್ಯಾಣಿ, ಧನ್ಯಾಸಿ ಇವನ್ನು ವಿರಹ ರಾಗಗಳು ಎಂದು ಕರೆದಿರುವುದುಂಟು.  'ಜ್ಞಾನಮೇ ವರ(ಘನ)ಮೈನ ಗಂಗಾಸ್ನಾನಮು ಮನಸಾ' ಎಂಬ ಕೀರ್ತನೆಯೊ, 'ನಿಧಿಚಾಲ ಸುಖಮಾ' ಎಂಬ ಕಲ್ಯಾಣಿ ಕೃತಿಯೊ ಆ ವರ್ಣನೆಗೆ ಒಳಪಡದಿರಬಹುದು. ಕಾಂಬೋಜಿ, ಖರಹರಪ್ರಿಯ ಇವು ವರ್ಣನೆಗಳಿಗೆ ವೈಭವಕ್ಕೆ ಒದಗುತ್ತವೆ ಎಂದರೂ ಅವುಗಳಿಂದ ಬೇರೆ ಫಲಗಳನ್ನು ಮಾಡಿಸಿರುವುದುಂಟು. ಆದುದರಿಂದ ಕೃತಿಕಾರನ ಕಲ್ಪನೆ, ಅವನು ಸ್ವರಗಳನ್ನೂ ನಾದಗಳನ್ನೂ ಕಲ್ಪಿಸಿ ಬೆಳಸುವ ರೀತಿ, ಅವಕ್ಕೆ ಹಿಂದೆ ಇಲ್ಲದಿದ್ದ ಒನಪನ್ನೂ ಉಕ್ತಿವೈಭವವನ್ನೂ ತಂದುಕೊಡಬಹುದು. ಹಾಗೆಯೇ ತಾಳಗಳು. ಸಾಮಾನ್ಯವಾಗಿ ವಿಲಂಬ ಮಧ್ಯ ದ್ರುತ ಈ ವೇಗಗಳು ಒಂದರಲ್ಲಿ ಗಾಂಭೀರ್ಯ, ದುಃಖ, ಆಳ; ಇನ್ನೊಂದರಲ್ಲಿ ಅನತಿವರ್ತನೆ, ಹಿತಮಿತ; ಮತ್ತೊಂದರಲ್ಲಿ ವೇಗ, ಚುರುಕು, ಸಂತೋಷ, ಚಟುವಟಿಕೆ ಕಾಣಿಸಬಹುದು. ನಾಟ್ಯದಲ್ಲಿ ಒಂದು ರೀತಿ ಅಭಿನಯ ಪ್ರಕಾಶನದಲ್ಲಿ ಒಂದು ರೀತಿ–ಇವುಗಳ ಪ್ರಯೋಗ ಮೆರೆಯುತ್ತದೆ. ಈ ಯಾವುದರಲ್ಲಿಯೂ ಭಾವ, ನೇಮನ, ಸೂತ್ರಸಾಧನೆ ದುಸ್ತರ. 'ಪೋನಾ ಪೋವುಟ್ಟುಂ ಪೋಡಾ' ಎಂಬ ಯಾವುದೊ ಒಂದು ಸಿನೆಮಾ ಹಾಡನ್ನು ಇದ್ದಕ್ಕಿದ್ದ ಹಾಗೆ ಕ್ಷೀಣಿಸಿ ಕೃಶವಾದ ಒಂದು ಮಗುವನ್ನೆತ್ತಿ–ಕೊಂಡ ಒಬ್ಬ ತಿರುಪೆ ಹೆಂಗಸು ಸುಸ್ವರದಲ್ಲಿ ಹಾಡಿ, ಹತ್ತು ನಿಮಿಷದಿಂದ ಇದ್ದ ಭಿಕ್ಷುಕರು ಹತ್ತು ಪೈಸಾ ಸಂಪಾದನೆ ಮಾಡದಿರುವಾಗ ಮಂಡ್ಯದ ಬಸ್ ಸ್ಟ್ಯಾಂಡ್‌ನಲ್ಲಿ ಎರಡು ನಿಮಿಷದಲ್ಲಿ ಎರಡು ರೂಪಾಯಿ ಸಂಪಾದಿಸಿರುವುದನ್ನು ನಾನು ಕಂಡಿದ್ದೇನೆ.  ಕಾರಣ: ಸುಸ್ವರವೆ, ಅವಳು ಹೆಂಗಸೆಂಬುದೆ, ಹಾಡೆ, ಅವಳ ಬಡತನ, ತಿರುಪೆಯೆ? ಆ ಮಗುವಿನ ದೃಶ್ಯವೆ? ಹಾಡಿನ ಮೌಲ್ಯಗಳ ನಿರ್ಲಕ್ಷ್ಯವೆ? – ಎಂದಾಗ, ಈ ಎಲ್ಲವೂ ಸೇರಬಹುದು. ಇಷ್ಟು ಹಲವು ನಿಜವಾದಾಗ, ಯಾವೊಂದು ಮಾತ್ರವೂ ಆಗಿರಬಹುದು, ಎಲ್ಲವೂ ಆಗಿರಬಹುದು. ಒಬ್ಬೊಬ್ಬರಲ್ಲಿ ಒಂದೊಂದು. ಆದರೆ ಆ ಹಾಡಿನ ರಚನೆ, ಆ ಮಾತುಗಳ ಅರ್ಥ, ಆ ಕಂಠದ ಮಾಧುರ್ಯ ಎಲ್ಲ ಸೇರಿಕೊಂಡು ಈ ಫಲವನ್ನು ತಂದುಕೊಡುತ್ತದೆ. ಇಲ್ಲಿ ಕೂಡ ಸಂಗೀತದ ಕ್ರಿಯೆ, ಫಲ ಏತಕ್ಕೂ ಒದಗಬಲ್ಲುದು. ಇಲ್ಲಿ ಶಾಸ್ತ್ರವಿದೆ, ವಿಧಾನಗಳಿವೆ, ವಿನ್ಯಾಸ ಕ್ರಮಗಳಿವೆ, ಶ್ರುತಿ ವಿರಸ ಇವೆ; ಯಾವುದನ್ನು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ಪರಸ್ಪರ ವಿರುದ್ಧವಾದ ಅಂಶಗಳನ್ನೂ ನಡೆಗಳನ್ನೂ ಸೇರಿಸಿಕೊಂಡು ಸ್ವರಮೇಳಗಳಲ್ಲಿ ಗಾನಮೇಳಗಳಲ್ಲಿ ಎಲ್ಲಾ ವಿಧಾನ ಗಳವರೂ ಬಗೆಬಗೆಯ ಪ್ರಯೋಗಗಳನ್ನು ಮಾಡಿ ದೊಡ್ಡ ಅನುಭವಗಳನ್ನು ತಂದು ಕೊಟ್ಟಿದ್ದಾರೆ. ಪ್ರೇಮಕ್ಕೊ ವೀರಕ್ಕೊ ಶಾಂತಿಗೊ ಆರಾಧನೆಗೊ ವೈಭವಕ್ಕೊ ಬರೀ ರಂಜನೆ ವಿನೋದಗಳಿಗೊ ಬಳಸಿಕೊಂಡಿದ್ದಾರೆ. ಇಲ್ಲಿಯೂ ವಿಜ್ಞಾನದ ದೃಷ್ಟಿ, ರೀತಿ,

ವಿಧಾನ ಕ್ರಿಯೆ ಬಹುಶಃ ಸಲ್ಲುತ್ತದೆ. ಇಲ್ಲಿ ಚಿತ್ತವಿಲಾಸದ ಇನ್ನಾವುದೊ ಒಂದು ನೇರವಾಗಿ ಯಾವುದನ್ನೂ ಆಳೆಯಲಾಗದ, ಯಾವುದೂ ಹೀಗೆಯೇ ನಡೆಯತಕ್ಕದ್ದು, ನಡೆಯಬೇಕು ಎಂಬ ನಿರ್ಬಂಧವಿಲ್ಲದ, ಗಣಿತಕ್ಕಾಗಲಿ ತರ್ಕಕ್ಕಾಗಲಿ ಒದಗದ ಪ್ರಪಂಚ ಬಲಿಯುತ್ತದೆ.

**—18—**

ಚಿತ್ರದ ಪ್ರಪಂಚದಲ್ಲಿ ಇನ್ನೊಂದು ಬಗೆಯ ರೇಖಾಚಿತ್ರಣ, ಆಕೃತಿ ಚಿತ್ರ, ತನಿಯಾಗಿ ಅಥವಾ ಗುಂಪಿನಲ್ಲಿ ಒಂದು ಆವರಣದಲ್ಲಿ ಕಾಣಿಸಬಹುದಾದ ವರ್ಣಚಿತ್ರಗಳು, ಇಂಥಿಂಥ ಬಣ್ಣಕ್ಕೆ ಇಂಥಿಂಥ ಗುಣ, ಭಾವ ಎಂದು ಕೆಂಪನ್ನೊ, ಹಸುರನ್ನೊ, ಬಿಳುಪನ್ನೊ, ನೀಲಿಯನ್ನೊ ವರ್ಣಿಸಿರುವುದುಂಟು. ವರ್ಣಗಳ ನೆಲಸು ಹೇಗೆ ಭಾವಾರ್ಥ ಸೂಚಕವಾಗುತ್ತದೆಯೊ ಅದೂ ಹೀಗೆಯೇ ಆಗುತ್ತದೆ, ಆಗಬೇಕು ಎಂದು ಪೂರ್ವ ನಿರ್ಣಯ ಮಾಡುವ ಹಾಗಿಲ್ಲ. ಇಲ್ಲಿಯೂ ಒಂದೊಂದು ಬಗೆಯ ಪ್ರಯೋಜನ ಸಾಧನೆಗೆ ಒಂದೊಂದು ಬಗೆಯ ರೇಖನ–ವರ್ಣನ ಹತ್ತಿರ ದೂರಗಳ ಕಲ್ಪನೆಗೆ, ಗಟ್ಟಿ ಮೃದುಗಳಿಗೆ, ಒಡಲ ನೆಲಸುಗಳಿಗೆ ಸಂಬಂಧಿಸಿದಂತೆ ಉಪಯೋಗಿಸಿ ರುವುದುಂಟು. ಅತಿ ಸಣ್ಣ ಸಂತೋಷದಿಂದ ಹಿಡಿದು ಮಹತ್ವದ ದಿವ್ಯಾನುಭವ ಸೂಚಕವಾದ ಪ್ರಯೋಜನಗಳನ್ನು ಸಾಧಿಸಿರುವ ಚಿತ್ರಕ್ರಿಯೆಯೂ ಉಂಟು. ಆಯಾ ಸಂಪ್ರದಾಯಕ್ಕೆ ಒಲಿದ ಜನ ಅವಕ್ಕೆ ವಿಶೇಷವಾಗಿ ಒಲಿದು ಭಾವಪರವಶರಾಗುವ ರಾದರೂ ಉತ್ತಮವೆಂಬ ಚಿತ್ರ – ಇಲ್ಲಿ ಸದ್ಯ ಪ್ರಶ್ನೆ ಬೇಡ, ಉತ್ತಮ ಎಂದು ಏಕೆ, ಯಾವಾಗ ಹೇಳುತ್ತೇವೆ ಎಂದು – ನೋಡುವ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತದೆ. ಅದರಲ್ಲಿ ಯಾವುದೊ ಸಾಮರಸ್ಯ, ಶಕ್ತಿ, ಮೃದುತೆ, ಅರ್ಥವಂತಿಕೆ ಕಣ್ಮನಸ್ಸುಗಳನ್ನು ಹಿಡಿದು ತಮ್ಮ ಕಡೆಗೆ ಸೆಳೆದಿಟ್ಟುಕೊಳ್ಳುವ ಶಕ್ತಿ ಇರುತ್ತದೆ. ಈ ವರ್ಣನೆಗಳಲ್ಲಿ ರೇಖನಗಳಲ್ಲಿ – ಸಂಗೀತದಲ್ಲಿರುವಂತೆಯೇ–ಇದು ಹೀಗೇ ಸರಿ, ಇಷ್ಟೇ ಸರಿ, ಹೀಗೆ ಮಾಡಿದರೆ ಇಂಥ ಪ್ರಯೋಜನಗಳನ್ನು ಸಾಧಿಸಲಾಗುವುದಿಲ್ಲ ಎನ್ನಲಾಗುವುದಿಲ್ಲ. ಪುನಃ ಸಂಗೀತದಲ್ಲಿ ಹೇಗೆ ಸಪ್ತಕವಿರುತ್ತದೆಯೋ ವರ್ಣದಲ್ಲಿಯೂ ಹಾಗೇ–ಒಂದು ಬಗೆಯ ಕೆಂಪಿನಿಂದ ಹಿಡಿದು ನೀಲವರ್ಣದವರೆಗೂ ಸಾಧುವರ್ಣ (soft), warm colour ಎಂಬ ಭೇದಗಳುಂಟು. ಸಪ್ತಸ್ವರಗಳ ಸೇರುವಿಕೆಗಳಿಂದ ಮಾಡಬಹುದಾದ ಸಂಯೋಗಗಳಲ್ಲಾಗುವುದಕ್ಕಿಂತ ಹೆಚ್ಚಾಗಿ ವರ್ಣಗಳಿಂದ ಹೆಚ್ಚು ಸಂಯೋಗಗಳಾಗ ಬಹುದು ಎಂದು ನುಡಿದ ಹಿರಿಯ ಕಲೆಗಾರರನ್ನು ಕೇಳಿದ್ದೇನೆ. ಇದೆಷ್ಟು ನಿಜವೊ ಅಶಕ್ಯವೊ ನಾನರಿಯೆನಾದರೂ ಇದರ ಇತಿಮಿತಿಗಳು ಯಾವ ಶಾಸ್ತ್ರಕ್ಕೂ ಸಾಮಾನ್ಯವಾಗಿ ಒದಗವು. ಶಿಲ್ಪ ವಾಸ್ತುಗಳೂ ಹಾಗೇ. ಅರ್ಥವಿಲ್ಲದ ಆದರೆ ಕಣ್ಸೆಳೆಯುವ ಮೂರ್ತಿ ಗಳುಂಟು. ಬಹು ಚೆಲುವಾಗಿ ಅಷ್ಟಕ್ಕೆ ನಿಲ್ಲುವ ಕೃತಿಗಳುಂಟು. ರಾಕ್ಷಸ ಅದ್ಭುತಗಳುಂಟು. ಇವು ಸ್ವತಂತ್ರವಾಗಿದ್ದಾಗ ಒಂದು ರೀತಿ, ವಾಸ್ತು ಮಂದಿರಗಳಲ್ಲಿ, ಬಗೆಬಗೆಯ ಸ್ಥಾನಗಳಲ್ಲಿ, ನಿಲವಿನಲ್ಲಿ, ಬೆಳಕಿನಲ್ಲಿ ಇಟ್ಟಾಗ ಮತ್ತೊಂದು ರೀತಿ ಭಾವಪ್ರಕಾಶನಗಳಾಗ



ಬಹುದು. ಒಂದರಲ್ಲಿ ಪ್ರಾಧಾನ್ಯ ಅದಕ್ಕೆ; ಇನ್ನೊಂದರಲ್ಲಿ ಇನ್ನಾವುದಕ್ಕೋ ಅಧೀನ, ಪೂರಕ, ನಿದರ್ಶನ.

**—19—**

ವಾಸ್ತುವಿನಲ್ಲಿ ಎಷ್ಟು ಬಗೆಯ ಕಾರ್ಯಗಳಿಗೆ ವಾಸ್ತುತಂತ್ರವನ್ನು ಬಳಸಿ ಕೊಳ್ಳುತ್ತಾರೊ ಅಷ್ಟು ಬಗೆಯಲ್ಲಿ ರಚನೆ ಆಕೃತಿಗಳ ನಿರ್ಮಾಣ ಶಕ್ಯ. ಒಟ್ಟು ಒಂದು ನವ ನಗರ ನಿರ್ಮಾಣವನ್ನೇ ವಾಸ್ತುವಿನ್ಯಾಸ ದೃಷ್ಟಿಯಿಂದ ಮಾಡುವ ಕಲಾ ಶಿಲ್ಪ ಗಳುಂಟು. ಪ್ರಯೋಜನ ಹೇಗೇ ಇರಲಿ, ಅವುಗಳ ಆಕೃತಿಲಕ್ಷಣ ಬೆರಗುಗೊಳಿಸ ಬಹುದು. ಬೆಟ್ಟಗಳನ್ನು ಕೊರೆದು ಸುರಂಗಮಾರ್ಗಗಳನ್ನು ಮಾಡಿದ ಹಾಗೆ– ಭೂಮಿಯನ್ನು ಅಗೆದೊ ಕಡಲ ಆಳದ ತಳದಲ್ಲಿಯೊ ಮಾರ್ಗಗಳನ್ನು ಮಾಡಿಕೊಂಡು ಊರು ಊರು, ಖಂಡಾಂತರಗಳಿಗೆ ಸಾಗುವ ಏರ್ಪಾಡಿನ ವಿಧಾನಗಳುಂಟು. ಸಾವಿರಾರು ಅಡಿ ಎತ್ತರದಿಂದ ದುಮ್ಮಿಕ್ಕಿಸಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿಧಾನ ತಂತ್ರವುಂಟು. ಕಲೆಗಾರನು ಬಳಸುವ ದ್ರವ್ಯ ಸಾಮಗ್ರಿ ಯಾವುದು, ಅದನ್ನು ಹೇಗೆ ಬೆರಸಿಕೊಂಡು ಮಂದಿರಾದಿಗಳನ್ನು ನಿರ್ಮಾಣ ಮಾಡುತ್ತಾನೆ ಎಂಬ ಸಂಗತಿ ಈಚಿನ ಕಾಲದಲ್ಲಿ ಅದ್ಭುತ ಪ್ರಯೋಗಗಳನ್ನು ತಂದಿದೆ. ಹೀಗೆ ಕಲೆಯ ಪ್ರಪಂಚದಲ್ಲಿ ಜ್ಞಾನವಿಜ್ಞಾನಗಳಿಗೆ ಮತ್ತು ಅವುಗಳ ಮಾರ್ಗಗಳಿಗೆ ಒಳಪಟ್ಟರೂ ಒಳಪಡದ ಇನ್ನಾವುದೊ ಒಂದು ವಿದ್ಯೆ, ತಂತ್ರ ಹುಟ್ಟಿಕೊಂಡು ಬೆಳೆದಿದೆ. ಇದು ಮತ ಧರ್ಮಕ್ಕೆ ಸಂಬಂಧಿಸಿದಂತೆ ದುಡಿದಿರುವುದುಂಟು. ಸಂಗೀತ, ಸಾಹಿತ್ಯ, ಚಿತ್ರ, ಶಿಲ್ಪ, ವಾಸ್ತು– ಈ ಎಲ್ಲವೂ ಆಯಾ ಮತಗಳ ಪ್ರಯೋಜನಕ್ಕಾಗಿ ಮೇಲ್ಮೆಗಳನ್ನು ಮೆರಸಲು ಆರಾಧನಾಕ್ರಿಯೆಗಳಾಗಿ ದುಡಿದಿವೆ. ಅವುಗಳಿಗೆ ದುಡಿದಂತೆಯೇ ಮಾನವನ ಸಂಸ್ಕೃತ ಜೀವನಕ್ಕೆ ಸಂಬಂಧಿಸಿದ್ದೆಂಬ ಶಾಂತಿ ಕಾರ್ಯಗಳೆಂಬುದಕ್ಕೆ, ಯುದ್ಧ ಕಾರ್ಯಗಳಿಗೆ, ಇತರ ದಿನಚರಿಯ ಪ್ರಯೋಜನಗಳ ಸಾಧನಕ್ಕೆ ದುಡಿದಿವೆ. ಇವೆಲ್ಲ ವಿದ್ಯೆಗಳು. ಇವಕ್ಕೆ ಸಂಬಂಧಿಸಿದ ತಂತ್ರ ವಿಧಾನ ಆಗಮ, ಅವುಗಳಿಗೆ ವಿಧಾನವಾದ ಕರ್ಮಗಳು ಲೋಕದಲ್ಲಿ ಬೆಳೆದು ಮನುಷ್ಯನ ಜೀವನವನ್ನು ಅತೀವ ಸಂಪನ್ನವಾಗಿ ಮಾಡಿವೆ. ಯಾವ ಒಂದು ಕಾಲಕ್ಕೂ ಹಿಂದಿನ ಕಾಲದಿಂದ ಬಂದ ಇವೆಲ್ಲ ಇವನ ಮೇಲ್ಮೆಗೆ (ಅಥವಾ ನಾಶಕ್ಕೆ) ಸಾಧಕವಾದ ತಿಳಿವಳಿಕೆ, ಸಾಧನಸಜ್ಜು, ಉಪಕರಣಗಳನ್ನು ಒದಗಿಸುತ್ತದೆ. ಇದರ ಆಧಾರದ ಮೇಲೆ ಹೊಸ ಕಲ್ಪನೆಗಳನ್ನೂ ತಂತ್ರಗಳನ್ನೂ ಬೆಳಸಿಕೊಳ್ಳುವ ಆಕಾಂಕ್ಷೆಯನ್ನು ರೂಪಿಸಿಕೊಳ್ಳಲು ಅವಕಾಶ ಕೊಟ್ಟಿದೆ. ಒಂದೊಂದ ರದು ಒಂದೊಂದು ಮಾರ್ಗ, ಒಂದೊಂದು ಪ್ರಯೋಜನಕ್ಕೆ ಸಾಧಕ. ಬಲಿಷ್ಠರು, ಬುದ್ಧಿವಂತರು, ಕನಸಿಗರು ಈ ಸಂಪತ್ತನ್ನೆಲ್ಲಾ ತಾವು ಬಯಸಿದ ಕಾರ್ಯಗಳಿಗೆ ದುಡಿಸಿಕೊಳ್ಳಬಹುದು. ಆದರೆ ಈ ಪ್ರತಿಯೊಬ್ಬರೂ ತಮ್ಮ ಭಾಗದ ಶಾಸ್ತ್ರ ಜ್ಞಾನ ಉಳಿದವೆಲ್ಲಕ್ಕಿಂತ ಮೇಲು ಎಂಬಂತೆ ಸ್ಪರ್ಧೆ ಹೂಡಿ ನಡೆದುಕೊಳ್ಳುವುದು ಮಾತ್ರ

ವಿಷಾದಕರ. ಒಂದನ್ನು ಕಂಡರೆ ಇನ್ನೊಂದಕ್ಕೆ ಅಸೂಯೆ, ಅಸಹನೆ; ಒಂದು ಇನ್ನೊಂದಕ್ಕೆ ಸ್ಥಾನ ಕೊಡುವುದಿಲ್ಲ; ಒಳಪಡಲು, ಇಷ್ಟಪಡಲು ಒಪ್ಪುವುದಿಲ್ಲ. ಇಂಥಲ್ಲಿ ಘರ್ಷಣೆ ಬರುತ್ತದೆ.

**–20–**

ಒಟ್ಟಿನಲ್ಲಿ ಪ್ರಾಕೃತಿಕ ವಿಜ್ಞಾನ, ಜೀವವಿಜ್ಞಾನ – ಈ ಎರಡನ್ನೂ ಅರಿತು ಬಳಸಿಕೊಂಡು ಮನುಷ್ಯ ಸಮಾಜವನ್ನು ಕಟ್ಟಿಕೊಳ್ಳುತ್ತಾನೆ. ಅದು ಪ್ರಾಕೃತಿಕವಾಯಿತು. ಸಮಾಜಕ್ಕೆ ಸಂಬಂಧಪಟ್ಟ ರೀತಿಯಲ್ಲಿ ಈ ಫಿಸಿಕಲ್ ಮತ್ತು ಬಯೊಲಾಜಿಕಲ್ ವಿಜ್ಞಾನ ಸಾಂಸ್ಕೃತಿಕ ಸಾಧನೆಗೆ – cultural evolution – ಭಿನ್ನವಾಗಿ ದುಡಿಯುತ್ತವೆ. ಇವು ಮೂರರ ಆಧಾರದ ಮೇಲೆ, ತರ್ಕಸಮನ್ವಯ ವಿಶ್ಲೇಷಣೆ ವಿವರಣೆಗಳ ಆಧಾರದ ಮೇಲೆ, ಜ್ಞಾನ ಅಥವಾ ಮೀಮಾಂಸೆಯ ಭಾಗ ಒಟ್ಟಿನಲ್ಲಿ ಕಟ್ಟಿಕೊಳ್ಳುತ್ತದೆ. ಇವೆಲ್ಲವನ್ನೂ ಅಡಗಿಸಿ ಸಂಗ್ರಹಮಾಡಿಕೊಂಡ ಹಾಗೆ ಈ ಮಾನವ ವರ್ಗದ ಸುಖ ಕ್ಷೇಮ ನಿಯಂತ್ರಣದ ನಿರಂತರ ಸಾಧನೆಗಾಗಿ ರೀತಿ ನೀತಿ ರಚಿತವಾಗುತ್ತವೆ. ಇದು ಒಂದೊಂದು ಕಾಲ ದಲ್ಲಿಯೂ ಒಂದೊಂದು ದೇಶದಲ್ಲಿಯೂ ಒಂದೊಂದು ತೆರನಾಗಿರುತ್ತದೆ. ಆಯಾ ಮಂಡಲಗಳಲ್ಲಿ ಅದು ಸರಿ. ನ್ಯಾಯ, ಶುಚಿ, ಸಂಪ್ರದಾಯ ಎಣಿಕೆಗಳಿಗೆ ಅವು ಒಳಪಡುತ್ತವೆ. ಇವೆಲ್ಲ ಮತಧರ್ಮ ಎಂಬುದಕ್ಕೆ ಅವಕಾಶ ಕೊಡಬಹುದು, ಕೊಡದಿರಬಹುದು. ಅಲ್ಲಿ ಪಕ್ಷ ಪ್ರತಿಪಕ್ಷಗಳು ಹುಟ್ಟಿಕೊಳ್ಳುತ್ತವೆ. ಅವಕ್ಕೆ ಪೋಷಕರು ಹುಟ್ಟಿಕೊಳ್ಳುತ್ತಾರೆ. ಆದರೆ ಕೊಟ್ಟು ನಡೆದಿರುವುದೇ ಸಾಮಾನ್ಯವಾಗಿ ನೋಟ. ಈ ನೋಟ ಒಂದೊಂದು ದೇಶದಲ್ಲಿ, ಒಂದೊಂದು ಕಾಲದಲ್ಲಿ ಒಂದೊಂದು ರೀತಿ. ಇವೆಲ್ಲ ಮನುಷ್ಯನು ತನ್ನ ಬುದ್ಧಿ ಕ್ರಿಯಾ ವ್ಯಾಪಾರಗಳಿಗೆ, ಜೀವನ ನಿಯಂತ್ರಣಕ್ಕೆ, ನೆಮ್ಮದಿಗೆ, ಬುದ್ಧಿ ವಿವೇಚನೆಗೆ ರಚಿಸಿಕೊಂಡ ಸಹಾಯಗಳು, ಸಾಧನಗಳು. ದೇವರೆಂಬ ಕಲ್ಪನೆ ಕೂಡ ಮನುಷ್ಯನು ತನ್ನ ಸುಖಕ್ಕೆ ಕಲ್ಪನೆಗೆ ಮಾಡಿಕೊಂಡು ಒಂದು ಅಧ್ಯಾತ್ಮವೆಂಬ ಹಂದರವನ್ನು ಕಟ್ಟಿಕೊಂಡದ್ದು. ಮತಿಯಿಂದ ಮತ, ಮತಕ್ಕೆ ಸಂಬಂಧಿಸಿದಂತೆ ಮತಿ ಎಂದರೆ ತಪ್ಪಾಗಲಾರದು. ಇಂಥುದೇ ಸಾಧನ, ಸಹಾಯ ಆದರೂ ಕಲೆಯ ಪ್ರಪಂಚ ಇವೆಲ್ಲದರ ರೀತಿ ವಿಧಾನಗಳಿಗೂ ಹೊರತಾಗಿ, ಯಾವ ಒಂದಕ್ಕೂ ಒಳಪಡದೆ ಸ್ವತಂತ್ರವಾಗಿ ಮನುಷ್ಯನ ಅಂತರಾನುಭವಗಳಿಗೆ, ಭಾವವಿಲಾಸಕ್ಕೆ ವ್ಯಂಜನೆಗೆ ಭಾವಪರಿಪಾಕಕ್ಕೆ ಧ್ವನಿಯಾಗುತ್ತದೆ, ರೂಪಣವಾಗುತ್ತದೆ. ಜ್ಞಾನ ವಿಜ್ಞಾನಗಳ ಪ್ರಪಂಚದಲ್ಲಿ ಕಲೆಗಳ ಸ್ಥಾನ ಸ್ವತಂತ್ರವಾದ್ದು, ಸ್ವಾಯತ್ತವಾದ್ದು.

ಪ್ರಾಣಿವರ್ಗಕ್ಕೆ ಇವೆಲ್ಲ ಹೇಗೋ; ಅರಿವಿಗೆ ಬರುತ್ತದೆಯೊ ಇಲ್ಲವೊ? ಮನುಷ್ಯನಿಗೆ ಮೇಲ್ಪಟ್ಟು ಜೀವಿಗಳಿದ್ದರೆ, ಅದಕ್ಕೆ ಈ ಸಂಸ್ಕೃತಿಯ ಅರಿವಿದೆಯೊ ಇಲ್ಲವೊ? ಇದ್ದರೆ ಅವುಗಳ ಬೆಲೆಗಳು ಯಾವುವು, ರೀತಿ ನೀತಿ ಯಾವುವು? ದೇವಲೋಕ, ನಕ್ಷತ್ರಲೋಕ ಎಂಬುದು ನಿಜವಾದರೆ ಅವುಗಳವು ಹೇಗೊ? ಒಂದೇ



ಕಾಲದಲ್ಲಿ ನರರ ಕಾಲಮಾನಕ್ಕೂ ಇತರರ ಕಾಲಮಾನಕ್ಕೂ ಹೋಲಿಕೆ ತಾರತಮ್ಯ ಎಂಥವು?–ಈ ಒಂದೂ ನಮ್ಮ ತಿಳಿವಿಗೆ ಸದ್ಯಕ್ಕೆ ಬರುವ ಹಾಗಿಲ್ಲ. ಈ ಐವತ್ತು ವರ್ಷಗಳ ಚರಿತ್ರೆಯಲ್ಲಿ ಮನುಷ್ಯರು ಬೇರೆ ಬೇರೆ ಭೂಖಂಡಗಳಲ್ಲಿ ಸಾಧಿಸಿರುವ ಜ್ಞಾನ ವಿಜ್ಞಾನಗಳ ಸಾಹಸ ವಿಸ್ಮಯಕರವಾದುದು. ಎರಡು ಸಾವಿರ ವರ್ಷಗಳಲ್ಲಿ ಮಾನವನ ಚರಿತ್ರೆಯು ಏನೇನನ್ನು ಸಾಧಿಸಿತ್ತೊ ಅಂಥುದೆಲ್ಲದರ ತಿಳಿವಳಿಕೆಯನ್ನೂ ಸಂಗ್ರಹಿಸಿದ್ದಾರೆ. ದಾಖಲೆಗಳನ್ನು ಕಂಡುಹಿಡಿದಿದ್ದಾರೆ. ಈ ಬಗೆಯ ಎಲ್ಲ ಹುಟ್ಟು, ಬೆಳವಣಿಗೆ, ಕ್ಷಯ ನಾಶ ಸ್ವರೂಪ ಈವರೆಗಿನ್ನೂ ಉಳಿದುಕೊಂಡು ಬಂದಿದ್ದರೆ ಈ ಎಲ್ಲ ಭಾಗಗಳಲ್ಲಿಯೂ ಮನುಷ್ಯನು ಕಂಡಿರುವ ಬಲಾಬಲಗಳೇನು, ಯಾವುದು ಕ್ಷೇಮ, ಹಿತಸಾಧಕ ಎಂಬುದನ್ನು ಅರಿತುಕೊಂಡಿದ್ದಾನೆ. ಈ ಪ್ರತಿಯೊಂದು ಸಂದರ್ಭದಲ್ಲಿಯೂ ಯಾವ ಸಮಸ್ಯೆಗಳಿವೆ, ಈ ಸಮಸ್ಯೆಗಳ ಪರಿಹಾರ ಎಷ್ಟು ಸೂಚಿತವಾಗಿವೆ; ಎಷ್ಟು ಸೂಚಿತವಾಗಬಲ್ಲವು; ಇವುಗಳಲ್ಲಿ ಯಾವುದು ಗ್ರಾಹ್ಯ ಯಾವುದಲ್ಲ, ಏಕೆ–ಎಂಬುದನ್ನು ಎಲ್ಲ ಶಾಸ್ತ್ರಗಳ ಸಂಬಂಧದಲ್ಲಿಯೂ ಮಾಡಬೇಕಾದ ಅಗತ್ಯ ಒಡ್ಡಿದೆ. ನಮ್ಮ ದೇಶದಲ್ಲಿ ಮಾಡಬೇಕು ಮಾತ್ರ. ವಿಶ್ವದಲ್ಲಿ ನಮ್ಮದೊಂದೇ ಅಲ್ಲ ಜನವರ್ಗ; ಲೋಕದಲ್ಲಿ ಇಂಥವು ನೂರಾರು, ಸಾವಿರಾರು ಇವೆ. ಎಲ್ಲಕ್ಕೂ ಚರಿತ್ರೆ, ನಡವಳಿಕೆ ಇವೆ. ಸರಿ–ತಪ್ಪು, ರೀತಿ–ನೀತಿಗಳ ಕಲ್ಪನೆಗಳಿವೆ, ವ್ರತಾಚಾರಗಳಿವೆ ಎಂಬುದನ್ನರಿತು, ನಮ್ಮಷ್ಟೇ ಗೌರವಸ್ಥಾನ ಸ್ವಸಂರಕ್ಷಣೆ ಅವಕ್ಕೂ ಸಲ್ಲಿಸುವ ನ್ಯಾಯ, ಮರ್ಯಾದೆ ಎಂಬುದರ ಅರಿವು ನಮ್ಮ ಜನಕ್ಕೆ ಬರಬೇಕು.

ಇನ್ನೊಂದು ನೋಡಿದಲ್ಲದೆ ತಾರತಮ್ಯ ಶಕ್ಯವಾಗುವುದಿಲ್ಲ. ನಮ್ಮ ಅಮ್ಮ ಮಾಡಿದ್ದೇ ಹೋಳಿಗೆ, ನಮ್ಮವರು ಮಾಡಿದ್ದೇ ಅಡಿಗೆ, ಪೂಜಿಸಿದ್ದೇ ದೇವರು, ಮಾಡಿದ್ದೇ ಪ್ರಾರ್ಥನೆ, ಇನ್ನೊಂದಿಲ್ಲ, ನಮ್ಮ ಉತ್ಕರ್ಷೆಯೇ ಪರಮ ಸಾಧನೆ ಎನ್ನುವ ಬುದ್ಧಿ ಎಷ್ಟು ನಿಕೃಷ್ಟವೋ ಅಷ್ಟೇ ಸಂಕುಚಿತವಾಗುತ್ತದೆ. ಸಮಾಜ ಶಾಸ್ತ್ರವೆಂದರೆ ಎಲ್ಲ ಸಮಾಜಗಳಿಂದಲೂ ನೀತವಾದ್ದು; ನೀತಿ ಎಂದರೆ ಎಲ್ಲ ಪ್ರಕಾರದ ಸಂಪ್ರದಾಯ ಗಳಿಗೂ ರೀತಿ ನೀತಿಗಳಿಗೂ ಮಾನ್ಯತೆ ಕೊಡತಕ್ಕದ್ದು; ಮತಧರ್ಮ ಮೀಮಾಂಸೆ ಎಂದರೂ ಹಾಗೆ. ಈ ಎಲ್ಲವನ್ನೂ ಸಾಕಲ್ಯದಿಂದ ಪರಿಶೀಲಿಸಿ ಅವೆಲ್ಲಕ್ಕೂ ಹೊಂದು ವಂತಹ ಸಾಮಾನ್ಯ 'ರಿಲಿಜಿಯಸ್' ಅಲ್ಲ 'ರಿಲಿಜಿಯನ್' ಎಲ್ಲರೂ ಒಪ್ಪತಕ್ಕಂಥಾದ್ದು ಎಂಬ ಆಲೋಚನೆ ಅಯುಕ್ತವಾಗಬೇಕಿಲ್ಲ. ಒಂದು ಸಣ್ಣ ಪ್ರಶ್ನೆ: ಪೂರ್ವ ಯಾವುದು, ಪಶ್ಚಿಮ ಯಾವುದು, ಉತ್ತರ ಯಾವುದು, ದಕ್ಷಿಣ ಯಾವುದು ಎಂಬುದು. ಯಾರಿಗೆ, ಎಲ್ಲಿ ಎಂಬುದು ಪ್ರಶ್ನೆಗೆ ಹಿಂದಿರುವ ಅಂಶ. ಗ್ರೀನ್ಲೆಂಡಿಗೆ, ಉತ್ತರ ಆರ್ಟಿಕ್‌ಗೆ ಉತ್ತರ–ದಕ್ಷಿಣ ಧ್ರುವಕ್ಕೆ ದಕ್ಷಿಣ ಯಾವುದು? ಒಂದು ರಸ್ತೆಯಲ್ಲಿ ಹೋಗುವಾಗ ಬಲಗಡೆ ಇದ್ದುದು, ಅದೇ ರಸ್ತೆಯಲ್ಲಿ ಹಿಂದಿರುಗುವಾಗ ಎಡವಾಗುತ್ತದೆ. 'ಇತ್ತ ಮೂಡುವ ಸೂರ್ಯಂ ಅತ್ತ ಮೂಡುಗುಂ' ಎಂಬುದು ಬಂದಾಗ ನಮ್ಮ ಉಪಾಧ್ಯಾಯ ರೊಬ್ಬರು ಕೇಳಿದ ಪ್ರಶ್ನೆ ನೆನಪಿಗೆ ಬರುತ್ತದೆ.. 'ನೀವು ಯಾವ ಕಡೆ ನಿಂತಿದ್ದೀರಿ,

ಅಣ್ಣಯ್ಯ?' ಎಂದು. ಇನ್ನೂ ಸ್ವಲ್ಪ ಮುಂದುವರಿಸೋಣ. 'ಪ್ರಥಮ ಪ್ರಭಾತ ಉದಯ ತವ ಗಗನೇ' ಎಂದು ಹೇಳಿ ಗೀತದ ಆನಂದವನ್ನು ನಾವೆಲ್ಲ ಮೆಚ್ಚಿಕೊಂಡಿದ್ದೇವೆ. ಪ್ರಥಮ ಪ್ರಭಾತ ಯಾರಿಗೆ? ಭಾರತಕ್ಕೆ, ಕಲ್ಕತ್ತಾಕ್ಕೆ? ಇವಕ್ಕೆ ಪ್ರಾಶಸ್ತ್ಯ ಕೊಟ್ಟಾಗ ಇದು ಸರಿ. ಇದಕ್ಕೆ ಪೂರ್ವದಲ್ಲಿರುವ ಜಪಾನನ್ನು "The Land of Rising Sun" ಎಂಬುದು ನಿಜವೆ. ಸೂರ್ಯ ಉದಯಿಸುವ ದೇಶವೆಂದು ಅವರೆಂದುಕೊಳ್ಳುತ್ತಾರೆ. ಜಪಾನಿಗೆ ಯಾವುದು ಪೂರ್ವ? ಅಮೇರಿಕಾ. ಅಮೇರಿಕಾಗೆ, ಯುರೋಪಿಗೆ? ಯುರೋಪಿಗೆ ಪುನಃ ಏಶಿಯಾ ಪೂರ್ವ. ಯಾವುದು ಪೂರ್ವ, ಯಾವುದು ಪಶ್ಚಿಮ? ರಡ್ಯರ್ಡ್ ಕಿಪ್ಲಿಂಗ್ ಒಂದು ಪದ್ಯ ಬರೆದ:

East is east, and west is west
And never the twain shall meet
But there is neither West or East nor North nor South
When one brave man meets
Another on the field ಎಂದ.

ಸಾಮಾನ್ಯವಾಗಿ ಈ ಎರಡನೆಯ ಭಾಗವನ್ನು ಜನ ಮರೆತಿದ್ದಾರೆ. ಜ್ಞಾನ–ವಿಜ್ಞಾನ ಪ್ರಪಂಚದಲ್ಲಿಯೂ ಹೀಗೇ. ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಎಲ್ಲ, ಇವೆಲ್ಲ ಒಂದು. ಈ ನಾಲ್ಕು ಸೇರಿ ಒಂದು ಪ್ರಪಂಚ. ಒಂದನ್ನು ಅರಿತಲ್ಲದೆ ಇನ್ನೊಂದಕ್ಕೆ ಪೂರ್ಣತೆ ಇಲ್ಲ. ಇವನ್ನೆಲ್ಲ ಅರಿತು, ಪರಸ್ಪರ ವಿರೋಧಗಳನ್ನು ಸಂಘರ್ಷಗಳನ್ನು ನಿವಾರಿಸಿ, ಎಲ್ಲವನ್ನೂ ಅನುಭವದ ಒಂದು ಅಂಶವಾಗಿ ಮಾಡಿಕೊಂಡು ಮುಂದೆ ಹೋದೆವಾದರೆ ಮಾತ್ರ ಮನುಷ್ಯನ ಸಂಸ್ಕೃತಿ ಒಂದು ಹೆಜ್ಜೆ ಮುಂದುವರೆಯಬಲ್ಲುದು. ಅಲ್ಲಿನವರೆಗೂ ಮಾತು, ಕೃಪಣತೆ, ಸಂಕೋಚಗಳಿಂದ ವಿಕಾರಗೊಳ್ಳುತ್ತಲೇ ಇರುತ್ತದೆ. ಪ್ರತಿಯೊಂದು ಸತ್ಯ, ಜೀವ ಬೆಲೆ ಆದಾಗ ಅದಾವುದನ್ನೂ ನಿರಾಕರಿಸದೆ ಅದರ ಸ್ಥಾನವನ್ನು ಮಾನಗಳನ್ನು ಅದಕ್ಕೆ ಸಲ್ಲಿಸಿ ಒಟ್ಟಿನ ಒಂದು ಮಂಡಲವನ್ನು ನಿರ್ಮಿಸಿದಾಗ ಮಾತ್ರ ನಮ್ಮ ದರ್ಶನ ಸಮ್ಯಕ್ ದರ್ಶನ, ನಮ್ಮ ಜ್ಞಾನ ಸಮ್ಯಕ್ ಜ್ಞಾನವಾಗುತ್ತದೆ. ಅದರಂತೆ ನಡೆದ ನಮ್ಮ ಚಾರಿತ್ರ್ಯ ಸಮ್ಯಕ್ ಚಾರಿತ್ರ್ಯವಾಗುತ್ತದೆ. ಇದು ಒಂದು ಮತದ ಪ್ರಕ್ರಿಯೆ ಅಲ್ಲ; ಸಮಸ್ತರಿಗೂ ಸಲ್ಲುವ ಮಾತು. ಆಲೋಚನೆ ಮಾಡಬಲ್ಲ ಎಷ್ಟು ಜನ ಇರುತ್ತಾರೆಯೋ ಅಷ್ಟೂ ವಿವೇಚನೆಗೆ ಅವಕಾಶ ಉಂಟು. ಆದರೆ ಘರ್ಷಣೆ, ಶೋಷಣೆಗಳು ಅಲ್ಲಿ ತಲೆ ಹಾಕಬಾರದು. ಇದು ಎಂದಿಗೆ ಸಿದ್ಧಿಸೀತೋ?

# ಅನುಬಂಧ-1

## ಜೆ.ಬಿ.ಎಸ್. ಹಾಲ್ಡೇನ್ ಅವರೊಡನೆ ಸಂದರ್ಶನ

(ಈ ಸಂದರ್ಶನದ ಓದಿನಿಂದ ನಮಗೆ ದೊರಕುವ ಲಾಭವೆಂದರೆ ಒಬ್ಬ ವಿಜ್ಞಾನಿಯು ಪ್ರಶ್ನೆಯೊಂದಕ್ಕೆ ಹೇಗೆ ಸ್ಪಂದಿಸುತ್ತಾನೆ ಎನ್ನುವುದನ್ನು ಅರಿಯುವುದು. ಉತ್ತರಿಸುವಾಗಿನ ಜಾಗರೂಕತೆ, ಮಾತಿನ ಮೇಲಿನ ಹಿಡಿತ, ಶಬ್ದಗಳ ಅರ್ಥದ ಬಗೆಗಿನ ನಿಖರತೆ, ತಾನು ನೀಡುವ ಆಧಾರಗಳಿಗಿರುವ ಮಿತಿಗಳ ಅರಿವು, ಹೀಗಾಗಿ ತನಗೆ ತಿಳಿಯದ್ದರ ಹೊರತಾದುದಕ್ಕೆ ಬದ್ಧವಾಗದ ನಿಲವು – ಇವೆಲ್ಲ ಇಲ್ಲಿ ಕಾಣಸಿಗುತ್ತವೆ. ಅಂತಹ ಒಂದು ಮನಸ್ಸು, ಒಂದು ವ್ಯಕ್ತಿತ್ವ ಕಾರ್ಯಶೀಲವಾಗುವ ಪರಿ ಇಲ್ಲಿದೆ. ಗಾಢವಾದ ಆಸಕ್ತಿ ಮತ್ತು ಅತೀವ ಪ್ರಾಮಾಣಿಕತೆಗಳಿಂದ ಸಂವಾದವನ್ನೆದುರಿಸುವುದು ಮಾತ್ರವಲ್ಲ, ಅದರಲ್ಲಿ ಅವರು ಕಾಣುವ ಆನಂದ ಅದೆಂಥದು!)

ಡಾ. ಬಿ. ಆರ್. ಶೇಷಾಚಾರ್ : ಪ್ರೊಫೆಸರ್, ಜೀವ ಎಂಬುದನ್ನು ನೀವು ಹೇಗೆ ಸೂತ್ರೀಕರಿಸಿ ಹೇಳುತ್ತೀರಿ?

ಡಾ. ಹಾಲ್ಡೇನ್ : ಜೀವವನ್ನು ಕುರಿತು ಸೂತ್ರೀಕರಿಸಲು ಸಾಧ್ಯವಿಲ್ಲ, ಅದಕ್ಕೆ ಕಾರಣವಿದೆ. ಒಂದು ಹಸು ಅಥವಾ ಒಂದು ತಾಳೆ ಮರ ಜೀವಂತವಾಗಿದೆ ಎಂಬುದು ನನಗೂ ಚೆನ್ನಾಗಿ ಗೊತ್ತಿದೆ, ನಿಮಗೂ ಗೊತ್ತಿದೆ. ಹಾಗೆಯೇ, ಒಂದು ಕಲ್ಲು ಅಥವಾ ಮೇಜು ಜೀವಂತವಲ್ಲ ಎಂಬುದೂ ಗೊತ್ತಿದೆ. ಆದರೆ ಅಂಟುರೋಗವನ್ನು ತರುವ ವೈರಸ್‌ಗಳೆಂಬ ಕೆಲವು ಸೂಕ್ಷ್ಮ ಕಣಗಳಿವೆ, ಅವುಗಳನ್ನು ಕೆಲವರು ಜೀವಿಗಳೆಂದು ಕರೆದರೆ ಮತ್ತೆ ಕೆಲವರು ಅಲ್ಲವೆನ್ನುತ್ತಾರೆ. ಇಂತಹ ವಿಷಯಗಳ ಬಗ್ಗೆ ವ್ಯಾಪಕವಾದ ಸಂಶೋಧನೆ ಕೈಗೊಳ್ಳುವುದು ಮುಖ್ಯ. ಆನಂತರವೇ, ಸಜೀವಿ ಮತ್ತು ನಿರ್ಜೀವಿಯ ನಡುವೆ ಖಚಿತವಾದ ಗೆರೆಯನ್ನೆಳೆಯುವುದು ಪ್ರಾಯಶಃ ಸಾಧ್ಯವಾದೀತು, ಅಥವಾ ಅದು ಸಾಧ್ಯವಲ್ಲ ಎಂಬುದಾದರೂ ಖಚಿತವಾದೀತು. ಈಗೇನಾದರೂ ಜೀವವನ್ನು ಸೂತ್ರೀಕರಿಸಲು ಪ್ರಯತ್ನಿಸಿದರೆ, ಅದು ಪೂರ್ವಾಗ್ರಹದಿಂದ ಕೂಡಿರುತ್ತದೆ. ಹಸು, ತಾಳೆ ಮರ ಇಂತಹ ದೊಡ್ಡ ಜೀವಿಗಳಲ್ಲಿ ಸಾಮಾನ್ಯವಾಗಿರುವ ಲಕ್ಷಣಗಳ ಒಂದು ಪಟ್ಟಿಯನ್ನೇ ನಾನು ನೀಡಬಹುದು; ಆದರೆ ಆ ಲಕ್ಷಣಗಳೆಲ್ಲ ಅತ್ಯಂತ ಸೂಕ್ಷ್ಮ ಜೀವಿಗಳಲ್ಲಿ ಇರುತ್ತವೆಯೇ ಎಂಬುದನ್ನು ಹೇಳಲು ನನಗೆ ಸಾಧ್ಯವಾಗದು.

ಡಾ. ಬಿ.ಆರ್.ಶೇ. : ಜೀವ ವಿಕಾಸದ ಬಗೆಗಿನ ನಿಮ್ಮ ತಿಳಿವಳಿಕೆಯ ಹಿನ್ನೆಲೆಯಲ್ಲಿ ಮಾನವನ ದೇಹ ಮತ್ತು ಮಾನವನ ಮೆದುಳು ಇವುಗಳ ರಚನೆ ಮತ್ತು ಕಾರ್ಯಗಳಲ್ಲಿ ಆಗುವ ಅಥವಾ ಸಂಭವನೀಯವಾದ ಬೆಳವಣಿಗೆಗಳಾವುವು?

ಡಾ. ಹಾಲ್ಡೇನ್ : ಅನೇಕ ಸಾಧ್ಯತೆಗಳಿವೆ. ಮೊದಲನೆಯ ಅಂಶವೆಂದರೆ, ಪ್ರಾಯಶಃ ಅದು ತೀರ ನಿಧಾನವಾಗಿ ಸಾಗುವಂತಹುದು ಎಂಬುದು. ಒಂದು ಲಕ್ಷ ವರ್ಷವಾದರೂ ಎದ್ದು ಕಾಣುವ ಯಾವುದೇ ಬದಲಾವಣೆ ಆಗದು. ಆದರೆ ನಾನು

ಕೆಲವು ಸೂಚನೆಗಳನ್ನು ನಿಮ್ಮ ಮುಂದಿಡಬಲ್ಲೆ: ನಾವು ಹಿಂಭಾಗದ ಕೆಲವು ಹಲ್ಲುಗಳನ್ನು ಕಳೆದುಕೊಳ್ಳಬಹುದು, ನಿದರ್ಶನಕ್ಕೆ, ಅನವಶ್ಯಕವಾದವು, ಕೆಲವರಲ್ಲಿ ಈಗಾಗಲೇ ಮೂಡಿಲ್ಲದಂತಹವು. ಬಹುಶಃ ನಮ್ಮ ದೈಹಿಕ ಬಲಾಢ್ಯತೆ ಹೆಚ್ಚಾಗುವುದಿಲ್ಲ. ಆದರೆ ನಮ್ಮ ಮಾಂಸಖಂಡಗಳ ಸಂಯೋಜನೆ ಉತ್ತಮಗೊಳ್ಳುತ್ತದೆ. ಆಗುವುದೆಂದು ನಿರೀಕ್ಷಿಸಬಹುದಾದುದೆಂದರೆ, ನಮ್ಮ ದೇಹದ ಬಗೆಗೆ ನಮಗಿರುವ ತಿಳಿವಳಿಕೆ ಮತ್ತು ಸಾಮರ್ಥ್ಯಗಳ ಹೆಚ್ಚಳ. ಹೀಗಾಗಿ ನಮ್ಮ ಅರಿವು ವಿಸ್ತಾರಗೊಳ್ಳುತ್ತದೆ ಮತ್ತು ಕೆಲವು ಮಂದಿ ಯೋಗಿಗಳಲ್ಲಿರುವುದೆಂದು ಹೇಳಲಾಗುವ ಸ್ಥಿತಿ, ಅಂದರೆ ತಮ್ಮ ದೇಹದಲ್ಲಿ ನಡೆಯುತ್ತಿರುವ ಪ್ರಕ್ರಿಯೆಗಳ ಬಗೆಗಿನ ಸಂಪೂರ್ಣ ಅರಿವು ಮತ್ತು ಅವುಗಳನ್ನು ಬೇಕಾದಂತೆ ನಿಯಂತ್ರಿಸುವ ಸಾಮರ್ಥ್ಯ, ಸರ್ವತ್ರವಾಗುತ್ತದೆ. ಆದರೆ, ಅದು ನರಮಂಡಲದಲ್ಲಿ ಉಂಟಾಗುವ ಹೊಸ ಸಂಪರ್ಕಗಳನ್ನು ಅವಲಂಬಿಸುವಂತಹುದು. ಇಂಥದೊಂದು ಸಾಧ್ಯತೆ ಇದೆಯೆಂದು ನನ್ನ ಭಾವನೆ. ಅದನ್ನು ನಾವು ಸಾಧಿಸಿದರೆ, ನೀವು ಕೇಳಿದ ಪ್ರಶ್ನೆಯನ್ನು ಉತ್ತರಿಸಲು ನಮಗೆ ಹೆಚ್ಚಿನ ಅರಿವು ಮತ್ತು ಸಾಮರ್ಥ್ಯ ಉಂಟಾಗುತ್ತದೆ. ಏಕೆಂದರೆ, ಈಗ ನಮ್ಮ ದೇಹದ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ ಮಾತ್ರ. ಅದೂ ತೀರ ಹೊರಗಿನದರ ಬಗ್ಗೆ ಮಾತ್ರವೇ ಹೊರತು ಒಳಗಿನದರ ಬಗ್ಗೆ ಅಲ್ಲ.

ಡಾ. ಬಿ.ಆರ್.ಶೇ. : ಲಂಡನ್ ಯೂನಿವರ್ಸಿಟಿ ಕಾಲೇಜಿನ ಜೆ.ಡಬ್ಲ್ಯು. ಯೂಂಗ್ ಅವರು ನರವ್ಯವಸ್ಥೆ ಮತ್ತು ರಚನೆಗಳಿಗೆ ಸಂಬಂಧಿಸಿದಂತೆ ಈಚೆಗೆ ಅಧ್ಯಯನ ನಡೆಸಿದ್ದಾರೆ. ಅದರಿಂದ ಹೊಸ ಅಂಶಗಳೇನಾದರೂ ಬೆಳಕಿಗೆ ಬಂದಿದೆಯೆಂದು ನಿಮಗನಿಸುತ್ತದೆಯೇ?

ಡಾ. ಹಾಲ್ಡೇನ್ : ಓಹ್! ಅದಂತೂ ತುಂಬ ಸ್ವಾರಸ್ಯದಾಯಕವಾಗಿದೆ. ಅದರಲ್ಲಿ, ಸಂಖ್ಯೆಗಳು, ಪರಿಮಾಣಾತ್ಮಕ ಸಂಖ್ಯೆಗಳ ಹೊರತಾಗಿ ಹೆಚ್ಚಿನ ಅಂಶಗಳೇನೂ ಇವೆಯೆಂದು ನನಗನ್ನಿಸುವುದಿಲ್ಲ. ಮುಂದಿನ ಹಂತ ಯಾವುದೆಂಬುದರ ಬಗ್ಗೆ ನೀವು ತಿಳಿಯಬೇಕಾದರೆ 'ಕರೆಂಟ್ ಫಿಲಾಸಾಫಿಕಲ್ ಟ್ರಾನ್ಸಾಕ್ಷನ್ಸ್ ಆಫ್ ದ ರಾಯಲ್ ಸೊಸೈಟಿ'ಯಲ್ಲಿ ಪ್ರಕಟವಾಗಿರುವ ಬರ್ಲೀ ಅವರ ಪ್ರಬಂಧವನ್ನು ಓದಬೇಕೆಂದು ಸೂಚಿಸುತ್ತೇನೆ.

ಡಾ. ಬಿ.ಆರ್.ಶೇ. : ಮನಸ್ಸು ಎಂಬುದು ಮೆದುಳು ಅಥವಾ ನರಮಂಡಲಕ್ಕೆ ಹೊರತಾದ ಕಾರ್ಯ ಅಥವಾ ಸಾಮರ್ಥ್ಯ ಎಂದು ನೀವು ಭಾವಿಸುವಿರಾ?

ಡಾ. ಹಾಲ್ಡೇನ್ : ಇದಕ್ಕೆ ಉತ್ತರ, ಮನಸ್ಸು ಎಂದರೆ ಏನು ಎಂದು ನೀವು ಭಾವಿಸುತ್ತೀರೋ ಅದನ್ನು ಅವಲಂಬಿಸಿದೆ. ಅದರ ಸಾಮಾನ್ಯ ಸ್ವರೂಪವನ್ನು ಅತ್ಯಂತ ಸಮರ್ಪಕವಾಗಿ ನಿಮ್ಮ ಪ್ರಾಚೀನ ಮಹರ್ಷಿಗಳು ನಿರೂಪಿಸಿದ್ದಾರೆ; ಅವರ ಪ್ರಕಾರ, ನಾವು ಯಾವುದನ್ನು ಮನಸ್ಸು ಎನ್ನುತ್ತೇವೆಯೋ ಅದು ಒಂದು ವಿಶಿಷ್ಟ ಪ್ರಕಾರದ ಶರೀರ, ಅದು ಲಿಂಗ ಶರೀರ. ಇದು ಅದರ ರಚನೆಯ ಬಗ್ಗೆ ನೀಡಬಹುದಾದ ಅತ್ಯಂತ ಸೂಕ್ತ ವಿವರಣೆ. ನನ್ನ ದೃಷ್ಟಿಯಲ್ಲಿ, ಮನಸ್ಸು ಎಂಬುದು, ನನ್ನ ದೃಷ್ಟಿಕೋನದಿಂದ ಮಾತ್ರವೇ ಹೇಳುವುದಾದರೆ, ಅದು ಬೇರೆಯಲ್ಲ. ಆದರೆ, ಮನಸ್ಸನ್ನು ಬೇರೊಂದು ದೃಷ್ಟಿಕೋನದಿಂದ



ಪರಿಶೀಲಿಸಿದರೆ, ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ; ವಿಭಿನ್ನ ಮನಸ್ಸುಗಳ ನಡುವೆ ನಾವು ಕಾಣುವ ಭಿನ್ನತೆಯು ದೇಹದ ಕಾರಣದಿಂದಾದುದು ಎಂದೇ ನನಗೆ ಅನ್ನಿಸುತ್ತದೆ. ಈ ಮನಸ್ಸುಗಳ ಹಿಂದಿನ ಸತ್ವವು – ಬೇಕಾದರೆ ಅದನ್ನೇ 'ಮನಸ್ಸು ಎನ್ನಿ, ಆದರೆ ಹಾಗನ್ನುವುದರಿಂದ ಅದರ ವ್ಯಾಪ್ತಿಯನ್ನು ಕುಗ್ಗಿಸಿದಂತೆ ಎಂಬುದು ನನ್ನ ಭಾವನೆ – ಈ ದೇಹಗಳಿಗೆ ಅಂಟಿಕೊಳ್ಳದೇ ಇರುವುದು ಮಾತ್ರವಲ್ಲ, ಅದರೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರುವುದಲ್ಲ ಎನ್ನಬಹುದು. ಅವು ವಾಸ್ತವ(?)ದ ಕಾರ್ಯಗಳೇ ವಿನಾ ಮೌಲ್ಯದ ಕಾರ್ಯಗಳಲ್ಲ. ಮತ್ತೊಂದೆಡೆ, ಅವುಗಳನ್ನು ಪದಗಳಲ್ಲಿ ಹೇಳಲು ತೊಡಗಿದರೆ, ನಾನು ಈಗ ತಾನೇ ಮಾಡಿದೆನಲ್ಲ ಹಾಗೆ, ಅಥವಾ ಸಾವಿರಾರು ವರ್ಷಗಳಿಂದ ದಾರ್ಶನಿಕರು ಮಾಡಲು ಪ್ರಯತ್ನಿಸಿರುವ ಹಾಗೆ, ನಾವು ಹೇಳುವುದು ಶುದ್ಧ ಅವಿವೇಕವಾಗಿರುತ್ತದೆ, ಯಾಕೆಂದರೆ ಇಂಥ ವಿಷಯಗಳನ್ನು ವಿವರಿಸುವ ಸಾಮರ್ಥ್ಯವೇ ನಮ್ಮ ಭಾಷೆಗೆ ಇನ್ನೂ ಬಂದಿಲ್ಲ, ಅದಕ್ಕೆ. ನಾನು ನಿಮ್ಮ ಪ್ರಶ್ನೆಗೆ ಉತ್ತರ ಕೊಡುವುದು ಈ ರೀತಿ. ಆದರೆ ಅದನ್ನು ವಿವರಿಸಲು ಎರಡು ಮೂರು ಪುಸ್ತಕಗಳೇ ಬೇಕು.

ಡಾ. ಬಿ.ಆರ್.ಶೇ. : ಈ ಬಗ್ಗೆ ನಮ್ಮ ದೇಶದ ಜನರಿಗೆ ಬಹಳ ಆಸಕ್ತಿ. ಜೀವದ ಸ್ವರೂಪವನ್ನು ಗಮನಿಸಿದರೆ, ದೇಹದಿಂದ ಹೊರತಾದ ಆತ್ಮವೋ ಸತ್ವವೋ ಇದೆ ಅನ್ನಿಸುತ್ತದೆಯೇ?

ಡಾ. ಹಾಲ್ಡೇನ್ : ಇದಕ್ಕೆ ಉತ್ತರವು ಆತ್ಮ ಅಥವಾ ಸತ್ವ ಅಂದರೆ ಏನು ಅಂತ ನೀವು ಭಾವಿಸುತ್ತೀರೋ ಅದನ್ನು ಅವಲಂಬಿಸುತ್ತದೆ. ಅಂಥದು ಇದೆ ಎಂದು ನಾನು ಹೇಳಿದೆ ಅಂದುಕೊಳ್ಳಿ; ಆಗ ನೀವು ಥಟ್ಟನೆ ಮನಸ್ ಅಥವಾ ಅಹಂಕಾರ ಇತ್ಯಾದಿ ಗುಣಗಳು ದೇಹದ ಹೊರತಾದವು ಎಂದು ನಾನು ಹೇಳುತ್ತಿದ್ದೇನೆ ಅಂದುಕೊಳ್ಳುತ್ತೀರಿ ಅನ್ನುವುದು ನನಗಿರುವ ಭಯ. ಅದು ಹಾಗಿದೆ ಎಂದು ನನಗನ್ನಿಸುವುದಿಲ್ಲ. ವಾಸ್ತವವಾಗಿ ಅವೂ ಸಹ ದೇಹ ಮನಸ್ಸು ಮುಂತಾದವುಗಳ ಹಾಗೆಯೇ ಸಾಮಾನ್ಯ ಲಕ್ಷಣಗಳನ್ನು ಹೊಂದಿದವು – ಆದರೆ ಖಂಡಿತವಾಗಿಯೂ ಮತ್ತಷ್ಟು ಸೂಕ್ಷ್ಮ ಸ್ವರೂಪದವು, ಅಷ್ಟು ಸರಳವಾಗಿ ಸಂಯೋಜನೆಗೊಂಡವಲ್ಲ ಎಂದು ಬೇಕಾದರೆ ಅಂದುಕೊಳ್ಳಿ – ಎಂದೇ ನನಗನ್ನಿಸುತ್ತದೆ. ನನ್ನ ತೊಂದರೆ ಇದೇ: ನಿಮ್ಮ ಪ್ರಶ್ನೆಗೆ ಹೇಗೆ ಉತ್ತರಿಸಿದರೂ ನನ್ನನ್ನು ನೀವು ಅಪಾರ್ಥ ಮಾಡಿಕೊಳ್ಳುತ್ತೀರಿ. ಆದರೆ ಈ ಬಗ್ಗೆ ನಾವು ಓದಿಕೊಂಡಿರುವುದರಲ್ಲೆಲ್ಲ ಸಾಂಖ್ಯದ ನಿಲವು ಸತ್ಯಕ್ಕೆ ಹೆಚ್ಚು ಸನಿಹವಾದದ್ದು ಎಂದು ಮಾತ್ರ ಹೇಳಬಲ್ಲೆ.

ಡಾ. ಬಿ.ಆರ್.ಶೇ. : ವಿಕಾಸದ ಪ್ರಕ್ರಿಯೆಯಲ್ಲಿ ನಡೆದಿರುವ ಬದಲಾವಣೆಗಳನ್ನು ಗಮನಿಸಿದರೆ ನಿಮಗೆ ವಿಶ್ವಕ್ಕೆ ಏನಾದರೂ ಉದ್ದೇಶವಿದೆ ಎಂದು ಅನ್ನಿಸುತ್ತದೆಯೇ?

ಡಾ. ಹಾಲ್ಡೇನ್ : ಖಂಡಿತ; ವಿಶ್ವಕ್ಕೆ ಉದ್ದೇಶವಿದೆ ಎಂದೇ ನಾನು ಗಮನಿಸಿದ್ದೇನೆ. ಆದರೆ ಒಂದಲ್ಲ ಹಲವಾರು. ಆದರೆ ಅವೆಲ್ಲ ಅದರಲ್ಲೇ ಅಡಕವಾಗಿವೆ. ವಿಶ್ವ ಎಂಬ ಶಬ್ದವನ್ನು ನಾನು ಅರ್ಥಮಾಡಿಕೊಂಡಿರುವ ಪ್ರಕಾರ, ಅದು ತನ್ನ ಹೊರತಾಗಿ ಬೇರೇನನ್ನೂ ಹೊಂದಿಲ್ಲದ ಒಂದು ವ್ಯವಸ್ಥೆ. ಇಂಥದೊಂದು ವ್ಯವಸ್ಥೆಗೆ ಉದ್ದೇಶ ಇರಲಾರದು. ಯಾಕೆಂದರೆ

ಉದ್ದೇಶವೆಂಬುದು ತನ್ನ ಹೊರತಾದುದರೊಡನೆ ಸಂಬಂಧಪಟ್ಟಿರುವಂಥದು. ನಾನು ಮೈಸೂರಿಗೆ ಹೋಗಬೇಕು ಅಂದರೆ, ಮೈಸೂರು ನನ್ನಿಂದ ಹೊರತಾದುದು ಎಂದು ತಾನೇ? ಆದರೆ ವಿಶ್ವಕ್ಕೆ ಅದರ ಹೊರತಾದುದು ಬೇರೆ ಏನೂ ಇಲ್ಲ. ಹೀಗಾಗಿ ಅದಕ್ಕೊಂದು ಉದ್ದೇಶವಿರಲು ಸಾಧ್ಯವಿಲ್ಲ. ಆದರೆ ಅದರಲ್ಲಿಯೇ ಉದ್ದೇಶಗಳಿರಬಹುದು, ಇವೆ ಎಂಬುದೇ ನನ್ನ ನಿಶ್ಚಿತ ಅಭಿಪ್ರಾಯ. ಆದರೆ ನಾನು ಬದುಕಿರುವುದು 60 ವರ್ಷಗಳಷ್ಟು ಕಾಲ ಮಾತ್ರ, ನಾನು ನೋಡಿರುವುದು ವಿಶ್ವದ ಯಾವುದೋ ಮೂಲೆಯೊಂದನ್ನು. ಹೀಗಾಗಿ ವಿಶ್ವದ ಬಗ್ಗೆ ನಾನು ಹೆಚ್ಚು ಮಾತನಾಡುವುದು ಮೂರ್ಖತನವಾಗುತ್ತದೆ.

ಡಾ. ಬಿ.ಆರ್.ಶೇ.: ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಇತ್ತೀಚೆಗೆ ನಡೆದಿರುವ ಬೆಳವಣಿಗೆಗಳ ಬಗೆಗೆ ದರ್ಶನವು ಯಾವ ನಿಲವನ್ನು ಹೊಂದಬಹುದು?

ಡಾ. ಹಾಲ್ಡೇನ್ : ಈ ಪ್ರಶ್ನೆಗೆ ಉತ್ತರಿಸಬೇಕಾದರೆ, ನಾನು ಯಾವುದೋ ಗುಹೆ ಯಲ್ಲಿಯೋ ಮರದಡಿಯಲ್ಲಿಯೋ ಕುಳಿತು ಧ್ಯಾನಮಗ್ನನಾಗಿರಬೇಕು. ಆದರೆ ಈ ಅಗಾಧ ಕ್ಷೇತ್ರದ ಯಾವುದೋ ಕೆಲವು ಪುಟ್ಟ ಮೂಲೆಗಳನ್ನು ಕುರಿತು ಮಾತ್ರ ನಾನು ಅಧ್ಯಯನ ನಡೆಸಬಲ್ಲೆ, ಅಷ್ಟೆ. ಈ ಪ್ರಶ್ನೆಗಳನ್ನು ಉತ್ತರಿಸಲು ಮಾನವ ದೃಷ್ಟಿಕೋನಗಳೂ ಭಾಷೆಯೂ ಅತೀವ ಅಸಮರ್ಪಕ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಬಹುಮುಖ್ಯ ಎಂದು ನನ್ನ ಭಾವನೆ. ನನ್ನ ಪ್ರಕಾರ, ಕಳೆದ ಶತಮಾನದಲ್ಲಿ ದರ್ಶನದ ದೃಷ್ಟಿಯಿಂದ ನಡೆದಿರುವ ಅತ್ಯಂತ ಪ್ರಮುಖ ಘಟನೆ ಎಂದರೆ ಕೆಲವು ಪ್ರಾಣಿಗಳು, ಅದರಲ್ಲೂ ದುಂಬಿಗಳು, ಭಾಷೆಯನ್ನು ಹೊಂದಿವೆ ಎಂಬ ಆವಿಷ್ಕರಣ. ಅವುಗಳ ಸಂವಹನ ಕ್ರಿಯೆಯನ್ನು ಅಧ್ಯಯನ ಮಾಡಲು ತೊಡಗಿದರೆ, ಈ ಬಗ್ಗೆ ಪ್ರಶ್ನಿಸಲು ವಿಭಿನ್ನವಾದ ರೀತಿಗಳಿವೆ ಎಂಬುದು ನಮಗೆ ಕೆಲವು ಶತಮಾನಗಳಲ್ಲಿಯೇ ಅರಿವಾಗಲು ತೊಡಗುತ್ತದೆ ಮತ್ತು ಈ ವಿಭಿನ್ನ ರೀತಿಗಳು ಮತ್ತಷ್ಟು ಉತ್ತಮವಾದವು ಹಾಗೂ ಮೇಜುಗಳಂತಹ ವಸ್ತುಗಳನ್ನೋ ಬಿಡಿ ವ್ಯಕ್ತಿಗಳನ್ನೋ ಕುರಿತು ವಿವರಿಸಲು ರೂಪಿತವಾಗಿ, ನನ್ನ ದೃಷ್ಟಿಯಲ್ಲಿ, ವಿಶ್ವದ ಬಗ್ಗೆಯಾಗಲೀ ಅದರಲ್ಲಿರಬಹುದಾದ ಅತಿಮಾನವರ ಬಗ್ಗೆಯಾಗಲೀ ಚರ್ಚಿಸಲು ರೂಪಗೊಂಡಿಲ್ಲದ ಪ್ರಸ್ತುತ ಮಾನವ ಭಾಷೆಯಲ್ಲಿ ಅಂತರ್ಗತವಾದ ಮಿತಿಗಳಿಂದ ಹೊರತಾಗಿ ಹೆಚ್ಚು ಸಮರ್ಪಕವಾಗಿರುವ ರೀತಿಯಲ್ಲಿ ಉತ್ತರಿಸಬಹುದು ಎಂಬ ಅರಿವೂ ಉಂಟಾಗುತ್ತದೆ ಎಂದು ಅನ್ನಿಸುತ್ತದೆ.

ಡಾ. ಬಿ.ಆರ್.ಶೇ. : ಮಾನವ ಮತ್ತವನ ಆಲೋಚನೆ ಹಾಗೂ ನಡವಳಿಕೆಗಳು ವಿಕಾಸಕ್ರಮದ ಮೇಲೆ ಪರಿಣಾಮವುಂಟು ಮಾಡಬಲ್ಲವೇ?

ಡಾ. ಹಾಲ್ಡೇನ್ : ಹೌದು, ನನಗೆ ಹಾಗನ್ನಿಸುತ್ತದೆ. ಈಗಾಗಲೇ ನಾವದನ್ನು ಮಾಡಿದ್ದೇವೆ. ಉದಾಹರಣೆಗೆ, ಸಾಕುಪ್ರಾಣಿಗಳ ಹಾಗೂ ಸಸ್ಯಗಳ ವಿಕಾಸವನ್ನು ನಾವೇ ರೂಪಿಸುತ್ತಿದ್ದೇವೆ.

ನಮ್ಮ ಮಾರ್ಗವನ್ನೂ ಮಾರ್ಪಡಿಸಿಕೊಂಡಿರುವುದರಲ್ಲಿ ಅನುಮಾನವಿಲ್ಲ, ಆದರೆ ಅದನ್ನು ಹೇಗೆ ಮುಂದುವರಿಸಬೇಕೆಂಬ ಬಗ್ಗೆ ತಿಳಿವಳಿಕೆಯಿಲ್ಲ ಅಥವಾ ಅಷ್ಟು ತಿಳಿವಳಿಕೆಯಿಲ್ಲ.



ಹಸುಗಳು ಹೆಚ್ಚು ಹಾಲು ಕೊಡುವಂತೆ ಹೇಗೆ ಮಾಡಬಹುದೆಂಬ ಬಗ್ಗೆ ನಿಧಾನವಾಗಿ ತಿಳಿಯತೊಡಗಿದ್ದೇವೆ, ಅಷ್ಟೆ. ಮಾನವ ಸಂಕುಲದ ವಿಕಾಸ ಹೇಗೆ ಮುಂದುವರಿಯಬೇಕು ಎಂಬುದರ ಕುರಿತು ಪ್ರಯತ್ನಿಸಲು ನಮಗಿನ್ನೂ ಖಂಡಿತ ಸಾಧ್ಯವಾಗಿಲ್ಲ. ಹೀಗೆ ಮಾಡಲು ಇನ್ನೂ ಮುನ್ನೂರು ನಾನ್ನೂರು ವರ್ಷಗಳು ಬೇಕಾಗಬಹುದು. ನಮಗೆ ಆ ಸಾಮರ್ಥ್ಯ ಇನ್ನೂ ಬಂದಿಲ್ಲ ಎಂಬುದು ಸಂತೋಷದ ವಿಷಯ; ಯಾಕೆಂದರೆ, ಜನರು ಮಾನವ ಸಂಕುಲದ ಮೇಲೆ ಹಾಸ್ಯಾಸ್ಪದ ಕಲ್ಪನೆಗಳನ್ನು – ಅಪೇಕ್ಷಣೀಯವಲ್ಲದ ರೀತಿಯಲ್ಲಿ ಸಿನಿಮ ತಾರೆಗಳ ಅಥವಾ ರಾಜಕಾರಣಿಗಳ ಅಥವಾ ವಿಜ್ಞಾನಿಗಳ ಮಾದರಿಗಳನ್ನು – ಹೇರಲು ಪ್ರಯತ್ನಿಸಬಹುದು ಎಂಬ ಭಾವನೆ ನನಗಿದೆ.

ಡಾ. ಬಿ.ಆರ್.ಶೇ. : ಇಲ್ಲಿ ಮತ್ತೊಂದು ಸ್ವಾರಸ್ಯಕರ ವಿಷಯವೂ ಅಡಗಿದೆ: ಮುಕ್ತ ಸಂಕಲ್ಪಶಕ್ತಿ ಎಂಬುದು ಇದೆಯೇ?

ಡಾ. ಹಾಲ್ಡೇನ್ : ಅದನ್ನು ಹೇಗೆ ನೀವು ಪರಿಭಾವಿಸುತ್ತೀರಿ ಎಂಬುದರ ಮೇಲೆ ಉತ್ತರ ಅವಲಂಬಿಸಿರುತ್ತದೆ. ಆದರೆ ವಾಸ್ತವವಾಗಿ ಅದು ಖಂಡಿತವಾಗಿದೆ ಎಂಬುದು ನನ್ನ ಅಭಿಪ್ರಾಯ. ಮತ್ತೊಂದೆಡೆ, ವಿಶಾಲ ದೃಷ್ಟಿಯಿಂದ ವಸ್ತುವೊಂದರ ಪರಿಶೀಲನೆ ನಡೆಸಿದರೆ, ನಮಗಿರುವ ಸ್ವಾತಂತ್ರ್ಯವು ನಾವಂದುಕೊಂಡಿರುವುದಕ್ಕಿಂತ ಕಡಿಮೆ ಎನ್ನಿಸ ಬಹುದು. ಮಾನವ ವ್ಯಕ್ತಿಯನ್ನು ವಾಸ್ತವ ಎಂದು ನೀವು ಪರಿಗಣಿಸುವುದಾದರೆ, ಅವನಿಗೆ ಮುಕ್ತ ಸಂಕಲ್ಪಶಕ್ತಿ ಇರುತ್ತದೆ. ಈ ವ್ಯಕ್ತಿ ವಿಶಿಷ್ಟತೆಯು ಎಷ್ಟರ ಮಟ್ಟಿಗೆ ಭ್ರಮೆಯಿಂದ ದೂರವಾಗಿರಬಲ್ಲುದು ಎಂಬುದರ ಬಗ್ಗೆ ನನಗೆ ಖಚಿತತೆಯಿಲ್ಲ. ಆದರೆ ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ, ಹಾಗಿರಬಲ್ಲುದು ಎಂದೇ ನನ್ನ ತಿಳಿವಳಿಕೆ. ಮತ್ತೆ, ನಾವು ಭಾಷೆಯ ಪ್ರಶ್ನೆಯ ಎದುರಿಗೇ ಬಂದು ನಿಲ್ಲುತ್ತೇವೆ!

ಡಾ. ಬಿ.ಆರ್.ಶೇ. : ನೈತಿಕ ಕರ್ತವ್ಯದ ನೆಲೆ ಯಾವುದು?

ಡಾ. ಹಾಲ್ಡೇನ್ : ಯಾವುದು ಅಂತ ನನಗೆ ಗೊತ್ತಿರಬೇಕಾಗಿತ್ತು. ನೀವು ಪ್ರಶ್ನೆಯನ್ನೇ ಸರಿಯಾಗಿ ಕೇಳಲಿಲ್ಲ ಎಂದು ಭಾವಿಸಬಹುದೇನೋ. ನೈತಿಕ ಕರ್ತವ್ಯವೇ ಇತರ ಅನೇಕ ವಿಷಯಗಳಿಗೆ ನೆಲೆಯಾಗಿರಬಹುದು. ಒಂದು ನಿದರ್ಶನವನ್ನು ತೆಗೆದುಕೊಳ್ಳಿ: ಈ ಮೇಜು ಇಲ್ಲೇ ಇರಲು ಕಾರಣ ಅದರಲ್ಲಿನ ಪರಮಾಣುಗಳು ಅದರಲ್ಲಿ ಇರುವ ತಮ್ಮ ಧರ್ಮವನ್ನು ಪಾಲಿಸುತ್ತಿವೆ ಅದರಿಂದಾಗಿ. ಹೀಗಾಗಿ, ಮತ್ತೊಂದರ ಹಿನ್ನೆಲೆಯಲ್ಲಿ ನೈತಿಕ ಕರ್ತವ್ಯ ಅಂದರೆ ಏನು ಎಂದು ಸ್ಪಷ್ಟಪಡಿಸುವ ಬದಲು, ನೈತಿಕ ಕರ್ತವ್ಯದ ಹಿನ್ನೆಲೆಯಲ್ಲಿ ಬೇರೆಯವನ್ನು ವಿವರಿಸಿ ಎಂದರೆ, ನನ್ನ ಉತ್ತರವು ನನಗೆ ಗೊತ್ತಿಲ್ಲ ಎಂಬುದೇ ಆಗಿರುತ್ತದೆ.

ಇಂಗ್ಲಿಷಿಂದ / ಅನುವಾದ: ಡಾ. ಪಿ.ವಿ. ನಾರಾಯಣ

# ಅನುಬಂಧ-2

## ವಿ. ಸೀ. ಬದುಕಿನ ಮೈಲಿಗಲ್ಲುಗಳು

### (ಅ) ವ್ಯಕ್ತಿಜೀವನ

1899 – ಜನನ, ಬೂದಿಗೆರೆ (ಬೆಂಗಳೂರು ಜಿಲ್ಲೆ), ಅಕ್ಟೋಬರ್ 2.
ತಂದೆ : ಹುಲ್ಲೂರು ವೆಂಕಟರಾಮಯ್ಯ;
ತಾಯಿ : ಬೂದಿಗೆರೆ ದೊಡ್ಡ ವೆಂಕಮ್ಮ.

1906–7 – ಬೆಂಗಳೂರಿಗೆ ಬಂದದ್ದು : ವಿದ್ಯಾಭ್ಯಾಸಕ್ಕೆ.

1907–16 – ಪ್ರಾಥಮಿಕ/ಮಾಧ್ಯಮಿಕ ಶಿಕ್ಷಣ : ಬೆಂಗಳೂರು : ಚಾಮರಾಜಪೇಟೆ ಮುನಿಸಿಪಲ್ ಪ್ರಾಥಮಿಕ ಶಾಲೆ; ಎ. ವಿ. ಸ್ಕೂಲ್, ಕೋಟೆ; ಸರ್ಕಾರಿ ಪ್ರೌಢಶಾಲೆ – ಇತ್ಯಾದಿಯಲ್ಲಿ.

1917–20 – ಕಾಲೇಜ್ ಶಿಕ್ಷಣ : ಮೈಸೂರು ಮಹಾರಾಜಾ ಕಾಲೇಜಲ್ಲಿ. ಬಿ.ಎ. ಪದವಿ : ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ದರ್ಶನಗಳಲ್ಲಿ (ಸರ್ ಶೇಷಾದ್ರಿ ಬಂಗಾರ ಪದಕ – ಅರ್ಥಶಾಸ್ತ್ರದಲ್ಲಿ – 1920).

1920–22 – ಸ್ನಾತಕೋತ್ತರ ಶಿಕ್ಷಣ : ಮಹಾರಾಜಾ ಕಾಲೇಜ್, ಮೈಸೂರು.
ಎಂ.ಎ. ಪದವಿ : ಅರ್ಥಶಾಸ್ತ್ರ-ರಾಜ್ಯಶಾಸ್ತ್ರಗಳಲ್ಲಿ.

1920–28 – ಉಪಾಧ್ಯಾಯರಾಗಿ ಕೆಲಸ ಮಾಡಿದ್ದು : ಶಾರದಾ ವಿಲಾಸ ಹೈಸ್ಕೂಲು, ಮೈಸೂರು. (1922ರಲ್ಲಿ 6–8 ತಿಂಗಳು ಕಾನೂನು (Law) ಕಲಿಯಲು ಬೊಂಬಾಯಿಗೆ ಹೋಗಿದ್ದು; ಅಲ್ಲಿ ಡೆಪ್ಯುಟಿ ಕಂಟ್ರೋಲರ್ ಆಫ್ ಕರೆನ್ಸಿ ಆಫೀಸಿನಲ್ಲಿ ಕೆಲಸ – ಬಿಟ್ಟು ಉಳಿದೆಲ್ಲ ಕಾಲ).

1925 – ಮದುವೆ : ವಿಜಯಪುರದಲ್ಲಿ; ಪತ್ನಿ ಶ್ರೀಮತಿ ಸರೋಜಮ್ಮ;
ಮಕ್ಕಳು : 4 ಗಂಡು; 3 ಹೆಣ್ಣು.

1928–55 – ಕನ್ನಡ ಉಪನ್ಯಾಸಕರಾಗಿ ನೇಮಕ : ಮೈಸೂರು ವಿಶ್ವವಿದ್ಯಾನಿಲಯ; ಬೆಂಗಳೂರು ಮೈಸೂರುಗಳಲ್ಲಿ ಸೇವೆ. ನಿವೃತ್ತರಾದಾಗ ಉಪಪ್ರಾಧ್ಯಾಪಕರು (Asst. Professor) (1948 ರಿಂದ 50ರವರೆಗೆ ಎರಡು ವರ್ಷ ಚಿಕ್ಕಮಗಳೂರಿನ ಸರ್ಕಾರಿ ಕಾಲೇಜಲ್ಲಿ ಸೂಪರಿಂಟೆಂಡೆಂಟರಾಗಿದ್ದುದೂ ಇಲ್ಲಿ ಸೇರಿದೆ).

1956–58 – ಆಲ್ ಇಂಡಿಯ ರೇಡಿಯೊ : ಆಕಾಶವಾಣಿ – ಬೆಂಗಳೂರು ಕೇಂದ್ರದಲ್ಲಿ Producer, Spoken Word.

1964–68 – ಹೊನ್ನಾವರದ ಮಲೆನಾಡು ಪ್ರೋಗ್ರೆಸ್ಸಿವ್ ಎಜುಕೇಶನ್ ಸೊಸೈಟಿಯವರು ಆರಂಭಿಸಿದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದ್ದು.

1974 – ಪತ್ನೀವಿಯೋಗ; ಲಂಡನ್ ಯಾತ್ರೆ; ಪಾರ್ಶ್ವವಾಯು ಪೀಡಿತರಾಗಿ ಹಿಂದಿರುಗಿದ್ದು.

1983 – ನಿಧನ, ಸೆಪ್ಟೆಂಬರ್ 4.



### (ಆ) ಸಾಹಿತ್ಯಕ ಜೀವನ

1923 – ಪ್ರಥಮ ಕವನ ಪ್ರಕಟಣೆ : ಪ್ರಬುದ್ಧ ಕರ್ಣಾಟಕ (ಸಂ. 5; ಸಂ.1 'ಒಲವು').

1927 – ಪ್ರಥಮ ಕೃತಿ ಪ್ರಕಟಣೆ : 'ಪಂಪಾಯಾತ್ರೆ' – ಪ್ರವಾಸ ಕಥನ.

1931 – ಅಧ್ಯಕ್ಷರು : ಕವಿ ಸಮ್ಮೇಳನ, ಕಾರವಾರ.

1934–42 – ಕೋಶಾಧಿಕಾರಿ, ಕ. ಸಾ. ಪ.; ಕಾವ್ಯಾವಲೋಕನಕಾರರು, ಮದರಾಸಿನ 'ಹಿಂದೂ' ಪತ್ರಿಕೆಗೆ.

1936 – ಅಧ್ಯಕ್ಷರು, ಕರ್ನಾಟಕ ವ್ಯಾಪಾರಿಗಳ ಸಮ್ಮೇಳನ, ಹಂಪೆ.

1939–42 – ಸಂಪಾದಕತ್ವ, 'ಕ. ಸಾ. ಪ. ಪತ್ರಿಕೆ,' ಬೆಂಗಳೂರು.

1943–48 – ಸಂಪಾದಕತ್ವ, 'ಪ್ರಬುದ್ಧ ಕರ್ಣಾಟಕ,' ಮೈಸೂರು.

1953 – ಅಧ್ಯಕ್ಷರು, ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ, ಕುಮಟಾ.

1954 – ಅಧ್ಯಕ್ಷರು, ಮುಂಬಯಿ ಪ್ರಾಂತ ಭಾಷಾ ಸಮ್ಮೇಳನ, ಗದಗ್.

1954–70 – ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯತ್ವ (ಕನ್ನಡ).

1955–56 – ಸಂಪಾದಕತ್ವ, 'ಸಾಹಿತ್ಯ ಪರಿಷತ್ ಪತ್ರಿಕೆ', 'ಕನ್ನಡ ನುಡಿ,' ಬೆಂಗಳೂರು.

1965–68 – ಭಾರತೀಯ ಜ್ಞಾನಪೀಠ ಪ್ರಶಸ್ತಿ ಸಲಹಾ ಮಂಡಲಿ ಸದಸ್ಯತ್ವ (ಕನ್ನಡ).

1970 – 'ಮಹನೀಯರು' ಗ್ರಂಥ ಬಿಡುಗಡೆ; ಸನ್ಮಾನ : ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ, ಬೆಂಗಳೂರು.
– ಗಣ್ಯ ಸಾಹಿತಿ ಪ್ರಶಸ್ತಿ–ರಾಜ್ಯ ಸರ್ಕಾರದಿಂದ–(ಒಪ್ಪಿಕೊಳ್ಳಲಿಲ್ಲ.) 'ಮಹನೀಯರು' ಕೃತಿಗೆ ಪ್ರಶಸ್ತಿ.
– ಕೇರಳ ಸಾಹಿತ್ಯ ಪರಿಷತ್ತಿನ ರಜತೋತ್ಸವ ಸಮಾರಂಭದ ಉದ್ಘಾಟನೆ.

1971 – ಸಂಪಾದಕರು : 'ಕವಿ ಕಾವ್ಯ ಪರಂಪರೆ' ಸಾಹಿತ್ಯ ಮಾಲೆ, ಐಬಿಎಚ್ ಪ್ರಕಾಶನ, ಬೆಂಗಳೂರು.

1973 – ರಾಜ್ಯ ಸರ್ಕಾರದಿಂದ ಆಜೀವ ಗೌರವ ವೇತನ. ರಾಜ್ಯ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಮಂಡಲಿಗೆ ಸದಸ್ಯರಾಗಿ ಸರ್ಕಾರದಿಂದ ಆಯ್ಕೆ; ಒಪ್ಪಿಕೊಳ್ಳಲಿಲ್ಲ.
– ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ : 'ಅರಲು–ಬರಲು' ಕವನ ಸಂಕಲನಕ್ಕೆ.
– 'ವಿ.ಸೀ.–75' ಸಂಭಾವನಾ ಗ್ರಂಥದ ಪ್ರಕಟಣೆ.

1976 – ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿ ಪ್ರದಾನ.

1978 – ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : 'ಕೃಷ್ಣಚಾರಿತ್ರ' ಕೃತಿಗೆ – ಮಾನವಿಕ ಶಾಸ್ತ್ರ ವಿಭಾಗದಲ್ಲಿ.

# ಅನುಬಂಧ-3

## ವಿ. ಸೀ. ಕೃತಿಗಳು

**(ಅ) ಕವನ ಸಂಗ್ರಹಗಳು**

ಗೀತಗಳು (1931); ದೀಪಗಳು (1933); ನೆಳಲು–ಬೆಳಕು (1935); ದ್ರಾಕ್ಷಿ–ದಾಳಿಂಬೆ (1948); ಹೆಜ್ಜೆಪಾಡು (1958); ಕದಂಬ (ಆಯ್ದ ಕವಿತೆ) (1970); ಅರಲು–ಬರಲು (1972); ಹಗಲು–ಇರುಳು (1981).

**(ಆ) ಗದ್ಯ ಕೃತಿಗಳು**

ಪಂಪಾಯಾತ್ರೆ (1927); ಸೊಹ್ರಾಬ್–ರುಸ್ತುಂ (1930); ಆಗ್ರಹ (1931); ಹಣಪ್ರಪಂಚ (1937); ಕರ್ನಾಟಕ ಕಾದಂಬರಿ (1940); ಅಭಿಜ್ಞಾನ ಶಾಕುಂತಲ ನಾಟಕ ವಿಮರ್ಶೆ (1943); ಅಶ್ವತ್ಥಾಮನ್ (1946); ಭಾರತದ ರಾಜ್ಯಾಂಗ ರಚನೆ (1947); ವ್ಯವಹಾರ ಧರ್ಮ (1949); ಭಾರತದ ಐವರು ಮಾನ್ಯರು (1951); ಕವಿ ಕಾವ್ಯ ದೃಷ್ಟಿ (1955); ಶಿವರಾಮ ಕಾರಂತರು (1956); ಬೆಳುದಿಂಗಳು (1959); ಶ್ರೀ ಶೈಲಶಿಖರ (1960); ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ (1961); ಭಾರತದಲ್ಲಿ ಯೋಜನೆ (1962); ಸಾಹಿತ್ಯ: ಸಂಪ್ರದಾಯ ಮತ್ತು ಹೊಸ ಮಾರ್ಗ (1967); ಸೀಕರಣೆ (1970); ಚ್ಯವನ (1970); ಮಹನೀಯರು (1970); ಕಾಲೇಜ್ ದಿನಗಳು (1971); ಎರಡು ನಾಟಕಗಳು: ಆಗ್ರಹ ಮತ್ತು ಚ್ಯವನ (1971); ಸತ್ಯ ಮತ್ತು ಮೌಲ್ಯ (1972); ವಾಲ್ಮೀಕಿ ರಾಮಾಯಣ (1976); ಕಲಾನುಭವ (1976); ಒಳ್ಳೆಯ ಮನುಷ್ಯ, ಒಳ್ಳೆಯ ಬದುಕು (1976); ಮುಂಬಯಿವಾಸ : ನೆನಪುಗಳು (1976); ಮಹಾಕವಿ ಪಂಪ (1976); ಮಹಾಭಾರತದ ಕೃಷ್ಣಚಾರಿತ್ರ (1978); ಪಟ್ಟಬಂಧ (1979); ಸಾಹಿತ್ಯಾಲೋಕನ (1979); ಸಾರ್ವಜನಿಕ ಜೀವನದಲ್ಲಿ ಅಧಿಕಾರ, ಶಕ್ತಿ, ಪ್ರಭಾವ ಮಂಡಲಗಳು (1979); ಹಿರಿಯರು–ಗೆಳೆಯರು (1980); ಸಂವಿಧಾನ ಮತ್ತು ಕಾನೂನು (1992); ಸಾಹಿತ್ಯಾಲೋಕನ, ಭಾಗ II–III (ಅಪ್ರಕಟಿತ).

**(ಇ) ಇಂಗ್ಲಿಷಲ್ಲಿ**

ಮಹಾಕವಿ ಪಂಪ (1967); ಕೆ. ವೆಂಕಟಪ್ಪ (1968); ಪುರಂದರದಾಸ (1971); ಎಂ. ವಿಶ್ವೇಶ್ವರಯ್ಯ (1971); ವಾಲ್ಮೀಕಿ ರಾಮಾಯಣ (1972); ಡಿ. ವಿ. ಗುಂಡಪ್ಪ (1972); ಪಂಜೆ ಮಂಗೇಶರಾವ್ (1978); ಅಭಿಜ್ಞಾನ ಶಾಕುಂತಲ ನಾಟಕ ವಿಮರ್ಶೆ; ಮಹಾಭಾರತದ ಕೃಷ್ಣಚಾರಿತ್ರ; ಭಾರತದ ಐವರು ಮಾನ್ಯರು (ಮೂರೂ ಅಪ್ರಕಟಿತ).



**(ಈ) ಅನುವಾದಿತ**

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ: ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳು (1959); ಭಾರತ ಸ್ವಾತಂತ್ರ್ಯ ಗಳಿಸಿತು (1963); ಪಿಗ್‌ಮೇಲಿಯನ್ (1963); ಬಂಗಾಳಿ ಸಾಹಿತ್ಯ ಚರಿತ್ರೆ (1966); ಮೇಜರ್ ಬಾರ್ಬರ (1968); ತ್ಯಾಗರಾಜ (1969); ಪುರಂದರದಾಸ (1979); ಮೋಬಿ ಡಿಕ್ (1982); ಪಂಜೆ ಮಂಗೇಶರಾವ್ (1985); ಮಿಷನ್ ವಿತ್ ಮೌಂಟ್‌ಬ್ಯಾಟನ್ (ಅಪ್ರಕಟಿತ).

**(ಉ) ಇನ್ನಿತರ**

ಇತರ ಅನೇಕ ಬಿಡಿ ಲೇಖನ, ಅವಲೋಕನ – ಇಂಗ್ಲಿಷ್, ಕನ್ನಡ ನಿಯತಕಾಲಿಕೆಗಳಲ್ಲಿ; ಪ್ರಸಾರ ಭಾಷಣಗಳು–ಇಂಗ್ಲಿಷಲ್ಲಿ, ಕನ್ನಡದಲ್ಲಿ; 'ಪ್ರಜಾಮತ'ದಲ್ಲಿ 'ಲೋಕಸಮೀಕ್ಷೆ' ಅಂಕಣಲೇಖನಗಳು (1960–61); ಚಿಂತನ, ನೆನಪು, ಲಘುಪ್ರಬಂಧ ಇತ್ಯಾದಿ.

## ವಿ. ಸೀ. ಕುರಿತು ಕೃತಿಗಳು


1. "ರೂಪಾರಾಧಕ" (ವಿ.ಸೀ. ಮತ್ತು ಅವರ ಕೃತಿ ಪರಿಚಯ) ಸಂ. ಡಾ. ಹಾ. ಮಾ. ನಾಯಕ; ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು, 1953.
2. "ವಿ.ಸೀ." (ಕವಿ ಕಾವ್ಯ ಪರಿಚಯ) ಸಂ. ಎಸ್. ಅನಂತನಾರಾಯಣ, ಪ. ವಿ. ಚಂದ್ರಶೇಖರ; ಪ್ರ: ಗೆಳೆಯರ ಬಳಗ, ದಾವಣಗೆರೆ–ಅರಸೀಕೆರೆ, 1953.
3. "ವಿ.ಸೀ. ಎಪ್ಪತ್ತೊಂದು" ಸಂ. ಜಿ. ಯು. ಭಟ್, ಜಿ. ಎಸ್. ಅವಧಾನಿ, ಪ್ರ: ಸಾಧನ ಪ್ರಕಾಶನ, ಹೊನ್ನಾವರ (ಉ.ಕ.) 1969.
4. "ವಿ.ಸೀ." ಲೇ: ಕೆ. ಎಸ್. ನರಸಿಂಹಸ್ವಾಮಿ; ಪ್ರ: ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ, 1970.
5. "ವಿ.ಸೀ. 75" (ಸಂಭಾವನಾ ಗ್ರಂಥ) ಸಂ: ವಿ. ಎಂ. ಇನಾಂದಾರ್; ವಿ.ಸೀ. ಸತ್ಕಾರ ಸಮಿತಿಗಾಗಿ ಪ್ರ: ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು, 1974.
6. "ವಿ. ಸೀತಾರಾಮಯ್ಯ" ('ವಿ.ಸೀ.');ಬದುಕು, ಬರಹ, ವ್ಯಕ್ತಿತ್ವ ಲೇ: 'ಸುಮನಾ'; ಪ್ರ: ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು, 1985. ಮರುಮುದ್ರಣ, 'ವಿ.ಸೀ. ಸಂಪದ'ದಿಂದ, 2000.
7. "ಸಾರ್ಥಕ ಬದುಕು" (ವಿ.ಸೀ. ಜೀವನ, ಸಾಹಿತ್ಯ ಮತ್ತು ಸಾಧನೆ); ಲೇ: ಡಾ. ಬಿ. ಪಿ. ರಾಧಾಕೃಷ್ಣ ಪ್ರ: ವಿ.ಸೀ. ಸಂಪದ, ಬೆಂಗಳೂರು–85, 1997.
8. "ವಿ.ಸೀ. ನೂರರ ನೆನಪು" ಜನ್ಮಶತಾಬ್ದಿ ಸ್ಮರಣ ಸಂಪುಟ, ಸಂ: ಪ್ರೊ. ಎಲ್. ಎಸ್. ಶೇಷಗಿರಿ ರಾವ್, ಎಂ. ವಿ. ವೆಂಕಟೇಶಮೂರ್ತಿ, ಪ್ರ: ವಿ.ಸೀ. ಸಂಪದ, ಬೆಂಗಳೂರು–85, 1999.

## ವಿ. ಸೀ. ಸಮಗ್ರ ಸಾಹಿತ್ಯ ಸಂಪುಟಗಳು
## ('ಸಂಪದ'ದ ಪ್ರಕಟಣೆಗಳು)

1. "ಸ್ನೇಹ–ವಿಶ್ವಾಸ" (1990) ಸಮಗ್ರ ಕಾವ್ಯ ಸಂಪುಟ (ಅರವತ್ತು ಅಪ್ರಕಟಿತ ಕವನಗಳೂ ಸೇರಿವೆ) ಡೆಮಿ 704 ಪುಟ, ಪ್ರೊ. ಎಲ್. ಎಸ್. ಶೇಷಗಿರಿ ರಾವ್ ಅವರ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ : ರೂ. 85/– ಆರೆಕ್ಯಾಲಿಕೊ (ಮ್ಯಾಪ್‌ಲಿಥೋ ಕಾಗದ) ಪ್ರತಿ : ರೂ. 120/–

2. "ಸಮಗ್ರ ಲಲಿತ ಪ್ರಬಂಧ ಸಂಪುಟ" (1992) ಡೆಮಿ 375 ಪುಟ, ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ವಿಶೇಷ ಪ್ರಸ್ತಾವನೆಯೊಡನೆ. ಮರು ಮುದ್ರಣ (2007) ಬೆಲೆ : ರೂ. 150/–

3. "ಸಮಗ್ರ ನಾಟಕ" (1993) ಡೆಮಿ 576 ಪುಟ, ಡಾ. ಎಚ್. ಕೆ. ರಂಗನಾಥ್ ಅವರ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ : ರೂ. 85/– ಆರೆಕ್ಯಾಲಿಕೊ ಪ್ರತಿ: ರೂ. 120/–

4–5 "ವ್ಯಕ್ತಿಚಿತ್ರ ಸಂಪುಟ" ಭಾಗ I ಮತ್ತು II (1993) ಡೆಮಿ 424 ಮತ್ತು 348 ಪುಟಗಳು (50 ಛಾಯಾ ಚಿತ್ರಗಳೂ ಸೇರಿ) ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರ ಪ್ರಸ್ತಾವನೆಯೊಡನೆ. ಬೆಲೆ : ರೂ. 125/– ಮತ್ತು ರೂ. 110/–

6. "ಸ್ಮೃತಿಚಿತ್ರ ಸಂಪುಟ" (1997) ಡೆಮಿ 437 ಪುಟ, (5 ಛಾಯಾ ಚಿತ್ರಗಳೂ ಸೇರಿ) ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಪ್ರಸ್ತಾವನೆ ಮತ್ತು ಡಾ. ಪಿ. ವಿ. ನಾರಾಯಣ ಅವರ ಮುನ್ನುಡಿಯೊಡನೆ, ಬೆಲೆ : ರೂ. 140/–

7. "ವಿಮರ್ಶೆ ಸಂಪುಟ : 1, ಇತಿಹಾಸ ಕಾವ್ಯ" (1998) ಡೆಮಿ 480 ಪುಟ, ವಿದ್ವಾನ್ ಎನ್. ರಂಗನಾಥ ಶರ್ಮಾ ಅವರ ಉಪೋದ್ಘಾತದೊಡನೆ ಬೆಲೆ: ರೂ. 160/–

8. "ವಿಮರ್ಶೆ ಸಂಪುಟ : 2, ಕಾವ್ಯ, ನಾಟಕ" (2000) ಡೆಮಿ 640 ಪುಟ, ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಪ್ರಸ್ತಾವನೆ ಮತ್ತು ಡಾ. ಎನ್. ಎಸ್. ತಾರಾನಾಥ ಅವರ ಮುನ್ನುಡಿಯೊಡನೆ; ಬೆಲೆ: ರೂ. 200/–

9. "ವಿಮರ್ಶೆ ಸಂಪುಟ : 3, ಕವಿ ಕಾವ್ಯ ಪರಂಪರೆ" (2003) ಡೆಮಿ 626 ಪುಟ; ಡಾ. ಜಿ. ಎಸ್. ಶಿವರುದ್ರಪ್ಪ ಅವರ ಮುನ್ನುಡಿಯೊಡನೆ, ಬೆಲೆ : ರೂ. 200/– (ಪ್ರತಿಗಳು ತೀರಿವೆ)



10. "ವಿಮರ್ಶೆ ಸಂಪುಟ : 4, ಸಾಹಿತ್ಯಾಲೋಕನ" (2003) ಡೆಮಿ 560 ಪುಟ; ಪ್ರೊ. ಎಂ. ಎಚ್. ಕೃಷ್ಣಯ್ಯ ಅವರ ಅವಲೋಕನದೊಂದಿಗೆ, ಬೆಲೆ : ರೂ. 200/– (ಪ್ರತಿಗಳು ತೀರಿವೆ)

11. "ವಿಮರ್ಶೆ ಸಂಪುಟ : 5, ಸಾಹಿತ್ಯತತ್ತ್ವ–ಕಲಾಮಿಾಮಾಂಸೆ" (2004) ಡೆಮಿ 474 ಪುಟ; ಡಾ. ಜಿ. ಎಸ್. ಆಮೂರ ಅವರ ಪ್ರಸ್ತಾವನೆಯೊಡನೆ, ಬೆಲೆ : ರೂ.180

12. "ಅನುವಾದ ಸಾಹಿತ್ಯ : ಸಂಪುಟ–1, ಮೋಬಿ ಡಿಕ್" (2007) ಡೆಮಿ 474 ಪುಟ; ಡಾ. ಸಿ. ಎನ್. ರಾಮಚಂದ್ರನ್ ಅವರ ಪ್ರಸ್ತಾವನೆಯೊಂದಿಗೆ, ಬೆಲೆ: ರೂ. 200/–

13. "ಶಾಸ್ತ್ರ ಸಾಹಿತ್ಯ : ಸಂಪುಟ–1 ಕಾನೂನು, ನ್ಯಾಯ, ರಾಜ್ಯಾಂಗ ತತ್ತ್ವ" (2007), ಡೆಮಿ 472 ಪುಟ, ಡಾ. ಸಿ. ಕೆ. ಎನ್. ರಾಜ ಮತ್ತು ನ್ಯಾಯಮೂರ್ತಿ ಎ. ಜೆ. ಸದಾಶಿವ ಅವರ ಪ್ರಸ್ತಾವನೆಯೊಂದಿಗೆ, ಬೆಲೆ ರೂ. 200/–

14. "ಸಮಗ್ರ ಸಾಹಿತ್ಯ ಮಾಲೆ : ಸಂಪುಟ–14 ಜೀವನ ಚರಿತ್ರೆಗಳು" (2007), ಡೆಮಿ 424 ಪುಟ, ಡಾ. ಪ್ರಭುಶಂಕರ ಅವರ 'ಪರಿಚಯ-ನುಡಿನಮನ'ದೊಡನೆ, ಬೆಲೆ ರೂ. 180/–